ಸ್ಮಾರಕ : ೧೯೬೦

ಶ್ರೀ

ಸಂಸ್ಮರಣೆ

ಶ್ರೀಮತಿ ಲಕ್ಷ್ಮಿ ಪುತ್ರಿಕೆಯು

ಚಿರಂಜೀವಿಸೌ॥ಪ್ರಭು ಮೆಳ್ಳಿಗೆ

ಪ್ರಥಮ ಸ್ಮರಣಾರ್ಥ ೧೯೬೯



ಚಿರಂಜೀವಿಸೌ॥ ಪ್ರಭು ಮೆಳ್ಳಿಗೆ

(ಅಕ್ಕಿಂಜೆ ಸೀತಾರಾಮ ಭಟ್ಟರ

ಪುತ್ರ

ಶ್ರೀಮತಿ ಲಕ್ಷ್ಮಿ ಪುತ್ರಿಕೆಯು

ಚಿ॥ ಗಣಪತಿ

ಚಿ॥ ಸುಬ್ರಹ್ಮಣ್ಯ

ಕನ್ನಡ ಪ್ರಾಥಮಿಕ ಶಿಕ್ಷಣ

ಪ್ರಕಟಣೆ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಪೆರ್ಲ್ಯ ಪೆನ್ಸಿಲಮ್ಮ ನ್ಯೆ. ಪೆನ್ಸಿಲಸ್ಸೆ. ಮಾಲಾಡಿ

ಜನವರಿ ೧೯೪೧ Reg. No B. 3691

ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಸಮಾವೇಶವಾಗಿದೆ.

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮಡಿವಾನ್, ಬಿ. ಎ.

ವಿಷಯಾನುಕ್ರಮಣಿಕೆ

ವಿಷಯ.					ಪುಟ.
೨೫ನೆಯ ಕನ್ನಡ ಸಾಹಿತ್ಯಸಮ್ಮೇಲನ	....	....	....		೧
ಸ್ಥಾನಿಕ ಅಧಿಕಾರೀ ಸಂಘಗಳ ಎರಡನೆಯ ಸಮ್ಮೇಲನ	....				೨
ಪ್ರಾಥಮಿಕ ಶಾಲೆಗಳಲ್ಲಿಯ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವ ಕಾರಣವೇನು?	....	....	....		೪
ಮುಖ್ಯಮಂತ್ರಿ ಜರ್ಚಿಲ್‌ಸಾಹೇಬರ ಭಾಷಣ	....	....			೧೦
ಹೆಣ್ಣು ಮಕ್ಕಳ ಪ್ರಾಥಮಿಕ ಸ್ಕೂಲ ಲಿ. ಸ. ಪ. ಕಾರ್ಯಕ್ರಮವು					೧೬
೨೫ನೇ ಕ. ಸಾ. ಸಮ್ಮೇಲನದ ಸಾಹಿತ್ಯಗೋಷ್ಠಿಯಲ್ಲಿ ಶ್ರೀ. ಜಿ. ಎಚ್. ಹೊಸೂರ ಇವರು ಪ್ರದರ್ಶಿಸಿದ ಕವಿತೆಗಳು					೧೭
ಶ್ರೀಮಾನ್ ಎಸ್. ಆರ್. ತಾವಡೆ ಇವರ ಭಾಷಣದ ಮುಖ್ಯಾಂಶಗಳು	....	....	....	....	೧೮
ಸನ್ಯತ್‌ಸೇನ	....	....	....	....	೨೧
ಪ್ರಕಟನೆ	....	....	....	....	೨೫
~~ಧಾರವಾಡ ಜಿಲ್ಲಾ~~ ಬೋರ್ಡಿನ ಕೆಲವು ಮಹತ್ವದ ನಿರ್ಣಯಗಳು					೨೭
ಪತ್ರಗಳ ಸಾರಾಂಶ	....	....	....	....	೨೯
ಪ್ರಕಟನೆ	....	....	....	....	೩೦

ವಾರ್ಷಿಕ ಚಂದಾಹಣ ನಿರಡುರೂಪಾಯಿಗಳು ಮಾತ್ರ. ಬಿಡಿಸಂಚಿಕೆಗೆ ನಾಲ್ಕು ಅಣೆಗಳು.

by V. Y. Jathar, B. Sc. at the Karnatak Printing Works, Dharwar and Published by R. S. Madiman, B. A., Head Master Training School, Dharwar at his Office.

ಓದಿರಿ ! ತ್ವರೆಮಾಡಿರಿ

ವಾಗ್ವಿಲಾಸ ಬುಕ್‌ಡಿಪೋಕ್ಕೆ ಇಂದೇ ಪತ್ರ ಬರೆಯಿರಿ.

ಶಾಸ್ತ್ರೀಯ ಪಾಠಗಳ ಟಿಪ್ಪಣಿಗಳು

ಕನ್ನಡ ೭ನೇ ಇಯತ್ತೆ ಹಾಗು ಮುಲಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಬಹು ಬೆಲೆಯುಳ್ಳ ಪುಸ್ತಕವಾಗಿದೆ. ಶ್ರೀ. ಆರ್. ಕೆ. ನಾಯಿಕ, ಬಿ. ಎ., ಎಡ್‌ಮಿನಿಸ್ಟ್ರೇಟಿವ್ಹ ಆಫೀಸರ ಡಿಸ್ಟ್ರಿಕ್ಟ ಸ್ಕೂಲಬೋರ್ಡ ಧಾರವಾಡ ಇವರು ಶ್ರಮವಹಿಸಿ ಬರೆದ ಪುಸ್ತಕವಿದು. ಬೆಲೆ: ೬ ಆಣೆ ಮಾತ್ರ.

ಸುಲಭ ಬಾಲಬೋಧೆ

ಇದು ಸರಕಾರದಿಂದ ಮಂಜೂರಾಗಿದ್ದು ಎಲ್ಲ ಶಾಲೆಯವರು ಉಪಯೋಗಿಸುತ್ತಿರುವರು. ಶ್ರೀ. ಬಸವಾರ್ಯ ಬೂದಿಹಾಳಮಠ ಸುಪರವಾಯಿಝರು ಗ್ರಂಥಕರ್ತರು. ೧ ಆ. ೯ ಪೈ.

ಕನ್ನಡಿಗರ ಕಥೆ ಅಥವಾ ಕರ್ನಾಟಕ ಇತಿಹಾಸ

೪ನೆಯ ಇಯತ್ತೆಯ ಕನ್ನಡ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವೆಂದು ಹೆಸರುಪಡೆದಿದೆ. ಬರೆದವರು ಕ. ರಾ. ಅಡಬಡ್ಡಿ. ಬೆಲೆ: ೬ ಆಣೆ

ವರ್ಷಭವಿಷ್ಯ

(ಶ್ರೀ. ರಾಮಭಟ್ಟ ಕೃತ ಬೆಲೆ: ೬ ಆಣೆ)

ನಮ್ಮಲ್ಲಿ ಶಾಲೋಪಯೋಗಿ ಎಲ್ಲ ಪುಸ್ತಕಗಳು, ಕಥೆ ಕಾದಂಬರಿಗಳು, ಪಂಚಾಂಗಗಳು ಮಾರಾಟಕ್ಕೆ ಸಿಗುತ್ತವೆ. ವ್ಯಾಪಾರಸ್ಥರಿಗೆ ಭರವೂರ ಕವಿತಾಶನ್ ಕೊಡುವೆವು. ಸ್ವಲ್ಪದರಲ್ಲಿ ಹೇಳುವದೆಂದರೆ ನಮ್ಮಲ್ಲಿ ಸಿಗದಿರುವ ಪುಸ್ತಕಗಳೇ ಇಲ್ಲ.

ಕಲಿತರೆ ಹೀಗೆ ಕಲಿಯಬೇಕು .... ಬೆಲೆ ೦—೬—೦

ವಿದ್ಯಾರ್ಥಿಗಳ ವಾಚನಾಲಯಕ್ಕೆ ಸರಕಾರದಿಂದ ಮಂಜೂರಾಗಿದೆ.

ಎ. ಆರ್. ಶಿವನಾಗಪ್ಪ,
ಪ್ರೊಪ್ರಾಯಿಟರ
ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ತೇ: ಷಗಿರಿರಾವ ಮಡಿವಾಳ್, ಬಿ. ಎ.

ಸಂಪುಟ ೬೯ | ಜನವರಿ ೧೯೪೧ | ವರ್ಷ ೧೨. ಸಂ. ೧೧

೨೫ನೆಯ ಕನ್ನಡ ಸಾಹಿತ್ಯ ಸಮ್ಮೇಲನ

ಕಳೆದ ತಿಂಗಳ ೨೭-೨೮-೨೯ನೆಯ ತಾರೀಖುಗಳ ದಿನ ಧಾರವಾಡದಲ್ಲಿ ನ್ನಡ ಸಾಹಿತ್ಯ ಸಮ್ಮೇಲನದ ೨೫ನೆಯ ಅಧಿವೇಶನವು ತುಂಬ ವಿಜೃಂಭಣೆಯಿಂದ ನವೇರಿತು. ಶ್ರೀಮಾನ್ ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳು ಅಧ್ಯಕ್ಷ ಸ್ಥಾನದಲ್ಲಿ ವಿರಾಜಮಾನರಾಗಿದ್ದರು. ವಯೋವೃದ್ಧ ಜ್ಞಾನವೃದ್ಧ ಹಿರಿಯರಾದ ೀ. ಮುದವೀಡು ಕೃಷ್ಣರಾಯರು ತರುಣರೂ ಉತ್ಸಾಹಶಾಲಿಗಳೂ ಆದ ೂತನ ಅಧ್ಯಕ್ಷರಿಗೆ ನಾಲ್ಕು ಆದರೋಪಚಾರಗಳ ಮಾತಾಡಿ ತಮ್ಮ ಅಧಿಕಾರ ಸ್ಥಾನವನ್ನು ಒಪ್ಪಿಸಿಕೊಟ್ಟ ಬಳಿಕ ಕಾರ್ಯಾರಂಭವಾಯಿತು. ಔಪಚಾರಿಕ ತಿಯ ಅಧ್ಯಕ್ಷರ ಆಯ್ಕೆಯ ಮಾತುಕತೆಗಳು ಮುಗಿದ ಬಳಿಕ ಅಧ್ಯಕ್ಷರು ತಮ್ಮ ಾಷಣವನ್ನು ಓದಿ ಆಹೊತ್ತಿನ ಕಾರ್ಯಕ್ರಮವನ್ನು ಮುಗಿಸಿದರು. ಅಧ್ಯಕ್ಷರ ಾಷಣವು ವಿಚಾರಪರಿಪ್ಲುತವಾಗಿದ್ದು ಆಕರ್ಷಕವಾಗಿದ್ದಿತು. ಹೊತ್ತು ಹಗಲು ನ್ನೆರಡು ಗಂಟೆಗೆ ಎಬ್ಬಿಸಿದ್ದರೂ ಸುಶಿಕ್ಷಿತವಾದ ಜನಸಮುದಾಯವು ಸಾಹಿತ್ಯ ುಧೆಯ ಸೇವೆಯಲ್ಲಿ ಹಸಿವೆ ನೀರಡಿಕೆಗಳನ್ನು ಮರೆತು ಶಾಂತವಾಗಿ ಕುಳಿತು ೀಳುತ್ತಿತ್ತು. ಕನ್ನಡಮ್ಮನ ದೊಡ್ಡ ಹಬ್ಬವೆಂದಮೇಲೆ ಹಿರಿಯರೂ ಕಿರಿಯರೂ ಾಡಿಯೇ ಸೇರಬೇಕಲ್ಲವೆ? ಹಾಗೆ ಸೇರಿದ ಕಿರಿಯರಲ್ಲಿ ಕೆಲವರು ಮೊದಲಿನ ಾರ್ಯಕ್ರಮಗಳಿಂದ ದಣಿದು ಹಸಿದು ನೀರಡಿಸಿ ಹೊರಗೆಹೋಗಲು ಪ್ರಯತ್ನಿಸು

ತ್ತಿದ್ದುದರಿಂದ ನಡುವೆ ಅಲ್ಪ ಸ್ವಲ್ಪ ತೊಂದರೆಯೆನಿಸಿದರೂ ಅದು ತೊಂದರೆಯೆಂದು ಹೇಳುವಂತಿರಲಿಲ್ಲ.

ಎರಡನೆಯ ದಿನದ ಸಾಹಿತ್ಯಗೋಷ್ಠಿಯೂ ಕೂಡ ತುಂಬ ಆನಂದದಲ್ಲಿಯೇ ಕೊನೆಗಂಡಿತು. ಶ್ರೀಮಾನ್ ಮಾಸ್ತಿಯವರು ಅದರ ಅಧ್ಯಕ್ಷರಾಗಿದ್ದರು.

ಸಾಹಿತ್ಯ ಸಮ್ಮೇಲನದ ಅಂಗವಾಗಿ ನೆರೆದ ಮಹಿಳಾಗೋಷ್ಠಿಯೂ ಹಿಂದಿನ ವರುಷಗಳಿಗಿಂತಲೂ ಹೆಚ್ಚು ಯಶಸ್ವಿಯಾಗಿಯೇ ನೆರವೇರಿತು. ಶ್ರೀಮತಿ ಡಾ. ಸಾವಿತ್ರಿಬಾಯಿ ನಾಗನಗೌಡ ಇವರು ಅಧ್ಯಕ್ಷರಾಗಿದ್ದರು.

ಈ ಸಾಹಿತ್ಯ ಸಮ್ಮೇಲನವು ಕ್ರಮದಲ್ಲಿ ೫೫ನೆಯದು. ಧಾರವಾಡದಲ್ಲಿ ನೆರೆದದ್ದು ಎರಡನೆಯ ಸಾರಿ. ಅದರೂ ಜನತೆಯ ಪ್ರಾತಿನಿಧಿಕವಾಗಿ ನಡೆದದ್ದು ಇದೇ ಮೊದಲನೆಯ ಸಾರಿ.

ಈ ರೀತಿ ಸಮ್ಮೇಲನವು ಸರ್ವತೋಮುಖವಾಗಿ ಯಶಸ್ವಿಯಾಗಿ ಕೊನೆಗಂಡುದಕ್ಕಾಗಿ ಕನ್ನಡಿಗರು ಸ್ವಾಗತಸಮಿತಿಯ ಸದಸ್ಯರನ್ನೂ ಅದರ ಅಧ್ಯಕ್ಷರಾದ ಶ್ರೀಮಾನ್ ಬಸವನಾಳರನ್ನೂ ಸಮ್ಮೇಲನಾಧ್ಯಕ್ಷರಾದ ಶ್ರೀಮಾನ್ ಚಂದ್ರಶೇಖರಶಾಸ್ತ್ರಿಗಳನ್ನೂ ಸಾಹಿತ್ಯಗೋಷ್ಠಿ ಮಹಿಳಾಗೋಷ್ಠಿಗಳ ಅಧ್ಯಕ್ಷರನ್ನೂ ಇನ್ನುಳಿದ ಯಾವತ್ತು ಕಾರ್ಯಕರ್ತರನ್ನೂ ಅಭಿನಂದಿಸಬೇಕಾಗಿದೆ.

ಸ್ಥಾನಿಕ ಅಧಿಕಾರೀ ಸಂಘಗಳ ಎರಡನೆಯ ಸಮ್ಮೇಲನ

ಮೊದಲನೆಯ ಸಮ್ಮೇಲನದ ಕಾರ್ಯಕಲಾಪಗಳನ್ನು ಕಳೆದ ವರ್ಷದ ಡಿಸೆಂಬರತಿಂಗಳ ಸಂಚಿಕೆಯಲ್ಲಿ ಸವಿಸ್ತಾರವಾಗಿ ವಿವೇಚಿಸಿದ್ದನ್ನು ನಮ್ಮ ವಾಚಕರು ಓದಿರಬಹುದು. ಈಸಾರೆಯ ಈ ಸಮ್ಮೇಲನವನ್ನು ನಮ್ಮ ಇಲಾಖೆಯ ಜನಪ್ರಿಯ ಡಾಯರೆಕ್ಟರ ಸಾಹೇಬರವರು ಪ್ರಾರಂಭಿಸಿಕೊಟ್ಟುದರಿಂದ ಅದರ ಕಾರ್ಯಕರ್ತರಿಗೆ ತುಂಬ ಉತ್ಸಾಹಕರವಾಗಿ ಪರಿಣಮಿಸಿತು. ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ತಾವಡೆ ಸಾಹೇಬರು ಅದರ ಅಧ್ಯಕ್ಷರಾಗಿದ್ದರು. ನಮ್ಮ ಪ್ರಾಂತದ ಶೈಕ್ಷಣಿಕ ಪ್ರಗತಿಯ ಸೂತ್ರಚಾಲಕರಾದ ಅಧಿಕಾರಿಗಳೆಲ್ಲರೂ ಭಾಗವಹಿಸಿ ನಿರ್ಣಯಿಸಿಕೊಂಡ ಈ ಕೆಳಗಿನ ಮಾತುಗಳನ್ನು ಅವಲೋಕಿಸಿದರೆ ಅವರೆಲ್ಲರ ಶೈಕ್ಷಣಿಕ ಧೋರಣೆಯು ತಿಳಿದುಬರುವಂತಿದೆ. ಪ್ರಾಥಮಿಕ ಶಿಕ್ಷಕರಿಗೂ ಶಿಕ್ಷಣಕ್ಕೂ ಹೆಚ್ಚಾಗಿ ಅನ್ವಯಿಸುವಂಥ ಕೆಲವನ್ನಷ್ಟೇ ಇಲ್ಲಿ ಕೊಟ್ಟಿದೆ.

೧. ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ನಮ್ಮ ಕರ್ನಾಟದಲ್ಲಿ ಸಾರ್ವತ್ರಿಕ ಒತ್ತಾಯದ ಮತ್ತು ಉಚಿತವಾದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಪ್ರಾರಂಭಿಸುವ ಧೋರಣೆಯಿಂದ ಅಖಿಲ ಕರ್ನಾಟಕದೊಳಗಿನ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳನ್ನು ಅವಲೋಕಿಸುವದು ಅವಶ್ಯಕವೆನಿಸಿದೆ. ಮತ್ತು ಈ ಕೆಲಸಕ್ಕಾಗಿ ಆರು ಜನರ ಒಂದು ಉಪಸಮಿತಿಯನ್ನು ನಿಯಮಿಸಬೇಕೆಂದು ಈ ಸಭೆಯು ಕೋರುವದು.

೨. ೧೯೪೦ನೆಯ ಇಸ್ವಿಯ ಜೂನ ತಿಂಗಳಲ್ಲಿ ಆರಂಭಿಸಲ್ಪಟ್ಟ ಹೊಸ ಅಭ್ಯಾಸ ಪತ್ರಿಕೆಯು ಸರ್ವಸಾಮಾನ್ಯವಿದ್ಯಾರ್ಥಿಗಳ ಮತ್ತು ಶಿಕ್ಷಕರ ಯೋಗ್ಯತೆಗೆ ಮೀರಿದ್ದಿರುವದೆಂಬದು ಈ ಸಭೆಯ ತಿಳಿವಳಿಕೆಗೆ ಬಂದಿರುವದರಿಂದ ಅಸಂಬಂಧ ದಿಂದ ವಿಚಾರಣೆ ನಡೆಯಿಸಿ ಮೂರು ತಿಂಗಳುಗಳ ಒಳಗಾಗಿ ಒಂದು ವರದಿಯನ್ನು ಸಿದ್ಧಮಾಡುವದಕ್ಕಾಗಿ ಆರು ಜನರ ಒಂದು ಸಮಿತಿಯನ್ನು ನಿಯಮಿಸಲಾಗಿದೆ.

೪. ಪ್ರಕೃತಕ್ಕೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಪ್ರಚಾರದಲ್ಲಿರುವ ಕ್ರಮಿಕ ವಾಚನ ಪುಸ್ತಕಗಳು ಈ ನಮ್ಮ ನಾಲ್ಕು ಜಿಲ್ಲೆಗಳಿಗೆ ಯೋಗ್ಯವಾದವಿಲ್ಲವೆಂದು ಈ ಸಭೆಯ ಅಭಿಪ್ರಾಯವಿರುವದು. ಆದ್ದರಿಂದ ಕರ್ನಾಟಕದೊಳಗಿನ ಲೇಖಕರೂ ಪ್ರಕಟನೆಯ ಕಾರ್ಯವನ್ನು ಕೈಕೊಂಡವರೂ ಆದಷ್ಟು ತೀವ್ರವಾಗಿ ಹೊಸ ಕ್ರಮಿಕ ಪುಸ್ತಕಗಳನ್ನು ಒರೆದು ಪ್ರಕಟಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಮತ್ತು **ಆಂಗ್ಲೊ ಸ್ಕೂಲ್ ಬೋರ್ಡಿನವರು ಸಾಧ್ಯವಿದ್ದಮಟ್ಟಿಗೂ ಒಂದು ಸ್ಥಾನದಲ್ಲಿಯೇ ಹುಟ್ಟಿದ ಕಾಗದದ ಮೇಲೆ ಮುದ್ರಿಸದೆ ಇದ್ದ ಪುಸ್ತಕಗಳನ್ನು ಆರಿಸಿ ನಿಯಮಿಸಲಾಗದೆಂದು ಈ ಸಭೆಯು ಅರಿಕೆ ಮಾಡಿಕೊಳ್ಳುತ್ತದೆ.**

೫. ಧಾರವಾಡದಲ್ಲಿಯೂ ಬೆಳಗಾವಿಯಲ್ಲಿಯೂ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಸಂಸ್ಥೆಗಳನ್ನು ಪ್ರಾರಂಭಿಸಿ ಅತ್ಯುತ್ತಮ ಕೆಲಸ ಮಾಡಿದ ಕರ್ನಾಟಕ ಎಜ್ಯುಕೇಶನ್ ಬೋರ್ಡನ್ನೂ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯವರನ್ನೂ ಈ ಸಭೆಯು ಅಭಿನಂದಿಸುವದು. ಮತ್ತು ಪ್ರಾಥಮಿಕ ಶಿಕ್ಷಣದ ಪ್ರಸಾರ ಕಾರ್ಯಕ್ಕೆ ನೆರವಾಗುವ ಈ ಖಾಸಗಿ ಸಂಸ್ಥೆಗಳಿಗೆ ಸರಕಾರವು ಉದಾರ ಧೋರಣೆಯಿಂದ ಸಹಾಯ ದ್ರವ್ಯವನ್ನು ಕೊಟ್ಟು ನೆರವಾಗಬೇಕೆಂದು ತುಂಬ ಶಿಫಾರಸುಮಾಡುವದು.

೬. ಹೆಣ್ಣುಮಕ್ಕಳ ಶಾಲೆಗಳಲ್ಲಿ ಶಿಕ್ಷಕಿಯರನ್ನೇ ನಿಯಮಿಸಬೇಕು. ಸಾಧ್ಯವಿದ್ದಮಟ್ಟಿಗೂ ಎಲ್ಲ ಹೆಣ್ಣುಮಕ್ಕಳ ಶಾಲೆಗಳನ್ನು ಸಂಪೂರ್ಣ ಅಭ್ಯಾಸಕ್ರಮ

ವನ್ನು ಕಲಿಸುವ ಶಾಲೆಗಳನ್ನಾಗಿಮಾಡಬೇಕು. ಬಾಲಕ ಬಾಲಕಿಯರು ಕೂಡಿಯೇ ಕಲಿಯುವ ಶಾಲೆಗಳಲ್ಲಿ ಶಿಕ್ಷಕರನ್ನೂ ಶಿಕ್ಷಕಿಯರನ್ನೂ ಕೂಡಿಯೇ ನಿಯಮಿಸ ಬೇಕ ಎಂದು ಈ ಸಭೆಯು ನಿರ್ಣಯಿಸುವದು.

೭. ಬೆಳಗಾವಿಯ ಸ್ಕೂಲ್‌ಬೋರ್ಡಿನವರು ಗಜಾ ಪ್ರಾಥಮಿಕ ಶಾಲೆಗಳಲ್ಲಿ ವಾಚನಾಲಯಗಳನ್ನು ಪ್ರಾರಂಭಿಸಿರುವದನ್ನು ಕೇಳಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ. ಮತ್ತು ಕರ್ನಾಟಕದೊಳಗಿನ ಮಿಕ್ಕ ಸ್ಕೂಲ್ ಬೋರ್ಡುಗಳವರೂ ಕೂಡ ತಮ್ಮ ಅಡಳಿತದ ಶಾಲೆಗಳಲ್ಲಿ ಬಾಲಕರ ಸಲುವಾಗಿ ವಾಚನಾಲಯಗಳನ್ನು ಸ್ಥಾಪಿಸಬೇಕೆಂದೂ ಈಗಿರುವ ಸಾರ್ವಜನಿಕ ವಾಚನಾಲಯಗಳ ಬಾಲಕರು ಅವುಗಳಲ್ಲಿ ಬಾಲಕ ಬಾಲಕಿಯರ ಉಪಯೋಗಕ್ಕಾಗಿ ಒಂದು ಸ್ವತಂತ್ರ ವಿಭಾಗವನ್ನು ಏರ್ಪಡಿಸಬೇಕೆಂದು ಕೇಳಿಕೊಳ್ಳುತ್ತದೆ.

೮. ಚಿಕ್ಕ ಹಳ್ಳಿಗಳ ಶಾಲೆಗಳ ಸಲುವಾಗಿ ಸಂಚರಿಸುವ ವಾಚನಾಲಯಗಳನ್ನು ಏರ್ಪಡಿಸಬೇಕೆಂದು ಈ ಸಭೆಯು ಕರ್ನಾಟಕದೊಳಗಿನ ಎಲ್ಲ ಸ್ಕೂಲ್ ಬೋರ್ಡುಗಳಿಗೆ ವಿನಂತಿಮಾಡಿಕೊಳ್ಳುತ್ತದೆ.

ಇತ್ಯಾದಿ.

ಪ್ರಾಥಮಿಕ ಶಾಲೆಗಳಲ್ಲಿಯ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವ ಕಾರಣವೇನು?

ಶ್ರೀಮಾನ್ ಎಸ್. ಆರ್. ತಾವಡೆ ಎಮ್. ಏ. ಎಜ್ಯುಕೇಶನಲ್
ಇನ್‌ಸ್ಪೆಕ್ಟರ ದ. ಭಾ. ಅವರಿಂದ

"ಪ್ರಾಥಮಿಕ ಶಾಲೆಗಳಿಗಾಗಿ ವೆಚ್ಚವಾಗುವ ಹಣದ ಬಹುಭಾಗವು ಅಪವ್ಯಯವೆನಿಸುವದು. ಈ ಅಪವ್ಯಯಕ್ಕೆ ಕಾರಣವೇನೆಂದರೆ– ಅಲ್ಲಿ ಕಲಿಯಲು ಬಂದ ವಿದ್ಯಾರ್ಥಿಗಳಲ್ಲಿ ಅರ್ಧಕ್ಕಿಂತ ಕಡಿಮೆ ವಿ. ಗಳು ಮಾತ್ರ ಪ್ರಾಥಮಿಕ ಅಭ್ಯಾಸ ಕ್ರಮವನ್ನು ಪೂರ್ತಿಗೊಳಿಸುವರು. ಅರ್ಧಕ್ಕಿಂತ ಹೆಚ್ಚು ವಿ. ಗಳು ನಡುವೆಯೇ ಶಾಲೆಯನ್ನು ಬಿಟ್ಟು ಬಿಟ್ಟು ಎರಡು ಮೂರು ವರುಷಗಳವರೆಗೆ ಕಲಿತವರೂ ಕೂಡ ಮುಂದೆ ಸ್ವಲ್ಪ ದಿವಸಗಳಲ್ಲಿಯೇ ನಿರಕ್ಷರಿಗಳಾಗಿ ಬಿಡುವರು." ಇದು ಎಲ್ಲರ ಅನುಭವದ ಮಾತು. ಈ ದಕ್ಷಿಣ ಭಾಗಕ್ಕಿಂತೂ ಈ ಮಾತು ಇನ್ನಷ್ಟು ನಿಚ್ಚಳವಾಗಿ ಅನ್ವಯಿಸುವದೆಂಬದು ನಿಮ್ಮೆಲ್ಲರ ಅನುಭವಕ್ಕೂ ಬಂದಿರಬಹುದು. ಈ

ಬಗೆಯ ಅಪವ್ಯಯವನ್ನು ಕಡಿಮೆ ಮಾಡಲಿಕ್ಕೆ ಯತ್ನಿಸುವದು ವಿದ್ಯಾ ಇಲಾಖೆಯವರ ಜವಾಬದಾರಿಯೆನಿಸುವಷ್ಟೇ ಸಾರ್ವಜನಿಕರ ಕರ್ತವ್ಯವೂ ಎನಿಸುವದಷ್ಟೇ?

ಪ್ರಾಥಮಿಕ ಅಭ್ಯಾಸವೆಂದರೆ, ಪ್ರಾಂತಿಕ ಭಾಷೆಯ ಶಾಲೆಯೊಳಗಿನ ಆರಂಭದ ನಾಲ್ಕು ಇಯತ್ತ್ರೆಗಳ ಅಭ್ಯಾಸವೆಂದು ಹೇಳುವರು. ಆ ನಾಲ್ಕು ಇಯತ್ತ್ರೆಗಳ ಅಭ್ಯಾಸವನ್ನು ಮುಗಿಸಿದ ಬಾಲಕರಲ್ಲಿ ಹಲವರು ಇಂಗ್ಲಿಷು ಶಾಲೆಗಳಿಗೆ ಹೋಗುವರು; ಹಲವರು ಮೇಲಿನ ಇಯತ್ತ್ರೆಗೆ ಹೋಗುವರು; ಕೆಲವರು ಗೃಹಕೃತ್ಯಗಳಿಗಾಗಿ ಶಾಲೆಯನ್ನು ಬಿಟ್ಟು ಬಿಡುವರು. ಇದು ಒಂದು ಮೆಟ್ಟು.

ಈ ಪ್ರಾಥಮಿಕ ಅಭ್ಯಾಸವನ್ನು ಪೂರ್ಣಮಾಡದೆ ಕೇವಲ ಎರಡು ಮೂರು ಇಯತ್ತ್ರೆಗಳನ್ನಷ್ಟೆ ಕಲಿತು ಶಾಲೆಯನ್ನು ಬಿಟ್ಟರೆ ಅದರಿಂದ ಅವರಿಗೆ ಏನೂ ಪ್ರಯೋಜನವಾಗಲಾರದು. ಆಗ ಅವರ ವಯಸ್ಸು ಕೂಡ ಬಹುಶಃ ೧೦ ವರ್ಷಕ್ಕಿಂತ ಕಡಿಮೆಯೇ ಇರುವದರಿಂದ ಅವರಿಂದ ಹೆಚ್ಚಿನ ಗೃಹಕೃತ್ಯದ ಕೆಲಸಗಳೂ ಕೂಡ ಸರಿಯಾಗಿ ನಡೆಯಲಾರವು. ಆದ್ದರಿಂದ ಇಂಥ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟು ಹೋಗದಂತೆ ಯತ್ನಿಸುವದು ತೀರ ಆವಶ್ಯಕವೆನಿಸುವದು. ಹಾಗೆ ಕಾಯದೆಯಿಂದ ನಿರ್ಬಂಧ ಪಡಿಸುವದು ಒಂದು ಮಾರ್ಗ. ಅಂಥ ಒತ್ತಾಯದ ಶಿಕ್ಷಣಕ್ರಮವು ಪ್ರಚಾರದಲ್ಲಿ ಬರುವವರೆಗೂ ನಾವು ಕೈಕಟ್ಟಿಕೊಂಡು ದಾರಿಕಾಯುತ್ತ ಕೂಡ್ರುವದು ಸರಿಯುಲ್ಲ. ಎರಡನೆಯ ಉಪಾಯಗಳಿಂದ ಈ ಬಗೆಯ ಅಪವ್ಯಯವನ್ನು ತಪ್ಪಿಸಲಿಕ್ಕೆ ವಿದ್ಯಾಧಿಕಾರಿಗಳೂ ಸಾರ್ವಜನಿಕರೂ ಕೂಡಿಯೇ ಯತ್ನಿಸಬೇಕಾಗುವದು. ಇಂಥ ಬಾಲಕರು ಶಾಲೆಯನ್ನು ಯಾಕೆ ಬಿಡುವರೆಂಬದನ್ನು ಲಕ್ಷಪೂರ್ವಕವಾಗಿ ಅಭ್ಯಾಸ ಮಾಡುವದರಿಂದ ಅದರ ನಿವಾರಣೆಯ ಉಪಾಯಗಳನ್ನು ಹುಡುಕಲು ಸುಲಭವಾಗುವದು. ರೋಗದ ಕಾರಣವನ್ನು ಕಂಡುಹಿಡಿದು ಪ್ರತಿಬಂಧಕ ಉಪಾಯಗಳನ್ನು ಯೋಜಿಸಿ ಬಿಟ್ಟರೆ ರೋಗ ನಿವಾರಣೆಯ ಕಾರ್ಯವು ತಾನಾಗಿಯೇ ಆಗಿಬಿಡುವದಲ್ಲವೆ ?

ಪ್ರತಿಯೊಂದು ಶಾಲೆಯಲ್ಲಿ ಜನರಲ್ ರಜಿಸ್ಟರವಿರುವದು. ಅದರ ಗಣನೆಯ ಕಲವಿನಲ್ಲಿ ವಿದ್ಯಾರ್ಥಿಗಳು ' ಶಾಲೆಯನ್ನು ಬಿಡುವ ಕಾರಣ ' ವನ್ನು ಶಿಕ್ಷಕರು ಕುಂಬುವರು. ಈಗಿರುವ ಸ್ಥಿತಿಯಲ್ಲಿ ಶಾಲೆಯ ಜನರಲ್ ರಜಿಸ್ಟರವನ್ನು ನೋಡಿದರೆ ಈ ಕಲವಿನಲ್ಲಿ 'ಬಹು ದಿವಸ ಶಾಲೆಗೆ ಬಾರದ್ದರಿಂದ' 'ಶಾಲೆಯನ್ನು ಬಿಟ್ಟನು' 'ಪರಸ್ಥಳಕ್ಕೆ ಹೋದನು' ಮುಂತಾದ ಎರಡು ಮೂರು ತೀರ ಸಾಮಾನ್ಯ ಕಾರಣಗಳನ್ನಷ್ಟೇ ಬರೆಯುವರೆಂಬದು ಕಂಡುಬರುವದು. ಇದರಿಂದ ಆ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವುದಕ್ಕೆ ನಿಜವಾದ ಕಾರಣವೇನೆಂಬದು ಗೊತ್ತಾಗುವ ಸಂಭವವಿಲ್ಲ.

ವಿದ್ಯಾರ್ಥಿಗಳು ಶಾಲೆಯನ್ನು ಬಿಡುವದಕ್ಕೆ ಹೇಳುವ ಕಾರಣಗಳನ್ನು ಈ ಕೆಳಗಿನಂತೆ ವರ್ಗೀಕರಣ ಮಾಡಬಹುದು :

೧. ಮನೆಯ ಹೊರಗಿನ ಕೆಲಸಗಳಲ್ಲಿ ತೊಡಗುವದು.

೨. ಮನೆತನದ ಕೆಲಸಗಳಲ್ಲಿ ತೊಡಗುವದು.

(೧) ದನಗಳನ್ನು ಸಾಕುವದು.

(೨) ಹಾಲು ಮಾರುವದು.

(೩) ಒಕ್ಕಲುತನ ಕೆಲಸ.

(೪) ತಮ್ಮ ಅಂಗಡಿಗಳಲ್ಲಿ ಕೆಲಸಕ್ಕೆ ನಿಲ್ಲುವದು.

(೫) ಮನೆಯೊಳಗಿನ ಚಿಕ್ಕ ಮಕ್ಕಳನ್ನು ಆಡಿಸುವದು.

(೬) ಅಡಿಗೆ ಮಾಡುವದು ಮುಂತಾದ ಪಾಲಕರ ವ್ಯವಸಾಯಗಳಲ್ಲಿ ನೆರವಾಗುವದಕ್ಕೆ ಹೋಗುವದು.

೩. ಮದುವೆಯಾಗುವದು ಇಲ್ಲವೆ ಲಗ್ನವನ್ನು ನಿಶ್ಚಯಿಸುವದು.

೪. ಊರು ಬಿಟ್ಟು ಪರಸ್ಥಳಕ್ಕೆ ವಸತಿಗೆ ಹೋಗುವದು.

೫. ತಂದೆ-ತಾಯಿಗಳು ಇಲ್ಲವೆ ಪಾಲಕರು ಲಕ್ಷ್ಯ ಕೊಡದೆ ಇರುವದು.

೬. ಶಾಲೆಯಲ್ಲಿ ಪ್ರಗತಿಯಾಗದೆ ಕಲಿತ ಇಯತ್ತೆಯನ್ನೇ ತಿರುತಿರುಗಿ ಕಲಿಯುವ ಸಂದರ್ಭ ಬರವದು.

೭. ಸತ್ತು ಹೋಗುವದು.

೮. ಬೇನೆ-ಬೇಸರಿಕೆಗಳಿಂದ ವ್ಯಂಗರಾಗುವದು (ಕುರುಡರಾಗುವದು, ಕುಂಟರಾಗುವದು, ಕಿವುಡರಾಗುವದು ಇತ್ಯಾದಿ.)

೯. ಅನಾರೋಗ್ಯದ ಮೂಲಕ.

೧೦. ತೀರ ಬಡತನದ ಮೂಲಕ.

೧೧. ಪಾಟಿ ಪುಸ್ತಕಗಳು ಅರಿವೆ ಅಂಚಡಿಗಳು ಇವು ದೊರೆಯದ್ದರಿಂದ ಅಥವಾ ಫೀ ಕೊಡಲಾರದ್ದರಿಂದ.

೧೨. ಶಾಲೆಯ ವೇಳೆಯು ಅನುಕೂಲವಾಗಿರದ್ದರಿಂದ.

ಇತ್ಯಾದಿ.

ಯಾವನೊಬ್ಬ ವಿದ್ಯಾರ್ಥಿಯು ಸಾಲೆಯನ್ನು ಬಿಡುವದು ಗೊತ್ತಾದಕೂಡಲೆ ಶಿಕ್ಷಕರು ಅದರ ಕಾರಣವನ್ನು ಗೊತ್ತುಹಚ್ಚಲು ಯತ್ನಿಸಿದರೆ ಅದು ಅವರ ಶಕ್ತಿಗೆ ಮೀರಿದ ಕೆಲಸವೆಂದಾಗಲಿ ಅವರಿಗೆ ಬಹು ಶ್ರಮದಾಯಕವಾದ ಒಂದು ಹೆಚ್ಚಿನ ಕೆಲಸವೆಂದಾಗಲಿ ಹೇಳುವಂತಿಲ್ಲವೆಂಬುದನ್ನು ಎಲ್ಲರೂ ಒಪ್ಪುವರೆಂದು ನಮ್ಮ ಭಾವನೆಯಿದೆ. ಹಳ್ಳಿಗಳಲ್ಲಿ ಶಿಕ್ಷಕರು ಊರ ಪ್ರಮುಖರಲ್ಲಿ ಒಬ್ಬರೆಂದು ಗಣಿಸ

ಸಲ್ಪಡುವರು. ಅಲ್ಲಿ ಶಿಕ್ಷಕರಿಗೂ ವಿದ್ಯಾರ್ಥಿಗಳ ಪಾಲಕರಿಗೂ ಒಂದಿಲ್ಲೊಂದುಬಗೆಯ ಸಂಬಂಧವು ಇದ್ದೇ ಇರುವದೆಂದು ಹೇಳಿದರೆ ಅಯೋಗ್ಯವೆನಿಸದು. ಶಿಕ್ಷಕರು ಪಾಲಕರೊಡನೆ ತಮ್ಮ ವಿದ್ಯಾರ್ಥಿಗಳ ಹಿತಚಿಂತನೆಯ ಮಟ್ಟಿಗೆ ಸಂಬಂಧವನ್ನಿಟ್ಟು ಕೊಳ್ಳುವದು, ಶಿಕ್ಷಕರು ವಿದ್ಯಾರ್ಥಿಗಳು ಮತ್ತು ಪಾಲಕರು ಈ ಮೂವರ ದೃಷ್ಟಿಯಿಂದಲೂ ತುಂಬ ಅಪೇಕ್ಷಣೀಯವಾದ ಮಾತೆಂದು ನಮ್ಮ ಮತವಿದೆ. ಊರೊಳಗಿನ ಸಕ್ಷ ಪಂಗಡಗಳ ಕಡೆಗೆ ಕಣ್ಣೆತ್ತಿ ನೋಡದೆ ಕೇವಲ ವಿದ್ಯಾರ್ಥಿಗಳ ಮತ್ತು ಶಾಲೆಯ ಹಿತದ ಹಾಗೂ ತನ್ನ ಕರ್ತವ್ಯದ ಸಲುವಾಗಿ ಪಾಲಕರೊಡನೆ ಬಳಕೆಯನ್ನಿಟ್ಟಿರುವ ಶಿಕ್ಷಕನ ಜೀವನವು ಹಳ್ಳಿಗಳಲ್ಲಿ ಸುಖಮಯವಾಗುವದೆಂದರೆ ಅತಿಶಯೋಕ್ತಿಯೆಂದು ಯಾರೂ ಭಾವಿಸಲಾರರು. ಇಂಥ ಜನಪ್ರಿಯರಾದ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವದಕ್ಕೆ ನಿಜವಾದ ಕಾರಣ ವೇನೆಂಬದನ್ನು ಕಂಡುಕೊಳ್ಳುವದು ಅತಿಶಯ ಸುಲಭವೆಂಬದನ್ನು ಬೇರೆ ಹೇಳ ಬೇಕಾಗಿಲ್ಲ.

ಶಿಕ್ಷಕರು ಲಕ್ಷ್ಯ ಪೂರೈಸದೆ ಇದ್ದರೆ ಮಾತ್ರ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟಿದ್ದರ ಕಾರಣವು ಸರಿಯಾಗಿ ಗೊತ್ತಾಗುವ ಸಂಭವವಿಲ್ಲ; ಮತ್ತು ಈಗಿನ ರೂಢಿಯ ಮೇರೆಗೆ ಶಿಕ್ಷಕರು ಜನರಲ್ ರಜಿಸ್ಟರಿನಲ್ಲಿ ಆ ಕಲಮನ್ನು ಬೆಳ್ಳಗೆ ಬಿಟ್ಟು ಬಿಡಬಾರದೆಂಬ ದೊಂದೇ ಧ್ಯೇಯದಿಂದ ಏನಾದರೊಂದು ಶಬ್ದವನ್ನು ಬರೆದು ಮುಂದೆ ಸಾಗಿಬಿಡುವದು ಸರಿಯಲ್ಲ.

ತನ್ನ ವಿದ್ಯಾರ್ಥಿಗಳ ಹಿತವನ್ನು ಬಯಸುವ ಶಿಕ್ಷಕನು ಅವರು ಅಕಾಲದಲ್ಲಿ ಶಾಲೆಯನ್ನು ಬಿಡದಂತೆ ತನ್ನಿಂದಾದಷ್ಟು ಯತ್ನಿಸುವನು;ಮತ್ತು ಅನಿವಾರ್ಯವಾಗಿ ಅವರು ಶಾಲೆಯನ್ನು ಬಿಡಲೇಬೇಕಾಗಿ ಬಂದಿತೆಂಬದನ್ನು ಮನಗಾಣುವ ವರೆಗೂ ಅವರ ಪಾಲಕರ ಮನವೊಲಿಸಿ ತನ್ನ ಇತರ ಉಪಾಯಗಳನ್ನು ಪ್ರಯೋಗಿಸಿ ತನ್ನ ಪ್ರಯತ್ನವನ್ನು ಸಫಲಗೊಳಿಸಲು ಹಾತೊರೆಯುವನು. ಈ ಮಾರ್ಗದಲ್ಲಿರುವಾಗ ಅವನಿಗೆ ತನ್ನ ವಿದ್ಯಾರ್ಥಿಯು ಶಾಲೆಯನ್ನು ಯಾವಕಾರಣದಿಂದ ಬಿಡುವನೆಂಬುದರ ಅರಿವಾಗುವದಿಲ್ಲವೆಂದರೆ ಅರ್ಥವೇನು? ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವಂತೆಯೇ ಶಾಲೆಯಲ್ಲಿದ್ದ ವಿದ್ಯಾರ್ಥಿಗಳನ್ನು ಕೊನೆಯವರೆಗೆ ಕಾದುಕೊಳ್ಳುವದೂ ಶಿಕ್ಷಕರ ಕರ್ತವ್ಯವೇ ಅಲ್ಲವೇನು ?

ಶಾಲೆಯ ತಪಾಸಣೆಯ ಅಧಿಕಾರಿಗಳೂ ಈ ಮಾತನ್ನು ಮರೆಯಲಾಗದು. ಸದ್ಯಕ್ಕೆ ಪ್ರಚಾರದಲ್ಲಿರುವ ರೂಢಿಯಂತೆ ತಪಾಸಣೆಯ ಅಧಿಕಾರಿಗಳು ಜನರಲ್ ರಜಿಸ್ಟರನಲ್ಲಿ ನೋಡತಕ್ಕ ಮೊದಲನೆಯ ಮಾತೆಂದರೆ ವಿದ್ಯಾರ್ಥಿಗಳ "ಜನ್ಮ ತಾರೀಖು". ಅದು ಲಿ. ಸರ್ಟಿಫಿಕೇಟಿನಲ್ಲಿ ಅಥವಾ ಪಾಲಕರು ಕೊಟ್ಟ ವಯಸ್ಸಿನ

ದಾಖಲೆಯಲ್ಲಿ ಇರುವಂತೆಯೇ ಜನರಲ್ ರಜಿಸ್ಟರಿನಲ್ಲಿಯೂ ಇರುವದೊ ಇಲ್ಲವೋ ಎಂಬದನ್ನು ಮಾತ್ರ ಲಕ್ಷ್ಯಪೂರ್ವಕವಾಗಿ ನೋಡುವರಂತೆ. ಮಿಕ್ಕ ಕಲಮುಗಳೊಳಗಿನ ಬರೆಹಗಳನ್ನೆಲ್ಲ ಅಷ್ಟಷ್ಟೇ ನೋಡಿ ಮುಂದೆಸಾಗುವರಂತೆ. ಇನ್ನು ಮುಂದೆ ತಪಾಸಣೆಯ ಅಧಿಕಾರಿಗಳು ಜನರಲ್ ರಜಿಸ್ಟರಿನೊಳಗಿನ ಮಿಕ್ಕ ಕಲಮುಗಳ ಬರೆಹವನ್ನೂ ಲಕ್ಷಿಸಿ ನೋಡುವದಲ್ಲದೆ "ಶಾಲೆಯನ್ನು ಬಿಡುವ ಕಾರಣ" ಈ ಕಲಮಿನಲ್ಲಿ ಬರೆದಿಡುವ ಮಾಹಿತಿಯು ಕೂಡ ಸರಿಯಾಗಿರುವದೆಂಬದನ್ನೂ ಅದನ್ನು ತಕ್ಕ ಶಬ್ದಗಳಿಂದ ಬರೆದಿರುವರೆಂಬದನ್ನೂ ಮನಗಾಣಬೇಕೆಂದು ಸೂಚಿಸುವೆವು. ಜನಪ್ರಿಯನಾದ ಶಾಲಾ ತಪಾಸಣೆಯ ಅಧಿಕಾರಿಯು ಹಳ್ಳಿಗೆ ಬಂದನೆಂದರೆ ಊರ ಪ್ರಮುಖರು ಅವರ ಭೆಟ್ಟಿಗೆ ಬಂದೇ ಬರುವರು. ಮತ್ತು ಊರ ವಿದ್ಯಾರ್ಥಿಗಳ ಮತ್ತು ಪಾಲಕರ ಹಿತದ ದೃಷ್ಟಿಯಿಂದ ಮಾಡುವ ಕೆಲಸಕ್ಕೆ ಅವರು ಎಂದೂ ಉದಾಸೀನರಾಗಲಾರರು. ಅವರಿಂದ ಈ ಮಾಹಿತಿಯನ್ನು ದೊರಕಿಸಿಕೊಳ್ಳುವದು ತಪಾಸಣೆಯ ಅಧಿಕಾರಿಗಳಿಗೆ ಹೆಚ್ಚಿನದೊಂದು ಭಾರದ ಕೆಲಸವಾಗಬಹುದೆಂಬ ಅಂಜಿಕೆಯು ನಮಗಿಲ್ಲ. ಅವರಿಗೆ ಅಂಥ ಮನಸ್ಸು ಮಾತ್ರ ಬೇಕು.

ತ್ರಾವಣಕೋರದ ವಿದ್ಯಾಸುಧಾರಣೆಯ ಕಾರ್ಯಕ್ಕಾಗಿ ನಿಯುಮಿತವಾದ ಒಂದು ಸಮಿತಿಯವರು ತಮ್ಮ ವರದಿಯಲ್ಲಿ ಈ ವಿಷಯವಾಗಿ ಹೇಳಿರುವ ಮಹತ್ವದ ಕೆಲವು ಮಾತುಗಳನ್ನು ಇಲ್ಲಿ ಉಲ್ಲೇಖಿಸಿ ಈ ಲೇಖನವನ್ನು ಮುಗಿಸುವೆವು.

"ತನ್ನ ವರ್ಗದೊಳಗಿನ ವಿದ್ಯಾರ್ಥಿಗಳ ಹಿತದ ಕಡೆಗೆ ಶಿಕ್ಷಕನು ವೈಯಕ್ತಿಕವಾಗಿ ಲಕ್ಷ್ಯಪೂರೈಸುವದು ಅವನು ಮಾಡಬೇಕಾದ ಕರ್ತವ್ಯಗಳಲ್ಲಿಯೇ ಸೇರುವದೆಂದೂ ಮತ್ತು ತನ್ನ ವರ್ಗದೊಳಗಿನ ವಿದ್ಯಾರ್ಥಿಗಳು ಯಾವ ಕಾರಣದಿಂದ ಶಾಲೆಯನ್ನು ಬಿಟ್ಟು ಹೋಗುವರೆಂಬದನ್ನು ನೋಡಿ ತಿಳಿದುಕೊಳ್ಳುವದೂ ಕೂಡ ಆ ಕರ್ತವ್ಯಗಳಲ್ಲಿಯೇ ಸಮಾವೇಶವಾಗುವದೆಂದೂ ನಮ್ಮ ಅಭಿಪ್ರಾಯವಿದೆ. ನಾವು ಅನೇಕಾನೇಕ ಪ್ರಾಥಮಿಕ ಶಾಲೆಗಳ ಜನರಲ್ ರಜಿಸ್ಟರುಗಳನ್ನು ಪರೀಕ್ಷಿಸಿದ್ದೇವೆ. ಮತ್ತು ಅದರಿಂದ ವಿದ್ಯಾರ್ಥಿಗಳು ಹೆಚ್ಚು ದಿನಗಳವರೆಗೆ ಶಾಲೆಗೆ ಬರದೆ ಇದ್ದರೂ ಸುಮ್ಮನೆ ಇದ್ದು ಶಾಲೆಯ ಹಾಜರಿಯ ರಜಿಸ್ಟರಿನಲ್ಲಿ ಗೈರ ಹಾಜರಿಯನ್ನು ತುಂಬುತ್ತ ಬಂದು ಕೊನೆಗೊಂದು ದಿನ ಅವರು ಶಾಲೆಯನ್ನು ಪೂರಾ ಬಿಟ್ಟರೆಂಬದು ಗೊತ್ತಾದಬಳಿಕ ಜನರಲ್ ರಜಿಸ್ಟರಿನಲ್ಲಿ "ಹೋದನು" "ಶಾಲೆಯನ್ನು ಬಿಟ್ಟನು" ಎಂಬ ಒಂದೆರಡು ಶಬ್ದಗಳನ್ನು ಬರೆದು ಬಿಟ್ಟದ್ದು ಕಂಡು ಬಂದಿರುವದು. ವಿದ್ಯಾರ್ಥಿಗಳು ಶಾಲೆಯನ್ನು ತಪ್ಪಿಸಹತ್ತಿದ ಕೂಡಲೆ ಅವರು ಶಾಲೆಗೆ ಯಾಕೆ ಬರುವದಿಲ್ಲವೆಂಬದನ್ನಾಗಲಿ ಶಾಲೆಯನ್ನು ಯಾಕೆ ಬಿಡುವರೆಂಬದನ್ನಾಗಲಿ ಶಿಕ್ಷಕರು ಲಕ್ಷಿಸುವದೇ ಇಲ್ಲ. ಅವನು ಬೇರೆ ಶಾಲೆಗೆ

ಕಲಿಯುವದಕ್ಕೆ ಹೋಗುವನೋ ಇಲ್ಲವೋ ಎಂಬದನ್ನು ಕೂಡ ಶಿಕ್ಷಕನು ಲಕ್ಷಿಸುವದಿಲ್ಲ. ಪ್ರಾಥಮಿಕ ಶಾಲೆಗಳೊಳಗಿನ ವಿದ್ಯಾರ್ಥಿಗಳ ಶ್ರಮ, ಕಾಲ, ಸರಕಾರದ ಹಣ ಇವುಗಳ ಅಪವ್ಯಯಕ್ಕೆ ಶಿಕ್ಷಕರ ಈ ಬಗೆಯ ದುರ್ಲಕ್ಷ್ಯವೇ ಬಹು ಮಟ್ಟಿಗೆ ಕಾರಣನೆಂದು ನಮ್ಮ ಅಭಿಪ್ರಾಯವಿದೆ. ಹಳ್ಳಿಗಳಲ್ಲಿ ಶಾಲೆಗಳು ಊರ ವಸತಿಯ ನಡುವೆ ಇರುವದೇ ಹೆಚ್ಚು. ಆದ್ದರಿಂದ ವರ್ಗದ ಶಿಕ್ಷಕರಿಗೆ ತಮ್ಮ ವಿದ್ಯಾರ್ಥಿಗಳ ಪಾಲಕರಿಗೆ ಭೆಟ್ಟಿಯಾಗುವದಕ್ಕಾಗಿ ಅವರ ಮನೆಗೆ ಹೋಗುವ ದಕ್ಕೂ ಅವರು ಶಾಲೆಯನ್ನು ಬಿಡುವ ನಿಜವಾದ ಕಾರಣವನ್ನು ತಿಳಿದುಕೊಳ್ಳುವ ದಕ್ಕೂ ವಿದ್ಯಾರ್ಥಿಗಳು ಯೋಗ್ಯ ಕಾರಣವಿಲ್ಲದೆ ಪಾಲಕರ ಅನಾದರ ಮೊದಲಾದ ಅಯೋಗ್ಯವಾದ ಅಲ್ಪಕಾರಣಗಳಿಗಾಗಿ ಶಾಲೆಯನ್ನು ಬಿಡುತ್ತಿದ್ದರೆ ಅವರ ಮನವೊಲಿಸಿ ತಿರುಗಿ ಶಾಲೆಗೆ ಬರುವಂತೆ ಮಾಡುವದಕ್ಕೂ ಹೆಚ್ಚು ಶ್ರಮವಾಗದಿರುವ ಸಂದರ್ಭಗಳೇ ಹೆಚ್ಚು. ಹೀಗೆ ಶಿಕ್ಷಕರು ಮನಸ್ಸು ಹಾಕಿ ತಾವೇ ವಿಚಾರಣೆ ನಡೆಯಿಸಿ ಪ್ರಯತ್ನಮಾಡಹೋದರೆ ಶಾಲೆಯ ವೇಳೆಯು ಅಥವಾ ಶಾಲೆ ನಡೆಯುವ ದಿನಗಳು ಅವರ ಪ್ರಪಂಚದ ಕೆಲಸಕ್ಕೆ ಪ್ರತಿಕೂಲವಾಗಿರುವದು ಮೊದಲಾದ ಸಾಮಾನ್ಯ ಕಾರಣಗಳಿಗಾಗಿ ಶಾಲೆಯನ್ನು ಬಿಟ್ಟುಹೋಗುವ ವಿದ್ಯಾರ್ಥಿಗಳಿಗೆ ತಕ್ಕ ಅನುಕೂಲತೆ ಮಾಡಿಕೊಟ್ಟ ಅವರು ತಿರುಗಿ ಶಾಲೆಗೆ ಬರುವಂತೆ ಮಾಡುವದಕ್ಕೆ ಸಾಧ್ಯವಾಗುವದು. ಮತ್ತು ಈ ಸಂದರ್ಭಗಳಲ್ಲಿ ಪಾಲಕರ ಇತರ ಅಡಚಣೆಗಳನ್ನು ಸಹ ತಿಳಿದುಕೊಂಡು ತಕ್ಕ ನೆರವು ಕೊಡುವದಕ್ಕೂ ಸಾಧ್ಯವಾಗಬಹುದಾದ್ದರಿಂದ, ವಿದ್ಯಾರ್ಥಿಗಳು ಶಾಲೆಯನ್ನು ಬಿಡುವದನ್ನು ತಪ್ಪಿಸಬಹುದು.

ಈ ವಿಷಯದಲ್ಲಿ ನಾವು ಮಾಡುವ ಸೂಚನೆ ಯೆಂದರೆ:— ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ತಂದೆ-ತಾಯಿಗಳ ಅಥವಾ ಪಾಲಕರ ಪತ್ತೆಯನ್ನು ಬರೆದಿಟ್ಟು ಒಂದು ರಜಿಷ್ಟರವಿರಬೇಕು. ಮತ್ತು ಪ್ರತಿಶಿಕ್ಷಕನಿಗೆ ಒಂದು ಓಣಿಯೊಳಗಿನ ಅಥವಾ ಹಳ್ಳಿಯ ಒಂದು ವಿಭಾಗದೊಳಗಿನ ಪಾಲಕರ ಗುಂಪನ್ನು ಒಪ್ಪಿಸಬೇಕು. ವಿದ್ಯಾರ್ಥಿಗಳ ಪಾಲಕರ ಆಯಾ ಗುಂಪಿಗೆ ಸೇರಿದ ಶಿಕ್ಷಕರು ಅವಶ್ಯಕವೆನಿಸಿದಾಗ ಬಾಲಕರ ತಾಯಿ ತಂದೆಗಳ ಅಥವಾ ಪಾಲಕರ ವಸತಿಗಳಿಗೆ ಹೋಗಿ ಅವರನ್ನು ಕಾಣಬೇಕು. ಹೀಗೆ ಮಾಡುವದರಿಂದ ಮೊದಲೇ ಹೆಚ್ಚು ವಿಸ್ತಾರವಲ್ಲದಿರುವ ಪ್ರದೇಶದಲ್ಲಿರುವ ಹಳ್ಳಿಯ ಶಾಲೆಗಳ ಶಿಕ್ಷಕರಿಗೆ ಈ ಸಂಬಂಧದ ಕೆಲಸವು ದೊಡ್ಡ ಭಾರವೆನಿಸಿ ಆ ಕೆಲಸವನ್ನು ಕೈಕೊಳ್ಳುವದು ಅಶಕ್ಯವೆನಿಸುವ ಸಂಭವವುಳಿಯದು.

(ವರದಿಯ ೧೪೧ನೆಯ ಪುಟದಲ್ಲಿ ಈ ವಿವರಗಳಿವೆ.)

ಮೇಲಿನ ವರದಿಯೊಳಗಿನ ಎಲ್ಲ ಮಾತುಗಳು ಬಹುಶಃ ನಮ್ಮ ಭಾಗದೊಳಗಿನ ಶಾಲೆಗಳಿಗೂ ಶಿಕ್ಷಕರಿಗೂ ಅನ್ವಯಿಸಬಹುದೆಂಬದನ್ನು ವಾಚಕರು ಈಗಾಗಲೆ ಕಂಡುಹಿಡಿದಿರಬಹುದು. ದೊಡ್ಡ ದೊಡ್ಡ ನಗರಗಳಲ್ಲಿ ಸುಶಿಕ್ಷಿತರಾದ ತಾಯ್ತಂದೆಗಳ ಅಥವಾ ಪಾಲಕರ ವಸತಿಯಲ್ಲಿರುವ ಶಾಲೆಗಳ ಶಿಕ್ಷಕರಿಗೆ ಈ ಬಗೆಯ ತೊಂದರೆಗಳು ಒದಗಲಾರವು. ಆದರೂ ಅಶಿಕ್ಷಿತರಾದ ಬಡಜನರ ಮಕ್ಕಳ ವಿಷಯದಲ್ಲಿ ದೊಡ್ಡ ಶಹರಗಳ ಶಾಲೆಗಳ ಶಿಕ್ಷಕರೂ ಸಹ ಈ ವಿಚಾರಗಳನ್ನು ಲಕ್ಷ್ಯದಲ್ಲಿಟ್ಟು ನಡೆದು ಜನರಲ್ ರಜಿಸ್ಟರಿನಲ್ಲಿ ಮಾಹಿತಿಯನ್ನು ತುಂಬುವಾಗ ದುರ್ಲಕ್ಷ ಮಾಡದೆ ಬಾಲಕರು ಶಾಲೆಯನ್ನು ಬಿಡುವ ಕಾರಣವನ್ನು ಸಾಧ್ಯವಾದಷ್ಟೂ ನಿಜವಾದ ಮತ್ತು ನಿಶ್ಚಿತವಾದ ರೀತಿಯಲ್ಲಿಯೂ ಯೋಗ್ಯ ಶಬ್ದಗಳಿಂದಲೂ ತುಂಬಬೇಕು.

ಮುಖ್ಯ ಮಂತ್ರಿಗಳಾದ ಚರ್ಚಿಲ್ ಸಾಹೇಬರ ಭಾಷಣದ ಮುಖ್ಯಾಂಶಗಳು.

(೧೪-೫-೧೯೪೦ ರಿಂದ ೧೪-೭-೧೯೪೦ ರ ವರೆಗೆ

ಪ್ರಕೃತದ ಮಹಾಯುದ್ಧದ ವಿಷಯದಲ್ಲಿ ವರ್ತಮಾನಪತ್ರಗಳಲ್ಲಿ ಆಗಾಗ ಪ್ರಕಟವಾಗುತ್ತಿರುವ ಸಂಗತಿಗಳಿಂದ ಸಾಮಾನ್ಯರು ಈ ಮಹಾಯುದ್ಧದ ಧೋರಣೆ, ಅದರ ಪ್ರಕೃತಸ್ಥಿತಿ ಮುಂತಾದ ಮಹತ್ವದ ಮುದ್ದೆಯ ಮಾತುಗಳನ್ನು ನಿರ್ದೇಶಪಡಿಸಿಕೊಳ್ಳುವದು ಸುಲಭವಲ್ಲ. ಗ್ರೇಟಬ್ರಿಟನ್ನಿನ ಮುಖ್ಯಮಂತ್ರಿಗಳಾದ ರಾಯಿಟ್ ಆನರೇಬಲ್ ವಿನ್‌ಸ್ಟನ್ ಚರ್ಚಿಲ್‌ರವರು ೧೪-೫-೧೯೪೦ ರಿಂದ ೧೪-೭-೧೯೪೦ ನೆಯ ವರೆಗಿನ ಎರಡು ತಿಂಗಳದ ಅವಧಿಯಲ್ಲಿ ಆಗಾಗ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಮಾಡಿದ ಭಾಷಣಗಳನ್ನೆಲ್ಲ ಸಂಗ್ರಹಿಸಿ "The War Speeches" ಎಂಬದೊಂದು ಚಿಕ್ಕ ಗ್ರಂಥವನ್ನು ಮುಂಬಯಿಯ ಟಾಯಿಮ್ಸ್ ಆಫ್ ಇಂಡಿಯಾ ಪ್ರೆಸ್ಸಿನವರು ಪ್ರಕಟಿಸಿದುವರು. ಅದರೊಳಗಿನ ಮುಖ್ಯಾಂಶಗಳನ್ನು ನಮ್ಮ ವಾಚಕರ ತಿಳಿವಳಿಕೆಗಾಗಿ ಇಲ್ಲಿ ಕೊಡುವೆವು.

೧. **ಬಲಾತ್ಕಾರದ ವಿರುದ್ಧ ನಡೆದ ಯುದ್ಧ** (೧೪-೫-೧೯೪೦):— ನಮ್ಮ ಯುದ್ಧದ ಮುಖ್ಯಧೋರಣೆಯು ಯಾವುದು ಎಂಬ ಪ್ರಶ್ನೆಗೆ ನಾನು ಈ ರೀತಿ ಉತ್ತರ ಕೊಡಬಹುದು: ಪ್ರಪಂಚದಲ್ಲಿ ಮನುಷ್ಯರು ಮಾಡುತ್ತಿರುವ ಅನ್ಯಾಯ

ಅತ್ಯಾಚಾರಗಳನ್ನೆಲ್ಲ ಸಂಗ್ರಹಿಸಿ ಒಂದು ಯಾದಿಯನ್ನೇ ತಯಾರಿಸಿದರೆ ಅವೆಲ್ಲ ವನ್ನೂ ಮೀರುವಂಥ ರಾಕ್ಷಸೀಯ ಬಲಾತ್ಕಾರವೆನಿಸುವ ಜರ್ಮನಿಯ ಕ್ರೂರ ದಬ್ಬಾಳಿಕೆಯ ವಿರುದ್ಧವಾಗಿ ನಾವು ಅಪರಿಹಾರ್ಯವಾಗಿ ಶಸ್ತ್ರವೆತ್ತಬೇಕಾಯಿತು. ಪರಮೇಶ್ವರನು ನಮಗೆ ಕೊಟ್ಟಿರುವ ಶಕ್ತಿ-ಸಾಮರ್ಥ್ಯಗಳನ್ನೆಲ್ಲ ಸಮುಚ್ಚಯ ಗೊಳಿಸಿ ನೆಚ್ಚಮಾಡಿ ಭೂಯುದ್ಧ, ಜಲಯುದ್ಧ, ಆಕಾಶಯುದ್ಧಗಳಲ್ಲಿ ಜರ್ಮನಿ ಯನ್ನು ಎದುರಿಸಿ ಸೋಲಿಸುವದೇ ನಮ್ಮ ಈಗಿನ ಮುಖ್ಯ ಧೋರಣೆಯು.

ಯಶಸ್ಸಂಪಾದನೆಯೇ ನಮ್ಮ ಧ್ಯೇಯ:— ಎಷ್ಟು ಕಷ್ಟಪರಂಪರೆಗಳೊ ದಗಿದರೂ, ಎಷ್ಟೊಂದು ದೀರ್ಘ ಕಾಲದಪರೆಗೆ ನಾವು ತೊಳಲಾಡಬೇಕಾದರೂ ಅವನ್ನೆಲ್ಲ ಲಕ್ಷಿಸದೆ ಯಶಸ್ಸಂಪಾದನೆಯೊಂದನ್ನೇ ಗುರಿಯಾಗಿಟ್ಟುಕೊಂಡು ನಾವು ಹೊರಟಿರುವೆನು. ವಿಪತ್ಪರಂಪರೆಗಳನ್ನೆಲ್ಲ ದಾಟಿ ಕೊನೆಗೆ ಯಶಸ್ಸು ದೊರೆಯಲೇ ಬೇಕೆಂಬ ಭರವಸೆಯಿಂದ ನಾನು ಈ ಕಾರ್ಯವನ್ನು ಕೈಕೊಂಡಿರುವೆನು. ಈ ನನ್ನ ಮಹತ್ವದ ಕಾರ್ಯಕ್ಕೆ ನಿಮ್ಮೆಲ್ಲರ ಅಂತಃಕರಣಪೂರ್ವಕವಾದ ನೆರವು ಅತ್ಯಾವಶ್ಯಕವಾಗಿದೆ. " ನಾವೆಲ್ಲರೂ ಒಂದಾಗೋಣ, ನಮ್ಮೆಲ್ಲರ ಶಕ್ತಿಯನ್ನು ಒಂದುಗೂಡಿಸೋಣ, ಹಗೆಗಳನ್ನು ಎದುರಿಸಿ ಮುಂದೆ ಸಾಗೋಣ ".

೨. **ಇಂದಿನ ಈ ಸಂಧಿಕಾಲವು ಬ್ರಿಟನ್ನಿನ ಇತಿಹಾಸದಲ್ಲಿ ಅಪೂರ್ವವಾದದ್ದು; ಉಜ್ಜೃಂಭಿತಿಯುದು:—** ಫ್ರಾನ್ಸಿನಲ್ಲಿ ಅತಿ ನಿಕರದ ಕಾಳಗವು ನಡೆದಿರುವಾಗ ತಾ. ೧೯-೫-೧೯೪೦ನೆಯ ದಿನ ಆಕಾಶವಾಣಿಯಲ್ಲಿ ಚರ್ಚಿಲ್ ಸಾಹೇಬರು ಮಾಡಿದ ಭಾಷಣದಲ್ಲಿ ಹೀಗೆ ಹೇಳಿದರು :—

" ಇಂದು ಫ್ರಾನ್ಸ್ ಮತ್ತು ಫ್ಲಾಂಡರ್ಸಗಳಲ್ಲಿ ಅತಿ ನಿಕರದ ಕಾಳಗವು ಸಾಗಿದೆ. ಜರ್ಮನ್ ಸೈನಿಕರು ಆಕಾಶಮಾರ್ಗದಲ್ಲಿ ಸಾಗಿಬಂದು ಬಾಂಬುಗಳ ಮಳೆಗರೆಯುತ್ತ ತಮ್ಮ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಟ್ಯಾಂಕುಗಳನ್ನು ಮುಂದೆ ಸರಿಸುತ್ತ ನ್ಯೂಗಿನೋ ವ್ಯೂಹವನ್ನು ಉತ್ತರದ ಕಡೆಯಿಂದ ದಾಟಿ ಫ್ರಾನ್ಸ್ ಸೊಳಗೆ ನುಗ್ಗುತ್ತಲಿದ್ದಾರೆ.

ಯಾವದೊಂದು ಕಾಳಗವನ್ನು ಗೆಲ್ಲುವದು ನಮ್ಮ ಧ್ಯೇಯವಲ್ಲ. ಈ ಯುದ್ಧದ ಪರಿಣಾಮವನ್ನು ನಮಗೆ ಅನುಕೂಲವಾದ ರೀತಿಯಲ್ಲಿ ಪೂರ್ಪಡಿಸಿ ಕೊಳ್ಳುವದೇ ನಮ್ಮ ಗುರಿ. ಈಗ ಫ್ರಾನ್ಸಿನಲ್ಲಿ ನಡೆದಿರುವ ಯುದ್ಧದ ಉಗ್ರತೆಯು ಕಡಿಮೆಯಾದೊಡನೆ ಬ್ರಿಟನ್ನಿನಲ್ಲಿಯೂ ಪ್ರಾರಂಭವಾಗುವದು. ಈ ಆಪತ್ತಿನ ಸಂದರ್ಭದಲ್ಲಿ ನಾವು ಎಂದೂ ಹಿಂದೆಗೆಯದೆ ಮುಂದಡಿಯಿಡುತ್ತ ಸಾಗುವೆವೆಂಬುದು ಅತಿ ನಿಧಾರದವಾತು. ಈ ಸಂಕಟವನ್ನು ನೀಗುವದಕ್ಕೆ ನಮ್ಮಿಂದಾಗ ಬಹುದಾದ ಪ್ರಯತ್ನವನ್ನೆಲ್ಲ ನಾವು ಮಾಡೇತೀರಬೇಕು.

ಇಂದು ಪವಿತ್ರವಾದ ರವಿವಾರ (Trinity Sunday). ಸತ್ಯ ಸುಮ್ಮಾನ ಗಳನ್ನು ಮನ್ನಿಸುವ ಜನರನ್ನೆಲ್ಲ ಒಂದುಗೂಡಿಸಿ ಜಾಗ್ರತಗೊಳಿಸುವದಕ್ಕಾಗಿ ಎಷ್ಟೋ ಶತಮಾನಗಳ ಹಿಂದೆಯೇ ಹೀಗೆ ಉದ್ಘೋಷಿಸಲಾಗಿದೆ. " ಶಸ್ತ್ರಗಳನ್ನು ಧರಿಸಿರಿ. ಶೂರ ಪುರುಷರೆನ್ನಿಸಿಕೊಳ್ಳಿರಿ. ಯುದ್ಧಕ್ಕೆ ಸನ್ನದ್ಧರಾಗಿರಿ. ಏಕೆಂದರೆ ನಮ್ಮ ದೇಶದಮೇಲೆ ನಡೆಯುವ ಅತ್ಯಾಚಾರಗಳನ್ನು ನೋಡುತ್ತ ನಾವು ಜೀವಿ ಸಿರುವದಕ್ಕಿಂತ ರಣಭೂಮಿಯಲ್ಲಿ ಮರಣ ಹೊಂದುವದೇ ಒಳ್ಳೆಯದು. "

೩. **ಬೆಲ್ಜಿಯಮ್‌ವು ಜರ್ಮನಿಯ ವಶವಾದರೂ ಬ್ರಿಟಿಶರ ಪಕ್ಷಕ್ಕೆ ಸೇರಿದ ಜನರ ನಿರ್ಧಾರವು ಇನ್ನೂ ಬದಲಾಗಿಲ್ಲ:—** ೨೮-೫-೧೯೪೦ ನೆಯ ದಿನ ಬೆಲ್ಜಿಯಮ್ಮದ ಸೈನ್ಯವು ವೈರಿಗಳಿಗೆ ಶರಣು ಹೋದ ಬಳಿಕ ಚರ್ಚಿಲ್ ಸಾಹೇಬರು ಹೌಸ ಆಫ ಕಾಮನ್ಸ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಈ ಮಾತುಗಳಿವೆ:—

" ನಿನ್ನೆ ಬೆಲ್ಜಿಯಮ್ಮದ ಅರಸನು ಜರ್ಮನ್ ಸೇನಾನಾಯಕನ ಬಳಿಗೆ ದೂತನನ್ನು ಕಳುಹಿಸಿ ಇನ್ನು ಮೇಲೆ ತಮ್ಮ ಸೈನ್ಯದಮೇಲೆ ಏರಿ ಬರಬಾರದೆಂದು ಬೇಡಿಕೊಂಡನು. ಆಗ ಬ್ರಿಟಿಷ ಹಾಗು ಫ್ರೆಂಚ ಸೇನಾನಾಯಕರು ತಮ್ಮ ಸೈನಿಕರು ಬೆಲ್ಜಿಯಮ್ಮದ ಅರಸನ ಈ ಒಪ್ಪಂದದ ವಿಚಾರಗಳನ್ನು ಲಕ್ಷಿಸದೆ ತಾವು ನಡೆಯಿಸಿರುವ ಯುದ್ಧವನ್ನು ಮೊದಲಿನಂತೆಯೇ ಮುಂದೆ ಸಾಗಿಸಬೇಕೆಂದು ಅಪ್ಪಣೆ ಕೊಟ್ಟಿರುವರು.

ಜರ್ಮನ್ ಸೇನಾಧಿಕಾರಿಯು ಬೆಲ್ಜಿಯಮ್ಮದ ಅರಸನ ಪ್ರಾರ್ಥನೆಯನ್ನು ಒಪ್ಪಿಕೊಂಡನು. ಮತ್ತು ಬೆಲ್ಜಿಯನ್ ಸೈನಿಕರು ಈ ಹೊತ್ತು ಪ್ರಾತಃಕಾಲ ೪ ಗಂಟೆಯಿಂದ ಯುದ್ಧವನ್ನು ನಿಲ್ಲಿಸಿಬಿಟ್ಟರು.

ಈಗ ಬ್ರಿಟಿಶ ಮತ್ತು ಫ್ರೆಂಚ ಸೈನಿಕರು ಅತಿಶಯ ಇರುಕಿನಲ್ಲಿ ಸಿಕ್ಕಿಕೊಂಡಿರುವರು. ಭೂಮಿಯ ಮೇಲೆ ಮೂರು ದಿಕ್ಕುಗಳಲ್ಲಿಯೂ ಆಕಾಶದಲ್ಲಿಯೂ ಶತ್ರು ಸೈನ್ಯವು ಅವರನ್ನು ಮುತ್ತಿರುವದು. ಬೆಲ್ಜಿಯನ್ ಸೈನಿಕರು ಅಕಸ್ಮಾತ ಯುದ್ಧವನ್ನು ನಿಲ್ಲಿಸಿ ಶತ್ರುಗಳಿಗೆ ಶರಣು ಹೋದುದರಿಂದ ಈ ಪರಿಸ್ಥಿತಿಯು ಇನ್ನಷ್ಟು ಬಿಕ್ಕಟ್ಟಿನದಾಯಿತು. ಆದರೂ ನಮ್ಮ ಮಿತ್ರ ಬಲದಲ್ಲಿ ಶಿಸ್ತಿನ ಭಂಗ ವಾಗಿಲ್ಲ. ಯಾರೂ ಕಂಗೆಟ್ಟಿಲ್ಲ. ಮುಂದಿಟ್ಟ ಅಡಿಯನ್ನು ಹಿಂದಿಡದೆ ಕಡುಗಲಿತನ ದಿಂದ ಕಾದುತ್ತಲಿದ್ದಾರೆ. ಈ ಸಭಿಕರು ಇನ್ನೂ ಉಗ್ರವಾದ ಭೀಕರವಾದ ಯುದ್ಧವಾರ್ತೆಯನ್ನು ಕೇಳಲು ಸಿದ್ಧರಾಗಿರಬೇಕು.

ಇಂದಿನ ಈ ಕಾಳಗದ ಪರಿಣಾಮವು ಎಂತೇ ಆದರೂ ಲೋಕ ಕಲ್ಯಾಣಕ್ಕಾಗಿ ಕೈಕೊಂಡಿರುವ ಈ ಘನವಾದ ಕಾರ್ಯದಿಂದ ನಾವು ಪರಾಙ್ಮುಖರಾಗುವದು

ಎಂದೂ ಶಕ್ಯವಿಲ್ಲ. ನಾವು ಹಿಂದೆ ಇಂಥ ಅನೇಕ ಕಠಿಣ ಸಂದರ್ಭಗಳಿಂದ ಸುರಕ್ಷಿತವಾಗಿ ಪಾರಾಗಿ ಸುದಿನವನ್ನು ಕಂಡಿರುವದನ್ನು ನೀವುನಮ್ಮ ಇತಿಹಾಸದಲ್ಲಿ ಓದಿರುವಿರಿ. ಅದೇ ರೀತಿಯಾಗಿ ಇಂದಿನ ಈ ಕಠಿಣ ಪರಿಸ್ಥಿತಿಯಿಂದಲೂ ನಾವು ಸುರಕ್ಷಿತವಾಗಿ ಪಾರಾಗಿ ಬರುವೆವೆಂದು ನಾನುಹೇಳಬಯಸುವೆನು. ಇದೇ ರೀತಿಯಾಗಿ ನಾವು ಈ ಮಹಾಯುದ್ಧದಲ್ಲಿ ಸಂಪೂರ್ಣ ಯಶಸ್ಸನ್ನು ಹೊಂದುವೆವೆಂದು ಸಹ ದೃಢವಾದ ಭರವಸೆಯುಳ್ಳವರಾಗಿದ್ದೇವೆ.

೪ ಫ್ಲಾಂಡರ್ಸವನ್ನು ಬಿಟ್ಟು ಪಾರಾಗಿ ಬಂದ ಚಮತ್ಕಾರ:— ಫ್ಲಾಂಡರ್ಸದಿಂದ ಬ್ರಿಟಿಶ ಸೈನ್ಯವು ತಿರುಗಿ ಬಂದಬಳಿಕ ತಾ॥ ೪–೬–೧೯೪೦ನೆಯ ದಿನ ಕಾಮನ್ಸ್ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಚರ್ಚಿಲ್ ಸಾಹೇಬರು ಹೇಳಿರುವದೇನಂದರೆ:—

" ಬೆಲ್ಜಿಯಮ್ಮಿನ ಲಿಓಪೋಲ್ಡರಾಜನು ಹಿಂದು ಮುಂದಿನ ವಿಚಾರವಿಲ್ಲದೆ, ನಮಗೆ ಎಳ್ಳಷ್ಟಾದರೂ ಪೂರ್ವ ಸೂಚನೆಕೊಡದೆ, ಕೇವಲ ತನ್ನ ಇಚ್ಛಾನುಸಾರವಾಗಿ ತನ್ನ ಯಾವತ್ತು ಸೈನ್ಯವನ್ನು ಜರ್ಮನ್ ಸೇನಾಧಿಕಾರಿಗಳ ವಶಪಡಿಸಿದ್ದರಿಂದ ನಮ್ಮ ಸೈನ್ಯವು ಸುತ್ತಲೂ ವೈರಿಗಳ ಆಕ್ರಮಣಕ್ಕೆ ತುತ್ತಾಗಿ ನಿಂತಿತು. ಸಮುದ್ರದಲ್ಲಿಯೂ ಕೂಡ ಸುರಂಗಗಳ ಜಾಲವು ಪಸರಿಸಿರುವದರಿಂದ ಹಡಗುಗಳ ಪ್ರಯಾಣವು ಸಹ ಸುಕರವಾಗಿರಲಿಲ್ಲ. ಇಂಥ ಕಠಿಣ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಸೈನಿಕರು ಹಗಲಿರುಳೆನ್ನದೆ ಅನ್ನ ನೀರುಗಳ ಪರಿವೆಯಿಲ್ಲದೆ ಯುದ್ಧವನ್ನು ಸಾಗಿಸಿದರು. ನಮ್ಮ ಹಡಗುಗಳು ಒಂದರಹಿಂದೆ ಒಂದರಂತೆ ಹಲವು ಸಾರಿಗೆಗಳನ್ನು ಮಾಡಿ ಉಳಿದಿದ್ದ ಎಲ್ಲ ಸೈನ್ಯವನ್ನೂ ಜನರನ್ನೂ ಸುರಕ್ಷಿತವಾಗಿ ನಮ್ಮ ದೇಶದ ದಂಡೆಗೆ ತಂದು ಮುಟ್ಟಿಸಿದ್ದು ಸಾಮಾನ್ಯ ಸಾಹಸದ ಕಾರ್ಯವಲ್ಲ. ಇದು ನಮ್ಮವರ ಏಕನಿಷ್ಠೆಯ ಸಾಹಸದ ಮತ್ತು ಧೈರ್ಯದ ದ್ಯೋತಕವಲ್ಲದೆ ಮತ್ತೇನು ? ಈಗ ರಣಭೂಮಿಯ ದೃಶ್ಯವು ಒಮ್ಮೆಲೆ ಬದಲಾಗಿದೆ. ತೋಪುಗಳ ಗರ್ಜನೆಯು ಕ್ಷಣ ಕಾಲ ಶಾಂತವಾಗಿದೆ. ದೃಢನಿಶ್ಚಯ, ಸುವ್ಯವಸ್ಥೆ, ಧೈರ್ಯ, ಸಾಹಸ, ಯುಕ್ತಿ, ಚಾತುರ್ಯ ಮತ್ತು ಅಜೇಯವಾದ ವಿಶ್ವಾಸ ಇವುಗಳ ಬಲದಿಂದಲೇ ಈ ಕಾರ್ಯವು ನೆರವೇರಿರುವದೆಂಬದು ನಮ್ಮೆಲ್ಲರಿಗೂ ಸುಸ್ಪಷ್ಟವಾಗಿ ಕಂಡುಬರುವ ಮಾತು.

ಹಿಂದೆ ಬರುತ್ತಿದ್ದ ಬ್ರಿಟಿಶ ಮತ್ತು ಫ್ರೆಂಚ ಸೈನ್ಯಗಳು ಹಗೆಗಳನ್ನು ಹಿಂದಕ್ಕಟ್ಟಿದ್ದವು. ಇಂಗ್ಲಂಡಕ್ಕೆ ತಿರುಗಿ ಹೋಗುತ್ತಿದ್ದ ಸೈನಿಕರ ಮೇಲೆ ಹಗೆಗಳು ಏರಿಹೋಗಬಾರದೆಂದು ಹಿಂದುಳಿದ ಸೈನ್ಯದವರು ಹಗೆಗಳನ್ನು ಹೀಗೆ ಹೀಗೆ ಸರಿಸಿ ಅಡ್ಡಗಟ್ಟಿ ನಿಂತಿದ್ದರು.

ಈ ರೀತಿಯಾಗಿ ನಮ್ಮ ಸೈನ್ಯವು ಸುರಕ್ಷಿತವಾಗಿ ನಮ್ಮ ದೇಶಕ್ಕೆ ತಿರುಗಿ ಬಂದರೂ ಅದು ನಮ್ಮ ಸಂಪೂರ್ಣ ವಿಜಯದ ದ್ಯೋತಕವಲ್ಲವೆಂಬದನ್ನು ನಾವು ತಿಳಿದಿರಬೇಕು. ಆದರೂ ಹಗೆಗಳ ಇರುಕಿನಲ್ಲಿ ಸಿಕ್ಕಿಬಿದ್ದಿದ್ದ ಸೈನ್ಯವನ್ನು ಸುರಕ್ಷಿತವಾಗಿ ಬಿಡಿಸಿಕೊಳ್ಳುವದೂ ಒಂದು ಬಗೆಯ ವಿಜಯವೇ ಸರಿ ಎಂದು ಹೇಳಿದರೆ ತಪ್ಪೇನು? ಮತ್ತು ಈ ವಿಜಯವನ್ನು ನಮ್ಮ ವೈಮಾನಿಕದಳದವರೇ ದೊರಕಿಸಿರುವರು. ಈ ವೈಮಾನಿಕಯುದ್ಧದಲ್ಲಿ ಜರ್ಮನ್ ಮತ್ತು ಬ್ರಿಟಿಶ್ ವೈಮಾನಿಕದಳಗಳ ನಡುವೆ ನಿಕರದ ಕಾಳಗವಾಗಿ ಇದರಲ್ಲಿ ಈ ಎರಡೂ ದಳದವರ ಶಕ್ತಿ ಸಾಹಸಗಳ ಒರೆಹತ್ತಿತೆಂದರೂ ಅಡ್ಡಿಯಿಲ್ಲ.

ನಮ್ಮ ಸೈನ್ಯದ ಮೇಲೆ ಏರಿಬರುವದಕ್ಕೆ ಜರ್ಮನ್ನರು ವಿಶ್ವಪ್ರಯತ್ನ ಮಾಡಿದರು. ಆದರೆ ನಮ್ಮ ಸೈನಿಕರ ಸಾಹಸದ ಮುಂದೆ ಅವರ ಆಟಸಾಗಲಿಲ್ಲ. ಅವರು ನಮಗೆ ಅಲ್ಪ ಸ್ವಲ್ಪ ಹಾನಿಮಾಡಿದರೂ ಅದರ ನಾಲ್ಮುಪಟ್ಟು ಅವರು ನಮ್ಮಿಂದ ಹಾನಿಗೊಳಗಾದರು. ಜರ್ಮನ್ನರು ಈ ಹೋರಾಟದಲ್ಲಿ ಸೋತರು. ನಾವು ವಿಜಯಿಗಳಾಗಿ ನಮ್ಮ ಸೈನ್ಯವನ್ನು ಪರದೇಶದಿಂದ ಸುರಕ್ಷಿತವಾಗಿ ನಮ್ಮ ದೇಶಕ್ಕೆ ಸಾಗಿಸಿಕೊಂಡು ಬಂದೆವು.

ನಾವು ಫ್ರಾನ್ಸ್‌ದಲ್ಲಿ ಹೋರಾಡೋಣ. ಸಾಗರ ಮಹಾಸಾಗರಗಳಲ್ಲಿ ಕಾದಾಡೋಣ. ಹೆಚ್ಚು ವಿಶ್ವಾಸದಿಂದಲೂ ಸಾಮರ್ಥ್ಯದಿಂದಲೂ ವಾಯು ಮಾರ್ಗದಲ್ಲಿ ಹಗೆಗಳನ್ನು ಹೊಡೆದೋಡಿಸೋಣ. ನಮಗೆ ಖರ್ಚಿನ ಬಗ್ಗೆ ಯೋಚನೆ ಬೇಡ. ನಮ್ಮ ಬ್ರಿಟಿಶ್ ದ್ವೀಪವನ್ನು ಕಾಪಾಡಿಕೊಳ್ಳೋಣ. ನಮ್ಮ ದೇಶದ ದಂಡೆಯನ್ನು ಭದ್ರಪಡಿಸಿಕೊಂಡು ಅಲ್ಲಿ ಯುದ್ಧವಾಡೋಣ. ನಮ್ಮ ದೇಶದ ಬಂದರಗಳು, ಹೊಲ, ನೆಲ, ದಾರಿ, ದರಿ, ಕಂದರಗಳಲ್ಲಿ ಕಾದಾಡಿ ಹಗೆಗಳ ರಕ್ತದ ಕಾವಲಿಗಳನ್ನು ಹರಿಸೋಣ. ನಾವೆಂದಿಗೂ ಬೆಲ್ಜಿಯಮ್ ರಾಜನಂತೆ ವೈರಿಗೆ ಶರಣಾಗತರಾಗಲಾರೆವು.''

೫. **ಫ್ರಾನ್ಸ್ ದೇಶವನ್ನು ಹೇಗೆ ದಾಸ್ಯಕೂಪದಲ್ಲಿ ನೂಕಿದರು:—** ಫ್ರಾನ್ಸ್ ಸರಕಾರವು ಹಗೆಗಳಿಗೆ ಶರಣುಹೋದಬಳಿಕ ಜೂನ್ ೫ನೆಯ ತಾರೀಖಿನ ದಿನ ಕಾಮನ್ಸ್ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಚರ್ಚಿಲ್ ಸಾಹೇಬರು ಹೇಳಿದ್ದೇನೆಂದರೆ:—

"ಪ್ರಬಲವಾದ ಫ್ರೆಂಚ ರಾಷ್ಟ್ರದೊಡನೆ ನಾವು ಇಂದಿನ ವರೆಗೂ ಯುದ್ಧ ಕಾಲದಲ್ಲಿಯೂ ಶಾಂತತೆಯ ದಿನಗಳಲ್ಲಿಯೂ ಒಂದೇರೀತಿಯಾದ ಸ್ನೇಹಭಾವ ದಿಂದ ನಡೆದುಕೊಂಡೆವು. ಫ್ರಾನ್ಸ್ ದೇಶವು ಕೂಡ ಸುಶಿಕ್ಷಿತವೂ ಉದಾರವೂ ಆದ ಧೋರಣೆಯಿಂದ ಯುರೋಪದ ಪ್ರಗತಿಯ ವಿಷಯದಲ್ಲಿ ನಮ್ಮೊಡನೆ

ಮಸಬಿಚ್ಚಿ ಮಾತಾಡಿ ಸಹಕರಿಸುತ್ತ ಬಂದಿತ್ತು. ಫ್ರಾನ್ಸ್‌ವೂ ಬ್ರಿಟನ್ನವೂ ಇಂದಿನವರೆಗೆ ಪರಸ್ಪರ ಪ್ರೀತಿವಿಶ್ವಾಸಗಳಿಂದ ನಡೆದುಕೊಂಡವು. ಆದರೆ ಇಂದಿನ ಅದರ ಸ್ಥಿತಿಯನ್ನು ನೋಡಿ ನಮಗೆ ಅತಿಶಯ ದುಃಖವಾಗುವದು. ಪ್ರಬಲ ನಾಪ ವೈರಿಯು ಹಿಡಿತದಲ್ಲಿ ಸಿಕ್ಕಿದ್ದರಿಂದಲೂ ಇನ್ನನೇಕ ಕಾರಣಗಳಿಂದಲೂ ಇಂದು ಫ್ರಾನ್ಸ್ ದೇಶವು ದಾಸ್ಯತ್ವದ ಕೂಪದಲ್ಲಿ ದೂಡಲ್ಪಟ್ಟಿರುವದು. ಅದನ್ನು ಉದ್ಧರಿಸುವದಕ್ಕೆ ಅವಶ್ಯಕವೆನಿಸುವ ಶಕ್ತಿಸಾಮರ್ಥ್ಯಗಳನ್ನೂ ಆಯುಷ್ಯವನ್ನೂ ದೇವರು ನಮಗೆ ದಯಪಾಲಿಸಿಲೆಂದು ಬೇಡುವೆನು. ನಮ್ಮನೆರೆಯಲ್ಲಿಸಾವಾಜ್ಯದ ಜಗತ್ತಿನ ಎಲ್ಲ ಭಾಗಗಳಲ್ಲಿ ಪಸರಿಸಿರುವ ಫ್ರೆಂಚ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳು ತಮ್ಮ ಸೇನಾಬಲದಿಂದ ನಮ್ಮನ್ನು ಅನುಸರಿಸಿ ಹಗೆಗಳೊಡನೆ ಕಾದಾಡುವವೆಂದು ನಾನು ನಂಬುತ್ತೇನೆ. ಫ್ರಾನ್ಸ್ ದೇಶದ ಸ್ವಾತಂತ್ರ್ಯವನ್ನು ಪುನಃ ದೊರಕಿಸಿ ಅದನ್ನು ಮೊದಲಿನ ಸ್ಥಿತಿಗೆ ತರುವದಕ್ಕೂ ಕಾಡು ನಾಯಿಗಳನ್ನು ಸೋಲಿಸಿ ಹಿಮ್ಮೆಟ್ಟಿಸುವದಕ್ಕೂ ಫ್ರಾನ್ಸ್‌ವನ್ನುಳಿದು ಹೊರಗಿರುವ ಫ್ರೆಂಚರು ಪ್ರಯತ್ನ ಹೂಡಿದರೆ ನಾವು ಅವರಿಗೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿ ನಮಗೆ ತೋಚಿದ ಎಲ್ಲ ಬಗೆಗಳಿಂದ ನೆರವಾಗುವೆವು.

೬. **ನಮ್ಮ ಹಡಗುಪಡೆಯು ಪ್ರಬಲವಾಗಿರುವುದು:—** ಜರ್ಮನ್ನರು ಗ್ರೇಟಬ್ರಿಟನ್ನಿನ ಮೇಲೆ ದಂಡೆತ್ತಿ ಬರುವರೆಂಬದನ್ನು ಕೇಳಿದಾಗ ಚರ್ಚಿಲ್ ಸಾಹೇಬರು ಕಾಮನ್ಸ್ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹೀಗೆಂದಿರುವರು :—

"ಕಳೆದ ಹದಿನೈದು ದಿನಗಳಲ್ಲಿ ಫ್ರಾನ್ಸ್‌ದಲ್ಲಿ ನಡೆದ ಕಥಾಂತರಗಳನ್ನು ತಿಳಿದು ನಮಗೇನೂ ಆಶ್ಚರ್ಯವೆನಿಸಲಿಲ್ಲ. ಫ್ರಾನ್ಸ್‌ದಲ್ಲಿ ನಡೆದ ಯುದ್ಧದ ಪರಿಣಾಮವು ಎಂತೇ ಆದರೂ ಬ್ರಿಟನ್ನವೂ ಬ್ರಿಟಿಶ ಸಾಮ್ರಾಜ್ಯವೂ ಏಕಾಂಗವಾಗಿ ವರ್ಷಾನು ವರ್ಷ ವೈರಿಗಳೊಡನೆ ಹೋರಾಡುವವೆಂಬ ದೃಢನಿಶ್ಚಯದ ಮಾತನ್ನು ಈಗ ಹದಿನೈದು ದಿನಗಳ ಹಿಂದೆಯೇ ನಾನು ಸ್ಪಷ್ಟವಾಗಿ ಆಡಿ ತೋರಿಸಿರುವೆನು.

ಹಗೆಗಳು ಗ್ರೇಟಬ್ರಿಟನ್ನದ ಮೇಲೆ ಏರಿಬರಬಹುದು; ಹಾಗಾದರೆ ಅವರು ಬಹುಸಂಖ್ಯಾಕವಾದ ಸೈನ್ಯವನ್ನು ಸಮುದ್ರಮಾರ್ಗವಾಗಿ ತರಬೇಕಾಗುವದು. ಮತ್ತು ಯುದ್ಧವನ್ನು ಮುಂದರಿಸುವದಕ್ಕಾಗಿ ಅಸಂಖ್ಯಾತ ಯುದ್ಧಸಾಮಗ್ರಿ ಆನ ಸಾಮಗ್ರಿಗಳನ್ನು ಪೂರೈಸಿಕೊಳ್ಳಬೇಕಾಗುವದು. ಈ ಸಮಯದಲ್ಲಿ ನಾನೊಂದು ಮಾತನ್ನು ನೆನಪು ಮಾಡಿಕೊಡಬೇಕಾಗಿದೆ. ನಮ್ಮ ಸೇನಾಬಲದ ಹಡಗುಪಡೆಯ ಪ್ರಾಬಲ್ಯವನ್ನು ನೆನಿಸಿಕೊಳ್ಳಿರಿ. ನಮ್ಮ ಹಡಗುಪಡೆಯ ಸಾಮರ್ಥ್ಯವು ಜಗತ್ತಿನ ನಿದರ್ಶನಕ್ಕೆ ಹಲವು ಸಾರೆ ಬಂದಿದ್ದರೂ ಅದನ್ನು ನಾನು ಪುನಃ ನೆನಪು ಮಾಡಿಕೊಡುವೆನು.

(ಮುಂದುವರಿಯುವದು)

ಸನ್ ೧೯೪೧ ನೆಯ ಇಸವಿಯಲ್ಲಿ ನಡೆಯುವ ಕನ್ನಡ, ಮರಾಠಿ, ಉರ್ದು ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮವು.

ತಾರೀಖು ವಾರ	ಸ್ಟ್ಯಾಂಡರ್ಡ ಟಾಯಿಮ್ ಇಂದ	ವರೆಗೆ	ವಿಷಯ	ಗುಣಗಳು
ತಾ. ೫-೩-೧೯೪೧	ಸಂಜೆ ೨—೦	೨—೨೦	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹಾಜರಿ ತಕ್ಕೊಳ್ಳುವದು.	
ಬುಧವಾರ	ಸಂಜೆ ೨—೩೦	೫—೦	೧ ನೆಯ ಪದರು— ೧ ನೆಯ ಕಾಗದ—ಪ್ರಾಂತಿಕ ಭಾಷೆ (ಎಂದರೆ ಕನ್ನಡ ಮರಾಠಿ, ಗುಜರಾಥಿ, ಉರ್ದು) (ಅ) ಗದ್ಯ ಮತ್ತು ಪದ್ಯ (ಬ) ವ್ಯಾಕರಣ.	ಅ ೭೫ ಬ ೨೫
ತಾ. ೬-೩-೧೯೪೧	ಮುಂಜಾನೆ ೧೧	೧—೩೦	೧ ನೆಯ ಪದರು— ೨ ನೆಯ ಕಾಗದ—ನಿಬಂಧ ಮತ್ತು ಕೈಬರಿಹ.	೧೦೦
ಗುರುವಾರ	ಸಂಜೆ ೨—೩೦	೪—೩೦	೪ ನೆಯ ಪದರು— ವ್ಯಾವಹಾರಿಕ ಶಾಸ್ತ್ರೀಯ ವಿಷಯ.	೧೦೦
ತಾ. ೭-೩-೧೯೪೧	ಮುಂಜಾನೆ ೮—೦	೧೧—೦	೨ ನೆಯ ಪದರು— (ಅ) ಅಂಕಗಣಿತ (ಭೂವಿುತಿ ಸಹಿತ) ಮತ್ತು (ಬ) ಮನೆತನದ ಜಮಾಖರ್ಚು.	ಅ ೮೦ (ಅ೦.೬೦ ಭೂ.೨೦) ಬ ೨೦
ಶುಕ್ರವಾರ	ಸಂಜೆ ೨—೦	೪—೩೦	೩ ನೆಯ ಪದರು— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	ಅ ೫೦ ಬ ೫೦
ತಾ. ೮-೩-೧೯೪೧	ಮುಂಜಾನೆ ೧೧	೧—೩೦	೫ ನೆಯದು ಪದರು— ಹೊಲಿಗೆಯ ಕೆಲಸ.	೧೦೦
ಶನಿವಾರ	ಸಂಜೆ ೨—೩೦	೪—೩೦	೬ ನೆಯ ಪದರು— ಐಚ್ಛಿಕ ವಿಷಯಗಳು * ಡ್ರಾಯಿಂಗು, ಗಾಯನ ಮತ್ತು ಪ್ರಕೃತಿ ವಿಮರ್ಶೆ.	೧೦೦

* ಉಮೇದವಾರರು ಈ ಮೂರರಲ್ಲೊಂದು ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಲೇ ಬೇಕು.

ವಿಶೇಷ ಸೂಚನೆ:— ಉಮೇದವಾರರು ಪರೀಕ್ಷೆಯ ಮೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವ ವೇಳೆಗಿಂತ ಒಂದು ತಾಸು ಮೊದಲು ಪರೀಕ್ಷೆಯು ನಡೆಯುವ ಸ್ಥಳದಲ್ಲಿ ಹಾಜರ ಇರಲೇ ಬೇಕು.

೨೫ನೇ ಕ. ಸಾ. ಸಮ್ಮೇಲನದ ಸಾಹಿತ್ಯಗೋಷ್ಠಿಯಲ್ಲಿ

ಶ್ರೀ. ಜಿ. ಎಚ್. ಹೊಸೂರ.

ಇವರು ಪ್ರದರ್ಶಿಸಿದ ಕವಿತೆಗಳು.

ಧಾರವಾಡದಲ್ಲಿ ಜರುಗಿದ ೨೫ನೇ ಕ. ಸಾ. ಸ. ದ ಸಾಹಿತ್ಯಗೋಷ್ಠಿಯಲ್ಲಿ ಕ. ಸಾ. ಪ. ನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಶ್ರೀಮಾನ್ ಬಿ. ಎಮ್. ಶ್ರೀಕಂಠಯ್ಯನವರು ೩೦ ನಿಮಿಷಗಳ ಅವಧಿಯಲ್ಲಿ ಸದ್ಯಕ್ಕೆ ಜರುಗುತ್ತಿರುವ ಈ ಸಮ್ಮೇಲನವನ್ನು ಕುರಿತು ೧೮ ಸಾಲುಗಳಿಗಿಂತ ಕಡಿಮೆಯಲ್ಲಿದ್ದಷ್ಟು ಕವಿತೆಯನ್ನು ಮಾಡಿ ಬೇಕಾದವರು ಸಾದರಪಡಿಸಬೇಕೆಂದು ಸೂಚಿಸಿದಾಗ ಸುಮಾರು ೨೫-೩೦ ಕವಿಗಳು ಆಗಿಂದಾಗ ಕವಿತೆ ಮಾಡಿ ಸಾದರಪಡಿಸಿದರು. ಅದರಲ್ಲಿ ಪ್ರಾ. ಶಿ. ರಲ್ಲೋರ್ವನಾದ ನಾನು ೧೫ ನಿಮಿಷಗಳಲ್ಲಿ ಕವಿತೆ ಮಾಡಿ ಸಾಹಿತ್ಯಗೋಷ್ಠಿಯಲ್ಲಿ ಸಾದರಪಡಿಸಿ ಸಭೆಯಲ್ಲಿ ಪ್ರದರ್ಶಿಸಿದ ಪದ್ಯಗಳಿವು.

"ಸೀಸ ಪದ್ಯ"

ಧಾರವಾಡಾಖ್ಯಪುರವಿಂದು ಬಹು ಆನಂದ।
ಭಾರದಿಂ ತಲೆದೂಗಿ ನಲಿದಾಡಿತೈ ॥
ತೋರಣಗಳಿಂ ತಳಿರು ಕನ್ನಡ ಧ್ವಜಗಳಿಂ।
ಧಾರುಣಿಯಲಿ ಮೆರೆಯಿತಿದನು ವರ್ಣಿಸಲೇಂ ॥ ೧ ॥

ಭೇರಿಮೊಳಗಿತು ಕನ್ನಡದ ನಾಡನಭದೊಳ್।
ಸೂರಿಯಾಯಿತು ಕನ್ನಡಭಿಮಾನ ಜನರೊಳ್।
ಸಾರಿದರೆಲ್ಲೆ ಕನ್ನಡದ ಕೀರ್ತಿರವವ।
ಬೀಸಿದರೆಲ್ಲೆ ನಮ್ಮ ತಾಯ ವೈಭವವ ॥ ೨ ॥

ಚಂದ್ರಶೇಖರಶಾಸ್ತ್ರಿಗಳು ಹಿರಿಯರಾಗಿ।
ಮುಂದಹಾಸದಿ ಸಭೆಯ ಮುಂದುವರಿಸಿದರು ॥
ಹಿಂದಾದರಧ್ಯಕ್ಷ ಮಾಸ್ತಿ ವೆಂಕಟೇಶ್ವರರು।
ಇಂದು ಸಾಹಿತ್ಯಗೋಷ್ಠಿಯ ಜರುಗಿಸಿದರು ॥ ೩ ॥

ಶ್ರೀಕೃಷ್ಣ ರಾಜರಾಪೋಷಿಸಿದ ಸಾಹಿತ್ಯ।
ಶ್ರೀಕಂಠೀರವನರಸರಾಜರಾ ಸಾಹಿತ್ಯ।

ಲೋಕದಲಿ ಮೆರೆದಿರ್ಪ ಕನ್ನಡದ ಸಾಹಿತ್ಯ।
ಶ್ರೀಕಂಠ ಅಯ್ಯರಿಂದ ಇಂದು ಬೆಳಗಿದುದು ॥ ೪ ॥

ಶಾ. ವಿ.॥

ಶ್ರೀ ಕರ್ನಾಟಕಮಾತೆ ಪಾಪನಯುತೆ, ವಿಖ್ಯಾತೆ ಭೂಮಾತೆಯು।
ಶೋಕಾನ್ವಿತೆ ತಾನಾಗಿ ದುಃಖಿಸುತಲುಂ ಭಾರತದೊಳಾವಾಗಲುಂ ॥
ಸಾಕಾಯ್ತೆನ್ನಸವಸ್ಥೆ ಬೇಕು ಶೀಘ್ರದೊಳು ಏಕೀಕರಣವೆಂದೆನ್ನುತಾ।
ಲೋಕೋದ್ಧಾರದ ಕಾರ್ಯವಂ ಜರುಗಿಸಿಲ್ ಈ ಸಭೆಗೆ ಆಗಮಿಸಿಹಳ್ ॥ ೫ ॥

ಮ. ವಿ.॥

ಜನನೀಜನ್ಮ ಪ್ರದಾಯಿನೀ ಗುಣಮಣೀ ಕರ್ಣಾಟ ವಾಣೀಮಣೀ।
ಘನಘ ಕರ್ನಾಟಕ ಸ್ವಾಮಿನೀ ಮಾನಿನೀ ಮಾಧುರ್ಯ ಸಂಭಾಷಿಣೀ ॥
ಜನಸಮ್ಮೋದ ಪ್ರದಾಯಿನೀ ಭೂಮಣೀ ಸ್ವಾತಂತ್ರ್ಯ ಸಮ್ಮೋಹಿನೀ।
ಘನವಾದಿರವತ್ತೈದನೆಯ ಕನ್ನಡದ ಸಾಹಿತಿಸಭೆಗೆ ಕೊಡುಮಂಗಳಂ ॥ ೬ ॥

ಕಂದ.॥

ಶ್ರೀಪುತ್ಕರ್ನಾಟಕ ಭಾ।
ಭಾಮಾತೆಯ ಸೇವಕೀಗಲಭಿ ವಂದಿಸುವಂ ॥
ಪ್ರೇಮದೊಳೆನ್ನಯ ಪದ್ಯಕೆ।
ಆ ಮೋದವ ನೀವ ಸಭೆಗೆ ಮಂಗಳ ಮಾನೆ ॥ ೭ ॥

—ಅಶುಕವಿ, ಜಿ. ಎಚ್. ಹೊಸೂರ.

[ವಾಚಕರು ಈ ಅಶುಕವಿಕೃತಿಯ ಗುಣದೋಷಗಳನ್ನು ಸಹಾನುಭೂತಿಯಿಂದ ಅವಲೋಕಿಸಲಿ]

ಶ್ರೀಮಾನ್ ಎಸ್. ಆರ್. ತಾವಡೆ ಅವರ ಭಾಷಣದ ಮುಖ್ಯಾಂಶಗಳು

ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ **ಎಸ್. ಆರ್. ತಾವಡೆ** ಎಮ್. ಎ. ಟಿ. ಡಿ (ಕೋಲಂಬಿಯಾ) ಡಿಪ್ ಈಡಿ (ಆಕ್ಸ್‌ಫೊರ್ಡ್ ಎಮ್. ಆರ್. ಎಸ್. ಟಿ. (ಲಂಡನ್) ಅವರು ತಾ. ೩೧-೧೦-೧೯೪೦ ನೆಯ ದಿವಸ ಹಾರೊಬೆಳವಡಿಯಲ್ಲಿ, ಕನ್ನಡ ಗಂಡುಮಕ್ಕಳ ಶಾಲೆಯ ಹೊಸಕಟ್ಟಡದ ಉದ್ಘಾಟನೆಯ ಸಮಾರಂಭದ ಸುಪ್ರಸಂಗದಲ್ಲಿ, ಇಂಗ್ಲಿಷಿನಲ್ಲಿ ಮಹತ್ವಪೂರ್ಣವಾದ ಭಾಷಣವನ್ನು ಮಾಡಿದರೆಂದೂ ಆಗ ಶ್ರೀಮಾನ್ ಭಂಡಿವಾಡಸಾಹೇ

ರವರು ಕನ್ನಡವನ್ನಷ್ಟೇಬಲ್ಲವರಿಗಾಗಿ ಅದನ್ನು ಕನ್ನಡಕ್ಕೆ ಪರಿವರ್ತಿಸಿದರೆಂದೂ ನಮ್ಮ ಡಿಶಂಬರ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದೆಯಷ್ಟೆ. ಆ ಭಾಷಣದ ಮುಖ್ಯಾಂಶಗಳಿವು:—

"ನನಗೆ ಕನ್ನಡ ಭಾಷೆಯು ಬರದೆ ಇದ್ದುದರಿಂದ ಅನಿವಾರ್ಯವಾಗಿ ಇಂಗ್ಲಿಷಿನಲ್ಲಿ ಮಾತಾಡಬೇಕಾಗಿದೆ. ಈ ಊರಲ್ಲಿಯ ಎಲ್ಲ ಜನರು ಈ ಸಮಾರಂಭಕ್ಕಾಗಿ ಇಲ್ಲಿ ಕೂಡಿದುದನ್ನು ಕಂಡು ನನಗೆ ಅತ್ಯಂತ ಸಂತೋಷವಾಗುತ್ತಲಿದೆ. ನಿಮ್ಮೆಲ್ಲರ ಸಹಕಾರ-ಪ್ರಯತ್ನಗಳಿಂದಲೇ ಈ ಹೊಸ ಕಟ್ಟಡವು ಸಿದ್ಧವಾಯಿತೆಂದು ಹೇಳಲು ಏನೂ ಅಡ್ಡಿಯಿಲ್ಲ.

ಮಕ್ಕಳಿಗೆ ಬರಿಯ ಓದುಬರೆಹಗಳನ್ನಷ್ಟೇ ಕಲಿಸಿದರೆ ಈಗಿನ ಕಾಲದಲ್ಲಿ ಶಿಕ್ಷಕರ ಕರ್ತವ್ಯವು ಮುಗಿಯಿತೆಂದು ಹೇಳಲಿಕ್ಕೆ ಬರುವದಿಲ್ಲ. ವಿದ್ಯಾರ್ಥಿಗಳ ಶಾರೀರಿಕ ಆರೋಗ್ಯ-- ಸ್ವಚ್ಛತೆಗಳ ಕಡೆಗೆ ವಿಶೇಷ ಲಕ್ಷ್ಯವನ್ನು ಪೂರೈಸಬೇಕಾಗಿದೆ. ಮಕ್ಕಳು ಶಾಲೆಗೆ ಬಂದಕೂಡಲೆ ಶಿಕ್ಷಕರು ಅವರ ಮುಖ, ಕಣ್ಣು, ಮೂಗು, ಬಾಯಿ, ಇವೆಲ್ಲವುಗಳು ನಿರ್ಮಲವಾಗಿಯೂ ಹಸನಾಗಿಯೂ ಇರುವವೋ ಇಲ್ಲವೋ ಎಂಬುದನ್ನು ಪ್ರತಿನಿತ್ಯವೂ ನೋಡಲೇಬೇಕು. ಬಹಳ ಹುಡುಗರು ಮಲಮೂತ್ರವಿಸರ್ಜನೆಗಳನ್ನು ಮಾಡದಲೆ ಶುಚಿಯಾಗದಲೆ ಶಾಲೆಗೆ ಬರುತ್ತಲಿರುವದು ಕಂಡುಬರುತ್ತಲಿದೆ. ಇಂಥವರ ಮನಃಸ್ಥಿತಿಯು ಶಾಂತವಾಗಿರದ್ದರಿಂದ ಸರಿಯಾಗಿ ಕಲಿಯಲಾರರು. ಹರಕು-ಹೊಲಸು ಬಟ್ಟೆಗಳನ್ನು ಹಾಕಿಕೊಂಡು ಬಂದವರನ್ನು ಕೂಡಲೆ ಮನೆಗೆ ಕಳುಹಿಸಿ ಹೊಲಿದ-ಹಸನಾದ ಉಡುಗೆ-ತೊಡುಗೆಗಳನ್ನು ಧರಿಸಿಕೊಂಡು ಬರುವಂತೆ ತಿಳಿಯಹೇಳಬೇಕು. ತುಸು ದೊಡ್ಡ ಹುಡುಗರಿಗೆ ತಮ್ಮ ಹರಕುಬಟ್ಟೆಗಳನ್ನು ತಾವೇ ಹೊಲಿದುಕೊಳ್ಳಲಿಕ್ಕೂ ಮಡಿವಾಡಿಕೊಳ್ಳಲಿಕ್ಕೂ ಉತ್ತೇಜನಕೊಡಬೇಕು. ಮಕ್ಕಳ ಹಲ್ಲು ಉಗುರುಗಳನ್ನು ಪರೀಕ್ಷಿಸಬೇಕು. ದಿನಾಲು ಹಲ್ಲುಗಳನ್ನು ಉಜ್ಜಿಕೊಂಡಿರುವಂತೆಯೂ ಈ ಚಟವು ಬಾಲಕರ ಮೈಯ್ಯುಣ್ಣುವಂತೆಯೂ ಯತ್ನಿಸಬೇಕು. ಇದಕ್ಕಾಗಿ ಶಾಲೆಯಲ್ಲಿ ನೀರು, ಸಬಕಾರ, ಕರಿಬೂದಿ, ಸೂಜಿ-ದಾರ, ಬಿರಡಿ (ಗುಂಡಿ) ಮೊದಲಾದವುಗಳ ಸಂಗ್ರಹವಿರಬೇಕು. ಸಣ್ಣ ದೊಡ್ಡ ಮಕ್ಕಳಿಗೆಲ್ಲ ನೋಡಲಿಕ್ಕೆ ಅನುಕೂಲವಾಗುವಂತೆ ತಕ್ಕ ಸ್ಥಳದಲ್ಲಿ ಒಂದು ಕನ್ನಡಿಯನ್ನು ಇಟ್ಟಿರಬೇಕು. ಶಿಕ್ಷಣವು ಸರ್ವಾಂಗಸುಂದರವಾಗಬೇಕಾದರೆ ಮಕ್ಕಳು ತಮ್ಮ ದೇಹಕ್ಕೆ ಅನುಗುಣವಾಗಿ ವ್ಯಾಯಾಮಮಾಡಿ ಆಟವಾಡಲೇಬೇಕು. ಅವರಲ್ಲಿ ಸ್ವಚ್ಛತೆ ಅಚ್ಚುಕಟ್ಟುತನಗಳು ಬರದಿರೊತು, ಈ ಚಟವು ಮೈಯ್ಯುಣ್ಣದ ಹೊರತು ಗತ್ಯಂತರವಿಲ್ಲ.

ಇಂದಿನ ಬಾಲಕರೇ ಭಾವೀ ರಾಷ್ಟ್ರದ ಘಟಕಗಳು. ಅವರು ಸದೃಢರೂ ಸುಂದರರೂ ಸದ್ಗುಣಿಗಳೂ ಆಗುವಂತೆ ಯತ್ನಿಸುವದು ಶಿಕ್ಷಕರ ಮತ್ತು ಪಾಲಕರ ಕರ್ತವ್ಯವೇ ಆಗಿದೆ.

ತಮ್ಮ ಮಕ್ಕಳನ್ನು ದಿನಾಲು ಆರು ತಾಸು ಶಿಕ್ಷಕರ ಕಡೆಗೆ ಒಪ್ಪಿಸಿದರೆ ಪಾಲಕರ ಕೆಲಸವು ತೀರಿದಂತಾಗಲಿಲ್ಲ. ಮಕ್ಕಳ ವಿದ್ಯಾ-ಬುದ್ಧಿ, ದೇಹ, ಶೀಲಸ್ವಭಾವ ಇವೆಲ್ಲವುಗಳ ಕಡೆಗೆ ಸಾಕಷ್ಟು ಲಕ್ಷ್ಯ ಪೂರೈಸಲೇಬೇಕು. ಅವರು ಕಲಿಯುತ್ತಲಿರುವ ಶಾಲೆಯು ಸಾಕಷ್ಟು ದೊಡ್ಡದೂ ಹಸನಾದುದೂ ಬೆಳಕುಳ್ಳದೂ ಗಟ್ಟಿಮುಟ್ಟಾಗಿದ್ದುದೂ ಇರಲೇಬೇಕೆಂಬುದನ್ನು ಪ್ರತಿಯೊಬ್ಬ ಪಾಲಕರೂ ನೋಡುತ್ತಲಿರಬೇಕು. ಈ ವಿಷಯದಲ್ಲಿ ಆರ್ಥಿಕ ಶಾರೀರಿಕ ಸಹಾಯ ಸಹಕಾರಿತೆಗಳನ್ನು ಸರಕಾರಕ್ಕೆ ಸಲ್ಲಿಸಬೇಕು. ಎಲ್ಲ ಹೊಣೆಯನ್ನೂ ಸರಕಾರದ ಮೇಲೆಯೇ ಹಾಕಿಬಿಟ್ಟರೆ ನಡೆಯುವದೆಂತು?

ಎಲ್ಲ ಮಕ್ಕಳಿಗೂ ಶಿಕ್ಷಣವು ಅವಶ್ಯವಾಗಿ ಬೇಕೇ ಬೇಕು. ಗಂಡು ಹುಡುಗರು ಕಲಿಯುತ್ತಲಿರುವಷ್ಟು ಹೆಣ್ಣುಹುಡುಗೆಯರು ಕಲಿಯುತ್ತಲಿರುವದು ಕಂಡುಬರುವದಿಲ್ಲ. ಇನ್ನಾದರೂ ಪ್ರತಿಯೊಬ್ಬ ಪಾಲಕರು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿಯೇ ತೀರಬೇಕು. ಬಾಲಿಕೆಯರ ಸಂಖ್ಯೆಯು ಹೆಚ್ಚಾದಂತೆ ಅಪರಿಗಾಗಿ ಬೇರೆ ಶಿಕ್ಷಕಿಯರನ್ನೇ ಕೊಡಲಾಗುವದು. ಆ ಬಳಿಕ ವಯಸ್ಸಾದ ಹೆಂಗುಸರು ಸಹ ಅಲ್ಲಿ ಕಲಿಯಬಹುದು.

ಊರಲ್ಲೊಂದು ಗುಡಿಯನ್ನು ಕಟ್ಟುವದಕ್ಕೆ ಹೊರಟರೆ ಹಳ್ಳಿಯ ಮೂಲೆ ಮೂಲೆಗಳಿಂದಲೂ ನಾನಾಬಗೆಯ ಸಹಾಯವು ಒದಗಿಬರುವದು. ತಾವು ಸಾಕುವ ತಮ್ಮ ಪ್ರೀತಿಯ ದನಕರುಗಳಿಗೆ ಒಳ್ಳೆಯ ಹಸನಾದ ಮನೆಯನ್ನು ಕಟ್ಟಿಸುವದಕ್ಕೆ ಜನರು ಹಿಂದೆಗೆಯುವದಿಲ್ಲ. ಆದರೆ ತಮ್ಮ ಮಕ್ಕಳ ಜೀವನಕ್ಕೆ ಮೆರುಗುಗೊಟ್ಟು ಅದನ್ನು ಸುಖಮಯವಾಗುವಂತೆ ಮಾರ್ಪಡಿಸುವ ಪುಣ್ಯಕರವಾದ ದೇವಾಲಯವೆನಿಸುವ ಶಾಲಾಗೃಹದ ಸಲುವಾಗಿ ನಾಲ್ಕು ಮುಡ್ಡು ವರ್ಗಣಿ ಕೊಡಲು ಹಲವರು ಅನಾದರ ತೋರಿಸುವರು; ಹಲವರು ಅಲ್ಲಗಳೆಯುವರು; ಇನ್ನನೇಕರು ಇದು ಸರಕಾರದ ಹೊಣೆಯು ಕೆಲಸವೆಂದು ಹೇಳಿ ಮೈಯುಳಿಸಿಕೊಳ್ಳಲು ಯತ್ನಿಸುವರು. ಇದು ಸರಿಯೇ ಹೇಗೆಂಬುದನ್ನು ಅವರೇ ಹೇಳಬೇಕು.

ಇತರರಿಗೆ ಮಾದರಿಯಾಗುವಂತೆ ನೀವೆಲ್ಲರೂ ಸೇರಿ ಈ ಶಾಲಾಗೃಹದ ರಚನೆಯ ಕಾರ್ಯದಲ್ಲಿ ನೆರವಾಗಿ ಇಂದಿನ ಈ ಸಮಾರಂಭವನ್ನು ಅಸಂದ ಉತ್ಸಾಹಗಳಿಂದ ನೆರವೇರಿಸಿದುದಕ್ಕಾಗಿ ನಿಮ್ಮೆಲ್ಲರ ಅಭಾರವೆಣಿಸಬೇಕಾಗಿದೆ."

ಇತ್ಯಾದಿ.

ಸನ್ಯತ್‌ಸೇನ

ಮಹಾಭಾರತದಲ್ಲೊಂದು ಕಥೆಯಿದೆ: "ಕೌರವನು ತನ್ನ ಮಾವಂದಿರಾದ ಶಕುನಿಯೂ ಅವನ ಸಹೋದರರೂ ಪ್ರಬಲರಾಗಿರುವದನ್ನು ಕಂಡು ಅವರ ಕೊಲೆಮಾಡಿದನು. ಶಕುನಿಯೊಬ್ಬನು ಮಾತ್ರ ಉಳಿದನು. ಮುಂದೆ ಆ ಶಕುನಿಯೊಬ್ಬನೇ ಅಜೇಯರೆನಿಸಿಕೊಂಡ ಕೌರವರ ಕುಲವನ್ನೇ ನಿರ್ಮೂಲ ಮಾಡಿದನು."

ಚೀನದಲ್ಲಿಯೂ ಇಂಥದೇ ಒಂದು ಕಥೆ ನಡೆದು ಹೋಗಿದೆ. ೧೮೯೪ನೆಯ ಇಸ್ವಿಯಲ್ಲಿ **ಕಂತಾನ** ನಗರದಲ್ಲಿ ೧೮ ಜನ ಚೀನೀ ತರುಣರು ಒಂದು ಗುಪ್ತ ಸ್ಥಳದಲ್ಲಿ ಕುಳಿತು ಆಲೋಚನೆ ನಡೆಯಿಸಿರುವಾಗ ಅರಸನ ಸೈನಿಕರು ಅವರನ್ನು ಮುತ್ತಿ ಸೆರೆಹಿಡಿದರು. ಅವರಲ್ಲಿ ಹದಿನೇಳು ಜನರು ಮರಣ ದಂಡನೆಗೆ ಗುರಿಯಾದರು. ಒಬ್ಬನು ಮಾತ್ರ ತಲೆ ತಪ್ಪಿಸಿಕೊಂಡು ಪಾರಾದನು. ಅವನೇ ನಮ್ಮ ಚರಿತ್ರನಾಯಕ **ಸನ್ಯತ್‌ಸೇನ**! ಈ ತನ್ನ ಹದಿನೇಳು ಜನ ಸ್ನೇಹಿತರ ಕೊಲೆಯ ಸೇಡು ತೀರಿಸಿಕೊಳ್ಳುವ ಅರ್ಥಾತ್ ಅವರೆಲ್ಲರೂ ಕೂಡಿ ನಡೆಯಿಸಿದ ಆಪ್ತಾಲೋಚನೆಯ ವಿಷಯವಾದ ಚೀನದ ಸಾಮ್ರಾಜ್ಯದ ಸ್ವಾತಂತ್ರ್ಯಸಾಧನೆಯ ಮಹಾಕಾರ್ಯವನ್ನು ಈ ಮಹಾಪುರುಷನು ನೆರವೇರಿಸಿದನು.

ಚೀನವು ಒಂದು ಪುರಾತನ ರಾಷ್ಟ್ರ. ಪಾಶ್ಚಿಮಾತ್ಯ ರಾಷ್ಟ್ರಗಳು ಇನ್ನೂ ಬಂಜರು ಜನರ ನಿವಾಸಗಳೆನಿಸುತ್ತಿದ್ದಾಗ ಚೀನವು ಸುಸಂಸ್ಕೃತ ರಾಷ್ಟ್ರವೆನಿಸಿಕೊಂಡಿತ್ತು. ವಿಲಿಯಮ್ ಕ್ಯಾಕ್ಸ್‌ಟನ್ನನು ಮುದ್ರಣ ಯಂತ್ರಗಳನ್ನು ಹುಡುಕುವದಕ್ಕಿಂತ ಮೊದಲೇ ಚೀನದಲ್ಲಿ ಗ್ರಂಥಗಳು ಮುದ್ರಣ ಹೊಂದಿದ್ದುವು. ಯುರೋಪಿಯನ್ನರು ಗವಿಮನುಷ್ಯರಾಗಿದ್ದಾಗ ಚೀನದಲ್ಲಿ ಮೇಲ್ತರದ ಕಟ್ಟಡಗಳು ವಿರಾಜಿಸುತ್ತಿದ್ದುವು. ಇಂಥ ಪುರಾತನ ಪ್ರಸಿದ್ಧ ರಾಷ್ಟ್ರವು ಪರದಾಸ್ಯ ಬಳಲುವ ಸಂದರ್ಭವೊದಗಿತು. ಮೂರುನೂರು ವರ್ಷಗಳ ಹಿಂದೆ ಚೀನದಲ್ಲಿ ಪಕಲಹವು ತಲೆದೋರಿತು. ಅಲ್ಲಿ ಎರಡು ಬಣಗಳಾಗಿ ಒಂದು ಬಣದವರು ಮಂಚೂರಿಯಾದ ಅರಸನ ನೆರವನ್ನು ಕೋರಿದರು. ಮಂಚೂರಿಯಾದ ಸೈನ್ಯವು ಒಳಗೆ ಬಂದು ಮೊದಲು ಒಂದು ಬಣದವರನ್ನು ಸೋಲಿಸಿತು; ಕಾಲಾಂತರದಲ್ಲಿ ಎರಡನೆಯ ಬಣದವರನ್ನೂ ಮೂಲೆಗೊತ್ತಿ ಇಡಿಯ ಚೀನವನ್ನು ಆಕ್ರಮಿಸಿ ಅಲ್ಲಿ

ಮುಂಚೂರಿಯಾದ ರಾಜಪತ್ತಿಯನ್ನು ಸ್ಥಾಪಿಸಿತು. ಅಂದಿನಿಂದ ಚೀನದ ವಿದ್ಯಾ ಕಲಾಕೌಶಲ್ಯಾದಿಗಳೆಲ್ಲ ಕಳೆಗುಂದಿ ನಶಿಸಿ ಹೋಡುವು. ಸಾಮಾನ್ಯ ಪ್ರಜೆಗಳ ಅಫೀಮು ತಿನ್ನುವ ಸ್ವಾಭಿಮಾನವಿಲ್ಲದ ಪಶುಜೀವಿಗಳೆನ್ನಿಸಿಕೊಳ್ಳುವಷ್ಟರ ಮಟ್ಟಿಗೆ ಆ ರಾಷ್ಟ್ರದ ಅವನತಿಯಾಗಿ ಹೋಯಿತು. ರಶಿಯಾ ಜಪಾನಗಳೂ ಯುರೋಪದ ರಾಷ್ಟ್ರಗಳೂ ಚೀನದ ವ್ಯಾಪಾರ ಉದ್ಯೋಗಗಳನ್ನೆಲ್ಲ ಆಕ್ರಮಿಸಿದುವು. ಇಂತಿರುವಾಗ ಗಿಲಒಂ ನೆಯ ಇಸ್ವಿಯಲ್ಲಿ **ಕಂತಾನದ** ಬಳಿಯಲ್ಲಿದ್ದ ಒಂದು ಹಳ್ಳಿಯಲ್ಲಿ ಒಬ್ಬ ಬಡ ಒಕ್ಕಲಿಗನ ಮನೆಯಲ್ಲಿ ಸನ್ಯತ್‌ಸೇನನ ಅವತಾರವಾಯಿತು. ಈತನ ತಂದೆ ಮತಾಂತರ ಹೊಂದಿದ ಕ್ರೈಸ್ತನಾಗಿದ್ದನು. ವೈದ್ಯಕಿಯಲ್ಲಿಯೂ ಶಸ್ತ್ರ ಕ್ರಿಯೆಯಲ್ಲಿಯೂ ಈತನಿಗೆ ತುಂಬ ಅಭಿರುಚಿಯಿದ್ದಿತು. **ಹಾಂಗ್‌ಕಾಂಗ್**ದೊಳಗಿನ ವೈದ್ಯಕೀಯ ಕಾಲೇಜವನ್ನು ಸೇರಿ ಡಾಕ್ಟರನಾಗಿ **ಮಕಾವು** ನಗರಕ್ಕೆ ಬಂದು ತನ್ನ ವ್ಯವಸಾಯವನ್ನು ಪ್ರಾರಂಭಿಸಿದನು. ತನ್ನ ಕಲಾ ನೈಪುಣ್ಯದಿಂದಲೂ ಸದಾ ಆನಂದವೃತ್ತಿ, ದಯೆ, ದಾಕ್ಷಿಣ್ಯ, ವಿನಯಾದಿಗಳಿಂದಲೂ ಸನ್ಯತ್‌ಸೇನನು ಜನಪ್ರಿಯನಾದನು. ಚೀನದಲ್ಲಿ ಡಾಕ್ಟರರು ಶಸ್ತ್ರಕ್ರಿಯೆ ನಡೆಯಿಸುವಾಗ ರೋಗಿಯ ಬಂಧುಬಳಗದವರೂ ಸ್ನೇಹಿತರೂ ಸುತ್ತಲೂ ನಿಂತು ನೋಡಲು ಪ್ರತಿಬಂಧವಿದ್ದಿಲ್ಲ. ಡಾಕ್ಟರ್ ಸನ್ಯತ್‌ಸೇನನು ಹೀಗೆ ಬಹಿರಂಗದಲ್ಲಿ ನಡೆಯಿಸುವ ತನ್ನ ಶಸ್ತ್ರಕ್ರಿಯೆಯ ಕೌಶಲ್ಯದಿಂದ ಜನತೆಯ ಲಕ್ಷ್ಯವನ್ನು ತನ್ನ ಕಡೆಗೆ ಎಳೆದುಕೊಂಡನು. **ಜೇಮ್ಸ್‌ಕಂಟಲಿ** ಎಂಬ ಗ್ರಹಸ್ಥನೂ ಈತನೂ ಪ್ರೀತಿಯ ಸ್ನೇಹಿತರಾದರು. ಮುಂಚೂರಿಯಾದ ಅರಸನ ಕ್ರೂರ ದಬ್ಬಾಳಿಕೆಗೆ ಚೀನಿಯರು ಬೇಸರುಗೊಂಡಿದ್ದರು. ಈ ಪರಿಸ್ಥಿತಿಯಲ್ಲಿ ತರುಣ ಕ್ರಾಂತಿಕಾರಕರ ಪಂಗಡವೊಂದು ಕಂತಾನ ನಗರದಲ್ಲಿ ಹುಟ್ಟಿಬೆಳೆಯಿತು; ಪ್ರಾರಂಭದಲ್ಲಿ ಹೇಳಿರ ಹದಿನೆಂಟು ಜನರು ಈ ಪಂಗಡದ ಪ್ರಮುಖರು.

ಮುಂಚೂರಿಯಾದ ಅರಸರ ಕ್ರೂರ ದಬ್ಬಾಳಿಕೆಯಿಂದ ತನ್ನ ದೇಶವನ್ನು ಉದ್ಧರಿಸುವದೇ ಸನ್ಯತ್‌ಸೇನನ ಮುಖ್ಯ ಧ್ಯೇಯವಾಯಿತು. ಈ ಯತ್ನದಲ್ಲಿ ತೊಡಗಿದ ಅತನನ್ನು ಸರಕಾರದ ಸೈನಿಕರು ಬೆನ್ನಟ್ಟಿ ಬಂದು ನಿಂತಲ್ಲಿ ನಿಲ್ಲಗೊಡಲಿಲ್ಲ. ಒಮ್ಮೆ ಅವನು ತನ್ನ ಸ್ನೇಹಿತನ ಮನೆಯಲ್ಲಿ ಕುಳಿತಾಗ ಪೋಲೀಸರು ಅವನನ್ನು ಹುಡುಕುತ್ತ ಅಲ್ಲಿಗೆ ಬಂದರು. ನಡುರಾತ್ರಿಯ ಕತ್ತಲೆಯಲ್ಲಿ ಅವನು ಹಿತ್ತಿಲ ಬಾಗಿಲಿನಿಂದ ಹೊರಟು ಪಟ್ಟಣದ ಹೊರಗೋಡೆಯನ್ನು ಹಾರಿ ಕಂದಕವನ್ನು ಈಸಿ ಪಾರಾದನು. ಬೇಟೆಯ ನಾಯಿಗಳಂತೆ ಪೋಲೀಸರು ಬೆನ್ನಟ್ಟಿ ಬಂದರು. ಕಾಲುನಡಿಗೆಯಿಂದ ಸುಮಾರು ಮೈಲು ನಡೆದು ದಾರಿಯಲ್ಲಿ ಉ

ಾಸದಿಂದ ಇದ್ದು ಸಿಕ್ಕರೆ ಗಂಜಿಯನ್ನು ಕುಡಿದು ವಿಧವಿಧದ ಕಷ್ಟಗಳನ್ನು ಸಹಿಸುತ್ತ ಮುಕಾವೊಕ್ಕೆ ಬಂದನು. ಹಗೆಗಳು ಅಲ್ಲಿಯೂ ಆಕ್ರಮಿಸಲು ಈತನು ಕಾಂಗ್‌ಕಾಂಗ್ ಪಟ್ಟಣಕ್ಕೂ ಅಲ್ಲಿಂದ ಹೊನೊಲುಲುವಿಗೂ ಅಲೆದಾಡ ೀಕಾಯಿತು.

ಮಂಚೂರಿಯಾದ ಸರಕಾರಕ್ಕೆ ಈತನು ಪ್ರಬಲ ಶತ್ರುವಾದನು. ಅವರು ನ್ಯತ್‌ಸೇನನನ್ನು ಹಿಡಿದು ಕೊಟ್ಟವರಿಗೆ ಅಥವಾ ಅವನ ತಲೆಯನ್ನು ತಂದು ೊಟ್ಟವರಿಗೆ ೧೫ ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆವೆಂದು ಪ್ರಕಟಿಸಿದರು. ಈ ಆಶೆಗಾಗಿ ಎಷ್ಟೋ ಚೀನೀ ಜನರಿಂದಲೂ ಸಹ ಈತನು ಪತ್ತಿಗೊಳಗಾದನು.

ಒಮ್ಮೆ ಅವನು ನಾಂಕಿನ್ನದಲ್ಲಿ ಬಂದು ಬೋಟಿನಲ್ಲಿ ಕುಳಿತಾಗ ಅಕಸ್ಮಾತ್ ಬ್ಬನು ಅಲ್ಲಿಗೆ ಬಂದು ತಾನು ಅಲ್ಲಿಗೆ ಬಂದ ಉದ್ದೇಶವನ್ನು ತಿಳಿಸಿದನು. 'ಅಣ್ಣಾ, ನೀನು ನನ್ನ ದೇಶಬಾಂಧವನು; ನಿನ್ನ ದೇಶದ ಸ್ವಾತಂತ್ರ್ಯಕ್ಕಾಗಿ ುತ್ನಿಸುವ ನನ್ನನ್ನು ಸೆರೆಹಿಡಿಯುವದಾದರೆ ಹಿಡಿ; ಕೊಲೆ ಮಾಡುವದಾದರೆ ಮಾಡು; ಪರಕೀಯನಾದ ಮಂಚೂರಿಯಾದ ಅರಸನ ಮತ್ತು ಅವನ ಆಳರಸರ ತ್ಯಾಚಾರವನ್ನು ನೀನು ತಿಳಿದಿರುವೆ. ನೀನು ಸ್ವಾರ್ಥಕ್ಕಾಗಿ ಮಾತೃಭೂಮಿಯ ೇಡು ಬಗೆಯುವಷ್ಟು ಪಾಪಿಯಲ್ಲವೆಂದು ನಾನು ನಂಬುವೆನು. ಈಗ ನೀನು ನ್ನ ಮಾತು ಕೇಳಿದರೆ ನಿನಗೆ ಸರಕಾರದಿಂದ ದೊರೆಯಬಹುದಾದ ಹಣವು ಸಿಗ ಕ್ಕಿಲ್ಲ. ಆದರೆ ನಿನಗೆ ದೊರೆಯುವ ಹಣಕ್ಕಾಗಿ ಎಂಥ ದೇಶದ್ರೋಹದ ಕಾರ್ಯ ನ್ನು ಮಾಡುವೆಯೆಂಬದನ್ನು ವಿಚಾರ ಮಾಡು" ಮಾತಾಡುತ್ತಿರುವಾಗಲೇ ೂರೋಧಿಯ ಮನಸ್ಸು ಬದಲಾಯಿತು. ಅವನು ತನ್ನ ತಪ್ಪು ಒಪ್ಪಿಕೊಂಡನು. ಂದಿನಿಂದ ಅವನು ಸನ್ಯತ್‌ಸೇನನ ಅನುಯಾಯಿಗಳಲ್ಲಿ ಒಬ್ಬನಾದನು.

ಮತ್ತೊಮ್ಮೆ ನಡುರಾತ್ರಿಯಲ್ಲಿ ಸನ್ಯತ್‌ಸೇನನು ಮಲಗಿ ನಿದ್ರಿಸುತ್ತಿರು ಾಗ ಇಬ್ಬರು ಅಮಲ್ದಾರರೂ ಹನ್ನೆರಡು ಜನ ಪೋಲೀಸರೂ ಆ ಕೋಣೆಯನ್ನು ುತ್ತಿದರು. ಅವರು ತಮಗೆ ಹೆಚ್ಚಿನ ಅಧಿಕಾರವೂ ಹಣವೂ ದೊರೆಯುವವೆಂಬ ೆಯಿಂದ ಈ ಕಾರ್ಯಕ್ಕೆ ಮುಂದಾಗಿ ಬಂದಿದ್ದರು. ಸನ್ಯತ್‌ಸೇನನು ಎಚ್ಚತ್ತು ರಿಸ್ಥಿತಿಯನ್ನು ಅರಿತು ತನ್ನ ತಲೆಯ ಕೆಳಗಿದ್ದ ಧರ್ಮಗ್ರಂಥವನ್ನು ತೆಗೆದು ದರೊಳಗಿನ ಒಂದು ಭಾಗವನ್ನು ದೊಡ್ಡ ಧ್ವನಿಯಿಂದ ಓದಿದನು. ಮತ್ತು ೂನೆಗೆ "ದೇವರೇ, ಸ್ವಾರ್ಥಕ್ಕಾಗಿ ಮಾತೃಭೂಮಿಗೆ ಕೇಡು ಬಗೆಯುವ ಈ ಜನರ ನಸ್ಸನ್ನು ತಿದ್ದಿ ಇವರನ್ನು ಸನ್ಮಾರ್ಗಕ್ಕೆ ಹಚ್ಚು" ಎಂದು ಪ್ರಾರ್ಥಿಸಿದನು.

ಭಗವಂತನು ಈ ಮಹಾಪುರುಷನ ಪ್ರಾರ್ಥನೆಯನ್ನು ಮನ್ನಿಸಿದನೋ ಎನ್ನುವಂತೆ ಅವರ ಮನಸ್ಸು ಬದಲಾಗಿ ಹೋಯಿತು. ಅವರು ತಮ್ಮ ಅಪರಾಧವನ್ನು ಒಪ್ಪಿ ಕೊಂಡು ತಮ್ಮ ದೇಶೋದ್ಧಾರಕನನ್ನು ಸುರಕ್ಷಿತವಾದ ಬೇರೊಂದುಸ್ಥಳಕ್ಕೆ ಒಯ್ದು ಮುಟ್ಟಿಸಿದರು.

ಚೀನೀ ಜನರ ಸಂಘಟನೆಯೂ ಅನಂತರ ಬಂಡಾಯವನ್ನು ಹೂಡಿ ಅರ ಸೊತ್ತಿಗೆಯನ್ನು ಕಿತ್ತೊಗೆದು ದೇಶದ ಸ್ವಾತಂತ್ರ್ಯವನ್ನು ಸಾರುವದೂ ಈತನ ಧ್ಯೇಯಗಳಾಗಿದ್ದುವು. ಈ ಕಾರ್ಯಕ್ಕಾಗಿ ಅವನು ಚೀನ ಜಪಾನ ಸ್ಟ್ರೇಟ ಸೆಟಲ್‌ಮೆಂಟ್ಸ ಮಲಾಯಾ ದ್ವೀಪಕಲ್ಪ ಇಂಗ್ಲಂಡ ಮೊದಲಾದ ಎಲ್ಲ ದೇಶ ಗಳೊಳಗಿನ ಚೀನೀ ಜನರ ವಸತಿಗಳಿಗೆ ಹೋಗಿ ಅವರಿಗೆ ಉಪದೇಶಮಾಡಿ ದೇಶೋದ್ಧಾರಕ್ಕೆ ಮನವೊಲಿಸಿಕೊಂಡನು. ಒಮ್ಮೆ ಅವನು ಫಿಲಾದೆಲ್ಫಿಯಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಉಪನ್ಯಾಸಮಾಡುತ್ತಿದ್ದಾಗ ಅಕಸ್ಮಾತ್ ಒಬ್ಬ ಚೀನೀ ಸದ್ಗೃಹಸ್ಥನು ಮುಂದೆ ಬಂದು ತಾನು ೨೦ ವರ್ಷಗಳಲ್ಲಿ ಗಳಿಸಿದ ಲಕ್ಷಾವಧಿ ರೂಪಾಯಿಗಳ ಸಂಪತ್ತನ್ನು ಅವನ ಕೈಗೆ ಕೊಟ್ಟು ನಮಸ್ಕಾರ ಮಾಡಿ ಹೊರಟು ಹೋದನು. ಸನ್ಯತ್‌ಸೇನನ ಭಾಷಣವು ಅಷ್ಟು ಪರಿಣಾಮಕಾರಿಯೂ ಉದ್ಬೋಧಕವೂ ಇರುತ್ತಿತ್ತು.

ಸನ್ಯತ್‌ಸೇನನ ಪ್ರಯತ್ನಕ್ಕೆ ಕೊನೆಗೆ ತಕ್ಕ ಫಲವು ದೊರೆಯಿತು. ೧೯೧೧ನೆಯ ಇಸ್ವಿಯ ಡಿಸೆಂಬರ ತಿಂಗಳ ೨೯ನೆಯ ತಾರೀಖಿನ ದಿನ ಚೀನದ ರಾಷ್ಟ್ರವು ರಾಜಸತ್ತೆಯನ್ನು ಮುರಿದೊಗೆದು ಪ್ರಜಾಸತ್ತಾತ್ಮಕ ರಾಜ್ಯವೆಂದು ಸಾರಲ್ಪಟ್ಟಿತು. ನಾಂಕಿಂಗದಲ್ಲಿ ಕರೆದ ರಾಷ್ಟ್ರೀಯ ಮಹಾಸಭೆಯಲ್ಲಿ ಸನ್ಯತ್ ಸೇನನು ಅದರ ಮೊದಲನೆಯ ಅಧ್ಯಕ್ಷನಾಗಿ ಆರಿಸಲ್ಪಟ್ಟನು. ೪೦ ಕೋಟಿ ಚೀನೀ ಜನರು ಆನಂದದಲ್ಲಿ ತೇಲಿದ ಆ ದಿನವು ಆ ದೇಶದ ಇತಿಹಾಸಪಟ್ಟಿಯಲ್ಲಿ ರಕ್ತಾಕ್ಷರಗಳಿಂದ ಬರೆದಿಡಲ್ಪಟ್ಟಿದೆ.

ಸನ್ಯತ್‌ಸೇನನಿಗೆ ಎಳ್ಳಷ್ಟೂ ಸ್ವಾರ್ಥವಿರಲಿಲ್ಲ. ತಾನು ಅಧ್ಯಕ್ಷಪದದ ಆಶೆಗೆ ಒಳಗಾಗಿ ಪ್ರಜೆಗಳ ಇಚ್ಛೆಯ ವಿರುದ್ಧ ಯಾವ ಕೆಲಸವನ್ನೂ ಮಾಡಲಾರೆನೆಂದು ಹೇಳುವನು. ಚೀನವು ಸ್ವತಂತ್ರವಾದರೂ ಅದರಲ್ಲಿ ಇನ್ನೂ ಐಕ್ಯವುಂಟಾಗಿರಲಿಲ್ಲ. ತನ್ನ ಅಧಿಕಾರಿಗಳಲ್ಲಿ ಯಾರಾದರೂ ಅಧ್ಯಕ್ಷಪದವನ್ನು ಅಪೇಕ್ಷಿಸಿದರೆ, ಅವರು ಅಧ್ಯಕ್ಷರಾಗುವದರಿಂದ ಚೀನ ದೇಶದಲ್ಲಿ ಐಕ್ಯವುಂಟಾಗಿ ಅದು ಹಿತವು ಸಾಧಿಸುವಂತಿದ್ದರೆ, ತಾನು ಬೇಕಾದಾಗ ಅಧ್ಯಕ್ಷಸ್ಥಾನದಿಂದ ಇಳಿದು ಬಂದು ಒಬ್ಬ ಸಾಮಾನ್ಯ ದೇಶಸೇವಕನಂತೆ ನಡೆದುಕೊಳ್ಳುವೆನೆಂದು ಆಡುವನು

ಒಂದೆರಡು ಸಂದರ್ಭಗಳಲ್ಲಿ ಹೀಗೆ ಮಾಡಿಯೂ ತೋರಿಸಿದ್ದಾನೆ. ದೇಶದ ಅಧಿಕಾರವು ಒಕ್ಕಲಿಗರ ಮತ್ತು ಕೂಲಿಕಾರರ ಕೈಯಲ್ಲಿರಬೇಕು, ಎಂಬ ಸಮಾಜ ಸತ್ತ್ವವಾದದ ಮೇಲೆ ಈತನ ವಿಶ್ವಾಸವಿದ್ದಿತು.

"ಸನ್ಯತ್‌ಸೇನನು ನಿರ್ಭೀತನು, ನಿಸ್ವಾರ್ಥಿಯು, ಇವನು ಎಂದೂ ಕರ್ತವ್ಯ ಪರಾಙ್ಮುಖನಾಗಲಾರನು. ಆತ್ಮ ಪ್ರಶಂಸೆಯಾಗಲಿ ಆತ್ಮಪ್ರತಿಷ್ಠೆಯಾಗಲಿ ಇವನಿಗೆ ಎಳ್ಳಷ್ಟೂ ಸೇರುವುದಿಲ್ಲ. ಸತ್ಯ, ಸರಳತನ, ತಾನೊಬ್ಬ ದೇಶಸೇವಕನಿಗಿಂತ ಯಾವರೀತಿಯಿಂದಲೂ ಹೆಚ್ಚಿನವನಲ್ಲ ಎಂಬ ಉಚ್ಚ ಭಾವನೆ ಇವುಗಳಿಂದ ಇವನು ವಂದ್ಯನಾಗಿದ್ದಾನೆ." ಎಂಬ ಸರಳ ಮಾತುಗಳಿಂದ ಆತನ ಪರಮ ಸ್ನೇಹಿತನಾದ ಜೇಮ್ಸ್ ಕಂಟಲಿಯು ಈ ಚೀನದ ಕ್ರಾಂತಿಪುರುಷನನ್ನು ವರ್ಣಿಸಿದ್ದು ಯಥಾರ್ಥವಾಗಿದೆ.

ಮರಣಕಾಲದಲ್ಲಿ (ಮಾರ್ಚ ೧೯೨೫) ಈತನಿಗೆ ೫೫ ವರ್ಷಗಳಾಗಿದ್ದುವು. ರಾಜಕೀಯ ಆಂದೋಲನದಲ್ಲಿ ತೊಡಗಿಕೊಂಡು ಮೊದಲಿನ ೨೦ ವರ್ಷಗಳವರೆಗೆ ಅನುಭವಿಸಿದ ಕಷ್ಟ ಪರಂಪರೆಗಳಿಂದಲೂ ಮುಂದಿನ ಹದಿನೈದು ವರ್ಷಗಳಲ್ಲಿ ಅಧಿಕಾರಸ್ಥಾನದಲ್ಲಿದ್ದುಕೊಂಡು ಚೀನದ ಐಕ್ಯ ಉದ್ಧಾರಗಳಿಗಾಗಿ ಪ್ರಯತ್ನಿಸುವಾಗ ತಾಳಿದ ಅವಿಶ್ರಾಂತ ಶ್ರಮದಿಂದಲೂ ಸವೆದು ಜೀರ್ಣವಾದ ಶರೀರವನ್ನು ತೊಲಗಿ ಈ ಮಹಾಪುರುಷನ ಆತ್ಮವು ತನ್ನ ದೇಶದ ಸೇವೆಗಾಗಿ ಹೊಸ ಶರೀರವನ್ನು ಧರಿಸಿ ಬರಲು ಹೋಗಿದೆಯಂತೆ!

ಪ್ರಕಟನೆ

ದಕ್ಷಿಣಭಾಗದೊಳಗಿನ ಎಲ್ಲ ಮಾಧ್ಯಮಿಕ ಶಾಲೆಗಳ ಮುಖ್ಯ ಚಾಲಕರಿಗೆ

ತಮ್ಮ ಮಕ್ಕಳನ್ನು ಪರೀಕ್ಷಿಸಿ ಅವರು ಯಾವ ಇಯತ್ತೆಗೆ ಸೇರಲು ಯೋಗ್ಯರಿರುವರೋ ಆ ಇಯತ್ತೆಗೆ ಹೆಸರು ಹಚ್ಚಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡಬೇಕೆಂಬ ಪ್ರಾರ್ಥನೆಯ ಅರ್ಜಿಗಳು ಬಹುಜನ ಪಾಲಕರಿಂದ ಪ್ರತಿವರ್ಷ ಜೂನ್ ತಿಂಗಳಲ್ಲಿ ನಮ್ಮ ಕಚೇರಿಗೆ ಹೇರಳವಾಗಿ ಬರುತ್ತಿರುವದು ನಮ್ಮ ಹಿಂದಿನ ಅನುಭವದ ಮಾತು. ಮತ್ತು ಈ ತರದ ಪರೀಕ್ಷೆಯ ಕೆಲಸವು ಹೆಸರಿಗೆ ಮಾತ್ರ ನಡೆ ನಡೆಯುವದೇ ಹೆಚ್ಚೆಂಬುದು ಕೂಡ ಕಂಡುಬಂದಿದೆ. ಮೇಲಾಗಿ ಹೀಗೆ ಸುಮಾರು ಒಂದು ತಿಂಗಳವರೆಗೆ ದಿನ ದಿನಕ್ಕೆ ಬಂದ ಬಂದ ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನೇ

ಪರೀಕ್ಷಿಸುವದು ಕೂಡ ಆಯಾ ಶಾಲೆಗಳ ಮುಖ್ಯಾಧ್ಯಾಪಕರಿಗೆ ತುಂಬ ತೊಂದರೆಯು ಕೆಲಸವಾಗುವದು.

೨. ಶಾಲೆಗಳ ಮುಖ್ಯಾಧ್ಯಾಪಕರಿಗೆ ಬರುವ ಈ ತೊಂದರೆಯನ್ನು ದೂರ ಸೂಡುವ ಮತ್ತು ನಮ್ಮ ಕಚೇರಿಗೆ ಬರುವ ಈ ಸಂಬಂಧದ ಕಾಗದಪತ್ರಗಳ ವ್ಯವಹಾರವನ್ನು ಅದಷ್ಟು ಕಡಿಮೆಮಾಡುವ ಧೋರಣೆಯಿಂದ ಖಾಸಗಿ ರೀತಿಯಿಂದ ಇಲ್ಲವೆ ಸರಕಾರದಿಂದ ಮಾನ್ಯತೆ ಪಡೆಯದೆ ಇರುವ ಶಾಲೆಗಳಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ತಾವು ಮುಂದೆ ಜೂನ್ ತಿಂಗಳಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವ ಶಾಲೆಗಳ ವಾರ್ಷಿಕ ಪರೀಕ್ಷೆಯು ನಡೆಯುವ ವೇಳೆಯಲ್ಲಿಯೇ ಪರೀಕ್ಷೆಗೆ ಕೂಡ್ರಬೇಕೆಂದು ನಿರ್ಣಯಿಸಲೇಬೇಕಾಯಿತು. ವಿದ್ಯಾರ್ಥಿಗಳು ಯಾವ ಶಾಲೆಯಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳುವರೋ ಅದೇ ಶಾಲೆಯಲ್ಲಿಯೇ ಅವರು ಮುಂದೆ ಹೆಸರು ಹಚ್ಚಿಸಿಕೊಳ್ಳಬೇಕಾಗುವದೆಂಬದನ್ನು ಲಕ್ಷ್ಯದಲ್ಲಿಟ್ಟಿರಬೇಕು. ಸರಕಾರದಿಂದ ಮಾನ್ಯತೆ ಪಡೆದಿರುವ ಶಾಲೆಯ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳದಿರುವ ವಿದ್ಯಾರ್ಥಿಗಳನ್ನು ಇಂಥ ಮಾನ್ಯತೆ ಪಡೆದ ಯಾವ ಶಾಲೆಯಲ್ಲಿಯೂ ಹೆಸರು ಹಚ್ಚಿಕೊಳ್ಳಲಾಗದು. ಬೇನೆ ಬೀಸರಿಕೆಗಳಂಥ ಅನಿವಾರ್ಯ ಕಾರಣಗಳಿಂದ ಪರೀಕ್ಷೆಗೆ ಕೂಡ್ರಲು ಸಾಧ್ಯವಾಗದೆ ನಮ್ಮ ವಿಶೇಷ ಅಪ್ಪಣೆಯನ್ನು ಪಡೆದುಕೊಂಡ ವಿದ್ಯಾರ್ಥಿಗಳ ಮಾತು ಬೇರೆ.

೩. ಶಾಲೆಗಳ ಮುಖ್ಯ ಚಾಲಕರು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಯ ತಾರೀಖುಗಳನ್ನು ಸ್ಥಾನಿಕ ವೃತ್ತಪತ್ರಿಕೆಗಳು ಮೊದಲಾದ ಸಾಧನಗಳ ಮೂಲಕ ಎಲ್ಲ ಜನರಿಗೂ ತಿಳಿಯುವಂತೆ ಪ್ರಕಟಿಸಬೇಕೆಂದು ಕೇಳಿಕೊಳ್ಳಲಾಗಿದೆ.

೪. ಇಂಥ ವಿದ್ಯಾರ್ಥಿಗಳನ್ನು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಗೆ ಕೂಡ್ರಿಸಿಕೊಳ್ಳಲಿಕ್ಕೆ ಶಾಲೆಗಳ ಮುಖ್ಯ ಚಾಲಕರು ಹೆಚ್ಚಿನ ಫೀಯನ್ನು ತೆಗೆದುಕೊಳ್ಳಲಾಗದು. ಆದರೆ ಈ ಸಮಯದಲ್ಲಿ ಹೆಸರು ಹಚ್ಚುವ ಫೀ ಮೊದಲಾದವನ್ನು ಬಿಟ್ಟು ಕಾಗದ ಮಸಿ ಮೊದಲಾದ ಉಪಕರಣಗಳಿಗೆ ಹತ್ತುವಷ್ಟೇ ಯೋಗ್ಯ ಫೀಯನ್ನು ಮಾತ್ರ ಅವರಿಂದ ತೆಗೆದುಕೊಳ್ಳಲು ಅಡ್ಡಿಯಿಲ್ಲ. ಹೀಗೆ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳನ್ನು ಜೂನ್ ತಿಂಗಳಲ್ಲಿ ಪ್ರವೇಶ ಫೀ ಮತ್ತು ಆ ತಿಂಗಳ ಫೀ ಇವನ್ನು ತೆಗೆದುಕೊಂಡು ಹೆಸರು ಹಚ್ಚಿಕೊಳ್ಳತಕ್ಕದ್ದು.

೬-೧೨-೧೯೪೦

S. R. Tawde,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್.

ಧಾರವಾಡ ಡಿ. ಸ್ಕೂ. ಬೋರ್ಡಿನ ಕೆಲವು ಮಹತ್ವದ ನಿರ್ಣಯಗಳು.

ನಂ. ೧೪೦— ಯಾವ ಊರಲ್ಲಿ ಸರಕಾರೀ ಬೀಳು ನೆಲವುಂಟೋ ಆಂಥಲ್ಲಿ ಶಾಲೆಯ ಮಕ್ಕಳ ಆಟದ ಬಯಲಿಗಾಗಿ ದೊರಕಿಸಿಲಿಕ್ಕೆ ಶಕ್ಯವಿದ್ದಲ್ಲಿ ಅದನ್ನು ದೊರಕಿಸಿರುತ್ತದೆ. ಆದರೆ ಖಾಸಗೀ ಮೂಲಕರ ಸ್ಥಳಗಳನ್ನು ಬಾಡಿಗೆಯಿಂದ ತೆಗೆದುಕೊಳ್ಳಲು ಈ ಬೋರ್ಡಿಗೆ ಆರ್ಥಿಕ ಅನುಕೂಲತೆಯಿರುವದಿಲ್ಲ. ಈ ವಿಷಯದಲ್ಲಿ ಹೆಚ್ಚಿಗೆ ಅನುಕೂಲತೆಗಳನ್ನು ಸರಕಾರದವರಿಂದ ದೊರಕಿಸಿಕೊಡಲು ಮೆಹೆರ್ಬಾನ್ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್‌ರವರಿಗೆ ವಿನಂತಿ ಮಾಡಿಕೊಳ್ಳತಕ್ಕದ್ದು.

ನಂ. ೧೪೮— ಸನ್ ೧೯೪೦-೧೯೪೧ ನೆಯ ವರುಷದ ಜನರಲ್ ಸ್ಕಾಲರಶಿಪ್ಪುಗಳನ್ನು ಬಂದುಮಾಡಬೇಕು. ಶೆಡ್ಯೂಲ್ಡ ಕ್ಲಾಸ ಮತ್ತು ಬ್ಯಾಕವರ್ಡ ಕ್ಲಾಸದವರಿಗಾಗಿ ಮಾತ್ರ ಪ್ರತ್ಯೇಕವಾಗಿ ೨೦೦ ರೂಪಾಯಿಗಳಷ್ಟು ಹಣವನ್ನು ಕೊಡತಕ್ಕದ್ದು.

ನಂ. ೧೪೨— ಮೆಹರ್ಬಾನ್ ಡೈರೆಕ್ಟರ ದೊರೆಗಳ ಪತ್ರದ ಪ್ರಕಾರ ಪ್ರಾಥಮಿಕ ಶಿಕ್ಷಣ ಪ್ರಸಾರದ ಹೆಚ್ಚಿನ ಯೋಜನೆಗಳನ್ನು ಕೈಕೊಳ್ಳಲು ಆರ್ಥಿಕ ತೊಂದರೆಯ ಮೂಲಕ ಈ ಬೋರ್ಡಿಗೆ ಸಾಧ್ಯವಿಲ್ಲದಾಗಿದೆ. ಅದಕ್ಕಾಗಿ ಹೆಚ್ಚಿಗೆ ಹಣ ಕೊಡಬೇಕೆಂದು ಲೋಕಲ ಅಥಾರಿಟಿಯವರಿಗೆ ಕೇಳಿಕೊಳ್ಳಬೇಕು.

ನಂ. ೧೦೬— ಏಳನೂರಕ್ಕಿಂತ ಹೆಚ್ಚು ಜನವಸತಿಯುಳ್ಳ ಈ ಜಿಲ್ಲೆಯೊಳಗಿನ ಬಹುಶಃ ಎಲ್ಲ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಆರಂಭವಾಗಿರುತ್ತವೆ. ಅವುಗಳಲ್ಲಿಯ ಅನೇಕ ಶಾಲೆಗಳಿಗೆ ಮಾನ್ಯತೆಯನ್ನು ಕೊಡಲಾಗಿದೆ. ಆದರೆ ಹಣದ ಅನಾನುಕೂಲತೆಯಿಂದ ಅವುಗಳನ್ನು ನಮ್ಮ ಆಡಳಿತೆಯ ಕೆಳಗೆ ಸಂಪೂರ್ಣವಾಗಿ ತೆಗೆದುಕೊಳ್ಳಲಿಕ್ಕೆ ಇನ್ನೂ ಶಕ್ಯವಾಗಿಲ್ಲವೆಂದು ಮೆ. ಡಾಯರೆಕ್ಟರ ದೊರೆಗಳವರಿಗೆ ತಿಳುಹಿಸತಕ್ಕದ್ದು.

ನಂ. ೨೧೩— ಮೆ. ಚೇಅರಮನ್ನರು ಕರ್ನಾಟಕದ ಸ್ಕೂಲಬೋರ್ಡುಗಳ ಎರಡನೆಯ ಸಭೆಯನ್ನು ಧಾರವಾಡ ಡಿ. ಸ್ಕೂ. ಬೋರ್ಡಿನ ಪರವಾಗಿ

ಕರೆಯಬೇಕು. ಈ ವಿಷಯದಲ್ಲಿ ಅವಶ್ಯವಿದ್ದ ಕಾರ್ಯಗಳನ್ನು ಕೈಕೊಳ್ಳ ತಕ್ಕದ್ದು.

ನಂ. ೨೨೭— ಏ. ಅಮ್ಮಿನಭಾವಿಯವರು ಬರೆದ 'ಶಿಕ್ಷಣದ ಮೂಲ ತತ್ವಗಳು' ಎಂಬ ಪುಸ್ತಕವನ್ನು ಕೊಂಡುಕೊಳ್ಳುವ ವಿಷಯವನ್ನು, ಸಾಲೆಗಳ ಬಗ್ಗೆ ಉಳಿದ ಪುಸ್ತಕವನ್ನು ಕೊಂಡುಕೊಳ್ಳುವಾಗ ವಿಚಾರಮಾಡತಕ್ಕದ್ದು.

ನಂ. ೨೩೭—ಪ್ರಾಥಮಿಕ ಶಾಲೆಗಳಲ್ಲಿ ವರ್ಷಾರಂಭದ ಎರಡು ತಿಂಗಳುಗಳಲ್ಲಿ ಮಾತ್ರ ಸಾಮಾನ್ಯವಾಗಿ ಚಿಕ್ಕ ಮಕ್ಕಳನ್ನು ಹೊಸದಾಗಿ ತೆಗೆದುಕೊಳ್ಳತಕ್ಕದ್ದು. ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ನಾಲ್ಕು ತಿಂಗಳ ವರೆಗೆ ತೆಗೆದುಕೊಳ್ಳ ಬೇಕು. ವಿಶಿಷ್ಟ ಪರಿಸ್ಥಿತಿಯಲ್ಲಿ ಮೆ. ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಒಪ್ಪಿಗೆಯನ್ನು ಮುಂಗಡವಾಗಿ ತೆಗೆದುಕೊಂಡು ಹೆಡ್‌ಮಾಸ್ತರರು ಪ್ರಾರಂಭದ ಆರು ತಿಂಗಳ ವರೆಗೂ ವಿದ್ಯಾರ್ಥಿಗಳನ್ನು ಸಾಲೆಗೆ ತೆಗೆದುಕೊಳ್ಳಬಹುದು.

ನಂ. ೨೪೦— ಸನ್ ೧೯೪೦-೪೧ ನೆಯ ವರುಷದಲ್ಲಿ ಸ್ಕಾಲರಶಿಪ್ಪುಗಳಿಗಾಗಿ ಮಂಜೂರಾದ ಹಣದಲ್ಲಿಯ ೧೬೦೦ ರೂಪಾಯಿಗಳಿಂದ ಹೆಚ್ಚಿಗೆ ಬೇಕಾದ ಪುಸ್ತಕ -ನಕಾಶ ಮೊದಲಾದವುಗಳನ್ನು ಕೊಂಡುಕೊಳ್ಳಬೇಕು.

ನಂ. ೨೫೭— ಏಳುನೂರಕ್ಕಿಂತ ಹೆಚ್ಚಿಗೆ ಜನವಸತಿಯುಳ್ಳ ಹಳ್ಳಿಗಳಲ್ಲಿಯ ಹೊಸ ಶಾಲೆಗಳಿಗೆ ಸಹಾಯ ಮಾಡುವದು ಆರ್ಥಿಕ ಅನಾನುಕೂಲತೆಗಳ ಮೂಲಕ ಈ ಬೋರ್ಡಿಗೆ ಶಕ್ಯವಿಲ್ಲೆಂದು ಮೆ. ಎ. ಇ. ದಕ್ಷಿಣಭಾಗ ಧಾರವಾಡ ಇವರಿಗೆ ತಿಳಿಸತಕ್ಕದ್ದು.

ನಂ. ೨೫೮— ಜನಗಣನೆಯ ಕೆಲಸದ ಮೇಲಧಿಕಾರಿಗಳಿಗೆ ಡಿ. ಸ್ಕೂ. ಬೋರ್ಡಿನ ನೌಕರರ ಸಹಾಯವು ಬೇಕಾದರೆ ಒಪ್ಪಿಗೆಯನ್ನು ಕೊಡುವ ಅಧಿಕಾರವನ್ನು ಮೆ. ಎಡ್ಮಿನಿಸ್ಟ್ರೇಟಿವ್ಹ ಆಫೀಸರರಿಗೆ ಕೊಡಬೇಕು.

ನಂ. ೨೬೦— ಪ್ರಾಥಮಿಕ ಶಾಲೆಗಳಿಗಾಗಿ ತಿದ್ದುಪಡಿಯಾದ ಹೊಸ ಅಭ್ಯಾಸಪತ್ರಿಕೆಯ ಪ್ರತಿಗಳನ್ನು ಪೂರೈಸುವದಕ್ಕಾಗಿ ಯರವಡಾ ಪ್ರಿಝನ್ ಪ್ರೆಸ್ ಪುಣೆ ಇವರಿಗೆ ೨೪೭ ರೂಪಾಯಿಗಳನ್ನು ಕೊಡತಕ್ಕದ್ದು.

ನಂ. ೨೬೭— ಈ ಭಾಗದೊಳಗಿನ ಲಮಾಣಿ ಜನರು ಸಾಮಾಜಿಕ ಹಾಗೂ ಶೈಕ್ಷಣಿಕ ದೃಷ್ಟಿಯಿಂದ ತೀರ ಹಿಂದುಳಿದವರಿರುವದರಿಂದ ಅವರನ್ನು ಹಿಂದುಳಿದ ವರ್ಗದಲ್ಲಿ ಎಣಿಸತಕ್ಕದ್ದು.

ಪತ್ರಗಳ ಸಾರಾಂಶ

ತೇರಗಾವಿ (ಕಾರವಾರ ಜಿಲ್ಲೆ) "ಈ ಊರ ಶಾಲೆಯಲ್ಲಿ ಒಕ್ಕಲತನದ ಒಲವಿನ ವರ್ಗಗಳಿವೆ. ಒಂದೆರಡು ವರುಷಗಳ ಹಿಂದೆ ಎಲ್ಲ ವರ್ಗಗಳಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿತ್ತು. ಈ ವರುಷ ವಿ. ಆರ್. ವಿ. ಗಾವಕರ ಇವರು ಹೆಡ್‌ಮಾಸ್ತರರಾಗಿ ಬಂದು ಬಹಳೇ ಪ್ರಯತ್ನ ಮಾಡಿದುದರಿಂದ ವಿದ್ಯಾರ್ಥಿಗಳ ಸಂಖ್ಯೆಯು ಸಾಕಷ್ಟು ಹೆಚ್ಚಾದುದಲ್ಲದೆ ತೋಟದ ಕೆಲಸವೂ ಚೆನ್ನಾಗಿ ಸಾಗಿದೆ. ಮೇಲಧಿಕಾರಿಗಳು ಇದೆಲ್ಲವನ್ನು ಕಂಡು ಸಮಾಧಾನ ವ್ಯಕ್ತ ಮಾಡಿದ್ದಾರೆ. ಈಗ ಎರಡು ಮೂರು ತಿಂಗಳುಗಳ ಹಿಂದೆ ಮೆ॥ ಹಳ್ಳೀಕೇರಿಯವರು ಶಾಲೆಯನ್ನು ನೋಡಿ ಸಂತೋಷಭರಿತರಾಗಿ ೫ ರೂಪಾಯಿಗಳನ್ನು ಬಕ್ಷೀಸ ಎಂದು ಕೊಟ್ಟರು. ಇದೆಲ್ಲ ಯಶಸ್ಸಿಗೆ ಹೆಡ್‌ಮಾಸ್ತರ ಹಾಗೂ ಅವರ ಅಸಿಸ್ಟಂಟರ ಪ್ರಯತ್ನಗಳೇ ಕಾರಣವಾಗಿರುವವು." ಎಂದು ಅಲ್ಲಿಯ ಸರಪಂಚ ರಾದ ಶ್ರೀಮಾನ್ ಮಲ್ಲಪ್ಪನವರು ತಿಳಿಸಿರುವರು.

ಪ್ರಕಟನೆ

ಗಣಿತದ ಇನ್ಸ್ಟಿಯು ಮಾರ್ಚ ತಿಂಗಳ ೫ನೆಯ ತಾರೀಖು ಬುಧವಾರ ಪ್ರಾರಂಭವಾಗಿ ಮುಂದಿನ ದಿನಗಳಲ್ಲಿ ನಡೆಯಲಿರುವ ಹೆಣ್ಣುಮಕ್ಕಳ ಕನ್ನಡ ಪ್ರಾ॥ ಸ್ಕೂ॥ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯು ಕೇವಲ ಹೊಸ ಅಭ್ಯಾಸ ಕ್ರಮದಂತೆಯೇ ನಡೆಯುವದು. ಕಳೆದ ವರ್ಷದಂತೆ ಹಳೆಯ ಅಭ್ಯಾಸಕ್ರಮ ದಲ್ಲಿಯೂ ನಡೆಯುವದಿಲ್ಲ.

ಪುಸ್ತಕ ಪರಿಚಯ

ಗಣಿತದ ವರ್ಗದ ಸಾಮಾನ್ಯವಿಜ್ಞಾನ	..	೦-೨-೦
೨-೩ನೆಯ ಇಯತ್ತೆಗಳ ಸಾಮಾನ್ಯವಿಜ್ಞಾನ	..	೦-೩-೦
೪ನೆಯ ವರ್ಗದ ಸಾಮಾನ್ಯವಿಜ್ಞಾನ	..	೦-೩-೦

ಶ್ರೀ. ಚಿ. ಶ್ರೀ. ಕುಲಕರ್ಣಿ, ಬಿ. ಎ. ಇವರು ಬರೆದು ಶ್ರೀ. ಹ. ರಾ. ಸಾಮಾವಳಿ ಇವರು ಪ್ರಕಟಿಸಿರುವ ಮೇಲೆ ಹೇಳಿದ ಮೂರು ಪುಸ್ತಕಗಳು ನಮ್ಮ ಕಡೆಗೆ ಬಂದಿವೆ. ಅವುಗಳ ವಿಮರ್ಶೆಯನ್ನು ಅನುಕೂಲವಾದಾಗ ಪ್ರಕಟಿಸುವೆವು.

ಪ್ರ ಕ ಟ ನೆ

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು.

(ಕಳೆದ ಸನ್ ೧೯೪೦ನೆಯ ಸಪ್ಟಂಬರ ತಿಂಗಳದ ಸಂಚಿಕೆಯಿಂದ ಮುಂದೆ ಸಾಗಿದ್ದು)

ಅ. ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರ
೧೧೬	ಶಿಕ್ಷಣದ ಮೂಲ ತತ್ವಗಳು ೧ನೆ. ಆ. ೧೯೩೯	ಸೆಕ್ರೆಟರಿ ಪ್ರಾಥಮಿಕಶಿಕ್ಷಣ ಪ್ರಸಾರ ಮಂಡಲ ಧಾರವಾಡ	೧– ೦–೦	ಟ್ರೇನಿಂಗ ಸಂಸ್ಥೆಗಳಲ್ಲಿ ಪಠ್ಯಪುಸ್ತಕ
೧೧೪	ಗ್ರೇಟ ಬ್ರಿಟನ್ನಿನ ಚರಿತ್ರೆ ಪುಸ್ತಕ ೨ ಭಾಗ ೨ ಆ. ೧. ೧೯೩೧	ಮೆಸರ್ಸ ಲಾಂಗಮನ್ಸ ಗ್ರೀನ ಅ್ಯಂಡ ಕಂಪನಿ, ಮುಂಬಯಿ.	೨– ೦–೦	ಮಾಧ್ಯಮಿಕ ಶಾಲೆಗಳಲ್ಲಿ ಪಠ್ಯಪುಸ್ತಕ
೧೧೯	ಗರಗದ ಶ್ರೀ. ಮಡಿವಾಳ ಸ್ವಾಮಿಗಳ ಚರಿತ್ರೆ ೧ನೆ ಆ. ೧೯೩೭	ಶ್ರೀ. ದುರದುಂಡೇಶ್ವರ ಮಠ ಅರಭಾವಿ ಜಿ. ಬೆಳಗಾವಿ	೦– ೮–೦	ಪ್ರಾ. ಮಾ. ಟ್ರೇ. ಶಿ. ವಾ.
೧೧೦	ನೂತನ ಸಮಾಜನೀತಿ ಪುಸ್ತಕ ೪ ೧ನೆ ಆವೃತ್ತಿ ೧೯೩೯	ಮ್ಯಾನೇಜರ ಬಾಸೆಲ್ ಮಿಶನ್ ಬುಕ್ ಡಿಪೋ ಮಂಗಳೂರ	೦– ೩–೬	ಪ್ರಾ.ಮಾ.ಟ್ರೇ ವಿ.ಶಿ.ವಾ.
೧೧೧	ನೂತನ ಸಮಾಜನೀತಿ ಪುಸ್ತಕ ೫ ೧ನೆ ಆವೃತ್ತಿ ೧೯೩೯	ಸದರ	೦– ೪–೦	ಸದರ
೧೧೨	ನೂತನ ಸಮಾಜನೀತಿ ಪುಸ್ತಕ ೬ ೧ನೆ ಆವೃತ್ತಿ ೧೯೩೯	ಸದರ	೦– ೪–೬	ಸದರ

೧೨೩	ನೂತನ ಸಮಾಜನೀತಿ ಪುಸ್ತಕ ೭ ನೆ ಆವೃತ್ತಿ ೧೯೩೯	ಸದರ	೦– ೫–೦	ಸದರ
೧೨೪	ನೂತನ ಸಮಾಜನೀತಿ ಪುಸ್ತಕ ೮ ನೆ ಆವೃತ್ತಿ ೧೯೩೯	ಸದರ	೦– ೬–೦	ಸದರ
೧೨೫	ಕಥಾಗುಚ್ಛ (೧೯೪೦)	ಪ್ಯಾಟ ಶ್ಯಾಮರಾಯರು. ಪ್ರೊಪ್ರಾಯಟರ ಕಥಾಕುಂಜ ಗ್ರಂಥಭಾಂಡಾರ ದೇಶ– ಪಾಂಡೆ ಓಣಿ ಬೆಳಗಾವಿ	೦– ೮–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೧೨೬	ಚಿತ್ರಮಯ ಬಾಲಬೋಧೆ ೨ನೆ ಆ. ೧೯೪೦	ವಿದ್ಯಾವಿಲಾಸ ಬುಕ್ ಡಿಪೋ ಗದಗ	೦– ೧–೯	ಪ್ರಾಥಮಿಕ ಶಾಲೆಗಳಲ್ಲಿ ಪಠ್ಯಪುಸ್ತಕ
೧೨೭	ಆಹಾರ ಮೀಮಾಂಸೆ ೧೯೩೯	ಸೆಕ್ರೆಟರಿ ಅಖಿಲಭಾರತ ಚರಖಾಸಂಘ ಕರ್ನಾಟಕ ಶಾಖೆ ಹಳೆಯಹುಬ್ಬಳ್ಳಿ	೦– ೬–೦	ಪ್ರಾ. ಮಾ. ಟ್ರೇ. ವಿ. ಶಿ. ವಾ.
೧೨೮	ಶರೀರಶಿಕ್ಷಣ ೧ನೆ ಆ. ೧೯೪೦	ನಾಡಿಗೇರ ಕೃಷ್ಣರಾಯರು ವಿದ್ಯಾಪ್ರೀಯರಿಯಾ ಹೈಸ್ಕೂಲ ಧಾರವಾಡ	೦– ೯–೦	ಪ್ರಾ. ಮಾ. ಟ್ರೇ. ಶಿ. ವಾ.
೧೨೯	ಕನ್ನಡ ಸುಬೋಧಿನಿ ೩ನೆ ಆ. ೧೯೩೭	ಶಂಭು ತಿಮ್ಮಣ್ಣ ಹೆಗಡೆ, ಮಾಸ್ತರ ಕ. ಗಂ. ಮ. ಶಾಲೆ ಕುಮಟಾ	೦– ೧–೬	ಪ್ರಾ. ಶಿ. ವಾ.
೧೩೦	ಆರು ಕಥೆಗಳು ೧ನೆ ಆ. ೧೯೩೯	ನಾರಾಯಣ ಹೇಟಕರ ಕಥಾಕುಂಜ ಗ್ರಂಥ ಮಾಲೆ ಹನುಮಾನ ಬೀದಿ ಬೆಳಗಾವಿ	೦–೧೨–೦	ಪ್ರಾ. ಮಾ. ಟ್ರೇ. ಶಿ. ವಾ.

ಆ. ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರ.
೧೩೧	ಶ್ರೀ. ಪುರಾಣಿಕ ಭಾಗೀರಥೀಬಾಯಿಯವರ ಚರಿತ್ರೆ ೧ನೆ ಆ. ೧೯೪೦	ಎಲ್. ಬಿ. ಮಳೆಬೆನ್ನೂರ ಸೆಕ್ರೇಟರಿ ವನಿತಾಸೇವಾ ಸಮಾಜ ಧಾರವಾಡ	೦– ೮–೦	ಪ್ರಾ. ಮಾ. ಟ್ರೇ. ವಿ. ವಾ.
೧೩೨	ಮುತ್ತುಗಾರ ೧ನೆ ಆ.	ಸ್ವಾಮಿ ನಾಯಿಕ. ನೃಪತುಂಗ ವಿದ್ಯಾಲಯ ಹೈದ್ರಾಬಾದ ಡೆಕ್ಕನ್	೦– ೪–೦	ಪ್ರಾ. ವಿ. ವಾ.
೧೩೩	ಪರ್ಧಾಯಾತ್ರೆ ೧೯೩೯	ಎಸ್. ಜೀ. ಕುಲಕರ್ಣಿ ಸಾಧನಪ್ರೆಸ್ ಧಾರವಾಡ	೧– ೦–೦	ಪ್ರಾ.ಮಾ.ಟ್ರೇ.ವಿ.ಶಿ ವಾ.
೧೩೪	ಮಾದರಿಯ ನಿಬಂಧಗಳು ೧೯೪೦	ಕೇ. ಎಸ್. ಕುಲಕರ್ಣಿ ಬುಕ್ ಸೇಲರ ಹುಬ್ಬಳ್ಳಿ	೦– ೪–೦	ಪ್ರಾ. ಶಿ. ವಾ.
೧೩೫	ಸಾಹಿತ್ಯ ಸಂಸ್ಕೃತಿ ದರ್ಶನ ೧೯೩೯	ಪ್ರೋ. ಎಸ್. ಎಸ್. ಮಾಳವಾಡ ಕರ್ನಾಟಕ ಕಾಲೇಜ ಧಾರವಾಡ.	ಸಾದಾ ೧– ೮–೦ ಉತ್ತಮ ೨– ೦–೦	ಮಾ. ಟ್ರೇ. ವಿ. ವಾ. ಪ್ರಾ. ಮಾ. ಟ್ರೇ. ಶಿ. ವಾ.
೧೩೬	ಕನ್ನಡ ಗದ್ಯಮಾಲೆ ೨ನೆ ಆ. ೧೯೪೦	ಸ್ಟೂಡಂಟ್ಸ ಪಿನ್ ಬುಕ್ ಡಿಪೊ ಧಾರವಾಡ	ಸಾದಾ ೧– ೦–೦ ಉತ್ತಮ ೧– ೮–೦	ಪ್ರಾ. ಮಾ. ಟ್ರೇ. ಪಠ್ಯಪುಸ್ತಕ
೧೩೭	ಹಿಂದುಸ್ತಾನದ ಹೊಸ ರಾಜ್ಯಘಟನೆ ೧ನೆ ಆ. ೧೯೩೯	ವ್ಹಿ. ಬಿ. ನಾಯಿಕ ಏಡಿಟರ ಕರ್ನಾಟಕ ವೈಭವ ವಿಜಾಪುರ	..	ಪ್ರಾ.ಮಾ.ಟ್ರೇ.ವಿ.ಶಿ.ವಾ.

ಜಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ರಾಘವೇಂದ್ರರಾವ ಶೇಷಗಿರಿರಾವ ಮಡಿವಾನ್, ಬಿ. ಎ.

ಸಂಪುಟ ೭೯	ಫೆಬ್ರುವರಿ ೧೯೪೧	ವರ್ಷ ೧೨. ಸಂ. ೧೧

ಬಾಲದಿನ

(ಲೇಖಕರು:— ಎಸ್. ಆರ್. ತಾವಡೆ, ಎಮ್. ಎ. ಅವರಿಂದ)

ವಿದ್ಯಾರ್ಥಿಗಳಾಗಿ ಸಾಲೆಗೆ ಬರುವ ಬಾಲಕರು ಯಾವದೋ ಒಂದು ಬಗೆಯ ಕಟ್ಟುನಿಟ್ಟುಗಳಿಗೆ ಒಳಗಾಗಿ, ಯಾವುದೋ ಒಂದು ವಿಶಿಷ್ಟ ಭಾವನೆಯನ್ನಿಟ್ಟು ಕೊಂಡು ಬರುತ್ತಿರುವದು ನಮ್ಮ ದೇಶದ ರೂಢಿಯ ಮಾತು. ಅದರಂತೆ ಶಿಕ್ಷಕರೂ ಪಾಲಕರೂ ಶಾಲೆಯ ಬಾಲಕರ ಮಾನಸಿಕ ಶಾರೀರಿಕ ಸ್ವೇಚ್ಛಾಚಾರಕ್ಕೆ ಶಾಲೆಯಲ್ಲಿ ಅನುಕೂಲವಿಲ್ಲವೆಂದೇ ನಂಬುವಂತೆ ಬಾಲಕರೂ ಒಪ್ಪಿಕೊಳ್ಳುವರು. ಇಲ್ಲಿ ಸ್ವೇಚ್ಛಾಚಾರವೆಂದರೆ ಮನಬಿಚ್ಚಿ ಮಾತಾಡಿ ಮೈಚಳಿಬಿಟ್ಟು ನಡೆಯುವದೆಂದಿಷ್ಟೇ ಅರ್ಥವನ್ನಿಟ್ಟುಕೊಂಡಿದೆ. ಬಾಲಕಬಾಲಿಕೆಯರ ಈ ಬಗೆಯ ಸ್ವೇಚ್ಛಾಚಾರಕ್ಕೆ ಶಿಕ್ಷಕ ಶಿಕ್ಷಕಿಯರಿಂದ ಪ್ರತಿಬಂಧವಾಗಕೂಡದೆಂಬುದು ಮಾನಸಶಾಸ್ತ್ರವೂ ಆಧುನಿಕ ಶಿಕ್ಷಣಕ್ರಮವೂ ಸಾರಿಸಾರಿ ಹೇಳುವ ಮಾತು. ಶಾಲೆಯ ದಿನದ ಕಾರ್ಯಕ್ರಮ ದಲ್ಲಿ ಶಾಲೆಯ ಶಿಸ್ತಿಗೆ ಭಂಗಬರದಂತೆ ವಿದ್ಯಾರ್ಥಿಗಳೆಲ್ಲರೂ ನಡೆದುಕೊಳ್ಳಬೇಕಾಗುವಂತೆಯೇ ಆಟ ನೋಟಗಳ ಕಾಲದಲ್ಲಿಯೂ ತಕ್ಕ ಶಿಸ್ತು ನಿಯಮಗಳನ್ನು ಅವರು ಅನುಸರಿಸಲೇಬೇಕಾಗುವದು. ಶಿಸ್ತಿನ ನಿಯಮಗಳನ್ನು ಸಂತೋಷದಿಂದ ಅನುಸರಿಸುವದು ಬೇರೆ; ಅನ್ಯರ ಹೆದರಿಕೆಗೆ ಒಳಗಾಗಿ ಅಂಜಿ ತನ್ನ ಮನಃಪ್ರವೃತ್ತಿಗಳನ್ನು ಹತ್ತಿಕ್ಕಿಕೊಳ್ಳುವ ಮಾತು ಬೇರೆ. ಈ ವಿಷಯದಲ್ಲಿ ಬಾಲಕ ಬಾಲಿಕೆಯರ ಹಕ್ಕು ಬಾಧ್ಯತೆಗಳನ್ನು ಕುರಿತು ಪರ್ಯಾಲೋಚಿಸಿ ಜಿನಿವಾದಲ್ಲಿರುವ ರಾಷ್ಟ್ರ

ಸಂಘ (Liague of Nations) ದವರು ಮನ್ನಿಸಿರುವ ಈ ಮಾತುಗಳನ್ನೂ ತತ್ವಗಳನ್ನು ಅವಲೋಕಿಸಿರಿ; ಆಚರಣೆಯಲ್ಲಿ ತರಲು ಯತ್ನಿಸಿರಿ.

ಚಿಕ್ಕಮಕ್ಕಳ ಹಕ್ಕು ಬಾಧ್ಯತೆಗಳು.

೧ ಚಿಕ್ಕಮಕ್ಕಳ ಶಾರೀರಿಕ ಮತ್ತು ಮಾನಸಿಕ ಶಕ್ತಿಗಳ ಬೆಳವಣಿಗೆ ಯಾಗುವಂತೆ ವ್ಯವಸ್ಥೆ ಮಾಡಿರಿ.

೨. ಹಸಿದ ಚಿಕ್ಕಮಕ್ಕಳಿಗೆ ಅನ್ನವನ್ನು ನೀಡಿರಿ. ಬೇನೆ ಬಿದ್ದ ಮಕ್ಕಳನ್ನು ಆರೈಕೆ ಮಾಡಿ ಗುಣಪಡಿಸಿರಿ. ತಪ್ಪುಮಾಡುವ ಮಕ್ಕಳನ್ನು ಸನ್ಮಾರ್ಗಕ್ಕೆ ಹಚ್ಚಿರಿ. ಅನಾಥರಿಗೂ ಊನರಿಗೂ ಆಶ್ರಯ ಕೊಡಿರಿ.

೩. ಸಂಕಟಕಾಲದಲ್ಲಿ ಸಹಾಯಹೊಂದುವ ಅಧಿಕಾರವು ಚಿಕ್ಕಮಕ್ಕಳಿಗೆ ಇದ್ದೇ ಇರುವದು.

೪. ಚಿಕ್ಕಮಕ್ಕಳಲ್ಲಿ ತಮ್ಮ ಚರಿತಾರ್ಥವನ್ನು ಸಾಗಿಸಿಕೊಳ್ಳುವ ಸಾಮರ್ಥ್ಯವನ್ನು ಹುಟ್ಟಿಸಿರಿ. ಸ್ವಾರ್ಥಕ್ಕಾಗಿ ಬಾಲಕರ ಜೀವನದ ದುರುಪಯೋಗ ಮಾಡಿಕೊಳ್ಳಬೇಡಿರಿ; ಅಥವಾ ಹಾಗೆ ಮಾಡುವದಕ್ಕೆ ಕೊಡಬೇಡಿರಿ.

೫. ತಮ್ಮ ಬುದ್ಧಿಬಲದ ಉಪಯೋಗವನ್ನು ಜಗತ್ತಿಗೆ ಮಾಡಿಕೊಡುವದೇ ತಮ್ಮ ಕರ್ತವ್ಯವಾಗಿದೆ ಎಂಬ ತಿಳಿವಳಿಕೆಯನ್ನು ಚಿಕ್ಕಮಕ್ಕಳಲ್ಲಿ ಹುಟ್ಟಿಸಿರಿ.

ಚಿಕ್ಕಮಕ್ಕಳ ಕರ್ತವ್ಯಗಳು.

೧. ದಿನಾಲು ತುಸುಹೊತ್ತಾದರೂ ದೇವರನ್ನು ಸ್ಮರಿಸಿರಿ.

೨. ಶಾಲೆಯೊಳಗಿನ ಗೆಳೆಯರೇ ನಿಮ್ಮ ಮುಂದಿನ ಆಯುಷ್ಯದೊಳಗಿನ ಸಹಕಾರಿಗಳಾಗಲಿರುವರು. ಆದ್ದರಿಂದ ಅವರನ್ನು ಪ್ರೀತಿಸಿರಿ.

೩. ಅಭ್ಯಾಸದಲ್ಲಿ ಪ್ರೀತಿಯನ್ನಿಡಿರಿ. ಶರೀರಕ್ಕೆ ಅನ್ನವಿರುವಂತೆಯೇ ಮನಸ್ಸಿಗೆ ಅಭ್ಯಾಸವಿರುವದು. ಶಿಕ್ಷಕರ ಯೋಗ್ಯತೆಯು ನಿಮ್ಮ ಜನ್ಮದಾತರಾದ ತಾಯ್ತಂದೆಗಳ ಯೋಗ್ಯತೆಗಿಂತಲೂ ಕಡಿಮೆತರಗತಿಯದಲ್ಲವೆಂಬದನ್ನು ಮರೆಯಬೇಡಿರಿ.

೪. ದಿನಾಲು ಒಂದಾದರೂ ಒಳ್ಳೆಯ ಕಾರ್ಯವನ್ನು ಮಾಡುವದಕ್ಕೆ ಹವಣಿಸಿರಿ.

೫. ಸನ್ಮಾನ್ಯರಾದವರಿಗೆ ಯೋಗ್ಯ ಮನ್ನಣೆಯನ್ನು ಕೊಡಿರಿ. ಆದರೆ ಹೀನದೀನರಾಗಿ ಯಾರಮುಂದೆಯೂ ತಲೆಯನ್ನು ತಗ್ಗಿಸಬೇಡಿರಿ, ದೈನ್ಯದ ಮಾತುಗಳನ್ನಾಡಬೇಡಿರಿ.

೬. ದ್ವೇಷವೆಂಬ ದುರ್ಗುಣವನ್ನು ಹೊಡೆದೋಡಿಸಿರಿ. ನೆರೆಯವರನ್ನು ತಿರಸ್ಕರಿಸಿ ಮಾತಾಡಬೇಡಿರಿ. ನಿಮ್ಮ ಮತ್ತು ಅನ್ಯರ ಹಕ್ಕುಬಾಧ್ಯತೆಗಳನ್ನು ರಕ್ಷಿಸಿರಿ. ಸೇಡು ತೀರಿಸುವ ದುರ್ಬುದ್ಧಿಯನ್ನು ಬಿಡಿರಿ. ನ್ಯಾಯದ ನಡತೆಯನ್ನು ಕಲಿಯಿರಿ. ಆ ಸಮಯದಲ್ಲಿ ಸಂಕಟಗಳೊದಗಿದರೂ ಅವನ್ನು ಧೈರ್ಯದಿಂದ ಎದುರಿಸಿರಿ.

೭. ವಿಚಾರಪೂರ್ವಕವಾಗಿ ಸತ್ಯವನ್ನು ಶೋಧಿಸಿ ತೆಗೆಯಿರಿ. ಸುಳ್ಳು ಮಾತಾಡಿ ನಿಮ್ಮನ್ನೂ ಪರರನ್ನೂ ಕೂಡಿಯೇ ಮೋಸಕ್ಕೆ ಗುರಿಮಾಡಬೇಡಿರಿ. ಠಾಗೆ ಮಾಡುವದರಿಂದ ಮನುಷ್ಯನು ಶೀಲಭ್ರಷ್ಟನಾಗುವನು.

೮. ಪಶುಗಳ ಮೇಲೆಯೂ ದಯೆ ತೋರಿಸಿರಿ. ಅವನ್ನು ಪೀಡಿಸುವದಾಗಲಿ ಅವಕ್ಕೆ ನೋವು ಮಾಡುವದಾಗಲಿ ಸರಿಯಲ್ಲ.

೯. ಕೆಲಸಮಾಡದೆ (ದುಡಿಯದೆ) ಉಣ್ಣುವದು ಕಳವು ಮಾಡಿದಂತೆಯೇ ಸರಿ.

೧೦. ಸ್ವದೇಶಾಭಿಮಾನವೆಂದರೆ ಪರಕೀಯರನ್ನು ದ್ವೇಷಿಸುವದಲ್ಲ; ಸ್ವದೇಶವನ್ನು ಪ್ರೀತಿಸಿರಿ. ಆದರೆ ಅಖಿಲಮಾನವು ಕುಟುಂಬವೂ ನಮ್ಮ ಕುಟುಂಬವೇ ಎಂಬ ಭಾವನೆಯನ್ನು ಸ್ಥಿರವಾಗಿಟ್ಟುಕೊಳ್ಳಿರಿ.

ರಾಷ್ಟ್ರ ಸಂಘದವರು ಮನ್ನಿಸಿರುವ ಮೇಲಿನ ಮಾತುಗಳನ್ನು ಅನುಲಕ್ಷಿಸುವದರಿಂದ ಈ ಕೆಳಗಿನ ಸಂಗತಿಗಳು ನಿಷ್ಪನ್ನವಾಗುವವು.

ಶಾಲೆಗೆ ಹೋಗುವ ಬಾಲಕರ ಹಕ್ಕು ಬಾಧ್ಯತೆಗಳು.

೧. ಪ್ರತಿ ಬಾಲಕನಿಗೂ ಶಾಲೆಗೆ ಹೋಗುವದಕ್ಕೆ ಅನುಕೂಲತೆಯಿರಬೇಕು.

೨. ಅವರಿಗೆ ಯೋಗ್ಯ ಶಿಕ್ಷಕರಿಂದ ಶಿಕ್ಷಣ ದೊರೆಯಬೇಕು.

೩. ಅವರ ಶಾಲಾಗೃಹವು ಆರೋಗ್ಯಕರವಾದದ್ದಿರಬೇಕು.

೪. ಶಾಲೆಯು ಅವರ ವಸತಿಯಿಂದ ದೂರದಲ್ಲಿದ್ದರೆ ಅಲ್ಲಿಗೆ ಹೋಗಿ ಬರುವದಕ್ಕೆ ತಕ್ಕ ಅನುಕೂಲತೆಯಿರಬೇಕು.

೫. ಶಾಲೆಯಲ್ಲಿ ಅವರ ಆರೋಗ್ಯದ ಪರೀಕ್ಷೆಯಾಗಬೇಕು.

೬. ಶಾಲೆಯಲ್ಲಿ ಸಾಂಘಿಕ ಆಟಗಳ ವ್ಯವಸ್ಥೆಯಿರಬೇರು.

೭. ಶಾಲೆಯಲ್ಲಿ ಮನೆಯ ಬಗ್ಗೆ ಪ್ರೀತಿಯೂ ಅದನ್ನು ಸುಧಾರಿಸುವ ಇಚ್ಛೆಯೂ ಒಳ್ಳೆಯ ಸಂಗತಿಗಳ ಬಗ್ಗೆ ಆದರ ಬುದ್ಧಿಯೂ ಉತ್ಪನ್ನವಾಗಬೇಕು.

೮. ಶಾಲೆಯಲ್ಲಿ ಪರಸ್ಪರ ಸಹಕಾರದಿಂದ ನಡೆಯುವ ಜಟವುಂಟಾಗಬೇಕು.

೯. ಶಾಲೆಯಲ್ಲಿರುವಾಗಲೇ ಸಮಾಜಸೇವೆಯ ರೂಢಿಯುಂಟಾಗಿರಬೇಕು.

೧೦. ಶಾಲೆಯಲ್ಲಿ ಮಕ್ಕಳ ಭಾವೀ ಆಯುಷ್ಯದ ರೂಪರೇಷೆಯು ನಿರ್ಣಯವಾಗಿ ಅವರಿಗೆ ಅದಕ್ಕನುಗುಣವಾದ ಶಿಕ್ಷಣವು ದೊರೆಯಬೇಕು.

ಬಾಲಕರ ಮಹತ್ವವೂ ಪಾಲಕರ ಕರ್ತವ್ಯಗಳೂ.

೧. ಮಕ್ಕಳು ಮನೆಯ ಅಮೂಲ್ಯವಾದ ಅಲಂಕಾರಗಳು.

೨. ಮಕ್ಕಳೇ ರಾಷ್ಟ್ರದ ನಿಜವಾದ ಸಂಪತ್ತು.

೩. ಮಕ್ಕಳೇ ಭಾವೀರಾಷ್ಟ್ರದ ಆಧಾರ ಸ್ಥಂಭಗಳು.

ಆದ್ದರಿಂದ,

೪. ಮಕ್ಕಳನ್ನು ತುಂಬ ಎಚ್ಚರಿಕೆಯಿಂದ ಸಂಗೋಪನ ಮಾಡಿರಿ.

೫. ಮಕ್ಕಳಿಗೆ ಸಾದಾತತವದ ಆದರೆ ಪೌಷ್ಟಿಕವಾದ ಆಹಾರವನ್ನು ಕೊಡಿರಿ.

೬. ಮಕ್ಕಳಿಗೆ ಅಚ್ಚುಕಟ್ಟಾದ ಒಟ್ಟೆಗಳನ್ನು ಉಡಿಸಿ ತೊಡಿಸಿರಿ.

೭. ಮಕ್ಕಳಿಗೆ ಒಳ್ಳೆಯ ಜಟಗಳನ್ನೂ ಶೀಲಗಳನ್ನೂ ಕಲಿಸಿರಿ.

೮. ಮಕ್ಕಳ ಶಿಕ್ಷಣದ ಬಗ್ಗೆ ಎಚ್ಚರಗೊಳ್ಳಿರಿ.

೯. ಮಕ್ಕಳೊಡನೆ ಪ್ರೀತಿಯಿಂದ ನಡೆದುಕೊಳ್ಳಿರಿ; ಅವರು ಯಾವಾಗಲೂ ಆನಂದದಿಂದ ಇರಲಿ.

೧೦. ಮಕ್ಕಳು ಹುಟ್ಟಿದ ದಿನವನ್ನು ಹಬ್ಬದಂತೆ ಆಚರಿಸಿರಿ. ಆ ದಿನವನ್ನು ಆನಂದದಿಂದ ಕಳೆಯಿರಿ.

ಮನೆಯಲ್ಲಿ ಮಕ್ಕಳು ಹುಟ್ಟಿದ ದಿನವನ್ನು ಹಬ್ಬದಂತೆ ಆಚರಿಸುವ ರೂಢಿಯುಂಟಷ್ಟೆ? ಹಾಗೆಯೇ ಸಾಲೆಯಲ್ಲಿಯೂ ಒಂದು ಇಂಥ ಹಬ್ಬದ ದಿನವನ್ನು ಆಚರಿಸುವ ರೂಢಿಯಿರಬೇಕು. ಅದನ್ನು ಸಾಲೆಯ ಹುಟ್ಟಿದ ದಿನವೆಂದೋ ಪಾಲಕರ ದಿನವೆಂದೋ ಬಾಲದಿನವೆಂದೋ ಕರೆಯಿರಿ. ಆ ಸಾಲೆಯಲ್ಲಿ ಕಲಿಯುತ್ತಿರುವ ಮತ್ತು ಹಿಂದೆ ಕಲಿತಿರುವ ಎಲ್ಲ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಲಿ. ಅವರ ಪಾಲಕರೂ ಶಿಕ್ಷಕರೂ ಆ ಕಾರ್ಯದ ಮಾರ್ಗದರ್ಶಿಗಳೂ ಕಾರ್ಯಪ್ರೇರಕರೂ ಆಗಿರಲಿ. ಈ ಸಂದರ್ಭದಲ್ಲಿ ಸಾಲೆಯಲ್ಲಿ ಇಡಿಯ ವರ್ಷದಲ್ಲಿ ನಡೆದ ಕಾರ್ಯಕಲಾಪಗಳನ್ನು ಸಂಕ್ಷೇಪವಾಗಿ ಹೇಳುವದಲ್ಲದೆ ಮುಂದಿನ ವರ್ಷದಲ್ಲಿ ನಡೆಯ

ೀಕಾದ ಕಾರ್ಯಗಳ ರೂಪರೇಷೆಯನ್ನು ನಿರ್ದಿಷ್ಟಪಡಿಸಿ ನೆರದವರ ಮುಂದೆ ಇಟ್ಟು ಡಿರಿ. ಈ ಹಬ್ಬದ ಕಾರ್ಯಕಲಾಪಗಳಲ್ಲಿ ಬಾಲಕರ ಆಟ ನೋಟ ವಿನೋದಗಳಿಗೂ ಕ್ಕ ಸಂಭಾಷಣೆ ನಾಟಕಗಳು ಅವರು ಮಾಡಿರುವ ಬರೆಹ ಚಿತ್ರಕಲೆ ಕೈಕೆಲಸಗಳು ುಂತಾದವುಗಳ ಪ್ರದರ್ಶನಕ್ಕೂ ಅವಕಾಶವಿರಬೇಕು. ಇಂಥ ವಿಷಯಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಉಚ್ಚತರಗತಿಯವರಿಗೆ ಆ ದಿನ ಇನಾಮು ಕೊಡುವ ೋಜನೆಯನ್ನು ಇಟ್ಟುಕೊಂಡರೆ ಒಳಿತು. ಒಳ್ಳೆಯ ಶೀಲ ಸ್ವಭಾವಗಳು, ಚ್ಛತೆ, ತಪ್ಪಿಸದೆ ಸಾಲೆಗೆ ಬರುವದು, ಉಚ್ಚತರಗತಿಯ ಅಭ್ಯಾಸ, ಮುಂತಾದ ಶಿಷ್ಟ ಗುಣಗಳಿಗಾಗಿಯೂ ಇನಾಮುಗಳನ್ನು ಇಡಬಹುದು. ಇದರಿಂದ ದ್ಯಾರ್ಥಿಗಳಿಗೆ ತಮ್ಮ ಕೆಲಸದಲ್ಲಿ ಹುರುಪು ಹುಟ್ಟುವದಲ್ಲದೆ ಪಾಲಕರಿಗೆ ತಮ್ಮ ುಕ್ಕಳ ಚಟುವಟಿಕೆಗಳನ್ನೂ ಸಾಲೆಯ ಸ್ಥಿತಿಗತಿಗಳನ್ನೂ ತಿಳಿದುಕೊಳ್ಳುವದಕ್ಕೂ ಅವಕಾಶ ದೊರೆಯುವದು. ಪಾಲಕರಲ್ಲಿ ಶಿಕ್ಷಕರ ಮತ್ತು ಸಾಲೆಯ ಬಗ್ಗೆ ಆದರ ುಂಟಾಗುವದು. ಸಾಲೆಯ ಕಾರ್ಯಕಲಾಪಗಳಲ್ಲಿ ಹೆಚ್ಚು ಮನಸ್ಸು ಹಾಕಿ ಕ್ಷಕರೊಡನೆ ಸಹಕರಿಸಲು ಊರ ಪ್ರಮುಖರು ಮುಂದೆ ಬರಲು ಇದೊಂದು ುಸಂಧಿಯೆನಿಸುವದು.

ಇಂಥ ಉತ್ಸವಕ್ಕಾಗಿ ಜನಪ್ರಿಯನಾದ ಶಿಕ್ಷಕನು ತನ್ನ ಪಗಾರಿನಿಂದ ವೆಚ್ಚ ಮಾಡುವ ಸಂದರ್ಭವು ಬರಲಾರದೆಂಬದನ್ನು ನಾವು ಅನುಭವದಿಂದ ಹೇಳಬಹುದು. ುಹಾರಾಷ್ಟ್ರದಲ್ಲಿ ಹಳ್ಳಿಹಳ್ಳಿಗಳಲ್ಲಿಯೂ ಇಂಥ ಚಟುವಟಿಕೆಗಳು ನಡಿದಿರುವದು ನಮಗೆ ಗೊತ್ತಿದೆ.

ಹೊಸ ಅಭ್ಯಾಸ ಕ್ರಮದಲ್ಲಿ ಸೇರ್ಪಡೆಯಾದ 'ಪೌರನೀತಿ' ಎಂಬ ವಿಷಯದ ಕ್ಷಣಕ್ಕೆ ಇಂಥ ಸಾಮೂಹಿಕ ಚಟುವಟಿಕೆಗಳು ತುಂಬ ಸಹಾಯಕಾರಿ ಆಗುವವು.

೧೯೧೮ ರಲ್ಲಿ ಜರ್ಮನಿಯು ಸೋತಿತ್ತೇನು ?

(Was Germany defeated in 1918? ಎಂಬ ಪುಸ್ತಕದ ಆಧಾರದಿಂದ)

೧೯೩೯ನೆಯ ಇಸ್ವಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ ಹಿಟ್ಲರನು ಹೀಗೆ ಹೇಳಿದನು :— "ಫ್ರಾನ್ಸ್ ಮತ್ತು ಬ್ರಿಟನ್ನಗಳು ಹಿಂದಿನ ಮಹಾಯುದ್ಧದಲ್ಲಿ ಜರ್ಮನಿಯನ್ನು ಸೋಲಿಸಿದವೆಂಬ ಮಾತು ಸಂಪೂರ್ಣ ಸುಳ್ಳು. ಅವರು ನಮ್ಮನ್ನು ಎಂದೂ ಸೋಲಿಸಿಯೇ ಇಲ್ಲ" ಈ ಮಾತಿಗೆ ಉತ್ತರವೇನು ?

ಯುದ್ಧಕಾಲದಲ್ಲಿ ಪ್ರಚಾರಕಾರ್ಯದಿಂದ ಅತಿ ಪ್ರಚಂಡ ಕಾರ್ಯಗಳ ಸಾಧಿಸುವವೆಂದು ಹೇಳುವರು. ವೈರಿಗಳ ಮೇಲೆ ಏರಿ ಹೋಗಿ ಬಾಂಬುಗಳ ಮಳೆಗರೆಯುವ ಪ್ರಚಂಡ ವಿಮಾನಗಳ ಕಾರ್ಯಗಳಿಗಿಂತಲೂ ಇಂಥ ಪ್ರಚಾರಕ ವಾಕ್ಯಗಳಿಂದಲೆ ಹೆಚ್ಚು ಪ್ರಯೋಜನವಾಗುವದೆಂದು ತಜ್ಞರು ಅಭಿಪ್ರಾಯಪಡುವರು. ಆದ್ದರಿಂದ ಹಿಟ್ಲರನು ಇಂಥ ಅಸತ್ಯ ಪ್ರಚಾರದಿಂದ ತನ್ನ ಕಾರ್ಯ ಸಾಧಿಸಿಕೊಳ್ಳಲು ಹವಣಿಸುತ್ತಿದ್ದಾನೆ.

ಹಿಟ್ಲರನು ಹೇಳುವ ಮಾತು ತೀರ ಸುಳ್ಳು. ಆಗಿನ ಯುದ್ಧದಲ್ಲಿ ಜರ್ಮನಿಯು ಸಂಪೂರ್ಣ ಪರಾಭವ ಹೊಂದಿ ಕೈಸಾಗದಂತಾಗಿ ಕಂಗೆಟ್ಟದ್ದರಿಂದಲೇ ಪ್ರತಿಪಕ್ಷದವರು ಹೇಳುವ ಎಲ್ಲ ಶರ್ತುಗಳನ್ನು ಒಪ್ಪಿಕೊಂಡು ಒಪ್ಪಂದ ಮಾಡಿಕೊಳ್ಳಬೇಕಾಯಿತು.

ಜರ್ಮನಿಯ ಪರಾಭವದ ಕಾರಣಗಳು:— ಜರ್ಮನಿಯ ಸೋಲಿಗೆ ಅನೇಕ ಮಹತ್ವದ ಸಂಗತಿಗಳು ಕಾರಣವಾದವು. ಜರ್ಮನಿಯು ಕೈಕಾಲು ಅಲ್ಲಾಡಿಸಲು ಸಹ ಸಾಧ್ಯವಾಗದಂತೆ ಅದನ್ನು ಸುತ್ತು ಕಡೆಯಿಂದಲೂ ಪ್ರತಿಬಂಧಿಸಿದ್ದೇ ಅದರ ಸೋಲಿಗೆ ಪ್ರಾಮುಖ್ಯವಾದ ಒಂದು ಕಾರಣವಾಯಿತು. ೧೯೧೮ ರಲ್ಲಿ ಜರ್ಮನಿಯ ನಿವಾಸಿಗಳು ಕೂಳು ನೀರಿಲ್ಲದೆ ಸಂಕಟಪಡುವ ಸಮಯವೊದಗಿತ್ತು. ಯುದ್ಧದಲ್ಲಿ ತೊಡಗಿದ ಸೈನಿಕರಿಗೂ ಕೂಡ ಹೊಟ್ಟೆ ತುಂಬ ಆಹಾರ ಸಾಮಗ್ರಿಗಳು ದೊರೆಯಲಿಲ್ಲ. ಬ್ರಿಟನ್ನಿನ ಪಕ್ಷಕ್ಕೆ ಸೇರಿದ ರಾಷ್ಟ್ರಗಳು ಹೊಸ ಹೊಸ ಆಯುಧಗಳನ್ನು ನಿರ್ಮಿಸಿಕೊಂಡವು. ಜರ್ಮನಿಯು ಯುದ್ಧದಲ್ಲಿ ವಿಷವಾಯುಗಳನ್ನು ಉಪಯೋಗಿಸಿತು. ಆ ವಿಷವಾಯು ಪ್ರಯೋಗವೇ ಅದರ ನಾಶಕ್ಕೆ ಕಾರಣವಾಯಿತು. ಯಾಕಂದರೆ, ಯುರೋಪದಲ್ಲಿ ಗಾಳಿಯು ಪಶ್ಚಿಮದಿಂದ ಪೂರ್ವಕ್ಕೆ ಬೀಸುತ್ತಿದ್ದುದರಿಂದ ಆ ವಿಷವಾಯು ಪ್ರವಾಹವು ಜರ್ಮನಿಯ ಮೇಲೆಯೇ ತಿರುಗಿ ಬೀಸಿತು. ಬ್ರಿಟಿಷರ ಪಕ್ಷದ ಸೈನಿಕರು ಜರ್ಮನ್ ಸೈನಿಕರಿಗಿಂತಲೂ ಹೆಚ್ಚು ಬಲಾಢ್ಯರೂ ಸುಸಜ್ಜಿತರೂ ಆಗಿದ್ದರು. ಆದ್ದರಿಂದ ಜರ್ಮನ್ ಸೈನಿಕರು ರಣಭೂಮಿಯಲ್ಲಿ ಸೋತು ಕಾಲ್ದೆಗೆದು ಓಡಿಹೋದರು. ಯುದ್ಧವನ್ನು ಮುಂದೆ ಸಾಗಿಸಿದರೆ ತಮ್ಮ ಸೈನ್ಯವು ಸಂಪೂರ್ಣ ನಾಶವಾಗಿ ಹೋಗಬಹುದೆಂಬ ಹೆದರಿಕೆಯಿಂದಲೇ ಜರ್ಮನಿಯು ಒಪ್ಪಂದಕ್ಕೆ ಸಮ್ಮತಿಸಬೇಕಾಯಿತು.

೧೯೧೮ ರಲ್ಲಿ ಇಂಗ್ಲಂಡವು ಜಯಶಾಲಿಯಾಗಿತ್ತು:— ಸೋಮನದಿಯ ದಂಡೆಯಲ್ಲಿ ನಡೆದ ಯುದ್ಧದಲ್ಲಿ ಜರ್ಮನಿಯು ಸೋತಿತು; ಇಷ್ಟೇ ಅಲ್ಲ ಜರ್ಮನ್ ಸೇನಾಪತಿಗಳು ಸಹ ಆಗ ಕಂಗಾಲಾಗಿದ್ದರು. ಜರ್ಮನ್ನರು ಅತ್ಯ

ಂರಕ್ಷಣೆಗಾಗಿ ಹಿಂಡೆನ್‌ಬರ್ಗ ಎಂಬ ಹೆಸರಿನ ಒಂದು ವ್ಯೂಹವನ್ನು ರಚಿಸಿ ಕೊಂಡರು. ಬ್ರಿಟಿಷರು ಆ ವ್ಯೂಹವನ್ನು ಭೇದಿಸಿ ಮುಂದೆ ಸಾಗಿ ಜರ್ಮನಿಯಲ್ಲಿ ನುಗ್ಗಿದರು. ಮ್ಯೂಜನದಿಯ ದಂಡೆಗುಂಟ ಒಂದು ರೈಲುದಾರಿಯು ಹಬ್ಬಿರು ತದು. ಆ ದಾರಿಗೆ ಹೊಂದಿ ಲೀಜ, ಮೆಝೇರಿಸ, ಲಕ್ಸಂಬರ್ಗ, ಎಂಬ ಮಹತ್ವದ ಾಣ್ಯಗಳಿರುವವು. ಈ ಭಾಗದಲ್ಲಿ ಬ್ರಿಟಿಷ ಸೈನ್ಯವು ಜರ್ಮನ್ ಸೈನ್ಯವನ್ನು ಂದೆ ಹಿಂದೆ ಸರಿಸುತ್ತ ಎರಿ ನಡೆಯಿತು. ಉತ್ತರದ ಕಡೆಯ ಫ್ಲೆಮಿಶ್ ದಂಡೆಯನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಇಷ್ಟಾದ ಕೂಡಲೆ ಜರ್ಮನಿಯು ಹಣ್ಣಾಗಿ ಒಪ್ಪಂದದ ಮಾತೆತ್ತಬೇಕಾಯಿತು. ಮತ್ತು ಅಮೇರಿಕೆಯ ಅಧ್ಯಕ್ಷ ವಿಲ್‌ಸನ್ನರ ಮಧ್ಯಸ್ಥಿಕೆಯಿಂದ ಒಪ್ಪಂದವಾಗಬೇಕೆಂದು ಗೊತ್ತಾಯಿತು. ನೊವೆಂಬರ ಾಗನೆಯ ತಾರೀಖಿನ ದಿನ ಒಪ್ಪಂದವಾಯಿತು.

ಸಾರಾಂಶ:— ಯುದ್ಧಕಾಲದಲ್ಲಿ ಶತ್ರುಗಳ ನಾಶಕ್ಕೆ ಸೈನ್ಯವೂ ಶಸ್ತ್ರಾಸ್ತ್ರ ಗಳೂ ಸಾಧನವಾಗುವವೆಂಬ ಮಾತೇನೋ ನಿಜ. ಆದರೆ ಹಣದ ಅನುಕೂಲತೆ, ಪ್ರಚಾರ ಕಾರ್ಯ, ಸುತ್ತುಗಟ್ಟಿ ಹಗೆಗಳಿಗೆ ಹೊರಗಿನ ಸಹಾಯ ದೊರೆಯದಂತೆ ಮಾಡುವದು, ಮೊದಲಾದ ಸಾಧನಗಳೂ ಕೂಡ ತುಂಬ ಪ್ರಯೋಜನ ಕಾರಿಗಳಾ ಗುವವು. ಹಗೆಗಳನ್ನು ಮುತ್ತಿ ಹೊರಗಿನ ಸಂಬಂಧವನ್ನು ಕಡಿದು ಹಾಕಿ ಹೆಡೆ ಮುಡಿಗಟ್ಟಿದಂತೆ ಮಾಡುವದಕ್ಕೆ ಸಮುದ್ರದ ಮೇಲೆ ಸ್ವಾಮಿತ್ವವಿರುವದು ಅವಶ್ಯಕವಾಗುವದು. ಬ್ರಿಟನ್ನವು ತನ್ನ ಹಡಗುಪಡೆಯ ಪ್ರಬಲ ಶಕ್ತಿಯ ಮೂಲಕ ಸಮುದ್ರದ ಮೇಲೆ ಸಂಪೂರ್ಣ ಸಾಮಿತ್ವವನ್ನು ಸ್ಥಾಪಿಸಿಕೊಂಡು ಜರ್ಮನಿ ಯನ್ನು ಸುತ್ತುಗಟ್ಟಿ ಅದಕ್ಕೆ ಹೊರಗಿನ ಜಗತ್ತಿನಿಂದ ಅನ್ನ ಸಾಮಗ್ರಿ ಯುದ್ಧ ಸಾಮಗ್ರಿಗಳು ದೊರೆಯದಂತೆ ಮಾಡಿದ್ದರಿಂದಲೇ ಆಗ ಅದು 'ತ್ರಾಹಿ' 'ತ್ರಾಹಿ' ಎಂದು ಶರಣುಬಂದು ಒಪ್ಪಂದಮಾಡಿಕೊಳ್ಳಬೇಕಾಯಿತು.

ವರ್ಸೆಲಿಸ ಒಪ್ಪಂದವು ಅನ್ಯಾಯ ಮೂಲಕವಾದುದೆಂದು ಸಾರಿ ಅದನ್ನು ಮುರಿದು ಹಾಕುವದೇ ಜರ್ಮನಿಯ ಇತ್ತೀಚೆಗಿನ ಪ್ರಚಾರ ಕಾರ್ಯದ ಮುಖ್ಯ ಘೋರಣೆಯಾಗಿದ್ದಿತು. ಆಸಂದರ್ಭದಲ್ಲಿ ನಾಝಿ ಪಂಗಡದವರು ತಮ್ಮ ದೇಶ ದಲ್ಲಿಯೂ ಇತರ ದೇಶಗಳಲ್ಲಿಯೂ ಬೊಬ್ಬಿರಿದು ಸಾರಿದ್ದೇನೆಂದರೆ:— " ೧೯೧೮ರಲ್ಲಿ ಜರ್ಮನಿಯು ಸೋತಿಲ್ಲ. ಜರ್ಮನ್ ಸೈನ್ಯವು ಅಜಿಂಕ್ಯವಾಗಿದ್ದಿತು. ಈಗಲೂ ಅದು ಅಜಿಂಕ್ಯವಾಗಿಯೇ ಉಳಿದಿದೆ. ಕಮ್ಯುನಿಸ್ಟ ಪಕ್ಷದವರು ಅವರನ್ನು ವಿಶ್ವಾಸ ಘಾತಮಾಡಿ ಮೋಸಗೊಳಿಸಿದರು. ಅವರು ಹಾಗೆ ಮಾಡದೆ ಇದ್ದರೆ ಜರ್ಮನ್ ಸೈನ್ಯವು ವಿಜಯ ಸಂಪಾದನೆಮಾಡಿ ಬ್ರಿಟಿಷರನ್ನೂ ಅವರ ಅನುಯಾಯಿ ಗಳನ್ನೂ ಮುರಿದು ಮೂಲೆಗೊತ್ತುತ್ತಿದ್ದಿತು. "

ಈ ಮಾತಿನಲ್ಲಿ ಎಳ್ಳಷ್ಟೂ ತಥ್ಯಾಂಶವಿಲ್ಲ. ೧೯೧೪ ರಲ್ಲಿ ಜರ್ಮನಿಯು ಸಂಪೂರ್ಣ ಸೋತು ನಿರ್ನಾಮವಾಗಿಯೇ ಒಪ್ಪಂದಮಾಡಿಕೊಂಡಿತು.

ಹೆಣ್ಣುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ ಸರ್ಟಿಫಿಕೇಟಿ ಪರೀಕ್ಷೆ

ಈ ಕೆಳಗೆ ಹೇಳುವ ವರ್ಗದಲ್ಲಿ ಬರುವ ಹೆಣ್ಣುಮಕ್ಕಳು ಪ್ರಾ.ಸ್ಕೂ.ಲಿ.ಸ. ಪರೀಕ್ಷೆಗೆ ಹೊರಗಿನಿಂದ ಕೂಡ್ರಲಿಕ್ಕೆ ಅಡ್ಡಿಯಿಲ್ಲವೆಂದು ಮೆ॥ ಡಾಯರೆಕ್ಟರ ಸಾಹೇಬರವರ ಅಪ್ಪಣೆಯಾಗಿದೆ.

೧. ಹಿಂದಿನ ವರ್ಷಗಳಲ್ಲಿ ಹಳೆಯ ಅಭ್ಯಾಸಕ್ರಮದಂತೆ ಈ ಪರೀಕ್ಷೆಗೆ ಕುಳಿತು ನಾಪಾಸಾದವರು.

೨. ಗಂಡುಮಕ್ಕಳ ಪಿ. ಎಸ್. ಎಲ್. ಸಿ. ಪರೀಕ್ಷೆಗೆ ಕೂತು ಪಾಸಾದವರು ಅಥವಾ ನಾಪಾಸಾದವರು.

೩. ಯಾವ ಸಾಲೆಗೂ ಹೋಗದೆ ಮನೆಯಲ್ಲಿಯೇ ಖಾಸಗೀರೀತಿಯಿಂದ ಅಭ್ಯಾಸ ಮಾಡಿದವರು.

೪. ಮಾಧ್ಯಮಿಕ ಸಾಲೆಯೊಳಗಿನ ಮೂರನೆಯ ಇಯತ್ತ್ಯೆಯಲ್ಲಿ ಅಥವಾ ಅದಕ್ಕೂ ಮೇಲಿನ ತರಗತಿಯಲ್ಲಿ ಕಲಿಯುತ್ತಿರುವವರು.

ಮಾಧ್ಯಮಿಕ ಸಾಲೆಯೊಳಗಿನ ಮೂರನೆಯ ಇಯತ್ತ್ಯೆಗಿಂತ ಕೆಳಗಿನ ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರು ಪ್ರಾಥಮಿಕ ಶಾಲೆಯ ನಾಲ್ಕನೆಯ ಇಯತ್ತ್ಯೆಯನ್ನು ಮುಗಿಸಿದ ತರುವಾಯ ಮೂರು ವರ್ಷಗಳವರೆಗೆ ಸರಿಯಾಗಿ ಓದಿರುವದಿಲ್ಲವೆಂಬ ಕಾರಣದಿಂದ ಅಂಥವರಿಗೆ ಈ ಪರೀಕ್ಷೆಗೆ ಕೂಡ್ರಲು ಅಪ್ಪಣೆ ದೊರೆಯಲಾರದು.

ಟ್ರೇ. ಕಾ. ಧಾರವಾಡ
೧೮–೩–೧೯೧೧

R. S. Madiman
ದ. ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರ
ಅಪ್ಪಣೆಯ [illegible]

ಗಂಡುಮಕ್ಕಳ ಪ್ರಾಯ್ಮರಿ ಸ್ಕೂಲ್ ಲೀವ್ಸಿಂಗ್ ಸರ್ಟಿಫಿಕೇಟ ಪರೀಕ್ಷೆ ೧೯೪೧.

೧. ಈ ಪರೀಕ್ಷೆಯು ಈ ವರ್ಷ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ೧೯೪೧ ನೆಯ ಇಸ್ವಿಯ ಎಪ್ರಿಲ್ ತಿಂಗಳ **೧೧ನೆಯ ತಾರೀಖು** ಮಂಗಳವಾರ ಹಾಗು ಅದರ ಮುಂದಿನ ದಿವಸಗಳಲ್ಲಿ ನಡೆಯುವದು.

೧. ಧಾರವಾಡ ಜಿಲ್ಲೆ:— ೧. ಧಾರವಾಡ ೨. ಗದಗ ೩. ಹುಬ್ಬಳ್ಳಿ ೪. ಹಾವೇರಿ.

೨. ಬೆಳಗಾವಿ ಜಿಲ್ಲೆ:— ೧. ಬೆಳಗಾವಿ ೨. ಚಿಕ್ಕೋಡಿ ೩. ಬೈಲಹೊಂಗಲ

೩. ವಿಜಾಪುರ ಜಿಲ್ಲೆ:— ೧. ವಿಜಾಪುರ ೨. ಬಾಗಲಕೋಟಿ

೪. ಕಾರವಾರ ಜಿಲ್ಲೆ:— ೧. ಕಾರವಾರ ೨. ಕುಮಟೆ

೫. ಕೊಲ್ಹಾಪುರ ಸಂಸ್ಥಾನ:— ಕೊಲ್ಹಾಪುರ

ಟಿಪ್ಪಣಿ:—

(೧). ಧಾರವಾಡ ಜಿಲ್ಲೆಯ ಗದಗ, ನವಿಲುಗುಂದ, ರೋಣ ತಾಲೂಕುಗಳ ಮತ್ತು ಸಂಸ್ಥಾನಗಳಲ್ಲಿಯ ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳ ಉಮೇದವಾರರು ಗದಗ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೨). ಧಾರವಾಡ ಜಿಲ್ಲೆಯ ಕರಜಗಿ, ಕೋಡ, ರಾಣೆಬೆನ್ನೂರ ಮತ್ತು ಹಾನಗಲ್ಲು ತಾಲೂಕಗಳ ಉಮೇದವಾರರು ಹಾವೇರಿ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೩). ಧಾರವಾಡ ಜಿಲ್ಲೆಯ ಎಲ್ಲ ಉರ್ದು ಉಮೇದವಾರರು ಹುಬ್ಬಳ್ಳಿ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

(೪). ಧಾರವಾಡ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು ಮರಾಠಿ ಮತ್ತು ಆಗ್ರಿಕಲ್ಚರಲ್ ಬಾಯಸದ ಉಮೇದವಾರರು ಸಹ ಧಾರವಾಡ ಕೇಂದ್ರದಲ್ಲಿಯೇ ಪರೀಕ್ಷೆಗೆ ಕೂಡ್ರತಕ್ಕದ್ದು.

(ಖ). ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಅಥಣಿ ತಾಲೂಕುಗಳ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್ ಬಾಯುಸದ ಉಮೇದವಾರರ ಹೊರತಾಗಿ) ಚಿಕ್ಕೋಡಿ ಕೇಂದ್ರದಲ್ಲಿಯೂ ಬೈಲಹೊಂಗಲ ಪರಸಗಡ ತಾಲೂಕುಗಳ ಮತ್ತು ಗೋಕಾಕ ತಾಲೂಕಿನ ಒಂದು ಭಾಗ ಇವುಗಳ ಉಮೇದವಾರರಷ್ಟೇ (ಅಗ್ರಿಕಲ್ಚರಲ್ ಬಾಯುಸದ ಉಮೇದವಾರರ ಹೊರತಾಗಿ) ಬೈಲಹೊಂಗಲ ಕೇಂದ್ರದಲ್ಲಿಯೂ ಜಿಲ್ಲೆಯ ಉಳಿದ ಎಲ್ಲ ಉಮೇದವಾರರು (ಅಗ್ರಿಕಲ್ಚರಲ್ ಬಾಯುಸದ ಉಮೇದವಾರರು ಸಹ) ಬೆಳಗಾವಿ ಕೇಂದ್ರದಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು.

(ಟ). ವಿಜಾಪುರ ಜಿಲ್ಲೆಯ ಬಾಗಲಕೋಟೆ, ಹುನಗುಂದ, ಬದಾಮಿ ತಾಲೂಕುಗಳ ಮತ್ತು ಮುದ್ದೇಬಿಹಾಳ ಬಾಗೇವಾಡಿ ತಾಲೂಕುಗಳ ಭಾಗಗಳ ಹಾಗೂ ಜಮಖಂಡಿ, ಮುಧೋಳ, ರಾಮದುರ್ಗ ಸಂಸ್ಥಾನಗಳ ಎಲ್ಲ ಕನ್ನಡ ಮತ್ತು ಉರ್ದು ಉಮೇದವಾರರು ಬಾಗಲಕೋಟೆ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು. ವಿಜಾಪುರ ಜಿಲ್ಲೆಯ ಮಿಕ್ಕ ಕನ್ನಡ, ಮರಾಠಿ, ಉರ್ದು, ಅಗ್ರಿಕಲ್ಚರಲ್ ಬಾಯುಸದ ಎಲ್ಲ ಉಮೇದವಾರರು ಸಹ, ವಿಜಾಪುರ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು.

(ಠ). ಕಾರವಾರ ಜಿಲ್ಲೆಯ ಹಳಿಯಾಳ ತಾಲೂಕಿನ ಹಾಗೂ ಶಿರಸಿ ತಾಲೂಕಿನ ಬನವಾಸಿ ಊರಿನ ಉಮೇದುವಾರರು, ಧಾರವಾಡ ಕೇಂದ್ರದಲ್ಲಿಯೂ ಸಾಂಗಲಿ ಸಂಸ್ಥಾನದ ಕೂಚಿ ತಾಲೂಕಿನ ಉಮೇದವಾರರು ಸಾತಾರಾ ಕೇಂದ್ರದಲ್ಲಿಯೂ ಪರೀಕ್ಷೆಗೆ ಕೂಡ್ರಬೇಕು. ಔಂಧ ಸಂಸ್ಥಾನದ ಗುಂಡಳ ತಾಲೂಕಿನ ಉಮೇದವಾರರು ವಿಜಾಪುರ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು.

(ಡ). ಕಾರವಾರ ಜಿಲ್ಲೆಯ ಕುಮಟೆ, ಹೊನ್ನಾವರ, ಸಿರ್ಸಿ, ಸಿದ್ದಾಪುರ ತಾಲೂಕುಗಳ ಎಲ್ಲ ಕನ್ನಡ ಮತ್ತು ಉರ್ದು ಉಮೇದವಾರರು ಕುಮಟಾ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು. ಕಾರವಾರ ಜಿಲ್ಲೆಯ ಮಿಕ್ಕ ಎಲ್ಲ ಉಮೇದುವಾರರು ಉರ್ದು, ಮರಾಠಿ, ಅಗ್ರಿಕಲ್ಚರಲ್ ಬಾಯುಸದ ಉಮೇದುವಾರರು ಸಹ ಕಾರವಾರ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರತಕ್ಕದ್ದು.

೨. ಈ ಪರೀಕ್ಷೆಯು ಮುಂಬಯಿಯ ಗವ್ಹರ್ನಮೆಂಟ್ ಗ್ಯಾಝೆಟಿನ ವಿದ್ಯಾಖಾತೆಯ ನೋಟಿಫಿಕೇಶನ್ನಿನ ೨೨ಲಲನೆಯ ಸಂಬರಿನ ೧೯-೯-೧೯೨೮ ತಾರೀಖಿನ ಹಾಗೂ ೨೯-೭-೧೯೨೯ ಮತ್ತು ೧೪-೩-೧೯೩೦; ೩-೮-೧೯೩೧; ೨೧-೬-೧೯೩೮ ತಾರೀಖುಗಳ ಮುಂಬಯಿ ಗ್ಯಾಝೆಟಿನ ಭಾಗ ೧ ರ

೧೯೬೮ , ೧೯೬೩ , ೬೨೭ , ೧೯೪೪ , ೧೯೩೨-೩೩
೨೦-೯-೧೯೪೪ , ೧-೪-೧೯೪೯ , ೩-೪-೧೯೩೦ , ೬-೪-೧೯೩೧ , ೨೩-೬-೧೯೩೪

ನೆಯ ಪುಟಗಳಲ್ಲಿ ಪ್ರಸಿದ್ಧಿಸಿದ ನಿಯಮಗಳ ಮೇರೆಗೆ ನಡೆಯಿಸಲ್ಪಡುವದು.

೩. ಮೇಲೆ ಹೇಳಿದ ಪ್ರತಿಯೊಂದು ಕೇಂದ್ರದಲ್ಲಿ ಒಂದೊಂದು ಪರೀಕ್ಷಾ ಕಮೀಟಿಯು ಇರುವದು. ಹಾಗೂ ಆ ಕಮೀಟಿಯ ಪ್ರೆಸಿಡೆಂಟರು ಕೆಳಗೆ ಬರೆದ ಪ್ರಕಾರ ಇರುವರು.

೧. **ಧಾರವಾಡ ಕೇಂದ್ರ**:— ಧಾರವಾಡದ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು. **ಧಾರವಾಡ.**

೨. **ಗದಗ ಕೇಂದ್ರ**:— ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. **ಧಾರವಾಡ.**

೩. **ಹುಬ್ಬಳ್ಳಿ ಕೇಂದ್ರ**:— ಆಂಗ್ಲೋ ಉರ್ದು ಹೈಸ್ಕೂಲಿನ ಹೆಡ್‌ಮಾಸ್ತರರು. **ಹುಬ್ಬಳ್ಳಿ.**

೪. **ಹಾವೇರಿ ಕೇಂದ್ರ**:— ಧಾರವಾಡದ ಟ್ರೇನಿಂಗಸ್ಕೂಲಿನ ಹೆಡ್‌ಮಾಸ್ತರರು. **ಧಾರವಾಡ.**

೫. **ಬೆಳಗಾವಿ ಕೇಂದ್ರ**:— ಬೆಳಗಾವಿಯ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು. **ಬೆಳಗಾವಿ.**

೬. **ಚಿಕ್ಕೋಡಿ ಕೇಂದ್ರ**:— ಬೆಳಗಾವಿ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. **ಬೆಳಗಾವಿ.**

೭. **ಬೈಲಹೊಂಗಲ ಕೇಂದ್ರ**:— ದಕ್ಷಿಣಭಾಗದ ಉರ್ದುಸ್ಕೂಲುಗಳ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. **ಧಾರವಾಡ.**

೮. **ವಿಜಾಪುರ ಕೇಂದ್ರ**:— ವಿಜಾಪುರದ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು. **ವಿಜಾಪುರ.**

೯. **ಬಾಗಲಕೋಟೆ ಕೇಂದ್ರ**:— ವಿಜಾಪುರ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. **ವಿಜಾಪುರ.**

೧೦ **ಕಾರವಾರ ಕೇಂದ್ರ**:— ಕಾರವಾರದ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು. **ಕಾರವಾರ.**

೧೧. **ಕುಮಟಾ ಕೇಂದ್ರ**:— ಕಾರವಾರ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. **ಕಾರವಾರ.**

೧೨. **ಕೊಲ್ಹಾಪುರ ಕೇಂದ್ರ:**— ಇನ್‌ಸ್ಪೆಕ್ಟರ ಆಫ್ ವ್ಯಾಯ್ಮರಿ ಎಜ್ಯುಕೇಶನ್ ಕೊಲ್ಹಾಪುರ ಸಂಸ್ಥಾನ. **ಕೊಲ್ಹಾಪುರ.**

೪. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದವಾರರು ತಾವು ಪರೀಕ್ಷೆಗೆ ಕೂಡ್ರುವ ಕೇಂದ್ರದ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ತಾರೀಖು ೧-೩-೧೯೪೧ ನೆಯ ದಿವಸ ಅಥವಾ ಅದಕ್ಕೂ ಮೊದಲು ಮುಟ್ಟುವಂತೆ ಪರೀಕ್ಷೆಯ ಪರವಾನಗಿಯ ಬಗ್ಗೆ ಗೊತ್ತಾದ ಮುದ್ರಿಸಿದ ನಮೂನೆಯ ಮೇಲೆ ಅರ್ಜಿಯನ್ನು ಕಳುಹಿಸತಕ್ಕದ್ದು. ತಾರೀಖು ೧-೩-೧೯೪೧ರ ತರುವಾಯ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ. ಯಾವದೊಂದು ಬ್ರಿಟಿಶ ಜಿಲ್ಹೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವ ದೇಶೀಯ ಸಂಸ್ಥಾನಗಳ ಉಮೇದವಾರರು ಆಯಾ ಸಂಸ್ಥಾನಗಳ ಯೋಗ್ಯ ಅಧಿಕಾರಸ್ಥರ ಮುಖಾಂತರ ತಮ್ಮ ಅರ್ಜಿಯನ್ನು ಕಳುಹಿಸತಕ್ಕದ್ದು. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಪೂರ್ಣ ಹೆಸರು ಹಾಗೂ ಆತನು ಯಾವುದೊಂದು ಶಾಲೆಯಿಂದ ಪರೀಕ್ಷೆಗೆ ಬಂದಿದ್ದರೆ ಆ ಶಾಲೆಯ ಹೆಸರು ಇರಲಿಕ್ಕೆ ಬೇಕು. ಅರ್ಜಿಯಸಂಗಡಲೆ ೩ ರೂ. ಪರೀಕ್ಷೆಯ ಫೀಯನ್ನು ಸಹ ಕಳುಹಿಸಲೇಬೇಕು. ಎಬೋರಿಜಿನಲ್ ಮತ್ತು ಗುಡ್ಡುಗಾಡು ಪಂಗಡಗಳ ಜನರನ್ನೊಳಗೊಂಡ ಹಿಂದುಳಿದ ವರ್ಗದ ಎಲ್ಲ ಉಮೇದುವಾರರು ೧ ರೂ. ಫೀ ಕಳುಹಿಸಿದರೆ ಸಾಕು. ಸಂಪೂರ್ಣ ಮಾಹಿತಿ ತುಂಬದೆ ಇದ್ದ ಅರ್ಜಿಯೂ ಫೀಯನ್ನು ಕಳುಹಿಸದೆ ಇದ್ದ ಅರ್ಜಿಯೂ ಅರ್ಜಿಯಿಲ್ಲದೆ ಕಳುಹಿಸಿದ ಫೀ ಹಣವೂ ಯಾವ ನೆವವನ್ನೂ ಕೇಳದೆ ತಿರಸ್ಕರಿಸಲ್ಪಡುವವು. ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರ ಕಡೆಗೆ ದೊರೆಯುವವು. ಬೇಕಾದವರು ತರಿಸಿಕೊಳ್ಳಬಹುದು. ಇವಕ್ಕೆ ರೊಕ್ಕ ಕೊಡಬೇಕಾಗುವದಿಲ್ಲ.

೫. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದುವಾರರ ವಯಸ್ಸು ತಾರೀಖು ೧-೪-೧೯೪೧ಕ್ಕೆ ೨೫ ವರ್ಷ ಮಿಕ್ಕಿರಬಾರದು. ತಾವು ಯಾವ ಜಿಲ್ಹೆಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಚಿಸುವರೋ ಆ ಜಿಲ್ಹೆಯಲ್ಲಿ ಅವರು ಅದಕ್ಕೂ ಹಿಂದೆ ಆರು ತಿಂಗಳು ವಾಸವಾಗಿರಬೇಕು. ಆ ಪ್ರಕಾರ ವಾಸವಾಗಿದ್ದ ಬಗ್ಗೆ ಯಾವದಾದರೊಂದು ರಿಕಗ್‌ನಾಯಿಝಡ ಸಾಲೆಯ ಹೆಡ್‌ಮಾಸ್ತರರ ಸರ್ಟಿಫಿಕೇಟನ್ನು ಹಾಜರ ಪಡಿಸಬೇಕು. ಎಂದೂ ಸಾಲೆಗೆ ಹೋಗದೆ ಇದ್ದ ಉಮೇದುವಾರರು ಈ ಬಗ್ಗೆ ಸರಕಾರದವರಿಂದ ಮಾನ್ಯವಾದ ಸಾಲೆಯ ಮಾಸ್ತರನ ಇಲ್ಲವೆ ಪಾಟೀಲರಿಗಿಂತ ಕಡಿಮೆ ದರ್ಜೆಯವನಲ್ಲದ **ಸರಕಾರೀ ನೌಕರನ** ಸರ್ಟಿಫಿಕೇಟನು ಹಾಜರ ಮಾಡಬೇಕು.

೬. ಧಾರವಾಡ ಕಾರವಾರ ಜಿಲ್ಲೆಗಳ ದೇಶಭಾಷೆಯು ಕನ್ನಡವೆಂದೂ ಜಾಪುರ ಬೆಳಗಾವಿ ಜಿಲ್ಲೆಗಳ ದೇಶಭಾಷೆಗಳು ಕನ್ನಡ ಹಾಗೂ ಮರಾಠಿ ಎಂದೂ ಲಾಪುರ ಸಂಸ್ಥಾನದ ದೇಶಭಾಷೆಯು ಮರಾಠಿ ಎಂದೂ ಎಣಿಸಲ್ಪಟ್ಟಿವೆ. ರವಾಡ ಹಾಗು ಕಾರವಾರ ಜಿಲ್ಲೆಗಳ ಮರಾಠಿ ಭಾಷೆಯಲ್ಲಿ ಪರೀಕ್ಷೆಗೆ ಡುವ ಮರಾಠಿ ಉಮೇದುವಾರರ ಅನುಕೂಲತೆಗಾಗಿ ಕ್ರಮವಾಗಿ ಧಾರವಾಡ ತ್ತು ಕಾರವಾರ ಕೇಂದ್ರಗಳಲ್ಲಿ ಪರೀಕ್ಷೆಗೆ ಕೂಡ್ರಲಿಕ್ಕೆ ಅವರಿಗೆ ಅಪ್ಪಣೆ ಡಲಾಗಿದೆ.

೭. ಈ ಪರೀಕ್ಷೆಯ ವಿಷಯಗಳೇ ಮೊದಲಾದ ಮಿಕ್ಕ ಎಲ್ಲ ವಿವರಗಳು ೀಲೆ ಎರಡನೆಯ ಪ್ಯಾರಾದಲ್ಲಿ ಬರೆದ ಗ್ಯಾಝೆಟಿನ ಪುಟಗಳಲ್ಲಿ ಪ್ರಕಟವಾಗಿವೆ.

೮. ಶೇತಕೀ ವಿಷಯವನ್ನು ಆರಿಸಿಕೊಂಡ ಉಮೇದುವಾರರ (ಅಗ್ರಿ-ಲ್ಚರಲ್ ಬಾಯಸದ) ಪ್ರಾ. ಸ್ಕೂ. ಲಿ. ಸ. ಪರೀಕ್ಷೆಯೂ ಸಹ ಇವೇ ತಾರೀಖು ೆ ದಿವಸ ಧಾರವಾಡ, ಎಜಾಪುರ, ಬೆಳಗಾವಿ, ಕಾರವಾರ ಈ ಕೇಂದ್ರಗಳಲ್ಲಿ ಾತ್ರ ನಡೆಯುವದು. ಈ ಪರೀಕ್ಷೆಯು $\frac{೧೧೯೯}{೬-೭-೧೯೩೫}$ ನೆಯ ನಂಬರಿನ ಸರ ಕಾರೀ ಠರಾವಿನ ಮತ್ತು $\frac{೧೧೯೯}{೯-೬-೧೯೩೮}$ ನೆಯ ನಂಬರಿನ ಮತ್ತು $\frac{೨೨೮೮}{೨೧-೬-೧೯೩೮}$ ಯ ನಂಬರಿನ ಸರಕಾರೀ ಠರಾವುಗಳಲ್ಲಿ ತಿದ್ದುಪಡಿ ಹೊಂದಿದ ನಿಯಮಗಳ ೀರೆಗೆ ನಡೆಯುವದು. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ೀಕ್ಷೆಯ ಪರವಾನಗಿ ಅರ್ಜಿಯ ಸಂಗಡ ತಾವು ಅಗ್ರಿಕಲ್ಚರಲ್ ಬಾಯಸ್ ನ್ಯಾಸದ ಮೂರು ವರ್ಷದ ಅಭ್ಯಾಸ ಕ್ರಮವನ್ನು ಮುಗಿಸಿರುವ ಬಗ್ಗೆ ರ್ಟಿಫಿಕೇಟನ್ನು ಕಳುಹಿಸಬೇಕು.

ಜ್ಯುಕೇಶನಲ್ ಇನ್‌ಸ್ಪೆಕ್ಟರ್
ದಕ್ಷಿಣಭಾಗ ಇವರ ಕಚೇರಿ
ಾರವಾಡ ತಾ. ೨೩-೧೦-೧೯೪೧

S. R. Tawade,
ಎ. ಇ. ದ. ಭಾಗ.

ವಿ. ಸೂ— ಕಾರವಾರ ಜಿಲ್ಲೆಯ **ಕುಮಟಾ** ಕೇಂದ್ರವೂ ಬೆಳಗಾವ ಿಯ **ಬೈಲಹೊಂಗಲ** ಕೇಂದ್ರವೂ ಇದೇವರ್ಷ ಹೊಸದಾಗಿ ಪ್ರಾರಂಭವಾಗಿವೆ. ನ್ನಕರು ಈ ವಿಷಯಗಳನ್ನು ಲಕ್ಷ್ಯಪೂರ್ವಕವಾಗಿ ಓದಿಕೊಂಡು ಅವಕ್ಕನು ಣವಾಗಿ ಉಮೇದುವಾರರ ಅರ್ಜಿಗಳನ್ನು ಯೋಗ್ಯ ಅಧಿಕಾರಿಗಳ ಕಡೆಗೆ ುಹಿಸಿಕೊಡಬೇಕು.

೧೯೪೧ನೆಯ ಇಸ್ವಿಯಲ್ಲಿ ನಡೆಯುವ ಗಂಡುಮಕ್ಕಳ ಕನ್ನಡ ಮತ್ತು ಮರಾಠಿ ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು.

ವಾರ ಮತ್ತು ತಾರೀಖು	ವೇಳೆ ಇಂದ	ವೇಳೆ ವರೆಗೆ	ವಿಷಯಗಳು	ಗುಣಗಳು	ಶರಾ
ಮಂಗಳವಾರ ೧೮-೪-೧೯೪೧	೧೧	೧೨	ಪರೀಕ್ಷೆಗೆ ಕೂಡ್ರುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧೨	೨	ಎರಡನೆಯ ಸದರು— ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು.	೧೦೦	
ಸದರ	೩	೪	ಐದನೆಯ ಸದರು— ಆರೋಗ್ಯ ವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಕ್ರಮಿಕ ಎಳನೆಯ ಪುಸ್ತಕದಲ್ಲಿಯ ಶಾಸ್ತ್ರೀಯ ವಿಷಯ.	೧೦೦	
ಬುಧವಾರ ೧೯-೪-೧೯೪೧	೧೧	೨	ಮೂರನೆಯ ಸದರು— (ಅ) ಅಂಕಗಣಿತ.	(ಅ) ೧೦೦	
ಸದರ	೩	೪	ನಾಲ್ಕನೆಯ ಸದರು— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	(ಅ) ೫೦ (ಬ) ೫೦	
ಗುರುವಾರ ೨೦-೪-೧೯೪೧	೧೧	೨	ಮೂರನೆಯ ಸದರು— (ಬ) ಮತ್ತು (ಕ) ಭೂಮಿತಿ ಮತ್ತು ಜಮಾಖರ್ಚು.	(ಬ) ೫೦ (ಕ) ೫೦	
ಸದರ	೩	೪	ಮೊದಲನೆಯ ಸದರು— (ಅ) ಮತ್ತು (ಬ) ಪ್ರಾಂತಿಕ ಭಾಷೆ.	(ಅ) ೭೫ (ಬ) ೨೫	

೧೯೪೧ನೆಯ ಇಸವಿಯಲ್ಲಿ ನಡೆಯುವ ಅಗ್ರಿಕಲ್ಚರಲ್ ಬಾಯಸ್ ಕೋರ್ಸನ್ನು ತರಿಸಿಕೊಂಡ ಗಂಡುಮಕ್ಕಳ
ಪ್ರಾಯಮರಿ ಸ್ಕೂಲ್ ಲೀವ್ಹಿಂಗ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು.

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು	ಗುಣಗಳು	ಶರಾ
ಮಂಗಳವಾರ					
೧—೪—೧೯೪೧	೧೧	೧೨	ಪರೀಕ್ಷೆಗೆ ಕುಳಿತ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧೨	೨	ಎರಡನೆಯ ಸದರು– ನಿಬಂಧ ಅಥವಾ ರಿಪೋರ್ಟ ಪತ್ರಬರಹ ಮುಂ.	೧೦೦	
ಸದರ	೩	೫	ಐದನೆಯ ಸದರು– (ಅ) ಶಾಸ್ತ್ರೀಯ ವಿಷಯದ ಆರಂಭದ ವಿಚಾರಗಳು ಮತ್ತು (ಬ) ಆರೋಗ್ಯಶಾಸ್ತ್ರ	(ಅ) ೨೫ (ಬ) ೨೫	
ಬುಧವಾರ					
೨—೪—೧೯೪೧	೧೧	೨	ಮೂರನೆಯ ಸದರು– (ಅ) ಅಂಕಗಣಿತ (ಬ) ಮಹತ್ವವಾಪನ (ಕ) ಹಾದಿ ಜಮಾಖರ್ಚ	ಅ) ೫೦ (ಬ) ೨೫ (ಕ) ೨೫	
ಸದರ	೩	೬	ನಾಲ್ಕನೆಯ ಸದರು– (ಅ) ರಾಜ್ಯಕಾರ್ಯಭಾರ (ಬ) ಸಹಕಾರ (ಕ) ಭೂಗೋಲ	(ಅ) ೨೫ (ಬ) ೨೫ (ಕ) ೫೦	
ಗುರುವಾರ					
೩—೪—೧೯೪೧	೧೧	೨	ಆರನೆಯ ಸದರು– (ಅ) ಒಕ್ಕಲತನ ಮತ್ತು (ಬ) ಪ್ರಕೃತಿ ವಿಮರ್ಶೆ	(ಅ) ೩೫ (ಬ) ೫೦	
ಸದರ	೩	೬	ಮೊದಲನೆಯ ಸದರು– (ಅ) ಮತ್ತು (ಬ) ಪ್ರಾಂತಿಕ ಭಾಷೆ	(ಅ) ೭೫ (ಬ) ೨೫	
ಶುಕ್ರವಾರ					
೪—೪—೧೯೪೧	*	*	ಏಳನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦	
ಸದರ	*	*	ಆರನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦	

* ವೇಳೆಯನ್ನು ಸ್ಥಾನಿಕ ಕಮಿಟಿಯ ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಓವ್ಹರಸೀಅರರೊಡನೆ ವಿಚಾರವಿನಿಮಯ ಮಾಡಿಕೊಂಡು ಗೊತ್ತುಪಡಿಸುವರು. ಪರೀಕ್ಷೆಗೆ ಕುಳಿತ ಉಮೇದವಾರರು ಮೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲೇಬೇಕು

೧೯೪೧ ನೆಯ ಇಸ್ವಿಯಲ್ಲಿ ನಡೆಯುವ ಗಂಡುಮಕ್ಕಳ ಉರ್ದು ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು	ಗುಣಗಳು	ಶರಾ
ಮಂಗಳವಾರ	೧೧	೧೨	ಪರೀಕ್ಷೆಗೆ ಕೂಡುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
೧–೪–೧೯೪೧	೧೨	೨	ಎರಡನೆಯ ಸದರು:— ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು. ಕನ್ನಡ–ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ ಉರ್ದು ಕನ್ನಡ ಅಥವಾ ಉರ್ದು–ಮರಾಠಿ ಉರ್ದು ಉಮೇದುವಾರರಿಗೆ ಉರ್ದುವಿನಲ್ಲಿ	೧೦೦	
ಸದರ	೩	೫	ಐದನೆಯ ಸದರು:— ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ ಮತ್ತು ಶಾಸ್ತ್ರೀಯ ವಿಷಯದ ಆರಂಭದ ವಿಚಾರಗಳು.	೧೦೦	
ಬುಧವಾರ	೧೧	೨	ಮೂರನೆಯ ಸದರು:— (ಅ) ಅಂಕಗಣಿತ	(ಅ) ೧೦೦	
೨–೪–೧೯೪೧					
ಸದರ	೩	೫	ನಾಲ್ಕನೆಯ ಸದರು:— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ	(ಅ) ೫೦ (ಬ) ೫೦	
ಗುರುವಾರ	೧೧	೨	ಮೂರನೆಯ ಸದರು:— (ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜ. ಖ.	(ಬ) ೫೦ (ಕ) ೫೦	
೩–೪–೧೯೪೧					
ಸದರ	೩	೫	ಮೊದಲನೆಯ ಸದರು:— (ಅ) ಮತ್ತು (ಬ) ಪ್ರಾಂತಿಕ ಭಾಷೆ ಕನ್ನಡ, ಮರಾಠಿ. ಅಥವಾ ಉರ್ದು	(ಅ) ೭೫ (ಬ) ೨೫	
	೪	೧೦	ಆರನೆಯ ಸದರು:— (ಅ) ಪ್ರಾಂತಿಕ ಭಾಷೆ ಉರ್ದು ಅಥವಾ ಕನ್ನಡ ಇಲ್ಲವೆ ಮ.	(ಅ) ೫೦	
ಶುಕ್ರವಾರ					
೪–೪–೧೯೪೧					
ಸದರ	೪	೬	ಆರನೆಯ ಸದರು:— (ಬ) ಪತ್ರಬರೆಹ ಅಥವಾ ರಿಪೋರ್ಟು * ಪತ್ರಬರೆಹ ಮು. ಕನ್ನಡ ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಉರ್ದುವಿನಲ್ಲಿ. ಉರ್ದುಕನ್ನಡ ಅಥವಾ ಉರ್ದು ಮರಾಠಿ ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ	(ಬ) ೫೦	

ವಿ. ಸೂ— ಪರೀಕ್ಷೆಗೆ ಕುಳಿತ ಉಮೇದುವಾರರು ಮೊದಲನೆಯ ದಿನ ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು

ಮುಖ್ಯ ಮಂತ್ರಿಗಳಾದ ಚರ್ಚಿಲ್ ಸಾಹೇಬರ ಭಾಷಣದ ಮುಖ್ಯಾಂಶಗಳು

(ತಾ. ೧೪–೫–೧೯೪೦ ರಿಂದ ೧೪–೭–೧೯೪೦ ರ ವರೆಗೆ)

(ಕಳೆದ ತಿಂಗಳ ಸಂಚಿಕೆಯ ೧೫ನೆಯ ಪುಟದಿಂದ ಮುಂದೆಸಾಗಿದ್ದು)

ನಮ್ಮ ಆರ್. ಎ. ಎಫ್. ದಲವು ಅಜಿಂಕ್ಯವಾಗಿದೆ. ಅದು ಜರ್ಮನ್ನರ ವಿಮಾನ ದಲಕ್ಕಿಂತಲೂ ಎಷ್ಟೋಪಟ್ಟು ಪ್ರಬಲವಾಗಿರುವದು. ನಮ್ಮ ವಿಮಾನ ದಲದವರು ಜರ್ಮನ್ ವಿಮಾನದಲದ ಬಲವನ್ನು ಕುಗ್ಗಿಸಿಬಿಟ್ಟಿರುವರು. ಆದ್ದರಿಂದ ನಮ್ಮ ಶಕ್ತಿಯು ಬೆಳೆದಿರುವದು.

ಫ್ರಾನ್ಸ್ ದೇಶದಲ್ಲಿ ಏನೇ ಆಗಲಿ, ಫ್ರೆಂಚ ಸರಕಾರದ ಗತಿ ಎಂತೇ ಆಗಲಿ, ನಾವೂ ನಮ್ಮ ಸಾಮ್ರಾಜ್ಯವೂ ಫ್ರೆಂಚ ಜನತೆಯ ಸ್ನೇಹ ಋಣಾನುಬಂಧಗಳನ್ನು ಎಂದಿಗೂ ಮರೆಯಲಾರೆವು.

೭. **ಉಗ್ರವೂ ಗಂಭೀರವೂ ಆದ ನಿರ್ಣಯ:—** ಫ್ರೆಂಚ ಸೈನ್ಯವು ಜರ್ಮನಿ ಮತ್ತು ಇಟಲಿಗಳ ವಶವಾಗಬಾರದೆಂಬ ಚಟುವಟಿಕೆಯು ನಡೆದಿರು ವಾಗ ಜುಲೈ ತಿಂಗಳ ೪ನೆಯ ತಾರೀಖಿನ ದಿನ ಚರ್ಚಿಲ್ ಸಾಹೇಬರು ಈ ರೀತಿ ಮಾತಾಡಿದರು:—

"ಫ್ರೆಂಚ ಹಡಗುಪಡೆಯು ಹಗೆಗಳ ವಶವಾಗದಿರುವುದಕ್ಕೆ ಅವಶ್ಯಕ ಉಪಾ ಯಗಳನ್ನು ನಾವು ಈಗ ಕೈಕೊಳ್ಳಲೇಬೇಕಾಗಿರುವದೆಂದು ನಾನು ಬಹು ದುಃಖ ದಿಂದ ಈ ಸಭೆಗೆ ಅರಿಕೆಮಾಡಿಕೊಳ್ಳುವೆನು. ಅದೇ ಮೇರೆಗೆ ನಿನ್ನೆ ಮುಂಜಾನೆ ಎಲ್ಲ ಸಿದ್ಧತೆಯನ್ನು ಮಾಡಿಕೊಂಡ ತರುವಾಯ ನಾವು ಫ್ರೆಂಚ ಹಡಗುಪಡೆಯ ನ್ನೆಲ್ಲ ನಮ್ಮ ವಶಕ್ಕೆ ತೆಗೆದುಕೊಂಡೆವು. ಅಂಥ ಅನಿವಾರ್ಯ ಪ್ರಸಂಗವೊದಗಿದ್ದ ರಿಂದಲೇ ನಾವು ಹಾಗೆ ಮಾಡಬೇಕಾಯಿತು.

ಇನ್ನು ಭೂಮಧ್ಯಸಮುದ್ರದತ್ತ ನೋಡೋಣ. ಅಲೆಕ್ಝಾಂಡ್ರಿಯಾ ಬಂದರದಲ್ಲಿ ದೊಡ್ಡದೊಂದು ಹಡಗುಪಡೆಯು ನಿಂತಿರುವದು. ಒಂದು ಫ್ರೆಂಚ ಯುದ್ಧದ ಹಡಗವೂ ನಾಲ್ಕು ಕ್ರೂಝುರಗಳೂ ಮೂರು ಅಧುನಿಕ ರೀತಿಯಿಂದ ನಿರ್ಮಾರಿಸಿದ ಹಡಗಗಳೂ ಹಲಕೆಲವು ಚಿಕ್ಕ-ದೊಡ್ಡ ಹಡಗಗಳೂ ಅಲ್ಲಿರುವವು. ಅಲ್ಲಿರುವ ಹಡಗಗಳು ಬಂದರದಿಂದ ಹೊರಗೆ ಹೋದರೆ ಅವು ಶತ್ರುಗಳ ವಶವಾಗಿ ಬಿಂದರೆಗೇಡಾಗಬಹುದಾದ್ದರಿಂದ ಹಾಗೆ ಹೊರಗೆ ಹೋಗದಂತೆ ಪ್ರತಿಬಂಧಕ ಜ್ಞೆಯನ್ನು ಕೊಡಲಾಗಿದೆ.

ಅಲೆಕ್ಸಾಂಡ್ರಿಯಾದೊಳಗಿನ ಎಲ್ಲ ಫ್ರೆಂಚ ಜನರಿಗೂ ಯುದ್ಧವನ್ನು ಮುಂದುವರಿಸುವ ಅಧಿಕಾರಿಗಳಿಗೂ ನಾವು ಎಲ್ಲ ಬಗೆಯ ಅನುಕೂಲತೆಗಳನ್ನು ಒದಗಿಸಿಕೊಡುವೆವು. ಅವರಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸಿಕೊಡುವೆವು. ಯುದ್ಧವು ನಡೆದಾಗ ಅವರ ಸಂರಕ್ಷಣೆಯ ಭಾರವನ್ನು ನಾವು ಒಪ್ಪಿಕೊಳ್ಳುವೆವು. ಮಿಕ್ಕುಳಿದವರನ್ನು ಅವರ ದೇಶಕ್ಕೆ ಹೋಗಗೊಡುವೆವು. ಅವರ ಸಂರಕ್ಷಣೆಯ ಮತ್ತು ಅಲ್ಲಿಂದ ಸುರಕ್ಷಿತವಾದ ಸ್ಥಳಕ್ಕೆ ಅವರನ್ನು ಒಯ್ದು ಮುಟ್ಟಿಸುವ ಹೊಣೆಯನ್ನು ನಾವು ಹೊರುವೆವು. ನಮ್ಮ ಈ ಕಾರ್ಯವು ಯೋಗ್ಯವೋ ಅಯೋಗ್ಯವೋ ಎಂಬದನ್ನು ಈ ಸಭೆಯು ನಿರ್ಣಯಿಸಲಿ; ನಮ್ಮ ರಾಷ್ಟ್ರವು ನಿರ್ಣಯಿಸಲಿ ಯುನಾಯಿಟೆಡ್ ಸ್ಟೇಟ್ಸದವರು ಹೇಳಲಿ. ಜಗತ್ತೇ ಈ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಪ್ರಕಟಿಸಲಿ.

ಹಗೆಗಳೊಡನೆ ಒಪ್ಪಂದ ಮಾಡಿಕೊಳ್ಳಲು ನಾವು ಸಿದ್ಧರಿಲ್ಲ. ನಾವು ಕೈಕೊಂಡ ಘನವಾದ ಕಾರ್ಯವು ಕೊನೆಗಾಣುವ ವರೆಗೂ ಈ ಯುದ್ಧವನ್ನು ಮುಂದೆ ಸಾಗಿಸುವದೇ ನಮ್ಮ ಪ್ರಬಲವಾದ ಇಚ್ಛೆ.

೮. **ಪ್ರಬಲವಾದ ಸಾಮರ್ಥ್ಯ ಮತ್ತು ಘನತರವಾದ ಧೈರ್ಯ:**— ಇಂದು ಜುಲೈ ತಿಂಗಳ ೧೪ನೆಯ ತಾರೀಖು. ಇಂದು ಫ್ರಾನ್ಸ ರಾಷ್ಟ್ರೀಯ ಉತ್ಸವವು ನೆರವೇರಬೇಕಾಗಿದ್ದಿತು. ಒಂದು ವರ್ಷದ ಹಿಂದೆ ನಾನು ಪಾರಿಸದಲ್ಲಿ ಫ್ರಾನ್ಸದ ಸೈನ್ಯದ ಕವಾಯಿತು (Parade) ನೋಡಿದ್ದೆನು. ಈ ಮಹಾಯುದ್ಧದಿಂದ ಅದರ ಅವಸ್ಥೆಯೇನಾಗಿದೆಯೋ ಯಾರು ಬಲ್ಲರು? ಮುಂದಿನ ವರ್ಷ ಇನ್ನೂ ಏನೇನು ಅವಸ್ಥಾಂತರಗಳಾಗುವವೋ ಈಗ ಹೇಳಲು ಸಾಧ್ಯವಿಲ್ಲ. ಅಂಥ ಭವಿಷ್ಯವನ್ನು ಯಾರೂ ಕಲ್ಪಿಸಿ ಹೇಳಲಾರರು.

ಫ್ರಾನ್ಸವು ಬಿಡುಗಡೆ ಹೊಂದಿ ತನ್ನ ಪೂರ್ವದ ವೈಭವ ಘನತೆಗಳನ್ನು ಪುನಃ ಪಡೆದು ಆನಂದದಲ್ಲಿರುವಂತಾಗಲಿ; ಸ್ವಾತಂತ್ರ್ಯ ಮನುಷ್ಯತ್ವಗಳ ಹಕ್ಕು ಬಾಧ್ಯತೆಗಳನ್ನು ಪಡೆದು ಆದು ಮುಂದೆ ಬರಲಿ, ಎಂದು ಆಶಿಸುವೆನು.

ಎರಡು ತಿಂಗಳುಗಳ ಹಿಂದೆ—ಇಷ್ಟೇ ಏಕೆ ಹತ್ತು ತಿಂಗಳುಗಳ ಹಿಂದೆಯೆ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಮುಖ್ಯ ಸೈನ್ಯವನ್ನು ಫ್ರಾನ್ಸದಲ್ಲಿ ಇಟ್ಟಿರಬೇಕೆಂದು ಯೋಚಿಸಿದ್ದರು. ಆದರೆ ಈಗ ಆ ಸೈನ್ಯವೆಲ್ಲ ನಮ್ಮ ದೇಶದಲ್ಲಿಯೇ ಇರುವದು.

ನಾವು ನಮ್ಮ ದೇಶದ ದೊಡ್ಡ ದೊಡ್ಡ ನಗರಗಳನ್ನಷ್ಟೇ ಅಲ್ಲ, ಒಂದೊಂದ ಊರನ್ನೂ ಒಂದೊಂದು ಹಳ್ಳಿಯನ್ನೂ ಸಂರಕ್ಷಿಸೋಣ.

ಪ್ರ ಕ ಟ ನೆ

ದಕ್ಷಿಣಭಾಗದೊಳಗಿನ ಎಲ್ಲ ಮಾಧ್ಯಮಿಕ ಶಾಲೆಗಳ ಮುಖ್ಯ ಚಾಲಕರಿಗೆ

ತಮ್ಮ ಮಕ್ಕಳನ್ನು ಪರೀಕ್ಷಿಸಿ ಅವರು ಯಾವ ಇಯತ್ತೆಗೆ ಸೇರಲು ಯೋಗ್ಯರಿರುವರೋ ಆ ಇಯತ್ತೆಗೆ ಹೆಸರು ಹಚ್ಚಿಸಿಕೊಳ್ಳಲಿಕ್ಕೆ ಅಪ್ಪಣೆ ಕೊಡ ಬೇಕೆಂಬ ಪ್ರಾರ್ಥನೆಯ ಅರ್ಜಿಗಳು ಬಹುಜನ ಪಾಲಕರಿಂದ ಪ್ರತಿವರ್ಷ ಜೂನ್ ತಿಂಗಳಲ್ಲಿ ನಮ್ಮ ಕಚೇರಿಗೆ ಹೇರಳವಾಗಿ ಬರುತ್ತಿರುವದು ನಮ್ಮ ಹಿಂದಿನ ಅನುಭವದ ಮಾತು. ಮತ್ತು ಈ ತರದ ಪರೀಕ್ಷೆಯು ಕೆಲಸವು ಹೆಸರಿಗೆ ಮಾತ್ರ ನಡೆಯುವದೇ ಹೆಚ್ಚೆಂಬುದು ಕೂಡ ಕಂಡುಬಂದಿದೆ. ಮೇಲಾಗಿ ಹೀಗೆ ಸುಮಾರು ಎಂದು ತಿಂಗಳವರೆಗೆ ದಿನದಿನಕ್ಕೆ ಬಂದ ಬಂದ ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನೇ ಪರೀಕ್ಷಿಸುವದು ಕೂಡ ಆಯಾ ಶಾಲೆಗಳ ಮುಖ್ಯ ಚಾಲಕರಿಗೆ ತುಂಬ ತೊಂದರೆಯ ಕೆಲಸವಾಗುವದು.

೨. ಶಾಲೆಗಳ ಮುಖ್ಯ ಚಾಲಕರಿಗೆ ಬರುವ ಈ ತೊಂದರೆಯನ್ನು ದೂರ ಮಾಡುವ ಮತ್ತು ನಮ್ಮ ಕಚೇರಿಗೆ ಬರುವ ಈ ಸಂಬಂಧದ ಕಾಗದಪತ್ರಗಳ ವ್ಯವಹಾರವನ್ನು ಆದಷ್ಟು ಕಡಿಮೆಮಾಡುವ ಧೋರಣೆಯಿಂದ ಖಾಸಗಿ ರೀತಿಯಿಂದ ಇಲ್ಲವೆ ಸರಕಾರದಿಂದ ಮಾನ್ಯತೆ ಪಡೆಯದೆ ಇರುವ ಶಾಲೆಗಳಲ್ಲಿ ಶಿಕ್ಷಣ ತೊಂದಿದ ವಿದ್ಯಾರ್ಥಿಗಳು ತಾವು ಮುಂದೆ ಜೂನ್ ತಿಂಗಳಲ್ಲಿ ಪರೀಕ್ಷೆಗೆ ಕೂಡ್ರ ಬಿಚ್ಚಿಸುವ ಶಾಲೆಗಳ ವಾರ್ಷಿಕ ಪರೀಕ್ಷೆಯು ನಡೆಯುವ ವೇಳೆಯಲ್ಲಿಯೇ ಪರೀಕ್ಷೆಗೆ ಕೂಡ್ರಬೇಕೆಂದು ನಿರ್ಣಯಿಸಲೇಬೇಕಾಯಿತು. ವಿದ್ಯಾರ್ಥಿಗಳು ಯಾವ ಶಾಲೆಯಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳುವರೋ ಅದೇ ಶಾಲೆಯಲ್ಲಿಯೇ ಅವರು ಮುಂದೆ ಹೆಸರು ಹಚ್ಚಿಸಿಕೊಳ್ಳಬೇಕಾಗುವದೆಂಬ ವಿಷಯವನ್ನು ಲಕ್ಷ್ಯದಲ್ಲಿಟ್ಟಿರಬೇಕು. ಸರಕಾರದಿಂದ ಮಾನ್ಯತೆಪಡೆದಿರುವ ಶಾಲೆಯ ವಾರ್ಷಿಕ ಪರೀಕ್ಷೆಗೆ ಕುಳಿತುಕೊಳ್ಳದಿರುವ ವಿದ್ಯಾರ್ಥಿಗಳನ್ನು ಇಂಥ ಮಾನ್ಯತೆ ಪಡೆದ ಯಾವ ಶಾಲೆಯಲ್ಲಿಯೂ ಹೆಸರುಹಚ್ಚಿಕೊಳ್ಳಲಾಗದು. ಬೇನೆ ಬೇಸರಿಕೆ ಗಳಂಥ ಅನಿವಾರ್ಯ ಕಾರಣಗಳಿಂದ ಪರೀಕ್ಷೆಗೆ ಕೂಡ್ರಲು ಸಾಧ್ಯವಾಗದೆ ನಮ್ಮ ವಿಶೇಷ ಅಪ್ಪಣೆಯನ್ನು ಪಡೆದುಕೊಂಡ ವಿದ್ಯಾರ್ಥಿಗಳ ಮಾತು ಬೇರೆ.

೩. ಶಾಲೆಗಳ ಮುಖ್ಯ ಚಾಲಕರು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಯ ತಾರೀಖುಗಳನ್ನು ಸ್ಥಾನಿಕ ವೃತ್ತಪತ್ರಿಕೆಗಳು ಮೊದಲಾದ ಸಾಧನಗಳ ಮೂಲಕ ಎಲ್ಲ ಜನರಿಗೂ ತಿಳಿಯುವಂತೆ ಪ್ರಕಟಿಸಬೇಕೆಂದು ಕೇಳಿಕೊಳ್ಳಲಾಗಿದೆ.

೪. ಇಂಥ ವಿದ್ಯಾರ್ಥಿಗಳನ್ನು ತಮ್ಮ ಶಾಲೆಗಳ ವಾರ್ಷಿಕ ಪರೀಕ್ಷೆಗೆ ಕೂಡ್ರಿಸಿಕೊಳ್ಳಲಿಕ್ಕೆ ಶಾಲೆಗಳ ಮುಖ್ಯ ಚಾಲಕರು ಹೆಚ್ಚಿನ ಫೀಯನ್ನು ತೆಗೆದುಕೊಳ್ಳಲಾಗದು. ಆದರೆ ಈ ಸಮಯದಲ್ಲಿ ಹೆಸರು ಹಚ್ಚುವ ಫೀ ಮೊದಲಾದವನ್ನು ಬಿಟ್ಟು ಕಾಗದ, ಮಸಿ ಮೊದಲಾದ ಉಪಕರಣಗಳಿಗೆ ಹತ್ತುವಷ್ಟೇ ಯೋಗ್ಯ ಫೀಯನ್ನು ಮಾತ್ರ ಅವರಿಂದ ತೆಗೆದುಕೊಳ್ಳಲು ಅಡ್ಡಿಯಿಲ್ಲ. ಹೀಗೆ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳನ್ನು ಜೂನ್ ತಿಂಗಳಲ್ಲಿ ಪ್ರವೇಶ ಫೀ ಮತ್ತು ಆ ತಿಂಗಳ ಫೀ ಇವನ್ನು ತೆಗೆದುಕೊಂಡು ಹೆಸರು ಹಚ್ಚಿಕೊಳ್ಳತಕ್ಕದ್ದು.

೬-೧೨-೧೯೪೦ } S. R. Tawde.
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್.

ಫ್ರೆಂಚ್ ಪಾಲಿಶ್ ತಯಾರಿಸುವ ಮತ್ತು ಹಚ್ಚುವ ರೀತಿ

ಒಂದು ಬಾಟ್ಲಿ (೨೪ ಔಂಸು) ಸ್ಪಿರಿಟಿನಲ್ಲಿ ಪ್ರತಿಲಾಖ (ಅರಗು) ಮುಂತಾದ ಜೀನಸುಗಳನ್ನು ಕೂಡಿಸಿ ಪಾಲಿಶ್ ತಯಾರವಾಡುವ ರೀತಿ:—

೧೯೪೧ನೇ ಇಸ್ವಿಯ ಜಾನೆವಾರಿ ತಿಂಗಳಲ್ಲಿಯ ಕಿಮ್ಮತ್ತು

(೧)	ಒಂದು ಬಾಟ್ಲಿ ಸ್ಪಿರಿಟು	(೨೪ ಔಂಸು)	೦-೮-೦
(೨)	ಪತ್ರಿಲಾಖ (ಅರಗು)	೧೦ ತೊಲಿ (ಅರ್ಧ ಸೇರು)	೦-೩-೦
(೩)	ರೇವಚಿನ್ನಿ (ಹಳದಿ ಬಣ್ಣದ ಕರಣಿ)	೧ ತೊಲಿ	೦-೧-೦
(೪)	ಹಿರಾಡಾಕ (ಕೆಂಪು ಬಣ್ಣದ ಕಾಳು)	೫ ,,	೦-೦-೯
(೫)	ರುಮಾಮುಸ್ತಕಿ (ಜೋಳದ ಕಾಳಿನಂತೆ ಇರುವದು)		೦-೧-೦
(೬)	ಚಂದರಸ (ಅಂಟಿನ ಬಿಳೆ ಹರಳಿನಂತೆ ಇರುವದು)	೧ ತೊಲಿ	೦-೧-೦

ಪತ್ರಿ ಲಾಖದ ಹೊರತು ಉಳಿದ ಎಲ್ಲ ಜೀನಸುಗಳನ್ನು ಸಣ್ಣಾಗಿ ಅರೆದು ಅರಿವೆಯಲ್ಲಿ ಸೋಸಬೇಕು. ಬಾಟ್ಲಿಯಲ್ಲಿಯ ಅರ್ಧದಷ್ಟು ಸ್ಪಿರಿಟನ್ನು ಎರಡನೆಯ ಬಾಟ್ಲಿಯಲ್ಲಿ ತೆಗೆದು ಸೋಸಿದ ಪುಡಿಯನ್ನು ಪತ್ರಿ ಲಾಖವನ್ನು ಸರಿ ಎರಡು ಭಾಗ ಮಾಡಿ ಎರಡೂ ಬಾಟ್ಲಿಗಳಲ್ಲಿ ಹಾಕಬೇಕು. ತರುವಾಯ ಬಾಟ್ಲಿಗಳ ಬಾಯಿಗಳನ್ನು ಚೆನ್ನಾಗಿ ಬಂದು ಮಾಡಿ ಅಲ್ಲಾಡಿಸಿ ಸುಮಾರು ಒಂದು ತಾಸು ಬಿಸಿಲಲ್ಲಿ ಇಡಬೇಕು. ಎಂದರೆ ಎಲ್ಲ ಸಾಮಾನುಗಳು ಕಾವಿನಿಂದ ಕರಗುವವು. ಬಳಿಕ ಎರಡೂ ಬಾಟ್ಲಿಗಳೊಳಗಿನ ಪಾಲಿಶ್‌ನ್ನು ಒಂದರೊಳಗೊಂದು ವಿಶ್ರವಮಾಡ ಬೇಕು. ಹೀಗೆ ಮಾಡುವದರಿಂದ ಬಣ್ಣವು ಒಂದೇ ಪ್ರಮಾಣವಾಗುವದು. ಮತ್ತು ಸುಮಾರು ೧೫ ಬಾಟ್ಲಿಯಷ್ಟು ಪಾಲಿಶ್ ತಯಾರಾಗುವದು.

ಹೀಗೆ ತಯಾರ ಮಾಡಿದ ಬಳಿಕ ಬಾಟ್ಲಿಗಳ ಬಾಯಿಗಳನ್ನು ಹವೆ ಹೋಗ ದಂತೆ ಬೂಚುಹಾಕಿ ಬಂದು ಮಾಡಬೇಕು. ಯಾಕಂದರೆ ಹವೆಯಿಂದ ಸ್ಪಿರಿಟು ಹಾರಿಹೋಗಿ ಪಾಲಿಶು ಗಟ್ಟಿಯಾಗುವದು. ಈ ಪಾಲಿಶವು ಬೇಕಾದಷ್ಟು ದಿವಸವಿಟ್ಟರೂ ಕೆಡುವದಿಲ್ಲ.

ಪಾಲಿಶ್‌ನನ್ನು ಹಚ್ಚುವ ರೀತಿ

ಪಾಲಿಶ್‌ವನ್ನು ಹಚ್ಚುವ ಪೂರ್ವದಲ್ಲಿ ಬಾಟ್ಲಿಗಳನ್ನು ಸ್ವಲ್ಪಹೊತ್ತು ಬಿಸಿ ಲಲ್ಲಿಟ್ಟು ಅಲ್ಲಾಡಿಸಿ ತಿಳುವಾದ ಅರಿವೆಯಲ್ಲಿ ಹಾಕಿ ಕಪ್ಪಿನಲ್ಲಿ (ಚೀನಿಮಣ್ಣಿನ ಯಾವದೊಂದು ಪಾತ್ರೆಯಲ್ಲಿ) ಸೋಸಬೇಕು. ಬಾಟ್ಲಿಯ ಬಾಯಿಯನ್ನು ಯಾವಾಗಲೂ ಬಂದು ಮಾಡಿಡಬೇಕು. ಒಂದುವೇಳೆ ಪಾಲಿಶವು ದಟ್ಟವೆಂದು ಕಂಡಲ್ಲಿ ಸ್ವಲ್ಪ ಸ್ಪಿರಿಟ್ ಕೂಡಿಸಬೇಕು. ಬಳಿಕ ಪಾಲಿಶ್ ಹಚ್ಚುವ ಸಾಧನದಿಂದ ಸಾವಕಾಶವಾಗಿ ನಡುವೆ ಕೈನಿಲ್ಲಿಸದೆ ಬೀಸುಗೈಯಿಂದ ಹಚ್ಚಬೇಕು. ಹೀಗೆ ಹಚ್ಚಿದರೆ ಪಾಲಿಶ್‌ವು ಗಂಟು ಗಂಟು ಆಗದೆ ಒಂದೇಸವನೆ ಕಾಣುವದು.

ಪಾಲಿಶ್ ಹಚ್ಚುವ ಸಾಧನ

ಸುಮಾರು ೭-೮ ಇಂಚು ಚೌಕಾದ ಬಿಳೆಯ ಸೈನಿನ ಅರಿವೆಯ ತುಣುಕನ್ನು ತೆಗೆದುಕೊಂಡು ೨-೩ ಮಡಿಕೆ ಮಾಡಿ ಅದರ ಮಧ್ಯದಲ್ಲಿ ಹಿಂಜಿದ ಅರಳೆಯನ್ನು ಇಟ್ಟು, ಅರಿವೆಯ ನಾಲ್ಕು ಮೂಲೆಗಳನ್ನು ಕೂಡಿಸಿ ಅರಳೆ ಹೊರಬೀಳದಂತೆ ಮುರುವು ಹಾಕಬೇಕು. ಈ ಮೇರೆಗೆ ತಯಾರಿಸಿದ ಅರಿವೆಯ ಗಂಟು ಪಾಲಿಶನ್ನು ಹಚ್ಚುವದಕ್ಕೆ ಒಳ್ಳೆಯ ಸಾಧನವು.

ಹೊಸದಾಗಿ ತಯಾರಾದ ಕಟ್ಟಿಗೆಯ ಸಾಮಾನುಗಳಿಗೆ ಪಾಲಿಶ್ ಹಚ್ಚುವ ರೀತಿ

೧. "ನಂಬರು ೨" ಉಸುಕಿನ ಕಾಗದಿಂದ ಕಟ್ಟಿಗೆಯ ಮೇಲ್ಮಡೆಯ ಹುರಬರಕು ಹೋಗುವಂತೆ ಚೆನ್ನಾಗಿ ತಿಕ್ಕಬೇಕು.

೨. "ನಂಬರು ೧" ಉಸುಕಿನ ಕಾಗದದಿಂದ ಮತ್ತೆ ತಿಕ್ಕಬೇಕು. ಸಪಾಟಾದ ಚೌಕು ಕಟ್ಟಿಗೆಯ ತುಂಡಿಗೆ ಉಸುಕಿನ ಕಾಗದವನ್ನು ಸುತ್ತಿ ತಿಕ್ಕಬೇಕು.

ಕಟ್ಟಿಗೆಯೊಳಗಿನ ಸಂದು, ಛಿದ್ರ, ಸೀಳಕಗಳನ್ನು ತುಂಬುವ ಸಾಧನಗಳು:-

೧. ಲಾಂಬಿ

೨. ಮೀಸಸರೀಸು

೩. ಮೇಣ, ರಾಳ, ಖಡುವಿನ ಪುಡಿ ಇವುಗಳನ್ನು ಕೂಡಿಸಿ ತಯಾರಿಸಿದ ಲಾಂಬಿ (ಲೇಪ).

ಇವುಗಳಲ್ಲಿ ಯಾವುದೊಂದನ್ನು ಸಂದು ಮೊದಲಾದವುಗಳಲ್ಲಿ ಉಳಿಯಿಂದ ತುಂಬಿ ಒಣಗಿದ ಬಳಿಕ ಒಮ್ಮೆ ಉಪಯೋಗಿಸಿದ ಉಸುಕಿನ ಕಾಗದದಿಂದ ತಿಕ್ಕಿ ಸಾಫ್ ಮಾಡಿ ಪಾಲಿಶ್ ಹಚ್ಚಬೇಕು.

ಮೇಲೆ ಬರೆದ ತುಂಬುವ ಸಾಧನಗಳನ್ನು ಮಾಡುವ ರೀತಿ:—

(೧) **ಲಾಂಬಿ:**—ಖಡುವಿನ ಪುಡಿಯಲ್ಲಿ ಸ್ವಲ್ಪು ಅಗಸಿಎಣ್ಣೆ ಹಾಕಿ ವಿಶ್ರಮಾಡಿ ಸುತ್ತಿಗೆಯಿಂದ ನುಣುಪಾದ ಕಲ್ಲಿನ ಮೇಲೆ ಕುಟ್ಟಬೇಕು. ಅದು ಜಿಗಿಯೂ, ಗಟ್ಟಿಯೂ ಆಗುವ ವರೆಗೆ ಕುಟ್ಟಬೇಕು. (ಈ ಲಾಂಬಿಯನ್ನು ಬಾಗಿಲಿನ ಕಾಜುಗಳನ್ನು ಬಿಗಿಹಿಡಿಯಲಿಕ್ಕೂ ಕೂಡ ಉಪಯೋಗಿಸುತ್ತಾರೆ.)

(೨) ಮೀಸಸರಿಸವನ್ನು ನೀರಿನಲ್ಲಿ ಹಾಕಿ, ಬಿಸಿಮಾಡಿ ಕರಗಿಸಿ, ಕಟ್ಟಿಗೆಯ ಏಣಿನ ಸಪಾಟಿಯ ಮೇಲೆ ಸ್ವಲ್ಪಸ್ವಲ್ಪ ಈ ಮೀಸಸರಿಸ ಹಾಕುತ್ತ ಮತ್ತು ಉಳಿಯಿಂದ ಕಟ್ಟಿಗೆಯ ಮೇಲೆ ಗೀಚುತ್ತ ಕಟ್ಟಿಗೆಯ ಸಣ್ಣಾದ ಪುಡಿಯೂ ಸರಿಸೂ ಕೂಡಿ ಒಂದೇ ಜೀವವಾಗುವವರೆಗೆ ತಿಕ್ಕಿ ಕೂಡಿಸಬೇಕು. ಇದು ತಕ್ಕಷ್ಟು ಗಟ್ಟಿಯಾದ ಬಳಿಕ ಉಪಯೋಗಿಸಬೇಕು.

ವೀನಸರಿಸವನ್ನು ನೀರಿನಲ್ಲಿ ಹಾಕಿ ಬೆಂಕಿಯ ಮೇಲಿಟ್ಟು ಬಿಸಿಮಾಡುವ ರೂಢಿಯು ಬಹಳ; ಆದರೆ ಈ ರೀತಿಯಿಂದ ತಯಾರಿಸಿದ ವೀನಸರಿಸಿನ ಜಿಗಟು ತನವು ಅಲ್ಪ ಪ್ರಮಾಣದಿಂದ ಸುಡುವದು.

ಉತ್ತಮ ರೀತಿಯಿಂದ ತಯಾರಿಸುವದು ಹೇಗೆಂದರೆ:— ಚಹಾದ ಕೇಟ್ಲಿಯಂಥ ಒಂದು ಅಗಲಾದ ಪಾತ್ರೆಯಲ್ಲಿ ನೀರುಹಾಕಿ, ಇದರಲ್ಲಿ ಸರಿಸಿನ ಪಾತ್ರೆಯನ್ನು ಕೇಟ್ಲಿಯಂಥ ಪಾತ್ರೆಯ ಅಂಚಿನ ಮೇಲೆ ನಿಲ್ಲುವಂತೆ ಇಡಬೇಕು. ಬಳಿಕ ಆ ಕೇಟ್ಲಿಯಂಥ ಪಾತ್ರೆಯನ್ನು ಬೆಂಕಿಯಮೇಲೆ ಇಡಬೇಕು. ಇದರಲ್ಲಿಯ ನೀರಿನ ಉಗೆಯಿಂದ ವೀನಸರಿಸು ಬಿಸಿಯಾಗಿ ತಯಾರಾಗುವದು. ಈ ತಯಾರಾದ ಸರಿಸು ಅತಿ ಜಿಗಟು ಆಗುವದು. ನೀರಿನ ಕಾವಿನಿಂದ ಕುದಿ ಬಂದರೂ ಆಡ್ಡೀ ಇಲ್ಲ.

(೩) ಮೇಣವನ್ನು ಕರಗಿಸಿ ಕುದಿಬರುವಷ್ಟರಲ್ಲಿ ಪುಡಿಮಾಡಿದ ರಾಳವನ್ನು ಖಡುವಿನ ಪುಡಿಯನ್ನು ಹಾಕಿ ಚೆನ್ನಾಗಿವಿಶ್ರಮಾಡಿ ಸ್ವಲ್ಪ ವೇಳೆ ಬಿಟ್ಟು ಇಳಿಸಬೇಕು. ಇದರಲ್ಲಿಯ ಸ್ವಲ್ಪ ಲೇಪವನ್ನು ತಕೊಂಡು ಅದು ಆರಿದ ಬಳಿಕ ಕಲ್ಲಿನಂತೆ ಗಟ್ಟಿಯಾಗಿದೆ ಎಂದು ಕಂಡುಬಂದರೆ ಅದು ಉಪಯೋಗಿಸಲು ತಕ್ಕದ್ದಾಯಿತೆಂದು ತಿಳಿಯಬೇಕು. ಒಂದು ವೇಳೆ ಮೆತ್ತಗೆ ಕಂಡುಬಂದರೆ ಮತ್ತೆ ಕಾಸಿ ರಾಳದ ಪುಡಿಯನ್ನು ಕೂಡಿಸಬೇಕು. ಸ್ವಲ್ಪ ಬಿಸಿ ಇದ್ದಾಗಲೆ ಲೇಪವನ್ನು ಹಚ್ಚಬೇಕು.

" ಪಾಶ್‌ಲಿಕ್ಕೆ ವಿಂಚು ಉಳಿಯುವಂತೆ ಮಾಡುವದು."

ಕಟ್ಟಿಗೆಯ ನುಣುಪಾದ ಸಪಾಟಿಯ ಮೇಲೆ ಹಾಗೆಯೇ ಪಾಲಿಶ್‌ವನ್ನು ಹಚ್ಚಬಹುದು. ಆದರೆ ಅದಕ್ಕೆ ಬಹಳ ದಿವಸ ವಿಂಚು ಉಳಿಯುವುದಿಲ್ಲ.

ಮೇಣವನ್ನು ಕರಗಿಸಿ ಬೆಂಕಿಯ ಮೇಲಿಂದ ಇಳಿಸಿ, ಆದರಲ್ಲಿ ಸ್ವಲ್ಪ (೪ ಭಾಗ ದಷ್ಟು) ಟರಪೆಂಟಾಯಿನ್ ಕೂಡಿಸಬೇಕು. ಟರಪೆಂಟಾಯಿನ್ ಕೂಡಿಸುವದರಿಂದ ಮೇಣವು ಆರಿದ ಬಳಿಕ ಕೂಡ ಮೆತ್ತಗೆ ಉಳಿಯುವದು. ಈ ಮೇಣವನ್ನು ಆರಿವೆಯಿಂದ ಕಟ್ಟಿಗೆಗೆ ಹಚ್ಚಿ ಚೆನ್ನಾಗಿ ಜೋರಿನಿಂದ ತಿಕ್ಕಿ ತಿಕ್ಕಿ ಮೇಣದ ಭಾಗವನ್ನು ಆರಿವೆಯಿಂದಲೇ ತಿಕ್ಕಿ ತೆಗೆಯಬೆಕು.

ಈ ಪೇರೆಗೆ ಮೇಣ ಹಚ್ಚಿದ ಸಪಾಟಿಯ ಮೇಲೆ ಹಚ್ಚಿದ ಪಾಲಿಶ್‌ಕ್ಕೆ ಬಹಳ ದಿವಸ ವಿಂಚು ಉಳಿಯುವದು.

ಒಂದು ಕೈ ಪಾಲಶ್ ಹಚ್ಚಿದ ಬಳಿಕ ಮೊದಲು ಉಪಯೋಗಿಸಿದ ಜಿನುಗಾದ ಉಸುಕಿನ ಕಾಗದದಿಂದ ಮೆಲ್ಲನೆ (ಗೆರೆ ಬೀಳದಂತೆ) ಮತ್ತೊಮ್ಮೆ ತಿಕ್ಕಬೇಕು. ಬಳಿಕ ನುತ್ತೆ ಎರಡು ಸಾರೆ ಪಾಲಿಶ್‌ವನ್ನು ಹಚ್ಚಬೇಕು. ಎಂದರೆ ಹೀಗೆ ಹಚ್ಚಿದ ಪಾಲಿಶ್‌ವು ಒಹಳ ಚೆನ್ನಾಗಿ ಹೊಳೆಯುವದು.

"ಹಳೀ ಕಟ್ಟಿಗೆಯ ಸಾಮಾನುಗಳಿಗೆ ಪಾಲಿಶ್ ಹಚ್ಚುವ ರೀತಿ"

೧. ಕಾಜಿನ ತುಣುಕಿನಿಂದಾಗಲಿ, ಉಳಿಯಿಂದಾಗಲಿ ಕಟ್ಟಿಗೆಯ ಮೇಲಿನ ಭಾಗದ ಹಳೇಪಾಲಿಶ್, ಬಣ್ಣ, ಕಲೆ ಮುಂತಾದವುಗಳನ್ನು ಚೆನ್ನಾಗಿ ಗೀಚಿ ತೆಗೆಯಬೇಕು. ಒಳಿಕ ಉಸುಕಿನ ಕಾಗದದಿಂದ ತಿಕ್ಕಿ ಪಾಲಿಶ್ ಹಚ್ಚಬೇಕು. ಸೂಚನೆ:— ಗೀಚುವಾಗ ಗೀರುಗಳು ಬೀಳಬಾರದು. ಈ ಕೆಲಸವನ್ನು ಬಹಳೇ ಎಚ್ಚರದಿಂದ ಹಾಗು ಜಾಣತನದಿಂದ ಮಾಡಬೇಕು.

ಮೇಲಿನ ರೀತಿಯಿಂದ ಗೀಚಿ ತೆಗೆಯುವದು ಸಾಧ್ಯವಿಲ್ಲದಿದ್ದರೆ ಬಹಳೇ ಉರುಟಾದ ೨½ – ೩ ನಂಬರಿನ ಉಸುಕಿನ ಕಾಗದದಿಂದ ಕಟ್ಟಿಗೆಯ ಮೇಲಿನ ಪಾಲಿಶ್ ಕಲೆ ಮುಂತಾದವುಗಳು ಹೋಗುವತನಕ ತಿಕ್ಕಬೇಕು. ಬಳಿಕ ಕೆಳಗಿನ ನಂಬರಿನ ಉಸುಕಿನ ಕಾಗದದಿಂದ ತಿಕ್ಕಿ ಪಾಲಿಶ್‌ವನ್ನು ಹಚ್ಚಬೇಕು.

N. S. Pande.
ರಿಟಾಯರ್ಡ ಮ್ಯಾನುಅಲ್ ಟ್ರೇನಿಂಗ ಟೀಚರ್ಸ ಧಾರವಾಡ,
ಟ್ರೇನಿಂಗ ಕಾಲೇಜ ಮತ್ತು ಎಲ್‌ಫಿನ್‌ಸ್ಟನ್,
ಹಾಯಸ್ಕೂಲ ಮುಂಬಯಿ.

ಪುಸ್ತಕ ಪರಿಚಯ

ಬೆಳಧಡಿಯ ಸದ್ಗುರು ಶ್ರೀ ಬ್ರಹ್ಮಾನಂದ ಮಹಾರಾಜರು ೦–೮–೦
ಮುರಘರಾಜೇಂದ್ರ ವಿಜಯ ೧–೪–೦

ಶ್ರೀ. ಜಿ. ಎಚ್. ಹೊಸೂರ ಇವರು ಬರೆದ ಮೇಲೆ ಹೇಳಿದ ಎರಡು ಪುಸ್ತಕಗಳು ನಮ್ಮ ಕಡೆಗೆ ಬಂದಿವೆ. ಅವುಗಳ ವಿಮರ್ಶೆಯನ್ನು ಅನುಕೂಲವಾದಾಗ ಪ್ರಕಟಿಸುವೆವು.

ಪತ್ರಗಳ ಮುಖ್ಯಾಂಶಗಳು

ನವಲೂರು (ಧಾರವಾಡ ಜಿಲ್ಲೆ) "ಇಲ್ಲಿಯ ವತನದಾರರೂ ಶಿಕ್ಷಣ ಪ್ರೇಮಿಗಳೂ ಆದ ಶ್ರೀಮಾನ್ ದೇಶಪಾಂಡೆ ಶ್ರೀಪಾದರಾಯರೂ ಮಹನೀಯರಾದ ಚಂದ್ರಶೇಖರಗೌಡರೂ ತಾ. ೧೨-೧-೧೯೪೧ನೆಯ ದಿವಸ ಇಲ್ಲಿಯ ಶಾಲೆಗೆ ಭೇಟಿಸಿ ಕಾರ್ಯಕಲಾಪಗಳನ್ನು ನೋಡಿ ಆನಂದಬಟ್ಟು ೧೧ ರೂ. ೬ ಆ. ಬೆಲೆಯ ಪುಸ್ತಕಗಳನ್ನು ಶಾಲೆಗೆ ಉಚಿತವಾಗಿ ಕೊಟ್ಟರು. ಇದು ಇಲ್ಲಿಯ ಬಾಲಕರಿಗೂ ಶಿಕ್ಷಕರಿಗೂ ಉತ್ತೇಜನಕರವಾಗಿದೆ ಪಾಲಕರಿಗೆ ಅನುಕರಣೀಯವಾಗಿದೆ" ಎಂದು ಹೆಡ್‌ಮಾಸ್ತರರಾದ ಕೆಂಚರಡ್ಡಿಯವರು ತಿಳಿಸುತ್ತಾರೆ.

ಅಸನೋಟಿ (ಕಾರವಾರ ಜಿಲ್ಲೆ) "ಇಲ್ಲಿಯ ನಿವೃತ್ತ ಶಿಕ್ಷಕರಾದ ಮು. ಶ್ರೀ. ರಾ. ಪುರುಷೋತ್ತಮ ಬಾಳಕೃಷ್ಣ ಸಾಳುಂಖೆ ಇವರು ತಮ್ಮ ಮೊಮ್ಮಗನಾದ ಶಂಕರನು ಕೈಲಾಸವಾಸಿಯಾದ ದುಃಖನಿವಾರಣೆಗಾಗಿ ಶಾಲೆಯ ಹುಡುಗರೆಲ್ಲ ತಾ. ೨೯-೧-೧೯೪೧ನೆಯ ದಿವಸ ಊಟಕ್ಕೆ ಹಾಕಿಸಿ; ಶ್ರೀಮಾನ್ ಪವಾರ ಕೀಲರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿಸಿ, ಶಾಲೆಯ ಹುಡುಗರಿಗೆ ಅಂಗಿ, ಟೊಪ್ಪಿಗೆ, ಚಾಟಿ, ಪೆನ್ಸಿಲುಗಳನ್ನೂ ಎಲ್ಲರಿಗೆ ಬೆಂಡು ಬತ್ತಾಸಗಳನ್ನೂ ಹಂಚಿಸಿದರು. ಇದು ಪ್ರಶಂಸನೀಯವಾದದ್ದು" ಎಂದು ಅಲ್ಲಿಯ ಹೆಡ್‌ಮಾಸ್ತರರು ತಿಳಿಸುತ್ತಾರೆ.

ನಾಗರಮನ್ನೊಳ್ಳಿ (ಬೆಳಗಾವಿ ಜಿಲ್ಲೆ) "ಇಲ್ಲಿಯ ಶ್ರೀಮತಿ ಕು. ಸೌ. ಪ್ರಫುಲ್ಲದೇವಿ ದೇಸಾಯಿಣಿಯವರು ಶಾಲೆಯ ಮಕ್ಕಳ ಅಚ್ಚುಕಟ್ಟುತನ, ಆಟ, ಮೈಕೆಲಸಗಳನ್ನು ಕಂಡು ಆನಂದಿತರಾಗಿ ಹತ್ತು ಬಡ ಬಾಲವೀರರಿಗೆ ಸಮವಸ್ತ್ರದ ಅಂಗಿ, ಟೊಪ್ಪಿಗೆ, ಚಣ್ಣಗಳನ್ನು ಹೊಲಿಸಿಕೊಟ್ಟರು. ಇಷ್ಟೇ ಅಲ್ಲ, ಹುಡುಗರಿಗೆ ಸಿಂಜಾವಿನಲ್ಲಿ ಕುಡಿಯಲು ಒಂದೊಂದು ಕಪ್ ಉತ್ತಮ ಹಾಲು ಕೊಡುತ್ತಾರೆ. ಈ ರೀತಿಯಾಗಿ ಹುರುಪುಗೊಂಡ ಶಾಲೆಯ ಮಕ್ಕಳು ಆಟದ ಬಯಲನ್ನು ಸಿಂಗರಿಸಿಟ್ಟುಕೊಂಡಿದ್ದಾರೆ. ಉದಾರಿಗಳಾದ ಶ್ರೀಮಂತರು ಇದೇ ರೀತಿಯಲ್ಲಿ ಸಹಾಯ ಮಾಡಿದರೆ ಭಾವೀ ರಾಷ್ಟ್ರವು ಸರ್ವಾಂಗಸುಂದರವಾಗುವದು. ಶ್ರೀಮತಿ ದೇಸಾಯಿಣಿಯವರು ಇಷ್ಟೊಂದು ಆಸಕ್ತಿಯನ್ನು ವಹಿಸಬೇಕಾದರೆ ಇಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ತ. ರಾ. ಖೆಮಲಾಪುರೆ ಇವರ ಪ್ರಯತ್ನಗಳು ಕಾರಣವಾಗಿವೆ. ಇದೇ ತರದ ಪ್ರಯತ್ನಗಳನ್ನು ಉಳಿದ ಶಿಕ್ಷಕರೂ ಅನುಸರಿಸಬಹುದಾಗಿದೆ" ಎಂದು ಚಿಕ್ಕೋಡಿಯ ಶ್ರೀ. ಹ. ನಾ. ರಡ್ಡೇರ ಇವರು ತಿಳುಹಿಸುತ್ತಾರೆ.

ಪ್ರ ಕ ಟ ನೆ

ಕನ್ನಡ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಟಿಪ್ಪಣಿ—ಪ್ರಾ. ಪ್ರಾಥಮಿಕ, ಮಾ. ಮಾಧ್ಯಮಿಕ, ಟ್ರೇ. ಟ್ರೇನಿಂಗ ಸಂಸ್ಥೆಗಳು, ಶಿ. ಶಿಕ್ಷಕ, ವಿ. ವಿದ್ಯಾರ್ಥಿ, ವಾ. ವಾಚನಾಲಯ, ಶಾ. ಶಾಲೆ

(ಕಳೆದ ಜನವರಿ ತಿಂಗಳಿನಿಂದ ಮುಂದೆಸಾಗಿದ್ದು)

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿವೆ
೧೩೮	ಸಚಿತ್ರ ಮುಂಬಯಿ ಇಲಾಖೆಯ ಭೂಗೋಲ ಸನ್ ೧೯೪೦	ಎಸ್. ಬಿ. ಪಾವಟೆ ಆನಂದ ಬುಕ್‌ಡಿಪೋ ಆ್ಯಂಡ ಪಾವರ ಪ್ರೆಸ್ ಹುಬ್ಬಳ್ಳಿ	೦–೨–೦	ಪ್ರಾ. ಶಾಲೆ. ಶಿ. ವಾ.
೧೩೯	ಪೊನ್ನಮ್ಮ ೧ನೆಯ ಆ. ೧೯೪೦	ಮನೋಹರಗ್ರಂಥ ಭಾಂಡಾರ ಧಾರವಾಡ	೦–೧–೬	ಪ್ರಾ. ಶಾ. ವಿ. ವಾ.
೧೪೦	ಕನ್ನಡ ಪದ್ಯಸಂಗ್ರಹ ಭಾಗ ೧ ಸುಧಾರಿಸಿದ ಆವೃತ್ತಿ ೧೯೪೦	ಬಾಲಸಾಹಿತ್ಯಮಂಡಲ ಮಂಗಳೂರ	೦–೮–೦	ಪ್ರಾ.ಮಾ.ಟ್ರೇ.ವಿ.ವಾ.
೧೪೧	ಪೌಷ್ಟಿಕ ಸಾದಾ ಮತ್ತು ಶುದ್ಧ ಆಹಾರ ೧ನೆಯ ಆ. ೧೯೪೦	ಕರಿಯಪ್ಪ ಎರೆಸೀಮಿ, ಗ್ರಾಮಸೇವಾ ಕುಟೀರ ಸಂಗೂರ P. ಹಾವೇರಿ	೦–೮–೦	ಪ್ರಾ.ಮಾ.ಟ್ರೇ.ವಿ.ವಾ.
೧೪೨	ಕನ್ನಡ ಬಾಲಬೋಧೆ ೩ನೆಯ ಆ. ೧೯೪೦	ಎಸ್. ಎಫ್. ಕಟ್ಟೀಮನಿ ಹೆ. ಮಾ. ಕನ್ನಡ ಶಾಲೆ ನಂದನಿವಾಸ ಹುಬ್ಬಳ್ಳಿ	೦–೧–೯	ಪ್ರಾ. ಶಾ. ಪಠ್ಯಪುಸ್ತಕ
೧೪೩	ಕುಟ್ಟಿದ ಅಕ್ಕಿ ಬೀಸಿದ ಹಿಟ್ಟು ೧ನೆಯ ಆ. ೧೯೪೯	ಕರಿಯಪ್ಪ ಎರೆಸೀಮಿ ಗ್ರಾಮಸೇವಾ ಕುಟೀರ ಸಂಗೂರ P. ಹಾವೇರಿ	೦–೨–೦	ಪ್ರಾ.ಮಾ.ಟ್ರೇ.ವಿ.ವಾ.

೧೪೪	ವ್ಯಾವಹಾರಿಕ ಭೂಮಿತಿ–ಜಮಾಖರ್ಚು ೧ನೆ. ಆ. ೧೯೪೦	ಗೋವಿಂದರಾವ ಸುಬ್ರಾವ ಗೋಂಧಳಿ ಆಫ್ ಕರೋಶಿ	೦–೩–೩	ಪ್ರಾ. ಶಾ. ವಿ. ವಾ.
೧೪೫	ಕರ್ನಾಟಕ ಗತವೈಭವ ಸನ್ ೧೯೪೦	ಕರ್ನಾಟಕ ಸಾಹಿತ್ಯಮಂದಿರ ಧಾರವಾಡ	೧–೦–೦	ಪ್ರಾ.ಮಾ.ಟ್ರೇ.ವಿ.ಶಿ.ವಾ.
೧೪೬	ಕನ್ನಡ ಎರಡನೆಯ ಪುಸ್ತಕ ಸನ್ ೧೯೪೦	ದಿ. ಬೆಂಗಳೂರ ಪ್ರಿಂಟಿಂಗ ಆ್ಯಂಡಪಬ್ಲಿಶಿಂಗ ಕಂಪನಿ ಲಿಮಿಟೆಡ್ ಬೆಂಗಳೂರ ಸಿಟಿ	೦–೫–೬	ಪ್ರಾ. ಶಾ. ಪಠ್ಯಪುಸ್ತಕ
೧೪೭	ಕನ್ನಡ ನಾಲ್ಕನೆಯ ಪುಸ್ತಕ ಸನ್ ೧೯೪೦	ಸದರ	೦–೬–೬	ಪ್ರಾ. ಶಾ. ಪಠ್ಯಪುಸ್ತಕ
೧೪೮	ಕನ್ನಡ ಬಾಲಬೋಧೆ ಸನ್ ೧೯೩೯ ಬುಕ್ ಕಮೀಟಿಯವರು ತಿಳಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	ಸದರ	೦–೨–೯	ಪ್ರಾ. ಶಾ. ವಿ. ವಾಚನಾಲಯ
೧೪೯	ಭೂಲೋಕ ಬುಕ್ ೧ ತಿದ್ದಿದ ಆ. ೧೯೪೦	ಮ್ಯಾಕ್ಮಿಲನ್ ಆ್ಯಂಡ ಕಂಪನಿ ಲಿಮಿಟೆಡ್ ಮುಂಬಯಿ	೦–೮–೦	ಮಾ. ಶಾ. ಪಠ್ಯಪುಸ್ತಕ ಪ್ರಾ. ಶಾ. ವಿ. ವಾ.
೧೫೦	ತೆಲುಗಿನ ಕತೆಗಳು ಸನ್ ೧೯೪೦	ಎಸ್. ಜಿ. ಕುಲಕರ್ಣಿ ಸಾಧನಪ್ರೆಸ್ ಧಾರವಾಡ	೦–೮–೦	ಪ್ರಾ.ಮಾ.ಟ್ರೇ.ಶಿ.ವಿ.ವಾ.
೧೫೧	ಕರ್ನಾಟಕ ವೀರರತ್ನಗಳು ಸನ್ ೧೯೪೦	ಟಿ. ಡಿ. ಶಿವಲಿಂಗಯ್ಯ ಕರ್ನಾಕಟ ಸಾಹಿತ್ಯಮಂದಿರ ಧಾರವಾಡ	೧–೦–೦	ಪ್ರಾ.ಮಾ.ಟ್ರೇ.ಶಿ.ವಿ.ವಾ.
೧೫೨	ಗದ್ಯ ಪದ್ಯಾವಲಿ ಸನ್ ೧೯೪೦	ವಿದ್ಯಾವಿಲಾಸ ಬುಕ್‌ಡಿಪೋ ಗದಗ	೦–೧೪–೦	ಸದರ

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿವೆ
೧೫೩	ದೂರ ಹೋದಳು ಸನ್ ೧೯೪೦	ಎಮ್.ಕೆ. ಜಯಚಂದ್ರಗೌಡರು ವಿಜಯ ಮಂದಿರ ಕಾಲಪೇಟೆ (ವಾಯಿನಾಡು)	೦–೬–೦	ಸದರ
೧೫೪	ಯತಿರಾಜ ರಾಮಾನುಜ ಭಾಗ ೧ ಸನ್ ೧೯೨೭	ಬೆಂಗಳೂರ ಪ್ರೆಸ್ ಮೈಸೂರ ರೋಡ ಬೆಂಗಳೂರ ಸಿಟಿ-	೦–೩–೦	ಪ್ರಾ. ಮಾ. ಟ್ರೇ. ಶಿ. ವಾ.
೧೫೫	ಹೊಸಕನ್ನಡ ಪಾಠಮಾಲೆ ಬುಕ್ ೧ ಸನ್ ೧೯೪೦	ಬಾಲಸಾಹಿತ್ಯಮಂಡಲ ಮಂಗಳೂರ	೦–೨–೦	ಪ್ರಾ. ಶಾ. ವಿ. ವಾ.
೧೫೬	ಹೊಸಕನ್ನಡ ಪಾಠಮಾಲೆ ಬುಕ್ ೨ ಸನ್ ೧೯೪೦	ಸದರ	೦–೨–೬	ಸದರ
೧೫೭	ಹೊಸಕನ್ನಡ ಪಾಠಮಾಲೆ ಬುಕ್ ೩ ಸನ್ ೧೯೪೦	ಸದರ	೦–೩–೦	ಸದರ
೧೫೮	ಹೊಸ ಕನ್ನಡ ಪಾಠಮಾಲೆ ಬುಕ್ ೪ ಸನ್ ೧೯೪೦	ಬಾಲಸಾಹಿತ್ಯಮಂಡಲ ಮಂಗಳೂರ	೦–೪–೦	ಪ್ರಾ. ಶಾ. ವಿ. ವಾ.
೧೫೯	ಹೊಸ ಕನ್ನಡ ಪಾಠಮಾಲೆ ಬುಕ್ ೫ ಸನ್ ೧೯೪೦	ಸದರ	೦–೫–೦	ಸದರ
೧೬೦	ಕನ್ನಡ ನುಡಿಗನ್ನಡಿ ಮತ್ತು ಛಂದೋ ಮಂಜರಿ ತಿದ್ದಿದ ಆವೃತ್ತಿ ೧೯೪೦	ಎಮ್. ಪಿ. ಪೂಜಾರ ಧಾರವಾಡ	೦–೧೦–೦	ಪ್ರಾ. ಮಾ. ಟ್ರೇ. ಪಠ್ಯಪುಸ್ತಕ

೧೬೧	ನುಡಿಗನ್ನಡ ಭಾಗ ೨ ತಿದ್ದಿದ ಆವೃತ್ತಿ ೧೯೪೦	ಸದರ	೦–೪–೦	ಪ್ರಾ. ಮಾ. ಶಾ. ಪಠ್ಯಪುಸ್ತಕ
೧೬೨	ನುಡಿಗನ್ನಡ ಭಾಗ ೧ ತಿದ್ದಿದ ಆವೃತ್ತಿ ೧೯೪೦	ಸದರ	೦–೩–೬	ಪ್ರಾ. ಶಾ. ಪಠ್ಯಪುಸ್ತಕ
೧೬೩	ಆಸಾಮೀ ಕತೆಗಳು	ಸಾಧನ ಮುದ್ರಣಾಲಯ ಧಾರವಾಡ	೦–೮–೦	ಪ್ರಾ. ಮಾ. ಟ್ರೇ. ಶಿ. ವಾ.
೧೬೪	ಹೊಸಕನ್ನಡ ಪಾಠಮಾಲೆ ಬುಕ್ ೭	ಬಾಲಸಾಹಿತ್ಯಮಂಡಲ ಮಂಗಳೂರ	೦–೭–೦	ಪ್ರಾ. ಶಾ. ವಿ. ವಾ.
೧೬೫	ಹೊಸಕನ್ನಡ ಪಾಠಮಾಲೆ ಬುಕ್ ೬	ಸದರ	೦–೬–೦	ಸದರ
೧೬೬	ಕನ್ನಡ ಮೂರನೆಯ ಪುಸ್ತಕ ಸನ್ ೧೯೪೦	ದಿ. ಬೆಂಗಳೂರ ಪ್ರಿಂಟಿಂಗ ಲ್ಯಾಂಡ ಪಬ್ಲಿಸಿಂಗ ಕಂಪನಿ ಲಿಮಿಟೆಡ್ ಬೆಂಗಳೂರ ಸಿಟಿ.	೦–೬–೦	ಪ್ರಾ. ಶಾ. ಪಠ್ಯಪುಸ್ತಕ
೧೬೭	ಕನ್ನಡ ಐದನೆಯ ಪುಸ್ತಕ ಸನ್ ೧೯೪೦	ಸದರ	೦–೭–೦	ಸದರ
೧೬೮	ಕನ್ನಡ ಒಂದನೆಯ ಪುಸ್ತಕ ಸನ್ ೧೯೩೯	ಸದರ	೦–೨–೯	ಸದರ
೧೬೯	ಸಚಿತ್ರ ಕೋಷ್ಟಕ ಮತ್ತು ಬಾಯಿ ಲೆಕ್ಕಗಳು ಸನ್ ೧೯೪೦	ಎಸ್. ಬೀ. ಪಾವಟೆ ಆನಂದ ಬುಕ್‌ಡಿಪೊ ಆ್ಯಂಡ ಪಾವರ ಪ್ರಿಂಟಿಂಗ ಪ್ರೆಸ್ ಹುಬ್ಬಳ್ಳಿ	೦–೨–೦	ಪ್ರಾ. ಶಾ. ಶಿ. ವಾ.

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿವೆ
೧೭೦	ಲಿಂಬೆಹಣ್ಣಿನ ಉಪಯೋಗ ಸನ್ ೧೯೩೯	ಶಹಪೂರ ಮಲ್ಲಾರರಾವ ಯಲೂರಪ್ಪ ಇಂಗಳೆ ದೇಸಾಯಿ ಬೆಳಗಾವಿ	೦-೧-೦	ಪ್ರಾ. ಮೂ. ಟ್ರೇ. ಶಿ. ವಾ.
೧೭೧	ಎಕ್ಸರೇ ೧೫ನೆ-ಆ-೧೯೪೦	ಯು. ರಾಘವೇಂದ್ರಾಚಾರ್ಯ ಲೆಕ್ಚರರ ಇನ್ ಫಿಜಿಕ್ಸ ಬಾಯೊಲಾಜಿ ಕಾಲೇಜ ಮದರಾಸ	೧-೦-೦	ಪ್ರಾ.ಮೂ.ಟ್ರೇ.ಶಿ.ವಿ.ವಾ.
೧೭೨	ಶ್ರೀ. ಬ್ರಹ್ಮಾನಂದ ಮಹಾರಾಜರ ಚರಿತ್ರೆ ೧೫ನೆ. ಆ. ೧೯೩೩.	ಎ. ಆರ್. ಶಿವನಾಗಪ್ಪ ವಾಗ್ವಿಲಾಸ ಪಾವರಪ್ರೆಸ್ ಹುಬ್ಬಳ್ಳಿ	೦-೪-೦	ಪ್ರಾ. ಮೂ. ಟ್ರೇ. ಶಿ. ವಾ.
೧೭೩	ತೆರಿಗೊಂಡ ವೆಂಕಮ್ಮಾಂಬಾ ಆ. ೧೯೪೦	ಶ್ರೀ. ಲಕ್ಷ್ಮೀನರಸಿಂಹಶಾಸ್ತ್ರಿ ಸಂತೆಕಲ್ಲೂರ ಹಳ್ಳಿ ತಾ॥ ಚಿಂತಾಮಣಿ	೦-೪-೦	ಪ್ರಾ.ಮೂ. ಟ್ರೇ. ವಿ. ವಾ.
೧೭೪	ಗರ್ಭ ರತ್ನಾಕರ ಆ. ೧೯೪೦	ಶ್ರೀ. ಗಿರಿಜಾದೇವಿ ಇಚ್ಛಂಗಿಮಠ ಚರಂತಿ ಓಣಿ ಧಾರವಾಡ	೦-೬-೦	ಪ್ರಾ.ಮೂ. ಟ್ರೇ. ಶಿ. ವಾ.
೧೭೫	ಬಷಿಷ್ಕಾರ ಆ. ೧೯೪೦	ಎಚ್. ಎಸ್. ಪಾಟೀಲ ರಂಗಮಂಗ ಪ್ರಕಾಶನ ಧಾರವಾಡ	೦-೪-೦	ಪ್ರಾ.ಮೂ.ಟ್ರೇ.ಶಿ.ವಿ.ವಾ.
೧೭೬	ದೇಹದ ಚರಿತ್ರೆ ೧೫ನೆ. ಆ. ೧೯೪೦	ಆಕ್ಸಫೋರ್ಡ ಯುನಿವರ್ಸಿಟಿಪ್ರೆಸ್	೨-೪-೦	ಮೂ. ಟ್ರೇ. ಪಠ್ಯಪುಸ್ತಕ

೧೭೮	ಮನೋರಂಜಕ ವಾಕ್ಯರಚನೆ ಬುಕ್ ೧ ಸನ್ ೧೯೪೦	ಸದರ	೦-೩-೬	ಪ್ರಾ. ಟ್ರೇ. ವಿ. ವಾ.
೧೭೯	ಮನೋರಂಜಕ ವಾಕ್ಯರಚನೆ ಬುಕ್ ೨ ಸನ್. ೧೯೪೦	ಸದರ	೦-೪-೦	ಪ್ರಾ. ಟ್ರೇ. ವಿ. ವಾ.
೧೮೦	ಲಹರಿ ೧ನೆ. ಆ. ೧೯೪೦	ಪಿ. ವ್ಹಿ. ಕುಲಕರ್ಣಿ ಮನೋಹರ ಗ್ರಂಥ ಭಾಂಡಾರ ಧಾರವಾಡ	೦-೬-೦	ಪ್ರಾ.ಮಾ.ಟ್ರೇ.ವಿ.ಶಿ.ವಾ.
೧೮೧	ಭೂಲೋಕ ಬುಕ್ ೩ ತಿದ್ದಿದ ಆವೃತ್ತಿ ೧೯೪೦	ಮ್ಯಾಕ್‌ಮಿಲನ್ ಆ್ಯಂಡ ಕಂಪನಿ ಲಿ. ಹಾರ್ನಬಿ ರೋಡ ಮುಂಬಯಿ	೦-೧೦-೦	ಮಾ. ಶಾ. ಪಠ್ಯಪುಸ್ತಕ ಪ್ರಾ. ಶಾ. ವಿ. ವಾ.
೧೮೨	ಭೂಲೋಕ ಬುಕ್ ೨ ತಿದ್ದಿದ ಆವೃತ್ತಿ ೧೯೪೦	ಸದರ	೦-೯-೦	ಸದರ
೧೮೩	ಶರೀರ ಶಿಕ್ಷೆ ೧ ನೆ. ಆ. ೧೯೪೦	ಎಸ್. ಜೆ. ಬಾಪಟ ಧಾರವಾಡ	ಕ.ಮಾ.ಬೆ ೨-೦-೦	ಪ್ರಾ.ಮಾ. ಟ್ರೇ. ಶಿ.ವಾ.
೧೮೪	ಕನ್ನಡ ಏಳನೆಯ ಪುಸ್ತಕ ೧೯೩೯ ಬುಕ್ ಕಮೀಟಿಯವರು ತಿಳುಹಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	ಬೆಂಗಳೂರ ಪ್ರಿಂಟಿಂಗ ಆ್ಯಂಡ ಪಬ್ಲಿಸಿಂಗ ಕಂಪನಿ ಲಿ. ಬೆಂಗಳೂರ ಸಿಟಿ.	೦-೧೧-೦	ಪ್ರಾ. ಶಾ. ಪಠ್ಯಪುಸ್ತಕ

(ಜಾಹೀರಾತು)

ಆ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಯಾತಕ್ಕಾಗಿ ಮಂಜೂರಾಗಿವೆ
೧೮೫೫	ಹಜರತೆ ಮಹಮ್ಮದ ಪೈಗಂಬರರ ಚರಿತ್ರೆಯು ೧೯೨೮. ಆ. ೧೯೩೪ಳ ಬುಕ್ ಕಮಿಟಿಯವರು ತಿಳುಹಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	ಸೇಖ ಇಸ್ಮಾಯಿಲ್ ಆದಮ ಕಾರವಾರ	೦-೧೨-೦	ಪ್ರಾ. ಮೂ. ಟ್ರೇ. ವಿ. ವಾ.
೧೮೫೬	ಕನ್ನಡ ಅರನೆಯ ಪುಸ್ತಕ ೧೯೪೦ ಬುಕ್ ಕಮಿಟಿಯವರು ತಿಳುಹಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	ಬೆಂಗಳೂರ ಪ್ರಿಂಟಿಂಗ ಆ್ಯಂಡ ಪಬ್ಲಿಸಿಂಗ ಕಂಪನಿ ಲಿ. ಬೆಂಗಳೂರ ಸಿಟಿ	೦-೮-೦	ಪ್ರಾ. ಶಾ. ಪಠ್ಯಪುಸ್ತಕ
೧೮೫೭	ಸಚಿತ್ರ ನಿಬಂಧ ಮಾಲೆ ನಾಲ್ಕನೆಯ ಆವೃತ್ತಿ ೧೯೩೦ ಬುಕ್ ಕಮಿಟಿಯವರು ತಿಳುಹಿಸಿದಂತೆ ಮುಂದಿನ ಆವೃತ್ತಿಯಲ್ಲಿ ತಿದ್ದಬೇಕು.	ಆರ್. ಆರ್. ಕಮಲಾಪುರ ಗದಗ	೦-೧೨-೬	ಪ್ರಾ. ಶಾ. ಪಠ್ಯಪುಸ್ತಕ

ಹೊಸ ರೂಪಾಯಿಗಳು

ರೂಪಾಯಿ ನಾಣ್ಯದ ಬೇಡಿಕೆಯು ಹೆಚ್ಚಾದುದರಿಂದಲೂ ಒಂದು ರೂಪಾಯಿಯ ಹೊಸ ನೋಟುಗಳು ಅನೇಕ ಕಾರಣಗಳಿಂದ ಲೋಕಪ್ರಿಯವಾಗದೆ ಇರುವದರಿಂದಲೂ ಹೊಸತರದ ರೂಪಾಯಿಯ ನಾಣ್ಯವನ್ನು ಹೊರಡಿಸಬೇಕೆಂದು ಸರಕಾರದವರು ನಿಶ್ಚಯ ಮಾಡಿದ್ದಾರೆ. ಈ ಹೊಸ ರೂಪಾಯಿಯಲ್ಲಿ ೨೨ ದಷ್ಟು ಬೆಳ್ಳಿಯು ೨೨ ದಷ್ಟು ಹೀನಧಾತುಗಳು ಕೂಡಿರುವವು. ಈ ರೂಪಾಯಿಯ ದಂಡೆಯು ದುಂಡಾಗಿರದೆ ಆಣೆಯ ನಾಣ್ಯದಂತೆ ತಗ್ಗು ದಿನ್ನೆಯಾಗಿರುವದು ಇದರಿಂದ ನಕಲು ಮಾಡಲಿಕ್ಕೆ ಸಾಧ್ಯವಾಗಲಾರದು.

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ. ಎ.

ಸಂಪುಟ ೮೦	ಎಪ್ರಿಲ್ ೧೯೪೧	ವರ್ಷ ೧೩. ಸಂ. ೧

ಹೊಸ ವರ್ಷದ ಹಾರೈಕೆ

೫೦ದಿನ ಎಪ್ರಿಲ್ ತಿಂಗಳ ಸಂಚಿಕೆಯಲ್ಲಿ ನಿವೇದಿಸಿಕೊಂಡಂತೆ ನಮ್ಮ ಶಿಕ್ಷಕ ಬಂಧುಗಳ ಮತ್ತು ಇತರ ಸದ್ಗೃಹಸ್ಥರ ನೆರವಿನಿಂದ ಈ ವರ್ಷದ ಕಾರ್ಯಕಲಾಪಗಳು ಸುಸಂಗತವಾಗಿ ಸಾಗಿದುವು. ತಜ್ಞರಾದ ಲೇಖಕರು ಮಾನಸಶಾಸ್ತ್ರ, ಬಾಲಕರ ಬುದ್ಧಿಮಾಪನ, ಅಂಕಗಣಿತದ ಸಮನ್ವಿತ ಶಿಕ್ಷಣ, ಶಿಕ್ಷಪದ್ಧತಿ, ಮಕ್ಕಳ ಆರೋಗ್ಯ, ಕವಿತಾಶಿಕ್ಷಣ, ಪಾಠಪದ್ಧತಿಗಳು, ಮುಂತಾದ ಮಹತ್ವದ ಲೇಖನಗಳನ್ನು ಒದಗಿಸಿಕೊಟ್ಟು ನಮ್ಮ ಕಾರ್ಯಕ್ಕೆ ನೆರವಾದರು. ಪ್ರಪಂಚದ ಮಹಾಪುರುಷರೆನ್ನಿಸಿಕೊಂಡ ವ್ಯಕ್ತಿಗಳ ಅಲ್ಪಪರಿಚಯವುಳ್ಳ ಉಜ್ವಲವಾದ ಭಾಷೆಯ ಲೇಖನಗಳು ಓದುಗರಿಗೆ ತುಂಬ ಆಕರ್ಷಕವೆನಿಸಿದುವು. ನಮ್ಮಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ **ಶ್ರೀ. ತಾವಡೆ ಸೀತಾರಾಮರಾಯರು** ನಮ್ಮ ಪತ್ರಿಕೆಯ ವಿಷಯದಲ್ಲಿ ಎಷ್ಟು ಗೌರವ ಆದರಗಳನ್ನು ತೋರಿಸುವೆರೆಂಬದು ಆಗಾಗ ಪ್ರಕಟವಾದ ಅವರ ಉದಾತ್ತ ವಿಚಾರಗಳ ಲೇಖನಗಳಿಂದ ವ್ಯಕ್ತವಾಯಿತು. ಅದಕ್ಕಾಗಿ ಆ ಮಹನೀಯರಿಗೆ ನಮ್ಮ ಅಂತಃಕರಣಪೂರ್ವಕವಾದ ವಂದನೆಗಳು ಸಲ್ಲಬೇಕಾಗಿವೆ.

ಈ ವರ್ಷದಲ್ಲಿ ಸಂಭವಿಸಿದ ಮಹಾಯುದ್ಧದ ಘಟನೆಯು ಇನ್ನೊಂದು ಮಹತ್ವದ ಮಾತು. ಈ ಸಂಬಂಧದಿಂದಲೂ ಶಿಕ್ಷಕವರ್ಗಕ್ಕೆ ಅವಶ್ಯಕವೆನಿಸು ವಂಥ ಮಹತ್ವದ ವಿಚಾರಗಳನ್ನು ಆಗಾಗ ಸಂಗ್ರಹಿಸಿ ಪ್ರಕಟಿಸಲಾಯಿತು.

ಒಟ್ಟಿಗೆ ಶಿಕ್ಷಕರಿಗೂ ಶಿಕ್ಷಣಕ್ಕೂ ವೀಸಲಾದ ಈ ಪತ್ರಿಕೆಗೆ ಒಪ್ಪುವಂಥ ಮಹತ್ವದ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಬೇಕೆಂಬ ನಮ್ಮ ಧೋರಣೆಯನ್ನು ಅನುಸರಿಸಿಯೇ ಈ ವರ್ಷದ ಎಲ್ಲ ಲೇಖನಗಳು ಇದ್ದುವೆಂದು ಹೇಳುವದಕ್ಕೆ ನಮಗೆ ಆನಂದವೆನಿಸುವದು. ಮುಂದಿನ ವರ್ಷದಲ್ಲಿಯೂ ನಮ್ಮ ಶಿಕ್ಷಕ ವರ್ಗವು ಇದೇರೀತಿಯಾಗಿ ನೆರವಾಗಿ ನಮ್ಮ ಕಾರ್ಯವನ್ನು ಸುಸೂತ್ರವಾಗಿ ನಾಗಿಸಿಕೊಡುವದೆಂದು ಹಾರೈಸುವೆವು. ಮತ್ತು ಈ ವರ್ಷದ ಆ ಮಹನೀಯರ ಸಹಾಯಕ್ಕಾಗಿ ನಾವು ಅವರಿಗೆ ತುಂಬ ಕೃತಜ್ಞರಾಗಿರುವೆವು.

ಮಹಾಯುದ್ಧದ ಬೇಗೆಯು ಮೂಲಕ ಕಾಗದವೂ ಮುದ್ರಣ ಸಾಮಗ್ರಿಗಳೂ ದುರ್ಮಿಲವಾಗಿ ಅವುಗಳ ಬೆಲೆಯು ಒಂದಕ್ಕೆ ಎರಡಾಯಿತು. ಇನ್ನೂ ಹೆಚ್ಚುವದೋ ಏನೋ ಎಂಬ ಭಯವೂ ತೋರುತ್ತಲಿದೆ. ಏನಿದ್ದರೂ ನಮ್ಮ ಪತ್ರಿಕೆಯು ಆಕಾರ ಪ್ರಕಾರಗಳು ಎಂದಿನಂತೆಯೇ ಮುಂದೆ ಸಾಗುವವು.

ಪ್ರಾಥಮಿಕ ಶಿಕ್ಷಕರಿಂದ ಬಂದ ಲೇಖನಗಳಲ್ಲಿ ಭಾಷಾಂತರಗಳೂ ಅನುವಾದಗಳೂ ಹೆಚ್ಚು. ಸ್ವತಂತ್ರವಾದ ವಿಚಾರ ಪ್ರಣಾಲಿಗಳನ್ನೊಳಗೊಂಡ ಲೇಖನಗಳಿಗಿರುವ ಮಹತ್ವವು ಇಂಥ ಪರರ ಧೋರಣೆಯನ್ನು ಅವಲಂಬಿಸಿದ ಲೇಖನಗಳಿಗೆ ಇಲ್ಲವೆಂಬದನ್ನು ಅವರು ಗಮನಿಸಿ ಸ್ವತಂತ್ರ ಲೇಖನಗಳನ್ನು ಬರೆದು ಕಳುಹಿಸಿದರೆ ಅವನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಲ್ಲದೆ ತಕ್ಕ ಸಂಭಾವನೆಯನ್ನೂ ಕೊಡುವ ವ್ಯವಸ್ಥೆ ಮಾಡುವೆವು.

ಶಿಕ್ಷಕರ ಕವಿತೆಗಳು ಇನ್ನೂ ತೀರ ಕೆಳಗಿನ ತರಗತಿಯಲ್ಲಿಯೇ ಇರುವವೆಂದು ಓದುಗರು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು. ಆದ್ದರಿಂದ ಮುಂದಿನ ವರ್ಷದಲ್ಲಿ ನಮ್ಮ ಶಿಕ್ಷಕ ಬಂಧುಗಳಿಂದ ಇದಕ್ಕೂ ಹೆಚ್ಚಿನ ತರಗತಿಯ ಕವಿತೆಗಳನ್ನು ನಿರೀಕ್ಷಿಸಲಾಗಿದೆ.

ಈ ವರ್ಷದಲ್ಲಿ ನಮ್ಮ ಅನುಭವಕ್ಕೆ ಬಂದ ಈ ಸಂಗತಿಗಳನ್ನು ಸರಳ ಮನಸ್ಸಿನಿಂದ ಓದುಗರ ಮುಂದಿರಿಸಿ ಮುಂದಿನ ವರ್ಷದಲ್ಲಿ ಈ ವಿಷಯಗಳಲ್ಲಿ ಹೆಚ್ಚಿನ ಸುಧಾರಣೆಗಳನ್ನು ಹಾರೈಸುವೆವು.

ಜಗತ್ತನ್ನೇ ವ್ಯಾಪಿಸಲು ಹವಣಿಸುತ್ತಿರುವ ಮಹಾಯುದ್ಧದ ಬೇಗೆಯು ಬೇಗನೆ ಆರಿ ಬ್ರಿಟಿಷ್ ಸಾಮ್ರಾಜ್ಯವೂ ಸಾಮ್ರಾಜ್ಯಾಂತರ್ಗತವಾದ ದೇಶಗಳೂ ಸುಖಶಾಂತಿಗಳನ್ನು ಹೊಂದಲೆಂಬದು ನಮ್ಮ ಕೊನೆಯ ಮತ್ತು ಮಹತ್ವದ ಹಾರೈಕೆಯು. ಭಗವಂತನ ಕರುಣೆಯಿಂದ ಅಂಥ ಸುದಿನಗಳು ಬೇಗನೆ ಬರಲಿ

—ಸಂಪಾದಕ

ಸರಕಾರದ ಆಯವ್ಯಯಗಳು

೧. ಮುಂಬಯಿ ಪ್ರಾಂತಿಕಸರಕಾರದ ಮುಂಗಡ ಪತ್ರಿಕೆಯು :—

ಕಳೆದ ತಿಂಗಳ ಕೊನೆಯ ವಾರದಲ್ಲಿ ನಾ. ಗವ್ಹರ್ನರ ಸಾಹೇಬರು ಸನ್ ೧೯೧೧–೧೨ನೆಯ ವರ್ಷದಲ್ಲಿ ಆಗಬಹುದಾದ ಆಯವ್ಯಯಗಳ ವಿವರಗಳನ್ನು ತಿಳಿಸಿದರು. ಅದರ ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಈ ವರ್ಷ ೧೩ ಕೋಟಿ ೫೬ ಲಕ್ಷ ೬೫ ಸಾವಿರ ರೂಪಾಯಿಗಳ ಆದಾಯ ವಾಗಿ ೧೩ ಕೋಟಿ ೫೬ ಲಕ್ಷ ರೂಪಾಯಿಗಳ ವೆಚ್ಚವು ಬರುವದು. ಇದರಲ್ಲಿ ತೀಕ್ಷ್ಣಣಖಾತೆಯು ೧೭ ಲಕ್ಷ ೮೨ ಸಾವಿರ ರೂ. ಉತ್ಪನ್ನವೂ ೨ ಕೋಟಿ ೬ ಲಕ್ಷ ೮೮ ಸಾವಿರ ವೆಚ್ಚವೂ ಬರುವವು. ಇದು ಕಳೆದ ವರ್ಷದ ಆದಾಯ ವೆಚ್ಚಗಳ ಮಾನದಿಂದ ಚೆನ್ನಾಗಿದೆ. ಯುದ್ಧದ ಮೂಲಕ ಕೆಲವು ಬಾಬುಗಳಿಂದ ಉತ್ಪನ್ನವು ಹೆಚ್ಚಿಗೆ ಬಂದಿದೆ. ಕೆಲವು ಕಡೆಗೆ ಕಡಿಮೆಯಾಗಿದೆ. ಆವಸರದ ಹಾಗೂ ಆಪತ್ತಿನ ಕಾರ್ಯಗಳಿಗೆಂದು ೧ ಕೋಟಿ ೧೧ ಲಕ್ಷ ದಷ್ಟು ಹಣವನ್ನು ಸಂಗ್ರಹಿಸಿಡಲಾಗಿದೆ. ೩೦ ರೂಪಾಯಿಗಳಿಗಿಂತ ಕಡಿಮೆ ಸಂಬಳದ ಸರಕಾರೀ ನೌಕರರಿಗೆ ಎರಡು ರೂಪಾಯಿಗಳಂತೆ ತುಟ್ಟಿಯ ಭತ್ತೆಯನ್ನು ಕೊಡಬೇಕೆಂದು ನಿರ್ಣಯಿಸಿದುದರಿಂದ ೧೨ ಲಕ್ಷ ರೂ. ವೆಚ್ಚವು ಹೆಚ್ಚಿಗೆ ಬರುತ್ತಲಿದೆ. ವೆಚ್ಚದ ವಿಷಯಗಳು ಇಷ್ಟು ಹೆಚ್ಚಾದಾಗ್ಯೂ ಕೂಡ ಪ್ರಾಂತದ ಜನರ ಸುಖಜೀವನಕ್ಕೂ ವ್ಯಾಪಾರೋದ್ಯೋಗಗಳ ಬೆಳವಣಿಗೆಗೂ ಸಾಕಷ್ಟು ಸೌಕರ್ಯಗಳನ್ನು ಒದಗಿಸ ಲಾಗಿದೆ. ಶಿಕ್ಷಣಪ್ರಸಾರದ ಸಲುವಾಗಿ ಸ್ಥಾನಿಕಸಂಸ್ಥೆಗಳಿಗೆ ಕಳೆದ ವರ್ಷ ಕ್ಕಿಂತಲೂ ೫ ಲಕ್ಷ ೬೦ ಸಾವಿರ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟಿದೆ. ಬೆಳಗಾವಿಯಲ್ಲಿಯ ಬಿ. ಟಿ. ಕಾಲೇಜದಲ್ಲಿ ಕೆಲವು ಶಿಷ್ಯವೃತ್ತಿಗಳನ್ನು ಇಟ್ಟು, ಕಟ್ಟಡದ ಬಗ್ಗೆ ಹಣದ ಸಹಾಯವನ್ನು ಮಾಡಿರುತ್ತದೆ. ಪ್ರೌಢಶಿಕ್ಷಣಕ್ಕಾಗಿ ೨ ಲಕ್ಷ ೪೫ ಸಾವಿರ ರೂ. ಹಾಗೂ ಪ್ರಾಥಮಿಕ ಶಾಲೆಗಳ ಕಟ್ಟಡಗಳಿಗಾಗಿ ೧ ಲಕ್ಷ ರೂ. ತೆಗೆದಿಟ್ಟು ಶಿಕ್ಷಣ ವಿಸ್ತಾರದ ಯೋಜನೆಗಳನ್ನು ಕೈಕೊಳ್ಳ ಲಾಗಿದೆ. ಇನ್‌ಸ್ಪೆಕ್ಟಿಂಗ್ ಸ್ಟಾಫ್ ಬೆಳೆಸುವದು, ಪ್ರೌಢಸಾಕ್ಷರಿಗಳಿಗೆ ಪುಸ್ತಕಗಳನ್ನು ಒದಗಿಸುವದು, ಹಳ್ಳಿಯ ವಾಚನಾಲಯಗಳಿಗೆ ಪ್ರೋತ್ಸಾಹನೆ, ಮುಸಲ್ಮಾನ ಹೆಂಗುಸರಲ್ಲಿ ಇಂಗ್ಲಿಷ ಶಿಕ್ಷಣಪ್ರಸಾರ, ಪ್ರಾಥಮಿಕ ಶಿಕ್ಷಕರ

ಪಗಾರಿನ ಸ್ಕೇಲನ್ನು ತಿದ್ದುವದು ಮುಂತಾದವುಗಳನ್ನು ನಿಶ್ಚಿತಮಾಡಿರುತ್ತದೆ
ಅಸ್ತಿಯ ಮೇಲಿನ ಕರವನ್ನು ತುಸುಮಟ್ಟಿಗೆ ಕಡಿಮೆಮಾಡಿದೆ. ಆರೋಗ್ಯ
ರಕ್ಷಣೆಯಲ್ಲಿ ಪ್ರಗತಿಯಾಗಿ ವೈದ್ಯರಿಗೆ ಸರಕಾರದ ಸಹಾಯವನ್ನು ಕೊಡ
ಲಾಗಿದೆ. ಹಳ್ಳಿಗಳಲ್ಲಿಯ ನೀರಿನ ಪೂರೈಕೆ, ಮಾರ್ಗಗಳ ಬೆಳೆವಣಿಗೆ ಹಾಗೂ
ವ್ಯವಸ್ಥೆ, ಬಡವರಿಗೂ ವಿದ್ಯಾರ್ಥಿಗಳಿಗೂ ವಸತಿಗೃಹಗಳ ಯೋಜನೆ, ಒಕ್ಕು
ತನದ ಪ್ರಾತ್ಯಕ್ಷಿಕೆಗಳು, ಗ್ರಾಮ ಸುಧಾರಣೆ, ಗ್ರಾಮೋದ್ಯೋಗಗಳಿಗೆ ಸಹಾಯ,
ನೀರಾವರಿಯ ಹೆಚ್ಚಳ, ಮೊದಲಾದವುಗಳಿಗೆಲ್ಲ ಹಣವನ್ನು ಒದಗಿಸಲಾಗಿದೆ.

ಮುಂಬಯಿ ಸರಕಾರಕ್ಕೆ ೨೧ ಕೋಟಿ ೫೦ ಲಕ್ಷ ರೂಪಾಯಿಗಳಷ್ಟು
ಸಾಲವಿದೆ. ಇದಕ್ಕಾಗಿ ಪ್ರತಿವರ್ಷ ೧೪ ಕೋಟಿಯಷ್ಟು ರೂ. ಬಡ್ಡಿ ಕೊಡ
ಬೇಕಾಗುತ್ತದೆ. ಹೀಗಿದ್ದರೂ ಆದಾಯದ ೫ ದಷ್ಟು ಹಣವನ್ನು ಈಗಿನ ಯುದ್ಧ
ದಂಥ ಕಠಿಣ ಕಾಲದಲ್ಲಿ ಕೂಡ ಶಿಕ್ಷಣಕ್ಕಾಗಿ ವೆಚ್ಚಮಾಡಲಾಗುವದು
ಕರಗಳನ್ನು ಕಡಿಮೆಮಾಡಿ, ಅವಸರದ ಆಪತ್ತುಗಳಿಗಾಗಿ ಹಣವನ್ನು ಕಾಯ್ದು
ಕೊಂಡು, ಲೋಕೋಪಯುಕ್ತ ಕಾರ್ಯಗಳಿಗೆ ಹೆಚ್ಚು ಹಣ ಪೂರೈಸಿ, ೬೫೦೦
ರೂಪಾಯಿಗಳ ಉಳಿತಾಯವೆಂದರೆ ಬಹಳ ಒಳ್ಳೆಯದು. ಈ ಮುಂಗಡ
ಪತ್ರಿಕೆಯು ನಮ್ಮ ಪ್ರಾಂತದ ಸುರಾಜ್ಯವನ್ನು ತೋರಿಸುತ್ತದೆ.

೨. ಹಿಂದುಸ್ತಾನ ಸರಕಾರದ ಆಯವ್ಯಯ :—

ಕಳೆದ ತಿಂಗಳ ಪ್ರಾರಂಭದಲ್ಲಿ ದಿಲ್ಲಿಯ ಅಸೆಂಬ್ಲಿಯಲ್ಲಿ ಹಿಂದುಸ್ತಾನದ
ಅರ್ಥಸಚಿವರಾದ ಸರ್ ಜರೆಮಿ ರೇಜಿಮನ್‌ರು ಕಳೆದ ವರ್ಷದ ಆಯವ್ಯಯವನ್ನೂ
೧೯೪೧-೪೨ನೆಯ ವರ್ಷದ ಮುಂಗಡ ಪತ್ರಿಕೆಯನ್ನೂ ಮಂಡಿಸಿದರು. ಈ ವರ್ಷ
೧೦೬ ಕೋಟಿ ರೂಪಾಯಿಗಳ ಆದಾಯವೂ ೧೨೬ ಕೋಟಿ ರೂಪಾಯಿಗಳ
ವೆಚ್ಚವೂ ಬರುವದೆಂದು ಅಂದಾಜು ಮಾಡಲಾಗಿದೆ. ಕಡಿಮೆಬಿದ್ದ ಹಣವನ್ನು
ಸಾಲದಿಂದ ಪೂರೈಸಿಕೊಳ್ಳಲಾಗುವದು. ಕಳೆದ ವರ್ಷದ ಆದಾಯವು ಇಷ್ಟೊಂದು
ಇರಲಿಲ್ಲ. ಈ ವರ್ಷ ರೇಶಿವೆ, ಕಡ್ಡೀಪೆಟ್ಟಿಗೆ, ಮೋಟಾರಿನ ಟಾಯರ
ಹೆಚ್ಚಿನ ಲಾಭದ ಉತ್ಪನ್ನ ಇವುಗಳ ಮೇಲಿನ ಕರಗಳ ಮಾನವನ್ನು ಹೆಚ್ಚಿಸಿದೆ.

ಹಿಂದುಸ್ತಾನದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳಲಿಕ್ಕೂ ಪರಚಕ್ರಗಳ
ದಾಳಿಗಳನ್ನು ತಡೆಯಲಿಕ್ಕೂ ಕಳೆದವರ್ಷ ೨೪ ಕೋಟಿ ರೂಪಾಯಿಗಳ ವೆಚ್ಚವು
ಹೆಚ್ಚಾಯಿತು. ಈ ವರ್ಷ ೩೫ ಕೋಟಿ ರೂಪಾಯಿಗಳ ಹೆಚ್ಚಿನ ವೆಚ್ಚವು
ಬರುವದು. ಸೈನ್ಯವಿಭಾಗಕ್ಕಾಗಿ ಈ ವರ್ಷ ೮೪ ಕೋಟಿ ರೂಪಾಯಿಗಳು
ವೆಚ್ಚವಾಗುವವು. ಸೈನಿಕರಿಗೆ ಬೇಕಾಗುವ ಬಹಳ ವಸ್ತುಗಳನ್ನು ಹಿಂದುಸ್ತಾನ

ಲ್ಲಿ ಸಿದ್ಧವಾದವುಗಳನ್ನೇ ಕೊಳ್ಳುವದರಿಂದಲೂ ಸೈನ್ಯದಲ್ಲಿ ಹಿಂದೀ ಸೈನಿಕರೇ ಚಾಕ್ರಿಗಿರುವದರಿಂದಲೂ ಹೆಚ್ಚಿಗೆ ಬಂದ ವೆಚ್ಚಕ್ಕಾಗಿ ನಾವು ಚಿಂತಿಸಬೇಕಾಗಿಲ್ಲ.

ಈ ಸಾರೆ ಯುದ್ಧದ ಮೂಲಕ ನಿರ್ಗತ ವ್ಯಾಪಾರವು ಕಡಿಮೆಯಾಗಿ ಸುಂಕವು ಕಡಿಮೆ ಬಂತು. ರೈಲು, ಪೋಷ್ಟುಗಳಿಂದ ತುಸು ಉತ್ಪನ್ನವು ಹೆಚ್ಚಾಯಿತು. ಹಡಗು ಕಟ್ಟುವದು, ವಿಮಾನಗಳನ್ನು ಸಿದ್ಧಗೊಳಿಸುವದು, ರೈಲಿನ ಎಂಜಿನಗಳನ್ನು ಮಾಡುವದು ಇತ್ಯಾದಿ, ಹೊಸ ಉದ್ಯೋಗಗಳು ಸಿಗೊಳ್ಳಹತ್ತಿವೆ. ಸೈನ್ಯದಲ್ಲಿ ಕಾಲ್ದಳ, ತೋಪುಗಳ ಸೈನ್ಯ, ಸವಾರರು, ಈ ವಿಭಾಗಗಳ ಕಡೆಗೆ ವಿಶೇಷ ಲಕ್ಷ್ಯ ಪೂರೈಸಲಾಗಿದೆ.

೨. ಬ್ರಿಟನ್ನಿನ ಆಯವ್ಯಯ :—

ಬ್ರಿಟಿಶ ಸರಕಾರದ ಅರ್ಥಸಚಿವರಾದ ಸರ್ ಕಿಂಗ್ಸ್‌ಲೆ ವುಡ್ಡರು ಈ ಸಂಗಳ ಪ್ರಾರಂಭದಲ್ಲಿ ಪಾರ್ಲಮೆಂಟದಲ್ಲಿ ಸನ್ ೧೯೪೧-೧೯೪೨ನೆಯ ವರ್ಷದ ಬಂದಾಜ ಪತ್ರಿಕೆಯನ್ನು ಮಂಡಿಸಿದರು. ಈ ವರ್ಷದಲ್ಲಿ ೧೬೩ ಕೋಟಿ ೬೦ ಲಕ್ಷ ಪೌಂಡಗಳ ಆದಾಯವು ೪೨೦ ಕೋಟಿ ೭೦ ಲಕ್ಷ ಪೌಂಡುಗಳ ವೆಚ್ಚವೂ ಆಗುವವು. ಕಳೆದ ವರ್ಷ ೧೪೨ ಕೋಟಿ ೯೦ ಲಕ್ಷ ಪೌಂಡುಗಳ ಆದಾಯವು. ಎಲ್ಲ ಕೋಟಿ ೪೦ ಲಕ್ಷ ಪೌಂಡುಗಳ ವೆಚ್ಚವು ಬಂದಿವೆ. ಹೀಗಾಗಿ ಬ್ರಿಟನ್ನವು ಎರಡು ವರ್ಷಗಳಲ್ಲಿ ೫೫ ಅಬ್ಜ ಪೌಂಡುಗಳಷ್ಟು ಸಾಲಮಾಡಬೇಕಾಯಿತು. ಇದೆಲ್ಲವೂ ಯುದ್ಧದ ವೆಚ್ಚವೆಂದು ಬೇರೆ ಹೇಳಬೇಕಾಗಿಲ್ಲ.

ಒಂದು ದಿವಸದ ಯುದ್ಧದ ವೆಚ್ಚವು ಸುಮಾರು ೧೫ ಕೋಟಿ ರೂಪಾಯಿ ಗಳಿಗಿಂತಲೂ ಹೆಚ್ಚು ಇದೆ. ಬ್ರಿಟಿಶ ಶ್ರೀಮಂತರು ಪ್ರಾಪ್ತಿಯ ಕರವನ್ನು ೧೦೦ಕ್ಕೆ ೯೭೫ ಯಷ್ಟು ಕೊಡುವರು! ವರ್ಷಕ್ಕೆ ೧೫೦ ಪೌಂಡು ಗಳಿಕೆಯಿದ್ದವರು ಸಹ ಪ್ರಾಪ್ತಿಯ ಮೇಲಿನ ಕರವನ್ನು ಕೊಡಬೇಕಾಗಿದೆ. ಸರಕಾರದವರು ಸಾಲಮಾಡಿ ಹೆಚ್ಚು ಕರ ಹೇರಿ ಹಣವನ್ನು ದೊರಕಿಸಿದ್ದಲ್ಲದೆ ಪ್ರಜೆಗಳು ತಮ್ಮ ಅವಶ್ಯಕ ವೆಚ್ಚದಲ್ಲಿ ಸಹ ಮಿತವ್ಯಯಿಗಳಾಗಿ ಹಣ ಉಳಿಸುವ ಹಾಗೂ ಅದನ್ನು ಅತ್ಯಾಯದಿಂದ ಸಾಲವೆಂದು ದೊರಕಿಸುವ ಹೊಸ ಯೋಜನೆಯನ್ನು ಕೈಕೊಳ್ಳ ಲಾಗಿದೆ. ಇದರಿಂದ ಹಣವು ಅಗ್ಗವಾಗದೆ, ಧಾರಣಿಗಳು ಏರದೆ, ದೇಶಕ್ಕೆ ಹಿತವಾಗುವದೆಂದು ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಜೆ. ಎಮ್, ಕೀನ್ಸರು ಅಭಿಪ್ರಾಯಪಡುತ್ತಾರೆ.

ವಿವಿಧ ವಿಷಯಗಳು

ಸೇವ್ಹಿಂಗ್ಸ ಬ್ಯಾಂಕಿನಲ್ಲಿ ಸಂರಕ್ಷಣೆಯ ಠೇವುಗಳು:— ಕಡಿಮೆ ಪ್ರಾಪ್ತಿಯ ಜನರಿಗೆ ಯುದ್ಧದ ಕಾರ್ಯಗಳಿಗೆ ಸಹಾಯಮಾಡಲು ಅನುಕೂಲವಾಗಬೇಕೆಂದು ಹಿಂದುಸ್ಥಾನ ಸರಕಾರದವರು ಇದೇ ಎಪ್ರಿಲ್ ೧ನೆಯ ತಾರೀಖಿನಿಂದ ಪೋಸ್ಟ ಆಫೀಸುಗಳಲ್ಲಿ ಡಿಫೆನ್ಸ ಸೇವ್ಹಿಂಗ್ಸ ಬ್ಯಾಂಕ ಅಕೌಂಟನ್ನು ಆರಂಭಿಸಿದ್ದಾರೆ. ಇದರಲ್ಲಿ ಹಣವಿಟ್ಟವರಿಗೆ ೧೦೦ ಕ್ಕೆ ೨½ ಯಂತೆ ಬಡ್ಡಿಯು ದೊರೆಯುವದು. ಯುದ್ಧ ಮುಗಿದು ಒಂದು ವರ್ಷವಾಗುವವರೆಗೂ ಈ ಹಣವನ್ನು ತಿರುಗಿ ತಕ್ಕೊಳ್ಳಲಿಕ್ಕೆ ಬರುವದಿಲ್ಲ. ಎರಡು ರೂಪಾಯಿಗಿಂತ ಕಡಿಮೆಯಾಗಲಿ ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಲಿ ಹಣವನ್ನು ಇದರಲ್ಲಿ ಇಟ್ಟುಕೊಳ್ಳಲಾಗುವದಿಲ್ಲ.

ಈಗ ಪೋಸ್ಟಲ್ ಸೇವ್ಹಿಂಗ್ಸ ಬ್ಯಾಂಕಿನ ಬಡ್ಡಿಯ ದರವು ೧೦೦ ಕ್ಕೆ ೧ ವರ್ಷಕ್ಕೆ ೧½ ಯಂತೆ ಇರುವದು. ಇದರಲ್ಲಿ ಹಣವಿಟ್ಟವರು ಸಂರಕ್ಷಣೆಯ ಠೇವನ್ನು ಬೇರೆ ಇಡಬಹುದು ಅಥವಾ ಇದ್ದ ಹಣವನ್ನೇ ಅದಕ್ಕೆ ಬದಲಿಸಿಕೊಳ್ಳಬಹುದು.

ಕಡಿಮೆ ಸಂಬಳದ ಸರಕಾರೀ ನೌಕರರಿಗೆ ತುಟ್ಟಿಯ ಭತ್ತೆ:— ಯುದ್ಧದ ಮೂಲಕ ಆಹಾರಪದಾರ್ಥಗಳ ಬೆಲೆಯು ಏರಿರುವದರಿಂದ ಕಡಿಮೆ ಸಂಬಳದ ನೌಕರರಿಗೆ ತುಟ್ಟಿಯ ಭತ್ತೆ ಕೊಡುವ ಯೋಜನೆಯನ್ನು ಮುಂಬಯಿ ಸರಕಾರದವರು ಕೈಕೊಂಡಿರುವರು. ಮುಂಬಯಿ ಪಟ್ಟಣದಲ್ಲಿ ೪೦ ರೂಪಾಯಿಗಳಿಗಿಂತ ಹಾಗೂ ಪ್ರಾಂತದ ಉಳಿದ ಭಾಗಗಳಲ್ಲಿ ೩೦ ರೂಪಾಯಿಗಳಿಗಿಂತ ಕಡಿಮೆ ಸಂಬಳವುಳ್ಳವರಿಗೆ ಎರಡು ರೂಪಾಯಿಗಳಂತೆ ಇದೇ ಎಪ್ರಿಲ್ ತಿಂಗಳಿನಿಂದ ಕೊಡುವದು ಗೊತ್ತಾಗಿದೆ.

ಸರಕಾರದವರಿಂದ ಸಹಾಯ ತೆಗೆದುಕೊಳ್ಳುವ ಸ್ಥಾನಿಕ ಸಂಸ್ಥೆಗಳು ತುಟ್ಟಿಯ ಭತ್ತೆಯನ್ನು ಕೊಡುವ ಯೋಜನೆಯನ್ನು ಸಾದರಪಡಿಸಿ ಒಪ್ಪಿಗೆಯನ್ನು ಪಡೆದುಕೊಂಡರೆ ಹೆಚ್ಚಿಗೆ ಬರುವ ವೆಚ್ಚಕ್ಕಾಗಿ ಅವರಿಗೂ ಸಹ ಸಹಾಯಧನವನ್ನು ಕೊಡಲಾಗುವದು.

ಗ್ರಾಮಗಳ ಸುಧಾರಣೆಗಾಗಿ ಮೆಚ್ಚುಗೆಗಳು:— ಗ್ರಾಮಗಳ ಸುಧಾರಣೆಯು ಸ್ವಯಂ ಸ್ಫೂರ್ತಿಯಿಂದ ಆಗಬೇಕೆಂದು ಮುಂಬಯಿ ಸರಕಾರದವರು

ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತಿವರ್ಷವೂ ಯಾವದಾದರೊಂದು ಹಳ್ಳಿಗೆ ನೂರು ರೂಪಾಯಿಗಳ ಮೆಚ್ಚುಗೆಯನ್ನು ಕೊಡಬೇಕೆಂದು ನಿಶ್ಚಯಿಸಿದ್ದಾರೆ. ಸುಧಾರಣೆಯ ಕೆಲಸದಲ್ಲಿ ಮುಂದರಿದ ಹಳ್ಳಿಗೆ ಈ ಮೆಚ್ಚುಗೆಯು ದೊರೆಯುವದು.

ಈ ಮೆಚ್ಚುಗೆಯನ್ನು ಯಾವ ರೀತಿಯಲ್ಲಿ ಕೊಡಬೇಕೆಂಬ ವಿಷಯದಲ್ಲಿ ಹಳ್ಳಿಗರ ಸಲಹೆಯನ್ನು ತೆಗೆದುಕೊಳ್ಳಲಾಗುವದು. ಸಾರ್ವಜನಿಕ ಉಪಯೋಗಕ್ಕಾಗಿ ಬಾವಿ ಮುಂತಾದವುಗಳನ್ನು ಕಟ್ಟುವದಕ್ಕೆ ಹಣವು ಬೇಕಾಗಿದ್ದರೆ ಹಣವನ್ನು ಪ್ರತ್ಯಕ್ಷ ಕೊಡಲಾಗುವದು. ಹಳ್ಳಿಗಳಿಗೆ ಕಬ್ಬಿಣದ ನೇಗಿಲು, ಪಂಪು ಮೊದಲಾದ ಸಾಮಾನುಗಳು ಬೇಕಾದಲ್ಲಿ ಮೆಚ್ಚುಗೆಯ ಹಣದಲ್ಲಿ ಅವುಗಳನ್ನು ಕೊಳ್ಳಿಸಿಕೊಡಲಾಗುವದು. ೧೯೪೦ ರಲ್ಲಿ ಆದ ಗ್ರಾಮಸುಧಾರಣೆಗಾಗಿ ಈ ವರ್ಷ ಮೆಚ್ಚುಗೆಗಳು ದೊರೆಯುವವು. ಈ ವಿಷಯದಲ್ಲಿ ಜಿಲ್ಲೆಯ ಕಲೆಕ್ಟರರ ಶಿಫಾರಸಿನ ಮೇರೆಗೆ ಆಯಾ ಭಾಗಗಳ ಕಮಿಶನರರು ಮೆಚ್ಚುಗೆಗಳನ್ನು ಕೊಡುವರು.

ಶಿಕ್ಷಣಕಾರ್ಯಗಳಲ್ಲಿ ಚಲನಚಿತ್ರಗಳ ಸಹಾಯ :— ವಿದ್ಯಾರ್ಥಿಗಳು ಕೇವಲ ಕೇಳಿಕಲಿಯದೆ, ನೋಡಿಕಲಿಯುವದು, ಮಾಡಿಕಲಿಯುವದು ಉತ್ತಮವು. ಇದಕ್ಕಾಗಿ ನಕಾಶೆ, ಚಿತ್ರ, ಮಾಡೆಲ್, ಪ್ರವಾಸ, ಪುಸ್ತಕ ಮೊದಲಾದ ಸಾಧನಗಳನ್ನು ಶಿಕ್ಷಕರು ಉಪಯೋಗಿಸುತ್ತಲಿರುವರು. ಮಾಯಾದೀಪ (ಮ್ಯಾಜಿಕ್‌ಲ್ಯಾಂಟರ್ನ) ವು ಇವುಗಳಲ್ಲಿ ಹೆಚ್ಚಾಗಿ ನೆರವಾಗುತ್ತಲಿದ್ದಿತು. ಇತ್ತೀಚೆಗೆ ಬಂದ ಬಣ್ಣದ ಚಲನವಾಕ್ಪಟ (ಸಿನೇಮಾ) ಗಳು ಬಹು ವಿಷಯಗಳಲ್ಲಿ ಸಹ ಜೀವಕಳೆಯನ್ನು ತುಂಬಬಲ್ಲವು. ಮನೋರಂಜನೆಯು ಕೂಡ ಸಿನ್ನಾಗಿ ಬೋಧೆಯನ್ನು ಮಾಡಬಲ್ಲವು.

ಶಿಕ್ಷಕನು ವರ್ಗದ ಕೋಣೆಯಲ್ಲಿಯೇ ಕುಳಿತು ಎಲ್ಲತರದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ಕೊಡುವದು ಅಸಾಧ್ಯವಾದ ಮಾತು. ಚಲನಚಿತ್ರಗಳಲ್ಲಿ ಅಭ್ಯಾಸದ ವಿಷಯಗಳನ್ನು ಕಿವಿಯಾರೆ ಕೇಳಿ ಕಣ್ಣಾರೆ ನೋಡಿ, ಒಮ್ಮೆ ಏಕೆ, ಹಲವುಸಾರೆ ನೋಡಿ ಸಮಾಧಾನ ಪಡುವದರಿಂದ ಕೆಲಮಟ್ಟಿಗಾದರೂ ಅನುಭವ ಸಿದ್ಧವಾದ ನಿಜವಾದ ಜ್ಞಾನವಾಗುತ್ತದೆಂದು ಹೇಳಲು ಅಭ್ಯಂತರವಿಲ್ಲ.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದೇ ಒಂದು ತಾಸುಗಳಲ್ಲಿ ಮುಗಿಯಬಹುದಾದ ಎಲ್ಲ ವಿಷಯಗಳ ಚಿತ್ರಪಟಗಳು ಸಿದ್ಧವಾಗಿವೆ. ಟಿಕೀಟಿನ ಬೆಲೆಯಾದರೂ ಬಹಳಿಲ್ಲ. ೨ ಬಿಲ್ಲಿ ಮಾತ್ರ. ಅದುಕಾರಣ ಸಾಧ್ಯವಿದ್ದಲ್ಲಿ ಶಿಕ್ಷಕರೂ ಇಂಥ ಪಟಗಳನ್ನು ನೋಡಲಿಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕು.

ವರ್ಧಾ ರಾಷ್ಟ್ರೀಯ ಶಿಕ್ಷಣದ ಸಂಬಂಧೀಕರಣ ತತ್ವವು

(ಶ್ರೀ. ಜುಗತರಾಮು ದವೆ ಇವರ ಲೇಖನದ ಆಧಾರದಿಂದ.)

ವರ್ಧಾಯೋಜನೆಯ ಪದ್ಧತಿಯಲ್ಲಿ ಭಿನ್ನ ಭಿನ್ನ ಜ್ಞಾನಾಂಶಗಳನ್ನೂ ಅನುಭವಗಳನ್ನೂ ಒಂದಕ್ಕೊಂದು ಸಂಬಂಧಿಸಿ ಕಲಿಸುವದಿರುತ್ತದೆ. ಈ ವಿಷಯಗಳೊಳಗಿನ ಪರಸ್ಪರ ಸಂಬಂಧವು ಒಂದು ಹಗ್ಗದೊಳಗಿನ ಎಳೆಗಳಲ್ಲಿರುವಂತೆ ಅಲ್ಲ, ಆಷ್ಟೇಕೆ ಒಂದು ಬಟ್ಟೆಯೊಳಗಿನ ಹಾಸುಹೊಕ್ಕುಗಳಲ್ಲಿ ಇರುವಂತೆಯೂ ಅಲ್ಲ, ಅದು ಮನುಷ್ಯನ ದೇಹದೊಳಗೆ ಅಖಂಡವಾಗಿ ವ್ಯಾಪ್ತವಾದ ಜೀವದಂತೆ ಇರಬೇಕು.

ವರ್ಧಾಯೋಜನೆಯಲ್ಲಿ ಯಾವುದಾದರೂ ಮಾತನ್ನು ಜನರು ಬಾರಿಬಾರಿಗೆ ಎತ್ತುತ್ತಿದ್ದು. ಅದು ಈ ಸಂಬಂಧೀಕರಣದ ಅಥವಾ ವಿಷಯಸಮನ್ವಯದ ತತ್ವದ. ಅದನೂ ಚರ್ಚೆಯ ಪ್ರಮಾಣದಿಂದ ನೋಡಿದರೆ ಅದು ಇನ್ನೂ ಅಸ್ಫುಟವಾಗಿಯೇ ಉಳಿದಿದೆ ಎಂದು ಹೇಳಬೇಕಾಗಿದೆ.

ಪೂಜ್ಯ ಗಾಂಧಿಜಿಯವರು ವರ್ಧಾ ಪರಿಷತ್ತಿನಲ್ಲಿ ತಮ್ಮ ಮೂಲ ಕಲ್ಪನೆಯನ್ನು ಈ ರೀತಿಯಾಗಿ ಮಾಡಿದ್ದಾರೆ:—

" ನನ್ನ ಮುಖ್ಯ ಲಕ್ಷಣವು ಉದ್ಯೋಗದ ಮೇಲಿಂದ ಆ ಉದ್ಯೋಗದ್ವಾರಾ ಶಿಕ್ಷಣ ಕೊಡುವದರ ಮೇಲಿದೆ. ಅಕ್ಷರಜ್ಞಾನ, ಇತಿಹಾಸ, ಭೂಗೋಲ, ಗಣಿತ, ವಿಜ್ಞಾನ ಈ ಎಲ್ಲ ವಿಷಯಗಳನ್ನು ಉದ್ಯೋಗ ಶಿಕ್ಷಣದ್ವಾರಾ ಕಲಿಸಬೇಕು.

ಯಾವದಾದರೊಂದು ಹಸ್ತವ್ಯವಸಾಯದ ಕಲೆಯಜ್ಞಾನ ಹಾಗೂ ಅದರ ಶಾಸ್ತ್ರ ಇವುಗಳನ್ನು ವ್ಯವಹಾರಿಕ ರೀತಿಯಿಂದ ಕಲಿಸಬೇಕು; ಆ ವ್ಯವಸಾಯದ ಮುಖಾಂತರ ಎಲ್ಲ ಶಿಕ್ಷಣವೂ ನಡೆಯಬೇಕು, ಉದಾಹರಣೆ: ತಕಲಿಯ ಮೇಲೆ ನೂಲುವದನ್ನು ಕಲಿಸುವದಿದ್ದರೆ ಅದರ ನಿಮಿತ್ತದಿಂದ ಹತ್ತಿಯ ಅನೇಕ ಜಾತಿಗಳು, ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಪ್ರಾಂತಗಳಲ್ಲಿನ ಬೇರೆ ಬೇರೆ ಜಾತಿಯ ವಿಷಯ, ಕೈನೂಲು–ಕೈಮಗ್ಗದ ಉದ್ಯೋಗ ಹ್ರಾಸದ ಇತಿಹಾಸ, ಅದರ ರಾಜಕೀಯ ಕಾರಣಗಳು (ಇದರಲ್ಲಿ ಹಿಂದುಸ್ಥಾನದಲ್ಲಿ ಇಂಗ್ಲಿಷರ ರಾಜ್ಯದ ಇತಿಹಾಸವು ಬರುವದು). ಗಣಿತ ಇತ್ಯಾದಿ ವಿಷಯಗಳ ಜ್ಞಾನವನ್ನು ಮಾಡಿಕೊಡುವದು ಅಗತ್ಯವಾಗುವದು. "

ಆದರೆ ಇದು ೭ ಅಥವಾ ೧೦ ವರ್ಷಗಳಕಾಲ ನಡೆಯುವ ಅಭ್ಯಾಸಕ್ರಮದ ತ್ಯಂತ ಸಂಕ್ಷಿಪ್ತ ವರ್ಣನೆಯಾಯಿತು. ಪ್ರತಿನಿತ್ಯ ಏನು ಕಲಿಸಬೇಕೆಂಬುದನ್ನು ಲೋಚಿಸುವ ಶಿಕ್ಷಕನಿಗೆ ಇದರಿಂದ ಸಮಾಧಾನವಾಗಲಾರದು. ಕರಾಚಿ ುಂದ ಕಲಕತ್ತೆ, ಕಾಶ್ಮೀರದಿಂದ ರಾಮೇಶ್ವರ ಇವುಗಳ ವರ್ಣನೆಯಿಂದ ಹಿಂದು-ಾನದ ಭೂವರ್ಣನೆಯನ್ನು ಕಲಿಯುವವರಿಗೆ ಸಮಾಧಾನವಾಗುವದಿಲ್ಲ. ಈ ್ಥಳಗಳ ನಡುವೆ ಅನೇಕಪ್ರಕಾರದ ವಿವಿಧತೆಯಿಂದ ತುಂಬಿದ ದೇಶಗಳೆಷ್ಟೋ ಿರುವವು. ಅದರಂತೆಯೆ ಮೇಲಿನ ಸಂಕ್ಷಿಪ್ತ ವರ್ಣನೆಯ ಮಧ್ಯದಲ್ಲಿ ಅನೇಕ ಾತಿಯ ವಿಷಯಗಳೆಷ್ಟೋ ಇರುವವು.

ವೇಡಛಿ ಆಶ್ರಮದಲ್ಲಿಯ ಅ ಧ್ಯಾ ಪ ನ ವರ್ಗವನ್ನು ನಡೆಸುವಾಗ ಈ ಿಷಯದ ವಿವರಗಳನ್ನು ಯೋಚಿಸುವ ಪ್ರಯತ್ನವನ್ನು ಸ್ವಲ್ಪ ಮಾಡಿದೆವು. ಅದರ ಾರವನ್ನು ಇಲ್ಲಿ ಕೊಡಲಿಚ್ಛಿಸುವೆವು.

೧. ಜೀವನವನ್ನು ಚೆನ್ನಾಗಿ ಸಾಗಿಸುವದಕ್ಕೆ ಅವಶ್ಯವಿರುವ ಚಟುವಟಿಕೆ ಗಳೇ ಜ್ಞಾನದ ಮುಖ್ಯ ಸಾಧನವಾಗಿರುತ್ತವೆ.

೨. ದೇವರು ನಿರ್ಮಿಸಿದ ಸೃಷ್ಟಿಯೂ ಮನುಷ್ಯನು ಕಟ್ಟಿಕೊಂಡ ಸಮಾಜವೂ— ಇವು ಕೂಡ ಜ್ಞಾನದ ಎರಡನೆಯ ಮಹತ್ವದ ಸಾಧನಗಳಾಗಿವೆ.

೩. ಈ ಎರಡೂ ಸನ್ನಿವೇಶಗಳ ಬುದ್ಧಿ ಪುರಸ್ಸರವಾದ ಹಾಗು ಗುರುವಿನ ೇತೃತ್ವದಲ್ಲಿ ಮಾಡಿಕೊಂಡ ಅಭ್ಯಾಸದಿಂದ ವಿದ್ಯಾರ್ಥಿಗೆ ಉತ್ತಮತರದ ಶಿಕ್ಷಣ ಸಂಸ್ಕಾರವಾಗುವದು.

೪. ಇದರಿಂದ ಹಳೆಯ ಪದ್ಧತಿಯ ಸಾಲೆಗಳಲ್ಲಿ ಕಲಿಸುವಷ್ಟಂತೂ ಂದೇ ಬರುವದು. ಇದಲ್ಲದೆ ಹೆಚ್ಚು ಜ್ಞಾನವೂ ಆಗುವದು.

೫. ಈಗಿನ ಹಳೆಯ ಸಾಲೆಗಳಲ್ಲಿ ಭಾಷೆ, ಗಣಿತ ಇವುಗಳಿಗೆ ಹೆಚ್ಚು ಾಶಸ್ತ್ಯವನ್ನು ಕೊಟ್ಟರೂ ಇವುಗಳಲ್ಲಿ ಯಾವುದನ್ನೂ ಚೆನ್ನಾಗಿ ಉಪಯೋಗಿ ಸುವ ಶಕ್ತಿಯನ್ನು ವಿದ್ಯಾರ್ಥಿಯು ಪಡೆದಿರುವದಿಲ್ಲ.

೬. ಉದ್ಯೋಗ, ನಿಸರ್ಗ, ಸಮಾಜ ಎಂಬ ಸಾಧನಗಳು ಎಂಥವಿರುವ ೆಂದರೆ ವಿದ್ಯಾರ್ಥಿಯು ಕಣ್ಣುಮುಚ್ಚಿಕೊಂಡು ಅವುಗಳನ್ನು ಸೇವಿಸಿದರೂ ಿದರಿಂದ ಜ್ಞಾನವು ಉಂಟಾಗುವದು. ಗಿಡದ ಟೊಂಗೆಗಳಿಗೆ ಹೊರಗಿನಿಂದ ೊಂಗಳನ್ನು ಹಚ್ಚಬೇಕಾಗುವದೇನು? ಅಥವಾ ಬಣ್ಣಕೊಡಬೇಕಾಗಿರುವದೇನು?

೭. ಹೀಗಿದ್ದರೂ ಶಿಕ್ಷಕನು ವಿಷಯ ಸಮನ್ವಯ ತತ್ವವನ್ನು ಚೆನ್ನಾಗಿ ಪರ್ಯಾಲೋಚಿಸಿ ತಿಳಿದುಕೊಂಡಿರಬೇಕು.

೮. ಆತನು ಉದ್ಯೋಗ ಹಾಗು ಇತರ ಸನ್ನಿವೇಶಗಳ ಮುಖಾಂತರ ಯಾವ ವಿಷಯಗಳ ಜ್ಞಾನವಾಡಿಕೊಡಬೇಕಾಗಿರುವದೆಂಬದನ್ನು ಮೊದಲು ನಿಶ್ಚಯಿಸಬೇಕು. ತಕಲಿಯ ವಿಷಯವಾಗಿ ಕಲಿಸುವದದೆ ಎಂದು ತಿಳಿಯೋಣ. ಅಥವಾ ಇನ್ನೂ ಅದರಲ್ಲಿ ಸಣ್ಣ ವಿಭಾಗಗಳನ್ನು ಮಾಡಿ 'ನೂಲು' ಇಲ್ಲವೆ 'ಹತ್ತಿ' ಇವುಗಳ ವಿಷಯವಾಗಿ ಕಲಿಸುವದದೆ ಎಂದು ತಿಳಿಯೋಣ; ಅಥವಾ ನಿಸರ್ಗದಲ್ಲಿನ 'ಬೆಂಕಿ' ಇಲ್ಲವೆ 'ಮಳೆ' ಇವುಗಳ ವಿಷಯಗಳನ್ನು ತೆಗೆದು ಕೊಳ್ಳೋಣ; ಅಥವಾ ಸಮಾಜಸನ್ನಿವೇಶದಲ್ಲಿಯ ಅತಿಥಿ, ಅಥವಾ ಆಕಳು ಅಥವಾ ಯುದ್ಧ ಈ ವಿಷಯಗಳನ್ನು ಕಲಿಸುವದದೆ, ಎಂದು ತಿಳಿಯೋಣ.

೯. ಈ ಆರಿಸಿದ ವಿಷಯಗಳ ಅನುಬಂಧವನ್ನು ಶಿಕ್ಷಕನು ಹುಡುಕಿ ನೋಡಬೇಕಾಗುವದು. ಅನುಬಂಧದ ಸುಮಾರು ೧೦ ಶಾಖೆಗಳು ಹಾಗು ಪ್ರತಿಯೊಂದು ಶಾಖೆಯ ಸುಮಾರು ೧೦ ಉಪಶಾಖೆಗಳು ಅವನ ಕಣ್ಣಿಗೆ ಕಾಣಹತ್ತುವವು.

ಹೀಗೆ ಆರಿಸಿದ ವಿಷಯಗಳಮೇಲೆ ೧೦೦ ಕಡೆಯಿಂದ ಬೆಳಕು ಬೀಳಬಹುದು. ಇನ್ನೊಂದು ರೀತಿಯಿಂದ ಇದೇ ಮಾತನ್ನು ಹೇಳಬೇಕಾಗಿದ್ದರೆ ೧೦೦ ತರದ ಪ್ರಶ್ನೆಗಳು ಈ ವಿಷಯಗಳ ಸಂಬಂಧವಾಗಿ ಹುಟ್ಟುವವು; ಹಾಗು ಅದಕ್ಕೆ ಉತ್ತರಗಳನ್ನು ಅಪೇಕ್ಷಿಸುವವು. ಈ ಉತ್ತರಗಳನ್ನು ಕೊಡುವಾಗ ಆಯಾ ವಿಷಯದ ಸರ್ವಾಂಗ ಸಂಪೂರ್ಣವಾದ ಅಭ್ಯಾಸವಾಗುವದು.

೧೦. ಅನುಬಂಧದ ಶಾಖೆಗಳನ್ನೂ ಉಪಶಾಖೆಗಳನ್ನೂ ಕೆಳಗೆ ಕೊಟ್ಟಿದೆ. ಈ ಶಾಖೋಪಶಾಖೆಗಳು ಕೂಡಿ ಅನುಬಂಧದ ವೃಕ್ಷವಾಗುವದು ಎಂಬದನ್ನು ಸೂಚಿಸುವದು ನಮ್ಮ ಉದ್ದೇಶವಲ್ಲ. ಜೀವನವೂ ಜ್ಞಾನವೂ ಅನಂತವಾಗಿವೆ. ಆದ್ದರಿಂದ ಅನುಬಂಧದ ಶಾಖೆಗಳಾದರೂ ಅನಂತವಾಗುವವು. ಅಲ್ಲದೆ, ಈ ಶಾಖೆಗಳ ಇಲ್ಲಿ ಕೊಟ್ಟ ಕ್ರಮ ಹಾಗು ಹೆಸರು, ಇವು ಕೊನೆಯ ಮಾತೆಂದು ಯಾರೂ ಭಾವಿಸಬಾರದು. ಬೇರೆ ಕ್ರಮವನ್ನೂ ಹೆಸರುಗಳನ್ನೂ ಅನೇಕರು ಸೂಚಿಸಬಹುದು. ಈ ವಿಷಯವನ್ನು ಪ್ರತಿಯೊಬ್ಬ ಶಿಕ್ಷಕನು ತನ್ನದೇಆದ ದೃಷ್ಟಿಕೋನದಿಂದ ನೋಡಿ ನಿರ್ಣಯಿಸುವ ಸ್ವಾತಂತ್ರ್ಯವು ಅವನಿಗೆ ಇದೆ.

ಅನುಬಂಧದ ಶಾಖೋಪಶಾಖೆಗಳನ್ನು ನೋಡುವಾಗ ಒಂದು ಮಹತ್ವದ ಸೂಚನೆಯನ್ನು ನೆನಪಿನಲ್ಲಿಡುವದು ಅಗತ್ಯವದೆ. ಈ ವಿಷಯಗಳೆಲ್ಲ ಒಂದ

ರಿಂದೊಂದು ಸ್ವತಂತ್ರವಾದವುಗಳಲ್ಲ. ಆದ್ದರಿಂದ ವಿಷಯಕ್ಕೆ ಒಂದು ಸ್ವತಂತ್ರ ತಾಸು, ಒಬ್ಬ ಸ್ವತಂತ್ರ ಶಿಕ್ಷಕ ಹಾಗು ಒಂದು ಸ್ವತಂತ್ರ ಪಠ್ಯಪುಸ್ತಕ ಎಂಬ ಹಳೆಯ ಪದ್ಧತಿಯ ರೀತಿಯಲ್ಲಿ ನಾವು ಸೇರಬಾರದು. ಇವು ಒಂದು ಅಖಂಡ ವೃಕ್ಷದ ಶಾಖೆಗಳು, ಒಂದು ಸಜೀವ ದೇಹದ ಅಂಗಗಳು ಆಗಿರುತ್ತವೆ. ಬಾಯಿ ತಿನ್ನುವ ಕೆಲಸವನ್ನು ಮಾಡುವದು; ಇಡಿ ದೇಹಕ್ಕೆ ತೃಪ್ತಿಯಾಗುವದು. ಕಣ್ಣುಗಳು ನೋಡುವವು; ಇಡಿ ಮೈಯು ಆನಂದಿತವಾಗುವದು. ಕಾರ್ಯಕುಶಲತೆಯು ಬರುತ್ತಿರುವಾಗಲೆ ಭಾಷೆಯು ಬೆಳೆಯುವದು, ಮಾತಿನ ಶಕ್ತಿ ಬೆಳೆಯುತ್ತಿರುವಾಗಲೆ ಶಾಸ್ತ್ರೀಯ ಸಂಗತಿಗಳ ಕಾರಣಗಳು ತಿಳಿಯುವವು; ಶಾಸ್ತ್ರೀಯ ವಿಷಯ ದೊಡನೆಯೆ ಗಣಿತವು ಬರಹತ್ತುವದು. ಇವು ಅನ್ಯಬಂಧದ ಶಾಖೆಗಳಿರುವವಲ್ಲದೆ ವೇಳಾಪತ್ರಿಕೆಯಲ್ಲಿ ಹಂಚಿಹಾಕುವ ವಿಷಯಗಳಲ್ಲ.

೧೧. ಶಿಕ್ಷಕರೂ ಮೇಲ್ವಿಚಾರಕರೂ ಬೇರೆ ಬೇರೆ ವಿಷಯಗಳ ಕಡೆಗೆ ೧೦೦ ದೃಷ್ಟಿಕೋನಗಳಿಂದ ನೋಡಿ ತಾವು ಅವಲೋಕಿಸಿದ್ದನ್ನು ಬರೆದಿಟ್ಟರೆ ಅವರಿಗೆ ಸೋಜಿಗವೆನಿಸದೆ ಇರದು. ವಿದ್ಯಾರ್ಥಿಗಳನ್ನು ಕಣ್ಣಮುಂದೆ ಇಟ್ಟುಕೊಳ್ಳಲೇಬೇಕು. ಹುಡುಗನ ಕೈಹಿಡಿದುಕೊಂಡು ಅಡ್ಡಾಡಲಿಕ್ಕೆ ಹೋಗುವ ತಂದೆಯು ಅವನನ್ನು ಅಳಿಸುತ್ತ ಎಳೆದುಕೊಂಡು ಹೋಗಲಾರನು. ವಿಷಯವು ಒಂದೇ ಆದರೂ ೧ನೆಯ ಇಯತ್ತೆಯ ವಿದ್ಯಾರ್ಥಿಯೂ ೭ನೆಯ ಇಯತ್ತೆಯ ವಿದ್ಯಾರ್ಥಿಯೂ ಅದರ ಬಗ್ಗೆ ಬೇರೆ ಬೇರೆ ಸಂಬಂಧಗಳನ್ನು ಹುಡುಕಬಹುದು.

೧೨. ಬೇರೆ ಬೇರೆ ವಿಷಯಗಳನ್ನು ತೆಗೆದುಕೊಂಡು, ಬೇರೆ ಬೇರೆ ಯುಸ್ಸಿನ ವಿದ್ಯಾರ್ಥಿಗಳನ್ನು ಕಣ್ಣುಮುಂದಿಟ್ಟುಕೊಂಡು ಶಾಖೋಪಶಾಖೆಕೊಂದಿಗೆ ಅವುಗಳ ಮೇಲೆ ಅನುಬಂಧಗಳನ್ನು ರಚಿಸುವದು ಒಂದು ಸರಸವಾದ ಕೆಲಸವಾಗುವದು. ವರ್ಧಾಯೋಜನೆಯ ಬೆಳವಣಿಗೆಯಲ್ಲಿ ಆಸಕ್ತಿಯುಳ್ಳವರು ಈ ಕೆಲಸವನ್ನು ಮಾಡಬೇಕಾಗಿ ಪ್ರಾರ್ಥನೆ.

ಶಾಖೆ-ಉಪಶಾಖೆಗಳು.

ಶಾಖೆ : ಕಾರ್ಯಕುಶಲತೆ

ಉಪಶಾಖೆಗಳು : (ಅ) ಕಲಿಯಲಿಕ್ಕೆ ಹಿಡಿದ ವಿಷಯಕ್ಕೆ ಯಾವ ಯಾವ ಚಟುವಟಿಕೆಗಳು ಅವಶ್ಯ, ಅವುಗಳಿಗೆ ಎಷ್ಟು ವೇಳೆಯು ಹಿಡಿಯುವ ಬಗೆಯನ್ನು ತಿಳಿದುಕೊಳ್ಳುವದು. (ಬ) ಆ ಚಟುವಟಿಕೆಗಳ ರೂಢಿಯಾಗುವದು. (ಕ) ಚಟುವಟಿಕೆಗಳನ್ನು ಬರೆದಿಡುವದು. (ಡ) ಕೆಲಸಮಾಡುವಲ್ಲಿ ಬರುವ ರೊಕ್ಕದ ಲೆಕ್ಕ.

೨. ಶಾಖೆ: ಉಡಿಗೆ ತೊಡಿಗೆ

ಉಪಶಾಖೆಗಳು: (ಅ) ಉಪಯುಕ್ತವಾದ ಉಡಿಗೆ ತೊಡಿಗೆಗಳನ್ನು ಗುರ್ತು ಹಿಡಿಯುವದು. (ಬ) ಅವುಗಳನ್ನು ಉಪಯೋಗಿಸುವ ಕ್ರಮವನ್ನು ತಿಳಿಸುವದು. (ಕ) ಮಾಡಲಿಕ್ಕೆ ಬರುವವುಗಳನ್ನು ಮಾಡಿಸುವದು. (ಡ) ಬಟ್ಟೆ ಬರೆಗಳ ಪ್ರಗತಿಯ ಇತಿಹಾಸ.

೩. ಶಾಖೆ: ಸೇವೆ

ಉಪಶಾಖೆಗಳು: (ಅ) ಹಳ್ಳಿಯನ್ನು ಸ್ವಚ್ಛವಿಡುವದು— ಕಸ ಉಡುಗುವದು— ಬೀದಿಗಳನ್ನು ಉಡುಗುವದು— ಕೆರೆಬಾವಿಗಳನ್ನು ಸ್ವಚ್ಛ ಮಾಡುವದು— ಧರ್ಮಶಾಲೆಗಳನ್ನು ಸ್ವಚ್ಛವಿಡುವದು— ತೆಗ್ಗುಗಳನ್ನು ತುಂಬಿ ಸಮ ಮಾಡುವದು. ಇತ್ಯಾದಿ. (ಬ) ಸಭೆ, ಜಾತ್ರೆಗಳ ಸ್ಥಳವನ್ನು ಸ್ವಚ್ಛವಾಗಿಡುವದು. (ಕ) ಗಿಡಗಳನ್ನು ಹಚ್ಚುವದು. (ಡ) ಪ್ರೌಢಶಿಕ್ಷಣ— ಓದು ಬರೆಹಗಳನ್ನು ಕಲಿಸುವದು— ನೂಲುವದು ಮುಂತಾದ ಉದ್ಯೋಗಗಳನ್ನು ಕಲಿಸುವದು— ತನಗೆ ಬರುವ ಕಥೆ, ಶಾಸ್ತ್ರ—ಇವುಗಳನ್ನು ಜನರಿಗೆ ಹೇಳುವದು—ಪುಸ್ತಕ ವರ್ತಮಾನಪತ್ರಗಳನ್ನು ಓದಿ ತೋರಿಸುವದು—ಹಾಡುಗಳನ್ನು ಕಲಿಸುವದು. (ಇ) ಮಕ್ಕಳ ಸೇವೆ— ಜಳಕಮಾಡಲಿಕ್ಕೆ ಕಲಿಸುವದು— ಆಟಗಳನ್ನು ಕಲಿಸುವದು— ದೊಡ್ಡ ಹುಡುಗರು ಸಣ್ಣ ಹುಡುಗರ ಅಭ್ಯಾಸದಲ್ಲಿ ನೆರವಾಗುವದು. (ಫ) ಊರು ಹೊಲಗಳನ್ನು ಸಂರಕ್ಷಿಸುವದಕ್ಕಾಗಿ ಪಹರೆ ಮಾಡುವದು.

೪. ಶಾಖೆ: ಭಾಷೆ.

ಉಪಶಾಖೆಗಳು: (ಅ) ಗದ್ಯ ಪದ್ಯ ಸಾಹಿತ್ಯದೊಳಗಿನ ಆಯ್ಕೆಗಳು (ಬ) ಶಿಕ್ಷಕನು ಸ್ವಂತವಾಗಿ ರಚಿಸಿದ ಸಾಹಿತ್ಯ (ಕ) ಕಥೆ, ಸಂಭಾಷಣ ಮಾತುಗಾರಿಕೆ, ನಾಟಕ (ಡ) ಭಾಷೆಯ ಶಾಸ್ತ್ರ — ಸೂಚನೆ:— ಸಂಭಾಷಣೆಯ ವಿಷಯಗಳು — ಉದ್ಯೋಗ; ಪ್ರಕೃತಿವಿಮರ್ಶೆ; ಮನೆ, ಊರು, ದೇಶ; ಮನುಷ್ಯರು, ಪಶು, ಪಕ್ಷಿ; ಸತ್ಯ ಮುಂತಾದ ಧರ್ಮ; ದಯೆ ಮೊದಲಾದ ಭಾವನೆಗಳು; ಇತಿಹಾಸ; ಆಟ.

೫. ಶಾಖೆ: ಗಣಿತ.

ಉಪಶಾಖೆಗಳು: (ಅ) ಸಂಖ್ಯೆ (ಬ) ತೂಕ (ಕ) ಅಳತೆ (ಡ) ಕ್ರಯ (ಇ) ವೇಳೆ (ಫ) ಭೂಮಿತಿ. ! ಸೂಚನೆ:— ಅಂಕಿಮುಗ್ಗಿಗಳು ಚೆನ್ನಾಗಿ

ಬರುವತನಕ ಪ್ರತಿನಿತ್ಯ ಪರೋಚಿ ಅನಿಸುವದು; ತೂಕದ ಕಲ್ಲುಗಳು, ಅಳತೆಗಳು — ಇವುಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ತನತನಗಾಗಿ ತಯಾರುಮಾಡಿಕೊಳ್ಳಬೇಕು; ಅಪೂರ್ಣಾಂಕ ಅಳತೆ ತೂಕಗಳು ಬಂದರೆ ಅವುಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸಬೇಕು; ನೂಲುವದು ಮುಂತಾದ ಕೆಲಸದ ಲಿಖಿತವನ್ನು ಮಕ್ಕಳು ತಾವೇ ಇಡಬೇಕು.

೬. ಶಾಖೆ: ಸಂಗೀತ.

ಉಪಶಾಖೆಗಳು: ಹಾಡುಗಳು (ತಾಲದ ಸಂಗಡ); ಮೂಲೋದ್ಯೋಗಕ್ಕೂ ಇತರ ವ್ಯವಸಾಯಕ್ಕೂ ಸಂಬಂಧವಿರುವ ಹಾಡುಗಳು; ಕೆಳಗಿನ ಇಯತ್ತೆಗಳಲ್ಲಿ ಇಡಿ ಹಾಡನ್ನು ಕಲಿಸದೆ ಒಂದೆರಡು ನುಡಿಗಳನ್ನು ಕಲಿಸಿದರೆ ಸಾಕು. ಮೂಲ ಉದ್ಯೋಗವನ್ನು ಹಾಗು ಇತರ ಕೆಲಸಗಳನ್ನು ಮಾಡುತ್ತಿರುವಾಗ ಕೆಲಹೊತ್ತು ಹಾಡುಗಳನ್ನು ಹಾಡಲಿಕ್ಕೆ ಬರುತ್ತದೆ. ಅದಕ್ಕೆ ಯೋಗ್ಯರೀತಿಯಿಂದ ಅರಿಸಿದ ಹಾಡುಗಳಾಗಬೇಕು.

೭. ಶಾಖೆ: ಲೇಖನ ಹಾಗು ವರ್ಣ ಚಿತ್ರಕಲೆ.

ಉಪಶಾಖೆಗಳು: (ಅ) ಕುಂಚದಿಂದ ತೆಗೆಯುವ ಆಕೃತಿಗಳು (ಬ) ಭೂಮಿತಿಯ ಆಕೃತಿಗಳು (ಕ) ಶಬ್ದಗಳನ್ನು, ಸೂತ್ರಗಳನ್ನು, ಸುಭಾಷಿತವನ್ನು, ಸೂಚನೆಗಳನ್ನು ಬರೆಯುವದು. (ಡ) ಮಕ್ಕಳು ಸ್ವತಃ ರಚಿಸಿದ ಮಾತುಗಳು, ಸೂಚನೆ:— ಆಲದಬೇರು, ಜಾಲಿಯ ಹಲ್ಲುಕಡ್ಡಿ ಮುಂತಾದವುಗಳಿಂದ ಕುಂಚಗಳನ್ನು ಮಾಡಬಹುದು. ಮಟ್ಟಿ, ಸುಣ್ಣ, ಅರಿಸಿಣ, ಕೆಲವುಬಗೆಯ ಸೊಪ್ಪಿನ ಹಸರುಎಲೆ ಮುಂತಾದವುಗಳಿಂದ ಬಣ್ಣಗಳನ್ನು ಮಾಡಿಕೊಳ್ಳಬೇಕು. ಅಕ್ಷರಗಳನ್ನು ಪೆನ್ಸಿಲಿನಿಂದಲೂ ಕುಂಚಗಳಿಂದಲೂ ಬರೆಯಿಸಿಕೊಳ್ಳಬಹುದು.

೮. ಶಾಖೆ: ಶಾಸ್ತ್ರೀಯ ಅಭ್ಯಾಸ.

ಉಪಶಾಖೆಗಳು: ಯಂತ್ರಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಆರೋಗ್ಯಶಾಸ್ತ್ರ, ಶರೀರಶಾಸ್ತ್ರ, ಪ್ರಾಣಿಶಾಸ್ತ್ರ, ಪದಾರ್ಥಶಾಸ್ತ್ರ, ಭೂಗೋಲ, ಖಗೋಲ, ಭೂಸ್ತರಶಾಸ್ತ್ರ. ಸೂಚನೆಗಳು:— ಶಾಸ್ತ್ರಗಳ ಹೆಸರಿನಿಂದ ಹೆದರಿ ಹೋಗುವ ಕಾರಣವಿಲ್ಲ. ಮೂಲ ಉದ್ಯೋಗವನ್ನಾಗಲಿ ದಿನದ ಇತರ ಕೆಲಸಗಳನ್ನಾಗಲಿ ಮಾಡುತ್ತಿರುವಾಗ ಒಂದಿಲ್ಲೊಂದು ಶಾಸ್ತ್ರದ ಪ್ರಶ್ನೆಗಳು ಮುಂದೆ ಬಂದೇಬರುವವು.

೯. ಶಾಖೆ: ಪರ್ಯಟನ.

ಉಪಶಾಖೆಗಳು: (ಅ) ಭೂಗೋಲದ ಅಭ್ಯಾಸಕ್ಕಾಗಿ (ಬ) ಇತಿಹಾಸದ ಅಭ್ಯಾಸಕ್ಕಾಗಿ (ಕ) ರಮಣೀಯವಾದ ಸ್ಥಳಗಳನ್ನು ನೋಡುವುದಕ್ಕಾಗಿ (ಡ) ಬೇರೆ ಬೇರೆ ಕೆಲಸಗಾರರ ಕೆಲಸಗಳನ್ನು ನೋಡುವುದಕ್ಕಾಗಿ (ಇ) ಸಂಸ್ಥೆಗಳನ್ನು ನೋಡುವುದಕ್ಕೆ (ಫ) ದೊಡ್ಡ ಮನುಷ್ಯರ ಭೆಟ್ಟಿಯಾಗುವದಕ್ಕೆ (ಗ) ಪ್ರಾಣಿ ವನಸ್ಪತಿಗಳ ಅಭ್ಯಾಸಕ್ಕೆ (ಹ) ಸಂಗ್ರಹಕ್ಕೆ ಯೋಗ್ಯವಾದ ವಸ್ತುಗಳನ್ನು ಅರಿಸಿತರುವುದಕ್ಕೆ (ಎ) ಜನರ ರೀತಿ ನೀತಿಗಳನ್ನು ತಿಳಿದುಕೊಳ್ಳುವದಕ್ಕೆ (ಜ) ನಗರರಚನೆಯನ್ನು ಅಭ್ಯಾಸಿಸುವದಕ್ಕೆ (ಲ) ಸುಮ್ಮನೆ ತಿರುಗಾಡುವದಕ್ಕೆ

೧೦. ಶಾಖೆ: ಸಂಗ್ರಹ.

ಉಪಶಾಖೆಗಳು: (ಅ) ವನಸ್ಪತಿಗಳು (ಬ) ಪ್ರಾಣಿಗಳು (ಕ) ಉದ್ಯೋಗ ಡಲ್ಲಿ ಕಾಣಿಸಿದ ವಸ್ತುಗಳು (ಡ) ಬಣ್ಣಬಣ್ಣದ ಕಲ್ಲುಗಳು (ಇ) ಧಾತುಗಳ ಅದರುಗಳು, ಮಣ್ಣಿನ ನಮೂನೆಗಳು. (ಫ) ವರ್ತಮಾನಪತ್ರ ಮುಂತಾದ್ದರಲ್ಲಿ ಬರುವ ಚಿತ್ರಗಳು. (ಗ) ಕಲೆ ಕೈಗಾರಿಕೆಯ ನಮೂನೆಗಳು (ಹ) ಸ್ವಂತ ಸಿದ್ಧಮಾಡಿದ ವಸ್ತುಗಳು, ಕಲ್ಲಿನ ತೂಕಗಳು, ಅಳತೆಗಳು, ಇಂಚುಪಟ್ಟಿ, ಕ್ಷಪ್ತವಾದ ಉದ್ದಳತೆಯುಳ್ಳ ದಾರದ ತುಂಡುಗಳು ಪ್ರವಾಹಿ ಪದಾರ್ಥಗಳನ್ನು ಅಳೆಯುವ ಅಳತೆಗಳು, ಭೂಮಿತಿಯ ಸಾಧನಗಳು, ಕುಂಚಗಳು, ಲೇಖನಿಗಳು ಮುಂ. ಮಣ್ಣಿನಲ್ಲಿ ಸಿಕ್ಕುವ ಉಪಯುಕ್ತ ವಸ್ತುಗಳು. ಚಿಂದಿಗಳನ್ನು ತೊಳೆದು ಸಂಗ್ರಹಿಸುವದು, ಅಲ್ಲಲ್ಲಿ ಸಿಕ್ಕ ಒಂದು ಮಗ್ಗಲು ಬೆಳ್ಳಗಿದ್ದ ಕಾಗದ ಗಳನ್ನು ಕಟ್ಟಿ ಪುಸ್ತಕಗಳನ್ನು ಮಾಡುವದು, ಜಲ್ಲಿ ಬಿಟ್ಟ ಲಖೋಟಿಗಳನ್ನು ಪುನಃ ಉಪಯೋಗಿಸಲಿಕ್ಕೆ ಬರುವಂತೆ ಮಾಡುವದು, ಇಲ್ಲವೆ ಅವುಗಳನ್ನು ಬಿಚ್ಚಿ ಒಳಗಿನ ಮಗ್ಗಲು ಬರೆಯಲಿಕ್ಕೆ ಉಪಯೋಗಿಸಿಕೊಳ್ಳುವದು. ಒಗೆದ ಮಚ್ಚಿ, ಎಲವುಗಳನ್ನು ಗೊಬ್ಬರಕ್ಕೆ ಉಪಯೋಗವಾಗುವಂತೆ ಮಾಡುವದು.

—ಅನುವಾದಕರು: ತಟ್ಟಿ ಶಾಮರಾಯರು ಬಿ. ಎ.

ಮಾತ್ರಾವೃತ್ತಗಳು

ಲೇಖಕ:— ಪಂಡಿತ ಕೇಶವಶರ್ಮಾ ಗಲಗಲಿ

ಕನ್ನಡ ಭಾಷೆಯು ಪ್ರಕೃತಿ ಸಹಜವಾಗಿ ಮಾತ್ರಾವೃತ್ತಕ್ಕೆ ಹೆಚ್ಚು ಅನುಕೂಲವಾಗಿರುವದು. ತ್ರಿಮೂರ್ತಿಗಣಘಟಿತ ವೃತ್ತಗಳಂತೂ ಕನ್ನಡ ಭಾಷೆಯ ಸ್ವತ್ವವನ್ನೇ ತೋರಿಸುವವು. ಅಕ್ಷರಗಣಘಟಿತ ವೃತ್ತಗಳು ಸಂಸ್ಕೃತ ಭಾಷೆಯಿಂದ ಬಂದವು. ಅವು ಕನ್ನಡದ ಪ್ರಕೃತಿಗೆ ಅಷ್ಟು ಹಾಳತಾದವುಗಳಲ್ಲ. ಆದರೂ, ಕೆಲವು ರಮಣೀಯ ಅಕ್ಷರ ಛಂದಸ್ಸಿನಿಂದ ಕನ್ನಡ ಭಾಷೆಯ ಸೊಗಸು ಬಳೆಯುವದು. ಆಧುನಿಕ ಕವಿಗಳು ಮಾತ್ರಾಛಂದಸ್ಸನ್ನೇ ಬಳಿಸುತ್ತಲಿದ್ದಾರೆ. ಆದರೂ ಅವರು ಲುಪ್ತಪ್ರಾಯವಾಗಿರುದ ತ್ರಿಮೂರ್ತಿಗಣಘಟಕ ಛಂದಸ್ಸನ್ನು ಬಳೆಯಿಸಲೂ ಯತ್ನಿಸಿದರೆ ಹೆಚ್ಚು ಒಳ್ಳೆಯದಾಗುವದು.

ಒಂದು ಹ್ರಸ್ವವಾದ ಅಕ್ಷರವನ್ನು ಉಚ್ಚರಿಸಲಿಕ್ಕೆ ಬೇಕಾಗುವ ವೇಳೆಯ ಪರಿಮಿತಿಗೆ ಒಂದು ಮಾತ್ರೆಯೊಂದೂ, ದೀರ್ಘವಾದ ಅಕ್ಷರವನ್ನು ಉಚ್ಚರಿಸುವ ಸಮಯದ ಪರಿಮಿತಿಗೆ ಎರಡು ಮಾತ್ರೆಗಳೆಂದೂ ತಿಳಿಯುವರು. ಹ್ರಸ್ವಾಕ್ಷರಕ್ಕೆ ಲಘುವೆಂದೂ, ದೀರ್ಘಾಕ್ಷರಕ್ಕೆ ಗುರುವೆಂದೂ ಸಂಜ್ಞೆಯುಂಟು. ಪ್ಲುತಕ್ಕೆ ೩ ಮಾತ್ರೆಗಳು. ಕೆಲವು ಆಧುನಿಕ ಕವಿಗಳು ಪ್ಲುತವನ್ನು ಛಂದಸ್ಸಿನಲ್ಲಿ ಉಪಯೋಗಿಸುತ್ತಾರೆ. ಅಕ್ಷರಗಳ ಅಥವಾ ಮಾತ್ರೆಗಳ ಗುಂಪಿಗೆ 'ಗಣ' ಎಂದು ಹೆಸರು.

ಹ್ರಸ್ವವೂ ಕೆಲವು ನಿಮಿತ್ತಗಳಿಂದ ಛಂದಸ್ಸಿನಲ್ಲಿ ಗುರುತ್ವವನ್ನು ಪಡೆಯುವದು. ಹ್ರಸ್ವಾಕ್ಷರದ ಮುಂವೆ ಅನುಸ್ವಾರ ವಿಸರ್ಗಗಳಿದ್ದರೆ ಅದಕ್ಕೆ ಗುರುತ್ವ ಬರುವದು. ಸಂಯುಕ್ತಾಕ್ಷರವಿದ್ದರೆ ಅದರ ಹಿಂದಿನ ಅಕ್ಷರ ಗುರು ಎಂದರೆ ಎರಡು ಮಾತ್ರೆಯದು ಆಗುವದು. ಹ್ರಸ್ವಾಕ್ಷರದ ಮುಂದೆ ವ್ಯಂಜನವಿದ್ದರೆ ಅದನ್ನು ಗುರುವಾಗಿಯೆ ಎಣಿಸುವರು.

ಉದಾ— (ಲಘು). ಕೆಲವು. ಹಗೆ. ಪೃಥಿವಿ. ಸಲಹು.

,, (ಗುರು). ಓ, ಸಾರ್ವಭೌಮ ನೀಂ, ನಂಟು.

ಅಃ, ದೇವಂ ರಕ್ಷಿಪಂ.

ವ್ಯಾಕರಣಶಾಸ್ತ್ರದಲ್ಲಿ ಶಿಥಿಲವಾಗಿ ಎಣಿಸಲ್ಪಡುವ ವರ್ಣಸಂಯೋಗದ ಹಿಂದಿನ ಸ್ವರವು ಲಘುವಾಗಿಯೇ ಇರುವದು.

ಉದಾ— ಕುಳಿಗರ್ಗಾಳಿ, ಅಲರ್ದಬೆಮರ್ವ, ನೆಗಳ್ವ, ಎರ್ದೆ, ಇಲ್ಲಿ ಳಿ, ಲ, ಮ, ಗ, ಎ ಈ ಅಕ್ಷರಗಳ ಮುಂದೆ ಸಂಯುಕ್ತಾಕ್ಷರಗಳಿದ್ದರೂ ಲಘುಗಳಾಗಿಯೇ ಇರುವವು. ಒಂದು ಅಕ್ಷರವು ಗುರುವಾಗಲು ಹಲವು ಕಾರಣಗಳಿದ್ದರೂ, ಆ ಅಕ್ಷರವನ್ನು ಒಂದೇ ಗುರುವೆಂದು ಎಣಿಸಬೇಕು.

ಉದಾ— ಶ್ರಾಂತಿ, ಇಂದ್ರ, ಸಂಕ್ಷೋಭ, ಪುನಃ ಪ್ರಾರ್ಥನೆ.

ಚರಣಾಂತದಲ್ಲಿರುವ ಲಘುವಿಗೆ ವಿಕಲ್ಪದಿಂದ ಗುರುತ್ವ ಬರುತ್ತದೆ.

ಕನ್ನಡ ಛಂದಸ್ಸಿಲ್ಲ ಪ್ರಾಯಶಃ ೩·೪·೫ ಮಾತ್ರಾಗಣಗಳಿಂದ ಸಂಘಟಿತವಾಗಿದೆ. ಮೂರು ಮಾತ್ರೆಯ ಗಣವು ಮೂರು ವಿಧವಾಗಿದೆ. ಮೂರೂ ಲಘುಗಳಾಗಿರುವವು. ಉದಾ— ಕೊಳಲು ಚತುರ, ಕೆಳದಿ. ಮೊದಲು ಗುರು ಅನಂತರ ಲಘುವಾಗಿರುವದು. ಉದಾ— ಚಾರು. ನೋಟ ಕೀರ್ತಿ ಇತ್ಯಾದಿ.

ಮೊದಲು ಲಘುವಿದ್ದು ಮುಂದೆ ಗುರುವಾಗಿರುವದು. ಉದಾ— ಮುರಂ, ಜಡಂ, ಜಟಾ.

ನಾಲ್ಕು ಮಾತ್ರಾಗಣವು ೫ ವಿಧವಾಗಿದೆ. ನಾಲ್ಕೂ ಲಘುಗಳಾಗಿರುವದು. ಉದಾ—ಮುನಿಪತಿ, ಅಳವಡು, ಎರಡು ಗುರುಗಳಿರುವದು. ಉದಾ— ಮೂಡಲ್, ಬೇಡಂ ಮೊದಲು ಗುರುವಿದ್ದು ಮುಂದೆ ಎರಡು ಲಘುಗಳು. ವೀಣೆಯ ಮೆಲ್ಲಂಲಿ. ನಡುವೆ ಗುರುವಿದ್ದು ಮುಂದೆ ಒಂದು ಹಿಂದೆ ಒಂದು ಹೀಗೆ ಎರಡು ಲಘುಗಳಿರುವದು. ಸ್ವರಾಜ್ಯ, ಕಿಶೋರ ಮೊದಲು ಎರಡು ಲಘುಗಳಿದ್ದು ಆ ಮೇಲೆ ಒಂದು ಗುರುವಿರುವದು. ಉದಾ— ಪಯಣಂ ನಡೆದಂ.

೫ ಮಾತ್ರೆಯ ಗುಣವು ಎಂಟು ವಿಧವಾಗಿವೆ. ಏದೂ ಲಘುಗಳಾಗಿರುವುದು. ಉದಾ— ಜಗದೆರೆಯ, ತಡಪರುಸು, ಮೊದಲು ಒಂದು ಗುರುವಿದ್ದು ಬಳಿಕ ಮೂರು ಲಘುಗಳಿರುವುದ. ನಿತ್ಯಸುಖ, ಮೂಡುತಿರು. ಒಂದು ಲಘು ಬಳಿಕ ಒಂದು ಗುರು ಮತ್ತೆ ಎರಡು ಲಘುಗಳು ಇರುವುದು. ಉದಾ— ಸುಶಾಶ್ವತ, ನರಾಧಿಪ ಮೊದಲಾದ ಎರಡು ಲಘುಗಳು ಬಳಿಕ ಒಂದು ಗುರು ಮತ್ತೆ ಒಂದು ಲಘು ಉದಾ— ಅದನಿತ್ತು, ನರಕಾರಿ ಮೊದಲು ಮೂರು ಲಘುಗಳು ಬಳಿಕ ಒಂದು ಗುರು ಇರುವುದು ಉದಾ— ಮದನನಂ, ಕಳುಹಿದಂ, ಮೊದಲು ಎರಡು ಗುರುಗಳು, ಕಡೆಗೊಂದು ಲಘು ಇರುವುದು. ಉದಾ— ಮುರಾರಿ, ಏಕಾಗ್ರ ಮೊದಲು ಒಂದು ಲಘು ಕಡೆಯಲ್ಲಿ ಎರಡು ಗುರುಗಳಿರುವುದು. ಉದಾ— ಮಹೇಶಂ, ನರೇಂದ್ರಂ ನಡುವೆ ಲಘುವಿದ್ದು ಮೊದಲು ಕಡೆಯಲ್ಲಿ ಗುರುಗಳಿರುವದು. ಉದಾ— ಭೂಮಿಪ, ಪಾಲಿಪಂ.

ಈ ಗಣಗಳಿಂದ ಅನಂತ ಮಾತ್ರಾವೃತ್ತಗಳನ್ನೂ ಹುಟ್ಟಿಸಲು ಬರುವುದು. ಆಧುನಿಕ ಕವಿಗಳು ಈ ದಿಶೆಯಲ್ಲಿ ಪ್ರಯತ್ನ ಮಾಡಹತ್ತಿದ್ದಾರೆ.

ಅವುಗಳಲ್ಲಿ ಕೆಲವು ರಮ್ಯವಾದ ಛಂದಸ್ಸು ಹುಟ್ಟಿರುವುದು. ಅವುಗಳಿಗೆಲ್ಲ ಹೆಸರು ಕೊಡುವದು ಅಸಾಧ್ಯವಾದರೂ ಗ್ರಹಣಕ್ಕೆ ಯೋಗ್ಯವಾದ ಭಾಗವು ಇರುವುದರಲ್ಲಿ ಸಂದೇಹವಿಲ್ಲ. ಪ್ರಾಚೀನರು ಕೆಲವು ವೃತ್ತಗಳಿಗೆ ಪಾದಗಳ ಸಂಖ್ಯೆಯಿಂದ ಹೆಸರನ್ನು ಕೊಟ್ಟಿದ್ದಾರೆ. ಅಂಥವುಗಳಲ್ಲಿ— ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಅಷ್ಟಪದಿಗಳು ಮುಖ್ಯವಾದವುಗಳು. ರಗಳೆಗಳನ್ನು ಬೇಕಾದಷ್ಟು ಚರಣಗಳಿಂದ ನಿರ್ಮಿಸುವರು. ಇಂಗ್ಲಿಷಿನಲ್ಲಿಯ ಸಾನೆಟ್ಟ (ಸುನೀತ) ವನ್ನು ಮರಾಠಿಯಲ್ಲಿ ತೆಗೆದುಕೊಂಡಿದ್ದಾರೆ. ಇಂತಹ ಚತುರ್ದಶ ಪದಿಯನ್ನು ಕನ್ನಡದಲ್ಲಿಯೂ ಮಾತ್ರಾಗಣಗಳಿಂದ ನಿರ್ಮಿಸಬಹುದು. ಕೆಲವರು ಕನ್ನಡದಲ್ಲಿ ಇಂಥವನ್ನು ಈಗಾಗಲೆ ನಿರ್ಮಿಸಿಯೂ ಇದ್ದಾರೆ.

ದ್ವಿಪದಿ :— ಎರಡು ಚರಣಗಳಿಂದ ಘಟಿತವಾದ ಮಾತ್ರಾವೃತ್ತಕ್ಕೆ ದ್ವಿಪದಿ ಎಂಬ ಹೆಸರನ್ನು ಪ್ರಾಚೀನರು ಕೊಟ್ಟಿದ್ದಾರೆ. ಇದರಲ್ಲಿ ಪ್ರತಿ ಪಾದದಲ್ಲಿ ೫ ಮಾತ್ರೆಯ ಮೂರು ಗಣಗಳೂ ಕೊನೆಯಲ್ಲಿ ಮೂರು ಮಾತ್ರೆಯ ಒಂದು ಗಣವೂ ಇರುವವು.

ಉದಾ— ಹಿರಿಯತನ ಬಂದಾಗ ಧಿಕ್ಕರಿಸಬೇಡ.
ಸಿರಿ ಬಂದ ಕಾಲದೊಳು ನೀ ಮರೆಯಬೇಡ.

ದ್ವಿಪದಿಯು ಇನ್ನೊಂದು ವಿಧವಾಗಿಯೂ ಇರುವದು. ಇದರ ಪಾದಗಳಲ್ಲಿ ೭ ಗಣಗಳು. ಮೊದಲು ಒಂದು ಮೂರು ಮಾತ್ರೆಯ ಗಣ. ಆಮೇಲೆ ನಾಲ್ಕು ಮಾತ್ರೆಯ ಒಂದು ಗಣ. ಹೀಗೆ ೭ ಗಣಗಳು ಕೊನೆಯಲ್ಲಿ ಒಂದು ಗುರುವು.

ಉದಾ— ಎಂತು ಮರೆವೆನೊ ? ಸವಿಯ ಸಾಲಿಡುವ ಮದ್ರ್ಯ ನಗೆಯಂ ಶಂಕರಾ|
ಶಾಂತಿ ಶೋಭಿಸೆ ಮುದ್ದು ವಿಶ್ವಾಯುವ ಮೊಗದ ಬಗೆಯಂ ಶಂಕರಾ ||

ಇದಕ್ಕೆ ತ್ರಿಪುಡಿಯೆಂದೂ ಕರೆಯುತ್ತಾರೆ. ಪ್ರತಿಯೊಂದು ಚರಣದಲ್ಲಿ ಮೂರು ಮಾತ್ರೆಯ ೭ ಗಣಗಳಿನ್ನಿಟ್ಟು ಕಡೆಗೊಂದು ಗುರುವನ್ನಿಟ್ಟು ಕೂಡ ದ್ವಿಪದಿಯನ್ನು ರಚಿಸಬಹುದು :—

ಉದಾ— ಜೀವನಾಂಬು ನಿಧಿಯನಂದು ಮಥಿಸಿ–ಹೊರಟಿಗರಲವಾ ||
ನೀನೆ ಕುಡಿದು ಬಿಟ್ಟೆ ಕಾವ್ಯ ಸುಧೆಯ ಧಾರೆ ಸಂತತಂ || ೧ ||

ಜಿಗಿಯುತಿಹುದು ನೆಗೆದು ಪುಟಿದು ಹಾರಿ ಹಾರಿ ವಿಶ್ವದಾ
ರಸಿಕ ಜನರನೆಲ್ಲ ಮೋಹ ಪಡಿಸಿ ತೃಪ್ತಿಗೊಳಿಪುದು ॥ ೨ ॥

ನಾಲ್ಕು ಮಾತ್ರೆಯ ೬ ಗಣಗಳನ್ನೂ ಅಥವಾ ೭ ಗಣಗಳನ್ನೂ ಕಡೆಗೊಂದು ಗುರುವನ್ನೂ ಇಟ್ಟುಕೊಂಡರೂ ಇಂತಹ ದ್ವಿಪದಿಗಳು ಹುಟ್ಟುತ್ತವೆ.

೭ ಗಣಗಳನ್ನಿಟ್ಟುಕೊಂಡ ದ್ವಿಪದಿ.

ನಾಡಿನ ಪುಣ್ಯದಿ ಪೂರ್ವ ದಿಗಂತದಿ ನಪ ಅರುಣೋದಯ ಹೊಮ್ಮುತಿದೆ ॥
ಚಿರನೂತನ ಚೇತನದುತ್ಸಾಹದಿ ನವೀನ ಜೀವನ ಚಿಮ್ಮುತ್ತಿದೆ.

—ಕೆ. ಪಿ. ಪುಟ್ಟಪ್ಪ.

೬ ಗಣಗಳಿಂದ ರಚಿಸಿದ ದ್ವಿಪದಿಗೆ—

ತರುಗಳು ಪುಷ್ಪದೆ ಪದ್ಮದೆ ನಲಿಲಂ ಕಾವುದೆ ನಾರಿಯರು ॥
ಪವನಂ ಗಂಧದೆ ಶಶಿಯಿಂ ರಾತ್ರಿಯು ಶೋಭೆಯ ಪಡೆದಿಹುದು—

ಇದೇ ಮೇರೆಗೆ ಐದು ಮಾತ್ರೆಯ ಆರುಗಣಗಳೂ ಕೊನೆಗೊಂದು ಗುರುವನ್ನೂ ಇಟ್ಟು ಅಂದರೆ ವಾರ್ಧಿಕದ ದೀರ್ಘ ಚರಣವನ್ನಿಟ್ಟುಕೊಂಡು ದ್ವಿಪದಿಯನ್ನು ರಚಿಸುವರು.

ಉದಾ:— ಗ್ರಿಷ್ಮಕಿಹ ಮುಂಬೆಳಗು ಸಹ ತೋರುತಿಹದೀಗ ಮುಂಗಾರ
ಸಂಜೆಯಂತೆ ।
ಭಿಷ್ಮರಂತಹ ಸುತರ ತಾಯಿ ಚಿಂತೆಯಲಿಹಳು ವಿಧವೆ ಯಿಹ
ಬಂಜೆಯಂತೆ ॥ ೧ ॥

ಇಂತಹ ಎಂದರೆ ೫ ಮಾತ್ರೆಯ ೭ ಗಣಗಳನ್ನೂ ಕೊನೆಯಲ್ಲಿ ೧ ಗುರುವನ್ನೂ ಇಟ್ಟು ದ್ವಿಪದಿಯನ್ನು ರಚಿಸಬಹುದು.

ಉದಾ:— ನನ್ನ ಕಂಗಳ ಕುಣಿತಗಳ ತಾಳಲಯದಲ್ಲಿ ಕಟ್ಟಿರುವೆ ನಿನ್ನ ಕಾವ್ಯವನ್ನು ।
ಸುಗ್ಗಿ ಹಿಗ್ಗುತಲಿರೆ ಬಗ್ಗಿಸದೆ ಕೋಗಿಲೆಯು ? ನಿನ್ನ ಹಾಡವಲ್ಲವದು
ನನ್ನದೆನ್ನು ॥ ೧ ॥

ಇಂತಹ ನಾಲ್ಕು ಚರಣಗಳ ವೃತ್ತಕ್ಕೇ ಸೀಸ ಪದ್ಯವೆಂದು ಹೆಸರು.

ಇದಂತೆ ಮೂರು ಮಾತ್ರೆಯ ಹಾಗೂ ಐದುಮಾತ್ರೆಯ ವಿಶ್ರಣದಿಂದಲೂ ದ್ವಿಪದಿಯನ್ನು ರಚಿಸುವರು. ಇದರ ಮೂಲ ಬೀಜವು ಪಂಪನ ಕಾವ್ಯದಲ್ಲಿದೆ.

ಉದಾ:— ನೋಟ ಸಿಂಗರದ ತೋಟದೊತ್ತಿನಲಿ ಮುಸುಕಿ ಕೊಂಬೆಗಳ ನೆರಳಲಿ
ಮೇಳದೊರಗಿರುವರೇಳು ಕನ್ನೆಯರು ವಿಸುನಿ ಜಿಂಕೆಗಳ ತೆರದಲಿ ।
ಅಳ ಬೊಬ್ಬೆಯನು ಕೇಳಿ ಬೆಚ್ಚುತಲಿ ಬೀಳುತೇಳುತಲಿಹರಿವರು ॥

೩ | ೫ | ೩ | ೫ | ೩ | ೫ | ೪ ಹೀಗೆ ಗಣಗಳಿರುವವು.

ಹೀಗೆಯೇ ೫ ಮತ್ತು ೪ ಮಾತ್ರೆಯ ವಿಶ್ರಗಣಗಳಿಂದಲೂ ರಚಿಸಬಹುದು.

ಸರ್ವಭೂಷಣ ಕವಿಯ ಹಾಡಿನಲ್ಲಿ ಈ ಲಕ್ಷಣದ ಒಂದು ಹಾಡು ಇರುವದು—

ತ್ರಿಪದಿ— ಈ ಮೂರಡಿಯ ಪದ್ಯದ ಪ್ರಾಬಲ್ಯವು ಕನ್ನಡನಾಡಿನಲ್ಲಿ ಬಹಳವಾಗಿ ಹಬ್ಬಿಕೊಂಡಿದೆ. ಸರ್ವಜ್ಞನ ತ್ರಿಪದಿಗಳು, ಹಂತಿಯ ಹಾಡುಗಳು, ಸೊಪ್ಪೀಬಾವಿಯ ಹಾಡುಗಳು, ಗರತಿಯ ಹಾಡುಗಳು, ತೊಟ್ಟಿಲ ಹಾಡುಗಳು ಇವೆಲ್ಲ ಪ್ರಾಯಶಃ ತ್ರಿಪದಿಯಲ್ಲಿರುವವು. ಇವನ್ನು ಬೇರೆ ಬೇರೆ ಧಾಟಿಯಿಂದ ಹಾಡುತ್ತಾರೆ. ಜಂಗಮರ ಬಾಯಲ್ಲಿ, ಕುರುಬರ ಬಾಯಲ್ಲಿ ಹೊಕ್ಕು ಅದು ಬೇರೆ ಬೇರೆ ವಿಧವಾಗಿ ಕೇಳಬಂದರೂ ಅದು ತ್ರಿಪದಿಯೆ! ತ್ರಿಪದಿಯ ಧಾಟಿಯನ್ನು ಗುರುಪರಂಪರೆಯಿಂದ ಕೇಳಿ ಕಲಿಯುವದು ಹೆಚ್ಚು ಒಳ್ಳೆಯದು. ನಮ್ಮಲ್ಲೀಗ ಗುರುಪರಂಪರೆಯು ನಷ್ಟವಾಗುತ್ತ ಬಂದದ್ದರಿಂದ ಹಾಡುವವರು ವಿರಳತಮರಾಗಿ ಪತ್ತಿದ್ದಾರೆ. ಜಾಗೃತ ಕರ್ನಾಟಕವು ಅದನ್ನು ಉದ್ಧರಿಸುವದು ಅಗತ್ಯವಿದೆ. ತ್ರಿಪದಿಯ ಲಕ್ಷಣವನ್ನು ಬ್ರಹ್ಮ, ವಿಷ್ಣು, ರುದ್ರಗಣಗಳಿಂದ ಹೇಳುವದು ಉಚಿತವೂ, ಸಮಂಜಸವೂ ಇದೆ. ಆದರೆ ಕೆಲವರು ಇತ್ತೀಚಿಗೆ ಮಾತ್ರೆಗಳಿಂದ ಇದರ ಲಕ್ಷಣವನ್ನು ಹೇಳಿದ್ದಾರೆ. ಅದು ಹೀಗೆ—ಮೊದಲನೆಯ ಎರಡನೆಯ ಚರಣಗಳಲ್ಲಿ ನಾಲ್ಕು ಗಣಗಳೂ ಮೂರನೆಯ ಚರಣದಲ್ಲಿ ಮೂರು ಗಣಗಳೂ ಇರಬೇಕು. ಎರಡನೇ ಹಾಗೂ ಮೂರನೇ ಚರಣಗಳ ಎರಡನೆಯ ಗಣವು ಮೂರು ಮಾತ್ರೆಯದಿದ್ದು ಉಳಿದೆಲ್ಲ ಗಣಗಳು ಐದು ಮಾತ್ರೆಯವಿರಬೇಕು.

ಉದಾ— ಹೇಳಿದ್ದೆ ಹೇಳುವರು ಕೇಳಿದ್ದೆ ಕೇಳುವರು
ಕೇಳಿದ್ದೆ ಕೇಳಿ ಸುಖಿಸುವರು ಗುರುಗಳಾ
ಹೇಳಿಕೆಯೆ ಬೇರೆ ಸರ್ವಜ್ಞ ॥

೫	೫	೫	೫	ತ್ರಿಪದಿ.
೫	೩	೫	೫	
೫	೩	೫		

ಕನ್ನಡ ಛಂದಸ್ಸಿಗೆ ಮಾತ್ರಾ ಗಣಗಳು ಅನುಕೂಲವಾಗಿರುವಂತೆ ತ್ರಿಮೂರ್ತಿ ಗಣಗಳೂ ಅನುಕೂಲವಾಗಿರುವವು. ಕೆಂಬಹುನಾ ತ್ರಿಮೂರ್ತಿ ಗಣ ಘಟಿತ ವೃತ್ತಗಳೇ ಕನ್ನಡ ಜಾತೀಯ ಛಂದಸ್ಸು. ಕನ್ನಡ ವೃತ್ತಗಳೆಲ್ಲ ೫ ಗಣಗಳಿಂದಲೇ ಘಟಿತವಾಗಿವೆ. ಅವುಗಳನ್ನು ಕೆಳಗಿನಂತೆ ಬರೆಯಬಹುದು. ಬ್ರಹ್ಮಗಣಗಳು ೪ ವಿಧ, ವಿಷ್ಣುಗಣಗಳು ೪ ವಿಧ, ರುದ್ರಗಣಗಳು ೧೬ ವಿಧ ಅವೆ.

(೧) ಬ್ರಹ್ಮಗಣಗಳು

(೧) ಗ. ಗ. — — ಧ್ಯಾನಂ.
(೨) ಸ. U. U. — ಸುಪರಂ.
(೩) ಗ. ಲ. — U .. ಧಾತೃ.
(೪) ನ. U. U. U. ಪೊನಲು.

(೨) ವಿಷ್ಣುಗಣಗಳು

(೧) ಮ. — — — ಜೀವೇಶಂ.
(೨) ಸ. ಗ. U U — — ನಟರಾಜಂ.
(೩) ನ. ಗ. U U U — ಪರಹಿತಂ.
(೪) ತ. — — U ಗೋಪಾಲ.
(೫) ರ. — U — ನಾಕಿಗಂ.
(೬) ಸ. ಲ. U U — U ಹೃದಯೇಶ.
(೭) ಭ. — U U ಶ್ರೀಪತಿ.
(೮) ನ. ಲ. U U U U ಗಣಪತಿ.

(೩) ರುದ್ರಗಣಗಳು

(೧) ಮ. ಗ. — — — — ಗಂಗಾಧೀಶಂ.
(೨) ಸ. ಗ. ಗ. U U — — —ಗಿರಿಜಾನಾಥಂ.
(೩) ರ. ಗ. — U — — ನೀಲಕಂಠಂ.
(೪) ನ. ಗ. ಗ. U U U — — ಕಮಲನಾಭಂ
(೫) ತ. ಗ. — — U — ಕಾಮಾಂತಕಂ.
(೬) ಸ ಲ. ಗ. U U — U — ಪ್ರಮಥಾಧಿಪಂ.
(೭) ಭ. ಗ. — U U — ಶೂಲಧರಂ.
(೮) ನ. ಲ. ಗ. U U U U — ಜಗದೊಡೆಯಾ
(೯) ಮ. ಲ. — — — U ತೇಜೋಮೂರ್ತಿ.
(೧೦) ಸ. ಗ. ಲ. U U — — U ಅವನೀನಾಥ
(೧೧) ರ. ಲ. — U — U ಚಂದ್ರಮೌಳಿ.
(೧೨) ನ. ಗ. ಲ. U U U — U ಭುಜಗಧಾರಿ.
(೧೩) ತ. ಲ. — — U U ಭೂತಾಗ್ರಣಿ.

(೧೪) ಸ. ಲ. ಲ. U U — U U ತ್ರಿಜಗದ್ಗುರು.
(೧೫) ಭ. ಲ. — U U U ಕಾವುರಿಪು.
(೧೬) ನ. ಲ. ಲ. U U U U U ಮದನರಿಪು.

ಇವೇ ಗಣಗಳನ್ನು ತೆಲುಗಿನಲ್ಲಿ, ಸೂರ್ಯ, ಇಂದ್ರ ಮತ್ತು ಚಂದ್ರ ಗಣಗಳೆಂದು ಕರೆಯುವರು. ಬ್ರಹ್ಮ ಗಣಕ್ಕೆ ಪ್ರತಿಯಾಗಿ ಸೂರ್ಯ ಗಣವೂ ವಿಷ್ಣು ಗಣಕ್ಕೆ ಸರಿಯಾಗಿ ಇಂದ್ರಗಣವೂ, ರುದ್ರಗಣಕ್ಕೆ ಸರಿಯಾಗಿ ಚಂದ್ರ ಗಣವೂ ಅನುಕ್ರಮವಾಗಿ ಇರುವವು.

ತ್ರಿಪದಿಯ ಲಕ್ಷಣ :—

ಬಸಿರುಹೋದ್ಭವ ಗಣಂ ರಸದಶಸ್ಥಾನದೋಳ್
ಬಸಿರುಹ ನೇತ್ರಗಣಮೆ ಬರ್ಕುಳಿದವು.
ಬಸಿರುಹ ನೇತ್ರೇ ತ್ರಿಪದಿಗೆ—||

ತ್ರಿಪದಿಯಲ್ಲಿ ಆರನೇ ಮತ್ತು ಹತ್ತನೇ ಗಣಗಳು ಬ್ರಹ್ಮಗಣಗಳಾಗಿರ ಬೇಕು. ಉಳಿದವೆಲ್ಲ ವಿಷ್ಣುಗಣಗಳು. ಮೊದಲನೇ ಚರಣದಲ್ಲಿ ನಾಲ್ಕು ವಿಷ್ಣುಗಣಗಳೂ ಎರಡನೇ ಚರಣದಲ್ಲಿ ನಾಲ್ಕು ಗಣಗಳೂ ಎರಡನೇದ್ದು ಬ್ರಹ್ಮ ಗಣವೂ ಉಳಿದವು ವಿಷ್ಣುಗಣಗಳೂ ಇರುವವು. ಮೂರನೇ ಚರಣದಲ್ಲಿ ಮೂರು ಗಣಗಳಿದ್ದು ಎರಡನೇದ್ದು ಬ್ರಹ್ಮಗಣವೂ, ಉಳಿದವೆರೆಡು ವಿಷ್ಣುಗಣಗಳೂ ಇರುವವು. ಇದು ಶಾಸ್ತ್ರ ಶುದ್ಧವಾದ ಲಕ್ಷಣವು. ಸರ್ವಜ್ಞನ ತ್ರಿಪದಿಗಳಲ್ಲಿ ಸಹ, ಈ ಲಕ್ಷಣಕ್ಕೆ ಸರಿಯಾಗಿ ಹೊಂದದಿರುವ ಹಲವು ಪದ್ಯಗಳು ಸೇರಿ ಕೊಂಡಿರುವವು. ಅದಕ್ಕುಪಾಯವಿಲ್ಲ.

ಇನ್ನು ತ್ರಿಮೂರ್ತಿಗಣ ಘಟಿತವಾದ ಕನ್ನಡದಲ್ಲಿ ಒಳ್ಳೇ ಪ್ರಚಾರದಲ್ಲಿದ್ದ ವೃತ್ತವೆಂದರೆ ಸಾಂಗತ್ಯವು. ಸಾಂಗತ್ಯವು ನಾಲ್ಕು ಚರಣಗಳಿಂದ ಕೂಡಿರು ವದು. ಸಾಂಗತ್ಯದಲ್ಲಿ ಮೊದಲನೇ ಚರಣದಲ್ಲಿ ನಾಲ್ಕು ವಿಷ್ಣುಗಣಗಳೂ ಎರಡನೇ ಚರಣಗಳೆಲ್ಲಿ ಎರಡು ವಿಷ್ಣುಗಣಗಳೂ ಅನಂತರ ಒಂದು ಬ್ರಹ್ಮ ಗಣವೂ ಇದ್ದರೆ ಅದು ಸಾಂಗತ್ಯವಾಗುವದು. ತ್ರಿಮೂರ್ತಿಗಣಗಳನ್ನು ಬಿಟ್ಟರೆ ಇದಕ್ಕೆ ಸಮಂಜಸವಾದ ಲಕ್ಷಣವನ್ನು ಹೇಳಲು ಸಾಧ್ಯವಿಲ್ಲ. ಮೇಲೆ ಹೇಳಿದ ಲಕ್ಷಣವೇ ಇದಕ್ಕೆ ಸಮಂಜಸವಾದದ್ದು. ಕವಿಗಳು ಕೆಲವು ಕಡೆಗೆ ವಿಷ್ಣುವಿನ ಬದಲಾಗಿ ಬ್ರಹ್ಮಗಣವನ್ನಿಟ್ಟಿರುವದು ಕಂಡುಬರುವದು. ಆದರೆ ಅಲ್ಲಿ ವಿಷ್ಣುಗಣದಷ್ಟೇ ಕಾಲಯಾಪನೆಮಾಡಿ ಹಾಡಬೇಕಾಗುತ್ತದೆ. ಇಂತಹ ದೋಷಗಳು ಭರತೇಶ ವೈಭವದಂತಹ ಹಳೇ ಸಾಂಗತ್ಯಗ್ರಂಥಗಳಲ್ಲಿ

ಒಂದೊಂದಾಗಿ ಕಂಡುಬಂದರೆ ಹೊನ್ನಮ್ಮನ ಹದಿಬದಿಯ ಧರ್ಮದಲ್ಲಿ ಅನೇಕವಾಗಿ ಕಾಣುತ್ತವೆ. ಅಡಿಗಡಿಗೆ ಕಂಡುಬರುತ್ತವೆ. ಇದಕ್ಕೆ ಕಾರಣವೆಂದರೆ ತ್ರಿಮೂರ್ತಿಗಣಸ್ವರೂಪ ವಿಸ್ಮೃತಿ ದಿನದಿನಕ್ಕೆ ಹೆಚ್ಚಾಗಿ ಕೊನೆಗೆ ತಾಳಕ್ಕೆ ಎಳೆಯಬಹುದೆಂಬ ಅಭಿಪ್ರಾಯದಿಂದ ಉಂಟಾಗಿರುವದು ಸ್ಪಷ್ಟ. ಸಾಂಗತ್ಯಕ್ಕೆ

ಉದಾ— ಸಿದ್ಧರ । ಸತತವಿ । ಶುದ್ಧರ । ಬೋಧಸ ।
ಮೃದ್ಧರ । ನೆನೆದುನಾ । ನೀಗ ।
ಸಿದ್ಧರ । ಸದೊಳುಲೋ । ಹವನದ್ವಿ । ದಂತಾತ್ಮ ।
ಸಿದ್ಧಿಯ । ಪಡೆವೆನಿ । ನ್ನೇನು ।

ಈ ಸಾಂಗತ್ಯದಲ್ಲಿ ಇನ್ನೊಂದು ಜಾತಿ ಇದೆ. ಇದರಲ್ಲಿ ಸಮಪಾದಗಳ ಕೊನೆಯ ಬ್ರಹ್ಮಗಣಕ್ಕೆ ಬದಲಾಗಿ ವಿಷ್ಣುಗಣ ಬರುತ್ತದೆ.

ಉದಾ— ಹರಿಯೆನೆ । ಶಂಖಚ- । ಕ್ರಾಂಕಿತ । ಶಿವನೆನೆ
ಸುರಸಿಂದು । ವಹವಬ್ಜ । ಭವನೆನೆ ।
ಸರಸತಿ । ಯಾಣ್ಮನಿಂ । ದ್ರವೆನೆಬ । ಲಾಹಕ ।
ಪರಿವೃತ । ಮುದ್ರಪೂ । ರ್ವಸಮುದ್ರ ।

ಹಾಡಿನಲ್ಲಿ ಕಡೆಗೆ ನ್ಯೂನಖಂಡ ಬರುವದು, ಗಾನಕ್ಕೆ ಅನುಕೂಲವಾದುದು. ಪಾಡಿಗೆ ಇದು ಮೊದಲಿನ ರೀತಿಯಷ್ಟು ಸುಗಮವಲ್ಲದ್ದರಿಂದ ಅದರಷ್ಟು ಪ್ರಚಾರದಲ್ಲಿಲ್ಲ. ಸಾಂಗತ್ಯವನ್ನು ಚೌಪದಿಯಲ್ಲಿ ಎಳೆಯಬಹುದು. ಇನ್ನು ಚೌಪದಿಯ ವಿಲಕ್ಷಣಸ್ವರೂಪವಾದ ಗೋವಿನ ಹಾಡಿನ ಬಗ್ಗೆ ಹೇಳಬೇಕಾಗಿದೆ. ಇದು ಮೈಸೂರಿನ ಪಠ್ಯಪುಸ್ತಕಮಾಲೆಯ ಎರಡನೇ ಪುಸ್ತಕದಲ್ಲಿರುವದು. ಗೋದಿನಹಾಡು ಮಾತ್ರಾ ಮತ್ತು ತ್ರಿಮೂರ್ತಿಗಣಗಳ ಸಂಕರಜಾತಿಯದು. ಇದನ್ನು ಪೂರ್ಣವಾಗಿ ಮಾತ್ರಾಬಂಧಕ್ಕೆ ಸಿಲುಕಿಸಬಹುದು.

ಉದಾ— ಧರಣಿಮಂಡಲ ಮಧ್ಯಭಾಗದಿ
ಮೆರೆಯುತಿಹ ಕರ್ನಾಟ ದೇಶದಿ
ಇರುವ ಗೊಲ್ಲನ ಕಾಳನೆಂಬನ
ಪರಿಯನೆಂತಾಂ ಪೇಳ್ವೆನು ।

ಹೀಗೆ ಇದನ್ನು ಮಾತ್ರಾಗಣ ಘಚಿತವಾಗಿ ಮಾಡಬಹುದು. ಪ್ರತಿಪಾದದ ಸಾಲ್ಕು ಗಣಸ್ಥಾನದಲ್ಲಿ ವಿಷಮ ಗಣಗಳು ಮೂರು ಮಾತ್ರೆಯ ಬ್ರಹ್ಮಗಣವಾಗಿರಬೇಕು.

—ಮುಂದೆಸಾಗುವುದು.

ಭಾಷಾವಿಷಯದ ಕ್ರಮಿಕ ಪುಸ್ತಕಗಳು

ಸಮಿತಿಯವರು ಗೊತ್ತುಪಡಿಸಿದ ರೂಪರೇಷೆಗಳು

೧೯೩೯ನೆಯ ಜೂನ ತಿಂಗಳಲ್ಲಿ ಮುಂಬಯಿ ಸರಕಾರದವರು ನಿಯಮಿಸಿದ ಕ್ರಮಿಕ ಪಠ್ಯಪುಸ್ತಕಗಳ ಸಮಿತಿಯವರು ಮರಾಠಿ, ಗುಜರಾಥಿ ಕನ್ನಡ ಹಾಗೂ ಉರ್ದು ಪುಸ್ತಕಗಳು ಹೇಗೆ ಇರಬೇಕೆಂಬುದರ ವಿಷಯದಲ್ಲಿ ಅವುಗಳ ರೂಪರೇಷೆಯನ್ನು ಗೊತ್ತುಪಡಿಸಿದ್ದಾರೆ. ಸದ್ಯಕ್ಕೆ ಪ್ರಚಲಿತವಿರುವ ಪಠ್ಯಪುಸ್ತಕಗಳು ಆ ದೃಷ್ಟಿಯಿಂದ ಸಮಾಧಾನಕರವಿಲ್ಲೆಂದು ಸಮಿತಿಯವರ ಮತವಿರುವದು. ಸಾಧಾರಣವಾಗಿ ಕೆಳಗೆ ಕೊಟ್ಟ ರೀತಿಯಲ್ಲಿ ಭಾಷಾವಿಷಯದ ಕ್ರಮಿಕ ಪುಸ್ತಕಗಳು ಇರಬೇಕೆಂದು ಅವರು ನಿರ್ಣಯಿಸಿದ್ದಾರೆ.

ಬಾಲಕರ ವರ್ಗ ಹಾಗೂ ಮೊದಲನೆಯ ಇಯತ್ತೆಯ ಪುಸ್ತಕಗಳು

ಕಥೆಯ ರೂಪದಿಂದ, ವಾಕ್ಯ ಇಲ್ಲವೆ ಶಬ್ದಪದ್ಧತಿಗಳಿಂದ ಓದುವದನ್ನು ಕಲಿಸಲಿಕ್ಕೆ ಆರಂಭಿಸಬೇಕು. ಚಿಕ್ಕಮಕ್ಕಳಿಗೆ ಪರಿಚಯವಿದ್ದ ಸಂಗತಿಗಳಿಗೆ ಸಂಬಂಧಿಸಿದ ಶಬ್ದಗಳು ಇಲ್ಲವೆ ವಾಕ್ಯಗಳು ಇರಬೇಕು. ಮಕ್ಕಳು ಅವುಗಳಲ್ಲಿ ತನ್ಮಯರಾಗಬೇಕು. ಒಂದು ವಾಕ್ಯವು ಒಂದು ಸಾಲಿನಗಿಂತಲೂ ದೊಡ್ಡದಾಗಿರಕೂಡದು. ಉದ್ದವಾದ ವಾಕ್ಯವಿದ್ದರೆ ಯಾವ ಪದವೂ ಅರ್ಧಕ್ಕೆ ಮುಗಿಯದಂತೆ ಅದನ್ನು ಮುದ್ರಿಸಿರಬೇಕು. ವಾಚನಪಾಠವು ಮಕ್ಕಳಿಗೆ ತಿಳಿಯುವದರ ಸಲುವಾಗಿ ಪಾಠದ ಕೊನೆಗೆ ಪ್ರಾತ್ಯಕ್ಷಿಕೆಗಳು, ವ್ಯವ್ಯಸಾಯಾತ್ಮಕ ಅಭ್ಯಾಸ ಇವು ಇರಬೇಕು. ಯೋಗ್ಯಸ್ಥಾನದಲ್ಲಿ ಸಾದಾ ಚಿತ್ರ ಇಲ್ಲವೆ ಬಣ್ಣದ ಚಿತ್ರ ಇತ್ಯಾದಿ ಸಾಧನಗಳನ್ನು ಉಪಯೋಗಿಸಿರಬೇಕು.

ವಿಷಯ ರಚನೆ ಹಾಗೂ ಸ್ವರೂಪ

(೧) ವಾಚನ ಪಾಠಮಾಲೆಯಲ್ಲಿಯ ಎಲ್ಲ ಪುಸ್ತಕಗಳಲ್ಲಿಯೂ ಒಂದೇತರದ ಸ್ವರ ಯೋಜನೆಯ (Spelling) ಪದ್ಧತಿಯನ್ನು ಉಪಯೋಗಿಸಿರಬೇಕು.

(೨) ಅಗತ್ಯವಿದ್ದ ಸ್ಥಳಗಳಲ್ಲಿ ಯೋಗ್ಯವಿರಾಮ ಚಿನ್ಹಗಳನ್ನು ಕೊಟ್ಟಿರಬೇಕು.

(೩) ಯಾರ ಸಲುವಾಗಿ ಪುಸ್ತಕಗಳನು ಬರೆದಿರುವದೋ ಆ ವಿದ್ಯಾರ್ಥಿ
ಗಳ ವಯಸ್ಸು, ಆಕಲನ ಶಕ್ತಿ, ರಸಗ್ರಹಣಮಾಡುವ ಸಾಮರ್ಥ್ಯ, ಅವರ ಸುತ
ಮುತ್ತಲಿನ ಪರಿಸ್ಥಿತಿ, ಅವರಿಗೆ ಅನುಗುಣವಾದ ಭಾಷೆ, ಇವುಗಳಿಗೆ ಯೋ
ವಾಗುವಂತೆ ಪಾಠಗಳ ವಿಷಯಗಳೂ ಅವುಗಳೊಳಗಿನ ಸಂಗತಿಗಳೂ ಇರಬೇಕ

(೪) ವಾಕ್ಯಚಾರಗಳ ಹಾಗೂ ಗಾದೆಯ ಮಾತುಗಳ ಯೋಜನೆಯ
ವಿದ್ಯಾರ್ಥಿಗಳಿಗೆ ತಿಳಿಯುವಂತಿರಬೇಕು. ವಿಷಯ ಪ್ರತಿಪಾದನೆ ಹಾಗೂ ಬರೆಹ
ಬಗೆಬಗೆಯ ಭಾಷೆ ಇವು ಕ್ರಮಕ್ರಮವಾಗಿ ಹೆಚ್ಚುತ್ತ ಹೋಗಬೇಕು.

(೫) ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಪೂರೈಸುವದಷ್ಟೇ ಉದ್ದೆ
ವನ್ನಿಟ್ಟುಕೊಳ್ಳದೆ ವಿಷಯಗಳನ್ನು ಯೋಗ್ಯರೀತಿಯಲ್ಲಿ ಮಂಡಿಸಿ, ಅದಃ
ಕಲಾತ್ಮಕ ಲೇಖನಕೃತಿಯು ನಿರ್ಮಾಣವಾಗಬೇಕೆಂಬ ತತ್ವದ ಕಡೆಗೆ ಹೆಚ
ಗಮನಿಸಿರಬೇಕು.

(೬) ಪಾಠಗಳಲ್ಲಿಯ ವಿಷಯಗಳು ಕ್ರಮಕ್ರವಾಗಿ ಬುದ್ಧಿವಿಕಾಸವನ
ಮಾಡುವಂತಹವೂ ಸಂಗ್ರಾಹಕ ಪ್ರವೃತ್ತಿಯನ್ನು ಬೆಳೆಯಿಸುವಂಥ
ಇರಬೇಕು.

(೭) ನೈತಿಕ ಧ್ಯೇಯಗಳಿಗೂ ರಾಷ್ಟ್ರದ ಸಂಸ್ಕೃತಿಗಳಿಗೂ ಪೋಷ
ವಾಗುವಂಥ ಪಾಠಗಳಿರಬೇಕು. ಈ ಪಾಠಗಳಲ್ಲಿ ಕೇವಲ ಸರಲ-ಕಃ
ವಿರಕೂಡದು.

(೮) ಇಡಿಯ ಮಾಲೆಯಲ್ಲಿ ಮುಂದೆಕೊಟ್ಟ ವಿಷಯಗಳು ಸಮಾವೆ
ವಾಗಿರಬೇಕು.

(ಅ) ನೈಸರ್ಗಿಕ ಸೌಂದರ್ಯದ ಸ್ವಾದಗ್ರಹಣ.
(ಆ) ಕಲಾತ್ಮಕ ಕಾರ್ಯಗಳ ಸ್ವಾದಗ್ರಹಣ.
(ಇ) ಶಾಸ್ತ್ರೀಯ ಶೋಧಗಳು.
(ಈ) ಪ್ರವಾಸ ಮತ್ತು ಸಾಹಸದ ಕೃತ್ಯಗಳು, ಸುಂದರ ಸ್ಥಳ
ವರ್ಣನೆಗಳು.
(ಉ) ಹಳ್ಳಿ ಮತ್ತು ಪಟ್ಟಣಗಳಲ್ಲಿಯ ಜೀವನ ದೃಶ್ಯಗಳು.
(ಊ) ಎಲ್ಲ ದೇಶಗಳಲ್ಲಿಯ ಜನರ ಕಥೆಗಳು, ದಂತಕಥೆಗಳ
ಅದ್ಭುತ ಸಂಗತಿಗಳು.
(ಎ) ಐತಿಹಾಸಿಕ ಕಥೆಗಳು.

(ಎ) ಸಾಧುಜನರು, ಶೋಧಕರು, ಪ್ರವಾಸಿಗಳು, ಶಾಸ್ತ್ರಜ್ಞರು, ಯೋಧರು, ಮುತ್ಸದ್ದಿಗಳು ಮೊದಲಾದ ಪ್ರಸಿದ್ಧ ವ್ಯಕ್ತಿಗಳ ಚರಿತ್ರೆಗಳಲ್ಲಿಯ ಸಂಗತಿಗಳು.

(ಏ) ನಿತ್ಯವ್ಯವಹಾರಗಳಲ್ಲಿಯ ಪ್ರಸಂಗಗಳ ವರ್ಣನೆಗಳು.

(ಐ) ಬೇರೆಬೇರೆ ಪ್ರಾಣಿಗಳ ಹಾಗೂ ವನಸ್ಪತಿಗಳ ಪರಿಚಯಗಳು.

(ಒ) ಉತ್ಸವ, ಸಮಾರಂಭಗಳ ವರ್ಣನೆಗಳು.

(ಔ) ಬೇರೆ ಬೇರೆ ತರದ ಮೂಲ ಉದ್ಯೋಗಗಳು ಹಾಗೂ ಅವುಗಳನ್ನು ಮಾಡುವ ಜನರು ಇವುಗಳ ತಿಳಿವಳಿಕೆ.

(ಅಂ) ಉದ್ಯೋಗ ವ್ಯವಸಾಯಗಳು.

(ಅಃ) ಸ್ವಚ್ಛತೆ ಹಾಗೂ ಆರೋಗ್ಯ.

ಕಾವ್ಯ ಮತ್ತು ಕವಿತೆಗಳು

ಆರಿಸಲ್ಪಟ್ಟ ಕವಿತೆಗಳಲ್ಲಿಯ ರಚನೆ ಮತ್ತು ವಿಷಯಗಳಲ್ಲಿ ವೈವಿಧ್ಯವಿರಬೇಕು. ಬಾಲಕರ ವರ್ಗ ಹಾಗೂ ಮೊದಲನೆಯ ಇಯತ್ತೆಯ ಪುಸ್ತಕಗಳಲ್ಲಿ ಅಯ್ದುಕೊಂಡ ಒಳ್ಳೆಯ ಶಿಶುಗೀತಗಳಿರಬೇಕು.

ಪಾಠಗಳು

ವಿದ್ಯಾರ್ಥಿಗಳಿಗೆ ತಮ್ಮಷ್ಟಕ್ಕೆ ತಾವೇ ವಿಚಾರಮಾಡಲಿಕ್ಕೆ ಹಚ್ಚುವ ಹಾಗೂ ಅವರಲ್ಲಿ ಅಭ್ಯಾಸದ ಅಭಿರುಚಿಯನ್ನು ಬೆಳೆಯಿಸುವಂತಹ ಪಾಠಗಳಿರಬೇಕು.

ವ್ಯಾಕರಣ ಮತ್ತು ನಿಬಂಧ

ವ್ಯಾಕರಣ ಹಾಗೂ ನಿಬಂಧಗಳ ನಿರೂಪಣೆಯ ಒಂದೇ ಪುಸ್ತಕವಿರಬೇಕು. ಲೇಖನ, ವಾಚನ, ವ್ಯಾಕರಣ ಇವು ಒಂದಕ್ಕೊಂದು ಸುಸಂಬದ್ಧವಾಗಿರಬೇಕು. ಅವು ಒಂದೆಡೆಯಲ್ಲಿ ಸಂಕಲಿತವಾಗಿರಬೇಕು. ಲೇಖನ ಮತ್ತು ವಾಚನಗಳ ದೃಷ್ಟಿಯಿಂದ ಉಪಯುಕ್ತವಿದ್ದಷ್ಟೇ ವ್ಯಾಕರಣವು ಪುಸ್ತಕಗಳಲ್ಲಿ ಬರಬೇಕು. ವ್ಯಾಕರಣದ ಕಠಿಣವಾದ ತೊಡಕುಳ್ಳ, ಇಲ್ಲವೆ ಕ್ಲಿಷ್ಟಭಾಗಗಳು ಇದರಲ್ಲಿ ಇರಕೂಡದು.

ವ್ಯಾಕರಣವನ್ನು ವಾಸ್ತವದೃಷ್ಟಿಯಿಂದ ಕಲಿಸಬೇಕು. ಅದರ ವ್ಯಾವಹಾರಿಕ ಸ್ವರೂಪವನ್ನು ಪೂರ್ಣಗಮನಿಸಬೇಕು. ಮೊದಲು ವಾಕ್ಯವಿಭಜನೆ ಮತ್ತು ಶಬ್ದಗಳ ಜಾತಿ ಇವುಗಳನ್ನು ಸಾಮಾನ್ಯವಾಗಿ ಸಾದಾರೀತಿಯಲ್ಲಿ ಕಲಿಸಬೇಕು. ನಂತರ ಕ್ರಮಕ್ರಮವಾಗಿ ಇವುಗಳನ್ನೇ ವಿಸ್ತಾರವಾಗಿ ಕಲಿಸುತ್ತ ಸಾಗಬೇಕು. ಪದ ಹಾಗೂ ವಾಕ್ಯಖಂಡ ಇವುಗಳ ಉಪಯೋಗ

ವನ್ನು ವಾಕ್ಯಗಳಲ್ಲಿ ಮಾಡುವ ತತ್ವಗಳನ್ನು ಅವಲಂಬಿಸಿ ವ್ಯಾಕರಣದ ಭಾಗವನ್ನು ಸಮಾವೇಶಮಾಡಬೇಕು. ವ್ಯಾಕರಣದ ಪಾಠಗಳನ್ನು ಸ್ಪಷ್ಟವೂ ಸುಲಭವೂ ಆದ ಭಾಷೆಯಲ್ಲಿ ಕಲಿಸಬೇಕು. ಸಾಮಾನ್ಯನಿಯಮಗಳನ್ನು ಎರಡು ರೀತಿಯಲ್ಲಿ ತಿಳಿಯಲಿಕ್ಕೆ ಬರುವದು :—

೧. ವಿಭಜನಪದ್ಧತಿಯಿಂದ— ಕೊಟ್ಟ ಪರಿಚ್ಛೇದದಲ್ಲಿ ಬಂದಿರುವ ಪದ ಹಾಗೂ ವಾಕ್ಯಖಂಡ ಇವುಗಳ ವಿಭಜನಮಾಡಿ ಇಲ್ಲವೆ.

೨. ಸಂಗ್ರಾಹಕ ಪದ್ಧತಿಯಿಂದ— ವಿಶಿಷ್ಟಪ್ರಕಾರದ ಪದ ವಾಕ್ಯಖಂಡ ಇವುಗಳನ್ನು ಮಕ್ಕಳು ತಮ್ಮ ಸ್ವಂತವಾಕ್ಯಗಳಲ್ಲಿ ಸ್ವತಂತ್ರರೀತಿಯಿಂದ ಉಪಯೋಗಿಸುವಂತೆ ಮಾಡುವದರಿಂದ :—

ಮೇಲೆ ಬರೆದ ಪದ್ಧತಿಗಳಲ್ಲಿ ಯಾವದಾದರೊಂದು ಸುಸಂಘಟಿತವಾದ ವಾಕ್ಯವನ್ನಾಗಲಿ, ಪರಿಚ್ಛೇದವನ್ನಾಗಲಿ ಸಿದ್ಧಮಾಡುವಾಗ ವಿದ್ಯಾರ್ಥಿಗಳ ತರ್ಕಬುದ್ಧಿಗೆ ಚಾಲನೆಸಿಗುವದು ಅವಶ್ಯ. ಪರಸ್ಪರ ಸಂಬಂಧವಿಲ್ಲದ ವಾಕ್ಯಗಳನ್ನು ಒಂದರಮುಂದೆ ಒಂದು ಇಟ್ಟರೆ ವಿದ್ಯಾರ್ಥಿಗಳ ತರ್ಕಬುದ್ಧಿಯು ವಿಕಾಸವಾಗುವ ಸಂಭವವಿಲ್ಲ. ವ್ಯಾಕರಣದ ಬೇರೆ ಬೇರೆ ಭಾಗಗಳನ್ನು ಕಲಿಸುವಾಗ ಒಂದೇ ಪದ್ಧತಿಯನ್ನು ಅವಲಂಬಿಸಿದೆ. ಮೇಲೆ ತೋರಿಸಿದ ಎರಡೂ ಭಿನ್ನ ಪದ್ಧತಿಗಳನ್ನು ಉಪಯೋಗಮಾಡುವದು ಅವಶ್ಯವಾಗಿದೆ.

ಪಾಠಗಳು

ಬರೆಹದ ಹಾಗೂ ಬಾಯಿಯ ವಿವಿಧಪ್ರಕಾರದ ಪಾಠಗಳಿರಬೇಕು. ಕೊಟ್ಟ ಪಾಠಗಳ ಹೊರತು ವಾಚನಪಾಠಮಾಲೆಯಲ್ಲಿಯು ತತ್ಸದೃಶವಾದ ಕೆಲಕೆಲವು ಪಾಠಗಳನ್ನು ತಕ್ಕೊಳ್ಳಲು ಸೂಚನೆಗಳನ್ನು ಕೊಟ್ಟಿರಬೇಕು. ವಿಷಯದ ಸಿದ್ಧತೆಯಾಗುವದರಸಲುವಾಗಿ, ಕೊಟ್ಟ ಬಾಯಿಪಾಠ ಹಾಗೂ ಬರೆಹದ ಪಾಠಗಳನ್ನು ಹೊರತುಪಡಿಸಿ ಕಲಾತ್ಮಕ ಲೇಖನಕೃತಿಯನ್ನು ನಿರ್ಮಾಣಮಾಡುವ ರೂಢಿಯಾಗುವಂತೆ ಕೆಲವು ಪಾಠಗಳನ್ನು ಕೊಟ್ಟಿರಬೇಕು.

ಪಾಠದಲ್ಲಿ ತೀರ ಕಡೆಪಿಯೆಂದೂ ಎರಡು ಮೆಟ್ಟಲುಗಳಿರಬೇಕು. ಎರಡನೆಯ ಮೆಟ್ಟಲಿನಲ್ಲಿಯ ಪಾಠವು ವಿಶೇಷವಾಗಿ ಯಾರಲ್ಲಿ ಕಲಾತ್ಮ ಲೇಖನಕೃತಿಯನ್ನು ನಿರ್ಮಾಣಮಾಡುವ ಪಾತ್ರತೆಯುಂಟೋ ಅಂಥ ವಿದ್ಯಾರ್ಥಿಗಳಿಗಾಗಿರಬೇಕು.

ಲೇಖನಪಾಠ

ಉತ್ಕೃಷ್ಟ ವಾಙ್ಮಯದ ಅವತರಣಿಕೆಗಳಿಂದ ಲೇಖನಪಾಠವನ್ನು ಕಲಿಸಬೇಕು. ವರ್ಣನಾತ್ಮಕ, ಕಥನಾತ್ಮಕ, ವಾದವಿವಾದಾತ್ಮಕ ಇಲ್ಲವೆ ಚರ್ಚಾತ್ಮಕ

ಮೊದಲಾದ ವಿಧವಿಧದ ಅವತರಣಿಕೆಗಳು ಪುಸ್ತಕಗಳಲ್ಲಿ ಬಂದಿರಬೇಕು. ನಿಬಂಧದಮೇಲೆ ಇಲ್ಲವೆ ಲೇಖನವ್ಯವಸಾಯದಲ್ಲಿಯ ಪುಸ್ತಕಗಳಲ್ಲಿ ನಿಶ್ಚಿತವಾದ ವಿಷಯಗಳ ಮೇಲೆ ಮೂದರಿಯ ನಿಬಂಧಗಳನ್ನು ಕೊಟ್ಟಿರಬೇಕು.

ಮಾತನಾಡುವ ರೂಢಿಯಾಗುವದರ ಸಲುವಾಗಿ ಯೋಗ್ಯ ಸೂಚನೆಗಳು, ಭಾಷಣ ಹಾಗೂ ವಾದವಿವಾದ ಮೊದಲಾದವುಗಳಿಗಾಗಿ ವಿಷಯಗಳು ಹಾಗೂ ಅವುಗಳಲ್ಲಿಯ ಮೆಟ್ಟುಗಳು ಇವೆಲ್ಲವನ್ನು ಕೊಟ್ಟಿರಬೇಕು. ವಿವಿಧಪ್ರಕಾರದ ವಿಷಯಗಳಿರಬೇಕು.

ಸಾಮಾನ್ಯರೂಪ— ಪುಸ್ತಕಗಳ ಕಾಗದವು ಒಳ್ಳೆಯದಿರಬೇಕು. ತಾಳಿಕೆಯುಳ್ಳದ್ದಿರಬೇಕು. ಮೇಲಿನ ಆಚ್ಛಾದನವು ಗಟ್ಟಿಮುಟ್ಟಾಗಿರಬೇಕು. ಕಾಗದವು ಹೊಳೆಯುವಂತಹದಿರಕೂಡದು. ಮುದ್ರಿಸಿದ ಅಕ್ಷರಗಳು ಕಾಗದದ ಹಿಂಭಾಗಕ್ಕೆ ಕಾಣಿಸುತ್ತಿರಬಾರದು. ಅಚ್ಚು ಅಂದವಾಗಿರಬೇಕು. ೧೨ ಪಾಯಿಂಟಕ್ಕಿಂತ ಚಿಕ್ಕ ಅಚ್ಚಿನ ಮೊಳೆಗಳನ್ನು ಉಪಯೋಗಿಸಬಾರದು. ಬಾಲಕರವರ್ಗ ಮತ್ತು ಮೊದಲನೆಯ ಇಯತ್ತೆಯ ಪುಸ್ತಕಗಳನ್ನು ದೊಡ್ಡ ಅಕ್ಷರದಲ್ಲಿ ಮುದ್ರಿಸಬೇಕು. ಪುಟದ ಎರಡೂ ಮಗ್ಗಲಿಗೆ ಸಾಕಷ್ಟು ಸ್ಥಳವನ್ನು ಬಿಟ್ಟಿರಬೇಕು. ಸಾದಾ ಮತ್ತು ಸ್ಪಷ್ಟವಾದ ಚಿತ್ರಗಳು ಸಾಕಷ್ಟು ಇರಬೇಕು. ಪುಸ್ತಕವು ಚಿತ್ತಾಕರ್ಷಕವಾಗಿರಬೇಕು.

ಕನ್ನಡ ಭಾಷೆಯ ಪಠ್ಯಪುಸ್ತಕಗಳಿಗಾಗಿ ಹೆಚ್ಚಿನ ಸೂಚನೆಗಳು

ಪ್ರಾಥಮಿಕ ಶಾಲೆಗಳಲ್ಲಿ ಮೂರನೆಯ ಹಾಗೂ ಅದಕ್ಕೂ ಮೇಲಿನ ಇಯತ್ತೆಗಳ ಪಠ್ಯಪುಸ್ತಕಗಳಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಬಳಕೆಯಲ್ಲಿರುವ ಶಬ್ದಗಳನ್ನು ಕ್ರಮವಾಗಿ ಉಪಯೋಗಿಸುತ್ತ ಹೋಗಬೇಕು. ಪುಸ್ತಕದ ಕೊನೆಯಲ್ಲಿ ಇಂಥ ಶಬ್ದಗಳ ಹಾಗೂ ಬೇರೆ ರೀತಿಯ ಕಡಚಾದ ಶಬ್ದಗಳ ಅರ್ಥವನ್ನು ಕೊಟ್ಟಿರಬೇಕು. ವಾಡಿಕೆಯ ಅರ್ಥವಲ್ಲದೆ ಉಳಿದ ಭಾಗಗಳಲ್ಲಿ ಪ್ರಚಾರದಲ್ಲಿರುವ ಅರ್ಥವನ್ನೂ ಕೊಟ್ಟಿರಬೇಕು.

ಐದು ಆರು ಏಳನೆಯ ಪುಸ್ತಕಗಳಲ್ಲಿ ಕರ್ನಾಟದ ಬೇರೆಬೇರೆ ಭಾಗಗಳಲ್ಲಿಯ ಪ್ರಮುಖ ಲೇಖಕರ ಬರೆಹಗಳೊಳಗಿಂದ ಸುಲಭ ಹಾಗೂ ಚೆನ್ನಾಗಿರುವ ಕೆಲವು ಭಾಗಗಳನ್ನು ಆಯ್ದುಕೊಂಡು ಕೊಡಲಿಕ್ಕೆ ಆದಷ್ಟುಮಟ್ಟಿಗೆ ಪ್ರಯತ್ನ ಮಾಡಿರಬೇಕು. ಕವಿತೆಗಳು ಬಹುಶಃ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಗಳ ಪ್ರತಿನಿಧಿಗಳಂತಿರುವ ಕವಿಗಳ ಕೃತಿಗಳೊಳಗಿಂದ ಆರಿಸಿಕೊಂಡವಿರಬೇಕು.

ಶಾಲೆಗಳಲ್ಲಿ ಬಾಲಕರ ಹೆಸರು ಹೆಚ್ಚಿಕೊಳ್ಳುವದು

ಮಿ. ಸೀತಾರಾಮುರಾವ್ ತಾವಡೆ, ಎಮ್. ಏ. ಎಜ್ಯುಕೇಶನ್ ಇನ್‌ಸ್ಪೆಕ್ಟರ್
ದಕ್ಷಿಣಭಾಗ, ಆವರಿಂದ.

ನಮ್ಮ ದಕ್ಷಿಣಭಾಗದ ಪ್ರವಾಸದಲ್ಲಿ ಶಾಲೆಗಳ ನಿರೀಕ್ಷಣೆಗಾಗಿ ಹೋದಾಗ ಂಡುಬಂದ ಕೆಲವೊಂದು ಮಹತ್ವದ ಮಾತುಗಳನ್ನು ಅನುಲಕ್ಷಿಸಿ ಅವುಗಳ ಂಬಂಧದಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರು ಏನು ಮಾಡಬಹುದೆಂಬುದನ್ನು ಚಿಕ್ಕ ಲೇಖನದಲ್ಲಿ ಹೇಳಿರುವೆವು.

ಬಾಲಕರು ಮೊಟ್ಟಮೊದಲು ಅಕ್ಷರಾಭ್ಯಾಸಕ್ಕಾಗಿ ಶಾಲೆಗಳಿಗೆ ಬರುವಾಗ ಕ್ಷಕರಿಗೆ ಅವರ ಪಾಲಕರು ಕೆಲವು ಸಂಗತಿಗಳನ್ನು ಬರೆದುಕೊಡಬೇಕಾಗುವದು. ವುಗಳಲ್ಲಿ ಬಾಲಕನ ಹೆಸರು, ವಯಸ್ಸು, ಜಾತಿ, ಮಾತೃಭಾಷೆ, ಹುಟ್ಟಿದ ೂರು ಮುಂತಾದವುಗಳ ಸಮಾವೇಶವಾಗುವದುಂಟು. ತಂದೆ-ತಾಯಿಗಳಾಗಲಿ ಾಲಕರಾಗಲಿ ಈ ಕೆಲಸವನ್ನು ಮಾಡಬೇಕು; ಅಥವಾ ಮಾಡುವರೆಂದು ತಿಳಿಯ ೀಕು. ಅವರು ಸುಶಿಕ್ಷಿತರಾಗಿದ್ದು ಆ ಬಾಲಕರ ಮುಂದಿನ ಆಯುಷ್ಯದ ಗುಹೋಗುಗಳನ್ನು ವಿಚಾರಪೂರ್ವಕವಾಗಿ ವಿಮರ್ಶಿಸಿ ಕಾರ್ಯಮಾಡುವಷ್ಟು ೋಗ್ಯರಿದ್ದರೆ ಅಡ್ಡಿಯಿಲ್ಲ; ಆದರೆ ನಮ್ಮ ನಾಡಿನ ಹಳ್ಳಿಗಳಲ್ಲಿ ಇಂಥ ಪಾಲಕರ ಥವಾ ತಂದೆ-ತಾಯಿಗಳ ಸಂಖ್ಯೆಯು ತೀರ ವಿರಳವೆಂಬದನ್ನು ನಾವು ಹೇಳ ೀಕಾಗಿಲ್ಲ. ಶಿಕ್ಷಕರ ಒತ್ತಾಯಕ್ಕಾಗಿಯೋ, ಅಥವಾ ಮಕ್ಕಳು ಮನೆಯಲ್ಲಿ ತೊಂದರೆಕೊಡುವರೆಂಬ ಕಾರಣಕ್ಕಾಗಿಯೋ, ಸದ್ಯಕ್ಕೆ ಕಲಿತಷ್ಟು ಕಲಿಯಲಿ ಎಂಬ ಔದಾಸೀನ್ಯದ ಧೋರಣಕ್ಕಾಗಿಯೋ ಬಾಲಕರನ್ನು ಶಾಲೆಗೆ ಕಳುಹಿಸುವ ಪಾಲಕರೇ ಹೆಚ್ಚು. ಹೀಗಿರುವಾಗ ಅವರು ಶಿಕ್ಷಕರಿಗೆ ಆ ಬಾಲಕರ ಸಂಬಂಧ ದಿಂದ ಕೊಡುವ ಮಾಹಿತಿಯು ಸಮುಂಜಸವೂ ಯೋಗ್ಯವಾದದ್ದೂ ಇರುವದೆಂದು ಪ್ರತಿಪಾದಿಸುವುದು ಸರಿಯಾಗಲಿಕ್ಕಿಲ್ಲ.

೧. **ಬಾಲಕರ ಹೆಸರು :—** ಬಾಲಕರ ಹೆಸರಿನಲ್ಲಿ ನಮಗೆ ಕಂಡು ಬರುವ ಹಲವು ಲೋಪ-ದೋಷಗಳಲ್ಲಿ ಅವರ ಅಡ್ಡಹೆಸರಿನ ವಿಷಯದ ಒಂದೆರಡು ಮಹತ್ವದ ಮಾತುಗಳನ್ನು ಇಲ್ಲಿ ವಿವೇಚಿಸುವೆವು. ಇತರ ಜಾತಿ-ಮತಗಳ ಬಾಲಕರ ಹೆಸರಿನ ಮಾತು ಏನೇ ಇದ್ದರೂ ಹರಿಜನ ಬಾಲಕರ ವಿಷಯದಲ್ಲಿ ಈ ಮಾತು ನಮ್ಮ ಮನಸ್ಸನ್ನು ಆಕರ್ಷಿಸಿ ಬಹುಕಾಲವಾಗಿಹೋಯಿತು.

ಸಮುಗಾರ, ಚಮುಗಾರ, ಮಾಡರ, ಮುಚಿಗೇರ, ಹೊಲೇರ, ಭಂಗಿ ಮೊದಲಾದ ಅಡ್ಡಹೆಸರುಳ್ಳ ಬಾಲಕರನ್ನು ನಮ್ಮ ದಕ್ಷಿಣಭಾಗದ ಹಲವು ಶಾಲೆಗಳಲ್ಲಿ ಕಾಣಬಹುದು. ಈ ಹೆಸರು ನಮ್ಮ ಇಂದಿನ ಸಮಾಜದಲ್ಲಿ ಒಂದು ಕೀಳು ತರಗತಿಯ ಕೆಲಸಮಾಡುವ ಜನಸಮುದಾಯವನ್ನು ಸೂಚಿಸುವದೆಂಬದನ್ನೂ ಮರೆಯುವಂತಿಲ್ಲ. ಈ ಹೆಸರು ಅವರು ಮಾಡುವ ಅಥವಾ ಹಿಂದೆ ಮಾಡುತ್ತಿದ್ದ ವ್ಯವಸಾಯವನ್ನು ಸೂಚಿಸುವದು. ಯಾವನೊಬ್ಬ ವ್ಯಕ್ತಿಯು ಆ ವ್ಯವಸಾಯವನ್ನು, ಮಾಡಲಿ ಮಾಡದಿರಲಿ, ಆ ಹೆಸರು ಮಾತ್ರ ಅವನನ್ನು ಬಿಡ ಲಾರದು, ಎಂದರೆ ಹೇಗೆ ನ್ಯಾಯವಾಗುವದು? ಮಚ್ಚಿಯ ವ್ಯವಸಾಯ ಮಾಡು ವವನನ್ನು ಕೂಡ ಮುಚಿಗೇರ(ಮಚ್ಚಿಗಾರ)ನೆಂದು ಕರೆಯುವದು ಹೀನಾಯವೆನಿಸು ತ್ತಿರುವಾಗ ಅವನು ಕಲಿತು ಮಾಮಲೇದಾರನಾಗಿರುವಾಗಲೂ ಮುಚಿಗೇರನೆಂದೇ ಕರೆಯುವದು ಹೇಗೆ ಸಮಂಜಸವಾಗುವದು? ಎಷ್ಟೋ ಜನರು ಶಿಕ್ಷಕರ ವೃತ್ತಿ ಯನ್ನು ಕೈಕೊಂಡಿರುವಾಗಲೂ ಅವರ ಹೆಸರು ಚಮುಗಾರ, ಢೋರ, ಮಾದರ, ಹೊಲೇರ ಎಂದು ಇರುವದನ್ನು ನಾವು ನೋಡುತ್ತೇವೆ.

ಇನ್ನು ಈ ಹೆಸರು ಅವರಿಗೆ ಹೀಗೆ ಬಂದಿತು ನೋಡೋಣ: ಮೊದಲು ಶಾಲೆಗೆ ಬಂದಾಗ ಅಶಿಕ್ಷಿತರಾದ ತಂದೆ-ತಾಯಿಗಳಿಂದ ದೊರಕಿಸಿದ ಮಾಹಿತಿ ಯನ್ನು ಶಿಕ್ಷಕರು ಸಾಲೆಯ ಜನರಲ್ ರಜಿಸ್ಟರದಲ್ಲಿ ಬರೆಯುವರು. ಒಮ್ಮೆ ಒಂದು ಹೆಸರು ಕಾಗದದ ಮೇಲೆ ಬಂದಿತೆಂದರೆ ಸ್ವಾಭಾವಿಕ ಸ್ಥಿತಿಯಲ್ಲಿ ಅದು ಕಡೆತನಕ ಉಳಿಯಲೇ ಬೇಕಾಗುವದು. ಈ ಕ್ರಮವನ್ನು ನಿರೀಕ್ಷಿಸಿದರೆ ಈ ತರದ ಹೆಸರು ಹುಟ್ಟಲಿಕ್ಕೆ ಪ್ರಾಥಮಿಕ ಶಿಕ್ಷಕರೇ ಕಾರಣರೆಂಬುದು ತಾನೇ ಸಿದ್ಧವಾಗುವದು.

ಯಾವನಾದರೊಬ್ಬ ವಿದ್ಯಾರ್ಥಿಯು ಮೊದಲು ಸಾಲೆಗೆ ಬಂದಾಗ ಅವನ ತಾಯ್ತಂದೆಗಳು ಕೊಡುವ ಹೆಸರಿನಲ್ಲಿ ಈ ತರದ, ಭಂಗಿ, ಮಾದರ, ಮುಚಿಗೇರ, ಚಮುಗಾರ, ಹೊಲೇರ ಮುಂತಾದ, ಶಬ್ದಗಳಿದ್ದರೆ ಶಿಕ್ಷಕರು ಅವರಿಗೆ "ಈ ಅಡ್ಡ ಹೆಸರು ನಿಮ್ಮ ಕುಲಕಸಬುಗಳನ್ನು ಹೇಳುವದು. ನಿಮ್ಮ ಮನೆತನಕ್ಕೆ ಬೇರೆ ಯಾವದಾದರೂ ಹೆಸರಿರಬಹುದು. ಅದನ್ನು ವಿಚಾರಿಸಿ ಹೇಳಿರಿ. ಇಂಥ ಮನೆ ತನದ ಹೆಸರು ಹಿಂದೆ ಪ್ರಚಾರದಲ್ಲಿ ಇರದಿದ್ದರೂ ಈಗ ನೀವು ಅಪೇಕ್ಷಿಸಿದರೆ ಅದನ್ನು ಪ್ರಚಾರದಲ್ಲಿ ತರಲು ಅಡ್ಡಿಯಿಲ್ಲ. ಕೊನೆಗೆ ನಿಮ್ಮ ಊರಿನ ಹೆಸರನ್ನಾ ದರೂ ಅಡ್ಡಹೆಸರಿನಂತೆ ಉಪಯೋಗಿಸಲಿಕ್ಕೆ ಅಡ್ಡಿಯಿಲ್ಲ." ಮೊದಲಾದ ತಿಳಿವಳಿಕೆ ಯನ್ನು ಮಾಡಿಕೊಟ್ಟರೆ ಅವರು ತಮ್ಮ ಮಕ್ಕಳಿಗೆ ಭಂಗಿ ಮೊದಲಾದ ಕುಲದ

ಅಥವಾ ಕಸಬಿನ ಹೆಸರೇ ಇರಲೆಂದು ಹಟಹಿಡಿಯಲಾರರು. ಮತ್ತು ತಮ್ಮ ಮನೆತನದ ಹೆಸರನ್ನು ತಿಳಿದು ಹೇಳಬಹುದು. ಆದ್ದರಿಂದ ಶಿಕ್ಷಕರು ಈ ಕೆಲಸವನ್ನು ಮೊದಲು ಮಾಡಬೇಕು.

ಈ ಕಾರ್ಯವು ಶಿಕ್ಷಕರ ಕರ್ತವ್ಯದಲ್ಲಿಯೇ ಸಮಾವೇಶವಾಗುವದು. ಹೇಗೆಂದರೆ, ಸಾಲೆಗೆ ಬಂದ ಬಾಲಕನ ಹಿತವನ್ನು ಬಯಸುವದು ಶಿಕ್ಷಕನ ಸರ್ವಸಾಮಾನ್ಯವಾದ ಕರ್ತವ್ಯ. ಇಂದು ಶಾಲೆಗೆ ಬಂದ ಬಡ ಮಚಿಗೇರನ ಹರಕು ಅಂಗಿಯ ಬಾಲಕನು ಮುಂದೆ ಒಳ್ಳೆಯ ಅಧಿಕಾರಿಯಾಗಲಿ, ವಕೀಲನಾಗಲಿ, ಸಾಲೆಯ ಶಿಕ್ಷಕನಾಗಲಿ, ತನ್ನ ವ್ಯವಸಾಯದಲ್ಲಿ ಮುಂದುವರಿದ ಶ್ರೀಮಂತ ವ್ಯಾಪಾರಸ್ಥನಾಗಲಿ, ವ್ಯವಸಾಯಗಾರನಾಗಲಿ ಆಗಲಾರನೆಂದು ಯಾಕೆ ಕಲ್ಪಿಸಬೇಕು? ಹಾಗೆ ಸಮಾಜದಲ್ಲಿ ಮನ್ನಣೆಯನ್ನು ಹೊಂದುವ ಉಚ್ಚ ಸ್ಥಾನ ಮಾನಗಳಲ್ಲಿರುವ ವ್ಯಕ್ತಿಗೆ ಹಿಂದಿನ ಶಿಕ್ಷಕನ ಅಸಡ್ಡೆಯು ಮೂಲಕ ಒಂದು ಕೀಳು ಹೆಸರು ಉಳಿದು ಹೋದರೆ ಅದು ಅನ್ಯಾಯವೆನಿಸದೇನು? ಅದು ಶಿಕ್ಷಕನು ತನ್ನ ಕರ್ತವ್ಯದಲ್ಲಿ ಮಾಡಿದ ಒಂದು ಲೋಪವೆಂದು ಹೇಳಲು ಅಡ್ಡಿಯೇನು?

೨. **ಜನ್ಮ ತಾರೀಖು:—** ಒಮ್ಮೆ ಹಚ್ಚಿದ, ಬಾಲಕರ ಹೆಸರನ್ನು ತಕ್ಕ ಪ್ರಯತ್ನವನ್ನು ಮಾಡಿದರೆ ಮುಂದೆ ಬದಲಿಸಲು ಬರಬಹುದು; ಆದರೆ ವಯಸ್ಸಿನ ವಿಷಯದಲ್ಲಿ ಮಾತ್ರ ಇದಕ್ಕೂ ಹೆಚ್ಚು ಕಠಿಣವಾದ ನಿರ್ಬಂಧಗಳಿರುವವು. ಒಮ್ಮೆ ಒಂದು ಸಾಲೆಯ ರಜಿಸ್ಟರಿನಲ್ಲಿ ಬರೆದ ಜನ್ಮತಾರೀಖು, ಅದು ಸರಿಯಿರಲಿ ತಪ್ಪಿರಲಿ, ಕೊನೆಯವರೆಗೂ ಉಳಿದೇ ಹೋಗುವದು. ಅದನ್ನು ಬದಲಿಸಲಿಕ್ಕೆ ಸುಲಭಸಾಧ್ಯವಾದ ಮಾರ್ಗವಿಲ್ಲ. ಅಶಿಕ್ಷಿತರಾದ ತಾಯ್ತಂದೆಗಳು ಹೇಳುವ ವಯಸ್ಸನ್ನು ಆ ಬಾಲಕರ ಪ್ರತ್ಯಕ್ಷ ನಿರೀಕ್ಷಣೆಯಿಂದ ಸಮಂಜಸವೆನಿಸುವದೋ ಹೇಗೆಂಬದನ್ನು ಶಿಕ್ಷಕರು ವಿಮರ್ಶಿಸಿ ನೋಡಿ ಅದರಿಂದ ಬಾಲಕರಿಗಾಗುವ ಮುಂದಿನ ಹಿತಾಹಿತಗಳನ್ನು ಪರಾಮರ್ಶೆಮಾಡಿ ಸಾಧ್ಯವಿದ್ದಮಟ್ಟಿಗೂ ನಿಜವಾದ ಜನ್ಮ ತಾರೀಖು—ತಿಂಗಳು—ಯಾವದೂ ಆಗದಿದ್ದರೆ ವರ್ಷಗಳನ್ನಾದರೂ ಹುಡುಕಿ ತುಂಬಿಕೊಡಲಿಕ್ಕೆ ತಾಯ್ತಂದೆಗಳಿಗೂ ಪಾಲಕರಿಗೂ ಪ್ರೋತ್ಸಾಹ ಕೊಡಬೇಕಲ್ಲದೆ ಅಜ್ಞಾನ ಅಸಡ್ಡೆಗಳ ಮೂಲಕ ಅವರು ಬರೆದುಕೊಡುವ ಯಾವದೇ ಒಂದು ಜನ್ಮ ತಾರೀಖನ್ನು ಜನರಲ್ ರಜಿಸ್ಟರದಲ್ಲಿ ಅಷ್ಟೇ ಅಲಕ್ಷ್ಯದಿಂದ ಬರೆದಿಟ್ಟು ತಮ್ಮ ಕೆಲಸ ತೀರಿತೆಂದು ಹೇಳುವದು ಶಿಕ್ಷಕನ ಅಸ್ಥೆಯ ದ್ಯೋತಕವಾಗಲಾರದು. ತಪ್ಪು ಜನ್ಮತಾರೀಖನ್ನು ಹಚ್ಚುವದರಿಂದುಂಟಾಗುವ ತೊಂದರೆಯೇನೆಂಬದು ಆ ಬಾಲಕರು ಸ್ಕಾಲರ್‌ಶಿಪ್ ಪರೀಕ್ಷೆಗೆ ಕೂಡ್ರುವಾಗ ಮೊದಲು ಲಕ್ಷ್ಯಕ್ಕೆ

ಬರುವದು. ಸರಕಾರದ ನೌಕರಿಗೆ ಸೇರುವಾಗಲೂ ಪೆನ್‌ಶನ್ ಮೇಲೆ ಹೋಗುವಾಗಲೂ ಈ ತೊಂದರೆಯು ಇನ್ನೂ ಹೆಚ್ಚು ಹೆಚ್ಚಾಗಿ ಒಡೆದು ತೋರುವದು.

ಹೀಗಿರುವದರಿಂದ, ಶಿಕ್ಷಕರು ತಮ್ಮ ಶಾಲೆಗೆ ಬಂದ ಬಾಲಕರ ವಿಷಯದ ಮಾಹಿತಿಯನ್ನು ತುಂಬಿಕೊಡುವಾಗ ಅವರ ಪಾಲಕರಿಗೆ ತಕ್ಕ ಸಲಹೆ ಸೂಚನೆಗಳನ್ನು ಕೊಟ್ಟು ಯೋಗ್ಯವಾದವುಗಳನ್ನೇ ಬರೆದುಕೊಡಲು ನೆರವಾಗಬೇಕೆಂದು ಕೋರುವೆವು. ನಾವು ಹಿಂದೆ ಪುಣೆಯ ಟ್ರೇನಿಂಗ್ ಕಾಲೇಜದಲ್ಲಿ ಪ್ರಿನ್ಸಿಪಾಲರಾಗಿದ್ದಾಗ ಕಾಲೇಜಕ್ಕೆ ಬಂದ ಹಲವರು ಹರಿಜನ ಶಿಕ್ಷಕರ ಹೆಸರುಗಳು ಮಾದರ, ಮಚಿಗೇರ, ಹೊಲೇರ ಎಂದು ಇದ್ದದ್ದನ್ನು ಸರಕಾರದ ಗ್ಯಾಝೆಟಿನಲ್ಲಿ ತಿದ್ದಿ ಮುದ್ರಿಸಿ ಬದಲಿಸಿದ್ದು ನಮಗೆ ನೆನಪುಂಟು. ಇದರಿಂದ ಆ ಶಿಕ್ಷಕರ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವದರ ಜೊತೆಗೆ ಅವರ ಹೆಸರಿನ ಮೂಲಕ ಜನತೆಯಲ್ಲಿ ಉಂಟಾಗಬಹುದಾದ ಅನಾದರವನ್ನೂ ಕಡಿಮೆಮಾಡಿದಂತಾಯಿತೆಂದು ನಮ್ಮ ಭಾವನೆ. 'ಹೊಲೇರ' ಎಂದು ಹೆಸರು ಹೇಳುವದರಿಂದಲೇ ಅವನು ದೂಷ್ಯನೆಂದು ತಿಳಿಯುವ ಜನರು ನಮ್ಮ ಸಮಾಜದಲ್ಲಿ ಇಲ್ಲವೆಂದು ಹೇಗೆ ಹೇಳಬೇಕು? ಹೊಲೆತನವು ಜಾತಿಯಿಂದ ಬರುವದಿಲ್ಲ; ವ್ಯವಸಾಯದಿಂದ ಬರುವದಿಲ್ಲ; ಅವನ ಆಚರಣೆಯಿಂದ ಬರುವದು. ಹೊಲೆಯಾದ ಆಚರಣೆಯುಳ್ಳವನು ಹೊಲೆಯನಾಗಲಿ; ಅಂಥ ಆಚರಣೆಯುಳ್ಳವನನ್ನು ನೀವು ಹೊಲೆಯನೆನ್ನಿರಿ. ಅಡ್ಡಿಯಿಲ್ಲ; ಆದರೆ ನಿರಪರಾಧಿಯಾದ ಅಜ್ಞಾನ ಬಾಲಕನನ್ನು ಹೊಲೆಯನೆಂದು ಕರೆಯಬೇಡಿರಿ; ಹಾಗೆ ಕರೆಯಲು ದಾರಿಮಾಡಿಕೊಡಬೇಡಿರಿ. ಅದು ಅವನ ಬೆನ್ನಿಗೆ ಬಡಿದ ಅನ್ಯಾಯದ ಹಲಗೆಯಾಗದಿರಲಿ. ಹಾಗೆಯೇ ತಪ್ಪು ಜನ್ಮ ತಾರೀಖನ್ನು ತುಂಬಿಟ್ಟು ವಿದ್ಯಾರ್ಥಿಗಳನ್ನು ಹಾನಿಗೆ ಗುರಿಮಾಡಬೇಡಿರಿ.

೩. **ಬಾಲಕರನ್ನು ಕರೆಯುವದು:—** ಇನ್ನೂ ಒಂದು ಮಾತು. ಶಾಲೆಯಲ್ಲಿ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪ್ರೇಮದ ಬಳಕೆಯಿರಬೇಕು. ಮನೆಯಲ್ಲಿ ನಾವು ನಮ್ಮ ಮಕ್ಕಳನ್ನು ಕರೆಯುವಾಗ "ಏ, ದೇಶಪಾಂಡೇ, ಕುಲಕರ್ಣೀ, ಬಡಿಗೇರ, ಕಮ್ಮಾರ," ಎಂದು ಕರೆಯುವೆವೇನು? "ನಾರಾಯಣಾ ಗೋವಿಂದಾ, ಬಸಪ್ಪಾ, ರಾಮಣ್ಣಾ" ಎಂದು ಕರೆಯುತ್ತೇವೆ. ಅದರಂತೆಯೇ ಶಿಕ್ಷಕರೂ ಸಹ ತಮ್ಮ ವಿದ್ಯಾರ್ಥಿಗಳನ್ನು ಅಡ್ಡಹೆಸರಿನಿಂದ ಕರೆಯದೆ ಅವರ ಅಂಕಿತನಾಮದಿಂದಲೇ ಕರೆಯುವ ರೂಢಿಯನ್ನು ಇಟ್ಟುಕೊಳ್ಳುವದು ಒಳಿತು. ಎಷ್ಟೋ ಶಾಲೆಗಳಲ್ಲಿಯ ಶಿಕ್ಷಕರು, ತಮ್ಮ ಸ್ವಂತ ಮಕ್ಕಳೇ ಶಾಲೆಯಲ್ಲಿದ್ದರೆ ಅವರನ್ನು ಅಡ್ಡಹೆಸರಿನಿಂದಲೇ ಕರೆಯುವರೇನು? ಇದೇ ರೀತಿಯಾಗಿ ಬಾಲಕರು

ಶಿಕ್ಷಕರನ್ನು ಕರೆಯುವಾಗಲೂ ಸಹ ಇಂಥ ಪ್ರೇಮದ ಬಳಕೆಯ ಶಬ್ದದಿಂದಲೇ ಕರೆಯುವದು ಒಳಿತೆಂದು ನಮ್ಮ ಅಭಿಪ್ರಾಯವಿದೆ. ಈ ಭಾಗದ ಹೆಣ್ಣುಮಕ್ಕಳ ಶಾಲೆಗಳಲ್ಲಿ ಬಾಲಿಕೆಯರು ತಮ್ಮ ಶಿಕ್ಷಕಿಯರನ್ನು 'ಅಕ್ಕಾ' ಎಂದಾಗಲಿ 'ಅಕ್ಕನವರೇ' ಎಂದಾಗಲಿ ಕರೆಯುವ ಪರಿಪಾಠವಿರುವದು ನಮ್ಮ ಲಕ್ಷ್ಯದಲ್ಲಿ ಬಂದಿದೆ. ಇದು ತುಂಬ ಅನುಕರಣೀಯವಾದ ಮಾತು. ಬಾಲಕರ ಶಾಲೆಗಳಲ್ಲಿಯೂ ಶಿಕ್ಷಕರ ಸಲುವಾಗಿಯೂ ಇಂಥ ಒಂದು ಪ್ರೇಮದ ಬಳಕೆಯ ಹೆಸರು ಇದ್ದರೆ ಒಳಿತು.

ಈ ನಮ್ಮ ಲೇಖನವನ್ನು ಓದಿದ ಶಿಕ್ಷಕರೂ ತಪಾಸಣೆಯ ಅಧಿಕಾರಿಗಳೂ ಆಡಳಿತೆಯ ಅಧಿಕಾರಿಗಳೂ ಈ ನಮ್ಮ ಸೂಚನೆಯನ್ನು ಪರಾಮರ್ಶಿಸಿ ತಕ್ಕ ದಾರಿಯಿಂದ ಕೆಲಸಮಾಡುವರೆಂದು ಆಶಿಸುವೆವು.

ಪ್ರಕಟನೆ

ಶ್ರೀ. ಜೀ. ಜೆ. ಚಿದಂಬರವ್ ಇವರು ಬರೆದ 'ಆಂಗ್ಲಭಾಷಾ ಪ್ರದೀಪ' ಎಂಬ ಪುಸ್ತಕವನ್ನು ಈ ಮೊದಲು ಮಾಧ್ಯಮಿಕ ಶಾಲೆಗಳಲ್ಲಿ ಪಠ್ಯಪುಸ್ತಕವೆಂದು ಮಂಜೂರ ಮಾಡಲಾಗಿತ್ತು. ಅದನ್ನು ಈಗ ರದ್ದುಪಡಿಸಿ ಮಾಧ್ಯಮಿಕ ಶಾಲೆಗಳ ಶಿಕ್ಷಕರ ವಾಚನಾಲಯಗಳಿಗಾಗಿ ಮಾತ್ರ ಮಂಜೂರ ಮಾಡಿರುತ್ತದೆಂದು ಮುಂಬಯಿಪ್ರಾಂತದ ವಿದ್ಯಾಖಾತೆಯ ಡಾರೆಕ್ಟರ ಧೊರೆಗಳು ಅಪ್ಪಣೆಕೊಡಿಸಿದ್ದಾರೆ.

ಒಂದು ಲೆಕ್ಕ

ಒಬ್ಬ ಗೃಹಸ್ಥನು ೧೦ ರೂಪಾಯಿಗಳಿಗೆ ಒಂದರಂತೆ ಕೆಲವು ಆಕಳುಗಳನ್ನೂ ೫ ರೂಪಾಯಿಗಳಿಗೆ ಒಂದರಂತೆ ಕೆಲವು ಕುರಿಗಳನ್ನೂ ಎಂಟು ಆಣೆಗಳಿಗೆ ಒಂದರಂತೆ ಕೆಲವು ಕೋಳಿಗಳನ್ನೂ ಕೂಡಿ ೧೦೦ ಪ್ರಾಣಿಗಳನ್ನು ೧೦೦ ರೂಪಾಯಿಗಳಿಗೆ ಕೊಂಡನು. ಆದರೆ ಪ್ರತಿಯೊಂದು ಜಾತಿಯ ಎಷ್ಟೆಷ್ಟು ಪ್ರಾಣಿಗಳನ್ನು ಕೊಂಡಿದ್ದನು?

ವ್ಹಿ. ಡಿ. ರಾಂಜೈ ಹುಲೇಕಲ್ (ಕಾರವಾರ ಜಿಲ್ಲೆ)

ಟಪ್ಪಣಿ:— ಈ ಲೆಕ್ಕವನ್ನು ಯಾರಾದರೂ ಸರಿಯಾಗಿ ಬಿಡಿಸಿ ಕಳಿಸಿದರೆ ಪ್ರಸಿದ್ಧಿಸುವೆವು

ಸಂಪಾದಕ.

ಸಿದ್ಧನಾಥ ಹೂರಿ, ಮೊಳಕಾಲ್ಮೂರು

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ರಾಘವೇಂದ್ರರಾವ ಶೇಷಗಿರಿರಾವ ಮುಡಿಮನ್, ಬಿ. ಎ.

ಸಂಪುಟ ೮೦	ಮೇ ೧೯೪೧	ವರ್ಷ ೧೩. ಸಂ. ೩

ಹೊಸ ವರ್ಷದ ಕಾರ್ಯಕಲಾಪಗಳು

ಶ್ರೀ. ಸೀತಾರಾಮರಾವ್ ತಾವಡೆ ಎಮ್. ಎ.

ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ ಅವರಿಂದ

ನಾವು ಈ ಭಾಗದ ವಿದ್ಯಾಧಿಕಾರಿಗಳಾಗಿ ನಿಯುಮಿಸಲ್ಪಟ್ಟಂದಿನಿಂದಲೂ ಪ್ರಾಥಮಿಕ ಶಿಕ್ಷಣದ ಪ್ರಗತಿಯ ಬಗ್ಗೆ ವಿಧವಿಧದಿಂದ ಯತ್ನಿಸುತ್ತಿರುವದೂ ಶಿಕ್ಷಕರಿಗೂ ಅಧಿಕಾರಿಗಳಿಗೂ ಈ ವಿಷಯದ ಹಲವು ಸಲಹೆ ಸೂಚನೆಗಳನ್ನು ತಿಳುಹಿಸುತ್ತಿದ್ದುದೂ ಶಿಕ್ಷಕರಿಗೆ ಅಪರಿಚಿತವಾದ ಮಾತಲ್ಲ. 'ಪ್ರಾಥಮಿಕ ಶಿಕ್ಷಣ' ಪತ್ರಿಕೆಯಲ್ಲಿ ಆಗಾಗ ಪ್ರಕಟವಾದ ಲೇಖನಗಳನ್ನು ಓದಿದ ಶಿಕ್ಷಕ ವರ್ಗವು ಇವನ್ನು ಅನುಸರಿಸಿ ಕೆಲಸಮಾಡುತ್ತಿರುವವೆಂದು ನಮಗೆ ತುಂಬ ಭರವಸೆಯಿದೆ.

ಕಳೆದ ವರ್ಷದ ಮೇ ಜೂನ್ ತಿಂಗಳುಗಳ ಸಂಯುಕ್ತ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನಗಳನ್ನು ಶಿಕ್ಷಕರು ಇನ್ನೊಮ್ಮೆ ಓದಿಕೊಳ್ಳಲಿ. ಮತ್ತು ಮುಂದೆ ಹೇಳುವ ಮಾತುಗಳನ್ನು ಅನುಲಕ್ಷಿಸಿ ತಮ್ಮ ಈ ವರ್ಷದ ಪ್ರಗತಿಯ ಮಾನವನ್ನು ಕಂಡುಕೊಂಡು ಮುಂದಿನ ವರ್ಷದ ಕಾರ್ಯಕಲಾಪಗಳನ್ನು ನಿರ್ಣಯಿಸಿಕೊಳ್ಳಲಿ.

೧. ಶಾಲೆಯ ಬಾಹ್ಯದ ಸಾಮಾನ್ಯ ದೃಶ್ಯ

(ಅ) ಶಾಲೆಯ ಕಟ್ಟಡ ಮತ್ತು ವಿದ್ಯಾರ್ಥಿಗಳ ಸಂಖ್ಯಾಮಾನದಿಂದ ಬೇಕಾಗುವ ಸ್ಥಳದ ಪೂರೈಕೆ.

(ಬ) ವರ್ಗದ ಕೋಣೆಗಳು, ಕೂಡ್ರುವ ವ್ಯವಸ್ಥೆ, ಮೇಜು, ಖುರ್ಚಿ' ಬೆಂಚು, ಡೆಸ್ಕು ಮುಂತಾದ ಸಾಧನಗಳು ಸಾಲೆಯ ಗೋಡೆ ಮತ್ತು ಅದರ ಅಲಂಕಾರ, ಚಿತ್ರಗಳು, ಪಟಗಳು, ನಕಾಶೆಗಳು ಮುಂ.

(ಕ) ವಿದ್ಯಾರ್ಥಿಗಳು, ಅವರ ಉಡಿಗೆ-ತೊಡಿಗೆಗಳು, ಸ್ವಚ್ಛತೆ, ಓರಣ ಶಿಕ್ಷಕರ ಉಡಿಗೆ-ತೊಡಿಗೆಗಳು, ಸಾಲೆಯಲ್ಲಿ ವಿದ್ಯಾರ್ಥಿಗಳು ಬರೆಯುವಾಗ ಮಸಿಯನ್ನು ಉಪಯೋಗಿಸುವ ರೀತಿ ಮುಂ.

(ಡ) ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಜಲಮಲ ಬಾಧೆಯ ನಿವಾರಣೆಗೆ ಬೇಕಾದ ಸಾಧನಗಳು—ಶೌಚ ಕೂಪಗಳು ಮೂತ್ರಸ್ಥಾನಗಳು. ಕಸದ ಕುಂಡೆಗಳು ಮತ್ತು ವರ್ಗದ ಕೋಣೆಯೊಳಗಿನ ಕಸದ ಬುಟ್ಟಿಗಳು.

ಶಿಕ್ಷಕರು ಈ ಮೇಲಿನ ನಾಲ್ಕು ಸಂಗತಿಗಳ ಬಗ್ಗೆ ತಮಗಿರುವ ಅನುಕೂಲತೆಗಳನ್ನು ನೋಡಿಕೊಂಡು ಏಕ್ಕವನ್ನು ಸರಿಪಡಿಸಿಕೊಳ್ಳಬೇಕು. ಮತ್ತು ವಿದ್ಯಾರ್ಥಿಗಳ ಆರೋಗ್ಯ, ಸ್ವಚ್ಛತೆ, ಓರಣಗಳ ಬಗ್ಗೆ ವೈಯಕ್ತಿಕವಾಗಿ ಲಕ್ಷ್ಯ ಪೂರೈಸಬೇಕು.

೨. ಸಾಲೆಯ ಆಂತರಿಕ ಸಾಮಾನ್ಯ ಸುಧಾರಣೆ

(ಅ) **ವಿದ್ಯಾರ್ಥಿಗಳ ಸ್ವಯಂ ಪ್ರಕಾಶನದ ಶಕ್ತಿ**-ಕಥೆ ಹೇಳುವದು, ಹಾಡುವದು, ಕವಿತೆ ಅನ್ನುವದು, ವಾಚಾನಿಬಂಧ, ನೋಡಿದ ಸಂಗತಿಗಳನ್ನು ವಿವರಿಸಿ ಹೇಳುವದು ಮುಂ.

ವಿದ್ಯಾರ್ಥಿಗಳು ಮನೆಯಲ್ಲಿ ಹಾಡುವ ಹಾಡುಗಳನ್ನು ಸಾಲೆಯಲ್ಲಿಯೂ ಹಾಡಲು ಕಲಿಸಬೇಕು. ಪ್ರತಿಹಳ್ಳಿಯಲ್ಲಿಯೂ ಹಲಕೆಲವು ಹಳ್ಳಿಯ ಹಾಡುಗಳು ಪ್ರಚಾರದಲ್ಲಿರುವವು. ಮತ್ತು ಅವು ಹಲವು ವಿದ್ಯಾರ್ಥಿಗಳಿಗೆ ಪಾಠ ಬರುತ್ತಿರುವವು. ಶಿಕ್ಷಕರು ತಾವು ಕಲಿಸುವ ಪುಸ್ತಕದ ಕವಿತೆ ಹಾಡುಗಳ ಜೊತೆಗೆ ಅಂಥವನ್ನೂ ಹಾಡುವದಕ್ಕೆ ತಮ್ಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ಹಳ್ಳಿಯಲ್ಲಿ ಹಿಂದಿನಿಂದ ಹೇಳುತ್ತ ಬಂದಿರುವ ಹಲವು ಅಜ್ಜಿಯ ಕಥೆಗಳು ಪ್ರಚಾರದಲ್ಲಿರುವವು. ಶಿಕ್ಷಕರು ಅದನ್ನು ಸಂಗ್ರಹಿಸಿ ತಮ್ಮ ವಿದ್ಯಾರ್ಥಿಗಳಿಗೆ ಹೇಳಬೇಕು. ಅವರಿಂದ ಹೇಳಿಸಬೇಕು. ಈ ಎಲ್ಲ ಉಪಾಯಗಳಿಂದ ವಿದ್ಯಾರ್ಥಿಗಳಿಗೆ ಶಾಲೆಯು ತಮ್ಮ ಮನೆಯೋ ಏನೋ ಎಂಬ ಭಾವನೆಯುಂಟಾಗುವಂತೆ ಮಾಡಬೇಕು.

(ಬ) **ಲೇಖ ಮೂಲಕವಾಗಿ ಆತ್ಮಪ್ರಕಾಶನ.** ವಿದ್ಯಾರ್ಥಿಗಳು ಒಳ್ಳೆಯ ಪಾದರಿಯ ಅಕ್ಷರಗಳನ್ನು ಬರೆಯಲು ಸಮರ್ಥರಾಗಬೇಕು. ಮತ್ತು ಮೊದಲ ನೆಯ ಇಯತ್ತೆಯಿಂದಲೇ ಸುಲಭವಾದ ನಿಬಂಧಗಳನ್ನು ಬರೆಯಲು ಕಲಿತಿರಬೇಕು. ಕೆಳಗಿನ ತರಗತಿಗಳ್ಲಿ ವಾಚಾನಿಬಂಧಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕು. ಮತ್ತು ಇದರ ಜೊತೆಗೇ ತೀರ ಸುಲಭವಾದ ಸ್ವತಂತ್ರ ಲೇಖನ ನಿಬಂಧಗಳನ್ನು ಬರೆಯುವದಕ್ಕೂ ಕೂಡ ತೀರ ಪ್ರಾರಂಭದಿಂದಲೇ ರೂಢಿ ಮಾಡಿಸಬೇಕು. ಶಾಲೆಗಳಲ್ಲಿ ಪಕ್ಕಾ ಬರೆಹದ ಟಿಪ್ಪಣಿ ಪುಸ್ತಕಗಳನ್ನು ಇಟ್ಟಿರಬೇಕು.

(ಕ) **ವಿದ್ಯಾರ್ಥಿಗಳ ವಾಚನವು** ಭಾವಬೋಧಕವಾಗಿಯೂ ಅರ್ಥ ತಿಳಿದುಕೊಂಡು ಓದಿದ್ದೂ ಇರಬೇಕು. ಎರಡನೆಯ ಇಯತ್ತೆಯಿಂದ ಮೌನ ವಾಚನ ರೂಢಿ ಮಾಡಿಸಬೇಕು.

೩ **ಅಭ್ಯಾಸ ಪತ್ರಿಕೆಯ ಹೊರಗಿನ ಕಾರ್ಯಕಲಾಪಗಳು** (ಅ) ಪ್ರತಿ ಶಾಲೆಯಲ್ಲಿಯೂ ವಿದ್ಯಾರ್ಥಿಗಳ ಶಾರೀರಿಕ-ಶಿಕ್ಷಣದ ಚಟುವಟಿಕೆಗಳು ನಡೆಯಲೇಬೇಕು. ಸಾಮೂಹಿಕ ಡ್ರಿಲ್ಲು ಸಾಮೂಹಿಕ ಆಟಗಳು ವೈಯಕ್ತಿಕ ಆಟಗಳು ಇವನ್ನು ಪ್ರತಿಶಾಲೆಯಲ್ಲಿ ನಡೆಯಿಸಲೇಬೇಕು. ಒಂದೇ ಶಾಲೆಯೊಳಗಿನ ಬೇರೆಬೇರೆ ವರ್ಗಗಳ ನಡುವೆಯೂ ಬೇರೆಬೇರೆ ಶಾಲೆಗಳ ನಡುವೆಯೂ ಆಟಗಳ ಸ್ಪರ್ಧೆಗಳನ್ನು ನಡೆಯಿಸಬೇಕು.

(ಬ) **ವಾದವಿವಾದಗಳು, ಕವಿತೆಗಳನ್ನು ಹಾಡುವದು, ಚಿಕ್ಕನಾಟಿಕಗಳು, ಇನ್ನಿತರ ಮನೋರಂಜಕ ಕಾರ್ಯಕ್ರಮಗಳು,** ಇವನ್ನು ಆಗಾಗ ಶಾಲೆಯಲ್ಲಿ ನಡೆಯಿಸಬೇಕು. ವಿದ್ಯಾರ್ಥಿಗಳ ಪಾಲಕರು ಮತ್ತು ತಂದೆತಾಯಿಗಳು ಇವರು ಒತ್ತಟ್ಟಿಗೆಸೇರುವಂಥ ಕಾರ್ಯಕ್ರಮಗಳನ್ನು ಆರುತಿಂಗಳಿಗೊಮ್ಮೆ ಅಥವಾ ಒಂದು ವರ್ಷಕ್ಕೊಮ್ಮೆಯಾದರೂ ನಡೆಯಿಸಬೇಕು. ಅಂಥ ಸಂದರ್ಭಗಳಲ್ಲಿ ಊರೊಳಗಿನ ಎಲ್ಲ ಪ್ರಮುಖರನ್ನು ಆಮಂತ್ರಿಸಿ ವಿದ್ಯಾರ್ಥಿಗಳ ಹಾಡುಗಳು ಸಂಭಾಷಣೆ ಮುಂತಾದ ಮನೋರಂಜಕ ಕಾರ್ಯಕ್ರಮಗಳನ್ನು ನಡೆಯಿಸಿ ಊರ ಜನರ ಸಹಾಯ ಸಹಾನುಭೂತಿಗಳನ್ನು ದೊರಕಿಸಿಕೊಳ್ಳುವದಲ್ಲದೆ ವಿದ್ಯಾರ್ಥಿಗಳಲ್ಲಿ ಸ್ವಾಭಾವಿಕವಾಗಿರುವ ಸಭಾಕಂಪನ ದೋಷವನ್ನು ದೂರ ಮಾಡುವದಕ್ಕೂ ಅವರ ಆತ್ಮಪ್ರಕಾಶನ ಶಕ್ತಿಯನ್ನು ಬೆಳಿಸುವದಕ್ಕೂ ತಕ್ಕ ಅನುಕೂಲತೆ ಮಾಡಿಕೊಡಬೇಕು.

೪. **ವಿದ್ಯಾರ್ಥಿಗಳ ಹಾಜರಿಯು ಸರಾಸರಿಯನ್ನು ಹೆಚ್ಚಿಸಿ ಕುಂಠಿತ ಪ್ರಗತಿಯು ಮೂಲಕ ಆಗುವ ಹಾನಿಯನ್ನು ತಪ್ಪಿಸುವದು.**

ಸಾಮಾನ್ಯವಾಗಿ ಒಬ್ಬ ಶಿಕ್ಷಕನು ಸರಾಸರಿ ೪೦-೪೫ ವಿದ್ಯಾರ್ಥಿಗಳಿಗೆ ಕಲಿಸಬೇಕು. ಯಾವದೇ ಸಂದರ್ಭದಲ್ಲಿಯೂ ಒಬ್ಬ ಶಿಕ್ಷಕನು ಕಲಿಸುವ

ವಿದ್ಯಾರ್ಥಿಗಳ ಸಂಖ್ಯೆಯು ೨೦ಕ್ಕಿಂತ ಕಡಿಮೆ ಇರಲೇಕೂಡದು. ಕಡಿಮೆ ಸಂಖ್ಯೆಯಿರುವ ಶಾಲೆಗಳ ಶಿಕ್ಷಕರು ಪ್ರಯತ್ನ ಮಾಡಿ ಅದನ್ನು ೨೦ಕ್ಕೆ ಹೆಚ್ಚಿಸದಿದ್ದರೆ ಆ ಶಾಲೆಯನ್ನು ನಿಲ್ಲಿಸಿಬಿಡಬೇಕಾದೀತು. ಮತ್ತು ಹೆಚ್ಚು ವಿದ್ಯಾರ್ಥಿಗಳಿಗೂ ಕೂಡಬಹುದಾದ ಬೇರೊಂದು ಸ್ಥಳಕ್ಕೆ ಅದನ್ನು ವರ್ಗಾಯಿಸಬಹುದು. ತಪಾಸಣೆಯ ಅಧಿಕಾರಿಗಳೂ ಎಡ್ಮಿನಿಸ್ಟ್ರೇಟಿವ್ ಆಫೀಸರರೂ ಕಡಿಮೆ ಹಾಜರಿಯಿರುವ ಶಾಲೆಗಳ ವಿಷಯದಲ್ಲಿ ಸಂಪೂರ್ಣ ಲಕ್ಷ್ಯವಹಿಸಿ ಅದರ ಸ್ಥಿತಿಗತಿಗಳನ್ನು ಅವಲೋಕಿಸುತ್ತಿರುವರು. ಶಿಕ್ಷಕರು ಇದನ್ನು ತಿಳಿದುಕೊಂಡು ತಮ್ಮ ಶಾಲೆಯು ಹಾಳಾಗದಂತೆ ಮೊದಲೇ ಎಚ್ಚರ ಪಡಬೇಕು. ಹಾಜರಿಯು ಸರಾಸರಿಯು ತಕ್ಕಷ್ಟಕ್ಕಿಂತ ಕಡಿಮೆ ಇರುವ ಶಾಲೆಗಳ ಶಿಕ್ಷಕರು ಆಬಗ್ಗೆ ತಮ್ಮ ಹೇಳಿಕೆಯನ್ನು ಬರೆದುಕೊಡಬೇಕಾಗುವದು. ಹೆಚ್ಚು ಕಾಲದವರೆಗೆ ಈ ಸಂಖ್ಯೆಯು ಕಡಿಮೆಯಾಗಿದ್ದರೆ ಆ ಬಗ್ಗೆ ಅಸಿಸ್ಟೆಂಟ್ ಡೆಪ್ಯುಟಿ ಎಜ್ಯುಕೇಶನಲ್ ಇನ್ಸ್ಪೆಕ್ಟರರು ಸ್ವತಃ ಬಂದು ವಿಚಾರಣೆ ನಡೆಯಿಸುವರು. ಒಂದು ಶಾಲೆಗಾಗಿ ವೆಚ್ಚವಾಗುವ ಹಣಕ್ಕೆ ತಕ್ಕಂತೆ ಆ ಶಾಲೆಯಿಂದ ಪ್ರತಿಫಲವನ್ನು ಅಪೇಕ್ಷಿಸದೆ ತಪ್ಪಾಗದು. ಕಡಿಮೆ ಹಾಜರಿಯಿರುವ ಶಾಲೆಯನ್ನು ಮುಂದೆ ಸಾಗಿಸುವದರಿಂದ ಅಷ್ಟು ಸಾರ್ವಜನಿಕ ಹಣವನ್ನು ನಿರರ್ಥಕ ವೆಚ್ಚಮಾಡಿದಂತಾಗುವದು. ಒಬ್ಬನೇ ಶಿಕ್ಷಕನಿರುವ ಪ್ರಾಥಮಿಕ ಶಾಲೆಯು ಹಾಜರಿಯ ಸರಾಸರಿಯು ಸಾಮಾನ್ಯವಾಗಿ ೨೦ಕ್ಕಿಂತ ಕಡಿಮೆ ಇರಲೇಕೂಡದು. ಅದು ಹರಿಜನ ವಿದ್ಯಾರ್ಥಿಗಳಿಗಾಗಿಯೇ ಇಟ್ಟ ವಿಶಿಷ್ಟಶಾಲೆಯಾಗಿದ್ದರೆ ಹಾಜರಿಯ ಸರಾಸರಿಯು ೧೫ ಇದ್ದರೂ ಇರಬಹುದು. ಅಂಥ ಶಾಲೆಗಳಲ್ಲಿ ಶಿಕ್ಷಪದ್ಧತಿಯನ್ನು ಪ್ರಾರಂಭಿಸಿದ್ದರೆ ಹಾಜರಿಯ ಸಂಖ್ಯೆಯು ಇದಕ್ಕೂ ಹೆಚ್ಚು ಇರಲೇಬೇಕೆಂಬವಂತೂ ನಿಜವಾದದ ಮಾತು. ಹೀಗಿರುವದರಿಂದ ಶಿಕ್ಷಕರು ತಮ್ಮ ಶಾಲೆಗಳ ಹಾಜರಿಯ ಸರಾಸರಿಯು ಇದಕ್ಕಿಂತ ಹೆಚ್ಚಾಗುವಂತೆ ಮನಃಪೂರ್ವಕವಾಗಿ ಯತ್ನಿಸತಕ್ಕದ್ದು.

(ಬ) ಶಾಲೆಗೆ ಬಂದ ಪ್ರತಿ ವಿದ್ಯಾರ್ಥಿಯು ಪ್ರತಿವರ್ಷ ಒಂದೊಂದು ಇಯತ್ತೆಯನ್ನು ಕಲಿತು ನಾಲ್ಕನೆಯ ಇಯತ್ತೆಯನ್ನು ಮುಗಿಸಲೇಬೇಕೆಂಬ ನಿರ್ಧಾರವಿರಬೇಕು. ಹಾಗಾಗದಿದ್ದಲ್ಲಿ ವಿದ್ಯಾರ್ಥಿಗಳ ಪ್ರಗತಿಯು ಕುಂಠಿತವಾಗಿರುವದೆಂದೂ ಸಾರ್ವಜನಿಕ ಹಣದ ಅಪವ್ಯಯವಾಗುತ್ತಿದೆಯೆಂದೂ ತಿಳಿಯಬೇಕಾಗುವದು. ಆದ್ದರಿಂದ ಪ್ರತಿ ವಿದ್ಯಾರ್ಥಿಯೂ ಒಂದು ವರ್ಷದಲ್ಲಿ ಒಂದು ಇಯತ್ತೆಯನ್ನು ಮುಗಿಸುವಂತೆಯೂ ನಾಲ್ಕು ಇಯತ್ತೆಗಳ ಅಭ್ಯಾಸವನ್ನು ಮುಗಿಸದೆ ಶಾಲೆಯನ್ನು ಬಿಟ್ಟು ಹೋಗದಂತೆಯೂ ನೋಡಿಕೊಳ್ಳುವದು ಶಿಕ್ಷಕನ ಕರ್ತವ್ಯವೆಂಬದನ್ನು ಮರೆಯಲಾಗದು. ಒಂದು ವರ್ಷದ ವರೆಗೆ ಕ್ರಮದಿಂದ ಶಾಲೆಗೆ

ಿರುತ್ತಿದ್ದ ವಿದ್ಯಾರ್ಥಿಯು ಅಥವಾ ವಿದ್ಯಾರ್ಥಿನಿಯು ವಾರ್ಷಿಕ ಪರೀಕ್ಷೆಯಲ್ಲಿ ಸಾಪಾಸಾಗಿ ಪುನಃ ಅದೇ ಇಯತ್ತೆಯನ್ನು ಕಲಿಯುವ ಸಂದರ್ಭವು ಬಂದರೆ ೆ ಬಗ್ಗೆ ಶಿಕ್ಷಕರು ಜವಾಬದಾರನೆಂದು ತಿಳಿಯಲಾಗುವದು. ಮತ್ತು ಶಿಕ್ಷಕರು ತಮ್ಮ ಹೇಳಿಕೆಯನ್ನು ಬರೆದುಕೊಡಬೇಕಾಗುವದು. ಪ್ರತಿ ವಿದ್ಯಾರ್ಥಿಯು 'ಒಂದು ವರ್ಷದಲ್ಲಿ ಒಂದು ಇಯತ್ತೆಯನ್ನು ಮುಗಿಸಲೇಬೇಕು" ಎಂಬ ಧ್ಯೇಯವನ್ನು ಮುಂದಿಟ್ಟುಕೊಂಡೇ ಕೆಲಸ ಸಾಗಿಸಬೇಕು.

೫. ಶಿಕ್ಷಕರ ಸಮ್ಮೇಲನಗಳು

ಐದು ಮೈಲು ಪರಿಘದೊಳಗಿನ ಎಲ್ಲ ಶಾಲೆಗಳನ್ನು ಸೇರಿಸಿ ಒಂದು ಗುಂಪು ಮಾಡಬೇಕು. ಮತ್ತು ಒಂದು ಜಿಲ್ಲೆಯೊಳಗಿನ ಎಲ್ಲಿ ಶಾಲೆಗಳನ್ನು ಹೀಗೆ ಬೇರೆ ಬೇರೆ ಗುಂಪುಗಳಾಗಿ ವಿಭಾಗಿಸಬೇಕು. ಇಂಥ ಐದು ಮೈಲು ಪರಿಘಪಲ್ಲಿ ಸೇರುವ ಎಲ್ಲ ಶಾಲೆಗಳಿಗೆ ಒಬ್ಬ ಹೆಡ್‌ಮಾಸ್ತರನನ್ನು ಆರಿಸಬೇಕು. ಇಂಥ ಶಾಲೆಗಳ ಗುಂಪಿನ ಹೆಡ್‌ಮಾಸ್ತರನು ಇಬ್ಬರು ಅಥವಾ ಹೆಚ್ಚು ಶಿಕ್ಷಕರಿರುವ ಶಾಲೆಯಲ್ಲಿ ಶಿಕ್ಷಕನಾಗಿದ್ದು ಟ್ರೇಂಡ ಶಿಕ್ಷಕನಾಗಿರಬೇಕು. ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನ ಶಾಲೆಗಳಷ್ಟೆ ಅಲ್ಲದೆ ಆ ಗುಂಪಿಗೆ ಸೇರಬಹುದಾದ ಖಾಸಗಿ ಶಾಲೆಗಳನ್ನು ಕೂಡ ಈ ಗುಂಪಿನಲ್ಲಿ ಸೇರಿಸಿಕೊಳ್ಳಬೇಕು. ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರೂ ಏಡ್ಮಿನಿಸ್ಟ್ರೇಟಿವ್ಹ ಆಫೀಸರರೂ ಕೂಡಿ ಇಂಥ ಗುಂಪುಗಳನ್ನೂ ಅವುಗಳ ಹೆಡ್‌ಮಾಸ್ತರರನ್ನೂ ಗೊತ್ತುಪಡಿಸಿ ಅವುಗಳ ಒಂದು ಯಾದಿಯನ್ನು ತಯಾರಿಸುವರು. ಇಂಥ ಪ್ರತಿಯೊಂದು ಗುಂಪಿನೊಳಗಿನ ಶಿಕ್ಷಕರೆಲ್ಲರೂ ಆಗಾಗ ಸೇರಿ ಸಮ್ಮೇಲನಗಳನ್ನು ನೆರೆಯಿಸಿ ತಮ್ಮ ಶಾಲೆಗಳ ಸ್ಥಾನಿಕ ಅಡಚಣೆಗಳನ್ನೂ ಇತರ ಸಮಸ್ಯೆಗಳನ್ನೂ ಚರ್ಚಿಸಿ ಅನುಕೂಲವಾದ ಸುಧಾರಣೆಯ ಮಾರ್ಗಗಳನ್ನು ಹುಡುಕಿ ನಿರ್ಣಯಿಸಿಕೊಳ್ಳಬೇಕು. ಗುಂಪಿನ ಹೆಡ್‌ಮಾಸ್ತರರು ತಮ್ಮ ಗುಂಪಿಗೆ ಸೇರುವ ಖಾಸಗಿ ಶಾಲೆಗಳ ಶಿಕ್ಷಕರನ್ನೊಳಗೊಂಡ ಎಲ್ಲ ಶಿಕ್ಷಕರಿಗೆ ತಕ್ಕ ಸಹಾಯ ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷಿಸಲಾಗಿದೆ.

ಮೇಲೆ ವಿವರಿಸಿದ ಐದು ಸಂಗತಿಗಳನ್ನು ಕುರಿತು ಎಲ್ಲ ಶಿಕ್ಷಕರು ಪರ್ಯಾಲೋಚಿಸಿ ತಮ್ಮ ಅಧಿಕಾರಿಗಳ ಸಹಾಯ ಸಲಹೆಗಳನ್ನು ಪಡೆದುಕೊಂಡು ಮುಂದಿನ ವರ್ಷದಲ್ಲಿ ಮಾಡತಕ್ಕ ಕಾರ್ಯಕಲಾಪಗಳನ್ನು ವರ್ಷಾರಂಭದಲ್ಲಿಯೇ ನಿರ್ಣಯಿಸಿಕೊಂಡು ಅದರಂತೆ ಕೆಲಸ ಮಾಡುವರೆಂದು ಆಶಿಸಲಾಗಿದೆ.

ಶಿಕ್ಷಣ ಪದ್ಧತಿಯ ವಿಚಾರವು ತುಂಬ ಮಹತ್ವದ್ದಾಗಿರುವದರಿಂದ ಅದನ್ನು ಬೇರೊಂದು ಸ್ವತಂತ್ರ ಲೇಖನದಲ್ಲಿ ವಿವೇಚಿಸುವೆನೆ.

ಟ್ರೇನಿಂಗ್ ಸ್ಕೂಲಿಗೆ ವಂದನೆ



ಕವಿ:— ಕುಲಕರ್ಣಿ ಕೇಶವರಾಯ ೨ನೆಯ ವರ್ಷದ ವಿದ್ಯಾರ್ಥಿ

ಮೆರೆತಿಹೆ ಕನ್ನಾಡ ಬಿಜ್ಜೆವನೆಯೆ
ಮರೆಯೆನೆಂದಿಗು, ನಿನ್ನ ನಮಿಪೆ ತಾಯೆ !! ॥ ಪಲ್ಲ ॥

ಕರೆಕರೆದಸಂಸ್ಕೃತರ ಸಂಸ್ಕೃತರ ಮಾಡುತ್ತೆ
ಸರಸತಿಯ ಸೇವೆಯಲಿ, ಬಂದವರ ನಿಲಿಸುತ್ತೆ
ಕರುನಾಡ ಚಿಣ್ಣರಲಿ, ಜ್ಞಾನವನು ಬೀರುತ್ತೆ
ವರುಷೊರುಷ ಕಳೆದಂತೆ ಹೊಸ ಜನರ ಕರೆಯುತ್ತೆ ॥ ೧ ॥

ಸುರಿತ ಗುರುವರರಿಂದೆ ವಿಷಯಗಳ ತಿಳಿಸಿ,
ಸರಸ ಸಂಗೀತದಲಿ, ಮನವನತಿ ತಣಿಸಿ
ಗರಡಿಯಾಟಗಳಿಂದ ದೇಹವನು ಬೆಳೆಸಿ
ವರುರುಚಿಯ ಊಟದಲಿ ಮನೆಯ ಮರೆಸಿ ॥ ೨ ॥

ಭಾರಿ ಭವ್ಯಾಕಾರ ಪ್ರಾಕಾರದಿಂದಾ
ತೋರುತಿವ ಕನ್ನಡದ ಕೇಂದ್ರವಾದಾ-
ಧಾರವಾಡದಿ ನೆಲೆಸಿ ಸುಜ್ಞಾನದಾ-
ಪೂರ ಹರಿಸುತ್ತಿರುವಿ ಮನಮರೆಯದಾ ॥ ೩ ॥

—ಕೇಶವ ಕುಲಕರ್ಣಿ.

ಕನ್ನಡ "ವರ್ಧ ಪ್ರಾಯಿಜ" ಪರೀಕ್ಷೆ ೧೯೪೨

ಪರೀಕ್ಷೆಯ ವಿಷಯಗಳು:—

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧ್ಸಾಹೇಬರು ರಚಿಸಿರುವ ಪ್ರಾಕ್ಕಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥ ವಿವರಣೆ; ಟೀಕೆ ಟಿಪ್ಪಣಿ; ಸ್ವತಂತ್ರ ನಿಬಂಧ; ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

ಬಹುಮಾನ:— ಈ ಮೊದಲು ಇದ್ದ ೮೦ ರೂ. ಯ ಒಂದೇ ಇನಾಮಿನ ದಬ್ಬಿಗಿ ಈಗ ಇನಾಮುಗಳು ಎರಡು ಎಂದು ಗೊತ್ತಾಗಿವೆ. **ಮೊದಲನೆಯ ಇನಾಮು ೨೦ ರೂ. ೨ನೆಯ ಇನಾಮು ೩೦ ರೂ.**

ಮೊದಲನೆಯ ಇನಾಮು ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಇನಾಮು ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಇನಾಮುಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

ಅರ್ಜಿಮಾಡತಕ್ಕ ಅವಧಿ:—

ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೨ ನೆಯ ಇಸವಿಯ ಜೂನ್ ತಿಂಗಳ ೧೫ನೆಯ ತಾರೀಖಿನೊಳಗಾಗಿ ಮೆ॥ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೆ ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

ಪರೀಕ್ಷೆಯ ಸ್ಥಳ, ತಾರೀಖು ಹಾಗು ವೇಳೆ:—

ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

ಪ್ರಶ್ನೆಗಳ ಕಾಗದಗಳು ಕೆಳಗೆ ಬರೆದಂತೆ ಇವೆ:—

ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು:—	ಪ್ರಾಕ್ಕಾವ್ಯಮಾಲೆ	೭೦	ಗುಣ ೧೦೦
	ವ್ಯಾಕರಣ ಮತ್ತು ಛಂದಸ್ಸು	೩೦	
ಎರಡನೆಯದು:—	ಹಳೆಗನ್ನಡ ನಿಬಂಧ	೫೦	೧೦೦
	ಕನ್ನಡ ಬಾವುಟದಲ್ಲಿಯ ಕವಿತಾ ಭಾಗ	೩೦	
	ಹಳೆಗನ್ನಡ ಅಪರಿಚಿತ ಗದ್ಯಭಾಗಗಳು	೨೦	
ಮೂರನೆಯದು:—	ಹೊಸಗನ್ನಡ ನಿಬಂಧ; ಹನ್ನೆರಡನೆಯ	೭೫	೧೦೦
	ಶತಮಾನದ ಕನ್ನಡ ಸಾಹಿತ್ಯ ಪರಿಚಯ	೨೫	

ಪ್ರಕಟನೆ ೧

ಈ ವರ್ಷ ಕನ್ನಡ ವರ್ಧಪ್ರಾಯೋಜ ಪರೀಕ್ಷೆಯು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜದೊಳಗೆ ಜುಲೈ ತಿಂಗಳ ೨೩, ೨೪, ೨೫, ತಾರೀಖುಗಳಲ್ಲಿ (ಬುಧವಾರ, ಗುರುವಾರ, ಶುಕ್ರವಾರ ದಿವಸಗಳಲ್ಲಿ) ೧೨ ಗಂಟೆಯಿಂದ ೨ ಗಂಟೆಯವರೆಗೆ ನಡೆಯುವದು.

Training School
DHARWAR
18-5-1941

R. S. Madiman,
Head Master

ಪ್ರಕಟನೆ ೨

ಮೆ॥ ಡಾಯರೆಕ್ಟರ ಸಾಹೇಬರವರ ಗಳಗನೇ ಇಸ್ವಿ ಎಪ್ರಿಲ್ ತಿಂಗಳ ೩೦ನೇ ತಾರೀಖಿನ ಹುಕುಂ ನಂಬರ S-86 (a)-490-C ನೇದರ ಮೇರೆಗೆ ಈ ಕೆಳಗೆ ಕಾಣಿಸಿರುವ ತಪಾಸಣೆಯ ಅಧಿಕಾರಿಗಳ ಪುಸ್ತಕಗಳು ಮುಂಜೂರಾದ ಪಾಠಪುಸ್ತಕಗಳ ಯಾದಿಯಲ್ಲಿ ಉಳಿಯಬೇಕೆಂದು ನಿರ್ಣಯಿಸಲಾಗಿರುವದು

ಅ. ನಂ.	ತಪಾಸಣೆಯ ಅಧಿಕಾರಿಗಳ ಹೆಸರು ಮತ್ತು ಅವರ ಅಧಿಕಾರ.	ಪುಸ್ತಕದ ಹೆಸರು.
೧	ಬೆಳಗಾಂವ ಜಿಲ್ಲೆಯ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ವ ಆಫೀಸರರಾದ **ಶ್ರೀ ಬಿ. ಎಸ್. ಪುರೋಹಿತ** ಇವರು	(೧) ಅಂಕಗಣಿತ (ನಾಲ್ಕನೆಯ ಇಯತ್ತೆಯ ಬಗ್ಗೆ)
೨	ಹುಬ್ಬಳ್ಳಿಯ ಮ್ಯುನಸಿಪಾಲಿಟಿಯ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟೆಟಿವ್ವ ಆಫೀಸರರಾದ ಶ್ರೀ ಎಸ್. ಪಿ ಗಾಂವಕರ ಇವರು	(೧) ಅಂಕಗಣಿತ (ನಾಲ್ಕನೆಯ ಇಯತ್ತೆಯ ಬಗ್ಗೆ) ಶ್ರೀ ಗಾಂವಕರ ಮತ್ತು ಹಿರೇಗೌಡರ ಇವರು ಬರೆದದ್ದು.
೩	ಧಾರವಾಡ ಜಿಲ್ಲೆಯ ಅಸಿ॥ ಡೆ. ಎ ಇನ್‌ಸ್ಪೆಕ್ಟರರಾದ ಶ್ರೀ ಬಿ. ಬ. ಬೂದಿಹಾಳ ಇವರು.	ಸುಲಭ ಬಾಲಬೋಧೆ
೪	ಧಾರವಾಡ ಜಿಲ್ಲೆಯ ಅಸಿ॥ ಡೆಗ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ ಎಚ್. ಬಿ, ಉಮಡಿ ಇವರು	(೧) ಕನ್ನಡ ಜಮೀನ ಪಿಚ್ಚರ ಭಾಗ ೧ ಮತ್ತು ಭಾಗ ೨

ಹೆಣ್ಣುಮಕ್ಕಳ ಪ್ರಾಥಮಿಕ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ ಪರೀಕ್ಷೆ ೧೯೪೧

ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಾದ
ಶ್ರೀಮಾನ್ ತಾವಡೆ ಸೀತಾರಾಮಯ್ಯರಿಂದ

"ನಮ್ಮ ಭಾಗದೆಲ್ಲೆಯ ಹೆಣ್ಣುಮಕ್ಕಳ ಪ್ರಾ. ಸ್ಕೂ. ಲಿ. ಸ ಪರೀಕ್ಷೆಯ ಈ ವರ್ಷದ ಪರಿಣಾಮವು ಬಹಳ ಅಸಮಾಧಾನಕರವಿದೆಯೆಂದು ಕಂಡುಬಂದಿದೆ. ಗಂಡು ಹೆಣ್ಣುಮಕ್ಕಳ ಪರೀಕ್ಷೆಯ ಪರಿಣಾಮಕ್ಕಿಂತಲೂ ಮರಾಠಿ ಹೆಣ್ಣುಮಕ್ಕಳ ಪರೀಕ್ಷೆಯ ಪರಿಣಾಮವು ಚೆನ್ನಾಗಿದೆ. ನಮ್ಮ ಭಾಗದಲ್ಲಿಯ ಸ್ತ್ರೀಶಿಕ್ಷಣವು ಹಿಂದುಳಿದುದು ದುರ್ದೈವದ ಮಾತು. ಪರೀಕ್ಷೆಗೆ ಕುಳಿತ ಹುಡುಗಿಯರ ಸಂಖ್ಯೆಯೇ ತೀರ ಕಡಿಮೆ. ಅದರಲ್ಲಿಯೂ ೫ ದಷ್ಟು ಉಮೇದುವಾರರು ಯಶಸ್ವಿಯಾಗಲಿಲ್ಲ. ೫ ದಷ್ಟು ಮಾತ್ರ ತೇರ್ಗಡೆಯಾಗಿದ್ದಾರೆ. ಇದು ಸಮಾಧಾನಕರವಲ್ಲ. ಈ ಪರೀಕ್ಷೆಯ ಪರಿಣಾಮವು ಸಮಾಧಾನಕರವಾಗುವದಕ್ಕೆ ಏನಾದರೂ ಪ್ರಯತ್ನ ಮಾಡಲಿಕ್ಕೆ ಬೇಕು.

ಹೊಲಿಗೆಯ, ಮತ್ತು ಹೆಣಿಕೆಯ ಕೆಲಸಗಳೆಲ್ಲಿಯೂ, ಗಣಿತ ಭಾಷಾವಿಷಯಗಳಲ್ಲಿಯೂ ಸಾಕಾಗುವಷ್ಟು ಪ್ರಗತಿಯು ಕಂಡುಬರುವದಿಲ್ಲ. ಬಹಳ ಉಮೇದುವಾರರು ಹಿಂದುಳಿದಿರುವರು. ಈ ಪರೀಕ್ಷೆಗೆ ಏನೇನು ಬೇಕೆಂಬುದು ಸಹ ಎಷ್ಟೋ ವಿದ್ಯಾರ್ಥಿನಿಯರಿಗೆ ಗೊತ್ತಿರುವದಿಲ್ಲ. ಆದುದರಿಂದ ಇನ್ನು ಮುಂದೆ ಎಡ್ಮಿನಿಸ್ಟ್ರೇಟಿವ್ಹ ಆಫೀಸರರು ಹೆಣ್ಣುಮಕ್ಕಳ ಪೂರ್ಣ ಪ್ರಾಥಮಿಕ ಶಾಲೆಗಳ ಹೆಡ್ ಮಿಸ್ಟ್ರೆಸರಿಗೆ ಈ ಪರೀಕ್ಷೆಗಾಗಿ ಗೊತ್ತುಪಡಿಸಿದ ವಿಷಯಗಳ ಜ್ಞಾನವು ಸಾಕಷ್ಟು ಇರುವದೊ ಇಲ್ಲವೊ ಎಂಬುದರ ಕಡೆಗೆ ಲಕ್ಷ್ಯವನ್ನು ಪೂರೈಸುವರು ಅಪೇಕ್ಷೆಯಿರು. ಹಾಗು ಆರನೆಯ ಮತ್ತು ಏಳನೆಯ ಇಯತ್ತೆಗಳ ವಿದ್ಯಾರ್ಥಿನಿಯರಿಗೆ ಅವರ ಪರೀಕ್ಷೆಯ ವಿಷಯಗಳನ್ನು ಬರಹದಮೂಲಕ ತಿಳುಹಿಸತಕ್ಕದ್ದು. ಹೆಣ್ಣುಮಕ್ಕಳ ಪರೀಕ್ಷೆಗೆ ಕೆಲವು ಐಚ್ಛಿಕ ವಿಷಯಗಳಿರುತ್ತವೆ. ಆ ವಿಷಯಗಳಲ್ಲಿ ಯಾವು ಕಲಿಯುತ್ತಿರುವ ಶಾಲೆಗಳಲ್ಲಿ ಯಾವ ವಿಷಯವನ್ನು ಕಲಿಯಲಿಕ್ಕೆ ಅನುಕೂಲವಿದೆಯೊ ಅಂತಹದನ್ನೆ ಆರಿಸಿಕೊಳ್ಳತಕ್ಕದ್ದು. ಎಡ್ಮಿನಿಸ್ಟ್ರೇಟಿವ್ಹ ಆಫೀಸರರು

ಹಾಗು ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸ್‌ರು, ಶಾಲೆಗಳ ಮೇಲ್ವಿಚಾ
ರಣೆಗೆ ಹೋದಾಗ ಒಂದೆರಡು ದಿವಸಗಳನ್ನು ಕಳೆದಾದರೂ ಶಿಕ್ಷಕಿಯರಿ
ಈ ಅಭ್ಯಾಸ ಪತ್ರಿಕೆಯನ್ನೂ ಪರೀಕ್ಷೆಯ ವಿಷಯಗಳನ್ನೂ ಯಾವರೀತಿಯಲ್ಲಿ ಸಿದ್ಧ
ಮಾಡಿಕೊಳ್ಳಬೇಕೆಂಬುದನ್ನು ಅವರ ಅಭ್ಯಾಸಪತ್ರಿಕೆಯ ಆಧಾರದಿಂದ ತೋರಿ
ಕೊಡುವರು. ಬರುವ ವರ್ಷದ ಹೆಣ್ಣುಮಕ್ಕಳ ಪ್ರಾ. ಸೂಕ್ತ. ಲಿ. ಸ ಪರೀಕ್ಷೆಯ
ಪರಿಣಾಮವು ಸುಧಾರಿಸುವ ಸಲುವಾಗಿ ಪ್ರತಿಯೊಬ್ಬ ಶಿಕ್ಷಕಿಯೂ ಎಲ್ಲ ವಿಧದಿಂ
ಪ್ರಯತ್ನ ಮಾಡತಕ್ಕದ್ದು.

ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ಈ ಸಂಗತಿಯನ್ನು ತಮ್ಮ ಜಿಲ್ಲೆ
ಯಲ್ಲಿಯ ಅಸಿಸ್ಟಂಟ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸ್‌ರವರ ಲಕ್ಷ್ಯಕ್ಕೆ
ತಂದುಕೊಡುವರು.

ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟ್ರಸ್‌ರವರು ಹೆಣ್ಣುಮಕ್ಕಳ
ಪೂರ್ಣ ಪ್ರಾಥಮಿಕಶಾಲೆಗಳ ಕಡೆಗೆ ಹೆಚ್ಚಾಗಿ ಲಕ್ಷ್ಯಕೊಡುವರು. ಹಾಗೆ
ಮೇಲ್ವಿಚಾರಣೆಗಾಗಿ ಅದಷ್ಟು ಹೆಚ್ಚು ಪೂರ್ಣ ಪ್ರಾಥಮಿಕಶಾಲೆಗಳನ್ನು
ಇಟ್ಟುಕೊಳ್ಳುವರು. ಎಲ್ಲ ಜಿಲ್ಲೆಗಳಲ್ಲಿಯ ಅಸಿಸ್ಟಂಟ ಡೆಪ್ಯೂಟಿ ಎಜ್ಯು
ಕೇಶನಲ್ ಇನ್‌ಸ್ಪೆಕ್ಟ್ರಸ್‌ರವರ ಸಹಾಯದಿಂದ ಬರುವ ವರ್ಷದ ಈ ಪರೀಕ್ಷೆಯ
ಪರಿಣಾಮವು ಸುಧಾರಿಸುವಂತೆ ಪ್ರಯತ್ನಿಸುವರು. ಪೂರ್ಣ ಪ್ರಾಥಮಿಕ ಶಾ
ಗಳ ಶಿಕ್ಷಕಿಯರು ಮೊದಲು ಆರು ಏಳನೆಯ ಇಯತ್ತೆಗಳ ಅಭ್ಯಾಸ ಪತ್ರಿಕೆಯನ್ನು
ಕೂಲಂಕಷವಾಗಿ ನಿರೀಕ್ಷಿಸಿ ತಿಳಿದುಕೊಂಡು ಅದನ್ನು ತಮ್ಮ ವಿದ್ಯಾರ್ಥಿನಿಯರ
ಮನವರಿಕೆಮಾಡಿಕೊಡಬೇಕು. ಮತ್ತು ವಿದ್ಯಾರ್ಥಿನಿಯರು ಹೆಚ್ಚು ಪರಿಶ್ರಮ
ದಿಂದ ಅಭ್ಯಾಸ ಮಾಡಿ ಪರೀಕ್ಷೆಯ ಸಿದ್ಧತೆ ಮಾಡಿಕೊಳ್ಳಬೇಕು. ವಿದ್ಯಾರ್ಥಿ
ಯರು ಪರೀಕ್ಷೆಯ ವಿಷಯಗಳನ್ನು ಪ್ರಶ್ನಪತ್ರಿಕೆಯ ಮಾದರಿಗಳನ್ನು ಅವ
ಸಮರ್ಪಕವಾದ ಉತ್ತರವನ್ನು ಬರೆಯುವ ರೀತಿಯನ್ನು ಅಭ್ಯಾಸ ಮಾಡಿಕೊಂಡ
ಈ ಪರೀಕ್ಷೆಯ ಪರಿಣಾಮವು ಮುಂದಿನ ವರ್ಷ ಈ ವರ್ಷಕ್ಕಿಂತಲೂ ಹೆಚ್ಚು
ಯೋಗ್ಯವಾಗುವದರಲ್ಲಿ ಸಂಶಯವಿಲ್ಲ.

ಹೆಣ್ಣುಮಕ್ಕಳ ಪ್ರಾಮರಿ ಸ್ಕೂಲ ಲೀವ್ಹಿಂಗ ಸರ್ಟೀಫಿಕೇಟ ಪರೀಕ್ಷೆಯ ಪರಿಣಾಮ ೧೯೪೧

೧೯೪೧ನೆಯ ಇಸ್ವಿಯ ಮಾರ್ಚ ತಿಂಗಳಲ್ಲಾದ ಹೆಣ್ಣುಮಕ್ಕಳ ಕನ್ನಡ-ಮರಾಠಿ-ಉರ್ದು ಪ್ರಾಮರಿ ಸ್ಕೂಲ ಲೀವ್ಹಿಂಗ ಪರೀಕ್ಷೆಯಲ್ಲಿ ಕೆಳಗೆ ಬರೆದವರು ಉತ್ತೀರ್ಣರಾಗಿರುವರು.

ಧಾರವಾಡ ಕೇಂದ್ರ ಕನ್ನಡ

ನಂ.		ಗು.
೨	ಅಲಾಯಸ್ ಖಾನಾಪುರ	೩೪೮
೩	ಅಂಬಕ್ಕ ಕುರುಬೆಟ್ಟ	೩೯೪
೬	ಭಾಗೀರಥಿ ಬಡಿಗೇರ	೪೧೨
೭	ಭೀಮಳ್ಳಿ ಕುಲಕರ್ಣಿ	೩೩೧
೯	ಚಂದ್ರಕಾಂತವ್ವ ಹೊಂಬಳ	೩೦೩
೧೦	ದೇವಕ್ಕ ಬಡಿಗೇರ	೩೧೮
೧೨	ದೇವಕ್ಕಪಾ ಜೋಗಳ	೩೨೭
೧೪	ಎಲ್ಲೂಬಾಯಿ ಚವ್ಹಾಣ	೨೬೨
೧೫	ಗುಲಾಬಿ ಅನವೇಕರ	೩೫೨
೧೭	ಜೀವು ಉಗರಗೋಳ	೩೩೪
೧೮	ಮಾಧಾ ಶೇಡದ	೩೧೨
೨೦	ಪ್ರಾಸ್ಕಿಲಾ ರಾಮಟಗಾಳ	೩೪೧
೨೧	ರೇಣುಕಾ ಹುಲಗೂರ	೩೩೧
೨೨	ಸಣ್ಣಕ್ಕ ಕುಲಕರ್ಣಿ	೨೮೩
೨೩	ಸಾವಿತ್ರಿ ಪುನೀತ	೩೪೭
೨೪	ಸುಲೋಚನಾ ಕರ್ಡಿಮಠ	೨೯೭
೨೫	ಸೇಶೀಲಾಬಾಯಿ ಅಡಿನ	೩೪೧
೨೬	ಸೋಮವ್ವ ಸುಣಗಾರ	೨೯೫
೨೭	ಶಕುಂತಲಾ ನಾಯಡು	೩೨೬

ನಂ.		ಗು.
೪೨	ತುಂಗಾಬಾಯಿ ಕಡೇಮನಿ	೩೪೨
೪೩	ವನಮಾಲಾ ನಾಡಗೀರ	೩೭೩
೪೪	ವಾಸಂತಾ ಲಾಲಸಿಂಗಿ	೩೧೧
೪೫	ವೀರವ್ವ ಇಚ್ಛಂಗಿ	೩೦೫
೪೭	ಅಂಬಕ್ಕ ಮುದವೀಡು	೨೮೦
೪೮	ಎಲ್ಲೂಬಾಯಿ ಕಣಕೂರ	೩೦೦
೪೯	ಗಂಗೂಬಾಯಿ ಜಾಧವ	೩೭೯
೫೪	ಇಂದುಮತಿ ಸೂರ್ಯವಂಶಿ	೩೫೫
೫೫	ಲೂಸಾ ಪುನೀತ	೩೨೦
೫೮	ಸಖೂತಾಯಿ ಮದನಭಾವಿ	೩೧೭
೫೯	ಸಾವಿತ್ರಿ ಹೆಗಡೆ	೩೧೫
೬೩	ಪಾರ್ವತೆವ್ವ ವೋಟೀನವರ	೩೦೬

ಧಾರವಾಡ ಕೇಂದ್ರ ಮರಾಠಿ

೨	ಹೀರಾ ಪ್ರಭು	೩೩೩
೩	ಇಂದುಮತಿ ವೈದ್ಯ	೨೯೫
೪	ಜೀವನ ಫೋಂಡೆಕರ	೩೭೯

ನಂ		ಪು.
೫	ವ್ಯಾಣಿ ರಾಮಸಾಧಕರ	೩೧೩
೧೦	ಮಸೋರಮಾ ಪಿಂಗೆ	೩೮೦

ಹುಬ್ಬಳ್ಳಿ ಕೇಂದ್ರ ಕನ್ನಡ

೧	ಬಾಲೆವ್ವ ಉಳ್ಳಿ	೩೧೨
೨	ಬಸವ್ವ ದಾನಪ್ಪನವರ	೩೩೮
೩	ಚಂಪಾವತಿ ಪಟ್ಟಿ	೩೪೫
೪	ದೇವಕ್ಕೆವ್ವಾ ಪಾಸ್ತೋ	೩೬೩
೬	ಎಲಿಝಾಬೆಥ ಉರ್ಫ ಬಾಳವ್ವಾ ಧಾವಜೆ	೩೧೮
೭	ಗಂಗವ್ವಾ ಕಾಜಗಾರ	೩೧೧
೮	ಗೌರವ್ವಾ ಕೊರ್ಲಹಳ್ಳಿ	೩೦೭
೯	ಗೌರವ್ವಾ ಶಾಸ್ತ್ರಿ	೩೫೯
೧೧	ಗುಲಾಬಿ ನಲವಡಿ	೩೯೮
೧೩	ಹಣಮವ್ವ ಫಕೀರಪ್ಪ	೩೧೨
೧೯	ಲಕ್ಷ್ಮೀಬಾಯಿ ಖಾಂಡಕಲ	೩೭೫
೨೯	ಪುಷ್ಪಾವತಿ ಕೊಲ್ಹಾಪುರ	೩೧೪
೩೦	ಪುಷ್ಪಾವತಿ ಬೆಳಮಕರ	೨೯೨
೩೧	ರತ್ನಮ್ಮ ಹರಿಗಾಲ	೩೧೧
೩೨	ರೋಸಾ ಬೋಗಾರ್ಯಾಯಿ	೩೩೭
೩೬	ಸೇರಾಬಾಯಿ ಉತ್ತಂಗಿ	೩೨೧
೩೭	ಶಂಕುಂತಲಾ ಯಾರ್ಕದ	೨೯೪
೪೩	ಸೀತಾಬಾಯಿ ಕಾಮತ	೩೪೦
೪೪	ಸುಶೀಲಾ ತೆಗ್ಗಿನಹಳ್ಳಿ	೩೨೫
೫೦	ವೀರವ್ವ ಉಮ್ಮಾಬಾದಿ	೩೧೨

ಹುಬ್ಬಳ್ಳಿ ಕೇಂದ್ರ ಮರಾಠಿ

೨	ಗಂಗೂ ರೇಗೆ	೪೬೧
೩	ಇಂದೂ ಶೇಟಕೆ	೪೪೪

ನಂ.		ಪು.
೪	ಇಂದೂ ಪಾಠಕ	೪೪೪
೫	ಇಂದೂ ಕರಮರಕರ	೪೪೪
೬	ಇಂದುಮತಿ ಕರಂದೀಕರ	೪೪೪
೮	ಕುಸುಮ ಗೋಖಲೆ	೪೪೪
೯	ಮನು ಕಾಳೆ	೪೪೪
೧೦	ಮುಕ್ತಾಬಾಯಿ ಗೋಕಣ	೪೪೪
೧೨	ಶಾಂತಾ ಬೇಡೇಕರ	೪೪೪
೧೩	ಸೀತಾ ಕುಲಕರ್ಣಿ	೪೪೪
೧೪	ತುಳಸಾ ಪಾಟೋಳೆ	೪೪೪

ಗದಗ ಕೇಂದ್ರ ಕನ್ನಡ

೧	ಅಕ್ಕವ್ವ ಕುಲಕರ್ಣಿ	೪೪೪
೨	ಅಸಸೂಯಾ ಶಿವಪ್ಪಯ್ಯನಮಠ	೪೪೪
೫	ಜಂಪುಬಾಯಿ ನಿರಂಜನ	೪೪೪
೬	ದಾನವ್ವ ಕಂಬಳಿ	೪೪೪
೧೧	ಗೌರವ್ವ ಹುಬ್ಬಳ್ಳಿ	೪೪೪
೧೨	ಗಂಗೂತಾಯಿ ಬಾಪಟ	೪೪೪
೧೪	ಗೋದಾವರೀ ದೇಶಪಾಂಡೆ	೪೪೪
೨೦	ಕೃಪಾಬಾಯಿ ಬಾರಾಟಂಕಿ	೪೪೪
೨೧	ಕಮಲಾಬಾಯಿ ನೀಲಗಾರ	೪೪೪
೨೫	ಕೃಷ್ಣಾಬಾಯಿ ಕುರ್ತಕೋಟಿ	೪೪೪
೩೦	ಪುಷ್ಪಾವತಿ ಬೋವೇರ	೪೪೪
೩೪	ರೋಸಾ ಝಳಕಿ	೪೪೪
೩೬	ಸಾವಿತ್ರಿ ಹುಲಮನಿ	೪೪೪
೩೭	ಸಖುಬಾಯಿ ಕುಲಕರ್ಣಿ	೪೪೪
೩೮	ಶಕುಂತಲಾ ಗಲಗಲಿ	೪೪೪

ನಂ.		ಗು.
೪೧	ವೀರವ್ವ ಹುಣಶೀಮರದ	೨೯೪
೪೨	ವಿಠುಬಾಯಿ ಚಿಕ್ಕೊರ್ಡೆ	೩೯೩

ಬೆಳಗಾಂವಿ ಕೇಂದ್ರ ಕನ್ನಡ

೨	ಉದಾಬಾಯಿ ಬೆಳ್ಳಂಕಿ	೩೩೩
೪	ಗುಂಡಕ್ಕ ಲೋಕಾಪುರ	೩೨೬
೭	ತುಳಸಾಬಾಯಿ ಅನಂತ	೩೮೭
೧೦	ಮೇರಿ ಬುಧಾರಪುರ	೩೨೪
೧೧	ರಾಯವ್ವ ಹುಗ್ಗಿ	೨೮೫
೧೪	ವೇಣೂತಾಯಿ ಜೋಶಿ	೨೫೬
೧೫	ಶಾಂತಾಬಾಯಿ ಕಾರ್ವೆಕರ	೨೭೩
೧೭	ಸಾಲೋಮಿ ಅಲಾದ	೩೦೩
೧೮	ಸತ್ತೆವ್ವ ಕಾಡಾಪುರ	೩೦೦
೧೯	ಸಾಹೇಬಿ ತೇರದಾಳ	೨೬೦
೨೦	ಸುಶೀಲಾ ಘಟಕಾಂಬಳೆ	೩೦೪
೨೧	ಸುಶೀಲಾತಾಯಿ ಪವಾರ	೩೧೯
೨೫	ಸೋಸೂಬಾಯಿ ಜೇರಿ	೨೯೬
೨೬	ಹನ್ನವ್ವ ಗುಜನಾಳ	೨೬೭
೨೭	ಹವಳವ್ವ ಕೊಣ್ಣೂರ	೨೭೧
೨೮	ಹೊನ್ನವ್ವ ನಾಗನೂರ	೩೨೩
೨೯	ಗಂಗು ಪಾಟೀಲ	೩೯೬
೩೦	ಎಲಿಝಾಬೆಥ್ ಬೆಳ್ಳಿಕಟ್ಟಿ	೩೯೦
೩೧	ತುಂಗವ್ವ ಮಗದುಮ್ಮ	೪೧೬
೩೨	ಲೀಲಾಬಾಯಿ ಬಾಳಿಗಡ್ಡಿ	೩೭೧
೩೩	ಸಾವಿತ್ರಿಬಾಯಿ ಘೊಂಗಿ	೪೭೬
೩೪	ಸುಶೀಲಾ ಚಂಗಿ	೪೩೯
೩೫	ಸೋನೂ ಕುಲಕರ್ಣಿ	೩೬೮

ಬೆಳಗಾವ ಕೇಂದ್ರ ಮರಾಠಿ

೩	ಇಂದಿರಾಬಾಯಿ ಇಂಗಳೆ	೩೧೪
೪	ಇಂದು ಜೋಶಿ	೩೫೫
೫	ಇಂದುಮತಿ ಶ್ರಂಗಾರಪುರೆ	೩೮೭
೬	ಕಮಲ ವ್ಹಾಟಕರ	೩೪೧
೯	ಕಾಶೀತಾಯಿ ಚಂದೂರಕರ	೩೬೭
೧೦	ಕಾಶೀಬಾಯಿ ದೇಸಾಯಿ	೩೪೭
೧೩	ಕೃಷ್ಣಾಬಾಯಿ ಕರಂಬಳಕರ	೩೩೯
೧೪	ಕೃಷ್ಣಿ ಅಮಂಗಿ	೩೬೭
೧೫	ಕೃಷ್ಣಿ ಚಿಕ್ಕೊರ್ಡೆ	೩೫೭
೧೬	ಚಂಪಾವತಿ ಖೋತ	೩೩೧
೧೮	ಜೀಜಾಬಾಯಿ ಜುವೇಕರ	೩೮೭
೧೯	ಜ್ಯೂಲಿಯೆಟ್ ಅರಳಿಕಟ್ಟಿ	೩೨೭
೨೦	ಭಾಗೀರಥಿ ತಿನಾಯಿಕರ	೪೧೭
೨೧	ಯಮುಬಾತಾಯಿ ವಾಡಕರ	೩೪೭
೨೨	ಯಮುನಾ ಬೀಡೀಕರ	೩೨೧
೨೩	ರತನ ಗಿರ್ಧರ	೩೬೩
೨೬	ಲೀಲಾ ಜಾಧವ	೨೯೩
೨೭	ಲೀಲಾ ಬೆಟಗೇರಿ	೩೬೬
೩೦	ವತ್ಸಲಾ ಶಹಾ	೩೪೫
೩೧	ವತ್ಸಲಾ ಗುರಿಯೆ	೩೨೩
೩೨	ವಿಮಲ ವಿಭೂತಿ	೨೯೭
೩೩	ವಿಮಲ ದಳವಿ	೩೨೧
೩೫	ಶಕುಂತಲಾ ನಿಂಬಾಳಕರ	೨೯೩
೩೯	ಸಖುಬಾಯಿ ಪಾಟೀಲ	೩೧೭
೪೦	ಸಿಂಧುಬಾಯಿ ಖಾನಾಪುರಕರ	೩೭೫
೪೧	ಸುಭದ್ರಾ ಸೈದಾ	೩೯೯
೪೨	ಸುಭದ್ರಾ ಕುಲಕರ್ಣಿ	೪೧೦
೪೩	ಸುಲೋಚನಾ ಮುಂಡೆ	೩೧೯
೪೬	ಸುಶೀಲಾ ರಾಗಿ	೨೯೮

ನಂ.		ಗು.
೪೭	ಸುಶೀಲಾ ಜೋಶಿ	೩೧೭
೪೮	ಸುವರ್ಣಾ ಬಾಡಕತ	೩೩೫
೪೦	ಹೀರಾ ವಾಡಕರ	೩೩೬
೪೩	ಭಾಗೀರಥಿ ಕುಲಕರ್ಣಿ	೨೯೭
೪೪	ಮಧುರಾ ಸೌಂದಲಗೀಕರ	೩೦೨
೪೫	ರಾಧಾಬಾಯಿ ಘೋಡೆ	೪೪೩
೪೬	ಶಾಂತಾ ಮಾನೆ	೩೦೩
೪೮	ಪ್ರಮಿಲಾ ಪಡಗಾಂವಕರ	೩೧೪
೪೯	ಲೀಲಾವತಿ ಕಾಳೆ	೩೦೪

ವಿಜಾಪುರ ಕೇಂದ್ರ ಕನ್ನಡ

೪	ಗದಿಗೆವ್ವ ಹಿರೇಮಠ	೩೨೭
೪	ಇಂದಿರಾಬಾಯಿ ದೇಸಾಯಿ	೩೬೦
೯	ಜಾನಕಿ ಸೂರ್ಯವಂಶಿ	೩೦೨
೧೦	ಕಾಳವ್ವ ಮಠದ	೨೭೩
೧೧	ಕಮಲಾಬಾಯಿ ಬಿಜ್ಜೂರಕರ	೩೦೯
೧೬	ಪಾರ್ವತೆವ್ವ ಕುರಹಟ್ಟಿ	೩೪೭
೧೪	ರತ್ನಾಬಾಯಿ ಘೋರ	೨೪೯
೧೯	ಸಖುಬಾಯಿ ಶಿಂಪಿ	೩೬೪
೨೦	ಸಂಗವ್ವ ಮೆಂಢೆಗಾರ	೩೨೦
೨೨	ಸರೋಜಿನಿ ಮನಗೂಳಿ	೩೧೨
೨೪	ಶಾಂತಾ ಸಿಂಧೆ	೩೪೨
೩೧	ಯಮುನವ್ವ ತಿಕೋಟ	೩೨೩

ವಿಜಾಪುರ ಕೇಂದ್ರ ಮರಾಠಿ

೬	ರತ್ನಮಾಲಾ ದೋಶಿ	೩೨೫
೪	ಶಾಂತಾ ಪುರಾಣಿಕ	೨೪೧
೯	ಶಾರದಾಬಾಯಿ ನಾಸಿಕಕರ	೩೫೯

ಕಾರವಾರ ಕೇಂದ್ರ ಕನ್ನಡ

೧	ಅಡವಿ ಶಂಕರಯ್ಯ	೨೯೧

ನಂ.		ಗು
೨	ಅಹಲ್ಯಾಬಾಯಿ ಹೆಗಡೆ	೪೧೦
೩	ದೇವಸಗಾನೆ ಹೊಸಮನಿ	೩೫೭
೫	ಗಂಗಾಬಾಯಿ ಪಂಡಿತ	೩೩೫
೯	ಗೌರಿ ನಾಯಕ	೨೯೪
೧೦	ಗೋಕುಲಾಬಾಯಿ ಶೇಣ್ವೈ	೩೨೯
೧೧	ಹೀರಾಬಾಯಿ ವಕೀಲ	೩೨೭
೧೩	ಹೆಲ್ಮೆ ಕುಮಾರ	೩೩೨
೧೭	ಕಮಲಾ ರಾನಿ	೩೧೨
೧೪	ಕುಸುಮ ಕುಲಕರ್ಣಿ	೩೭೬
೧೯	ಲಕ್ಷ್ಮಿ ಚಂದಾವರ	೩೭೯
೨೦	ಮಾಹಾನಂದಾ ನಾರ್ವೆಕರ	೩೦೭
೨೧	ಮಾದೇವಿ ಹೆಗಡೆ	೩೪೫
೨೬	ಸೇತಾವತಿ ಶೆಟ್ಟಿ	೩೨೨
೨೭	ಪಾರ್ವತಿ ಬಾಕಡ	೩೨೬
೨೪	ರತ್ನಾ ಶೆಟ್ಟಿ	೩೨೬
೨೯	ರುಕ್ಮಿಣಿ ನಾಯಕ	೩೪೫
೩೧	ಸರಳಾದೇವಿ ದೇವ	೨೪೨
೩೫	ಸುಮತಿ ಕಾಮತ	೩೭೧
೩೪	ಸುಮಿತ್ರಾಬಾಯಿ ಭೋಮಕರ	೩೩೨
೪೦	ಶಾಂಭವಿ ಶಾನಭಾಗ	೩೩೧
೪೩	ತಾರಾಬಾಯಿ ಹೆಗಡೆ	೪೦೦
೪೫	ವಡಮಹಾಲಕ್ಷ್ಮಿ ಜೇಂಭೆ	೩೨೫
೪೬	ವತ್ಸಲಾಬಾಯಿ ಪೈ	೩೧೪
೪೭	ವಿಮಲಾ ಮಹಾಲೆ	೩೩೦

ಕಾರವಾರ ಕೇಂದ್ರ ಮರಾಠಿ

೧	ಅನರೋಜಾ ಆಲಫಾನ್ಸೊ	೩೪೯
೨	ಅನಂದಿ ನಾಡಕರ್ಣಿ	೩೯೭

ನಂ.	ಗು.
೩ ಬಿಮಲಾ ಪ್ರಭು	೩೯೦
೪ ದುರ್ಗಾಬಾಯಿ ಪಿಂಗೆ	೩೩೯
೫ ಗಂಗಾ ಬೋರಕರ	೩೭೧
೬ ಗುಲಾಬ ತೆಲಂಗ	೨೮೭
೭ ಗುಲಾಬಿ ಸೊಹನಿ	೨೮೫
೮ ಗೋದಾವರಿ ಪಂಡಿತ	೩೫೨
೯ ಇಂದಿರಾ ನಾಡಕರ್ಣಿ	೩೧೯
೧೦ ಇಂದಿರಾ ಮಂತ್ರಿ	೩೫೦
೧೧ ಇಂದಿರಾ ಪೈ	೩೪೮
೧೨ ಇಂದುಮತಿ ಕಾಮತ	೩೪೬
೧೩ ಕಮಲ ದೇವಸಹಳ್ಳಿ	೩೨೪
೧೪ ಕಮಲ ಪಾಲಕರ	೩೫೨
೧೫ ಕುಸುಮ ನಾಡಕರ್ಣಿ	೩೪೨
೧೬ ಲೀಲಾ ಸುತಾರ	೩೧೨
೧೭ ಲೀಲಾ ತೆಲಂಗ	೩೩೪
೧೮ ಮನೋರಮಾ ಜೋಶಿ	೪೩೧
೧೯ ಪ್ರೇಮಾ ಪಿಚಕಡ	೨೭೨
೨೦ ಪ್ರೇಮಾ ಬೋರಕರ	೩೪೪
೨೧ ರಮಾ ಭಟ್ಟ	೩೯೪
೨೧ ರತ್ನಾ ಕೈಕಿಣಿ	೪೭೧
೨೨ ಸರೋಜಿನಿ ಅಂಕೋಲೆಕರ	೩೮೦
೨೩ ಸಾವಿತ್ರಿ ನಾಯಕ	೩೭೯
೨೪ ಸುಮಂಗಲಾ ಪ್ರಭು	೩೪೪
೨೫ ಸುನಂದಾ ಧಾರೇಶ್ವರ	೪೪೨
೨೬ ಸುಶೀಲಾ ಗೋಕರ್ಣ	೩೧೬
೨೧ ಶಾಲಿನಿ ಹೊಸಮೇಲಕರ	೨೯೪
೨೨ ಶಾಲಿನಿ ಬೋರಕರ	೪೧೪
೨೩ ಶಾಂತಾ ಪಂಡಿತ	೩೦೩

ನಂ.	ಗು
೪೪ ಶಾಂತಾಬಾಯಿ ಮುಜಮುದಾರ	೩೪೪
೪೫ ತಾರಾ ಬೋರಕರ	೩೦೪
೪೭ ಯಮುನಾಬಾಯಿ ಕುರಡೇಕರ	೩೩೦

ಕೊಲ್ಹಾಪುರ ಕೇಂದ್ರ ಮರಾಠಿ

೨ ಅಸಸೂಯಾ ಪೊಂಕಶೆ	೩೯೨
೩ ಅಂಬು ವಾಟವೆ	೩೩೧
೫ ಅಕ್ಕುತಾಯಿ ಜಾಧವ	೩೬೬
೬ ಆನಂದೀಬಾಯಿ ಸಾವಂತ	೨೮೩
೭ ಅಂಬುತಾಯಿ ಲೇಲೆ	೨೭೯
೮ ಇಂದು ಘಾಟಕ	೨೭೫
೯ ಇಂದು ಜಮದಗ್ನಿ	೨೭೩
೧೦ ಇಂದು ಕವಠೇಕರ	೩೨೨
೧೨ ಇಂದುತಾಯಿ ದಿವಾಣ	೨೮೪
೧೫ ಕಮಲ ಭಾವೆ	೩೧೧
೧೬ ಕಸ್ತೂರಿ ಭೋರೆ	೩೨೨
೧೭ ಕಾಶೀಬಾಯಿ ಸೋನಾರ	೩೧೦
೧೯ ಕುಸುಮ ಕಾಳೆ	೩೪೨
೨೧ ಕುಸುಮ ಸಾವಂತ	೩೧೨
೨೨ ಕೃಷ್ಣಾತಾಯಿ ಗದ್ರೆ	೩೨೬
೨೩ ಕೃಷ್ಣಾತಾಯಿ ಲಾಕೋಳೆ	೨೯೩
೨೪ ಗಂಗೂತಾಯಿ ಜೋಶಿ	೩೧೬
೨೬ ಗಂಗೂತಾಯಿ ಬಾಪಟ	೨೪೭
೨೭ ಗಂಗೂತಾಯಿ ಕುಲಕರ್ಣಿ	೩೦೦
೩೦ ಚಂಪಾ ಗಾಂಧಿ	೨೭೨
೩೧ ಜನಾಬಾಯಿ ಜಾಧವ	೨೭೬
೮	ಬೆಳಗಾವ ಡಿ. ಸ್ಕೂ. ಬೋ.	ಎಸ್. ಜಿ. ಹಿರೇಮಠ	ಕೆ. ಎಂ. ಚಾಟ್‌ಫೀಲ್ಡ ಮೆಮೋರಿಯಲ್ ಪ್ರಾಯಿಜ಼ು ಜನರಲ್ ಪ್ರೋಫಿಸಿಯನ್ಸಿ	೧೬—೦—೦

ಬಾಲದಿನ

ಪ್ರಾಕ್ಟೀಸಿಂಗ್‌ಸ್ಕೂಲಿನ ಬಾಲಕರು ತಮ್ಮ ವಾರ್ಷಿಕ ಪರೀಕ್ಷೆಯಾದ ನಂತರ ಬಾಲದಿನವನ್ನು ನೆರವೇರಿಸುವದಕ್ಕೆ ಒಪ್ಪಿಗೆ ಕೊಡಬೇಕೆಂದು ಹೆಡ್ ಮಾಸ್ತರರನ್ನು ಕೇಳಿಕೊಂಡರು. ಅವರಿಗೆ ಯೋಗ್ಯತರದ ಸಲಹೆಗಳೊಂದಿಗೆ ಅಪ್ಪಣೆ ಯನ್ನು ಕೊಡಲಾಯಿತು.

ನಾಲ್ಕೈದು ದಿವಸಗಳೊಳಗಾಗಿಯೆ ವಿದ್ಯಾರ್ಥಿಗಳು ಆಟನೋಟಗಳ ಸಿದ್ಧತೆಯನ್ನು ಮಾಡಿಕೊಂಡರು. ಹಿರಿಯರಲ್ಲಿ ಹಿರಿಯರೂ ಬಾಲಕರಲ್ಲಿ ಉತ್ಸಾಹ ಶಾಲಿಗಳಾದ ಬಾಲಕರೂ ಆಗಿ ನಡೆಯಬಲ್ಲ ಧಾರವಾಡ ನಗರದ ಸ್ಕೂಲಬೋರ್ಡಿನ ಕೇಅರಮನ್‌ರಾದ ಶ್ರೀ. **ಎಲ್. ಆರ್. ಮಂಕಣಿ**ಯವರು ಅಧ್ಯಕ್ಷರಾಗಲು ಒಪ್ಪಿದರು.

ತಾರೀಖು ೬೯-೪-೧೯೪೧ ನೆಯ ದಿವಸ ಮುಂಜಾವಿನಲ್ಲಿ ಟ್ರೇನಿಂಗ್ ಕಾಲೇಜದ ಬಯಲಲ್ಲಿ ವಿದ್ಯಾರ್ಥಿಗಳ ಆಟನೋಟಗಳಾದವು. ಶಿಕ್ಷಕರ ಹಾಗೂ ಬಾಲಕರ ಕೈಕೆಲಸಗಳನ್ನು ಅತಿಥಿಗಳ ನಿರೀಕ್ಷಣೆಗಾಗಿ ಒತ್ತಟ್ಟಿಗೆ ಇಟ್ಟಿತ್ತು. ಸಂಜೆಗೆ ಜನರಲ್ ಹಾಲಿನಲ್ಲಿ ಸಭೆ ನೆರೆಯಿತು. ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ **ತಾವಡೆ ಸೀತಾರಾಮರಾಯರೂ** ಊರೊಳಗಿನ ಹಲವರು ಮಾನ್ಯ ಸಭ್ಯಗೃಹಸ್ಥರೂ ಸಭೆಗೆ ಆಗಮಿಸಿದ್ದರು. ಅಸಿಸ್ಟಂಟ್ ಇನ್‌ಸ್ಪೆಕ್ಟರರು, ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಶಿಕ್ಷಕರು, ಮೊದಲಾದವರು, ಸಭೆಗೆ ದಯಮಾಡಿಸಿದ್ದರು, ಅವರೆಲ್ಲರೂ ವಿದ್ಯಾರ್ಥಿಗಳ ವಿವಿಧ ವಿನೋದಗಳನ್ನು ಕಂಡು ಆನಂದಪಟ್ಟು ಬಾಲಕರನ್ನೂ ಶಿಕ್ಷಕವರ್ಗವನ್ನೂ ಪ್ರೋತ್ಸಾಹಿಸಿದರು.

ಟ್ರೇನಿಂಗ್ ಸ್ಕೂಲಿನ ಹೆಡ್ ಮಾಸ್ತರರಾದ ಶ್ರೀಮಾನ್ **ಮಡಿವಾಳ ಮಾಘವೇಂದ್ರರಾಯರು** ಎಲ್ಲರನ್ನು ಸ್ವಾಗತಿಸಿ, ಬಾಲದಿನದ ಮಹತ್ವವನ್ನು ಸ್ವಲ್ಪದರಲ್ಲಿಯೆ ಹೇಳಿದರು. ಆರಂಭದಲ್ಲಿ ಪ್ರಾಕ್ಟೀಸಿಂಗ್‌ಸ್ಕೂಲಿನ ಹುಟ್ಟುಬೆಳವಣಿಗೆ ಈಗಿನ ಸ್ಥಿತಿಗತಿಗಳೆಲ್ಲವನ್ನು ಕುರಿತು ಅವರು ಇಂಗ್ಲಿಷಿನಲ್ಲಿ ಪ್ರಸ್ತಾಪಿಸಿದರು. ಕರುವಾಯಿ ಪ್ರಾಕ್ಟೀಸಿಂಗ್‌ಸ್ಕೂಲಿನ ಹೆಡ್ ಮಾಸ್ತರರಾದ ಶ್ರೀಮಾನ್ ಕುರಡಿ ನಾರಾಯಣರಾಯರು ಮಾಡಿದ ಭಾಷಣದ ಸಾರಾಂಶವು ಹೀಗೆ ಇದೆ :—

" ವರ್ಷಾನುವರ್ಷ ಕಲಿತು ಜಾಣರಾದ ಶಾಲೆಯ ಬಾಲಕರಲ್ಲಿ ತಮ್ಮ ಜಾಣ್ಮೆಯನ್ನೂ ಉತ್ಸಾಹವನ್ನೂ ತಮ್ಮ ತಮ್ಮ ಇಷ್ಟಮಿತ್ರರಿಗೂ ಪಾಲಕರಿಗೂ ಒಂದು ದಿನವಾದರೂ ತೋರಿಸಬೇಕೆಂದು ಹಂಬಲವಿರುವದು ಸಹಜವು. ಇದಕ್ಕೆ ಅನುಕೂಲವಾಗಿ ವಿದ್ಯಾರ್ಥಿಗಳ ಉತ್ಸಾಹವು ಕುಗ್ಗದಂತೆ ಇಂಥ ಬಾಲದಿನದ ವಿಹಾರಾಡನ್ನು ಶಿಕ್ಷಕರು ಮಾಡಿಕೊಟ್ಟರೆ ಅವರು ಅಭ್ಯಾಸ ಪತ್ರಿಕೆಯ ಮರ್ಯಾದೆಯನ್ನು ಮೀರಿದಂತೆ ಆಗಲಾರದು, ಇಷ್ಟೇ ಅಲ್ಲ; ಈತರದ ಕಾರ್ಯಕ್ರಮವು ಹೊಸ ಅಭ್ಯಾಸ ಪತ್ರಿಕೆಯ 'ಪೌರನೀತಿ' ಎಂಬ ವಿಷಯದಲ್ಲಿಯೇ

ಸಮಾವೇಶವಾಗುವದು. ಇಂಥ ಹಬ್ಬಗಳನ್ನು ಮಾಡುವದರಿಂದ ಊರಲ್ಲಿ
ಹಿರಿಯರಿಗೂ ಪಾಲಕರಿಗೂ ಶಿಕ್ಷಕರಿಗೂ ಪರಿಚಯ-ಸಹಕಾರಗಳು ಬೆಳ
ಶಾಲೆಯಲ್ಲಿ ನಡೆದ ಶಿಕ್ಷಣದ ಪ್ರಗತಿಯನ್ನು ನಿರೀಕ್ಷಿಸಲು ಅನುಕೂಲವಾಗುವ

ವಿದ್ಯಾರ್ಥಿಗಳ ವಿವಿಧ ವಿನೋದಗಳು ಮಕ್ಕಳಿಗೆ ಸಹಜವಾದ ರೀತಿಯಲ್ಲಿ
ಇರಬೇಕು. ಅವು ದೊಡ್ಡವರ ಸಭೆ, ಸಮ್ಮೇಲನ, ಚರ್ಚೆಗಳ ಪ್ರತಿಬಿಂಬವಾ
ಕೂಡದು. ಇಂದಿನ ಕಿರಿಯರೆ ನಾಳಿಗೆ ಹಿರಿಯರು. ಇವರಿಗೆ ಎಲ್ಲ ಬಗೆ
ಶಕ್ತಿಗಳಿವೆ, ಜಾಣ್ಮೆಯಿದೆ, ತೇಜಸ್ಸಿದೆ, ಅಭಿಮಾನವಿದೆ, ಇವೆಲ್ಲವುಗಳಿಗೆ ತ
ಮಟ್ಟಿಗೆ ಉತ್ತೇಜನ ದೊರೆಯಬೇಕಾದರೆ ಬಾಲದಿನದಂಥ ಹಬ್ಬಗಳು ಅವಶ್ಯವ
ನಡೆಯಬೇಕು. ಜೀವನ ಕಲಹದಲ್ಲಿ ಪುಸ್ತಕೀಯ ಜ್ಞಾನವೊಂದೇ ಸಾಲ
ವ್ಯವಹಾರಜ್ಞಾನವು ಅವಶ್ಯವಾಗಿ ಬೇಕು. ಅದು ಶಾಲೆಯನ್ನು ಬಿಟ್ಟ ದಿವಸ
ಬರತಕ್ಕ ವಿಷಯವಲ್ಲ. ಅಡನ್ನಾದರೂ ಕ್ರಮವಾಗಿಯೇ ದೊರಕಿಸಬೇಕಾಗುತ್ತ
ಕೇಳಿ, ನೋಡಿ, ಮಾತಾಡಿ, ಮಾಡಿ, ಕಲಿಯುಲಿಕ್ಕೂ ಕಲಿತದ್ದನ್ನು ಪರ
ತೋರಿಸಿ, ತಾವೂ ಆನಂದಬಟ್ಟು ಪರರನ್ನೂ ಆನಂದಪಡಿಸಲಿಕ್ಕೂ ಶಾಲೆ
ಮಕ್ಕಳಿಗೆ ಇಂದಿನ ಬಾಲ ದಿನದಂಥ ಸಂದರ್ಭಗಳು ಆಗಾಗ ಬೇಕು. ಅದ
ಒದಗಿಸಿಕೊಡುವದು ಶಿಕ್ಷಕರ ಕರ್ತವ್ಯವು. ಈ ಕರ್ತವ್ಯಾನುರೋಧದಿಂದಲೇ ನ
ಈ ಸಮಾರಂಭವನ್ನು ನೆರವೇರಿಸಲು ಬಾಲಕರಿಗೆ ಅನುಕೂಲತೆ ಮಾಡಿಕೊಡಬೇ
ಯಿತು.'' ಇತ್ಯಾದಿ.

ಕೊನೆಗೆ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾಗಿ ಮೊದಲನೆಯ ನಂಬರ
ಪಡೆದವರಿಗೂ ವಿವಿಧ ವಿನೋದಗಳಲ್ಲಿ ಜಾಣ್ಮೆಯನ್ನು ತೋರಿಸಿದವರಿಗೂ ಪುಸ
ಗಳ ಮೆಚ್ಚುಗೆಯನ್ನು ಅಧ್ಯಕ್ಷರ ಹಸ್ತದಿಂದ ಕೊಡಿಸಿ ಎಲ್ಲರಿಗೂ ಮಿಠಾ
ಹಂಚಿದ ನಂತರ ಸಭೆಯ ಕೆಲಸವು ತೀರಿತು.

ಪತ್ರಗಳ ಮುಖ್ಯಾಂಶಗಳು

೧. **ನಿಡಗುಂದಿ** (ಧಾರವಾಡ) "ತಾರೀಖು ೧೬-೩-೧೯೪೧ನೆಯ ದಿ
ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ಈ ಭಾಗದ ಶಿಕ್ಷಕ-ಶಿಕ್ಷಕಿಯರ ಸಮೆ
ಲನವು ಮೆ. ಲನೆಯ ಅ. ಡೆ. ಎ. ಇ. ಧಾರವಾಡ ಇವರ ನೇತೃತ್ವದಲ್ಲಿಯ
ಅಧ್ಯಕ್ಷತೆಯಲ್ಲಿಯೂ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಲಕ್ಕೆ ಊರೊಳ
ಪ್ರತಿಷ್ಠಿತರೂ ಸ್ಕೂಲ್ ಕಮಿಟಿಯ ಸದಸ್ಯರೂ ಬಂದಿದ್ದರು. ಇಷ್ಟೇ ಅ
ಧಾರವಾಡ-ಕರ್ನಾಟಕ-ಕಾಲೇಜಿನ ಪ್ರೊಫೆಸರರಾದ ಶ್ರೀಮಾನ್ ಭೂಸನೂ
ಮಠ ಇವರೂ ಆಗಮಿಸಿದ್ದರು. ಸ್ವಾಗತ ಪದ್ಯಗಳನ್ನು ಅಸ್ಸುವದು, ಅಧ್ಯಕ್ಷರನ

ಸುವದು, ನಿಬಂಧವಾಚನ, ಮಾದರಿಯ ಪಾಠಗಳು, ಸಂಭಾಷಣ, ಪ್ರಹಸನ, ಯಾಮ, ಆಟ, ವಿನೋದ, ಏಕಾಂಕ ನಾಟಕ, ಶಿಕ್ಷಣೋಪಯುಕ್ತ ಉಪ ಗಳ ಪ್ರದರ್ಶನ ಮೊದಲಾದವು ಮನೋರಂಜಕವಾಗಿಯೂ ಪ್ರೇಕ್ಷಣೀಯ ಯೂ ನಡೆದವು. ಪರಸ್ಥಳದಿಂದ ಒಂದವರಿಗೆ ಈ ಊರ ಹಿರಿಯರು ಊಟದ ಸ್ಥೆಯನ್ನು ಮಾಡಿದ್ದರು. " ಎಂದು ಅಲ್ಲಿಯ ಅ. ಮಾಸ್ತರರಾದ ಶ್ರೀ. ಭಾವಿ ಪ್ಪನವರು ತಿಳಿಸುತ್ತಾರೆ.

೨. **ವಿಜಾಪುರ ಸೆಟಲ್‌ಮೆಂಟ ಸ್ಕೂಲ್**:—"ಪುಣೆಯಲ್ಲಿರುವ ಮುಂಬಯಿ ಶಯ ಬ್ಯಾಕ್‌ವರ್ಡ್ ಕ್ಲಾಸಿನ ಆಫೀಸರರಾದ ಶ್ರೀಮಾನ್ ಪೀ. ಜೇ. ಗಾಂಧಿ ರು ಕಳೆದ ಮಾರ್ಚ ತಿಂಗಳ ೧೨ ಮತ್ತು ೧೩ನೆಯ ತಾರೀಖಿನ ದಿವಸಗಳಲ್ಲಿ ಶಾಲೆಗೆ ಒಂದಿದ್ದರು. ಆಗ ಇಲ್ಲಿಯ ಸ್ಕೌಟ್, ವ್ಯಾಯಾಮ ಶಿಕ್ಷಣ, ಕ್ಷಣ ಪಾಠ, ನೂಲುವ ವರ್ಗ, ಪ್ರಾಥಮಿಕ ಶಿಕ್ಷಣ ಮೊದಲಾದವುಗಳನ್ನು ಕಂಡು ನಂದಭರಿತರಾಗಿ ವಿದ್ಯಾರ್ಥಿಗಳ ವನಭೋಜನಕ್ಕಾಗಿ ೨೫ ರೂಪಾಯಿಗಳನ್ನು ಟ್ಟರು. ಮರುದಿವಸ ಇಬ್ರಾಹಿಮ ರೋಜದ ಹತ್ತರ ಸುಗ್ರಾಸ ಭೋಜನ ನ್ನು ಕೊಡಲಾಯಿತು " ಎಂದು ಅಲ್ಲಿಯ ಹೆಡ್‌ಮಾಸ್ತರರು ತಿಳಿಸುತ್ತಾರೆ.

೩ **ತೇರಗಾವಿ** (ಕಾರವಾರ ಜಿಲ್ಹೆ) " ತಾರೀಖು ೨೮-೧-೧೯೪೧ನೆಯ ವಸ ಹಳ್ಳಿಯಾಳದ ಶ್ರೀಮಾನ್ ಆನೆಗುಂದಿ ಬಾಳಪ್ಪನವರು ಈ ಊರಲ್ಲಿಯ ಕ್ಕಲುತನದ ಒಲವಿನ ಶಾಲೆಗೆ ಭೆಟ್ಟಿಯನ್ನು ಕೊಟ್ಟರು. ಶಾಲೆಯಲ್ಲಿಯ ಸ್ವಚ್ಛತೆ, ಹ್ಮುಕಟ್ಟುತನ, ವಿದ್ಯಾರ್ಥಿಗಳ ಅಭ್ಯಾಸ ಮೊದಲಾದವುಗಳನ್ನು ಕಂಡು ನಂದಪಟ್ಟು ವಿದ್ಯಾರ್ಥಿಗಳ ಉತ್ತೇಜನಾರ್ಥವಾಗಿ ೪ ರೂಪಾಯಿಗಳನ್ನು ಟ್ಟರು. ತಾರೀಖು ೨-೨-೧೯೪೧ನೆಯ ದಿವಸ ನಮ್ಮ ಮುಂಬಯಿ ಪ್ರಾಂತದ ಷೋಗ್ಯಖಾತೆಯ ಡಾಯರೆಕ್ಟರ ಸಾಹೇಬರು ತಮ್ಮ ಪತ್ನಿಯವರೊಂದಿಗೆ ಂದು ಶಾಲೆಯ ಕಾರ್ಯಕಲಾಪಗಳನ್ನು ಕಂಡು ಸಮಾಧಾನಪಟ್ಟು ವಿದ್ಯಾರ್ಥಿಗಳ ಲಾಹಾರಕ್ಕೆಂದು ಮೂರು ರೂಪಾಯಿಗಳನ್ನು ಕೊಟ್ಟರು. ತಾ. ೧೧-೩-೧೯೪೧ ಯ ದಿವಸ ಇಲ್ಲಿಯ ಸೇವಾನಿವೃತ್ತ ಸರ್ಕಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಮ. ಕೆ. ಲಾಡ ಇವರ ಅಧ್ಯಕ್ಷತೆಯಲ್ಲಿ ಫಲಾಹಾರವನ್ನು ಕೊಡಲಾಯಿತು. ರಲ್ ಡೆವ್ಹಲೆಪ್‌ಮೆಂಟದ ಡಿವ್ಹಿಜನಲ್ ಇನ್‌ಸ್ಪೆಕ್ಟರರು ಈ ಶಾಲೆಯನ್ನು ಡು ತುಂಬ ಉತ್ತೇಜನವಿತ್ತಿರುವರು. ಮುತ್ತಲಮುರಿ, ಕೇರವಾಡ, ೋಗನಕೊಪ್ಪ ಮೊದಲಾದ ಸುತ್ತಲಿನ ಹಳ್ಳಿಗಳಲ್ಲಿ ಇಲ್ಲಿಯ ಹೆ. ಮಾ. ರಾದ ೀ. ಗಾವಕರರ ಪ್ರಯತ್ನದಿಂದ ಖಾಸಗಿ ಶಾಲೆಗಳು ಆರಂಭವಾಗಿ ಶೈನ್ಯಾಗಿ

ನಡೆದಿವೆ. ಇತ್ಯಾದಿ.'' ಹೀಗೆ ಅಲ್ಲಿಯ ಸ್ಕೂಲ ಕಮೀಟಿಯ ಚೇಅರಮನ್ನ ವ್ಹಾಯಿಸ್ ಚೇಅರಮನ್ನರೂ ತಿಳಿಸುತ್ತಾರೆ.

೪. **ತಡಸ** (ಧಾರವಾಡ ಜಿಲ್ಹೆ) '' ತಾ॥ ೩೦–೩–೧೯೪೧ ನೆಯ ದಿ ಇಲ್ಲಿಯ ಶಾಲೆಯಲ್ಲಿ ಈ ಭಾಗದ ಶಿಕ್ಷಕರ ಸಮ್ಮೇಲನವು ಅ. ಡೆ. ಎ. ಶ್ರೀಮಾನ್ ವ್ಹಿ. ಬಿ. ದೇಸಾಯಿಯವರ ನೇತೃತ್ವದಲ್ಲಿ ನೆರವೇರಿತು. ಸುಮಾ ೩೦ ಶಾಲೆಗಳಲ್ಲಿಯ ೬೦ರಷ್ಟು ಶಿಕ್ಷಕರು ನೆರೆದಿದ್ದರು. ಸಬ್ ಇನಸ್ಪೆಕ್ಟರರ ಶ್ರೀಮಾನ್ ಗೊರವನಕೊಳ್ಳರೂ ಜಿಲ್ಹೆಯ ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಶ್ರೀಮಾನ್ ಜಗತಾಪರೂ ಆಗಮಿಸಿದ್ದರು. ಪಾಠ, ಆಟ, ಭಾಷಣ, ಚಹ ಪೆಚ್ಚಿಗೆ ಕೊಡುವದು ಮೊದಲಾದವುಗಳು ಜೆನ್ನಾಗಿ ನಡೆದವು '' ಎಂದು ಅಲ್ಲಿ ಅ. ಮಾ. ರಾದ ಶ್ರೀ. **ವೆ. ಬಾ. ಅಂಬಿ**ಯವರು ತಿಳಿಸುತ್ತಾರೆ.

೫. **ಅಮ್ಮಿನಭಾವಿ** (ಧಾರವಾಡ ಜಿಲ್ಹೆ) '' ತಾ॥ ೨೮–೩–೪೧ ನೆ ದಿವಸ ಇಲ್ಲಿಯ ಶಾಲಾ ಬಾಲ-ಬಾಲಿಕೆಯರ ಪಂದ್ಯಾಟವು ಶ್ರೀಮ ಬಲ್ಲಾಳರಾವ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹವಾಲದ ರಾದ ಶ್ರೀಮಾನ್ ಶಿರೂರ ಇವರೂ ಶ್ರೀ. ಬಡಿಗೇರ ಅಕ್ಕುಬಾಯಿಯವ ಉಳಿದ ಶಿಕ್ಷಕರೂ ಮೆಚ್ಚುಗೆಯನ್ನು ಕೊಡಲು ತಕ್ಕ ವಸ್ತುಗಳ ಪೂರೈಸಿದರು.

ತಾರೀಖು ೬–೪–೪೧ ನೆಯ ದಿವಸ ಗರಗದಲ್ಲಿ ಜರುಗಿದ ಪಂದಾ ಗಳಲ್ಲಿ ಇಲ್ಲಿಯ ಬಾಲ-ಬಾಲಿಕೆಯರು ಬಹಳ ಮೆಚ್ಚುಗೆಗಳನ್ನು ದೊರ ದುದರ ಅಭಿನಂದನೆಯ ಸಭೆ ಕೂಡಿಸಿ ಉತ್ತೇಜನಾರ್ಥವಾಗಿ ಗ್ರಾಮಪಂ ಯತಿಯ ಮೆಂಬರರಾದ ಶ್ರೀ. ಪಠಾಣ ಮಹಮ್ಮದಖಾನರು ೧೧ ರೂ. ಹಾ ಅಧ್ಯಕ್ಷರಾದ ಶ್ರೀ. ಎಸ್. ಸಿ. ದೇಸಾಯಿಯವರು ೫ ರೂ. ಕೊಟ್ಟರು. ಹಣದಿಂದ ಬಾಲ ವಾಚನಾಲಯವನ್ನು ತೆರೆಯಬೇಕೆಂದು ಗೊತಾಯಿತು ಎಂದು ಅಲ್ಲಿಯ ಅ. ಮಾ. ಸಂ. ಕ. ಶಿವಯ್ಯನವರು ತಿಳಿಸುತ್ತಾರೆ.

೬. **ಧಾರವಾಡ**ಮ್ಯು. ಕ. ಗ. ಮಂಡಳಿಯ ನಂಬರ ಶಾಲೆ–''ಶ್ರೀಮಾ ಪದುಳೇಕರ ರಾಮರಾಯರು ಎಂ. ಎ. ಎಂ. ಇಡಿ. ಇವರ ಅಧ್ಯಕ್ಷತೆಯ ಮ್ಯುನಿಸಿಪಾಲಿಟಿಯ ಎಲ್ಲ ಶಾಲೆಗಳ ಪಂದ್ಯಾಟವು ತಾ॥ ೮–೨–೪೧ ನೆ ದಿವಸ ನೆರವೇರಿತು. ಆಗ ನಮ್ಮ ಶಾಲೆಯ ಹುಡುಗರು ಹುಡುತುತು, ಖೊ ಕುಂಟ ಮುಟ್ಟಾಟ, ಈ ಮೂರೂ ಆಟಗಳಲ್ಲಿ ಗೆದ್ದುದರಿಂದ ಒಂದು ಶೀ ೩ ಕಪ್ಪುಗಳು, ೧೫ ಮೆಡಲ್ಲುಗಳು, ೧೧ ಅಂಗಿ ಟೊಪ್ಪಿಗೆ, ೪ ಪುಸ್ತಕ

ಮೆಚ್ಚುಗೆಯು ದೊರೆಯಿತು. ಈ ರೀತಿ ಒಂದೇ ಸವನೆ ಮೂರು ವರ್ಷ ಗೆದ್ದು ದರ ಅಭಿನಂದನೆಗಾಗಿ ತಾ॥ ೧೭-೪-೪೧ ನೆಯ ದಿನಸ ನಮ್ಮ ಶಾಲೆಯಲ್ಲಿ ಇಲ್ಲಿಯ ಜೇಅರಮನ್ನರಾದ ಶ್ರೀಮಾನ್ ಮಂಕಣಿ ಇವರ ಅಧ್ಯಕ್ಷತೆಯಲ್ಲಿ ಸಭೆಯಾ ಯಿತು. ಅವರು ಜಯಕರ್ನಾಟಕ ಮಕ್ಕಳ ಸಂಘದ ವಾರ್ಷಿಕ ಪಂದ್ಯಾಟಗಳಲ್ಲಿ ಭಾಗವಹಿಸಿ ಎಲ್ಲ ಶಾಲೆಗಳಿಗಿಂತಲೂ ಹೆಚ್ಚು ಮೆಚ್ಚುಗೆಗಳನ್ನು ಪಡೆದದ್ದಕ್ಕಾಗಿ ನಮ್ಮ ಶಾಲೆಯ ಬಾಲಕರನ್ನೂ ಈ ವಿಷಯದ ಶಿಕ್ಷಕರಾದ ಮಿ. ಅಕ್ಕಿಯವ ರನ್ನೂ ಹೊಗಳಿದರು. ಮೂರು ವರ್ಷ ಒಂದೇಸವನೆ ಮೂರೂ ಆಟಗಳಲ್ಲಿ ಗೆದ್ದುದಕ್ಕಾಗಿ ಕೊನೆಯವರೆಗೂ ಇರಲೆಂದು ಈ ಶಾಲೆಗೆ ಒಂದು ಬೆಳ್ಳಿಯ ಕಪ್ಪನ್ನು ಕೊಟ್ಟರು. ಇಲ್ಲಿಯ ಸಮಕಲ್ಯಾಣಮಂಡಲದ ಶ್ರೀ. ಕುಮಾರ ಸ್ವಾಮಿ ಗಳೂ ಡ್ರಿಲ್ ಮಾಸ್ತರರಾದ ಶ್ರೀ. ಪಟ್ಟಣಶೆಟ್ಟಿಯವರೂ ಉತ್ತೇಜನವಿತ್ತಿರು ವರು. ಬಾಲಕರ ವಿವಿಧವಿನೋದಗಳನ್ನು ಕಂಡು ಪಾಲಕರು ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ,'' ಎಂದು ಅಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ಮುಮ್ಮಿಗಟ್ಟಿ ಯವರು ತಿಳಿಸುತ್ತಾರೆ.

೭. **ಹಾವನೂರು**— (ಧಾರವಾಡ ಜಿಲ್ಲೆ) '' ಇಲ್ಲಿಯ ಶಾಲೆಯಲ್ಲಿಯ ಶ್ರೀ. ಗಂಗಾನಾಥ ಮಾಸ್ತರರು ತಾ॥ ೨೦-೪-೪೧ ನೆಯ ದಿವಸ ಶಾಲೆಯ ವಿದ್ಯಾರ್ಥಿಗಳನ್ನು ಕರೆದುಕೊಂಡು— ಹೊಳಲು ಎಂಬ ಊರಿಗೆ ಪ್ರವಾಸಮಾಡಿ ಬಂದರು. ವಿದ್ಯಾರ್ಥಿಗಳ ಹಾಡುಗಳನ್ನು ಕೇಳಿ ಆಟಗಳನ್ನು ನೋಡಿ ಆನಂದ ಬಟ್ಟು ಇಲ್ಲಿಯ ಪ್ರಮುಖರಾದ ಶ್ರೀಮಾನ್ ಕರಿವೂರ ಬಸಪ್ಪನವರು ಎಲ್ಲರಿಗೂ ಕಬ್ಬು ಕಬ್ಬಿನ ಹಾಲು, ಕಾಕವಿ ಮೊದಲಾದವುಗಳಿಂದ ತೃಪ್ತಿಪಡಿಸಿದರು. '' ಎಂದು ಮಲ್ಲಾರ ಕೃಷ್ಣ ಕುಲಕರ್ಣಿಯವರು ತಿಳಿಸುತ್ತಾರೆ.

೮. **ಗುರ್ಲಹೊಸೂರು**— (ಬೆಳಗಾವಿ ಜಿಲ್ಲೆ) '' ತಾರೀಖು ೭-೫-೪೧ ನೆಯ ದಿವಸ ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ಶ್ರೀ ವಿಶ್ವೇಶ್ವರಾ ನಂದ ಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಮತ್ತು ಕನ್ನಡ ಹೆಣ್ಣುಮಕ್ಕಳ ಶಾಲೆಯಲ್ಲಿ ಶ್ರೀ. ಇಂದಿರಾಬಾಯಿ ಕಿಲ್ರ್ಯೋಸ್ಕರ ಇವರ ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭಗಳು ನಡೆದವು. ಆಗ ಊರಲ್ಲಿಯ ಪ್ರಮುಖರು ಆಗಮಿಸಿದ್ದರು. ಪ್ರೊ. ಮೋರೋ ಹರಿ ಖರೆ L. C. E. ಪುಣೆ ಇವರು ಕೊಟ್ಟ ೨೮ ರೂಪಾಯಿ ಗಳ ಶಿಕ್ಷಣೋಪಕರಣಗಳನ್ನು ಅಧ್ಯಕ್ಷರ ಹಸ್ತದಿಂದ ಬಾಲ-ಬಾಲಿಕೆಯರಿಗೆ ಕೊಡಸಲಾಯಿತು. ಊರಲ್ಲಿಯ ಶಿಕ್ಷಣಾಭಿಮಾನಿಗಳು ತಮ್ಮಲ್ಲಿಯ ಶಾಲೆಗಳು ಪ್ರಗತಿಯಲ್ಲಿರುವವೆಂಬ ಬಗ್ಗೆಯೂ ಅಧ್ಯಕ್ಷರು ಶಾರೀರಿಕ ನೈತಿಕ ಶಿಕ್ಷಣಗಳು

ಬೌದ್ಧಿಕ ಶಿಕ್ಷಣಕ್ಕೆ ಅವಶ್ಯವಾದವುಗಳೆಂಬ ವಿಷಯದಲ್ಲಿಯೂ ಮಾತನಾಡಿದರು ಪ್ರೊ. ಖರೆಯವರ ಈ ಸ್ತುತ್ಯ ಉಪಕ್ರಮವು ಏಳೆಂಟು ವರ್ಷಗಳಿಂದ ಅವ್ಯಾಹತವಾಗಿ ಸಾಗಿದ್ದು ಅಭಿನಂದನೀಯವು" ಎಂದು ಇಲ್ಲಿಯ ಹೆಡ್‌ಮಾಸ್ತರರಾದ ಶ್ರೀಮಾನ್ ಬಾ. ದೇ. ಜೋಶಿಯವರು ತಿಳಿಸುತ್ತಾರೆ.

೯. **ಅಣ್ಣಿಗೇರಿ**—(ಧಾರವಾಡ ಜಿಲ್ಲೆ) "ಇಲ್ಲಿಯ ಕ. ಗ. ಮ. ಶಾಲೆಯಲ್ಲಿ ೧೯೨೧-೧೯೪೧ನೆಯ ವಾರ್ಷಿಕೋತ್ಸವವು ತಾ। ೨೭-೪-೧೯೪೧ನೆಯ ದಿವಸ ಜರುಗಿತು. ಮುಂಚಾನೆ ಈ ಜಿಲ್ಲೆಯ ಅಸಿಸ್ಟಂಟ ಕಲೆಕ್ಟರರಾದ ಶ್ರೀಮಾನ್ ನಾತಕರ್ಣಿಯವರ ಹಸ್ತದಿಂದ ವಿದ್ಯಾರ್ಥಿಗಳಿಗೆ ಸ್ಕೌಟ ದೀಕ್ಷೆಯಾಗಿ, ಅಮೃತೇಶ್ವರ ಸ್ಕೌಟ ಅಸೋಸಿಏಶನ್ನಿನ, ಸ್ಥಾಪನೆಯಾಯಿತು. ಇದಕ್ಕೆ ಮೆ. ನಾತಕರ್ಣಿಯವರು ೨೫ ರೂ. ಗಳ ಕಾಣಿಕೆಯನ್ನು ಕೊಟ್ಟರು. ಊರ ಪ್ರಮುಖರು ೩೫ ರೂ. ಗಳವಾಗ್ದಾನ ಮಾಡಿದರು. ಸಂಜೆಗೆ ಈ ಜಿಲ್ಲೆಯ ಸ್ಕೂಲಬೋರ್ಡ್ ಚೇಅರಮನ್ನರಾದ ಶ್ರೀಮಾನ್ ಕೇ. ಎಫ್ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆಯಿತು. ಎಡ್ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀಮಾನ್ ಜಗತಾಪ ರವರೂ ಸ್ಕೂಲ್‌ಬೊರ್ಡಿನ ಪೆ ಂಬರರಾದ ಶ್ರೀ ಮರಡೂರ. ಶ್ರೀ. ಮುಂಟಗಣೀಕರ ಶ್ರೀ. ಮಾಗಡಿ, ಶ್ರೀ. ರಾಠೋಡ, ಮೊದಲಾದವರೂ ಬಂದಿದ್ದರು. ಹೆಡ್‌ಮಾಸ್ತರರಾದ ಶ್ರೀ. ಗೋಲಪ್ಪನವರ ಇವರು ವರದಿಯನ್ನು ಓದಿದರು. ಶಾಲೆಯ ಬಾಲಕರ ಚಟುವಟಿಕೆಗಳನ್ನು ಕಂಡು ಅಧ್ಯಕ್ಷರ ಭಾಷಣ ಕೇಳಿ. ಎಲ್ಲರೂ ಆನಂದಬಟ್ಟರು" ಎಂದು ಆ. ಮಾ. ರಾದ ಶ್ರೀ. ಲಕ್ಕೆಶ್ವರ ತಮ್ಮಾಜಿಯವರು ತಿಳಿಸುತ್ತಾರೆ.

೧೦ **ಯರಗಟ್ಟಿ**—(ಬೆಳಗಾವಿ ಜಿಲ್ಲೆ) "ಈ ಭಾಗದ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ಬೆಳಗಾವಿ ಜಿಲ್ಲೆಯ ಎಡ್ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀಮಾನ್ **ಪುರೋಹಿತರಾಯರ** ಅಧ್ಯಕ್ಷತೆಯ ಕೆಳಗೆ ತಾರೀಖು ೧೩-೪-೧೯೪೧ನೆಯ ದಿವಸ ನೆರವೇರಿತು. ೧೫೫ ಕ್ಕಷ್ಟು ಶಿಕ್ಷಕ ಶಿಕ್ಷಕಿಯರು ಕೂಡಿದ್ದರು. ಈ ಊರ ಹಾಗೂ ಮುನವಳ್ಳಿಯ ಶ್ರೀಮಂತ ದೇಸಾಯಿಯರೂ ದೇಶಪಾಂಡೆಯವರೂ ಆಗಮಿಸಿದ್ದರು. ಜಿಲ್ಲೆಯೊಳಗಿನ ಅನೇಕ ಶಿಕ್ಷಣಾಧಿಕಾರಿಗಳು ಅಗತ್ಯದಿಂದ ಬಂದಿದ್ದರು. ಮಾದರಿಯ ಪಾಠಗಳು, ನಿಬಂಧವಾಚನ, ಶಿಕ್ಷಣೋಪಯುಕ್ತ ವಸ್ತುಗಳ ಪ್ರದರ್ಶನ, ಏಕಾಂಕನಾಟಕ, ಮೊದಲಾದವುಗಳು ಪ್ರೇಕ್ಷಣೀಯವಾಗಿದ್ದವು. ಚೆನ್ನಾಗಿ ಅಭಿನಯಿಸಿದ ಬಾಲ-ಬಾಲಿಕೆಯರಿಗೆ ಮೆಚ್ಚುಗೆಗಳನ್ನು ಕೊಡಲಾಯಿತು." ಎಂದು ರೈನಾಪುರ ಶಾಲೆಯ ಹೆಡ್‌ಮಾಸ್ತರರಾದ ಬಿ. ಜೆ. ಪಾಟೀಲರು ತಿಳಿಸುತ್ತಾರೆ.

೧೧. **ಬೆಳಗಾವಿ**— "ಈ ಊರ ಹಾಗೂ ಸುತ್ತಮುತ್ತಲಿನ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ತಾರೀಖು ೨-೪-೧೯೨೧ ನೆಯ ದಿವಸ ದಕ್ಷಿಣ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಥಿಟೆ ಭೀಮರಾಯರ ಅಧ್ಯಕ್ಷತೆಯ ಕೆಳಗೆ ಸೊಗಸಾಗಿ ಜರುಗಿತು. ಪ್ರಾಥಮಿಕ ಶಿಕ್ಷಕರು, ಮಾಧ್ಯಮಿಕ ಶಿಕ್ಷಕರ ಕಾಲೇಜದ ಪ್ರೊಫೇಸರರು, ಅಧಿಕಾರಿಗಳು, ಶಿಕ್ಷಣ ಪ್ರೇಮಿಗಳು ಇವರೆಲ್ಲ ಇಲ್ಲಿ ಮಿಲಿತರಾಗಿದ್ದರು. ಶಿಕ್ಷಣ ಕಾರ್ಯಗಳಲ್ಲಿ ಉಪಯುಕ್ತವಾಗುವ ವಸ್ತುಗಳ ಪ್ರದರ್ಶನ, ಮಾದರಿಯ ಪಾಠಗಳು, ಅಧ್ಯಕ್ಷರ ಭಾಷಣ ಮೊದಲಾದವುಗಳು ಚೆನ್ನಾಗಿ ನಡೆದವು. ಇಲ್ಲಿಯ ಕನ್ನಡ ಶಾಲೆಯ ಹೆಡ್‌ಮಾಸ್ತರರೂ ಈ ಸಮ್ಮೇಲನದ ಸ್ವಾಗತಾಧ್ಯಕ್ಷರೂ ಆದ ದೇಶಪಾಂಡೆ ಗಂಗಾಧರರಾಯರು ಎಲ್ಲರಿಗೂ ತಕ್ಕ ಉದರೋಪಚಾರಗಳೊಂದಿಗೆ ಉತ್ತಮತರದ ವ್ಯವಸ್ಥೆಯನ್ನು ಇಟ್ಟಿದ್ದರು." ಹೀಗೆ ಅಮಟೂರ ಶಾಲೆಯ ಮಾಸ್ತರರು ತಿಳಿಸುತ್ತಾರೆ.

ಲೆಕ್ಕದ ಉತ್ತರ

ಕಳೆದ ಎಪ್ರಿಲ್ ತಿಂಗಳ ಸಂಚಿಕೆಯಲ್ಲಿ ಕೊಟ್ಟ ಲೆಕ್ಕವನ್ನು ಬಿಡಿಸಿ ಕಳಿಸಿದವರು.

೧. ಶ್ರೀ. ದ. ವಿ. ಚಿಕ್ಕರಮನೆ ಅಧ್ಯಾಪಕರು ಹಾಯಸ್ಕೂಲಿನ ಬೆಳಗಾವಿಯ
೨. ,, ಲಿ. ಸ. ಮೊಖಾಶಿ ಹೆ. ಮಾ. ಕರೀಕಟ್ಟಿ ತಾ. ಸವದತ್ತಿ.
೩. ,, ಎಲ್. ಎಚ್. ಭಟ್ಟ ಸ್ಕೂ. ಮಾ. ಬಿದರಕೋಣ ತಾ. ಸಿದ್ದಾಪುರ.
೪. ,, ಹ. ವೆ. ಸಂಗನಾಳ ಸ್ಕೂ. ಮಾ. ದಿಂಡೂರ ತಾ. ರೋಣ.
೫. ,, ಪ್ರ. ಭು. ದೇಶಪಾಂಡೆ ಅ. ಮಾ. ಬೆಳ್ಳಟ್ಟಿ ಸಾಂಗಲಿ ಸಂಸ್ಥಾನ.
೬. ,, ರ. ವಿ. ಪೈ. ಸ್ಕೂ. ಮಾ. ಕೊಂಡ್ಲಿ ತಾ. ಸಿದ್ದಾಪುರ (ಬರಿಯ ಉ.)
೭. ,, ಗು. ಫ. ತುಪ್ಪದ ಹೆ. ಮಾ. ಕದರಮಂಡಲಗಿ.
೮. ,, ಮು. ರಾ. ಪ್ರಭು ಮಾಸ್ತರ ಕಡವಾಡ ಕಾರವಾರ ಜಿಲ್ಲೆ.
೯. ,, ಬಾ. ದೇ. ಜೋಶಿ ಹೆ. ಮಾ. ಗುರ್ಲಹೊಸೂರ.
೧೦. ,, ಕು. ಲಿ. ಹೆಗಡೆ ಮಾಸ್ತರ್ ಹದಿನಬಾಳ ತಾ. ಹೊನ್ನಾವರ.
೧೧. ,, ಆರ್. ಸಿ. ಹಿರೇಮಠ ಮಾಸ್ತರ ಹೊಸರಿತ್ತಿ.
೧೨. ,, ಫು. ಮಾ. ತುಕ್ಕಣ್ಣವರ ಮಾಸ್ತರ ಯಕ್ಕುಂಡಿ ತಾ. ಸವದತ್ತಿ.

ಈ ಎಲ್ಲ ಮಹನೀಯರ ಪ್ರಯತ್ನಗಳನ್ನು ಕಂಡು ನಮಗೆ ಸಂತೋಷವಾಗಿದೆ. ಇವರ ಜಾಣ್ಮೆಯು ಹೆಚ್ಚಾಗಲೆಂದು ಹಾರೈಸುವೆವು. ಈಗ

ಬಂದಿರುವ ಉತ್ತರಗಳಲ್ಲಿ ಶ್ರೀಮಾನ್ ದ. ವಿ. ಚಿಕ್ಕರಮನೆಯವರು ಬರೆದುದನ್ನು ಇಲ್ಲಿ ಕೊಟ್ಟಿದ್ದೇವೆ. ಉಳಿದವುಗಳನ್ನು ಅನುಕೂಲವಾದಾಗ ಪ್ರಸಿದ್ಧಿಸುವೆವು.

ರೀತಿ :— ಕೋಳಿಗಳ ಸಂಖ್ಯೆಯು ನಿಶ್ಚಿತವೆಂದು ಹಿಡಿದು ಆಕಳು ಮತ್ತು ಕುರಿಗಳ ಮಿಶ್ರಣದ ಪ್ರಮಾಣವನ್ನು ತೆಗೆಯಬೇಕು. ಆಕಳಿನ ಬೆಲೆಯು ೧೦ ರೂ ಕುರಿಯ ಬೆಲೆಯು ೫ ರೂ. ಇವೆ. ಇವುಗಳ ಮಿಶ್ರಣದ ಸರಾಸರಿ ಬೆಲೆಯು ೧೦ ರೂ. ಗೆ ಮೀರಲಾರದು. ಇಲ್ಲವೆ ೫ ರೂ. ಗಿಂತ ಕಡಿಮೆಯಾಗಲಾರದು. ಕೋಳಿಗಳ ಸಂಖ್ಯೆಯು ಲ ಅಥವಾ ಇದಕ್ಕಿಂತ ಕಡಿಮೆ ಇದ್ದರೆ ಆಕಳು ಕುರಿಗಳ ಮಿಶ್ರಣದ ಸರಾಸರಿ ಬೆಲೆಯು ೫ ರೂ.ಗೆ ಕಡಿಮೆಯಾಗುವದು. ಕೋಳಿಗಳ ಸಂಖ್ಯೆಯು ೯೪ಕ್ಕೆ ಮೀರಿದರೆ ಆಕಳು ಕುರಿಗಳ ಮಿಶ್ರಣದ ಸರಾಸರಿ ಬೆಲೆಯು ೧೦ ರೂ. ಗೆ ಮಿಕ್ಕುವದು. ಆದ್ದರಿಂದ ಕೋಳಿಗಳ ಸಂಖ್ಯೆಯು ೮೯, ೯೪ ಇವುಗಳ ನಡುವೆ ಇರಲಿಕ್ಕೆಬೇಕು. ಒಂದು ಕೋಳಿಯ ಬೆಲೆಯು ½ ರೂ. ಇರುವದರಿಂದ ೮೯, ೯೧, ೯೩ ಈ ವಿಷಮ ಸಂಖ್ಯೆಗಳಿಂದ ಅಪೂರ್ಣಾಂಕ ಬರುವದು, ಆದ್ದರಿಂದ ಇವು ತ್ಯಾಜ್ಯ ಇನ್ನು ಉಳಿದ ಸಂಖ್ಯೆಗಳು ಕೋಳಿಗಳೆಂದು ತಿಳಿದರೆ, ಆಕಳು ಕುರಿಗಳ ಸರಾಸರೀ ಬೆಲೆ, ಮತ್ತು ಮಿಶ್ರಣದ ಪ್ರಮಾಣ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

ಕೋಳಿಗಳ ಸಂಖ್ಯೆ	ಆಕಳು ಕುರಿಗಳ ಒಟ್ಟು ಸಂಖ್ಯೆ	ಆಕಳು ಕುರಿಗಳ ಮಿಶ್ರಣದ ಸರಾಸರೀ ಬೆಲೆ	ಮಿಶ್ರಣದ ಪ್ರಮಾಣ		ಶರಾ
		ರೂ.	ಆ.	ಕು.	
೯೦	೧೦	೫½	೧	೯	ಗ್ರಾಹ್ಯ ಉತ್ತರ
೯೨	೮	೬೫	೨¼	೫¾	ಪ್ರಾಣಿಗಳು ತುಂಡು ಬರುವದರಿಂದ ತ್ಯಾಜ್ಯ ಉತ್ತರಗಳು
೯೪	೬	೭¾	೪¾	೧¼	

ತಾಳೆ ಪ್ರಾಣಿಗಳ ಸಂಖ್ಯೆ : ಆಕಳು ೧ + ಕುರಿ ೯ + ಕೋಳಿ ೯೦ = ೧೦೦

ಪ್ರಾಣಿಗಳ ಬೆಲೆ : ೧೦ ರೂ. + ೪¾ ರೂ. + ೪¾ ರೂ. = ೧೦೦ ರೂ

ದತ್ತಾತ್ರಯ ವಿನಾಯಕ ಚಿಕ್ಕರಮ
ಸರದಾರ ಹಾಯಸ್ಕೂಲ ಬೆಳಗಾವಿ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ರಾವ ತೊರಗಲ್ ಎಂ. ಎ.

ಸಂಪುಟ ೮೦	ಜುಲೈ ೧೯೪೧	ವರ್ಷ ೧೩. ಸಂ. ೪

ಪ್ರಚಲಿತ ವಿಷಯಗಳು

ಪ್ರೌಢಶಿಕ್ಷಣ :— ದೇಶದಲ್ಲಿಯ ಜನರೆಲ್ಲರೂ ಸಾಕ್ಷರಿಗಳಾದರೆ ಸುರಾಜ್ಯ ಸ್ವರಾಜ್ಯಗಳು ನೆಲೆಗೊಳ್ಳುವವು. ಈಗ ನಮ್ಮ ದೇಶದಲ್ಲಿ ಸಾಕ್ಷರಿಗಳ ಪ್ರಮಾಣವು ನೂರಕ್ಕೆ ಹತ್ತು ಹನ್ನೆರಡರಷ್ಟು ಮಾತ್ರ ಇರುವದು. ಜಪಾನದಲ್ಲಿ ನೂರಕ್ಕೆ ಎಂಭತ್ತರಷ್ಟು ಇದೆ. ನಮ್ಮ ದೇಶದಲ್ಲಿಯೂ ಈ ಸ್ಥಿತಿಯು ಬರಬೇಕಾದರೆ ಎಲ್ಲ ವಿಧದ ಪ್ರಯತ್ನಗಳನ್ನು ಮಾಡಬೇಕೆಂಬದು ಸ್ಪಷ್ಟವಿದೆ. ಓದು ಬರೆಹಗಳನ್ನು ಕಲಿಸಿದ ನುಟ್ಟಿಗೆ ಕೆಲಸವು ತೀರಲಿಲ್ಲ. ಕಲಿತವರು ಮರೆಯದಂತೆಯೂ ವ್ಯವಸ್ಥೆ ಮಾಡ ಬೇಕಾಗಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರೂಕೂಡ ಅದು ಎರಡರಿಂದ ಹನ್ನೊಂದು ವಯಸ್ಸಿನ ಬಾಲಬಾಲಿಕೆಯರಿಗೆ ಮಾತ್ರ ಸಂಬಂಧಿಸುವದು. ಪ್ರೌಢರಿಗಾಗಿ ಶಿಕ್ಷಣದ ಯೋಜನೆಯನ್ನು ಕೈಕೊಳ್ಳದ ವಿನಹ ಸಾಕ್ಷರತೆಯ ಪ್ರಸಾರವು ಆಗದೆಂದು ತಿಳಿದು ಮುಂಬಯಿ ಸರಕಾರದವರು ಒಂದು ಯೋಜನೆಯನ್ನು ಕೈಕೊಂಡಿದ್ದಾರೆ. ಅದು ಹೀಗಿದೆ:—

"ಒಂದು ಸಾವಿರಕ್ಕಿಂತ ಹೆಚ್ಚು ಜನವಸತಿಯುಳ್ಳ ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರೌಢಶಿಕ್ಷಣದ ವರ್ಗವನ್ನು ತೆರೆಯಬೇಕು. ಇದಕ್ಕಿಂತಲೂ ಕಡಿಮೆ ಜನವಸತಿಯ ಹಳ್ಳಿಗಳಲ್ಲಿ ಕೂಡ ಪ್ರೌಢಶಿಕ್ಷಣ ವರ್ಗಗಳನ್ನು ನಡೆಯಿಸುವದು ಶಕ್ಯವೆಂದು ಕಂಡುಬಂದರೆ ನಡೆಯಿಸುವವರಿಗೆ ಉತ್ತೇಜನಕೊಡಲಾಗುವದು. ಈಗ ಇರುವ ಪ್ರೌಢಶಿಕ್ಷಣದ ವರ್ಗಗಳು ಸುವ್ಯವಸ್ಥಿತವಾಗಿ ನಡೆಯುವಂತೆ ವ್ಯವಸ್ಥೆಮಾಡಲಾಗುವದು.

ಪ್ರೌಢಶಿಕ್ಷಣದ ವರ್ಗಗಳನ್ನು ನಡೆಯಿಸುವವರಿಗೆ ಮುಂಬಯಿ ಸರಕಾರದವರು ಕೊಡುವ ಸಹಾಯಧನದ ವಿವರಣೆ—

೧. ಪ್ರೌಢಶಿಕ್ಷಣ ವರ್ಗಕ್ಕೆ ಬೇಕಾಗುವ ಸಾಮಾನು, ಉಪಕರಣ ಮೊದಲಾದವುಗಳಿಗಾಗಿ ನಾಲ್ವತ್ತು ರೂಪಾಯಿಗಳವರೆಗೆ ಆರಂಭದಲ್ಲಿ ಸಹಾಯ ಧನವನ್ನು ಕೊಡಲಾಗುವದು.

೨. ಇಂಥ ವರ್ಗಗಳಲ್ಲಿ ಪ್ರತಿನಿತ್ಯ ೨೦ ವಿದ್ಯಾರ್ಥಿಗಳು ಇಲ್ಲವೆ ೧೫ ವಿದ್ಯಾರ್ಥಿನಿಯರು ಇರುತ್ತಿದ್ದರೆ, ಪ್ರತಿಯೊಬ್ಬರಿಗಾಗಿ ಐದುರೂಪಾಯಿಗಳಂತೆ **ಮೂರೇ ಸಹಾಯ ಧನವನ್ನು** ಕೊಡಲಾಗುವದು.

೩. ಇಂಥ ವರ್ಗಗಳಲ್ಲಿ ಸರಿಯಾಗಿ ಕಲಿತು ಆವಶ್ಯಕವಾದ ಪರೀಕ್ಷೆಯನ್ನು ಪಾಸಾದ ವಿದ್ಯಾರ್ಥಿಗಳ ಸಂಖ್ಯೆಯ ಮಾನದಿಂದ ಪ್ರತಿಯೊಬ್ಬರಿಗಾಗಿ ಎರಡು ರೂಪಾಯಿಗಳಿಂದ ನಾಲ್ಕು ರೂಪಾಯಿಗಳ ವರೆಗಿನ ಪ್ರಮಾಣದಿಂದ ಬೇರೊಂದು ಸಹಾಯ ಧನವನ್ನು ಕೊಡಲಾಗವದು.

ಇಂತಪ ವರ್ಗಗಳನ್ನು ತೆರೆಯಲಿಚ್ಛಿಸುವ ಕಾರ್ಯಕರ್ತರು ' ಪ್ರಾಂತಿಕ ಪ್ರೌಢಶಿಕ್ಷಣ ಮಂಡಲ, ೨೮೨ ಸದಾಶಿವ ಪೇಟೆ, ಪುಣೆ, ಈ ವಿಳಾಸಕ್ಕೆ ಬರೆದು ತಮ್ಮ ಹೆಸರುಗಳನ್ನು ರಜಿಸ್ಟರ ಮಾಡಿಸಿಕೊಳ್ಳಬೇಕು. ಹಾಗೂ ಸಹಾಯ ಧನವನ್ನು ಸರಿಯಾಗಿಯೂ ಸಕಾಲದಲ್ಲಿಯೂ ಪಡೆಯುವದರ ಸಲುವಾಗಿ ತಮ್ಮ ತಮ್ಮ ಜಿಲ್ಹೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಡೆಗೆ ಯೋಗ್ಯ ಅವಧಿಯಲ್ಲಿ ಅಪೇಕ್ಷಾಪತ್ರ (ಅರ್ಜಿ) ಗಳನ್ನು ಕಳಿಸಬೇಕು.

ಪಾಟ ಪೆನ್ಸಿಲುಗಳ ಉಪಯೋಗವು ಹೆಚ್ಚಾಗಲಿ—ಯುದ್ಧದ ಮೂಲಕಾರಣದ ಧಾರಣೆಯು ಮಿತಿಮೀರಿ ಏರಿರುವದರಿಂದ ಪ್ರಾಥಮಿಕ ಶಾಲೆಗಳಲ್ಲಿಯ ವಿದ್ಯಾರ್ಥಿಗಳ ಪಾಲಕರಿಗೆ ಸಾಕಷ್ಟು ಕಾಗದಗಳನ್ನು ಪೂರೈಸುವದು ತುಂಬ ಕಠಿಣವಾಗಿದೆ. ಆದುದರಿಂದ ಮುಂಬಯಿ ಸರಕಾರದವರು ಕಾಗದಗಳ ವಿಷಯದಲ್ಲಿ ಮಿತವ್ಯಯಿಗಳಾಗಿರಲು ಈ ಮೊದಲೇ ಪರಿಪತ್ರದಿಂದ ಶಿಕ್ಷಕರಿಗೆ ತಿಳಿಸಿರುತ್ತಾರೆ. ಆಸಾಮ ಸರಕಾರದವರುಕೂಡ ಈಗ ಸಾಧ್ಯವಿದ್ದವರೆಗೆ ಕಾಗದ ಮುಸಿಗಳ ಬದಲು ಪಾಟಿ ಪೆನ್ಸಿಲುಗಳನ್ನು ಉಪಯೋಗಿಸಲು ಅಡ್ಡಿಯಿಲ್ಲವೆಂದು ತಿಳಿಸಿರುತ್ತಾರೆ. ಇದರಂತೆಯೆ ಉಳಿದ ಪ್ರಾಂತಗಳಲ್ಲಿಕೂಡ ಸರಕಾರದವರು ಎಚ್ಚರಿಸಿದ್ದಾರೆ. ಪ್ರಾಥಮಿಕ ಶಿಕ್ಷಕರು ತಮ್ಮ ಕೆಲಸಕ್ಕೆ ತೊಂದರೆಯಾಗದಂತೆ ಅದಷ್ಟು ಕಡಿಮೆ ಪ್ರಮಾಣದಿಂದ ಕಾಗದವನ್ನು ಉಪಯೋಗಿಸುವದಕ್ಕೆ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವರೆಂದು ನಂಬುತ್ತೇವೆ.

ಶಿಕ್ಷಣ ಪದ್ಧತಿ

ಶ್ರೀಮಾನ್ **ಸೀತಾರಾಮರಾವ ತಾವಡೆ,** ಎಮ್.ಎ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್
ದಕ್ಷಿಣಭಾಗ, ಧಾರವಾಡ, ಅವರಿಂದ

ಕಳೆದ ವರ್ಷದ ಅಗಷ್ಟ ತಿಂಗಳ ಸಂಚಿಕೆಯಲ್ಲಿ ಈ ವಿಷಯವಾಗಿ ನಾವು ಕೂಲಂಕಷವಾಗಿ ಚರ್ಚಿಸಿರುವದನ್ನು ಶಿಕ್ಷಕರು ಓದಿರುವರು. ಅವರು ಆ ಲೇಖನವನ್ನು ಇನ್ನೊಮ್ಮೆ ಓದಬೇಕು.

ದೇಶದ ಉನ್ನತಿಗೆ ಶಿಕ್ಷಣವು ಅತ್ಯಾವಶ್ಯಕವೆಂಬ ಮಾತನ್ನು ಎಲ್ಲರೂ ಒಪ್ಪಿಕೊಳ್ಳುವರು. ಸಾಕ್ಷರತಾ ಪ್ರಸಾರವಂತೂ, ಮಾನವನ ಜೀವನಕ್ಕೆ ಅನ್ನಪಾನಗಳ ಮತ್ತು ಉಸಿರಾಡಿಸುವ ಶಕ್ತಿಯು ಅವಶ್ಯಕತೆಯು ಇರುವಷ್ಟೇ, ದೇಶದ ಅಭಿವೃದ್ಧಿಗೆ ಅಪರಿಹಾರ್ಯವಾದ ಮಾತೆಂಬುದು ಸಿದ್ಧವಾಗಿ ಹೋಗಿದೆ. ನಮ್ಮ ಪ್ರಗತಿಗೆ ಇಷ್ಟು ಪ್ರಾಮುಖ್ಯವಾದ ಸಾಧನವೆನಿಸುವ ಶಿಕ್ಷಣ ಪ್ರಗತಿ ಮತ್ತು ಸಾಕ್ಷರತಾ ಪ್ರಸಾರ ಇವನ್ನು ಎಷ್ಟು ಕಷ್ಟನಷ್ಟಗಳ ಸಹನೆಯಿಂದಲಾದರೂ ನಾವು ಸಾಧಿಸಲೇಬೇಕಾಗಿದೆ.

ಶಿಕ್ಷಣ ಪ್ರಸಾರದ ಕಾರ್ಯವನ್ನು ಹೇಗೆ ಸುಖರೂಪವಾಗಿ ಸಾಧಿಸಬಹುದೆಂಬ ಪ್ರಶ್ನೆಯನ್ನು ಪ್ರಾಥಮಿಕ ಶಿಕ್ಷಕರ ಮುಂದಿಟ್ಟಕೂಡಲೆ ಅವರು ಬಹು ಸುಲಭವಾಗಿ ಹೇಳಿ ಬಿಡಬಹುದು: "ಒತ್ತಾಯದ ಶಿಕ್ಷಣವು ಪ್ರಚಾರದಲ್ಲಿ ಬರಬೇಕು." ಹಳ್ಳಿಯ ಅಥವಾ ಪಟ್ಟಣದೊಳಗಿನ ಎಲ್ಲ ಹುಡುಗರು ಸಾಲೆಗೆ ಬಾರದಿರುವದೂ ನಿಯಮದಿಂದ ಬಾರದಿರುವದೂ ಅವರು ಕೊಡಬೇಕಾಗುವ ಫೀಯನ್ನು ಕೊಡದಿರುವದೂ ಶಿಕ್ಷಕರ ಬಹುದಿನದ ಅನುಭವದ ಮತ್ತು ಅವರ ಕಾರ್ಯದಲ್ಲಿ ಹೆಚ್ಚಿನ ತೊಡಕಿನದೆನಿಸುವ ಮಾತು. "ಎಲ್ಲ ಹುಡುಗರು ಸಾಲೆಗೆ ಬರುವರು; ನಿಯಮದಿಂದ ಬರತೊಡಗುವರು; ಫೀ ಹಣದ ಸಂಬಂಧದ ತೊಂದರೆ ತಪ್ಪಿತು" ಎಂದರೆ ಶಿಕ್ಷಕರಿಗೆ ಆನಂದವಾಗುವದರಲ್ಲಿ ಸಂಶಯವೇನಿದೆ? ಅರ್ಥಾತ್, ದೇಶದ ಹಿತಚಿಂತನೆ ಮಾಡುವ ಮುಂದಾಳುಗಳಂತೆಯೇ ಪ್ರಾಥಮಿಕ ಶಿಕ್ಷಕರು ಕೂಡ ಒತ್ತಾಯದ ಶಿಕ್ಷಣದ ವಿಷಯದಲ್ಲಿ ಸಂಪೂರ್ಣ ಆಸ್ತಿಕಭಾವನೆಯುಳ್ಳವರಾಗಿರುವರೆಂಬುದು ಸಹಜವೇ ಸರಿ.

ಆದರೆ ಈ ಮಾತು ಅಷ್ಟು ಸುಲಭವಾಗಿಲ್ಲ. ನಮ್ಮ ಇಲಾಖೆಯೊಂದರಲ್ಲಿಯೇ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಬೇಕಾದರೆ ಸುಮಾರು ಐದು ಕೋಟಿ ರೂಪಾಯಿಗಳು ಬೇಕೆಂದು ಅಂದಾಜು ಮಾಡಲಾಗಿದೆ. ನಮ್ಮ ಇಲಾಖೆಯ ಸರಕಾರದ ಒಟ್ಟು ಉತ್ಪನ್ನವು ಹನ್ನೆರಡು ಕೋಟಿ. ಅದರಲ್ಲಿ ಸುಮಾರು ಮೂರು ಕೋಟಿಗಳಷ್ಟು ರಕಮು ಅಬಕಾರಿ ಖಾತೆಯದು. ಜನರಿಗೆ ಸೆರೆ ಸಿಂದಿಗಳನ್ನು ಕುಡಿಸಿ, ಹಣಗಳಿಸಿ ಶಿಕ್ಷಣ ಕಾರ್ಯವನ್ನು ಕೈಕೊಳ್ಳುವದು ಹಿತಕರವಲ್ಲವೆಂದು ದೇಶವೇ ಕೂಗಿಕೊಳ್ಳುತ್ತಿದೆ. ಆದ್ದರಿಂದ ಈ ಮೂರು ಕೋಟಿ ರೂಪಾಯಿಗಳನ್ನು ಬಿಟ್ಟುಬಿಟ್ಟರೆ ಉಳಿಯಿತು, ತುಸು ಹೆಚ್ಚು ಕಡಿಮೆ ಒಂಬತ್ತು ಕೋಟಿ ರೂಪಾಯಿ. ಈ ಒಂಬತ್ತು ಕೋಟಿಯ ಉತ್ಪನ್ನದಲ್ಲಿ ಐದುಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ಸಾರ್ವತ್ರಿಕ ಒತ್ತಾಯದ ಶಿಕ್ಷಣ ಕಾರ್ಯವನ್ನು ಕೈಕೊಳ್ಳುವದು ಯಾವ ಸರಕಾರಕ್ಕೂ ಸಾಧ್ಯವಾದ ಮಾತಲ್ಲ, ಎಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ. ಸುಧಾರಣೆಯ ಶಿಖರಕ್ಕೆ ಮುಟ್ಟಿ, ಶಿಕ್ಷಣದಲ್ಲಿ ಮುಂದುವರಿದು ೧೦೦ಕ್ಕೆ ೯೫ಕ್ಕಿಂತ ಹೆಚ್ಚು ಸಾಕ್ಷರಿಗಳಾದ ದೇಶದಲ್ಲಿಯೂ ಕೂಡ ಸರಕಾರದ ಒಟ್ಟು ಉತ್ಪನ್ನದ ಆರರಲ್ಲೊಂದು ಪಾಲು ಮಾತ್ರ ಶಿಕ್ಷಣ ಖಾತೆಗೆ ಕೊಡಲ್ಪಡುವದು. ಈಗಾಗಲೆ ಹೆಚ್ಚಿನ ಕರಭಾರದಿಂದ ಬಾಗಿ ತೊಂದರೆ ಪಡುತ್ತಿರುವ ಜನತೆಯ ಮೇಲೆ ಇನ್ನೂ ಹೆಚ್ಚಿನ ಕರವನ್ನು ಹೇರುವದಂತೂ ಸಾಧ್ಯವೇ ಇಲ್ಲ. ಒಟ್ಟಿಗೆ, ಹೆಚ್ಚಿನ ಹಣದ ಅನುಕೂಲತೆಯ ವಿಚಾರವನ್ನು ಪರ್ಯಾಲೋಚಿಸಿ ನೋಡಿದರೆ ನಮ್ಮ ಪ್ರಾಂತದಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸುವದು ಸಾಧ್ಯವೇ ಇಲ್ಲವೆಂಬುದು ಸಿದ್ಧವಾಗುವದು. ಹಿಂದುಸ್ತಾನ ಸರಕಾರದ ಶಿಕ್ಷಣದಸೂತ್ರಚಾಲಕರೂ ಕೂಡ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. ನಮ್ಮ ದೇಶದಲ್ಲಿ ಒತ್ತಾಯದದ ಶಿಕ್ಷಣವನ್ನು ಪ್ರಾರಂಭಿಸಲಿಕ್ಕೆ ತೀರ ಕಡಿಮೆಯೆಂದರೆ ೭೦ ಕೋಟಿ ರೂಪಾಯಿಗಳ ವೆಚ್ಚವು ತಗಲುವದೆಂದೂ ಅಷ್ಟು ಹಣವನ್ನು ದೊರಕಿಸುವದು ಸಾಧ್ಯವಿಲ್ಲವೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಈ ವಿವೇಚನೆಯಿಂದ ಸರಕಾರವು ಒತ್ತಾಯದ ಶಿಕ್ಷಣವನ್ನು ಸಾರಿ ದೇಶದಲ್ಲಿ ಸಾಕ್ಷರತಾ ಪ್ರಸಾರವನ್ನು ಮಾಡಬೇಕೆಂಬುದು ಕೇವಲ ಅಕಾಶ ಕುಸುಮವೇ ಸರಿ ಎಂದು ಸಿದ್ಧವಾಗುವದು.

ಈಗಿನ ಕಾಲದಲ್ಲಿ ಬೇರೆ ಬೇರೆ ಜನಾಂಗಗಳ ಜನರು ತಮ್ಮ ತಮ್ಮ ದೇಶದ ಉತ್ಕರ್ಷಕ್ಕಾಗಿಯೂ ಸಂರಕ್ಷಣೆಗಾಗಿಯೂ ಎಂಥೆಂಥ ಕಠಿಣ ಪ್ರಸಂಗಗಳನ್ನು ಎದುರಿಸುತ್ತಲಿರುವರೆಂಬುದನ್ನು ನಾವು ಪ್ರತಿದಿನ ಓದುತ್ತೇವೆ; ಪ್ರತಿಕ್ಷಣಕ್ಕೆ

ಳುತ್ತೇವೆ. ಎಷ್ಟೋ ದೇಶಗಳಲ್ಲಿ ಕೆಲವೊಂದು ವಯಸ್ಸಿನ ಸ್ತ್ರೀಯರೂ ರುಷರೂ ಕೂಡಿಯೇ ಆಕಾಶದಿಂದ ಅಜಸ್ರವಾಗಿ ಸುರಿಯುತ್ತಲಿರುವ ಅಗ್ನಿ ಷ್ಟಿಯನ್ನು ಸಹಿಸುತ್ತ ತಮ್ಮ ದೇಶವನ್ನು ರಕ್ಷಿಸುತ್ತಿದ್ದಾರೆ. ದೇಶದ ರಣ ಹಳೆಯು ವೊಳಗಿದೊಡನೆಯೇ ತಮ್ಮ ಸರ್ವಸ್ವವನ್ನು ಮರೆತು ಗುಂಪು ುಂಪಾಗಿ ರಣಭೂಮಿಗೆ ಸಾಗುತ್ತಿದ್ದಾರೆ. ಅವರಲ್ಲಿ ಅಷ್ಟು ದೇಶಾಭಿಮಾನ ದೆ. ಸ್ವದೇಶ ಪ್ರೇಮವು ಅವರ ರಕ್ತದಲ್ಲಿ ಅಷ್ಟು ಉಜ್ವಲವಾಗಿ ಕುದಿಯುತ್ತಿದೆ.

ಇಂದು ನಾವು ಇಂಥ ಉಗ್ರವೂ ಉಜ್ವಲವೂ ಆದ ಸ್ವಾರ್ಥತ್ಯಾಗಕ್ಕೆ ಎದೆ ೂಡಬೇಕಾಗಿಲ್ಲ. ನಾವು ನಮ್ಮ ದೇಶವನ್ನು ಆಕ್ರಮಿಸಿದ ಅಜ್ಞಾನ ರಾಕ್ಷಸನನ್ನು ೂಡೆದೋಡಿಸುವದಕ್ಕೆ ಇಂದು ಒಂದು ಪ್ರಬಲವಾದ ಸೈನ್ಯವನ್ನು ಕಟ್ಟಬೇಕಾಗಿದೆ, ಷ್ಟೆ. ದೇಶದ ಸುಶಿಕ್ಷಿತರೆಲ್ಲರೂ ಈ ಕಾರ್ಯಕ್ಕೆ ಟೊಂಕಕಟ್ಟಿ ಮುಂದೆ ಬರಬೇಕು. ಸಂದರ್ಭದಲ್ಲಿ ' ಸುಶಿಕ್ಷಿತ ' ಎಂಬ ಶಬ್ದವು ಕೆಲವೊಂದು ವಿಶಿಷ್ಟ ವರ್ಗವನ್ನು ೂಚಿಸುವದಿಲ್ಲ. ಸಾಕ್ಷರತೆಯ ಪ್ರಸಾರವು ಕೇವಲ ಪ್ರಾಥಮಿಕ ಶಿಕ್ಷಕರಿಗೇ ರಿದುದೆಂದು ಯಾರೂ ಹೇಳರು. ಶಿಕ್ಷಕರಿರಲಿ, ಯಾವದೇ ಖಾತೆಯ ನೌಕರ ರಲಿ, ಯಾವದೇ ವ್ಯವಸಾಯಗಾರರಿರಲಿ, ನಿರಕ್ಷರತೆಯ ಅಜ್ಞಾನಾಂಧಕಾರದಲ್ಲಿ ಕ್ಕು ತೊಳಲುತ್ತಿರುವ ತಮ್ಮ ದೇಶಬಾಂಧವರನ್ನು ಕೈಹಿಡಿದು ಹೊರಗೆ ತರಲು ಕ್ಕ ಸಾಮರ್ಥ್ಯವುಳ್ಳ ಪ್ರತಿಯೊಬ್ಬ ವ್ಯಕ್ತಿಯೂ ಈ ಪುಣ್ಯಕಾರವಾದ ಕಾರ್ಯಕ್ಕೆ ಕ್ಕ ದಾರಿಯಿಂದ ನೆರವಾಗಲೇಬೇಕು. ಹೀಗೆ ಸಾಮಾನ್ಯ ದೃಷ್ಟಿಯಿರುವಾಗ ಕ್ಷಣ ಕಾರ್ಯವೊಂದರಲ್ಲಿಯೇ ತೊಡಗಿರುವ ಶಿಕ್ಷಕ ವರ್ಗವು ಈ ಕಾರ್ಯದಲ್ಲಿ ಷ್ಟು ಉತ್ಸಾಹವನ್ನು ತೋರಿಸಿದರೂ ಸಾಲದೆಂದು ನಾವೇ ಏಕೆ ? ಶಿಕ ಕರೂ ಖವಾಗಿಯೇ ಒಪ್ಪಿಕೊಳ್ಳಬಹುದು.

ಹೆಚ್ಚಿನ ಹಣದ ಅನುಕೂಲತೆಯು ಇಲ್ಲವೆಂದ ಬಳಿಕ ಶಿಕ್ಷಕರಿಗೆ ಕೆಲಸ ್ಯಗಿ ಹೆಚ್ಚಿನ ಪ್ರತಿಫಲವು ದೊರೆಯುವದಿಲ್ಲವೆಂದು ಅಸಮಾಧಾನ ಪಡುವ ಾರಣವೇ ಉಳಿದಿಲ್ಲ. ಇದೊಂದು ದೇಶಕಾರ್ಯ. ಈ ಪುಣ್ಯಕರವಾದ ಕಾರ್ಯ ್ಯಗಿ ತಾವು ತಮಗೆ ದೊರೆಯುವ ಅಲ್ಪ ವೇತನದಿಂದಲೇ ಸಂತುಷ್ಟರಾಗಿ ಸ್ವಲ್ಪ ಷ್ಟು ಪರಿಶ್ರಯ ಮಾಡುವೆವು ಎಂದು ಪ್ರತಿಜ್ಞೆ ಮಾಡಿ ಶಿಕ್ಷಕ ವರ್ಗವು ುಂದೆ ಬಂದರೆ ಮಾತ್ರ ಈ ಕಾರ್ಯವು ನೂರರಲ್ಲೊಂದು ಪಾಲಿನಷ್ಟಾದರೂ ಧ್ಯವಾಗುವದು.

ನಮಗೆ ಈಗ ದೊರೆಯಬಹುದಾದಷ್ಟೇ ಹಣದಲ್ಲಿ ಸಾಕ್ಷರತಾ ಪ್ರಸಾರಕ್ಕೆ ವಾಗುವದಕ್ಕೆ ನಾವು ಯೋಚಿಸಬಹುದಾದ ಉಪಾಯಗಳಲ್ಲಿ ' ಶಿಕ್ಷಪದ್ಧತಿ '

ಯು ಒಂದು ಪ್ರಾಮುಖ್ಯವಾದ ಸಾಧನವೆಂಬುದನ್ನು ನಾವು ಮೇಲೆ ಹೇಳಿ
ಲೇಖನದಲ್ಲಿ ಚೆನ್ನಾಗಿ ಪ್ರತಿಪಾದಿಸಿದ್ದೇವೆ.

ನಮ್ಮ ಕರ್ನಾಟಕದಲ್ಲಿ ಕಳೆದ ವರ್ಷದ ಜೂನ್ ತಿಂಗಳಿನಿಂದ ಶಿಫ್ಟ್ ಪದ್ಧ
ತಿಯು ಪ್ರಚಾರದಲ್ಲಿ ಬಂದಿತು. ಮತ್ತು ಮೊದಲಿನ ಕೆಲವು ತಿಂಗಳುಗಳಲ್ಲಿ
ಪ್ರಗತಿಯು ಸಮಾಧಾನಕರವಾಗಿ ಕಂಡುಬಂದಿತು. ವಿದ್ಯಾರ್ಥಿಗಳ ಸಂಖ್ಯೆಯ
ಬಿಳಿವಣಿಗೆಯ ವರದಿಯು ಎಲ್ಲ ಕಡೆಗಳಿಂದಲೂ ನಮ್ಮ ಕೈಸೇರಿತು. ಆಗ ನಮಗೆ
ಆನಂದವಾಯಿತು. ಆದರೆ ಆ ಆನಂದವು ಈಗ ಉಳಿದಿಲ್ಲ. ಇದಕ್ಕೆ ಅನೇಕ
ಕಾರಣಗಳಿವೆ. ಶಿಫ್ಟ್‌ಪದ್ಧತಿಯು ಈ ತರದ ಕುಂಠಿತ ಪ್ರಗತಿಗೆ ಶಿಕ್ಷಕರ ನಿರು
ತ್ಸಾಹವೊಂದೇ ಕಾರಣವಲ್ಲದಿದ್ದರೂ ಅದೂ ಒಂದು ಪ್ರಮುಖ ಕಾರಣವೆಂದು
ಹೇಳದಿರಲು ಉಪಾಯವು ಉಳಿದಿಲ್ಲ.

ಶಿಫ್ಟ್ ಪದ್ಧತಿಯನ್ನು ಪ್ರಾರಂಭಿಸುವಾಗ ಹೆಚ್ಚಿನ ಶಿಕ್ಷಕರ ಪೂರ್ಮೈಕೆಯ
ದಾರಿಯಲ್ಲಿ ಇರುವ ತೊಂದರೆಯನ್ನು ಪರಿಹರಿಸುವದು, ಸ್ಥಳಾಭಾವದ ಮೂಲಕ
ವಾಗಿ ಹೆಚ್ಚಿಗೆ ಹುಡುಗರನ್ನು ಶಾಲೆಗೆ ಸೇರಿಸಿಕೊಳ್ಳಲು ಇರುವ ಅಡಚಣಿಯನ್ನು
ಕಡಿಮೆಮಾಡುವದು, ಇವನ್ನೆ ನಾವು ಮುಖ್ಯ ಉದ್ದೇಶಗಳನ್ನಾಗಿ ಇಟ್ಟುಕೊಂಡಿ
ದ್ದೆವು. ಈಗಲೂ ಇವೇ ಧ್ಯೇಯಗಳು ನಮ್ಮ ಮುಂದಿರುವವು. ಶಿಕ್ಷಕರ
ಮೇಲೆ ಹೆಚ್ಚಿನ ಭಾರವನ್ನು ಹಾಕುವದಾಗಲಿ ಅವರಿಗೆ ಈಗ ಕೆಲಸ ಕಡಿಮೆ
ಇರುವದೆಂದಾಗಲಿ ನಮ್ಮ ಹೇಳಿಕೆಯಿಲ್ಲ. ಆದರೂ ಸಾಕ್ಷರತಾ ಪ್ರಸಾರದಂಥ
ಉಚ್ಚ ಧ್ಯೇಯದ ಸಾಧನೆಯು ಕಾರ್ಯದಲ್ಲಿ ಅಲ್ಪಸ್ವಲ್ಪ ತೊಂದರೆಯು ಬಂದರೆ
ಶಿಕ್ಷಕರು ಅವನ್ನೇ ಮುಂದೆಮಾಡಿ ಶಿಫ್ಟ್‌ಪದ್ಧತಿಯ ಪ್ರಗತಿಗೆ ವಿಘ್ನವನ್ನು
ತಂದೊಡ್ಡಬಾರದೆಂದು ನಮ್ಮ ಖಂಡಿತವಾದ ಅಭಿಪ್ರಾಯವಿರುವದು. ಈಗಾಗಲೆ
ಬಾಲಕರ ವರ್ಗ ಮತ್ತು ಮೊದಲನೆಯ ಇಯತ್ತೆ ಇವುಗಳಲ್ಲಿ ಶಿಫ್ಟ್‌ಪದ್ಧತಿಯನ್ನು
ಪ್ರಾರಂಭಿಸಿರುವ ಶಾಲೆಗಳಲ್ಲಿ ಈ ವರ್ಷ ಎರಡನೆಯ ಇಯತ್ತೆಯಲ್ಲಿಯೂ ಇದನ್ನು
ಪ್ರಾರಂಭಿಸಬೇಕು. ಇಂಥ ಶಾಲೆಗಳಲ್ಲಿ ಕೆಲಸಮಾಡುವ ಶಿಕ್ಷಕರು ಕಲಿಸುವ
ವಿದ್ಯಾರ್ಥಿಗಳ ಸಂಖ್ಯೆಯು ಸರಾಸರಿಯು ಎರಡೂ ವೇಳೆಗಳಲ್ಲಿ ಕೂಡಿ ೪೦ ಕ್ಕಿಂತ
ಹೆಚ್ಚು ಇರಲೇಬೇಕು. ಶಿಕ್ಷಕರು ಇವೆಲ್ಲ ಸಂಗತಿಗಳನ್ನು ಪರ್ಯಾಲೋಚಿಸಿ
ಇನ್ನೂ ಹೆಚ್ಚು ಉತ್ಸಾಹದಿಂದ ಕೆಲಸಮಾಡಿ ಶಿಫ್ಟ್‌ಪದ್ಧತಿಯನ್ನು ಯಶಸ್ವಿ
ಯನ್ನಾಗಿ ಮಾಡುವರೆಂದು ಆಶಿಸಲಾಗಿದೆ.

ಹೊಸ ಶಿಕ್ಷಣ

ಲೇಖಕರು :— ಶ್ರೀ. ಆಯ್. ಸಿ. ತಂಬದ ಬಿ. ಎ. ಬಿ. ಟಿ.

ಜಗತ್ತಿನ ಪರಿಸ್ಥಿತಿಯು ಯಾವಾಗಲೂ ಒಂದೇ ಸಮನಾಗಿರದೆ ಕಾಲಕಾಲಕ್ಕೆ
ದಲಾಗುತ್ತ ಹೋಗುತ್ತದೆ. ಆಗಾಗ್ಗೆ ಶಾಸ್ತ್ರೀಯ ಶೋಧಗಳಾಗಿ ಪ್ರಕೃತಿ
ಷಯಕ ಜ್ಞಾನವು ಬೆಳೆಯುತ್ತ ಹೋಗುವದು; ಮಹಾತ್ಮರು ಜನಿಸಿ ಜೀವನ
ಾರ್ಥಕ್ಯದ ಹೊಸ ಹೊಸ ಮಾರ್ಗಗಳನ್ನು ಕಂಡು ಹಿಡಿಯುವರು; ಹೊಸ
ತ್ವಗಳನ್ನು ಬೋಧಿಸುವರು; ಹೊಸ ಸಿದ್ಧಾಂತಗಳನ್ನು ಬೆಳಕಿಗೆ ತರುವರು.
ನತೆಯಲ್ಲಿ ಹೊಸ ವಿಚಾರಗಳು ತಲೆದೋರಿ ಸಾಮಾಜಿಕ ಜೀವನವು ಬದಲಾಗುತ್ತ
ೋಗುವದು. ಪರಿಸ್ಥಿತಿಯು ಬದಲಾಗುತ್ತ ನಡೆದಂತೆ ಶಿಕ್ಷಣವೂ ಬದಲಾಗು
ದು. ಕಾಲಕಾಲಕ್ಕೆ ಶಿಕ್ಷಣದ ಧ್ಯೇಯ-ಕ್ರಮ- ಪದ್ಧತಿಗಳು ಹೇಗೆ ಬದಲಾ
ುತ್ತ ಬಂದಿರುವವೆಂಬುದನ್ನು ಶಿಕ್ಷಣದ ಇತಿಹಾಸದ ಮೂಲಕ ನಾವು ತಿಳಿದು
ೊಳ್ಳಬಹುದು. ಆದರೆ ಹೊಸದೆಂದು ಕರೆಯಿಸಿಕೊಳ್ಳುವ ಶಿಕ್ಷಣದ ಸಾಮಾನ್ಯ
ವಿಶಿಷ್ಟತೆಗಳನ್ನು ಮಾತ್ರ ಸಂಕ್ಷೇಪವಾಗಿ ಇಲ್ಲಿ ಹೇಳುತ್ತೇವೆ.

ಈಗ ಹೊಸದೆಂದು ಕರೆಯಲ್ಪಡುವ ಶಿಕ್ಷಣವು ನಿಜವಾಗಿಯೂ ಅಷ್ಟು
ೊಸದಲ್ಲ. ರೂಸೋನಿಗಿಂತ ಮೊದಲು ಎಷ್ಟೋ ವರ್ಷಗಳಿಂದ ಜನರಿಗೆ ಅದರ
ಾಮಾನ್ಯ ಕಲ್ಪನೆಯಾಗಿತ್ತು. ರುಸೋನಿಗಿಂತ ಹಿಂದಿನವರಾದ ಕೊಮೆನಿಯಸ್,
ಾಕ್, ಮೊದಲಾದ ಶಿಕ್ಷಣ ಸುಧಾರಕರ ಗ್ರಂಥಗಳನ್ನು ಚೆನ್ನಾಗಿ ಪರಿಶೀಲಿಸಿ
ೋಡಿದರೆ ಈ ಮಾತಿನ ಸತ್ಯತೆಯು ನಿದರ್ಶನಕ್ಕೆ ಬರುತ್ತದೆ. ಆದರೆ ತನ್ನ
ಾಲದವರೆಗೆ ನಡೆದುಬಂದ ಶಿಕ್ಷಣಕ್ರಮದ ದೋಷಗಳನ್ನು ಒಲವಾಗಿ ಖಂಡಿಸಿ
ೊಸ ಶಿಕ್ಷಣದ ತತ್ವಗಳನ್ನು ಜನರ ಮನಸ್ಸಿನಲ್ಲಿ ನಾಟುವಂತೆ ಸಾರಿಹೇಳಿ ಶಿಕ್ಷಣ
ಪಂಚದಲ್ಲಿ ಮೊದಲು ಕ್ರಾಂತಿಯನ್ನೆಬ್ಬಿಸಿದವನು ರೂಸೋ. ಅವನ ತರು
ಾಯ ಪೆಸ್ಟಲಾಝಿ. ಹರ್ಬಾರ್ಟ್, ಫ್ರೊಬೆಲ್, ಮಾಂಟೆಸರಿ ಮೊದಲಾದ ಶಿಕ್ಷಣ
ುಧಾರಕರು ಅನೇಕ ಶೈಕ್ಷಣಿಕ ಪ್ರಯೋಗಗಳನ್ನು ಕೈಕೊಂಡು ಹೊಸ ಹೊಸ
ಕ್ಷಣ ಕ್ರಮಗಳನ್ನು ಕಂಡುಹಿಡಿದರು; ಹಾಗು ರೂಸೋ ಪ್ರಾರಂಭಿಸಿದ
ಾರ್ಯವನ್ನು ಒಹಳವಾಗಿ ಮುಂದುವರಿಸಿದರು. ಈಗಲೂ ಸಹ ಇಂಗ್ಲಂಡ,
ಮೇರಿಕಾ, ಮುಂತಾದ ಮುಂದುವರಿದ ಎಲ್ಲ ರಾಷ್ಟ್ರಗಳಲ್ಲಿ ಹೊಸ ಶೈಕ್ಷಣಿಕ
ಪ್ರಯೋಗಗಳು ನಡೆಯುತ್ತಲಿವೆ.

ಹೊಸ ಶಿಕ್ಷಣದ ಮೂಲ ತತ್ವವು ಯಾವುದು ? ಒಂದೇ ಮಾತಿನಲ್ಲಿ ಹೆ
ವದಾದರೆ ಅದು ಹೀಗೆ : " ಶಿಕ್ಷಣ ಪ್ರಪಂಚದಲ್ಲಿ ಬಾಲಕನಿಗೇ ಪ್ರಾಮುಖ
ಹೆಚ್ಚು. ಮಗುವು ಎಲ್ಲ ಶಿಕ್ಷಣ ಕಾರ್ಯದ ಕೇಂದ್ರವು." ಈ ತತ್ವ
ಬಹಳ ಸರಳವಿದೆ. ಆದರೆ ಇದರ ಮಹತ್ವವು ಜನರಿಗೆ ಚನ್ನಾಗಿ ಅರಿಕೆಯಾ
ಕಾದರೆ ಎಷ್ಟೋ ಶತಮಾನಗಳು ಬೇಕಾದವು; ಅದು ಸಂಪೂರ್ಣವಾಗಿ ಇ
ಆಚರಣೆಯಲ್ಲಿ ಬಂದಿಲ್ಲ; ಬರಬೇಕಾದರೆ ಇನ್ನೂ ಎಷ್ಟೋ ವರ್ಷಗಳು
ಯಬಹುದು.

ಹಳೆಯ ಶಿಕ್ಷಣದಲ್ಲಿ ಬಾಲಕನಿಗಿಂತ ಅಭ್ಯಾಸ ವಿಷಯಕ್ಕೆ ಹೆಚ್ಚು ಪ್ರಾ
ಖ್ಯತೆ ದೊರಕಿತ್ತು. ಬಾಲಕನು ಒಬ್ಬ ವ್ಯಕ್ತಿಯೆಂದೂ ಮತ್ತು ಅವನ ವ್ಯಕ್ತಿತ
ಗೌರವಾರ್ಹವೆಂದೂ ಹಿಂದಿನ ಶಿಕ್ಷಕರು ತಿಳಿದಿರಲಿಲ್ಲ. ಅವನ ವ್ಯಕ್ತಿತ್ವವ
ಮೂಲೆಗೊತ್ತಿ ತಮಗೆ ಬೇಕಾದ ವಿಷಯಗಳನ್ನು ಅವರು ಬೋಧಿಸುತ್ತಿದ್ದ
ಮಕ್ಕಳ ಅಭಿರುಚಿ, ಆಸಕ್ತಿಗಳ ಕಡೆಗೆ ಲಕ್ಷ್ಯಕೊಟ್ಟಿರಲಿಲ್ಲ. ಬಾಲಕರಿಗೆ ಯ
ಸ್ವಾತಂತ್ರ್ಯವೂ ಇದ್ದಿರಲಿಲ್ಲ. ಮಕ್ಕಳು ಅಭ್ಯಾಸ ವಿಷಯಗಳನ್ನು ಕಲಿಯು
ಹಾಗು ಅವರಿಗೆ ಕಲಿಸುವ, ಕ್ರಮಕ್ಕೆ ಸಾಕಷ್ಟು ಗಮನವನ್ನು ಕೊಟ್ಟಿರ
" ಬಾಲಕನ ಮನಸ್ಸು ಒಂದು ಬರಿದಾದ ಚೀಲ, ಶಿಕ್ಷಕರು ಬಾಹ್ಯವಿಷಯಗಳ
ಈ ಚೀಲವನ್ನು ತುಂಬಬೇಕು " ಎಂಬ ಗ್ರಹಿಕೆಯು ಎಲ್ಲ ಕಡೆಯಲ್ಲಿಯೂ ಇದ್ದಿ
ಬಿಟ್ಟಾರೆ, ಹಳೆಯ ಶಿಕ್ಷಣವು ವಿಷಯ ಪ್ರಧಾನವಾಗಿದ್ದಿತು. ಈಗ ಇ
ಬದಲಾಗುತ್ತ ನಡೆದಿದೆ. ಶಿಕ್ಷಣಕಾರ್ಯದಲ್ಲಿ " ವಿಷಯ ಪ್ರಾಧಾನ್ಯತೆ '
ತತ್ವಕ್ಕಿಂತ " ಶಿಶುಪ್ರಾಧಾನ್ಯತೆ "ಯ ತತ್ವಕ್ಕೆ ಹೆಚ್ಚು ಮಾನ್ಯತೆ ದೊರ
ಶಿಕ್ಷಣಪ್ರಪಂಚದಲ್ಲಿ ಬಾಲಕನು ಕೇಂದ್ರಸ್ಥಾನದಲ್ಲಿರುತ್ತಾನೆ. ಬಾಲಕನ ವ
ತ್ವಕ್ಕೆ ಗೌರವವನ್ನು ಕೊಡುವದು ಅತ್ಯಾವಶ್ಯಕವೆಂದು ಎಲ್ಲರಿಗೂ ವಿದಿತವಾ
ವಿದ್ಯಾರ್ಜನೆಯು ಶಿಕ್ಷಣದ ಅಂತಿಮಧ್ಯೇಯವಾಗಿರದೆ ವ್ಯಕ್ತಿತ್ವವಿಕಾಸದ ಒ
ಮುಖ್ಯ ಸಾಧನೆಯಾಗಿರುತ್ತದೆ. ಈ ಹೊಸದೃಷ್ಟಿಕೋನವು ಶಿಕ್ಷಣದ ಧ್ಯೇಯ
ವಿಷಯ-ಪದ್ಧತಿ, ಶಿಕ್ಷಕನ ಸ್ಥಾನ-ಮಾನ, ಶಾಲೆಯ ಶಿಸ್ತು-ವಾತಾವ
ಮುಂತಾದ ಎಲ್ಲ ವಿಷಯಗಳಲ್ಲಿ ಅತ್ಯಂತ ಮಹತ್ವವಾದ ಬದಲಾವಣೆಗಳನ್ನು
ಮಾಡಿದೆ.

ಶಿಕ್ಷಣದ ಧ್ಯೇಯ

ಮೊದಲು, ಶಿಕ್ಷಣದ ಧ್ಯೇಯಗಳಲ್ಲುಂಟಾದ ಬದಲಾವಣೆಗಳನ್ನು ವಿ
ಸುವಾ. " ಶಿಕ್ಷಣವು ಸಂಪೂರ್ಣ ಜೀವನದ ಪೂರ್ವ ಸಿದ್ಧತೆ " ಎಂದು ಸ್ಪೆನ್ಸ
ಹೇಳಿದ ಉಕ್ತಿಯೇ ಬಹುಕಾಲದ ವರೆಗೆ ವಾಡಿಕೆಯಲ್ಲಿತ್ತು. ಅಹರಿ, " ಶಿಕ್ಷ

ಜೀವನದ ಪೂರ್ವಸಿದ್ಧತೆಯಲ್ಲ, ಅದು ಜೀವನವೇ" ಎಂದು ಆಧುನಿಕ ಶಿಕ್ಷಣ ಸುಧಾರಕರು ಅಭಿಪ್ರಾಯಪಡುತ್ತಾರೆ. ಶಿಕ್ಷಣವು ಜೀವನದ ಅಭಿವೃದ್ಧಿಯಿಂದುಂ ಟಾಗುವ ವ್ಯಕ್ತಿತ್ವವಿಕಾಸವೆಂದು ಈಗ ತಿಳಿವಳಿಕೆಯುಂಟಾಗಿದೆ. ಜೀವನದ ಅಭಿ ವೃದ್ಧಿಯು ಕೇವಲ ಶಾರೀರಿಕ ಅಥವಾ ಮಾನಸಿಕ ಬೆಳವಣಿಗೆಯಲ್ಲ; ಅದು ಇವೆರಡ ಸಮನ್ವಯ ಬೆಳವಣಿಗೆಯಾಗಿರುತ್ತದೆ. ಈ ಬೆಳವಣಿಗೆಯುಂಟಾಗಬೇಕಾದರೆ ಬಾಲಕರಲ್ಲಿ ಸಹಜವಾಗಿದ್ದ ಕ್ರಿಯಾತ್ಮಕ ಚೈತನ್ಯಗಳನ್ನು ಹೊರಗೆಡಹಬೇಕು ಅವುಗಳ ಬೆಳವಣಿಗೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕು; ಹಾಗು ಸ್ವಸಾಮರ್ಥ್ಯ ಪ್ರಕಾಶನಕ್ಕೆ ಸರಿಯಾದ ಪರಿಸ್ಥಿತಿ–ಸನ್ನಿವೇಶಗಳನ್ನು ಒದಗಿಸಿ ಕೊಡಬೇಕು ಅವುಗಳ ನಿರ್ಮಾಣ ಮಾಡಿಕೊಡಬೇಕು.

ಶಿಕ್ಷಣದ ವಿಷಯ–ಪದ್ಧತಿ

ಹಳೆಯ ಶಿಕ್ಷಣದಲ್ಲಿ ಮಕ್ಕಳಿಗೆ ಸುಲಭವಾಗಿ ತಿಳಿಯದ ವಿಷಯಗಳೇ ಪಾಠ ವಿಷಯಗಳಾಗಿದ್ದವು. ಪಾಠ ವಿಷಯಗಳು ಗಹನವಿದ್ದಷ್ಟು ಮತ್ವವಾದವುಗಳೆಂಬ ಗ್ರಹಿಕೆಯಿತ್ತು. ಪ್ರಬುದ್ಧನು ಅಭ್ಯಸಿಸುವ ವಿಷಯಗಳನ್ನೇ ಬಾಲಕನು ಶ್ರವ ಬಟ್ಟು ಕಲಿಯಬೇಕಾಗಿದ್ದಿತು. ಬಾಲಕನಿಗೆ ರುಚಿಸದಂಥ ಕೆಲವು ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವಂತೆ ಪ್ರೇರಿಸಿ ಸ್ಮರಣಾಕ್ರಿಯೆಯನ್ನು ಬಲಪಡಿಸುವದ ಅಗತ್ಯವಾಗಿತ್ತು. ಕೇವಲ ಸತ್ವವಿಲ್ಲದ ಅನುಕರಣಕ್ರಮವು ಬಳಕೆಯಲ್ಲಿದ್ದಿತು ಬಾಲಕರು ಗಿಳಿಯ ಹಾಗೆ ಪಾಠ ಮಾಡುತ್ತಿದ್ದರು; ಅರ್ಥದ ಕಡೆಗೆ ಲಕ್ಷ್ಯವೇ ಇರಲಿಲ್ಲ. ಹೊಸ ಶಿಕ್ಷಣದಲ್ಲಿ ವಿಷಯಗಳ ಆಯ್ಕೆ ಹಾಗು ಅವುಗಳನ್ನು ಕಲಿಸುವ ಕ್ರಮ ಇವು ಮನಶ್ಶಾಸ್ತ್ರಾನುಗಾಮಿಯಾಗಿವೆ. ಬಾಲಕನ ಮನೋವಿಕಾಸದ ವಿವಿಧ ಮೆಟ್ಟಿಲುಗಳಿಗೆ ಸುಗಮ, ಸುಸಂಗತವಾಗುವಂಥ ವಿಷಯಗಳನ್ನು ಆರಿಸ ಬೇಕಾಗುತ್ತದೆ. ಹೊರಗಿನಿಂದ ವಿಷಯಗಳನ್ನು ಮಕ್ಕಳ ಮನಸ್ಸೆಂಬ ಚೀಲದಲ್ಲಿ ತುಂಬುವದೇ ಶಿಕ್ಷಣದ ಕಾರ್ಯವೆಂಬ ತಪ್ಪುತಿಳಿವಳಿಕೆಯು ದೂರಾಗಿ ಸರಿಯಾದ ಸನ್ನಿವೇಶಗಳನ್ನೇರ್ಪಡಿಸಿ ಬಾಲಕರಲ್ಲಿರುವ ಸಹಜಶಕ್ತಿಗಳನ್ನು ಪ್ರಚೋದನೆಗೊಳಿಸಿ ಅವು ವಿಕಾಸ ಹೊಂದುವಂತೆ ಮಾಡುವದೇ ಶಿಕ್ಷಣದ ಆದ್ಯಕರ್ತವ್ಯವೆಂಬ ಭಾವನೆಯು ದೃಢವಾಗಿದೆ. ಅಭ್ಯಾಸ ವಿಷಯಗಳನ್ನು ಬಾಲಕರು ಸ್ವತಃ ತಮ್ಮ ಸಹಜ ಶಕ್ತಿಗಳನ್ನು ಪ್ರಯೋಗಿಸಿ ಈಗ ತಿಳಿದುಕೊಳ್ಳಬೇಕಾಗುತ್ತದೆ. ಮಕ್ಕಳ ಶಿಕ್ಷಣ ಕಾರ್ಯದಲ್ಲಿ ಅವರ ಆಸಕ್ತಿ, ಒಲವು, ಸೌತ್ಪೈಮ್ಯ, ಸ್ವಪ್ರಮಯತ್ನ ಇವುಗಳಿಗೆ ಹೆಚ್ಚಾಗಿ ಮಹತ್ವವು ದೊರೆತಿದೆ. ಈಗ ಪ್ರಯೋಗಿಸಲ್ಪಡುವ ಡಾಲ್ಟನ್, ಯೋಜನಾ, ಶೋಧಕ, ಕ್ರೀಡನ ಮುಂತಾದ ಶಿಕ್ಷಣ ಪದ್ಧತಿಗಳ ಉದ್ದೇಶವಾದರೂ ಇದೇ

ಇರುತ್ತದೆ. ಬಾಲಕರು ಸ್ವಪ್ರಯತ್ನದಿಂದ ಜ್ಞಾನಾರ್ಜನೆಯನ್ನು ಮಾಡಬೇಕಾಗಿರುವದರಿಂದ ಶಿಕ್ಷಣಕ್ಷೇತ್ರದಲ್ಲಿ ಅವರ ಹೊಣೆಗಾರಿಕೆಗಳೇ ವಿಶೇಷವಾಗಿರುತ್ತವೆ. ಆದುದರಿಂದಲೇ ಹೊಸ ಶಿಕ್ಷಣವನ್ನು "ಸ್ವಯಂ ಶಿಕ್ಷಣ"ವೆಂದು ಕರೆಯುವ ರೂಢಿಯಿದೆ.

ಶಿಕ್ಷಕನ ಸ್ಥಾನ-ಕರ್ತವ್ಯ

ಹೊಸ ಶಿಕ್ಷಕನ ಮೊದಲಿನ ಸ್ಥಾನಮಾನಗಳಲ್ಲಿ ಬದಲಾವಣೆಗಳಾಗಿವೆ. ಶಿಕ್ಷಣವು ತ್ರಿಮುಖವಾದುದೆಂದು ಸರ್ ಜಾನ್ ಆಡ್ಯಾಮ್ಸನು ಒಂದು ಕಡೆಗೆ ಹೇಳಿದ್ದಾನೆ. ಬಾಲಕ—ವಿಷಯ—ಶಿಕ್ಷಕ ಇವೇ ಶಿಕ್ಷಣದ ಮೂರು ಮುಖಗಳು. ಹಳೆಯ ಶಿಕ್ಷಣದಲ್ಲಿ ಅವುಗಳ ಕ್ರಮವು ಹೀಗಿದ್ದಿತು: ಶಿಕ್ಷಕ—ವಿಷಯ—ಬಾಲಕ. ಶಿಕ್ಷಕನು ಪ್ರಥಮಸಾನದಲ್ಲಿದ್ದನು; ಬಾಲಕನು ಅವನ ಅನುಯಾಯಿಯಾಗಿದ್ದನು. ಬಾಲಕನ ವ್ಯಕ್ತಿತ್ವಕ್ಕೆ ಗಮನವನ್ನೇ ಕೊಟ್ಟಿರಲಿಲ್ಲ. ಬಾಲಕನ ವ್ಯಕ್ತಿತ್ವವನ್ನು ಮೂಲೆಗೊತ್ತಿ ಇಲ್ಲವೆ ಕೊಲೆ ಮಾಡಿ ತನ್ನ ವ್ಯಕ್ತಿತ್ವವು ಅವನಲ್ಲಿ ನಾಟುವಂತೆ ಶಿಕ್ಷಕನು ಯಾವಾಗಲೂ ಪ್ರಯತ್ನಿಸುತ್ತಿದ್ದನು. ಬಾಲಕನ ಮನೋವಿಕಾಸದ ರೀತಿ-ನಿಯಮಗಳನ್ನು ತಿಳಿಮುಕೊಳ್ಳಲು ಯತ್ನಿಸದೆ ಶಿಕ್ಷಕನು ತನಗೆ ಉತ್ತಮವೆನಿಸಿದ ವಿಷಯಗಳನ್ನು ಕಲಿಸುತ್ತಿದ್ದನು. ಅವುಗಳ ಮುಖಾಂತರ ಮಾನಸಿಕ ಕೆಲವು ಶಕ್ತಿಗಳು ಬೆಳೆಯುವವೆಂಬ ಭರವಸೆಯಿಂದ ಬಾಲಕನ ಪರವಾಗಿ ಶಿಕ್ಷಕನು ತಾನೇ ವಿಚಾರ ನಿರ್ಣಯಗಳನ್ನು ಮಾಡುತ್ತಿದ್ದನು. ಜ್ಞಾನ-ಅನುಭವಗಳನ್ನು ಪಡೆಯುತ್ತಿದ್ದನು, ಹಾಗು ಅವುಗಳನ್ನು ವ್ಯವಹಾರದಲ್ಲಿ ತರುತ್ತಿದ್ದನು. ಈಚೆಗೆ ಇದೆಲ್ಲವೂ ಬದಲಾಗಿದೆ. ಹೊಸ ಶಿಕ್ಷಣದಲ್ಲಿ ಶಿಕ್ಷಕನಿಗೆ ಹೆಚ್ಚು ಮಹತ್ವವನ್ನು ಕೊಡದೆ ಬಾಲಕನಿಗೆ ಅಗ್ರಸ್ಥಾನವನ್ನು ಕೊಟ್ಟಿರುವರು. ಶಿಕ್ಷಕನು ತನ್ನ ವ್ಯಕ್ತಿತ್ವವನ್ನು ಬದಿಗಿಟ್ಟು ಬಾಲಕನ ವ್ಯಕ್ತಿತ್ವವನ್ನು ಕೇಂದ್ರದಲ್ಲಿಡುವದಕ್ಕೆ ಯಾವಾಗಲೂ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ಬಾಲಕನಿಗೂ ಅಭ್ಯಾಸ ವಿಷಯಗಳಿಗೂ ಪ್ರತ್ಯಕ್ಷ ಸಂಬಂಧವು ಹೆಚ್ಚಾಗುತ್ತ ನಡೆದಿರುವದರಿಂದ ಶಿಕ್ಷಕನ ಮಧ್ಯಸ್ಥಿಕೆಯು ಕ್ರಮೇಣ ಕಡಿಮೆಯಾಗುತ್ತಲಿದೆ. ಶಿಕ್ಷಕನು ಎಷ್ಟೇ ಪ್ರತಿಭಾಶಾಲಿಯೂ ಪಂಡಿತನೂ ಆಗಿದ್ದರೂ ತಾನೇ ಹೆಚ್ಚು ಮಾತನಾಡದೆ ಬಾಲಕರೇ ಮುಂದೆ ಬಂದು ಚಟುವಟಿಕೆಯನ್ನು ತೋರುವಂತೆ ಮಾಡಬೇಕಾಗುತ್ತದೆ. ಸ್ವಪ್ರಯತ್ನದಿಂದ ಸಂಪಾದಿಸಿದ ಜ್ಞಾನವು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವದು, ಅದರಿಂದ ಬಾಲಕರಿಗೆ ಸ್ವಾನುಭವವು ದೊರೆತು ಆನಂದ ಉಂಟಾಗುವದು, ಮತ್ತು ಅದನ್ನು ವ್ಯವಹಾರದಲ್ಲಿ ಉಪಯೋಗಿಸಲು ಅವರಲ್ಲಿ ಜಾಣತನವೂ ಆತ್ಮವಿಶ್ವಾಸವೂ ಉಂಟಾಗುವವು

ಶಿಕ್ಷಕನ ಕರ್ತವ್ಯವನ್ನು ಕುರಿತು ಫ್ರೊಬೆಲ್ಲನು ಹೀಗೆ ಹೇಳಿದ್ದಾನೆ: "ಅವನು (ಶಿಕ್ಷಕನು) ಮಕ್ಕಳ ಹಿತಚಿಂತಕನಾಗಿದ್ದು ಅವರು ಮಾಡುತ್ತಿರುವ ಕೆಲಸದ ಮೇಲ್ವಿಚಾರಣೆ ಮಾಡುತ್ತಿರಬೇಕು. ಪ್ರತಿಯೊಬ್ಬ ಬಾಲಕನು ತನ್ನ ನೈಸರ್ಗಿಕ ಶಕ್ತಿಗಳಿಗನುಸಾರವಾಗಿ ಪ್ರವರ್ತಿಸುವಂತೆ ತಕ್ಕ ಸನ್ನಿವೇಶಗಳನ್ನು ಏರ್ಪಡಿಸ ಬೇಕು. ಮುಖ್ಯವಾಗಿ ಶಿಕ್ಷಕನು ಬಾಲಕನನ್ನು ಅನುಸರಿಸಬೇಕು." ಈ ಮಾತು ಆಧುನಿಕ ಶಿಕ್ಷಕನಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ.

ಶಾಲೆಯ ಶಿಸ್ತು

ಇನ್ನು ಶಿಸ್ತಿನ ವಿಷಯವಾಗಿ ಹೊಸ ಶಿಕ್ಷಣದ ಮತವೇನಿರುವದೆಂಬದನ್ನು ವಿಚಾರಿಸೋಣ. ಹಳೆಯ ಶಿಕ್ಷಣದಲ್ಲಿ ಶಿಸ್ತು ಬೆತ್ತದ ಬೆದರಿಕೆಯನ್ನೇ ಅವಲಂಬಿ ಸಿತ್ತು. ಭಯ, ಜಿಗುಪ್ಸೆ, ಕಾಠಿಣ್ಯ, ಉಗ್ರತೆ, ಕ್ರೂರದೇಹದಂಡನೆ ಮೊದ ಲಾದವುಗಳಿಂದ ಶಾಲೆಯ ವಾತಾವರಣವು ತುಂಬಿ ತುಳುಕುತ್ತಿತ್ತು. ಶಾಲೆಗಳು ನೆರೆಮನೆಗಳಿಂದೂ ಶಿಕ್ಷಕರು ಯಮದೂತರೆಂದೂ ಬಾಲಕರು ತಿಳಿದಿದ್ದರು. ಬಾಲಕರಿಗೆ ಯಾವದೇ ತರಹದ ಸ್ವಾತಂತ್ರ್ಯವು ಇರುತ್ತಿರಲಿಲ್ಲ. ಅವರು ಕುರಿ ಗಳಂತೆ ನಡೆದುಕೊಳ್ಳಬೇಕಾಗುತ್ತಿತ್ತು. ಒಟ್ಟಾರೆ, ಹಳೆಯ ಪದ್ಧತಿಯ ಶಿಸ್ತು ಬಾಲಕರ ಸಹಜ ವಿಕಾಸಕ್ಕೆ ತಡೆಯನ್ನುಂಟುಮಾಡುವಂತಹದಿತ್ತು. ಇಂಥ ಶಿಸ್ತು ಅನವಶ್ಯಕವಾದದ್ದೆಂದೂ ಅಸ್ವಾಭಾವಿಕವಾದದ್ದೆಂದೂ ಹೊಸ ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಾರೆ. ಶಾಲೆಯ ವಾತಾವರಣವು ಮನೆಯ ವಾತಾ ವರಣದಂತೆ ಪ್ರೇಮ, ವಿಶ್ವಾಸ, ಸ್ವಾತಂತ್ರ್ಯ ಇವುಗಳಿಂದ ಕೂಡಿ ಆನಂದ ದಾಯಕವಾಗಿರಬೇಕು. ಈಗ ಶಾಲೆಯಲ್ಲಿ ಕ್ರೂರದೇಹದಂಡನೆಗೆ ಸ್ಥಾನವಿಲ್ಲ. ಮಕ್ಕಳು ತಪ್ಪುಮಾಡಿದರೆ ಅವರನ್ನು ದಂಡಿಸುವದರ ಬದಲು ಅವರ ತಪ್ಪಿನ ಮೂಲವನ್ನು ಶಿಕ್ಷಕರು ಕಂಡು ಹಿಡಿಯಬೇಕು. ವೈದ್ಯನು ರೋಗಿಯನ್ನು ಜನ್ಮಾಗಿ ಪರೀಕ್ಷಿಸಿ ಬಳಿಕ ಅವನ ಚಿಕಿತ್ಸೆ ಮಾಡುವಂತೆ ಶಿಕ್ಷಕನು ಅಪರಾಧಿಯ ದುರ್ವರ್ತನೆಯ ಕಾರಣಗಳನ್ನು ಕಂಡು ಹಿಡಿದು ಅವುಗಳನ್ನು ಹೋಗಲಾಡಿಸು ವದಕ್ಕೆ ಬೇಕಾದ ಉಪಾಯಗಳನ್ನು ಕೈಕೊಳ್ಳಬೇಕು. ತಪ್ಪುಗಾರನೊಡನೆ ಶಿಕ್ಷಕನು ಹೇಗೆ ನಡೆದುಕೊಳ್ಳಬೇಕೆಂಬುದನ್ನು ಕೊಮೆನಿಯುಸ್ಸನು ಹೀಗೆ ಹೇಳಿ ದ್ದಾನೆ: 'ವಾದ್ಯಗಾರನು ವೀಣೆಯಿಂದ ಸುಸ್ವರವನ್ನು ಹುಟ್ಟಿಸಲಿಕ್ಕೆ ತನಗೆ ಬಾರದಿದ್ದರೆ ಅದನ್ನು ಗೋಡೆಗೆ ಅಪ್ಪಳಿಸದೆ ಅಥವಾ ಅದಕ್ಕೆ ಏಟುಗಳನ್ನು ಕೊಡದೆ ತನ್ನ ಜಾಣತನವನ್ನೆಲ್ಲ ಉಪಯೋಗಿಸಿ ಅದರಿಂದ ಸುಶ್ರಾವ್ಯ ನಾದವನ್ನು ಹೊರ ಡಿಸಲು ಯತ್ನಿಸುತ್ತಾನೆ. ಹಾಗೆಯೇ ನಾವು ನಮ್ಮ ಜಾಣತನವನ್ನು ಉಪ

ಯೋಗಿಸಿ ತಪ್ಪು ಮಾಡುವ ಪ್ರವೃತ್ತಿಯುಳ್ಳ ಮಕ್ಕಳನ್ನು ಒಳ್ಳೇ ಹಾದಿಗೆ ಹಚ್ಚಬೇಕು. ಈಗ ಹಳೆಯ ಪರಿಸ್ಥಿತಿಯು ಕ್ರಮೇಣ ಇಲ್ಲದಂತಾಗಿ ಹೊಸ ಪರಿಸ್ಥಿತಿಯು ಉಂಟಾಗುತ್ತಲಿದೆ. ಸಾಮಾಜಿಕ ಪರಿಸ್ಥಿತಿಯು ಅರ್ಧ ಶತಮಾನದ ಹಿಂದೆ ಇದ್ದಂತೆ ಈಗ ಇರುವದಿಲ್ಲ. ಪ್ರಜಾಸತ್ತಾತ್ಮಕ ವಿಚಾರಗಳು ಸಮಾಜದಲ್ಲಿ ಹೆಚ್ಚೆಚ್ಚಾಗಿ ಪಸರಿಸಿದಂತೆ ಸ್ವನಿಯಂತ್ರಣದ ಅವಶ್ಯಕತೆಯು ಜನತೆಗೆ ಹೆಚ್ಚೆಚ್ಚಾಗಿ ಅನಿಸಹತ್ತಿದೆ. ಈಗ ಎಲ್ಲಕಡೆಯಲ್ಲಿಯೂ ಸ್ವಾತಂತ್ರ್ಯದ ಕೂಗು ಕೇಳಬರುತ್ತದೆ. ಶಾಲೆಯೆಂಬ ಸಮಾಜದಲ್ಲಿ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂಬ ಭಾವನೆಯು ಈಗ ಪ್ರಚಾರದಲ್ಲಿದೆ. ಮಕ್ಕಳು ಸ್ವಸಂತೋಷದಿಂದ ಶಾಲೆಯ ನಿಯಮಗಳನ್ನು ಪಾಲಿಸಬೇಕು, ಶಿಕ್ಷಕನಿಗೆ ಅಧೀನರಾಗಿರಬೇಕು. ಶಾಲೆಯು ಒಳಗಿನ ಅಡಳತೆಯನ್ನು ಬಾಲಕರೇ ನಿರ್ವಹಿಸಿ ಶಿಸ್ತಿನ ಮಹತ್ವವನ್ನು ತಾವೇ ತಿಳಿದುಕೊಳ್ಳಬೇಕು. ಬಾಲಕರಿಗೆ ಸ್ವತಂತ್ರವಾಗಿ ನಿರ್ಣಯಕ್ಕೆ ಬರುವಂತೆ ನಾನಾ ರೀತಿಯಿಂದ ಅವಕಾಶವನ್ನು ಕಲ್ಪಿಸಿಕೊಟ್ಟು ಹೊಸ ಶಿಕ್ಷಣವು ಸ್ವಸಂತೋಷಯುಕ್ತವಾದ ಅಧೀನತೆಯನ್ನು ಕಲಿಸುತ್ತದೆ.

ಪರೀಕ್ಷೆಗಳು

ಹಳೆಯ ಶಿಕ್ಷಣದಲ್ಲಿ ವಿದ್ಯಾಭ್ಯಾಸದ ಫಲಗಳನ್ನು ಶಾಸ್ತ್ರೀಯವಾಗಿ ಅಳತೆ ಮಾಡಲು ಸಾಧ್ಯವಿರಲಿಲ್ಲ. ಇತ್ತೀಚೆಗೆ ವಿಜ್ಞಾನಶಾಸ್ತ್ರವು ಪ್ರಬಲವಾಗಿ ಪ್ರಪಂಚದ ದೃಶ್ಯ ಮತ್ತು ಅದೃಶ್ಯ ಪದಾರ್ಥಗಳನ್ನು ಅಳತೆ ಮಾಡಲು ಪ್ರಯೋಗಗಳು ನಡೆಯುತ್ತಲಿವೆ. ಶಿಕ್ಷಣ ಪ್ರಪಂಚದಲ್ಲಿ ಬಾಲಕರ ಬುದ್ಧಿ ಶಕ್ತಿಯನ್ನೂ ವಿದ್ಯಾಭಿವೃದ್ಧಿಯನ್ನೂ ನಿಶ್ಚಿತವಾಗಿ ಅಳತೆಮಾಡಲು ಪ್ರಯತ್ನಗಳು ನಡೆದಿವೆ. ಅದರ ಸಲುವಾಗಿ ಕೆಲವು ಬುದ್ಧಿಮಾಪಕ ಪರೀಕ್ಷೆಗಳು ಸಿದ್ಧವಾಗಿವೆ. ಈ ಹೊಸ ಪರೀಕ್ಷೆಗಳು ರೂಢಿಯಲ್ಲಿರುವ ಪರೀಕ್ಷೆಗಳಿಗಿಂತಲೂ ಶ್ರೇಷ್ಠವಾದವುಗಳೆಂಬುದು ಸಹಜ. ನಿಜವಾಗಿ, ಆಚರಣೆಯಲ್ಲಿದ್ದ ಪರೀಕ್ಷೆಗಳು ಶಿಕ್ಷಣಪ್ರಪಂಚದ ದುರಂತಗಳು. ಅವು ಹುರುಳಿಲ್ಲದ ಪರೀಕ್ಷೆಗಳೆಂಬದು ಪ್ರತಿಯೊಬ್ಬ ಪರೀಕ್ಷಕನಿಗೆ ಅನುಭವಸಿದ್ಧವಾದ ಮಾತು. ಎಷ್ಟೋಸಾರೆ ಹಲವು ಸ್ವಭಾವತಃ ಬುದ್ಧಿವಂತ ಬಾಲಕರು ನಾನಾ ಕಾರಣಗಳ ಮೂಲಕ ಪರೀಕ್ಷೆಯ ಕಾಲದಲ್ಲಿ ಎದೆಯೊಡೆದುಕೊಂಡು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವದಿಲ್ಲ. ಹಾಗು ಒಮ್ಮೊಮ್ಮೆ ಕೆಲವು ದಡ್ಡ ಹುಡುಗರು ಅವರ ಯೋಗ್ಯತೆಗೆ ದೊರೆಯಬಹುದಾದ ಗುಣಗಳಿಗಿಂತಲೂ ಹೆಚ್ಚು ಗುಣಗಳನ್ನು ಪಡೆಯುತ್ತಾರೆ. ಆಚರಣೆಯಲ್ಲಿರುವ ಪರೀಕ್ಷೆಗಳ ದಬ್ಬಾಳಿಕೆಯಂತೂ ಹೆಚ್ಚಾಗಿ ಹೋಗಿಬಿಟ್ಟಿದೆ. ಪರೀಕ್ಷೆಯಲ್ಲಿ ತೇರ್ಗಡೆಹೊಂದುವದೇ

ಕ್ಷಣದ ಗುರಿಯಾಗಿಬಿಟ್ಟಿದೆ. ಪರೀಕ್ಷೆಯ ಪಾಠ ಟಿಪ್ಪಣಿಗಳನ್ನು ಮುಖೋದ್ಗತ ಮಾಡುವ ಪರಿಪಾಠವು ಮಿತಿಮೀರಿ ಬೆಳೆದಿದೆ. ವಾಡಿಕೆಯಾಗಿ ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿಯು ಹಗಲಿರುಳು ಶ್ರಮವಹಿಸಿ ದುಡಿಯಬೇಕಾಗುವದರಿಂದ ಅವನಿಗೆ ಶಾರೀರಿಕ ಮಾನಸಿಕ ಅಸಹ್ಯಗಳುಂಟಾಗುವದು ಸಹಜವು. ಇದಲ್ಲದೆ ಅಧಿಯಲ್ಲಿರುವ ಪರೀಕ್ಷೆಗಳಿಂದ ಶಾಲೆಗಳ ಮೇಲೆ ಅನೇಕ ದುಷ್ಪರಿಣಾಮ ಗಳುಂಟಾಗಿವೆ ಶಾಲೆಗಳು ನಿಜವಾದ ಶಿಕ್ಷಣಸಂಸ್ಥೆಗಳಾಗಿರದೆ ವಿದ್ಯೆಯನ್ನು ಕೊಳ್ಳುವ ಅಂಗಡಿಗಳಾಗಿ ಪರಿಣಮಿಸಿವೆ. ಶಿಕ್ಷಕನ ಯೋಗ್ಯತೆಯು ಪರೀಕ್ಷೆ ಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಯಿಂದಲೇ ನಿರ್ಣಯಿಸಲ್ಪಡು ವದರಿಂದ ಟಿಪ್ಪಣಿಗಳನ್ನು ಕೊಡುವ ಪದ್ಧತಿಯು ರೂಢವಾಗಿದೆ. ಈ ಪರೀಕ್ಷೆ ಯಿಂದ ಮಕ್ಕಳ ಮನಸ್ಸಿನಲ್ಲಿ ಶಿಕ್ಷಕ-ಶಾಲೆಗಳ ವಿಷಯವಾಗಿ ಅಧಿಕವಾಗಿ ಗುಪ್ತೆಯುಂಟಾಗಿದೆ ಹೊಸ ಪರೀಕ್ಷೆಗಳಲ್ಲಿ ಈ ರೀತಿಯಾಗಲು ಅವಕಾಶವಿಲ್ಲ. ಏಕಂದರೆ ಆಚರಣೆಯಲ್ಲಿದ್ದ ಪರೀಕ್ಷೆಗಳಲ್ಲಿ ಸ್ವಯಂ ನಿರ್ಣೀತ (subjective) ಅಭಿಪ್ರಾಯ–ತೀರ್ಮಾನಗಳಿಗೆ ಎಡೆಯಿದ್ದಂತೆ ಈ ಹೊಸ ಪರೀಕ್ಷೆಗಳಲ್ಲಿಲ್ಲ. ಇವು ಕೇವಲ ವಿಷಯಾಶ್ರಯ (objective) ವಾಗಿರುವದರಿಂದ ಇವುಗಳ ತೀರ್ಮಾನ ಗಳಲ್ಲಿ ಯಾರಿಗೂ ಯಾವದೇ ತರಹದ ಸಂದೇಹವಿರುವದಿಲ್ಲ. ಇವುಗಳಿಂದ ಬಾಲಕರ ಅಭಿವೃದ್ಧಿಯನ್ನು ನಿಶ್ಚಿತ ಅಳೆಯುವದು ಸುಲಭವದೆ.

ಸಾರಾಂಶ, ಹೊಸ ಶಿಕ್ಷಣವೆಂಬುದು ಒಂದು ಹೊಸದೃಷ್ಟಿ. "ಶಿಶು ಪ್ರಾಧಾನ್ಯತೆ" ಅದರ ಅಸ್ತಿವಾರ. ಅದರಲ್ಲಿ ಹಿಂದಿನ ಅನುಭವಸಾರವೆಲ್ಲ ಪಾಸ್ಟ್ರೀಯ ತಳಹದಿಯ ಮೇಲೆ ರಚಿತವಾದುದು. ಆದುದರಿಂದ ಶಿಕ್ಷಣವು ಸುಲಭವೂ ಸರಸವೂ ಉಪಯೋಗವುಳ್ಳದ್ದೂ ಆಗಿ ವ್ಯಕ್ತಿಯ ಪರಿಪೂರ್ಣತೆಗೆ ಅತ್ಯಂತ ಸಹಾಯಕವಾಗಿದೆ.

ಹಿಂದುಸ್ತಾನಿ ಶಿಕ್ಷಣದ ಅಗತ್ಯವು ಎಷ್ಟರಮಟ್ಟಿಗೆ ಇದೆ?"

ಮುಂಬಯಿ ಸರಕಾರದ ಹಿಂದುಸ್ತಾನಿ ಬೋರ್ಡಿನ ಸದಸ್ಯರೂ ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರಸಭೆಯ ಕಾರ್ಯದರ್ಶಿಗಳೂ ಆದ ಶ್ರೀವಾನ್ ಬುದ್ಧನಾಥ ಪಂತರು ೨೧–೬–೧೯೪೧ ನೆಯ ತಾರೀಖಿನ ದಿವಸ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳಿಗೂ ಒಂದು ಮನನೀಯವಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶವು ಈರೀತಿಯಾಗಿದೆ.

ಹಿಂದುಸ್ತಾನದಲ್ಲಿ ಎಲ್ಲ ಪ್ರಾಂತಗಳಿಗೂ ರಾಷ್ಟ್ರಭಾಷೆಯಾಗಿರಲು ಹಿಂದಿ ಸ್ತಾನಿಯೇ ಯೋಗ್ಯವೂ ಸುಲಭವೂ ಆಗಿದೆಯೆಂದು ಮ. ಗಾಂಧಿಯವರು ಕಂಡುಹಿಡಿದು ಪ್ರಚಾರ ಮಾಡಿದರು. ಮುಂಬಯಿ ಪ್ರಾಂತದಲ್ಲಿ ಶ್ರೀಮಾನ್ ಖೇರರವರು ಪ್ರಧಾನ ಮಂತ್ರಿಗಳಿದ್ದಾಗ ಈ ವಿಷಯದಲ್ಲಿ ಹೆಚ್ಚು ಚಟುವಟಿಕೆಯಿಂದ ಕೆಲಸವು ಆರಂಭವಾಯಿತು.

ಹಿಂದುಸ್ತಾನವು ಒಂದು ದೊಡ್ಡ ದೇಶವು. ಇಲ್ಲಿ ಅನೇಕ ಭಾಷೆಗಳು ನಡೆಯುತ್ತಲಿವೆ. ಮಾತೃಭಾಷೆ—ಮನೆಮಾತು—ಬೇರೆ, ನಾಡನುಡಿಯೊಂದು ಬೇರೆ, ರಾಷ್ಟ್ರನುಡಿಯೊಂದು ಬೇರೆ, ರಾಜನುಡಿಯೊಂದು ಬೇರೆ, ದೇವನುಡಿಯೊಂದು ಬೇರೆ, ಹೀಗೆ ಎಷ್ಟು ಭಾಷೆಗಳನ್ನು ಕಲಿಯಬೇಕು ? ಎಷ್ಟು ಕಲಿತರೂ ಕಡಿಮೆಯೇ ಎನಿಸುವದು. ಮನೆಮಾತು ತಪ್ಪುವದಿಲ್ಲ; ನಾಡನುಡಿ ಬಿಡುವಂತೀಲ್ಲ. ಹಾಗಾದರೆ ನಮ್ಮ ಹಿಂದುಸ್ತಾನಕ್ಕೆ ರಾಷ್ಟ್ರಭಾಷೆಯೊಂದು ಬೇಕಲ್ಲವೆ ಅದು ಇಂಗ್ಲಿಷು ಎಂದು ಹಲವರ ಕನಸು.

ನಮ್ಮ ದೇಶದಲ್ಲಿ ಇಂಗ್ಲೀಷರ ರಾಜ್ಯವಾಗಿ, ಇಂಗ್ಲಿಷು ಭಾಷೆಯ ಪ್ರಚಾರವಾಗಿ, ೧೫೦ ವರ್ಷಗಳಾಗಿಹೋದವು. ಇಷ್ಟೊಂದು ದೀರ್ಘಕಾಲವಾ ಹೋದರೂಕೂಡ, ರಾಜಭಾಷೆಯಾಗಿ ಕೊರ್ಟು ಕಚೇರಿಗಳಲ್ಲಿ ಪ್ರಾಮುಖ್ಯ ಯನ್ನು ಪಡೆದರೂಕೂಡ, ೧೦೦ಕ್ಕೆ ಒಬ್ಬರಿಗೆ ಮಾತ್ರ ಇಂಗ್ಲಿಷು ತಿಳಿಯ ವಂತಾಗಿದೆ ಇಷ್ಟೊಂದು ಹಿಂದುಳಿಯಲು ಏನು ಕಾರಣವಿರಬಹುದು ಇಂಗ್ಲಿಷ ಭಾಷೆಯು ನಮ್ಮಲ್ಲಿಯ ಭಾಷೆಗಳ ಜಾತಿಗೆ ಸೇರಿದುದಲ್ಲ. ನಮ ಜನರ ಬಾಯಿಗೆ ಇದು ಸುಲಭವಾಗಿ ಹತ್ತುವದಿಲ್ಲ. ಕಲಿಯಲು ಹೆಚ್ಚು ವೆಚ್ಚ ಆಗುವದು. ಕಲಿತವರಿಗೆ ಅವರವರಿಗೆ ತಕ್ಕಂಥ ಉದ್ಯೋಗ ವ್ಯವಸಾಯಗಳ ಕಡಿಮೆಯಾಗಿರುವವು. ಆದ್ದರಿಂದ ಬಹಳ ವೆಚ್ಚವನ್ನು ಸಹಿಸಿ ಇನ್ನು ಮುಂದೆಯೂ ಕೂಡ ಇಂಗ್ಲಿಷು ಭಾಷೆಗಾಗಿಯೇ ಭಾರತೀಯರೆಲ್ಲರೂ ಪ್ರಯತ್ನಿಸಬೇಕೋ ಅಥವಾ ನಮ್ಮ ಜನರ ಸ್ಥಿತಿಗತಿಗೂ ಬಾಯಿಬಳಕೆಗೂ ಹೊಂದಿಕೆಯಾಗುವ ಹಾಗು ಕಡಿಮೆ ವೆಚ್ಚದಲ್ಲಿ ಸುಲಭಸಾಧ್ಯವಾಗಿರುವ ಹಿಂದುಸ್ತಾನಿಗಾಗಿ ಪ್ರಯತ್ನಿಸಬೇಕೊ ? ಎಂಬುದೇ ಒಂದು ಮುಖ್ಯಪ್ರಶ್ನೆಯಾಗಿದೆ. ಇಂಗ್ಲಿಷ ಭಾಷೆಯ ಕಲಿಯಲು ತುಟ್ಟಿಯಾಗಿದ್ದರೂ ಕೂಡ ಕಲಿತವರು ಅಗ್ಗವಾಗಿಯೇ ದೊರೆಯ ಹತ್ತಿದ್ದಾರೆ. ಹೀಗೆ ನಾನು ಅನ್ನುತ್ತಿದ್ದ ಮಾತ್ರಕ್ಕೆ ಇಂಗ್ಲಿಷ ಭಾಷೆಯನ್ನು ಕಲಿಯಬಾರದೆಂದು ಹೇಳಿದಂತಾಗಲಿಲ್ಲ. ಇಂಗ್ಲಿಷ ಭಾಷೆಯು ವಿಶಾಲವಾದ ಜನಾಂಗದ ಭಾಷೆಯು. ಅದನ್ನು ಸಾಧ್ಯವಿದ್ದವರು ಅವಶ್ಯವಾಗಿ ಕಲಿಯಬೇಕು

ಂದುಸ್ತಾನದ ಹೊರಗೆ ಕಾಲಿಡುವಂಥ ಭಾರತೀಯರಿಗಂತೂ ಇಂಗ್ಲಿಷ ಸಾಷೆಯು ಅವಶ್ಯವಾಗಿ ಬರಲೇಬೇಕು.

ಭಾಷೆಯು ಜನತೆಯ ಜೀವಾಳ. ಪರದೇಶದಲ್ಲಿ ಕೂಡ ಸ್ವಭಾಷೆಯವರನ್ನು ಕಂಡರೆ ಸ್ವಕೀಯರನ್ನು ಕಂಡಷ್ಟೇ ಆನಂದವಾಗುವದು. ಈಗಿನ ಯುದ್ಧರಂಗದಲ್ಲಿ, ಇಂಗ್ಲಂಡ, ಅಮೇರಿಕೆಗಳ ಗೆಳೆತನಕ್ಕೆ ಅವೆರಡು ಜನಾಂಗಗಳ ಭಾಷೆಯೂ ಇಂಗ್ಲಿಷಾಗಿರುವದೇ ಮುಖ್ಯ ಕಾರಣವಾಗಿದೆ. ಮಾತೃಭಾಷೆಯೇ ರಾಷ್ಟ್ರ ಸಾಷೆಯಾಗಿರಬೇಕೆಂಬ ಹಂಬಲವು ಎಲ್ಲರಿಗೂ ಸಹಜವಾಗಿಯೇ ಇರುವದು. ಆದರೆ ಅದು ಎಷ್ಟರ ಮಟ್ಟಿಗೆ ಸಾಧ್ಯವಿದೆಯೆಂಬುದನ್ನು ಪ್ರತಿಯೊಂದು ಭಾಷೆ ಯವರು ಗಮನಿಸಬೇಕು. ಸುಮಾರು ೪೦ ಕೋಟಿ ಜನರಲ್ಲಿ ೧೨ ಕೋಟಿ ಮುಷ್ಟು ಕನ್ನಡಿಗರು ಇದ್ದೇವೆ. ನಮ್ಮ ಕನ್ನಡ ಸುಡಿಯು ಸಾಹಿತ್ಯಸಂಪನ್ನವೂ ಸುಲಭವೂ ಇದ್ದು, ಒರೆಹವು ಸುಂದರವಾಗಿದ್ದರೂ ಕೂಡ ಹಿಂದುಸ್ತಾನಿಯಷ್ಟು ಸುಲಭವಾಗಿ ಇದು ರಾಷ್ಟ್ರಭಾಷೆಯು ಆದೀತೇ? ಇದರಂತೆಯೇ ಹಿಂದು ಸ್ತಾನದ ಉಳಿದ ಭಾಷೆಗಳ ವಿಷಯದಲ್ಲಿಯೂ ವಿಚಾರ ಮಾಡಬೇಕಾಗಿದೆ.

ಒರೆಪದ ದೃಷ್ಟಿಯಿಂದ ನೋಡಿದರೆ ಉತ್ತರ ಹಿಂದುಸ್ತಾನದ ಬಹುತರ ಎಲ್ಲ ಸಾಷೆಗಳು ಸಂಸ್ಕೃತದಿಂದಲೇ ಹುಟ್ಟಿದವುಗಳಾಗಿರುವದರಿಂದ ಅವುಗಳನ್ನೋದು ವರಿಗೆ ಸಹಜವಾಗಿಯೇ ನಾಗರಿ ಲಿಪಿಯು ಹೊಂದಿಕೆಯಾಗುವದು. ದಕ್ಷಿಣದ ದ್ರಾವಿಡ ಭಾಷೆಗಳು ಸಂಸ್ಕೃತದಿಂದ ಪೋಷಿತವಾಗಿರುವ ಕಾರಣ, ಅವುಗಳ ಓದುವವರಿಗೂ ನಾಗರಿಲಿಪಿಯು ಹೊಸದಲ್ಲ. ಮುಸಲ್ಮಾನ ಜನಾಂಗಕ್ಕೆ ಉರ್ದು ಲಿಪಿಯು ಪ್ರೀತಿಯದು. ಹೀಗೆ ಹಿಂದುಸ್ತಾನಿ ಭಾಷೆಯ ಬರೆಹಕ್ಕೆ ಉರ್ದು ಮತ್ತು ನಾಗರಿ ಎಂಬ ಎರಡು ಕವಚಗಳುಂಟು.

ಶಿಕ್ಷಣದ ಮಾಧ್ಯಮವು ಮಾತೃಭಾಷೆಯಾಗಿರಬೇಕೊ? ಇಂಗ್ಲೀಷ ಭಾಷೆ ಯಾಗಿರಬೇಕೋ? ಎಂಬ ವಾದ-ವಿವಾದವು ಈಗ ಕೊನೆಗೊಳ್ಳುತ್ತಾ ಇದೆ. ಮಾತೃಭಾಷೆಯೇ ಜ್ಞಾನಸಂಪಾದನೆಗೆ ಅನುಕೂಲವಾದದ್ದು ಎಂದು ಬಲ್ಲವರ ಅಭಿಪ್ರಾಯ. ಅವಶ್ಯ ಬೇಕಾಗುವಷ್ಟನ್ನಾದರೂ, ಹಿಂದುಸ್ತಾನಿಯನ್ನು ಪ್ರತಿ ಯೊಬ್ಬನೂ ಕಲಿಯಲೇಬೇಕಾಗಿದೆ. ಹಿಂದುಸ್ತಾನಿ ಸಾಹಿತ್ಯದಲ್ಲಿ-ಪಾರ್ಶಿ-ಅರಬಿ-ಸಂಸ್ಕೃತ ಪಂಡಿತರಿಂದ ನಿರ್ಮಿತವಾದ ಅಗಣಿತ ಗ್ರಂಥ ಸಂಪತ್ತಿ ಇದೆ. ಅದರ ಲಾಭವನ್ನು ಪಡೆಯುವದು ಲಾಭಕರವಾಗಿದೆ. ಹಿಂದುಸ್ತಾನಿ ಭಾಷೆಯು ರೇಡಿಯೊ, ಸಿನೇಮಾಗಳಲ್ಲಿ, ಹೆಚ್ಚಾಗಿ ಬಳಕೆಯಾಗುತ್ತಲಿದೆ. ಅವುಗಳನ್ನು ತಿಳಿದು ಕೊಂಡಷ್ಟು ನಮಗೆ ಅನುಕೂಲವಲ್ಲವೆ?

ಹಿಂದುಸ್ತಾನವು ಅಖಂಡವಾದ ಒಂದು ರಾಷ್ಟ್ರವೆಂದು ಬಾಳಬೇಕಾದ ಹಿಂದುಸ್ತಾನಿ ಭಾಷೆಯು ರಾಷ್ಟ್ರಭಾಷೆಯಾಗಲೇಬೇಕು. ನಿತ್ಯವ್ಯವಹಾರಕ್ಕೆ ಬೇಕಾಗುವಷ್ಟು ಹಿಂದುಸ್ತಾನಿಯನ್ನಾದರೂ ಪ್ರತಿಯೊಬ್ಬನು ಕಲಿಯಬೇಕು.

ಅಪೂರ್ಣಾಂಕಗಳ ಭಾಗಾಕಾರ

ಲೇಖಕರು:—ಶ್ರೀ ಅಸ್ಮಿನಭಾವಿ ತಮ್ಮಣರಾಯರು

ಸಾಮಾನ್ಯ ಅಪೂರ್ಣಾಂಕದ ಭಾಗಾಕಾರದ ರೀತಿಯನ್ನು ಸೋಪಪತ್ತಿಕವಾಗಿ ಚಿಕ್ಕಮಕ್ಕಳಿಗೆ ಹೇಗೆ ಹೇಳಿಕೊಡಬೇಕು? ಇದೇ ಇಂದಿನ ವಿಷಯ.

ಮೊದಲು ಯಾವದೊಂದು ಅಪೂರ್ಣಾಂಕಕ್ಕೆ ಒಂದು ಪೂರ್ಣಾಂಕದಿಂದ ಭಾಗಿಸುವ ರೀತಿಯನ್ನು ಕಲಿಸುವ ಯತ್ನ ಮಾಡೋಣ.

I ನಮ್ಮ ಹತ್ತಿರ ೭ ರೂ. ಅದೆ. ಅದನ್ನು ೩ ಮಂದಿಗೆ ಸಮನಾಗಿ ಹಂಚಬೇಕಾಗಿದೆ. ಇದು ಪಾಲು ಹಂಚುವ ಭಾಗಾಕಾರದ ಉದಾಹರಣೆಯು ಇದನ್ನ ಚಿಹ್ನದಿಂದ ೭ ರೂ. ÷ ೩ = ? ಹೀಗೆ ಬರೆಯಬಹುದು.

ಇಲ್ಲಿ ೭ ರೂ. ಅಂದರೇನು?

ಒಂದು ರೂಪಾಯಿಯಲ್ಲಿ ನಾಲ್ಕು ಸಮಾನ ಭಾಗಗಳನ್ನು ಮಾಡಿ ಅಂಥ ಮೂರು ಭಾಗಗಳನ್ನು ತಕ್ಕೊಳ್ಳುವುದು. ಅಂದರೆ ಮೂರು ಪಾವಲಿಗಳು ಬರುವವು. ೩ ಪಾವಲಿಗಳನ್ನು ೩ ಮಂದಿಗೆ ಹಂಚಿದರೆ ಒಬ್ಬೊಬ್ಬರ ಪಾಲಿಗೆ ಒಂದೊಂದು ಪಾವಲಿ ಬರುವುದು. ಅಂದರೆ ೧ ರೂ. ೧ ಅಂತಾಯಿತು.

೭ ರೂ ÷ ೩ = ೧ ರೂ. ಅಂದಂತಾಯಿತು.

ಇದೇ ಪ್ರಕಾರ—

೫ ರೂ ÷ ೫ = ೧ ರೂ. ಬರುವುದೆಂಬುದನ್ನು ತಿಳಿಸಬಹುದು. ಈ ಎರಡು ಉದಾಹರಣೆಗಳಿಂದ ಪೂರ್ಣಾಂಕದಿಂದ ಅಪೂರ್ಣಾಂಕಕ್ಕೆ ಭಾಗಿಸುವ ರೀತಿಯು ಯಾವುದೆಂಬುದು ಮನಸಿನಲ್ಲಿ ಬರುವುದೆ?

"ಭಾಜ್ಯದ ಅಂಶಕ್ಕೆ ಭಾಜಕವಾದ ಪೂರ್ಣಾಂಕದಿಂದ ಭಾಗಿಸಿ ಬಂದ ಭಾಗಾಕಾರವನ್ನು ಉತ್ತರದ ಅಂಶದಲ್ಲಿಯೂ, ಭಾಜ್ಯದ ಛೇದವನ್ನು ಉತ್ತರದ ಛೇದದಲ್ಲಿಯೂ ಬರೆಯಬೇಕು."

ಈ ಮಾತು ನಿಜ; ಆದರೆ—

II ೫ ರೂ. ಯನ್ನು ೪ ಮಂದಿಗೆ ಸರಿಯಾಗಿ ಹಂಚಬೇಕಾಗಿದೆ. ಇಲ್ಲಿ ಭಾಜ್ಯದ ಅಂಶಕ್ಕೆ ಭಾಜಕದಿಂದ ಭಾಗ ಹೋಗುವುದಿಲ್ಲ. ಇಂಥ ಪ್ರಸಂಗದಲ್ಲಿ ಹೇಗೆ ಮಾಡಬೇಕು ? ಎಂಬ ಪ್ರಶ್ನೆ ಬರುವುದು.

ಇಂಥ ಪ್ರಸಂಗದಲ್ಲಿ ಭಾಜಕದಿಂದ ಭಾಜ್ಯದ ಅಂಶಕ್ಕೆ ಭಾಗ ಹೋಗುವಂಥ ಭಾಜ್ಯದ ಸಮೀಪ ಬೆಲೆಯ ಅಪೂರ್ಣಾಂಕವನ್ನು ಸಿದ್ಧಮಾಡಿಕೊಳ್ಳಬೇಕು. ಇಂಥ ಅಪೂರ್ಣಾಂಕಗಳು :— ೪½ ರೂ. ೪½ ರೂ. ಇತ್ಯಾದಿ.

ಈಗ ೪½ ರೂ. ಇದನ್ನು ತಕ್ಕೊಳ್ಳೋಣ. ಇದನ್ನು ೪ ಮಂದಿಗೆ ಮೇಲಿನ ರೀತಿಯಿಂದ ಹಂಚಿದರೆ ಒಬ್ಬೊಬ್ಬರ ಪಾಲಿಗೆ ೧⅛ ರೂ. ಬರುವುದು.

ಅಂದರೆ ೫ ರೂ ÷ ೪ = ೧⅛ ರೂ. ಬರುವುದೆಂಬಂತಾಯಿತು.

ಇದೇ ಪ್ರಕಾರ ೫ ಫೂ. ತಂತಿಯನ್ನು ೪ ಮಂದಿಯಲ್ಲಿ ಸಮನಾಗಿ ಹಂಚಿಕೊಡೋಣ. ಇಲ್ಲಿಯೂ ಭಾಜ್ಯದ ಅಂಶಕ್ಕೆ ಭಾಜಕದಿಂದ ಭಾಗ ಹೋಗುವುದಿಲ್ಲ. ಈ ಅಪೂರ್ಣಾಂಕದ ಸಮೀಪ ಬೆಲೆಯ ಅಪೂರ್ಣಾಂಕಗಳಲ್ಲಿ ೧¾ ಫೂ. ಇದು ಒಂದು; ಇದಕ್ಕೆ ೪ರಿಂದ ಭಾಗಿಸಿದರೆ ¾/೪ ಫೂ. ಬರುವುದು.

ಅಂದರೆ ೫ ಫೂ. ÷ ೪ = ¾/೪ ಫೂ. (ಒಬ್ಬೊಬ್ಬರ ಪಾಲಿಗೆ ಬರುವುದು.)

ಇನ್ನೇ ಉದಾ : — ೫ ರೂ ÷ ೪ = ೧⅛ ರೂ.

ಮತ್ತೊಂದು ಉದಾ :— ೫ ಫೂ. ÷ ೪ = ¾/೪ ಫೂ.

ಈ ಎರಡು ಉದಾಹರಣೆಗಳಿಂದ ಯಾವದೊಂದು ಅಪೂರ್ಣಾಂಕಕ್ಕೆ ಪೂರ್ಣಾಂಕದಿಂದ ಭಾಗಿಸುವ ರೀತಿಯು ಯಾವುದೆಂಬದು ತಿಳಿಯುವುದಲ್ಲವೆ ? ಅದು ಹೀಗೆ :—

" ಭಾಜ್ಯದ ಅಂಶವನ್ನು ಉತ್ತರದ ಅಂಶದಲ್ಲಿ ಬರೆದು, ಭಾಜ್ಯದ ಛೇದಕ್ಕೆ ಭಾಜಕದಿಂದ ಗುಣಿಸಿ ಬಂದ ಗುಣಾಕಾರವನ್ನು ಉತ್ತರದ ಛೇದದಲ್ಲಿ ಬರೆಯಬೇಕು."

ಮೊದಲಿನ ರೀತಿಗೂ, ಈಗಿನ ರೀತಿಗೂ ಉತ್ತರದಲ್ಲಿ ಹೆಚ್ಚು ಕಡಿಮೆ ಆಗುವುದೋ ಹೇಗೆ ಎಂಬುದನ್ನು ವಿಚಾರಮಾಡೋಣ.

ಇದಕ್ಕಾಗಿ ೫ ರೂ. ಯನ್ನು ೩ ಮಂದಿಗೆ ಹಂಚುವುದು ಇದೇ ಉದಾಹರಣೆಯನ್ನು ತಕ್ಕೊಳ್ಳೋಣ.

೧ನೇ ರೀತಿಯಿಂದ $\frac{ಫ}{ಭ}$ ರೂ. ÷ ಸ = $\frac{ಫ ÷ ಸ}{ಭ}$ ರೂ. = $\frac{ಫ}{ಭ}$ ರೂ.

೨ನೇ ರೀತಿಯಿಂದ $\frac{ಫ}{ಭ}$ ರೂ. ÷ ಸ = $\frac{ಫ}{ಭ \times ಸ}$ ರೂ. = $\frac{ಫ}{ಭಸ}$ ರೂ. $\frac{ಫ}{ಭ}$ ರ

ಹಾಗು $\frac{ಫ}{ಭಸ}$ ರೂ. ಈ ಎರಡೂ ಅಪೂರ್ಣಾಂಕಗಳು ಸಮಾನ ಬೆಲೆಯ ಅ
ರ್ಣಾಂಕಗಳಾಗಿವೆ. ಆದುದರಿಂದ ಎರಡೂ ರೀತಿಗಳಿಂದ ಉತ್ತರವು ಅ
ಬರುವುದೆಂಬಂತಾಯಿತು. ಇದರಿಂದ ಸ್ಪಷ್ಟವಾಗುವುದೇನಂದರೆ :—

**" ಯಾವುದೊಂದು ಅಪೂರ್ಣಾಂಕಕ್ಕೆ ಭಾಜಕದಿಂದ ಭಾಗಿಸಬೇ
ದರೆ ಭಾಜ್ಯದ ಅಂಶಕ್ಕೆ ಪೂರ್ಣಾಂಕದಿಂದ ಭಾಗಿಸಬೇಕು; ಇಲ್ಲವೆ ಭಾಜ
ಛೇದಕ್ಕೆ ಭಾಜಕದಿಂದ ಗುಣಿಸಬೇಕು."**

ಇನ್ನು ಒಂದು ಅಪೂರ್ಣಾಂಕಕ್ಕೆ ಮತ್ತೊಂದು ಅಪೂರ್ಣಾಂಕದಿ
ಭಾಗಿಸುವ ರೀತಿಯನ್ನು ವಿಚಾರ ಮಾಡೋಣ.

ಇದನ್ನು ಎರಡು ರೀತಿಯಿಂದ ತಿಳಿಸಬಹುದು.

ಮೊದಲನೆಯದು ಹೀಗೆ:—

ಯಾವದೊಂದು ಅಪೂರ್ಣಾಂಕಕ್ಕೆ ಎರಡು ಅರ್ಥಗಳು ಇವ. ಉದಾ:
$\frac{ಫ}{ಭ}$ ರೂ. ಅಂದರೆ ಒಂದು ರೂಪಾಯಿಯಲ್ಲಿ ಭ ಸಮಭಾಗಗಳನ್ನು ಮಾಡಿ ಫ ಭ
ಗಳನ್ನು ತಕ್ಕೊಳ್ಳುವುದು ಇದು ಒಂದು ಅರ್ಥ.

ಅಥವಾ, ಫ ಇಡೀ ರೂಪಾಯಿಗಳಲ್ಲಿ ಒಂದೊಂದರಲ್ಲಿ ಆರಾರು ಸಮಭ
ಗಳನ್ನು ಮಾಡಿ ಒಂದೊಂದು ರೂಪಾಯಿಯ ಒಂದೊಂದು ಭಾಗವನ್ನು ತಕ್ಕೊ
ವುದು (ಫ ರೂ. ÷ ಭ) ೨ನೆಯ ಅರ್ಥ.

ಇಲ್ಲಿ ನಾವು ೨ನೆಯ ಅರ್ಥವನ್ನು ಉಪಯೋಗಿಸಿಕೊಂಡು ಅಪೂರ್ಣಾಂ
ದಿಂದ ಭಾಗಿಸೋವ ರೀತಿಯನ್ನು ವಿಚಾರಿಸುವ.

ಉದಾ:— $\frac{ಫ}{ಭ}$ ರೂ. ಗಳಲ್ಲಿ $\frac{ಪ}{ಬ}$ ರೂ. ಯಷ್ಟು ಗುಂಪುಗಳು ಎಷ್ಟು ಇ
ವವು? ಇದು ಗುಂಪು ಮಾಡುವ ಭಾಗಾಕಾರದ ಉದಾಹರಣೆಯು.

ಇಲ್ಲಿ ಮೊದಲು $\frac{ಪ}{ಬ}$ ದಿಂದ ಭಾಗಿಸುವದರ ಬದಲು ಫ ಪೂರ್ಣಾಂಕದಿ
ಭಾಗಿಸೋಣ. ಅದರಿಂದ ಭಾಜಕವನ್ನು ಭ ಪಟ್ಟು ಮಾಡಿ ಭಾಗಿಸಿದಂತಾಯಿ
ಉತ್ತರವು ನಿಜವಾದ ಉತ್ತರದ ಭನೆಯ ಸಾಲು ಸಣ್ಣದು ಬರುವುದು. (ಭಾ
ವನ್ನು ಪಟ್ಟು ಮಾಡಿಭಾಗಿಸಿದರೆ ಭಾಗಾಕಾರವು. ಅಷ್ಟನೇಪಾಲು ಬರುವುದೇ
ದನ್ನು ಒಂದು ಪೂರ್ಣಾಂಕದ ಭಾಗಾಕಾರದ ಉದಾಹರಣೆಯಿಂದ ಸಿದ್ಧವ

ೋರಿಸಬಹುದು. ಹೇಗೆಂದರೆ:— ೪ಲಕ್ಕೆ ೬ರಿಂದ ಭಾಗಿಸಿದರೆ ಭಾಗಾಕಾರವು ಬರುತ್ತದೆ. ಆದರೆ ಭಾಜಕದ ಳಪಟ್ಟು ಮಾಡಿದರೆಬರುವ ೩ಳರಿಂದ ಭಾಗಿಸಿದರೆ ಾಗಾಕಾರವು ೨ ಬರುವುದು. ಇದು ನಿಜವಾದ ಭಾಗಾಕಾರದ ಳನೆಯ ಪಾಲು ಇರುವುದೆಂಬುದು ಸ್ಪಷ್ಟವು.)

ಇನ್ನು ಪೂರ್ಣಾಂಕದಿಂದ ಭಾಗಿಸುವ ರೀತಿಯು ಈ ಮೊದಲೇ ಗೊತ್ತಾಗಿದೆ. ಪ್ರಕಾರವಾಗಿ ಇಲ್ಲಿ ಭಾಜಕವಾದ ಭಾಜ್ಯದ ಛೇದಕ್ಕೆ ಗುಣಿಸಲು ($\frac{೬}{೭}\times೭=$) ೬ ರುವುದು ಈ ಭಾಗಾಕಾರವು ನಿಜವಾದ ಭಾಗಾಕಾರದ ೬ನೆಯ ಪಾಲು ಇರು ದು. ಆದಕಾರಣ ನಿಜವಾದ ಉತ್ತರವನ್ನು ತೆಗೆಯುವದಕ್ಕಾಗಿ ಇದರ ೬ ಪಟ್ಟು ಮಾಡಬೇಕಾಯಿತು. ಆದುದರಿಂದ $\frac{೬}{೭} \div ೭ = \frac{೬}{೭} \times \frac{೧}{೭} = \frac{೬}{೪೯}$ ಇದು ನಿಜವಾದ ುತ್ತರವಾಯಿತು. ಇದರಿಂದ ಸ್ಪಷ್ಟವಾಗುವುದೇನಂದರೆ:—

"ಸಾಮಾನ್ಯ ಅಪೂರ್ಣಾಂದ ಭಾಗಾರದಲ್ಲಿ ಭಾಜ್ಯದ ಅಪೂರ್ಣಾಂಕಕ್ಕೆ ಾಜಕದ ಅಪೂರ್ಣಾಂಕವನ್ನು ತಿರಿವಿ ಇಟ್ಟು ಗುಣಾಕಾರ ಮಾಡತಕ್ಕದ್ದು"

ಸೂ. ಎರಡನೆಯ ಭಾಗವು ಸರಿಯಾಗಿದ್ದರೂ ಸಾಕಾದಷ್ಟು ವಿಶದವಾಗಿಲ್ಲ. ಇದನ್ನು ಮುಂದಿನ ಸಂಜಿಕೆಯಲ್ಲಿ ವಿವರಿಸುವೆವು.

ಕರ್ನಾಟಕ ಯೂನಿ. ಧಾರವಾಡ.

ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳ 'ಶಿಕ್ಷಣ' ವಿಷಯದ ವ್ಯಾಪಕ ದೃಷ್ಟಿಯಿಂದ ಸಿದ್ಧಗೊಳಿಸಿದ ಅಭ್ಯಾಸಪತ್ರಿಕೆಯು

ಶ್ರೀ. ಎಸ್. ಜಿ. ಬೈಚವಾಳ, ಎಮ್. ಎ.

ಮೊದಲನೆಯ ಭಾಗ—

೧. ಶಿಕ್ಷಣವೆಂದರೇನು?

೨. ಶಿಕ್ಷಣವು ಶಾಸ್ತ್ರವೋ ಕಲೆಯೋ?

೩. ಶಿಕ್ಷಣದ ಮಹತ್ವ:— ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಆವಶ್ಯಕತೆ.

೪. ಶಿಕ್ಷಣದ ಪ್ರಕಾರಗಳು:— ಶಾರೀರಿಕ, ನೈತಿಕ, ಮಾನಸಿಕ, ಬೌದ್ಧಿಕ.

೫. ಶಿಕ್ಷಣ–ಮಾನಸಶಾಸ್ತ್ರಗಳ ಸಂಬಂಧ:— ಮನುಷ್ಯನ ಬೆಳವಣಿಗೆಯ ಏಳು ಅವಸ್ಥೆಗಳು ಹಾಗು ಅವುಗಳ ಲಕ್ಷಣಗಳು. ಇವುಗಳಿಗೆ ಅನುಗುಣವಾದ ಶೈಕ್ಷಣಿಕ ವಿಷಯಗಳು.

೬. ಶೈಕ್ಷಣಿಕ ಮಾನಸಶಾಸ್ತ್ರ:—

(೧) (ಅ) ಮನುಷ್ಯನ ವರ್ತನೆಯನ್ನು ವಿಶಿಷ್ಟ ಧ್ಯೇಯಗಳನ್ನು ಸಾಧಿಸುವಂತೆ ಮಾರ್ಪಡಿಸುವದೇ ಶಿಕ್ಷಣದ ಉದ್ದೇಶವು.

(ಆ) ಮನಸ್ಸಿನ ಮುಖ್ಯ ಶಕ್ತಿಗಳು:—

(೧) ಅನುಭವಗಳನ್ನು ಸಂಗ್ರಹಿಸುವದು.

(೨) ಜೀವಿಸಬೇಕೆನ್ನುವ ಪ್ರಬಲವಾದ ಇಚ್ಛೆ.

(ಇ) ಅನುಭವದಿಂದ ಜನಿಸಿದ ಜ್ಞಾನವನ್ನು ಸಂಕಲಿಸಿ ಹೊಂದಿಸಿ ಒಲವುಗಳನ್ನು ಏರ್ಪಡಿಸುವದು.

(೨) ಸಹಜ ಪ್ರವೃತ್ತಿಗಳು: (ಅ) ವ್ಯಕ್ತಿಪರ. (ಆ) ಸಮಾಜಧಾರಿ (ಇ) ಮತ್ತು ಪರಿಸ್ಥಿತಿ ಪ್ರೇರಿತ. ಸಹಜ ಪ್ರವೃತ್ತಿಗಳನ್ನು ಉದಾತ್ತ ಧ್ಯೇಯಗಳನ್ನಾಗುವಂತೆ ಮಾರ್ಪಡಿಸುವದೇ ಶಿಕ್ಷಣದ ಆದ್ಯ ಕರ್ತವ್ಯವು.

(೩) ಮನೋವಿಕಾರಗಳು (ಆ) ಪ್ರವೃತ್ತಿಗಳು. (ಸಾಮಾನ್ಯ ಒಲವುಗಳು ಕ್ರೀಡಾಪದ್ಧತಿ ಮತ್ತು ಶಿಕ್ಷಣ. (ಇ) ಭಾವನೆಗಳು ಶೀಲಸಂವರ್ಧನ

(೪) ಅವಧಾನ ಮತ್ತು ಅಭಿರುಚಿ. ಅವಧಾನವನ್ನು ಕಾಯ್ದುಕೊಳ್ಳುವ ಉಪಾಯಗಳು ಸ್ವಾಭಾವಿಕ ಅಭಿರುಚಿಗಳು ಮತ್ತು ಅನುಭವಗಳ ಸಹಾಯದಿಂದ ದೊರಕಿಸಿದ ಅಭಿರುಚಿಗಳು.

(೫) ಸ್ಮರಣಶಕ್ತಿ: ೧. ತಿಳಿದುಕೊಳ್ಳುವದು, ೨. ನೆನಪಿನಲ್ಲಿ ಇಟ

ಕೊಳ್ಳುವದು, ೩. ಅವಶ್ಯವಿದ್ದಾಗ ಪುನಃ ನೆನಪಿನಲ್ಲಿ ತಂದುಕೊಳ್ಳುವದು. ಶಿಕ್ಷಣ ಕಾರ್ಯದಲ್ಲಿ ಅದರ ಉಪಯೋಗ.

(೮) ಕಲ್ಪನಾ ಶಕ್ತಿ (ಅ) ಸ್ವರೂಪ (ಆ) ಬಾಹ್ಯನಿಯಂತ್ರಣೆಗಳಿಂದ ನಿರ್ಧರಿಸಿದ್ದು (ಇ) ಆತ್ಮಪ್ರೇರಿತ ಅಥವಾ ಕಲಾತ್ಮಕ

(೯) ವಿವೇಚನಾ ಶಕ್ತಿ.

(೧೦) ಮನಸ್ಸಿನ ಮೇಲಾಗುವ, ಆದರೆ ಪ್ರಕಟವಾಗದಿದ್ದ, ಪರಿಣಾಮಗಳು. ಹತ್ತಿಕ್ಕಿದ ಮನೋವಿಕಾರಗಳು. ಬಾಲಕರ ಮನಸ್ಸಿನಲ್ಲಿ ತಪ್ಪು ತಿಳುವಳಿಕೆಗಳಾಗದಂತೆ ಶಿಕ್ಷಕನು ಎಚ್ಚರಗೊಳ್ಳುವದು.

(೧೧) ಸಾಮೂಹಿಕ ಮನಸ್ಸು ವೈಯ್ಯಕ್ತಿಕ ಮನಸ್ಸು ಇವುಗಳ ಭೇದ. ಸಾಮೂಹಿಕ ಚಟುವಟಿಕೆಗಳಲ್ಲಿ ಅದರ ಸ್ಥಾನ. ಶಿಕ್ಷಕನು ಅದನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ?

(೧೨) ಸಹಾನು ಭೂತಿ, ಸೂಚನೆ, ಅನುಕರಣ; ಶಿಕ್ಷಣದಲ್ಲಿ ಇವುಗಳ ಸ್ಥಾನ ಮಾನ ಹಾಗು ಮಹತ್ವ

೭. ಶಿಕ್ಷಣದ ಧ್ಯೇಯಗಳು.

೮. ನೂತನ ಶಿಕ್ಷಣದ ವೈಶಿಷ್ಟ್ಯಗಳು—ಶಿಶುಪ್ರಾಧಾನ್ಯ, ಕ್ರೀಡನ ಪದ್ಧತಿ,

೯. ಶಿಕ್ಷಣ ಪ್ರಪಂಚದಲ್ಲಿ 'ಶಾಲೆಯ' ಸ್ಥಾನ–ಮಾನ. ಶಾಲೆಯ ಹೊರತಾಗಿ ಇತರ ಶೈಕ್ಷಣಿಕ ಸಂಸ್ಥೆಗಳು.

೦. ಅಭ್ಯಾಸಪತ್ರಿಕೆ— ಮೂಲತತ್ವಗಳು; ವಿವಿಧ ವಿಷಯಗಳ ಮಹತ್ವ ಅವುಗಳಿಗೆ ಕೊಡಬೇಕಾದ ಕಾಲ ಹಾಗೂ ವೇಳೆ.

೧. ಶಿಕ್ಷಕ—ಅವನಲ್ಲಿ ತೀರ ಅವಶ್ಯವಾಗಿ ಇರಬೇಕಾದ ಗುಣಗಳು. ಆದರ್ಶ ಶಿಕ್ಷಕನ ಲಕ್ಷಣಗಳು ವರ್ಗದ ವ್ಯವಸ್ಥೆ ಇಡುವದು. ೧ ಸಾಮೂಹಿಕ ಪದ್ಧತಿ. ೨ ವೈಯಕ್ತಿಕ ಪದ್ಧತಿ. ೩ ವ್ಯವಸ್ಥೆ. (Discipline)

ಎರಡನೆಯ ಭಾಗ :—

೧. ಶಿಕ್ಷಣದ ಕ್ರಮ :—ಮೆಟ್ಟುಗಳು.

೨. ಶಿಕ್ಷಣದ ಸೌಲಭ್ಯಗಳು :— ಉಪಕರಣಗಳು.
(ಅ) ಚಿತ್ರಗಳು. (ಬ) ನಕ್ಷೆಗಳು. (ಕ) ನಕಾಶೆಗಳು. (ಡ) ಮಾದರಿಯ ವಸ್ತುಗಳು. (ಇ) ಸಾಧನಗಳು— ಕರಿಯ ಹಲಗೆ, ಪ್ರಶ್ನ ಪದ್ಧತಿ, ಪಠ್ಯ ಪುಸ್ತಕಗಳು, ಮ್ಯಾಜಿಕ್‌ಲ್ಯಾಂಟರ್ನ (ಮಾಯಾ ದೀಪ) ಸಿನೇಮಾ, ಆಕಾಶವಾಣಿ ಮುಂತಾದವುಗಳು.

೩. ಶಿಕ್ಷಣದ ಸಾಮಾನ್ಯ ತತ್ವಗಳು.

೪. ಶಿಕ್ಷಣದ ಸಾಮಾನ್ಯ ಪದ್ಧತಿಗಳು :—

(ಅ) ನಿಗಮನ. (ಆ) ವಿಗಮನ. (ಇ) ಕೃತಿ ಪ್ರಧಾನ ಪದ್ಧ
(ಈ) ವಿವೇಚನಾ (Discussion) ಪದ್ಧತಿ. (ಉ) ಬಾಲೋದ್ಯಾ
ಪದ್ಧತಿ. (ಊ) ಮಾಂಟಿಸರಿ ಪದ್ಧತಿ. (ಎ) ಯೋಜನಾ ಪದ್ಧ
(ಏ) ಮೂಲ ಶಿಕ್ಷಣ ಪದ್ಧತಿ. (ಐ) ಕ್ರೀಡನ ಪದ್ಧತಿ. (ಒ) ಕೇಂದ್ರೀ
ಕರಣ ಪದ್ಧತಿ. (ಓ) ಸಂಸ್ಕರಣ ಪೃಥಕ್ಕರಣ ಪದ್ಧತಿ. (ಔ
ಶೋಧಕ ಪದ್ಧತಿ. (ಅಂ) ಡಾಲ್ಟನ್ ಪದ್ಧತಿ. (ಅಃ) ಮೇಲ್ವಿಚ
ರಣೆಯ ಪದ್ಧತಿ. (ಕ) ವಿದ್ಯಾಮಂದಿರ ಪದ್ಧತಿ. (ಖ) ವಿಶ್ವಭಾ
ತೀಯ ಸಂಸ್ಥೆಯ ಪದ್ಧತಿ.

ಮೂರನೆಯ ಭಾಗ :—

೧. ವಿಷಯಾನುಬಂಧ. ಮೂರು ಪ್ರಕಾರಗಳು; ವಿಷಯಗಳ ವರ್ಗೀಕರಣ

೨. ವಿವಿಧ ವಿಷಯಗಳನ್ನು ಕಲಿಸುವ ವಿಶಿಷ್ಟ ಪದ್ಧತಿಗಳು.

(ಅ) ಭಾಷೆ. (ಆ) ಗಣಿತ. (ಇ) ಇತಿಹಾಸ. (ಈ) ಭೂಗೋಳ
(ಉ) ಶಾಸ್ತ್ರೀಯ ವಿಷಯ. (ಊ) ಚಿತ್ರಕಲೆ. (ಎ) ಗಾಯನ
(ಏ) ಡ್ರಿಲ್.

೩. ಪಾಠದ ಸಿದ್ಧತೆ. ಟಿಪ್ಪಣಿಗಳನ್ನು ಸಿದ್ಧಗೊಳಿಸುವಿಕೆ. ಪಾಠ ವಿವ
ರ್ಶೆಯ ತತ್ವಗಳು.

೪. ಶಿಕ್ಷಕನ ವರ್ಚಸ್ಸು (Personality) (ಅ) ಶೀಲ. (ಆ) ಶಾ
ಯಲ್ಲಿಯ ಪರ್ಶನ. (ಇ)ಕಲಿಸುವ ಕೈವಾಡ. (ಈ)ವಿಷಯಗಳಮೇಲಿನ ಸ್ವಾಮಿತ್ವ

ನಾಲ್ಕನೆಯ ಭಾಗ:—

೧. ಶಾಲೆಯ ವ್ಯವಸ್ಥೆ:— (ಗ) ಕಟ್ಟಡ ಹಾಗೂ ಆಟದ ಬೈಲು. (ಆ
ಆರೋಗ್ಯಕರವಾದ ಸನ್ನಿವೇಶಗಳು. (ಇ) ಶಿಕ್ಷಣದ ಉಪಕರಣಗಳು ಹಾಗೂ
ವರ್ಗದ ಸಲಕರಣೆಗಳು. (ಳ) ಆದರ್ಶ ವರ್ಗದ ಕೋಣೆ, ವರ್ಗದ ವ್ಯವಸ್ಥೆ
ಬಾಲಕರ ವರ್ಗೀಕರಣ; (ನೋಡಲುತ್ಸುಕ ಕೇಳಲುತ್ಸುಕ ಓಡಾಡಲುತ್ಸುಕ
ಶಿಕ್ಷಣಕೆಲಸವನ್ನು ಹಂಚುವಿಕೆ.

೨. ಮುಖ್ಯೋಪಾಧ್ಯಾಯ:— ಶಿಕ್ಷಕ, ಮುಖ್ಯೋಪಾಧ್ಯಾಯ-
ವಿದ್ಯಾರ್ಥಿ ಶಿಕ್ಷಕ–ವಿದ್ಯಾರ್ಥಿ; ಶಿಕ್ಷಕ–ಪಾಲಕ ಸಂಬಂಧಗಳು.

೩. ಅಂತರ್ವ್ಯವಸ್ಥೆ:—

(ಅ) ವೇಳಾಪತ್ರಿಕೆ. (ಆ) ನಿಯಮಿತತೆ. (ಇ) ವೇಳೆಯ
ನಿಯಂತ್ರಣೆ. (ಈ) ಹಿರಿಯಮಣಿ ಪದ್ಧತಿ. (ಉ) ಗೃಹಪಾಠ. (ಊ) ಶಾಲೆಯ
ಆಡಳಿತೆಯಲ್ಲಿ ವಿದ್ಯಾರ್ಥಿಗಳ ಸ್ಥಾನ. (ಎ) ಇನಾಮು–ಶಿಕ್ಷೆ–ಪ್ರಕಾರಗಳು-

ನಿರೋಧಕ, ಸುಧಾರಣ ಪರ, ಪ್ರತಿ ಕ್ರಿಯಾತ್ಮಕ. ವ್ಯವಸ್ಥೆಯನ್ನು ಕಾಯ್ದುಕೊಳ್ಳುವ. (ಏ) ಬಾಲಕರ ವರ್ಗೀಕರಣ–ಬುದ್ಧಿಮಾಪನೆಗಳನುಸರಿಸಿ. (ಐ) ವಾಹ್ಯ ಆಂತರಿಕ ಪರೀಕ್ಷೆಗಳು–ಹೊಸಪದ್ಧತಿಯ ಪರೀಕ್ಷೆ, ಹುಡುಗರ ಆರೋಗ್ಯ ಪರೀಕ್ಷೆ. (ಒ) ಮುಂದಮತಿಗಳನ್ನು ತಿದ್ದುವದು.

೪. (ಅ) ಶಾರೀರಕ ಶಿಕ್ಷಣ–ಆಟಪಾಟಗಳು–ಆಟದ ಬೈಲುಳ್ಳ, ಬೈಲಿಲ್ಲದ ಹಾಗೂ ಸಾದಾ ಬೈಲುಗಳುಳ್ಳ ಶಾಲೆಗಳು. (ಆ) ಶಾಲೆಯನ್ನು ಆರೋಗ್ಯದೃಷ್ಟಿಯಿಂದ ಉತ್ತಮ ಸ್ಥಿತಿಯಲ್ಲಿ ಇಡುವದು.

೫. ವೈಯಕ್ತಿಕ ಆರೋಗ್ಯವನ್ನು ಕೈಕೊಳ್ಳುವ ಹಾಗೂ ಕಾಯ್ದುಕೊಳ್ಳುವ ಏರ್ಪಾಡುಗಳು.

(೧) ನಿಲ್ಲುವ ರೀವಿ. (೨) ಸರಿಯಾಗಿ ಕುಳಿತುಕೊಳ್ಳುವದು. (೩) ದೃಷ್ಟಿಯ ರಕ್ಷಣೆ. (೪) ಸಾಂಸರ್ಗಿಕ ರೋಗಗಳನ್ನು ಪ್ರತಿಬಂಧಿಸುವದು.

(೬) ನೈತಿಕ ಶಿಕ್ಷಣ–ಪ್ರತ್ಯಕ್ಷ–ಅಪ್ರತ್ಯಕ್ಷ.

೭. ಧಾರ್ಮಿಕ ಶಿಕ್ಷಣ.

ಐದನೆಯ ಭಾಗ:—

೧. ಆಧುನಿಕ ಶಿಕ್ಷಣ ಸಮಸ್ಯೆಗಳು ಹಾಗು ಪ್ರವೃತ್ತಿಗಳು.

(ಅ) ಸಾಮಾನ್ಯ ಶಿಕ್ಷಣ. (ಆ) ಪ್ರೌಢಶಿಕ್ಷಣ. (ಇ) ಸ್ತ್ರೀಶಿಕ್ಷಣ. (ಈ) ವೃತ್ತಿಶಿಕ್ಷಣ (ಉ) ಬೇಸಾಯದ ಹಾಗೂ ಔದ್ಯೋಗಿಕ ಶಿಕ್ಷಣಗಳು (ಊ) ಪುಸ್ತಕಾಲಯಗಳನ್ನು ಹೆಚ್ಚಿಸುವ ಯೋಜನೆ. (ಎ) ಪ್ರಾದೇಶಿಕ ಪುಸ್ತಕಾಲಯಗಳ ಸ್ಥಾಪನೆ. (ಏ) ದೃಕ್‌ಶಿಕ್ಷಣ.

ಆರನೆಯ ಭಾಗ:—

೧. ಅಭ್ಯಾಸ ಪತ್ರಿಕಾತೀತ ಚಟುವಟಿಕೆಗಳು.

(ಅ) ಶೈಕ್ಷಣಿಕ ಪ್ರವಾಸ. (ಆ) ಸ್ಕಾವುಟ ಮತ್ತು ಗರ್ಲಗಾಯಿಡ್ ಚಟುವಟಿಕೆಗಳು. (ಇ) ಶಾಲೆಯ ವಾರ್ಷಿಕೋತ್ಸವಗಳು. (ಈ) ವಾದವಿವಾದ ಹಾಗೂ ವಕ್ತೃತ್ವ ಸಂಘಗಳು. (ಎ) ಸಮಾಜಸೇವೆ. (ಏ) ಗ್ರಾಮೋದ್ಧಾರ. (ಐ) ವಿರಾಮಕಾಲದ ಸದುಪಯೋಗ.

ಏಳನೆಯ ಭಾಗ:—

೧. ಶಾಲೆಯ ಕರ್ತವ್ಯ ; ಪ್ರಾಗತಿಕ ಶಾಲೆಯ ಲಕ್ಷಣಗಳು.

೨. ಶಿಕ್ಷಕನ ಆದ್ಯಕರ್ತವ್ಯ. ಹಾಗು ಶಿಕ್ಷಣದ ಅಂತಿಮಧ್ಯೇಯ-ಉದಾತ್ತ ಧ್ಯೇಯಗಳ ಸಲುವಾಗಿ ಹೋರಾಡಿ ಆದರ್ಶಜೀವಿಗಳಾಗುವದಕ್ಕೆ ಮಕ್ಕಳನ್ನು ಪ್ರೋತ್ಸಾಹಿಸುವದು.

ವಿವಿಧ ವಿಷಯಗಳು

ಹಿಂದುಸ್ತಾನದಲ್ಲಿಯು ಹಳ್ಳಿಗಳಲ್ಲಿಯು ಕೈಗಾರಿಕೆಗಳು :— ಹಿಂದು
ಸ್ತಾನದ ಗ್ರಾಮೋದ್ಯೋಗಗಳ ಸಂಸ್ಥೆಯು ೧೯೩೯ನೆಯ ವರ್ಷದ ವರದಿಯ
ಪ್ರಸಿದ್ಧವಾಗಿದೆ. ಅದರಲ್ಲಿ ನಮ್ಮ ಸುಶಿಕ್ಷಿತರು ಹಳ್ಳಿಗಳ ಕೈಗಾರಿಕೆಗಳ ವಿಷಯ
ಗಳಲ್ಲಿ ತೋರಿಸುವ ದುರ್ಲಕ್ಷ್ಯವನ್ನು ಕುರಿತು ಆಕ್ಷೇಪಿಸಲಾಗಿದೆ. ಇದು
ಸಂಪೂರ್ಣ ಸತ್ಯಸಂಗತಿಯೆಂದೂ, ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರೂ ಒಪ್ಪತಕ್ಕ
ಮಾತೆಂದೂ, ನಾವು ಹೇಳಲಾರೆವು. ಯಾಕಂದರೆ ಹಳ್ಳಿಗಳ ಕೈಗಾರಿಕೆಗ
ವಿಷಯಗಳಲ್ಲಿ ಇತ್ತಿತ್ತಲಾಗಿ ನಮ್ಮಲ್ಲಿಯ ಸುಶಿಕ್ಷಿತರು ಶಕ್ತಿವಿದ್ದಮಟ್ಟಿಗ
ಹೆಚ್ಚಾಗಿ ಲಕ್ಷ್ಯವೂರೈಸಿದ್ದು ನಮಗೆ ಕಂಡುಬರುತ್ತಲಿದೆ. ಈ ಸಂಗ
ಯನ್ನು ಹಿಂದುಸ್ತಾನದ ಸಾರ್ವತ್ರಿಕ ಗ್ರಾಮೋದ್ಯೋಗಗಳ ಸಂಸ್ಥೆಯು
ಕಳೆದ ಐದು ವರ್ಷಗಳ ವರದಿಗಳ ಮೇಲಿಂದಲೂ ಈ ಸಂಸ್ಥೆಯು ಮಾಡಿ
ಸುಧಾರಣೆ ಹಾಗೂ ಬ್ರಿಟಿಶ ಹಿಂದುಸ್ತಾನ ಮತ್ತು ಮಾಂಡಲಿಕ ಅರಸರ ಆಡ
ತೆಯ ಪ್ರದೇಶಗಳಲ್ಲಿಯು ಮಾದರಿಯ ಹಳ್ಳಿಗಳಲ್ಲಿ ಕಂಡು ಬರುವ ಸುಧಾರ
ಇವುಗಳಿಂದ ಸಿದ್ಧಮಾಡಬಹುದು.

ಗ್ರಾಮೋದ್ಯೋಗಗಳಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲವೆಂಬುದು ಒಪ್ಪಿಕೊಳ್
ತಕ್ಕಂಥ ಸಂಗತಿಯೇ ಹೌದು. ಇದಕ್ಕೆ ಮುಖ್ಯವಾಗಿ ಎರಡು ತೊಂದ
ಗಳು ಇದ್ದದ್ದು ನಮಗೆ ಕಂಡುಬರುತ್ತವೆ. **ಮೊದಲನೆಯ**ದೆಂದರೆ ಹಳ್ಳಿಗಳ
ಸಿದ್ಧವಾದ ಕೈಗಾರಿಕೆಯ ವಸ್ತುಸಾಮಗ್ರಿಗಳನ್ನು ಯೋಗ್ಯರೀತಿಯಿಂದ ಸುಶಿಕ್ಷಿ
ಪಟ್ಟಣಿಗರಿಗೆ ಸಿಗುವಂತೆ ಮಾಡುವ ವ್ಯವಸ್ಥೆಯ ಅಭಾವ. ಹಳ್ಳಿಯ ಒಡವೆಗ
ಪ್ರೇಮಿಗಳಾದ ಸುಶಿಕ್ಷಿತ ಪಟ್ಟಣಿಗರಿಗೆ ಸಹ ಅನೇಕಸಲ ತಮಗೆ ಬೇಕಾಗು
ಸಾಮಗ್ರಿಗಳು ಅನುಕೂಲ ರೀತಿಯಲ್ಲಿ ಸಿಕ್ಕದಿರುವದರಿಂದ ನಿರ್ವಾಹವಿಲ್ಲ
ಪಟ್ಟಣದಲ್ಲಿ ಯಂತ್ರಸಾಧನಗಳ ಸಹಾಯದಿಂದ ಮಾಡಿದ ಸಾಮಗ್ರಿಗಳನ್ನು
ಕೊಂಡುಕೊಳ್ಳಲೇಬೇಕಾಗುವದು. ಪ್ರೀತಿಪೂರ್ವಕವಾಗಿ ಗ್ರಾಮೋದ್ಯಾ
ವನ್ನು ಒಯಸುವವರಿಗೆ ಸಹ ಈ ರೀತಿಯ ಸಹಾಯವನ್ನು ನೀಡಲು ಅವ
ವಾಗುತ್ತದೆ. **ಎರಡನೆಯ** ಕಾರಣವೆಂದರೆ ಪಟ್ಟಣಗಳಲ್ಲಿ ವಾಸಿಸಿ ಸುಧಾರ
ಹೊಂದಿದವರಿಗೆ ಒಮ್ಮೆಲೆ ಹಳ್ಳಿಗಳಲ್ಲಿ ಸಿದ್ಧವಾದ ವಸ್ತುಗಳ ಮೇಲೆ ಪ್ರೀತಿ ಹುಟ್ಟ
ಅವುಗಳನ್ನು ಸಂಪೂರ್ಣವಾಗಿ ಉಪಯೋಗಿಸುವಂತಹ ಮನಸ್ಸಿನ ಒಲವು ಪ್ರಾಪ್ತ
ವಾಗಲಿಕ್ಕೆ ಹತ್ತೈಂಟು ವರ್ಷಗಳಾದರೂ ಬೇಕಾಗುತ್ತವೆ.

ನೋ ಟೀ ಸು

ಎಲ್ಲ ಗ್ರಂಥಕರ್ತರಿಗೆ, ಪ್ರಕಾಶಕರಿಗೆ, ಮತ್ತು ಪುಸ್ತಕ ವ್ಯಾಪಾರಿಗಳಿಗೆ ತಿಳಿಸುವದೇನಂದರೆ:—

"ಕನ್ನಡ ಸ್ಕೂಲ್ ಬುಕ್ ಕಮೀಟಿಯ ನಿಯಮಗಳಲ್ಲಿಯ ೧೨ ನೆಯ ನಿಯಮದ ಮೇರೆಗೆ ಬುಕ್ ಕಮೀಟಿಯ ಮುಂದೆ ವಿವೇಚನೆಗಾಗಿ ಇಡುವ ಪುಸ್ತಕಗಳ ಸಂಬಂಧದಿಂದ ಈ ಕೆಳಗೆ ಹೇಳುವ ಸಂಗತಿಗಳು ಅವಶ್ಯವಾಗಿ ಬೇಕಾಗುವವು. ಆದ್ದರಿಂದ ಬುಕ್ ಕಮೀಟಿಯ ಮುಂದೆ ಇಡುವದಕ್ಕಾಗಿ ನಿ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರ ಕಚೇರಿಗೆ ಕಳುಹಿಸಲ್ಪಡುವ ಪುಸ್ತಕಗಳ ಸಂಬಂಧದಿಂದ ಈ ಸಂಗತಿಗಳನ್ನು ಪೂರೈಸತಕ್ಕದ್ದು." ಎಂದು ನಿ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್‌ರವರು ತಮ್ಮ S 86 (a) 749 — C ನೆಯ ೧೩-೬-೧೯೪೧ನೆಯ ತಾರೀಖಿನ ನಂಬರಿನ ಅಪ್ಪಣೆಯಲ್ಲಿ ತಿಳಿಸಿರುತ್ತಾರೆ.

೧. ಗ್ರಂಥಕರ್ತನ ಹೆಸರು,
೨. ಪ್ರಕಾಶಕನ ಹೆಸರು,
೩. ಎಷ್ಟನೆಯ ಮುದ್ರಣ,
೪. ಆ ಮುದ್ರಣವಾದ ವರ್ಷ ಮತ್ತು
೫. ಪುಸ್ತಕದ ಬೆಲೆ.

ಇನ್ನು ಮುಂದೆ ಕನ್ನಡ ಸ್ಕೂಲ್ ಬುಕ್ ಕಮೀಟಿಯ ವಿವೇಚನೆಗಾಗಿ ಕಳುಹಿಸುವ ಎಲ್ಲ ಪುಸ್ತಕಗಳಲ್ಲಿ ಮೇಲೆ ಹೇಳಿದ ಎಲ್ಲ ವಿವರಣೆಗಳನ್ನು ಮುದ್ರಿಸಿರಲೇಬೇಕು. ಹಾಗೆ ಮುದ್ರಿಸದೆ ಇದ್ದ ಪುಸ್ತಕಗಳನ್ನು ಬುಕ್ ಕಮೀಟಿಯವರು ತಿರಸ್ಕರಿಸಿ ಬಿಡಬಹುದು.

ನೆಯ ಜುಲೈ ೧೯೪೧
ಟ್ರೇ. ಕಾಲೇಜ
ಗ್‌ಮೆನ್, ಧಾರವಾಡ.

H. S. TORGAL
ಪ್ರಿನ್ಸಿಪಾಲ

—o—

೧-೪೫೨೦

ಪ್ರಕಟನೆ

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

(ಕಳೆದ ಮೇ-ಜೂನ, ಸಂಯುಕ್ತ ಸಂಚಿಕೆಯಿಂದ ಮುಂದೆ ಸಾಗಿದ್ದು)

ಟಿಪ್ಪಣಿ— ಪ್ರಾ. ಪ್ರಾಥಮಿಕ, ಮಾ. ಮಾಧ್ಯಮಿಕ, ಟ್ರೇ. ಟ್ರೇನಿಂಗ, ಶಿ. ಶಿಕ್ಷಕ, ವಿ. ವಿದ್ಯಾರ್ಥಿ, ವಾ. ವಾಚನಾಲಯ, ಶಾ. ಶಾಲೆ,

ಅ. ನ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೫೪	ವೀರಮಾತೆ ಕುಂತೀದೇವಿ ೧೯೩೨ರ ಆವೃತ್ತಿ ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಎಸ್. ಎಸ್. ದೇಸಾಯಿ ಕರ್ನಾಟಕ ಶಿಕ್ಷಣ ಸಮಿತಿ ಧಾರವಾಡ	೦-೧೨-೦	ಪ್ರಾ. ಮಾ. ಟ್ರೇ. ವಿ. ವಾ.
೫೫	ಕನ್ನಡ ಕಾವ್ಯ ಭಂಡಾರ ೧೯೪೧ರ ಆವೃತ್ತಿ	ಎಸ್. ಜಿ. ಕುಲಕರ್ಣಿ ಧಾರವಾಡ	೦- ೬-೦	ಪ್ರಾ. ಮಾ. ಟ್ರೇ. ವಿ. ವಾ. ಶಿ.ವಾ.
೫೬	ಖಾನಾಪುರ ತಾಲೂಕ ಭೂಗೋಲ ೧೯೪೦ರ ಆವೃತ್ತಿಯು	ಬಿ. ಎನ್. ಕುಲಕರ್ಣಿ ಕರ್ನಾಟಕ ಬುಕ್‌ಡಿಪೋ ಬೆಳಗಾವಿ	೦- ೨-೬	ಪ್ರಾ. ಶಿ. ವಾ
೫೭	ಸಂಸಾರ ಚಿತ್ರ ೧೯೩೪ರ ಆವೃತ್ತಿಯು	ಎಸ್. ಎಸ್. ದೇಸಾಯಿ ಕರ್ನಾಟಕ ಶಿಕ್ಷಣ ಸಮಿತಿ ಧಾರವಾಡ	೧- ೦-೦	ಪ್ರಾ.ಮಾ.ಟ್ರೇ.ವಿ.ವಾ.
೫೮	ಮುತ್ತಿನ ಸರ ೧೯೪೦ರ ಆವೃತ್ತಿ ೧೯೪೧	ಭಿಕಾಜಿ ಶಂಕರ ಮಾಂಜರೇಕರ ಗಣಪತಿಗಲಿ ಬೆಳಗಾವಿ.	೦-೧೩-೦	ಮಾಧ್ಯಮಿಕ ಶಾಲೆಗಳಲ್ಲಿ [illegible]

	೧೯೭೦ ಆವೃತ್ತಿ.	ಶಿಕ್ಷಣಸಮಿತಿ ಧಾರವಾಡ.		
೬೦	ವಿನಸೆಂಟ ಚರ್ಚಿಲ್ ೧೯೪೦ ರ ಆವೃತ್ತಿಯು.	ಉಡುಪಿ ಭೀಮರಾವ ಬೀಡಿ ಕರ್ನಾಟಕ ಬುಕ್ ಡಿಪೋ ಧಾರವಾಡ.	೦– ೧–೬	ಪ್ರಾ. ಮಾ. ಟ್ರೈ. ವಿ.ವಾ.
೬೧	ಸಚಿತ್ರ ವಿಜಯನಗರ ೧ನೆಯ ಆವೃತ್ತಿ ೧೯೩೬	ಎಸ್. ಆರ್. ಪೋತದಾರ ಶ್ರೀನಿವಾಸ ಮತ್ತು ಕಂಪನಿ ಮಾಳಮಡ್ಡಿ ಧಾರವಾಡ	೦–೧೫–೦	ಪ್ರಾ. ಮಾ. ಟ್ರೈ.ವಿ. ವಾ. ಪ್ರಾ. ಮಾ. ಟ್ರೈ.ಶಿ. ವಾ.
೬೨	ಮೊದಲನೆಯ ಪುಸ್ತಕ ಸುಬೋಧ ವಾಚನ ಮಾಲೆ. ೧ನೆಯ ಆವೃತ್ತಿ ೧೯೪೧	ಚೆನ್ನಪ್ಪ ಪರಪ್ಪ ಮಾಲಶೆಟ್ಟಿ ಹುಬ್ಬಳ್ಳಿ.	೦– ೨–೬	ಪ್ರಾ. ವಿ. ವಾ.
೬೩	ರಾಜಯೋಗಿ. ೧೯೪೦ರ ಆವೃತ್ತಿಯು. ಬುಕ್ ಕವಿಯೊಟಿಯವರು ಸೂಚಿಸಿದಂತೆ ತಿದ್ದಬೇಕು.	ಗೋವಿಂದ ಬಿ. ಜೋಶಿ. ಮನೋಹರ ಗ್ರಂಥಪ್ರಕಾಶನ ಸಮಿತಿ ಧಾರವಾಡ.	೧– ೦–೦	ಪ್ರಾ. ಮಾ. ಟ್ರೈ. ವಿ.ವಾ.
೬೪	ಸಿರಿಗನ್ನಡ ಪಾಠಮಾಲೆ ನಾಲ್ಕನೆಯ ಪುಸ್ತಕ ೧೯೪೧ರ ಆವೃತ್ತಿ.	ಕೆ. ಎಸ್. ಕಾರಂತ ಪುತ್ತೂರು ದಕ್ಷಿಣ ಕನ್ನಡ	೦– ೪–೦	ಪ್ರಾ ವಿ. ವಾ.
೬೫	ಸಿರಿಗನ್ನಡ ಪಾಠಮಾಲೆ. ಐದನೆಯ ಪುಸ್ತಕ ೧೯೪೧ರ ಆವೃತ್ತಿ.	ಸದರ	೦– ೫–೦	ಪ್ರಾ. ವಿ. ವಾ.
೬೬	ನೂತನ ಪ್ರೌಢಮಾಲಿಕೆ ಭಾಗ ೨ ೧೯೪೧ರ ಆವೃತ್ತಿ.	ಬಾಸೆಲ್ ಮಿಶನ್ ಬುಕ್‌ಡಿಪೊ ಮಂಗಳೂರ.	೦–೧೦–೦	ಮಾ. ವಿ. ಶಿ. ವಾ.

ಅ. ಸ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೬೭	ನೂತನ ಪ್ರೌಢ ಮಾಲಿಕೆ ಭಾಗ ೧ ೯೯ಳಗಿರ ಆವೃತ್ತಿ.	ಬಾಸೆಲ್ ಮಿಶನ್ ಬುಕ್‌ಡಿಪೊ ಮಂಗಳೂರು	೦–೧೦–೦	ಮೂ. ವಿ. ಶಿ. ವಾ.
೬೮	ಚಂಗಲವೆ ೧೯ಳಂರ ಆವೃತ್ತಿ.	ಮೆಸರ್ಸ ಬಾಲಾಜಿ ಆ್ಯಂಡ ಸನ್ಸ ಪುತ್ತೂರು	೦–೧೦–೦	ಪ್ರಾ. ಮೂ. ಟ್ರೆ. ವಿ.ವಾ.
೬೯	ಕನ್ನಡ ಸಾಹಿತ್ಯವಾಹಿನಿ ೧೯೩೯ರ ಆವೃತ್ತಿ.	ಬಿ. ಬಿ. ಅವಧಾನಿ ಮಿಂಚಿನಬಳ್ಳಿ ಚಾವಡಿ ದೇಸಾಯಿ ಓಣಿ ಧಾರವಾಡ.	ಸಾದಾ ೧– ೦–೦ ಕ್ಯಾಲಿಕೊ ೧– ೮– ೦	ಪ್ರಾ. ಮೂ. ಟ್ರೆ. ಶಿ.ವಾ.
೭೦	ಮೂರನೆಯ ಪುಸ್ತಕ ಸುಬೋಧ ವಾಚನಮಾಲೆ ೧ನೆಯ ಆವೃತ್ತಿ ೧೯೪೧	ಜೆನ್ನಪ್ಪ ಪರಪ್ಪ ಮಾಲಶೆಟ್ಟಿ ಹುಬ್ಬಳ್ಳಿ.	೦– ೪– ೬	ಪ್ರಾ. ವಿ. ವಾ.
೭೧	ಭೂಮಿ ಬಿದ್ದುಹೋಯಿತೇ. ೧೯೪೩ರ ಆವೃತ್ತಿ ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಪಿ. ಟಿ. ಆಯ್. ಬುಕ್‌ಡಿಪೋ ಬೆಂಗಳೂರ ಸಿಟಿ.	೮– ೪– ೦	ಪ್ರಾ. ವಿ. ವಾ.
೭೨	ಗುಲ್ಲಾರಿ ಕಥೆಗಳು ೧೯೩೫ರ ಆವೃತ್ತಿ. ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಸದರ	೦– ೨– ೦	ಪ್ರಾ. ಮೂ. ವಿ. ವಾ.
೭೩	ಭಗವದ್ಗೀತಾಸಾರ ೧೯೪೦ರ ಆವೃತ್ತಿ.	ಎಸ್. ಸಿ. ಜೋಶಿ ಪ್ರೆಸಿಡೆಂಟ ಶ್ರೀ. ಕುಮಾರವ್ಯಾಸ ಸಂಸ್ಥೆ ಕೋಳಿವಾಡ	೦– ೨– ೦	ಪ್ರಾ. ಮೂ. ಟ್ರೆ. ವಿ. ಶಿ. ವಾ.

೭೪	ಸಿರಿಗನ್ನಡ ಪಾಠಮಾಲೆ ಮೊದಲನೆಯ ಪುಸ್ತಕ ೧೯೪೧ರ ಆವೃತ್ತಿ.	ಕ. ಎಸ್. ಕಲ್ಲೂರಿ ಪುತ್ತೂರು ದಕ್ಷಿಣ ಕನ್ನಡ.	೦–೨–೬	ಪ್ರೌ. ಎ. ವಾ.
೭೫	ಸಿರಿಗನ್ನಡ ಪಾಠಮಾಲೆ ಮೂರನೆಯ ಪುಸ್ತಕ ೧೯೪೧ರ ಆವೃತ್ತಿ.	ಸದರ	೦–೩–೬	ಪ್ರಾ. ವಿ. ವಾ.
೭೬	ಸಿರಿಗನ್ನಡ ಪಾಠಮಾಲೆ ಎರಡನೆಯ ಪುಸ್ತಕ ೧೯೪೧ರ ಆವೃತ್ತಿಯು.	ಸದರ	೦–೩–೦	ಪ್ರಾ. ವಿ. ವಾ.
೭೭	ಸಾಮಾನ್ಯ ವಿಜ್ಞಾನ ಮೊದಲನೆಯ ಪುಸ್ತಕ ೧೯೪೧ರ ಆವೃತ್ತಿಯು.	ಭಿಕಾಜಿ ಶಂಕರ ಮಾಂಜರೇಕರ ಅರುಣಸ್ಫೋರ ಬೈಳಗಾವಿ.	೦–೨–೬	ಪ್ರಾ. ಶಿ. ವಾ.
೭೮	ಜೇಮಶೇಟಜಿ ನವರೋಜಿ ಟಾಟಾ. ೧೯೪೦ರ ಆವೃತ್ತಿಯು.	ಡಿ. ರೇಣುಕಾಚಾರ್ಯ ಬಿ. ಎ. ಕನ್ನಡ ಟ್ರಾನ್ಸ್‌ಲೇಟರ ಆಫೀಸ ಬೆಂಗಳೂರ.	೦–೧೦–೦	ಪ್ರಾ. ಮಾ. ಟ್ರೈ. ವಿ. ವಾ.
೭೯	ಚಿತ್ರಸೃಷ್ಟಿ ಕಾವ್ಯಸಂಗ್ರಹ ೧೯೪೦ರ ಆವೃತ್ತಿಯು.	ಉಡುಪಿ ಭೀಮರಾವ ಬೀಡಿ ಕರ್ನಾಟಕ ಬುಕ್ ಡಿಪೋ, ಧಾರವಾಡ.	೧– ೪– ೦	ಪ್ರಾ. ಮಾ. ಟ್ರೇ. ವಿ. ಶಿ. ವಾ.

ಹಿಂದುಸ್ತಾನಿ ಪುಸ್ತಕಗಳು

೧	ಹಿಂದುಸ್ತಾನೀಕಿ ದುಸರಿ ಕಿತಾಬ ನಾಗರಿ ಟಾಯಿಪ್, ೧ನೆಯ ಆವೃತ್ತಿ ೧೯೪೧	ದಕ್ಷಿಣಭಾರತ ಹಿಂದಿ ಪ್ರಚಾರ-ಸಭಾ ಮದ್ರಾಸ.	೦..೬– ೦	ಪಠ್ಯಪುಸ್ತಕ
೨	ಸದರ ಉರ್ದು ಟಾಯಿಪ್ ೧ನೆಯ ಆವೃತ್ತಿ ೧೯೪೧	ಸದರ	೦– ೬– ೦	ಸದರ.

ಪ್ರ ಕ ಟ ನೆ

ಗಾಂವಟೀ ಶಾಲೆ (Voluntary Schools) ಗಳನ್ನು ರಜಿಸ್ಟರ ಮಾಡುವ ಅರ್ಜಿಗಳು.

ಗಾಂವಟೀ ಶಾಲೆಗಳನ್ನು ರಜಿಸ್ಟರ ಮಾಡುವದರ ಸಲುವಾಗಿ ಕಳುಹಿಸತಕ್ಕ ಅರ್ಜಿಗಳನ್ನು ೧೯೪೧ನೆಯ ಇಸ್ವಿಯ ಡಿಶಂಬರ ತಿಂಗಳ ೧೫ನೆಯ ತಾರೀಖಿನ ಒಳಗಾಗಿ ತಮ್ಮ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೆ ಕಳುಹಿಸತಕ್ಕದ್ದು. ಈ ತಾರೀಖಿನ ದಿವಸ ಅಥವಾ ಅದಕ್ಕೂ ಒಳಗಾಗಿ ಮುಟ್ಟಿದ ಅರ್ಜಿಗಳಷ್ಟೇ ಯೋಗ್ಯ ವಿಚಾರಣೆಗೆ ಒಳಗಾಗಿ ಅಂಥ ಶಾಲೆಗಳು ೧೯೪೧-೪೨ನೆಯ ವರ್ಷದ ಗ್ರ್ಯಾಂಟಿನ ಸಲುವಾಗಿ ರಜಿಸ್ಟರ ಮಾಡಲ್ಪಡುವವು. ಮತ್ತು ಹಣದ ಅನುಕೂಲತೆಯಾದರೆ ಮಾತ್ರ ಈ ಶಾಲೆಗಳಿಗೆ ಗ್ರ್ಯಾಂಟು ದೊರೆಯುವದು. ತಾ. ೧೫—೧೨—೧೯೪೧ನೆಯ ಇಸ್ವಿಯ ತರುವಾಯ ಅರ್ಜಿಯನ್ನು ಮಾಡಿದ ಶಾಲೆಗಳನ್ನು ರಜಿಸ್ಟರ ಮಾಡಬಹುದು. ಆದರೆ ಅವುಗಳಿಗೆ ನಡೆಯುವ (೧೯೪೧-೪೨) ವರ್ಷದಲ್ಲಿ ಗ್ರ್ಯಾಂಟು ಸಿಗಲಾರದು.

ಪತ್ರಗಳ ಮುಖ್ಯಾಂಶಗಳು

ಗದಗ:— ಕನ್ನಡ ಗಂಡುಮಕ್ಕಳ ಎರಡನೆಯ ನಂಬರ ಶಾಲೆ— "ತಾರೀಖು ೨೦-೬-೧೯೪೧ ಶುಕ್ರವಾರ ದಿವಸ ಶ್ರೀಮಾನ್ ಆಯ್. ಎಮ್. ಢಾಲಾಯತ ಬೀ. ಏ. ಎಲ್. ಎಲ್. ಬಿ ಅವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಮಹೋತ್ಸವವು ನೆರವೇರಿತು. ಬಾಲಬಾಲಿಕೆಯರ ಆಟ ನೋಟ ಮೆರವಣಿಗೆಗಳಾದ ಬಳಿಕ ಶ್ರೀಮಾನ್. ದ. ರಾ. ಬೇಂದ್ರೆಯವರ ಸ್ಫೂರ್ತಿದಾಯಕ ಭಾಷಣ ಹಾಗೂ ಅಧ್ಯಕ್ಷರ ಸಮಯೋಚಿತ ಭಾಷಣಗಳಾದವು. ವಿದ್ಯಾರ್ಥಿಗಳಿಗೆ ಮೆಚ್ಚುಗೆ ಕೊಟ್ಟು ವಿಶಾಯಿಯನ್ನು ಹಂಚಲಾಯಿತು. ಇದಕ್ಕೆಲ್ಲ ತಕ್ಕ ಸಲಹೆ ಹಾಗೂ ಸಹಾಯ ನೀಡಿದವರಲ್ಲಿ ಮೆ। ಶೇಖಸಾಹೇಬರು ಎ. ಓ. ಗದಗ, ಶ್ರೀ. ಸಿ. ಪಿ

ಮಾಳಶೆಟ್ಟಿ, ಶ್ರೀ. ಡಿ. ಎನ್. ಇಂಗಳಹಳ್ಳಿ, ಶ್ರೀ. ಸೀತಾಯಿ ರಾಮರಾವ ಕುಲಕರ್ಣಿ ಮೊದಲಾದವರು ಮುಖ್ಯರು. ಇವರ ಉಪಕಾರವು ಮರೆಯುದಂತಹದು" ಎಂದು ಇಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ಹಳ್ಳಿಕೇರಿಯವರು ತಿಳಿಸುತ್ತಾರೆ.

ಬೈಲಹೊಂಗಲ:— "ತಾರೀಖು ೨೨-೬-೧೯೪೬ನೆಯ ದಿವಸ ಇಲ್ಲಿಯ ಶಾಲೆಯ ಶಿಕ್ಷಕರೂ ಸುತ್ತುಮುತ್ತಲಿನ ಹಳ್ಳಿಗಳ ಶಿಕ್ಷಕರೂ ಕೂಡಿ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಸ್ಥಳದಿಂದ ನಿವೃತ್ತರಾದ ಬೆಳಗಾವಿಯ ಶ್ರೀಮಾನ್ **ಬೀಡಿ ಶಾಮರಾಯರಿಗೆ** ತಾಂಬೂಲ ಸಮಾರಂಭವನ್ನು ಮಾಡಿದರು. ಆಗ ಪುರ ಪ್ರಮುಖರೂ ಅಧಿಕಾರಿಗಳೂ ಆಗಮಿಸಿದ್ದರು. ಈ ಸಮಯದಲ್ಲಿ ಶ್ರೀ. ವಿ. ಜೆ. ಕುಬಸದ ಮಾಸ್ತರರು ತಾವು ರಚಿಸಿದ ಎರಡು ಪದ್ಯಾವಲಿಗಳನ್ನು ಅಂದು ತೋರಿಸಿದರು." ಹೀಗೆ **ಬೈಲಹೊಂಗಲ** ತಾಲೂಕ ಶಾಲೆಯ ಹೆ। ಮಾ. ರರು ತಿಳಿಸುವರು.

ಧಾರವಾಡ:— ಬೇಸಿಕ್ ಟ್ರೇನಿಂಗ್ ಸೆಂಟರ—"ಇಲ್ಲಿಯ ಅಧ್ಯಾಪಕರಾದ ಶ್ರೀಮಾನ್ **ಆರ್. ವ್ಹಿ. ದೇಸಾಯಿ** ಇವರಿಗೆ ಇಲ್ಲಿಂದ ಅ. ಡೆ. ಎ. ಇ. ಧಾರವಾಡ ಸ್ಥಳಕ್ಕೆ ವರ್ಗವಾಗಲು ತಾ। ೩೦-೬-೪೬ನೆಯ ದಿವಸ ಬೀಳ್ಕೊಡುವ ಸಮಾರಂಭವಾಯಿತು. ಆಗ ಶ್ರೀ. ಎಸ್. ಟಿ. ಅಪ್ಪನಗೌಡ ಹಾಗೂ ಶ್ರೀ. ಜಿ. ಎನ್. ಸಗರ ಇವರು ಗುಣವರ್ಣನ ಪರವಾದ ಪದ್ಯಗಳನ್ನು ಅಂದರು." ಹೀಗೆ ಶ್ರೀ. ಗಂಗಾನಾಥ ಶ್ರೀಶಂಕರ ಎಂಬವರು ತಿಳಿಸುತ್ತಾರೆ.

ಬೆಳಗಾವಿ— "ಇಲ್ಲಿಯ ಮಾಡೆಲ್ ಸ್ಕೂಲಿನ ಕಟ್ಟಡದಲ್ಲಿ ಎಸ್. ಟಿ. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮಾನ್ ರ್ಯಾಂಗಲರ ಕಟ್ಟಿ ಇವರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಎಲ್ಲ ಶಿಕ್ಷಕ ಶಿಕ್ಷಕಿಯರು ನಿವೃತ್ತರಾದ **ಬೀಡಿ ಶಾಮರಾಯರಿಗೆ** ತಾಂಬೂಲ ಸಮಾರಂಭವನ್ನು ಏರ್ಪಡಿಸಿದರು. ಆಗ ಶ್ರೀ. ಗ. ವಾ. ದೇಶಪಾಂಡೆ ಶ್ರೀ. ಖಾಸನೀಸ ಮೊದಲಾದವರಿಂದ ಗುಣವರ್ಣನಪರ ಭಾಷಣಗಳಾದವು. ಶಾಮರಾಯರಿಗೆ ಆಯುರಾರೋಗ್ಯ ಸಂಪದಭಿವೃದ್ಧಿಯಾಗಲೆಂದು ಎಲ್ಲರೂ ಹಾರೈಸಿದರು." ಹೀಗೆ ಅಲ್ಲಿಯ ಕ. ಗ. ಮ. ಮೊದಲನೆಯ ನಂಬರ ಶಾಲೆಯ ಹೆಡ್‌ಮಾಸ್ತರರು ತಿಳಿಸುತ್ತಾರೆ.

ಸದಲಗಿ— (ಬೆಳಗಾಂವಿ ಜಿಲ್ಲೆ) "ಈ ಊರಲ್ಲಿಯ ಶ್ರೀಮಂತರಾದ ಶ್ರೀ. ವಿರುಪಾಕ್ಷಪ್ಪ ರುದ್ರಪ್ಪ ಹಾಲಪ್ಪನವರ ಎಂಬವರು ತಾ. ೩೮-೬-೪೬ನೆಯ ದಿವಸ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ೧೪೦ ರೂ. ೫ ಆಣೆ ಗಳ ಪುಸ್ತಕಗಳನ್ನು ಬಡಹುಡುಗರಿಗೆ ಧರ್ಮಾರ್ಥ ಕೊಟ್ಟರು. ಇದರಂತೆ ಈ ಊರೊಳಗಿನ

ಎಲ್ಲ ಶಾಲೆಗಳಿಗೂ ಪ್ರತಿವರ್ಷ ಕೊಡುತ್ತಲಿದ್ದಾರೆ. ಇದು ಅವರಿಗೆ ಭೂಷಣವು ಎಂದು ಶ್ರೀ. ಶಿ. ಪಾ. ಬುರ್ಗೆ ಇವರು ತಿಳಿಸುತ್ತಾರೆ.

ಅಸುಂಡಿ— (ಬೆಳಗಾವ ಜಿಲ್ಲೆ) " ಈ ಊರಲ್ಲಿಯ ಶ್ರೀ. ಬಾಣಿ ಗುರವ್ಪ ನವರು ಶಾಲೆಯ ಪ್ರಗತಿಯನ್ನು ನಿರೀಕ್ಷಿಸಿ ಬಡ ವಿದ್ಯಾರ್ಥಿಗಳಿಗಾಗಿ ತಮ್ಮ ಸ್ವಂತ ಖರ್ಚಿನಿಂದ ೩೬ ಪಾಟಿ, ೧೦೦ ಪೇನಸಿಲು, ೪೦ ಟೊಪ್ಪಿಗೆಗಳನ್ನು ಕೊಟ್ಟರು. ಇದು ಅವರ ಶಿಕ್ಷಣಾಭಿರುಚಿ ಹಾಗೂ ಉದಾರತನವನ್ನು ವ್ಯಕ್ತಪಡಿಸುತ್ತಲಿದೆ. " ಹೀಗೆ ಹೆ. ಮಾ. ರಾದ ಶ್ರೀ. ಭೀ. ತಿ. ಹೊಂಗಲ ಇವರು ತಿಳಿಸುತ್ತಾರೆ.

ಕುಂದರನಾಡ ಶಿಕ್ಷಣಪ್ರಸಾರ ಮಂಡಲ— (ಸಂಚಾಲಕರು ಶ್ರೀಶೈಲಪ್ಪ ಕಾಗತೀಕರ, ಅಂಕಲಗಿ, ಜಿಲ್ಲೆ ಬೆಳಗಾವಿ) ಈ ಸಂಸ್ಥೆಯ ೧೯೪೦–೪೧ನೆಯ ವರ್ಷದ ವರದಿಯು ನಮ್ಮ ಕೈಸೇರಿದೆ. ಲೋಕಲ್‌ಬೋರ್ಡಿನ ಶಾಲೆಗಳು ಸರ ಇರದಂಥ ಚಿಕ್ಕ ಹಳ್ಳಿಗಳಲ್ಲಿ ಈ ಮಂಡಲದವರು ೫೮ ಶಾಲೆಗಳನ್ನು ಸ್ಥಾಪಿಸಿದ್ದಾ ೫೮ ಶಿಕ್ಷಕರು ೧೬೬೪ ವಿದ್ಯಾರ್ಥಿಗಳಿಗೆ ಕಲಿಸುತ್ತಲಿದ್ದಾರೆ. ಕೆಲವರು ಟ್ರೇಂ ಶಿಕ್ಷಕರೂ ಉಂಟು. ಈ ವರ್ಷದ ಆದಾಯ ವೆಚ್ಚಗಳು ೧೩೪೪೭ ರೂ. ೩ ಆಣ ೧೧ ಪೈ. ಉಂಟು. ಹಳ್ಳಿಗಳಲ್ಲಿ ನೂಲುವ ವರ್ಗ, ಪ್ರೌಢ ಶಿಕ್ಷಣ, ಶಾಲೆಯ ವಾಚನಾಲಯ ಮೊದಲಾದ ವಿಶೇಷ ಚಟುವಟಿಕೆಗಳನ್ನು ಕೈಕೊಂಡದ್ದಾಗಿದೆ ಕೆಲಸವು ಚೆನ್ನಾಗಿ ನಡೆದುದೆಂಬುದರ ವಿಷಯದಲ್ಲಿ ಬೆಳಗಾವಿಯ ಶ್ರೀ. ಸಾಖರೆ ಶ್ರೀ. ಲಠ್ಠೆ ಶ್ರೀ. ಪೋತದಾರ ಶ್ರೀ. ವಿಠಾರೆ ಮೊದಲಾದ ಮಹನೀಯರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಸಂಸ್ಥೆಯವರು ಧನ-ಜನ ಸಹಾಯವನ್ನು ಕೇಳುತ್ತಾರೆ.

ಬೆಣ್ಣೂರು— (ವಿಜಾಪುರ ಜಿಲ್ಲೆ) " ಈ ಊರ ಶಾಲೆಯಲ್ಲಿ ತಾರೀಖು ೩–೭–೧೯೪೧ನೆಯ ದಿವಸ ಈ ಭಾಗದ ಶಿಕ್ಷಕ ಶಿಕ್ಷಕಿಯರ ಸಮ್ಮೇಲನವು ಬೀಟ ಆಫೀಸರರಾದ ಶ್ರೀ. **ಕಾಳಪ್ಪನವರ** ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಾದರಿಯ ಪಾಠಗಳು, ಕವಿತಾಗಾಯನ ಮೊದಲಾದವುಗಳು ಆದುವಲ್ಲದೆ ಶಿಕ್ಷಪದ್ಧತಿಯ ಮಹತ್ವ, ವೇಳಾಪತ್ರಿಕೆಗಳ ಉಪಯೋಗ ಮೊದಲಾದವುಗಳನ್ನು ಕುರಿತು ಚರ್ಚೆಯೂ ಆಯಿತು. ಈ ರೀತಿಯ ಸಮ್ಮೇಲನಗಳು ಮೇಲಿಂದಮೇಲೆ ಆಗುವದು ಅಗತ್ಯವಿದೆಯೆಂದು ಎಲ್ಲರಿಗೂ ಕಂಡುಬಂತು. " ಹೀಗೆ ಪ್ರೇಕ್ಷಕರಾದ ಶ್ರೀ. ಗಡ್ಡಿ ಅಣ್ಣಪ್ಪನವರು ತಿಳುಹಿಸುತ್ತಾರೆ.

ಸಿದ್ಧನಾಥ ಹೂಲಿ, ಮೊದಲ್ಗು

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ರಾವ ತೊರಗಲ್ ಎಂ. ಎ.

| ಸಂಪುಟ ೮೦ | ಆಗಸ್ಟ್ ೧೯೪೧ | ವರ್ಷ ೩೩. ಸಂ. ೫

ಜಗನ್ಮಾನ್ಯ

ಕವೀಂದ್ರ ರವೀಂದ್ರರು ಕಣ್ಮರೆಯಾದರು

ಮಣ್ಣಿನಲಿ ಜನಿಸಿರುವ ಕುಸುಮವು |
ಮಣ್ಣಿನಲಿ ಬೆರೆವುದಕೆ ಮುನ್ನವೆ |
ನಿನ್ನ ಕರದರ್ಶನ ಸುಯೋಗವ ಪೊಂದಲ್ಕೆ ಹರಿಯೆ ||
ನಿನ್ನ ಪ್ರೇರಣೆಯಿಂದ ಜನ್ಮಿಸಿ |
ನಿನ್ನ ಮುನ್ನಣೆಯಿಂದ ಬೆಳೆದಿದು |
ನಿನ್ನ ಪಾದದೊಳುರುಳಿ ಧನ್ಯತೆವಡೆಯಲ್ಕೆ ಹರಿಯೇ ||

ಕವೀಂದ್ರ ರವೀಂದ್ರರು.

ಮೊನ್ನೆ ಆಗಸ್ಟ ತಿಂಗಳ ೭ನೆಯ ತಾರೀಖಿನ ದಿನ ಪ್ರಪಂಚದಲ್ಲೊಂದು ಘಾತುಕವಾದ ಉಲ್ಕಾಪಾತವಾದಂತಾಯಿತು. ಭಾರತಮಾತೆಯ ಮುಕುಟದಲ್ಲಿ ಳೆದ ೮೦ ವರ್ಷಗಳಿಂದಲೂ ವಿರಾಜಿಸುತ್ತಿದ್ದ ಉಜ್ವಲವಾದ ರತ್ನವೊಂದು ಕಳಚಿ ಿದ್ದು ಅನಾದಿ ಅನಂತವಾದ ಕಾಲ ಪ್ರವಾಹದಲ್ಲಿ ಮುಳುಗಿ ಹೋಯಿತು. ಅಖಿಲ ಪ್ರಪಂಚದ ಹೃದಯವನ್ನು ಆಕರ್ಷಿಸಿಕೊಂಡಿದ್ದ ಕವೀಂದ್ರ ರವೀಂದ್ರರು ಅಂದು ಣ್ಮರೆಯಾದರು! ಈ ದುಃಖವಾರ್ತೆಯನ್ನು ಕೇಳಿ ಆಸೇತು-ಹಿಮಾಚಲವ್ಯಾಪಿ ಾದ ಭಾರತ ವರ್ಷವಷ್ಟೇ ಅಲ್ಲ — ಅಖಿಲ ಪ್ರಪಂಚವೇ ದುಃಖಾವೇಗದಿಂದ

ಕಣ್ಣೀರ ಕರೆಯಿತು. ಅಖಿಲ ಜಗತ್ತಿನ ಹಾಗು ಭಾರತವರ್ಷದ ಬಹು
ಮುಂದಾಳುಗಳು ತಮ್ಮ ತಮ್ಮ ಮನಸ್ಸಿಗಾದ ಬಹು ತೀಕ್ಷ್ಣವಾದ ವೇ
ಯನ್ನು ತಾಳಲಾರದೆ ಪರಿಪರಿಯಿಂದ ಬಳಲಿ ಬರಲಿದರು. ದುಃಖಾವೇಗದೊ
ಸಭೆ ನೆರೆಯಿಸಿ ಕವೀಂದ್ರರ ವಿಷಯದಲ್ಲಿ ತಮಗಿರುವ ಭಕ್ತಿಭಾವವನ್ನೂ ಆ
ಉದಾತ್ತವಾದ ಕಾವ್ಯ ಪ್ರತಿಭೆಯ ಉಜ್ವಲತೆಯನ್ನೂ ಜನತೆಯ ಮು
ಕೊಂಡಾಡಿದರು. ಈ ಸಂದರ್ಭದಲ್ಲಿ ನಮ್ಮ ಟ್ರೇನಿಂಗ್ ಕಾಲೇಜದಲ್ಲಿಯೂ
ನೆರೆದು ಕವೀಂದ್ರರ ವಿಯೋಗದಿಂದ ಅಖಿಲ ಜಗತ್ತಿಗೂ ಅಖಂಡ ಭಾರತವರ್ಷಕ
ಸನ್ಮಾನ್ಯವಾದ ಠಾಕೂರ ಮನೆತನಕ್ಕೂ ಆದ ದುಃಖದಲ್ಲಿ ನಾವೆಲ್ಲರೂ ಸಮಭ
ಗಳಾಗಿರುವೆವೆಂದೂ ಆಮಹಾಪುರುಷರ ಆತ್ಮಕ್ಕೆ ಭಗವಂತನು ಚಿರಶಾಂತಿಯ
ಕರುಣಿಸಲೆಂದೂ ನಿರ್ಣಯಿಸಿತು. ಆ ಸಂದರ್ಭದಲ್ಲಿ ಸಭೆಯು ಮುಂದೆ ವಣ
ವಾದ ಕವೀಂದ್ರರ ವಿಷಯದ ಕೆಲವು ಮಾತುಗಳನ್ನು ಇಲ್ಲಿ ಸಂಕ್ಷೇಪವ
ಕೊಟ್ಟಿರುವೆವು.

ಕವೀಂದ್ರ ರವೀಂದ್ರರ ಪವಿತ್ರ ಜೀವನ

ಕಳೆದ ಮೇ ತಿಂಗಳ ೭ನೆಯ ತಾರೀಖಿಗೆ ಕವೀಂದ್ರರು ಜನ್ಮಿಸಿ ಎಂಭ
ವರುಷಗಳಾದುವು. ಅವರು ಹುಟ್ಟಿದ ಊರು ಕಲಕತ್ತೆ. ಅವರು ಜನ್ಮ ತಾ
ಠಾಕೂರ ಮನೆತನವು ತಲೆತಲಾಂತರಗಳಿಂದಲೂ ಬಹು ವಿಖ್ಯಾತವಾದುದು. ಇ
ಅಜ್ಜಂದಿರಾದ ದ್ವಾರಕಾನಾಥ ಠಾಕೂರರು ೧೯ನೆಯ ಶತಮಾನದ ಆರಂಭ
ಬಂಗಾಲದಲ್ಲಿ ನಡೆದ ರಾಜಕೀಯ ಸಾಮಾಜಿಕ ಚಟುವಟಿಕೆಗಳ ಚಾಲಕ
ರಾಜಾರಾಮು ಮೋಹನರಾಯರ ಬಲಗೈಯಂತಿದ್ದು ಕೆಲಸ ಮಾಡಿದವರು. ಆ
ಚಿರಂಜೀವರಾದ ದೇವೇಂದ್ರನಾಥ ಠಾಕೂರರು ತಮ್ಮ ಆಚಾರವಿಚಾರಗಳ
ಮಹರ್ಷಿಗಳೆನಿಸಿಕೊಂಡವರು. ಈ ಮಹರ್ಷಿಗಳ ಹೊಟ್ಟೆಯಲ್ಲಿ ಏ
ಗಂಡುಮಕ್ಕಳೂ ಒಬ್ಬ ಹೆಣ್ಣುಮಗಳೂ ಇದ್ದರು. ಕವೀಂದ್ರರವೀಂದ್ರರು ಆ
ಒಬ್ಬರು. ಹಿರಿಯರಾದ ದ್ವಿಜೇಂದ್ರನಾಥ ಠಾಕೂರರು ಈ ಠಾಕೂರ ಮನೆ
ನಿಕೇತನವೆನಿಸಿಕೊಂಡ ಶಾಂತಿನಿಕೇತನದ ಪುರಸ್ಕರ್ತರೆಂದು ಒಂದೇ ಮಾತು
ಬಿಟ್ಟರೆ ಅವರ ಗೌರವವು ಎಷ್ಟೆಂಬುದು ಓದುಗರ ಲಕ್ಷ್ಯಕ್ಕೆ ಬರಬಹು
ರವೀಂದ್ರರ ಚಿಕ್ಕ ತಮ್ಮಂದಿರಾದ ಜ್ಯೋತೀಂದ್ರನಾಥ ಠಾಕೂರರು ಬಂಗಾ
ಸುಪ್ರಸಿದ್ಧ ಗಾಯನಕಲಾವಿಶಾರದರೆನ್ನಿಸಿಕೊಂಡಿರುವರು. ಇವರ ಇನ್ನೊ
ಅಣ್ಣಂದಿರಾದ ಸತ್ಯೇಂದ್ರನಾಥ ಠಾಕೂರರು ನಮ್ಮ ಕರ್ನಾಟಕಕ್ಕೆ ಚಿ
ಚಿತರು. ಇವರು ಕಾರವಾರದಲ್ಲಿ ಕೆಲಕಾಲ ಡಿಸ್ಟ್ರಿಕ್ಟ ಜಜ್ಜರಾಗಿದ್ದರು.

ತ್ಯೇಂದ್ರನಾಥರು ಹಿಂದುಗಳಲ್ಲಿ ಆಯ್. ಸಿ. ಎಸ್. (I. C. S.) ಪರೀಕ್ಷೆಗೆ ಳಿತವರಲ್ಲಿ ಮೊದಲಿಗರು; ಇಷ್ಟೇ ಅಲ್ಲ, ಆವರ್ಷ ಪರೀಕ್ಷೆಗೆ ಕುಳಿತವರಲ್ಲಿ ೂದಲನೆಯ ನಂಬರು ಪಡೆದು ಪಾಸಾದವರು. ಈ ಮನೆತನದೊಳಗಿನ ೋಗೇಂದ್ರನಾಥ ಠಾಕೂರ, ಅವನೀಂದ್ರನಾಥ ಠಾಕೂರ ಇವರು ಬಂಗಾಲ ್ರಾಂತದಲ್ಲಿಯಷ್ಟೇ ಏಕೆ ಅಖಿಲ ಭಾರತದಲ್ಲಿಯೇ ವಿಖ್ಯಾತ ಚಿತ್ರಕಲಾನಿಪುಣ ನ್ನಿಸಿಕೊಂಡಿರುವರು. ಈ ರೀತಿ ತತ್ವಜ್ಞಾನ, ಸಂಗೀತ, ಚಿತ್ರಕಲೆ ಮೊದಲಾದ ುಚ್ಚ ಕಲೆಗಳ ಆಗರವೆನ್ನಿಸಿಕೊಂಡ ಸುಶಿಕ್ಷಿತ ಶ್ರೀಮಂತ ಮನೆತನದಲ್ಲಿ ಕವಿ ೀಂದ್ರರು ೧೮೬೧ನೆಯ ಇಸ್ವಿಯ ಮೇ ತಿಂಗಳ ೭ನೆಯ ತಾರೀಖಿನ ದಿನ ನ್ಮ ತಾಳಿದರು.

ಕವೀಂದ್ರರ ಬಾಲ್ಯದ ವಿಷಯದಲ್ಲಿ ಹೇಳತಕ್ಕ ಹಲವು ಮಾತುಗಳಲ್ಲಿ ುದನ್ನು ಮಾತ್ರ ಇಲ್ಲಿ ಹೇಳುವೆವು. ಇವರಿಗೆ ನಿರ್ದಿಷ್ಟ ವಿಷಯಗಳನ್ನು ರ್ದಿಷ್ಟ ರೀತಿಯಿಂದಲೇ ಕಲಿಸುವ ಸರಕಾರದ ಶಾಲೆಗಳ ಶಿಕ್ಷಣವು ತೀರ ಬಾಲ್ಯ ್ಥಿಯೇ ಒಗ್ಗಲಿಲ್ಲ. ಚಿಕ್ಕಂದಿನಲ್ಲಿ ಶಾಲೆಗೆ ಕಳುಹಿಸಲಿಕ್ಕೆ ಹೋದ ಅಳುಮಗ ುಂತ ಮುಂದಾಗಿ ಮನೆಗೆ ಓಡಿಬರುವ ಮಗನನ್ನು ನೋಡಿ ಹಿರಿಯರಾದ ವೇಂದ್ರನಾಥರು ಮನೆಯಲ್ಲಿಯೇ ಸ್ವತಂತ್ರ ಶಿಕ್ಷಕನನ್ನಿಟ್ಟು ಓದು ಬರೆಹ ುಂತಾದ ಸಾಮಾನ್ಯ ವಿಷಯಗಳನ್ನು ಕಲಿಸಬೇಕಾಯಿತು. ಈ ರೀತಿ ್ರಾಥಮಿಕ ಶಿಕ್ಷಣವನ್ನು ಹೊಂದಿದ ಬಳಿಕ ಇವರು ಕಲಕತ್ತೆಯ ಸೆಂಟ್ ಝೆವಿ ರ ಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ವಕೀಲಿಯ ಅಭ್ಯಾಸ ಾಡಿ ಬ್ಯಾರಿಸ್ಟರನಾಗಬೇಕೆಂಬ ಹವಣಿಕೆಯಿಂದ ೧೮೭೮ನೆಯ ವರ್ಷದ ಸ್ಸಿನಲ್ಲಿ ಂಗ್ಲಂಡಕ್ಕೆ ಹೋದರು. ಆದರೆ ಬೇರೆ ಬೇರೆ ಕಾರಣಗಳ ಮೂಲಕ ತುಸು ದಿನಗ ್ಥಿಯೇ ತಿರುಗಿ ಬಂದುಬಿಟ್ಟರು. ವೈದ್ಯಕೀಯವನ್ನು ಕಲಿಯಬೇಕೆಂಬ ಬಯಕೆಯಿಂದ ಲಕಾಲ ಆ ದಾರಿಯಲ್ಲಿ ಸಾಗಿದರು. ಆದರೆ ಈ ಯಾವ ಕೃತ್ರಿಮ ಶಿಕ್ಷಣಪ್ರಾ ವರಿಗೆ ಒಗ್ಗಲಿಲ್ಲ. ಜನ್ಮಸಿದ್ಧವಾದ, ಈಶ್ವರೀ ಪ್ರೇರಣೆಯೇ ಕಾರಣವಾದ, ವಿತಾಶಕ್ತಿಯೇ ಮುಂದಾಯಿತು; ಕಾವ್ಯ ಪ್ರತಿಭೆಯ ವ್ಯವಸಾಯವೇ ವರಿಗೆ ಮೈಯ್ಗುಂಡು ಅದರಲ್ಲಿಯೇ ಅವರು ಜಗದ್ವಿಖ್ಯಾತ ಕೀರ್ತಿಯನ್ನು ಳಿಸಿದರು.

ಕವೀಂದ್ರರಲ್ಲಿ ಗುಪ್ತವಾಗಿದ್ದ, ಪೂರ್ವ ಸಂಸ್ಕಾರಗಳಿಂದ ಸಂಚಿತವಾಗಿದ್ದ, ನಿತಾಪ್ರತಿಭೆಯು ಇನ್ನೂ ತಾರುಣ್ಯಕ್ಕೆ ಬರುವದಕ್ಕಿಂತಲೂ ಮೊದಲೇ ಮ್ಮಿಂದೊಮ್ಮೆ ಪ್ರಕಟವಾಯಿತು. ಅದಕ್ಕೆ ಸರಸ್ವತಿಯ ಪ್ರಸನ್ನತೆಯೆಂದಾಗಲಿ

ಮನೋಹರವಾದ ಪ್ರಕೃತಿಯ ದರ್ಶನದಿಂದಾದ ಸುಪ್ತಶಕ್ತಿಯ ಆವಿಷ್ಕಾ
ವೆಂದಾಗಲಿ ಹೇಬಹುದು. ಈ ಸಂದರ್ಭವನ್ನು ಹೀಗೆ ವರ್ಣಿಸುವುದುಂಟು—

ಕವೀಂದ್ರ ರವೀಂದ್ರರು ತಮ್ಮ ವಯಸ್ಸಿನ ೧೪ ನೆಯ ವರ್ಷದಲ್ಲಿ ಒಂ
ದಿನ ಪ್ರಾತಃಕಾಲದಲ್ಲಿ ಕಲಕತ್ತೆಯ ಒಂದು ಮೈದಾನದಲ್ಲಿ ನಿಂತು ಅದೇ ಉದ
ಯವಾಗುತ್ತಿರುವ ಬಾಲ ರವಿಯ ಹೊಂಬಣ್ಣದ ಕಿರಣಗಳು ಎತ್ತರವಾಗಿ ಬೆ
ಳೆದಿರುವ ಮರಗಿಡಗಳ ಸಂಗಡ ನರ್ತನವಾಡುತ್ತಿರುವ ಸೊಬಗನ್ನು ನಿರೀಕ್ಷಿ
ಸುತ್ತಿರುವಾಗ ಅವರ ಅಂತರಂಗದಲ್ಲಿ ಅವರ್ಣನೀಯವಾದ ಒಂದು ಆನಂದಲಹರಿ
ಉದಯವಾಯಿತು. ಮನಸ್ಸು ಸೃಷ್ಟಿಸೌಂದರ್ಯದಲ್ಲಿ ತನ್ಮಯವಾಯಿ
ಆತ್ಮವು ಆನಂದೋದಧಿಯಲ್ಲಿ ಮುಳುಗಿ ಜಗತ್ತಿನೊಡನೆ ತನ್ಮಯವಾಗಿ ಹೋಯಿ
ಇದೇ ಸಂದರ್ಭವನ್ನು ತತ್ವಜ್ಞಾನಿಗಳು ಈಶ್ವರ ಸಾಕ್ಷಾತ್ಕಾರವೆಂದು ಹೇಳುವ
ಭಕ್ತಿಮಾರ್ಗದವರು ಇಷ್ಟದೇವತೆಯ ದರ್ಶನವೆಂದು ನಂಬುವರು. ಏನೆಂದ
ಕವೀಂದ್ರ ರವೀಂದ್ರರ ಆಯುಷ್ಯದಲ್ಲಿ ಇದು ಅತಿ ಮಹತ್ವದ ಸಂದರ್ಭ. ಮ
ಇದು ತೀರ ಸಾಮಾನ್ಯವಾದ ಸ್ಥಳದಲ್ಲಿ ತೀರ ಸಾಮಾನ್ಯವಾದ ಕಾರಣದಿ
ಉಂಟಾಯಿತು. ಮುಂದೆ ಇವರು ತಮ್ಮ ಅಣ್ಣಂದಿರ ಸಂಗಡ ಸ
ಸೌಂದರ್ಯದ ಆಗರವೆನಿಸುವ ಹಿಮಾಲಯದೊಳಗಿನ ದಾರ್ಜಲಿಂಗದಲ್ಲಿ ಮ
ವಾಗಿದ್ದಾಗಲೂ ಏಶಿಯಾ, ಯುರೋಪ, ಅಮೇರಿಕಾ, ಖಂಡಗಳೊಳಗಿನ ಬೇರೆ
ಅತಿ ಮನೋಹರವಾದ ಪ್ರಾಕೃತಿಕ ಸೌಂದರ್ಯದ ಸ್ಥಳಗಳಿಗೆ ಹೋಗಿ ಅತ್ಯ
ಮನೋವೇಧಕವಾದ ದೃಶ್ಯಗಳನ್ನು ನೋಡಿದಾಗಲೂ ಕೂಡ ಈ ಪ್ರಥ
ಸಾಕ್ಷಾತ್ಕಾರಕ್ಕಿಂತಲೂ ಹೆಚ್ಚಿನ ಆನಂದವನ್ನಾಗಲಿ ಉಚ್ಚ ಭಾವನೆಯನ್ನಾ
ಹೊಂದಲಿಲ್ಲವೆಂದು ಹೇಳಿದ್ದುಂಟು. ಇದರಿಂದ ಪುರ್ನಜನ್ಮಪೂರ್ವಸಂಸ್ಕಾರಗಳ
ಒಪ್ಪುವ ಜನರಿಗೆ ಇವರದೊಂದು ಹೆಚ್ಚಿನ ಉದಾಹರಣೆಯು ದೊರೆತಂತಾಯಿ
ಒಟ್ಟಿಗೆ ಕುಲಪರಂಪರೆಯಿಂದಲೂ ಆತ್ಮಸಂಚಿತರೂಪವಾಗಿಯೂ ಕವೀಂದ್ರ
ಸುಪ್ತವಾಗಿದ್ದ ಕವಿತಾ ಶಕ್ತಿಯು ಅವರ ೧೪ ನೆಯ ವಯಸ್ಸಿನಿಂದಲೇ ಜಗ
ನಿದರ್ಶನಕ್ಕೆ ಬಂದಿತು. ಅಂದಿನಿಂದ ಇಂದಿನವರೆಗೂ ಅವರು ಆ ತಮ್ಮ ಶಕ್ತಿ
ಬಲದಿಂದ ಅಖಿಲ ಪ್ರಪಂಚದ ಹೃದಯವನ್ನು ಆಕರ್ಷಿಸಿಕೊಂಡರು. ತಮ್ಮ ವಿ
ಬುದ್ಧಿ ಸಂಸ್ಕಾರಗಳ ಬಲದಿಂದ ಅಖಿಲ ಮಾನವ ಕುಲದ ದೃಷ್ಟಿಯನ್ನು ಆಕರ್ಷಿ
ಕೊಂಡು ತಮಗೂ ತಮ್ಮ ಮಾತೃಭೂಮಿ ಭಾರತವರ್ಷಕ್ಕೂ ಅದ್ವಿತೀಯವ
ಕೀರ್ತಿಯನ್ನು ಗಳಿಸಿ ಇಂದು ಕೀರ್ತಿಶೇಷರಾದರು.

ಕವೀಂದ್ರ ರವೀಂದ್ರರ ಜೀವನವು ಪರಮ ಪವಿತ್ರವಾದುದು. ಇಂ
ಸುಪವಿತ್ರ ಜೀವನದಿಂದಲೂ ಪರಮಾತ್ಮನ ಮೇಲಣ ಅವಿಚಲ ಭಕ್ತಿಯಿಂದ

ಅವರಲ್ಲಿ ಅಂಥ ಅದ್ಭುತ ಶಕ್ತಿಯುಂಟಾಗಿ ಅಖಿಲ ಮಾನವ ಪ್ರಪಂಚವನ್ನೇ ಬೆರಗುಗೊಳಿಸಿದರು. ಅವರು ತಮ್ಮ ಪರಿಶುದ್ಧವಾದ ಸರಳ ಜೀವನವನ್ನು ಕುರಿತು ಗೀತಾಂಜಲಿ ಹೇಳಿದ ಮಾತುಗಳನ್ನು ಕೇಳಿರಿ.

ಜೀವನದ ಜೀವನವೆ ! ನೀನೆನ್ನ ತನುವಿನೊಳು |
ಜೀವ ಕಳೆದುಂಬಿಯುಂಗೋಪಾಂಗದಲ್ಲಿರಲು |
ಜೀವನಾಧಾರದೀ ತನುವನಾಂ ಪರಿಶುದ್ಧಿಯಾಗಿಡಲು ಯತ್ನಿಸುವೆನು |
ಅವಗಂ ಮನದೆ ಬುದ್ಧಿಯ ಬೆಳಕನಿಟ್ಟಿರುವ !
ಭೂವಿನುತ ಸತ್ಯವೇ ನೀನೆಂಬುದರಿತು ನಾ- |
ನಾವಗಂ ಯತ್ನಿಸುವೆನ್ನೆ ದೇವ ಮಿಥ್ಯಾವಿಚಾರಮುಂ ಕಳೆದುಬಿಡಲು |
ತನುವೆಂಬ ಮಂದಿರದೆ ಮನವೆಂಬ ಪೀಠದೊಳ್ |
ಘನಮಹಿಮ ನೀಂ ವಿರಾಜಿಸೆ ನಿನ್ನ ಮಂದಿರವ |
ನನುದಿನಂ ನಿರ್ಮಲಂಗೈದು ಸತ್ಪ್ರೇಮದಿಂ ರಂಜಿಸಲು ಯತ್ನಿಸುವೆನು |
ಮನದೆ ಮನೆಮಾಡಿದಾ ನಿನ್ನ ಬಲದಿಂದ- |
ಲೆನಗೆ ಕಾರ್ಯಸ್ಫೂರ್ತಿಯಹುದೆಂಬುದರಿತು ನಾ- |
ನನುನಯದೊಳರ್ಪಿಸುವೆನೆನ್ನಖಿಲ ಕಾರ್ಯಮುಂ ಕೀರ್ತಿಯುಂ ನಿನ್ನ ಪದಕೆ ||

ಕವೀಂದ್ರರ ಕೆಲವು ಕಾವ್ಯಗಳು

ಬಾಲ ಕವೀಂದ್ರರವೀಂದ್ರರು ತಮ್ಮ ಹದಿನೇಳನೆಯ ವಯಸ್ಸಿನಲ್ಲಿಯೇ ಕಾವ್ಯ ರಚನೆಯ ಕಾರ್ಯದಲ್ಲಿ ತೊಡಗಿದವರು. ಅಷ್ಟು ಚಿಕ್ಕವರಿರುವಾಗಲೆ ಬಂಗಾಲಾ ಭಾಷೆಯಲ್ಲಿ ಬರೆದ ಹದಿನೈದುನೂರು ಸಾಲುಗಳಿಗಿಂತಲೂ ಹೆಚ್ಚು ವಿಸ್ತಾರವಾದ **'ವನಫುಲ್'** ಎಂಬ ಮೊದಲನೆಯ ಕಾವ್ಯವು ಅತ್ಯಂತ ಮನೋವೇಧಕವಾಗಿರುವದು. ಅಂದಿನಿಂದ ಇಂದಿನವರೆಗಿನ ಐವತ್ತು ಮೂರು ವರುಷಗಳ ಸುದೀರ್ಘವಾದ ಕಾಲದಲ್ಲಿ ಅವರ ಸರಸ್ವತೀ ಉಪಾಸನೆಯ ಫಲವೆನಿಸುವ ಕಾವ್ಯ ವಾಹಿನಿಯು ಅವಿರತವಾಗಿ ವಹಿಸಿ ಬಂದು ಗಂಗಾಪ್ರವಾಹದಂತೆ ಬೆಳೆಬೆಳೆದು ಬಂಗದೇಶವನ್ನು ಪಾವನಗೈದು ಅಖಿಲ ಜಗತ್ತನ್ನೆಲ್ಲ ವ್ಯಾಪಿಸಿದ ಮಹಾ ಸಾಗರದಂತಿರುವ ಅಖಿಲ ಪ್ರಪಂಚದ ಮಹಾ ಸಾಹಿತ್ಯವನ್ನು ಕೂಡ ಬೆಳಗಿರುವದು. **ಕವಿವಾಹಿನಿ, ಸಂಧ್ಯಾಸಂಗೀತ, ಪ್ರಭಾತ ಸಂಗೀತ, ಶಿಶು ಗೀತಗಳು** (ಕ್ರಿಸೆಂಟ ಮೂನ್) **ಭಕ್ತಿಗೀತಗಳು** (ಗೀತಾಂಜಲಿ) ಮುಂತಾದ ಅಸಂಖ್ಯ ಕಾವ್ಯಗಳು ಆ ಸಾಹಿತ್ಯೋದಧಿಯಿಂದ ಆರಿಸಿ ತೆಗೆದ ರತ್ನಗಳಂತಿವೆ.

ಗೀತಾಂಜಲಿಯು ಅವುಗಳಲ್ಲಿ ಕೌಸ್ತುಭಮಣಿಯನ್ನಿಸಿಕೊಂಡಿದೆ. ಕವಿ ರವೀಂದ್ರ ಕಾವ್ಯಗಳಲ್ಲೆಲ್ಲ (ಕಾವ್ಯೇಷು ನಾಟಕಂ ರಮ್ಯಂ—ಮುಂತಾದ ಶ್ಲೋಕದ ಕವಿಪುಂಗವ ಕಾಲಿದಾಸನ ಕಾವ್ಯಗಳ ಬಗ್ಗೆ ಹೇಳುವಂತೆ) ಗೀತಾಂಜಲಿಯು ಶ್ರೇಷ್ಠವೆನಿಸಿಕೊಂಡಿದೆ. ಆ ಗೀತಾಂಜಲಿಯ ಸಾರವೆಲ್ಲ ಈ ಕೆಳಗಿನ ಕವಿತೆಯು ಸಮಾವೇಶವಾಗಿದೆಯೆಂದು ಹೇಳುವದುಂಟು.

ಧರೆಯ ಬೆಳಗುವ ನಿನ್ನ ದೀಪದಿಂದೆನ್ನಖಿಲ ।
ಕಿರುದೀಪಗಳ ಬೆಳಗಿ ನಿನ್ನ ಮಂದಿರದೊಳಗೆ ।
ಇರಿಸಿ ಬೆಳಗಿಸಿ ದೀಪಮಾಲೆಯಂ ವಿರಚಿಸುತಲಾನಂದವಡೆವೆ ನಾನು ॥

ಹೊರಗಣೆಂದ್ರಿಯ ಮಾರ್ಗಗಳ ನಿರೋಧಿಸಲಾರೆ ।
ಪರಿಪರಿಯ ಶಬ್ದದೊಳ್ ಸ್ಪರ್ಶದೊಳ್ ರೂಪದೊಳ್ ।
ಉರುತರದ ರಸಗಂಧದಾಸ್ವಾದದೊಳ್ ನಿನ್ನನೇ ಕಾಂಬೆ ದೇವದೇವ ॥

ಇಂತೆನ್ನ ಸುಖದ ಕನಸುಗಳೆಲ್ಲವುಂ ದಹಿಸಿ ।
ಸಂತಪದಸುಜ್ಯೋತಿಯುದಯವಾಗಲಿ ದೇವ ।
ಸಂತತಂ ತವಚರಣ ಭಕ್ತಿಯುಲೆ ಪರಿಣಮಿಸಲೆನ್ನಖಿಲ ಮನದ ಬಯಕೆ ॥

ಗೀತಾಂಜಲಿಯು ಹುಟ್ಟುಬಹು ಮಾರ್ಮಿಕವಾಗಿದೆ. ಈ ಮಹಾಕಾವನ್ನು ರಚಿಸಿದಾಗ ಕವಿ ರವೀಂದ್ರರ ಪ್ರಾಪಂಚಿಕ ಸ್ಥಿತಿಯು ತೀರ ನಿಕೃಷ್ಟಾವಸ್ಥೆಯಲ್ಲಿತ್ತು. ಅವರ ಮಾನಸಿಕ ಕಷ್ಟಪರಂಪರೆಗಂತೂ ಅಳವೇ ಇರಲಿಲ್ಲ. ಶಾಂತಿನಿಕೇತನದಲ್ಲಿರುತ್ತಿದ್ದ ಅವರ ಪ್ರಿಯ-ಪತ್ನಿಯು ಚಿರಶಾಂತಿಯನ್ನು ಹೊಂದಿದಳು. ಅಪ್ರತಿಮ ಬುದ್ಧಿಶಾಲಿಯಾಗಿ ಕವಿತಾಪ್ರತಿಭೆಯಿಂದ ವಿರಾಜಿಸುತ್ತಿದ್ದ ಹಿರಿಯ ಮಗನು ಮಾರಕಾಜೀನೆಯಿಂದ ಮೃತ್ಯುವಿಗೆ ತುತ್ತಾದನು. ಹಿರಿಯ ಮಗಳು ಕ್ಷಯರೋಗದಿಂದ ಕಾಲವಶಳಾದಳು. ಇಂತು ಸಾಮಾನ್ಯರಿಗೆ ಹುಚ್ಚು ಹಿಡಿಯಬಹುದಾದ ಕಷ್ಟಪರಂಪರೆಯಿಂದ ಅಲ್ಲೊಲ್ಲೋಲ ಕಲ್ಲೊಲ್ಲೋಲವಾದ ಸಂಸಾರಸಮುದ್ರದ ಅಲೆಗಳಲ್ಲಿ ಮುಳುಗೇಳುತ್ತಿರುವಾಗಲೇ ಕವಿ ರವೀಂದ್ರರ ಕವಿತಾಪ್ರತಿಭೆಯು ಉಜ್ವಲತೆಯ ಪರಮಾವಧಿಯನ್ನು ಮುಟ್ಟಿತು. ಅವರು ಸ್ವರ್ಗೀಯ ದೇವತೆಯ ಲೀಲೆಯನ್ನು ಕಂಡು ಅವಳು ಮಾನವನಿಗೆ—

"ಮಗನೆ ಬಿದರಿದೆನಗೆ ಮಾತೆಗೆ ಮೃತ್ಯುವೆಂದೆನುತ ।
ತೆಗೆದುಕೊಂಬೆನು ನಿನ್ನನೆನ್ನೊಳು ।
ಸೊಗಸಿನುದಯವ ಕೊಡಲು ಬೇಗನೆ ।"

ುಂದು ಎತ್ತಿ ಮುದ್ದಿಸುವಳೆಂದು ಹಾಡಿದರು. ಇಂಥ ಭಕ್ತಿಮಾರ್ಗದ–ವೇದಾಂತ ವಿಚಾರಗಳ–ಬಹು ಸುಲಭವಾದ ಪ್ರತಿಪಾದನೆಯೇ ಗೀತಾಂಜಲಿಯ ಧ್ಯೇಯ. ಗೀತಾಂಜಲಿಯಲ್ಲಿಯೂ ಇವರ ಇತರ ಹಲವು ಕವಿತೆಗಳಲ್ಲಿಯೂ ಇಂಥ ಉದಾತ್ತವಾದ ವೇದಾಂತ ವಿಷಯಗಳೇ ವರ್ಣಿತವಾಗಿವೆ. ಅಖಿಲ ಮಾನವ ಕುಲಕ್ಕೇ ಅನುಕರಣೀಯವಾದ ಶ್ರೇಷ್ಠವಾದೊಂದು ಧರ್ಮವು ಇವರ ಗೀತಾಂಜಲಿಯಲ್ಲಿ ಪ್ರತಿಪಾದಿತವಾಗಿದೆಯೆಂದು ಹೇಳುವದುಂಟು.

"ಸೃಷ್ಟಿಯೇ ಈಶ್ವರ; ಈಶ್ವರನೇ ಸೃಷ್ಟಿ; ಸೃಷ್ಟಿಯಲ್ಲಿ ತನ್ಮಯನಾದವನು ಈಶ್ವರೈಕ್ಯನಾದಂತೆಯೇ ಸರಿ" ಎಂಬುದು ಈ ಕವಿಯ ಸಾಂಪ್ರದಾಯವಾಗಿದೆ. ಮೋಕ್ಷವನ್ನು ದೊರಕಿಸುವದಕ್ಕೆ ಅಥವಾ ದೇವತಾ ಪ್ರತ್ಯಕ್ಷತೆಗೆ ನಿರ್ಜನವಾದ ಕಾಡುಸೇರಿ ತಪಸ್ಸುಮಾಡುವಅವಶ್ಯಕತೆಯಿಲ್ಲವೆಂದೂ ಹಿಮಾಲಯದಂಥ ಪ್ರಕೃತಿ ಸೌಂದರ್ಯದ ಆಗರದಲ್ಲಿ ಒಬ್ಬನೆ ಕುಳಿತು ತಪಸ್ಸು ಮಾಡುವದರಿಂದ ಪಡೆಯಬಹುದಾದದ್ದನ್ನು ಕಲಕತ್ತೆಯಂಥ ಬಹುಜನಾವೃತವಾದ ಬಹು ವಿಧದ ಮನಶ್ಚಾಂಚಲ್ಯಕ್ಕೆ ಕಾರಣವಾಗುವಂಥ ಸ್ಥಳದಲ್ಲಿಯೇ ಸಾಧಿಸಬಹುದೆಂದೂ ಅವರು ಸುಸ್ಪಷ್ಟವಾಗಿ ಅಂದಿರುವರು.

ಕವೀಂದ್ರ ರವೀಂದ್ರರ ಪದ್ಯಕಾವ್ಯಗಳಲ್ಲಿ ಇನ್ನೊಂದು ಗುಣ-ವಿಶೇಷವಿದೆ. ಅವರು ಕವಿಗಳಷ್ಟೇ ಅಲ್ಲ, ಒಳ್ಳೆಯ ಗಮಕಿಗಳೂ ಹೌದು. ಗಾಯನದಲ್ಲಿಯೂ ಒಳ್ಳೆಯ ಪ್ರಗತಿಯುಳ್ಳವರು. ಆದುದರಿಂದ ಅವರ ಕವಿತೆಗಳು ಗಾಯನದ ಮಟ್ಟುಗಳನ್ನು ಎಲ್ಲಿಯೂ ವಿಮರಿಸುವದಿಲ್ಲ. ಮತ್ತು ಅರ್ಥಕ್ಕೆ ಭಂಗಬರುವಂಥ ವಿರಾಮಗಳಿಂದ ಛಿನ್ನವಾಗಿರುವದಿಲ್ಲ. ತಾವು ರಚಿಸಿರುವ ಪದಪದ್ಯಗಳನ್ನು ಗಾಯನ ಶಾಸ್ತ್ರದ ರಾಗ ತಾಳ ಮಟ್ಟುಗಳ ಎಲ್ಲೆಯನ್ನು ಎಲ್ಲಿಯೂ ವಿಮರದೆ ಅರ್ಥಾನುಗುಣವಾಗಿ ಹಾಡಿತೋರಿಸುವ ಶಕ್ತಿಯುಳ್ಳ ಈ ಮಹಾನುಭಾವರು ತಮ್ಮ ಕವಿತೆಗಳನ್ನು ಅಂದು ತೋರಿಸುವಾಗ ಶ್ರೋತೃವೃಂದವು ತಲ್ಲೀನವಾಗಿ ಆ ಕವಿತೆಗಳ ರಸಭಾವಗಳಲ್ಲಿ ತೇಲಿಹೋಗುತ್ತಿತ್ತು. ಈ ಉತ್ತಮ ಗುಣಗಳ ಮೂಲಕವಾಗಿ ವಂಗೀಯ ಜನತೆಯ ಬಾಯಿಯಲ್ಲಿ ಅವರ ಹಾಡುಗಳು ಸದಾ ನರ್ತನವಾಡುತ್ತಿವೆ.

ಕವೀಂದ್ರ ರವೀಂದ್ರರು ತಮ್ಮ ಕವಿತೆಗಳ ಸರಳತೆ ಸೊಬಗು ಅರ್ಥ ಗಾಂಭೀರ್ಯ ಇವನ್ನು ಕುರಿತು ತಾವೇ ಹೇಳಿರುವುದನ್ನು ನೋಡಿರಿ.

ಇರದೆನ್ನ ಲಲಿತ ಕವಿತಾ ವನಿತೆಗಾಭರಣ |
ಉರದವಳಿಗುಡುತೊಡುಗೆ ಸಿಂಗಾರದಭಿಮಾನ |
ಉರಿಯ ಬಾಹ್ಯದ ರಚನೆಯೀವುದೇ ಸದ್ಗುಣವ ಪದಪದಾರ್ಥಾಭಿರತಿಯ ||

ಹೊರಗಿರುವಲಂಕಾರವಡ್ಡಬಹುದೈಕ್ಯತೆಗೆ ।
ವರಕವಿತೆ ಮಿದು ಪರಜೊಳಂತರಂಗದೊರೆವ ।
ಸರಸ ಸಲ್ಲಾಪದಿಂಪಂ ಕಳೆದು ಮೆರೆವುದಾಡಂಬರದೊಳಪರ ರವವು ॥

ಕವೀಂದ್ರರು ತಮ್ಮ ಕವಿತೆಗಳೆಲ್ಲ ಪರಮಾತ್ಮನಿಂದ ಪ್ರೇರಿತವಾದುವುಗಳೆಂದೂ ತಾನು ಆತನ ಕೈಯೊಳಗಿನ ಬಿದಿರಿನ ಕೊಳಿವೆಯಂತಿರುವೆನೆಂದೂ ಪರಮಾತ್ಮನ ಆ ವೇಣುಗಾನವೇ ತನ್ನ ಕವಿತೆಗಳಿಂದೂ ಹೇಳಿರುವರು. ಮತ್ತು ಪರಮಾತ್ಮನ ಪ್ರೇರಣೆಯಿಂದ ಹಾಡಿದ ಆ ಹಾಡುಗಳೇ ತನ್ನನ್ನು ಆ ಪರವಸ್ತುವಿನ ಬಳಿಗೆ ಕರೆದೊಯ್ಯುವವೆಂದೂ ಹೇಳಿರುವರು. ಸಂಬಿದ ಮಹಾನುಭಾವರಿವರು.

ಗಾನಮುಂ ಪಾಡೆಂದು ನೀನಾಜ್ಞೆಗೈಯಲೀ ।
ಮಾನವ ಮನಸ್ಸರೋಜಂ ಬಿರಿವುದುತ್ಸವದೆ ।
ಆನಂದ ಬಾಷ್ಪದಿಂ ತುಂಬಿ ತುಳುಕುವ ನಯನವೀಕ್ಷಿಪುದು ನಿನ್ನ ಮೊಗವ ॥

ಈನರ ಶರೀರದೊಳ್ ಕರ್ಕಶಂ ಪರಶು ಪಾ- ।
ಷಾಣಮೆನಿಪೆಲ್ಲವುಂ ಕರಗಿ ಸಮರಸವಾಗು- ।
ತಾನಂದ ಲಹರಿಯೊಳ್ ಮೃದುಮಧುರ ದನಿಗುಡುವುದೈ ದೇವ ನಿನ್ನ ನುತಿಸೆ

ಆ ನಿನ್ನನುತಿ ಭವಾಂಬುಧಿಯನುತ್ತರಿಸಲ್ಕೆ ।
ಸಾನುರಾಗದೊಳುಚ್ಚ ಗರಿಗೆದರಿ ನಿಂತಿರುವ ।
ಮಾನಸೋತ್ತಂಸ ಹಂಸನ ತೆರದೆ ಮೆರೆವುದೈ ದೀನನಾದೆನ್ನ ನುತಿಯು ॥

ಗಾನದಿಂದಾನಂದವಹುದು ನಿನಗದರಿನಾಂ ।
ಗಾನದಿಂದಲೆ ನಿನ್ನ ಸಾನ್ನಿಧ್ಯಕ್ಕೈದುವೆಂ ।
ಗಾನದಾನಂದದೊಳ್ ಮೈಮರೆತು ಕರೆಯುವೆಂ ಪ್ರಭುವನೇಗೆಳೆಯನೆಂದು ॥

* * *

ಧರೆಯೊಳಿನಗಿತ್ತೆ ನೀನಮರತ್ವಮಂ ದೇವ ।
ಹರುಷದಿಂದಾಡುತಿಹೆಯೀಯಾಟವಡಿಗಡಿಗೆ ।
ಬರಿಕೈದು ತುಂಬುತಿಹೆ ನವಜೀವ ಕಳೆಯಿಂದ ಬರಿದಾದ ಪಾತ್ರೆಯಿಂದನು ॥

ಕರದೆ ಪಿಡಿದೀ ವೇಣು ನಾಳದಿಂ ಮೃದು ಮಧುರ ।
ಸರದ ಸಂಗೀತಮಂ ನುಡಿಸುತೆಳೆದಾಡುತಿಹೆ ।
ಗಿರಿಗುಹಾಕಂದರದೆ ವನವನಾವಲಿಗಳಲಿ ಘನತರಾಮೋದದಿಂದ ।

ತವಕರಾಮೃತದ ಸೇಚನದಿಂದ ಕ್ಷುದ್ರತರ |
ಕವಿಹೃದಯವಿದು ಪರಮಸಂತಸದೆ ನಲಿನಲಿವು |
ತವಿರತಂ ಮೊರೆದುಕ್ಕಿ ಪಾಡುವಾಗೀತಮಂ ಬಣ್ಣಿಪಲ್ಕಾರಿಗಳವು ||
ಭುವನಮಂ ತೀವಿದಗಣಿತದ ಸಿರಿಸಂಪದಂ |
ತವಕರುಣೆಯಿಂದೆನಗೆ ಕರತಲಾಮಲಕಮಿರೆ |
ನವಯುಗ ಯುಗಾಂತರದೆ ಸವಿಡೊಡಂ ತುಂಬದೀಕರಂ ತುಂಬಿತುಂಬಿ ||

ಕವೀಂದ್ರರು ಪದ್ಯ ಕಾವ್ಯ ರಚನೆಯಲ್ಲಷ್ಟೇ ಅಲ್ಲ. ಗದ್ಯ ಲೇಖನದಲ್ಲಿಯೂ ನಾಟಕ ರಚನೆಯಲ್ಲಿಯೂ ಅಪ್ರತಿಮರೆನ್ನಿಸಿಕೊಂಡಿದ್ದಾರೆ. **ಕರುಣಾ, ಗಿರಿಬಾಲಾ, ಮುರಿದ ನೌಕಾ, ಗೋರಾ, ಶುಭಸಂದರ್ಶನ, ಸ್ನಾನಘಟ್ಟ, ಕಾಬೂಲಿವಾಲಾ,** ಮುಂತಾದ ಕಥೆಗಳು ಸರ್ವಮಾನ್ಯವಾಗಿವೆ. **ರುದ್ರಚಂದ್ರ, ಪ್ರಕೃತಿಯ ಪ್ರತಿಶೋಧ, ರಾಜಾರಾಣಿ, ಚಿತ್ರಾಂಗದಾ, ಅಂಚೆಯವನೆ,** ನೊದಲಾದ ನಾಟಕಗಳು ದೃಶ್ಯಕಾವ್ಯಗಳಷ್ಟೇ ಅಲ್ಲ; ಶ್ರಾವ್ಯಕಾವ್ಯಗಳ ದೃಷ್ಟಿಯಿಂದಲೂ ಅವು ಕಡಿಮೆತರಗತಿಯವೆನ್ನಿಸಿಲ್ಲ. ತಾವು ರಚಿಸಿರುವ ಕವಿತೆಗಳನ್ನು ಹಾಡುವಂತೆಯೇ ತಾವು ರಚಿಸಿರುವ ನಾಟಕಗಳಲ್ಲಿ ಹಲವನ್ನು ರಂಗಭೂಮಿಯ ಮೇಲೆ ತರುವ ಕಾರ್ಯವನ್ನು ಕೂಡ ರವೀಂದ್ರರು ತಾವೇ ಕೈಕೊಂಡಿದ್ದರು. ಎಷ್ಟೋ ನಾಟಕಗಳು ಶಾಂತಿನಿಕೇತನದ ವಿದ್ಯಾರ್ಥಿಗಳ ಅಭಿನಯಕ್ಕಾಗಿಯೇ ರೆದುವು.

ಕವೀಂದ್ರ ರವೀಂದ್ರರ ಕವಿತಾಪ್ರತಿಭೆಯನ್ನು ಆರಂಭಕ್ಕೆ ಸೆಚ್ಚಿ ಮೆಚ್ಚಿದ ೀತೀಯರು ವಿರಳ. ವಂಗೀಯ ಸಾಹಿತ್ಯಕ್ಕೆ ಹೊಸ ಜೀವಕಳೆಯನ್ನು ತುಂಬಿದ ಪ್ರಸಿದ್ಧ ಕಥಾಲೇಖಕರಾದ ಬಂಕಿಮ್ ಚಂದ್ರ ಚಟರ್ಜಿಯವರನ್ನು ಕನ್ನಡಿಗರು ಲ್ಲರು. ನಮ್ಮಲ್ಲಿ ಅವರ ದೇವೀಚೌಧುರಾಣಿ, ವಿಷವೃಕ್ಷ, ವಂಗವಿಜೇತಾ, ಡವಿಯ ಹುಡುಗಿ, ಸೀತಾರಾಮ ಮೊದಲಾದ ಕಥೆಯ ಪುಸ್ತಕಗಳಿಲ್ಲದ ಒಳ್ಳೆಯ ಾಚನಾಲಯಗಳಿಲ್ಲವೆಂದರೆ ಅತಿಶಯೋಕ್ತಿಯಾಗದು. ವಂದೇಮಾತರಂ ಗೀತ ಂತು ಭಾರತದ ರಾಷ್ಟ್ರೀಯ ಗೀತವಾಗಿ ಮೆರೆಯುತ್ತಿದೆ. ಈ ಹೊಸ ಹುಟ್ಟಿನ ನಿವರರು ತರುಣ ಕವೀಂದ್ರರಿಗೆ ತಮ್ಮ ಕಾರ್ಯದ ಮುಂದಿನ ಭಾರವನ್ನು ಪ್ಪಿಸಿದರು. ನೆರೆದ ಸಭೆಯಲ್ಲಿ ತಮ್ಮ ಕೊರಳೊಳಗಿನ ಹೂಮಾಲೆಯನ್ನು ಬಾಲಕವಿ ವೀಂದ್ರರ ಕೊರಳಿಗೆ ಹಾಕಿ 'ನಾನು ಕೈಕೊಂಡಿರುವ ಸಾಹಿತ್ಯಸೇವೆಯ ಪವಿತ್ರ ಾರ್ಯವನ್ನು ಮುಂದೆ ಸಾಗಿಸಣ್ಣಾ' ಎಂದು ತಮ್ಮ ವರದ ಹಸ್ತವನ್ನು ಮುಂದಲೆಯ ಮೇಲೆ ಆಡಿಸಿದರಂತೆ. ಹೀಗೆ ಸ್ವಾರಂಭದಲ್ಲಿಯೇ ನಮ್ಮದೇಶೀಯರಲ್ಲಿ

ಗಣ್ಯರಾದವರ ಭಾವನೆಯಾಗಿದ್ದರೂ ಭಾರತದಲ್ಲೆಲ್ಲ ಅವರ ಕೀರ್ತಿಯು ಪಸರಿಸಿದ್ದು ಂದಿನಿಂದಲೇ. ಅವರ ಕವಿತಾಪ್ರತಿಭೆಯ ಬೆಳಕು ಪರದೇಶೀಯರ ಕಣ್ಣುಕುಕ್ಕಿ ುದೆಯನಿಪ್ಪಿ, ಮನವ ಜಲವಿಜಲಗೊಳಿಸಿದ ತರುವಾಯವೆ.

೧೯೧೦–೧೧ನೆಯ ಸಾಲಿನಲ್ಲಿ ಕವೀಂದ್ರ ರವೀಂದ್ರರ ದೇಹಾರೊಗ್ಯದಲ್ಲಿ ಕೊರತೆಯಾಗಲು ಶಸ್ತ್ರಕ್ರಿಯೆಯಿಂದ ಅದನ್ನು ಸರಿಪಡಿಸಿಕೊಳ್ಳಬೇಕೆಂಬ ಉದ್ದೇಶ ುಂದ ೧೯೧೨ನೆಯ ಇಸ್ವಿಯಲ್ಲಿ ಅವರು ಇಂಗ್ಲಂಡಕ್ಕೆ ಹೊರಟಿದ್ದರು. ಆಗ ಅವರು ತಮ್ಮ ಗೀತಾಂಜಲಿಯೊಳಗಿನ ಕೆಲವು ಕವಿತೆಗಳನ್ನು ಇಂಗ್ಲಿಷಿಗೆ ಪರಿವರ್ತಿಸಿದರು. ತವರ ಸ್ನೇಹಿತರಲ್ಲೊಬ್ಬರಾದ ಅಯರ್ಲಂಡದ ಸುಪ್ರಸಿದ್ಧ ಕವಿ (W. B. Yeats) **ಯೀಟ್ಸ್** ಎಂಬವರು ಅದನ್ನು ನೋಡಿ ಆನಂದದಿಂದ ಕುಣಿದಾಡಿ ಪ್ರಕಟಿಸಿದರು. ಅಂದಿನಿಂದ ರವೀಂದ್ರರ ಕೀರ್ತಿಪ್ರಭೆಯು ಜಗತ್ತಿನಲ್ಲೆಲ್ಲ ಬೆಳಗಿತು. 'ಗೀತಾಂಜಲಿಯ ಪ್ರಕಟನೆಯಿಂದ ಸಮೃದ್ಧವಾದ ಇಂಗ್ಲಿಷು ಸಾಹಿತ್ಯಾರ್ಣವದ ಕ್ಷಿತಿಜದಲ್ಲಿ ಹೊಸದೊಂದು ಉಜ್ವಲವಾದ ನಕ್ಷತ್ರವು ುದಯವಾಯಿತೆ' ಂದು ಆಂಗ್ಲ ಸಾಹಿತ್ಯಕಾರರು ವರ್ಣಿಸ ಹತ್ತಿದರು. ಅದರ ರಳತೆ, ಮಾಧುರ್ಯ, ಉಚ್ಚ ವಿಚಾರತರಂಗ ಇವುಗಳಿಂದ ಜನರು ಮುಗ್ಧರಾದರು. ಇಂಗ್ಲಿಷು ಗೀತಾಂಜಲಿಯು ಬಂಗಾಲಾ ಗೀತಾಂಜಲಿಯ ಭಾಷಾಂತರವಲ್ಲ. **ನೈವೇದ್ಯ, ಖೇಯಾ, ಗೀತಾಂಜಲಿ** ಈ ಮೂರು ಕಾವ್ಯಗಳಿಂದ ಆಯ್ದುಕೊಂಡ ುತ್ತು ಆಗಾಗ ಬಂಗಾಲಾ ಪತ್ರಿಕೆಗಳಲ್ಲಿ ಪ್ರಕಟವಾದ ಹಲಕೆಲವು ಬಿಡಿ ಕವಿತೆಗಳ ಇಂಗ್ಲಿಷು ಅನುವಾದಗಳ ಸಂಗ್ರಹವಿದು. ಕನ್ನಡದ ವಚನಕಾರರ ಕಾವ್ಯ ಶೈಲಿಯು ಗದ್ಯರೂಪದಲ್ಲಿದ್ದರೂ ಪದ್ಯದ ಛಂದೋ ಬದ್ಧ ಸ್ವರೂಪವುಳ್ಳದ್ದೂ ಕಾವ್ಯದ ಇತರ ಎಲ್ಲ ಲಕ್ಷಣಗಳಿಂದ ಪರಿಪೂರ್ಣವಾಪದ್ದೂ ಇರುವದಷ್ಟೆ. ಇಂಗ್ಲಿಷು ಗೀತಾಂಜಲಿಯು ಕೂಡ ಇಂಥದೇ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ರವೀಂದ್ರರ ಮೂಲ ಗೀತಗಳಲ್ಲಿದ್ದ ಗಾಯನಕ್ಕೆ ಆವಶ್ಯಕವಾದ ಎಲ್ಲ ಅನುಕೂಲತೆ ಗಳೂ ಯಮಕಾದಿ ಶಬ್ದಸೌಷ್ಠವವೂ ಸರ್ವರಿಗೂ ತಿಳಿಯಬಹುದಾದ ಸುಲಭವಾದ ಪದ ಪ್ರಯೋಗಾದಿ ಇನ್ನನೇಕ ಸ್ವಾಭಾವಿಕ ಸುಲಕ್ಷಣಗಳೂ ಈ ಇಂಗ್ಲಿಷು ಅನು ವಾದದಲ್ಲಿ ಸಾಧ್ಯವಾಗಿರಲಿಲ್ಲ. ಆದರೂ ಅದರೊಳಗಿನ ರಸಭಾವ—ಪರಿಪಾಕ ಗಳಿಂದಲೂ ವಿಶಿಷ್ಟತರದ ಶೈಲಿಯಿಂದಲೂ ಯೌರೋಪ್ಯ ಜನಾಂಗದವರು ಮುಗ್ಧ ರಾದರು. ರವೀಂದ್ರರಿಗೆ ಜಗನ್ಮಾನ್ಯತೆಯ ಕುರುಹಾಗಿ ನೋಬಲ್ ಪಾರಿತೋಷಕವು ಸೊರೆಯಿತು. ಪರಕೀಯರು ಎತ್ತಿ ಹಿಡಿದ ಭಾರತದ ಕವಿ ಪುಂಗವರ ಈ ನಿಶಾನೆ ಯನ್ನು ಕಂಡು ನಮ್ಮವರು ಅದರ ಕಡೆಗೆ ಮುಖವೆತ್ತಿ ಚಪ್ಪಳೆಯಿಕ್ಕಿದರು. ಂದಿನಿಂದ ನಮಗೆ ನಮ್ಮೊಳಗಿನ ಒಂದು ಉಜ್ವಲ ರತ್ನದ ಪರಿಚಯವಾಯಿತು.

ಪಾಶ್ಚಿಮಾತ್ಯರು ಪೌರ್ವಾತ್ಯರಿಗೆ ಅರ್ಪಿಸಿದ ಈ ಕಾಣಿಕೆಯಿಂದ ಆಧುನಿಕ ಜಗತ್ತಿನ ಮುಂದೆ ಭಾರತದೇಶದ ಕುಶಲ-ಕಲೆಯ ಪ್ರದರ್ಶನವನ್ನು ಮಂಡಿಸಿದಂತಾಯಿತು.

ಕವೀಂದ್ರ ರವೀಂದ್ರರು ವಿಶ್ವ ಪ್ರೇಮಿಗಳು. ವಿಶ್ವದ ಪುನರ್ಘಟನೆಯ ತತ್ವವನ್ನು ಶೋಧಿಸಲು ಯತ್ನಿಸಿದವರು. ಶಾಂತಿ ನಿಕೇತನವೂ ವಿಶ್ವಭಾರತೀ ಸಂಸ್ಥೆಯೂ ಈ ಭಾವನೆಗಳ ಮೂರ್ತ ಸ್ವರೂಪಗಳು. ಉತ್ತರ ಬಂಗಾಲದಲ್ಲಿ ಮಹರ್ಷಿ ದೇವೇಂದ್ರನಾಥರಿಗೆ ಸೇರಿದ ಬೋಲಪುರವೆಂಬ ಪ್ರಕೃತಿ ಮನೋಹರತೆಯಿಂದ ಬಹುಶಾಂತವಾದೊಂದು ಆಶ್ರಮ ಪ್ರದೇಶವಿದೆ. ಮ. ದೇವೇಂದ್ರನಾಥರು ದೀರ್ಘಕಾಲದ ತೀರ್ಥಯಾತ್ರಾ ಸಂಚಾರದ ತರುವಾಯ ಇಲ್ಲಿಗೆ ಬಂದು ವಿಶ್ರಮಿಸಿದರು. ಅವರು ಅದಕ್ಕೆ ಶಾಂತಿನಿಕೇತನವೆಂದು ಹೆಸರಿಟ್ಟುಕೊಂಡಿದ್ದರು. ಈ ಶಾಂತಿನಿಕೇತನದಲ್ಲಿ ಮ. ದೇವೇಂದ್ರನಾಥರು ನಾಲ್ವತ್ತು ವರ್ಷಗಳಿಂದ ತಪಸ್ಸು ಮಾಡುತ್ತಿದ್ದರು. ಈ ಋಷ್ಯಾಶ್ರಮದಲ್ಲಿ ಬಂದು ತಪಶ್ಚರಣೆಗೆ ನಿಲ್ಲುವವರಿಗಾಗಿ ಹಲವು ಕುಟೀರಗಳನ್ನು ರಚಿಸಿದ್ದರು. ಕವೀಂದ್ರ ರವೀಂದ್ರರು ಒಮ್ಮೆ ಅಲ್ಲಿಗೆಹೋದಾಗ ತಮ್ಮ ವಿಶ್ವ-ಭಾರತೀ ಸಂಸ್ಥೆಯ ಮತ್ತು ಆ ತತ್ವಾನುಸರಣೆಯಿಂದ ಸ್ಥಾಪಿಸಬೇಕೆಂದಿರುವ ಹೊಸ ಶಿಕ್ಷಣ ಸಂಘದ ಸ್ಥಾಪನೆಗೂ ಈ ಸ್ಥಾನವು ತುಂಬ ತಕ್ಕುದೆಂದು ಅವರಿಗೆ ಹೊಳೆಯಿತು. ಮಾನವಕುಲದ ಕಲ್ಯಾಣವೇ ಗುರಿಯಾಗಿರುವ ತಂದೆ ಮಕ್ಕಳ ವಿಚಾರದ ಐಕ್ಯತೆಯ ಮೂಲಕ ಕೂಡಲೆ ಕಾರ್ಯಾರಂಭವಾಯಿತು. ಹಲವರು ಚಿಕ್ಕ ಚಿಕ್ಕ ಬಾಲಕರೊಡನೆ ರವೀಂದ್ರರು ಅಲ್ಲಿಗೆ ಬಂದು ಒಂದು ಚಿಕ್ಕ ಶಾಲೆಯನ್ನು ಪ್ರಾರಂಭಿಸಿದರು. ಅದೇ ಈಗ ವಿಶ್ವಭಾರತೀ ಮಹಾವಿದ್ಯಾಲಯವಾಗಿ ಪರಿಣಮಿಸಿದೆ. ಕವಿ ರವೀಂದ್ರರ ಕಾವ್ಯಗಳಲ್ಲಿ ಗೋಚರವಾಗುವ ವಿಶ್ವವಿಶಾಲವಾದ ಉದಾರ ದೃಷ್ಟಿ, ಉಚ್ಚತತ್ವಾನ್ವೇಷಣ, ಸೌಂದರ್ಯ ಪ್ರೀತಿ, ಮೊದಲಾದ ಗುಣಗಳು ಇವರ ದಿನದ ಆಚರಣೆಯಲ್ಲಿಯೂ ಪ್ರತ್ಯಕ್ಷವಾಗಿ ಅನುಭವಕ್ಕೆ ಬರುತ್ತಿದ್ದುವು. ಇದೀಗ ಮಹಾತ್ಮರ ಲಕ್ಷಣ.

ಈ ವಿಶ್ವಭಾರತೀಸಂಸ್ಥೆಯ ಹಾಗು ತಮ್ಮ ವಿಶ್ವದ ಪುನರ್ಘಟನೆಯ ತತ್ವದ ಪ್ರಚಾರಕ್ಕಾಗಿ ರವೀಂದ್ರರು ಪ್ರಪಂಚವನ್ನೆಲ್ಲ ಸುತ್ತಿ ಬಂದಿರುವರು. ಚೀನ-ಜಪಾನ ಯುರೋಪ ಅಮೇರಿಕಾಗಳಲ್ಲೆಲ್ಲ ಸಂಚರಿಸಿ 'ರಾಷ್ಟ್ರೀಯ ಭಾವನೆಯು ಸಂಕುಚಿತ ದೃಷ್ಟಿಯ ಪರಿಣಾಮವೆಂದೂ ಅಖಿಲ ಜಗತ್ತಿನ ಏಕೀಕರಣವೂ ಅದಕ್ಕನುಗುಣವಾದ ಪ್ರಪಂಚದ ಪುನರ್ಘಟನೆಯೂ ಆವಶ್ಯಕ'ವೆಂದೂ ಪ್ರಚಾರನಡೆಯಿಸಿದರು. 'ರಾಷ್ಟ್ರೀಯ ಭಾವನೆಯು ಗೌಣವಾದುದು ವಿಶ್ವಬಂಧುತ್ವದ ಭಾವನೆಯು ಉಚ್ಚನಿಚಾರ-ಪ್ರೇರಿತವಾದದು' ಎಂಬುದು ವಿಶ್ವಭಾರತೀ ಸಂಸ್ಥೆಯಲ್ಲಿ ಕಲಿತು

ಆಚರಿಸಬೇಕಾದ ಮಾತು. ಆಧ್ಯಾತ್ಮಿಕ ವಿಕಾಸದೊಡನೆ ಆದಿ ಭೌತಿಕ ಪ್ರಗತಿಯು ಆವಶ್ಯಕವೆಂಬುದನ್ನು ಕವೀಂದ್ರರು ಮನ್ನಿಸುತ್ತಿದ್ದರು.

ಕವೀಂದ್ರ ರವೀಂದ್ರರು ಒಳ್ಳೆಯ ಕವಿಗಳು– ಕತೆಗಾರರು–ನಾಟಕ ಕರ್ತರು–ಶಿಕ್ಷಣ ತಜ್ಞರು– ವಿಶ್ವಪ್ರೇಮಿಗಳಾದ ತತ್ವ ಜ್ಞಾನಿಗಳು– ಹಾಗೆಯೇ ವೀರ ದೇಶ ಭಕ್ತರೂ ಹೌದು. ವಂಗಭಂಗದ ಚಳವಳಿಯಲ್ಲಿ ಇವರ ಅಂಗವು ಇದ್ದೇ ಇದ್ದಿತು. ಅವರ ಅನೇಕ ಕೃತಿಗಳಲ್ಲಿ ಇವು ಒಡಮೂಡಿವೆ. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮುಂದಾಳುಗಳ ಕಾರ್ಯದಲ್ಲಿ ಇವರಿಗೆ ತುಂಬ ಸಹಾನುಭೂತಿಯಿದ್ದಿತು. ಮತ್ತು ದೇಶೀಯರ ಚಟುವಟಿಕೆಗಳನ್ನು ಹತ್ತಿಕ್ಕಲು ಯತ್ನಿಸುವ ಸರಕಾರದ ಅಧಿಕಾರಿಗಳ ಕೃತಿಗಳನ್ನು ಆಗಾಗ ನಿರ್ದಾಕ್ಷಿಣ್ಯದಿಂದ ನಿಷೇಧಿಸುತ್ತಿದ್ದರು. ಸರಕಾರದಿಂದ ತಮಗೆ ದೊರೆದ 'ಸರ್' ಪದವಿಯನ್ನು ತಿರಸ್ಕರಿಸುವದರಿಂದ ನಮ್ಮ ದೇಶದಲ್ಲಿ ನಡೆದಿರುವ ರಾಜಕೀಯ ಮುಂದಾಳುಗಳ ಆಂದೋಲನದಲ್ಲಿ ತಮಗಿರುವ ಸಂಪೂರ್ಣ ವಿಶ್ವಾಸವನ್ನು ಪ್ರಕಟಿಸಿದಂತಾಯಿತು. ಇಂಥ ಸಂದರ್ಭಗಳಲ್ಲಿ ಇವರು ತೋರಿಸಿದ ಧೈರ್ಯ, ಸ್ವದೇಶಪ್ರೇಮ, ಸ್ವಜನರ ಹಿತಾಕಾಂಕ್ಷೆ ಇವು ಅದ್ವಿತೀಯವಾಗಿವೆ. ಇಂದಿನ ಭಾರತದ ಏಕಮಾತ್ರ ಮುಂದಾಳಾಗಿರುವ ಮಹಾತ್ಮಾ ಗಾಂಧಿಯವರು ಕವೀಂದ್ರರನ್ನು ಭಾರತದ ಸಂಸ್ಕೃತಿಯ ಕಾವಲುಗಾರ (great sentinal) ಎಂದುಕರೆದಿದ್ದಾರೆ.

ತಮ್ಮ ಅಲೌಕಿಕ ಗುಣಗಳಿಂದ ಭಾರತ ಮಾತೆಯ ಕೀರ್ತಿ ಪತಾಕೆಯನ್ನು ಜಗತ್ತಿನಲ್ಲೆಲ್ಲ ಮೆರೆಯಿಸಿದ ಮಹಾಕವಿ ರವೀಂದ್ರರು ಕನ್ನಡನಾಡಿಗೆ ತುಂಬ ಪರಿಚಿತರು. ಅವರು ಹಿಂದೆ ಹೇಳಿದಂತೆ ಕಾರವಾರದಲ್ಲಿ ಡಿಸ್ಟ್ರಿಕ್ಟ ಜಜ್ಜರಾಗಿದ್ದ ಅಣ್ಣ ಸತ್ಯೇಂದ್ರನಾಥ ಠಾಕೂರರೊಡನೆ ಇಲ್ಲಿಗೆ ಬಂದು ಕೆಲಕಾಲ ವಾಸವಾಗಿದ್ದರು. ಅವರು ಇಲ್ಲಿಯ ಪ್ರಾಕೃತಿಕ ಸೌಂದರ್ಯವನ್ನು ಕಂಡು ಒಲಿದು ನಲಿದು ಹಾಡಿದ್ದಾರೆ. ೧೯೧೯ರಲ್ಲಿ ಇವರು ಬೆಂಗಳೂರಿಗೆ ದಯಮಾಡಿಸಿದ್ದರು.

ಕೊನೆಯ ಮಾತು ನಾವು ಬರೆಯಲು ಹೊರಟದ್ದು ಒಂದೆರಡು ಮಾತುಗಳೆಂದು. ಅದು ಬೆಳೆಬೆಳೆದು ಮುಗಿಯದ ಸ್ಥಿತಿಗೆ ಮುಟ್ಟುತ್ತಿದೆ. ಇಂಥ ವಿಶ್ವವ್ಯಾಪಿಯಾದ ಕೀರ್ತಿವಂತ ಮಹಾಪುರುಷರ ವಿಷಯದಲ್ಲಿ ಹೇಳತಕ್ಕ ಮಾತುಗಳೆಲ್ಲವನ್ನೂ ಹೇಳಿ ಮುಗಿಯಿತೆಂದು ಹೇಳುವ ಸಾಹಸ ಯಾರಿಗಿದೆ? ಕವೀಂದ್ರ ರವೀಂದ್ರರು ಕಣ್ಮರೆಯಾದ ಸಂದರ್ಭದಲ್ಲಿ ಹೇಳಬೇಕಾದ ಕೊನೆಯ ಮಾತೊಂದನ್ನು ಹೇಳಿ ಈ ಲೇಖನವನ್ನು ನಿಲ್ಲಿಸೋಣ.

ಕವೀಂದ್ರರು ಕಣ್ಮರೆಯಾದರೆಂದು ಹೇಳುವಾಗಲೆ ಅವರು ನಮ್ಮ ಮನಸ್ಸಿ
ಂದ ಮರೆಯಾಗಲಿಲ್ಲವೆಂದೂ ಹೇಳಿದಂತಾಗಿದೆ. ಮರಣ ಸಮಸ್ಯೆಯನ್ನು ಬಹು
ಲಭವಾಗಿ ಬಿಡಿಸಿದ ಮಹಾನುಭಾವರಿವರು. " ಸಂಸಾರವು ಕೇವಲ ಮಕ್ಕಳಾ
ಕೆ " ಎಂಬದನ್ನು ತಿಳಿದು ನಡೆದ ತತ್ವ ಜ್ಞಾನಿಗಳಿವರು.

ಗೀತಾಂಜಲಿಯೊಳಗಿನ ಈ ಕೆಳಗಿನ ಕವಿತೆಗಳನ್ನು ನೋಡಿರಿ.

ಂತವಿಲ್ಲದ ಜಗದ ಸಾಗರದ ತೀರದಲಿ ।
ಂತು ನೆರೆದಿಹ ಬಾಲಕರು ಶಾಂತಭಾವದಿಂ- ॥
ಂತ ವಿಲ್ಲದ ನಭಂ ಮೇಲೆಸೆಯ ಭೋರ್ಗರೆವ ಜಲಧಿ ಮೊರೆದುರುಳುತಿರಲು ॥
ಂತು ನಿಲ್ಲದ ಮಳಲ ಮನೆಗಳಂ ವಿರಚಿಪರು ।
ಂತಸದೆ ಕೂಗಿ ಕುಣಿದಾಡುವರು ; ಸಿಂಪುಗಳ ।
ಂತೆಗಳೊಳಾರಿಸುವರಾಡುವರು ತೃಣ ಪರ್ಣಗಳ ಹಡಗು ತೇಲಿಬಿಟ್ಟು ॥ ೧ ॥

(ಕಂತೆಗಳೊಳು ಸಿಂಪುಗಳ .ಆರಿಸುವರು;.....ಆಡುವರು)

ಅಲೆಗಳೊಡನಲೆದಾಡಿ ನೀಲ ಜಲಕ್ಕೈದುತಿರು ।
ವೆಲೆಗಳಾ ಹಡಗುಗಳ ನೋಡುತ್ತಲಾಡುವರು ।
ತಿಳಿಯದವರಿಗೆ ಜಗದ ಸಾಗರದೊಳೀಸುವುದು ಬೀಸುವುದು ಬಲೆಗಳನ್ನು ॥
ಮುಳುಗಿ ಮುತ್ತುಗಳೆತ್ತುತಿರಲನೇಕರು ಜಗದೆ ।
ಚಲಿಸುತಿರೆ ಹಡಗದಲಿ ವಾಣಿಗಳು ಬಾಲಕರು ।
ಹೊಳೆವ ಬೆಸಕದೊಳಾಡುತಿರಲಿರದು ರತ್ನಾಕರನ ಸಿರಿಯು ಗುರಿಯುವರ್ಗೆ ॥ ೨ ॥

(ಜಗದ ಸಾಗರದೊಳು ಈಸುವದು ಬಲೆಗಳನ್ನು ಬಿಸುವದು ಅವರಿಗೆ ತಿಳಿಯದು)

ಾರಿಧಿಯ ನಗೆಯ ಕಲ್ಲೋಲ ಕೋಲಾಹಲಂ ।
ೀರ ದೆಳೆನಗೆಯುಗುವ ಕಾಂತಿ ಬೆಳ್ನೊರೆಗೂಡಿ ।
ೋರುವ ಜಲಾಂತ-ಪ್ರದೇಶದಲ್ಲೊಗೆವ ಮಂದಸ್ಮಿತಂ ಮೆರೆಯುತಿರಲು ॥
ಾರುಧಿಯ ಭೀಕರ ತರಂಗಗಳ್ ಮೋದದಿಂ ।
ೀರದಲ್ಲಾಡುವಜ್ಞಾನ ಬಾಲಕರಿಂಗೆ ।
ರಿಯದಿಂಗಿತದ ಭಾಷೆಯಲಿ ಸಂಗೀತಮಂ ಪಾಡಿ ಕುಣಿಯುತಿರಲು ॥ ೩ ॥

ಮಗುವ ಮಲಗಿಸಿ ತೊಟ್ಟಿಲಲಿ ತೂಗಿ ಜೋಗುಳವ- ।
ಸೊಗಸಾಗಿ ಪಾಡುವೆಳೆಗೂಸಿನಮ್ಮನ ತೆರದೆ ।
ನಗುವ ವಾರುಧಿಯವರೊಳಾಡುತಿರೆ ತೀರದಸುಮಂದಸ್ಮಿತಂ ಮೆರೆಯುತಿರಲು॥

ಜಗದೆ ತುದಿ ಮೊದಲಿರದ ಸಾಗರದ ತೀರದಲಿ ।
ಜಗದ ಬಾಲಕರೊಂದುಗೂಡಿರಲು ಬಿರುಗಾಳಿ ।
ಜಗಕೆ ಭೀಕರವಾಗಿಯಾಗಸದ ಬಯಲುಬೀದಿಯೊಳ್ಕೈದೆ ಮೊರೆಯುತ್ತೈದೆ ॥

ಜಲಧಿಯೊಳು ಸಂಚರಿಪ ನೌಕೆಗಳ್ ಸುಳಿಸುಳಿದು ।
ಜಲಸಮಾಧಿಯು ನೈವೆ ದೂರದಲಿ ಮೃತ್ಯುವಿರೆ ।
ತಿಳಿದು ತಿಳಿಯದ ಪರಿಯೊಳಾಡುವರು ಬಾಲಕರು ನಿಶ್ಚಿಂತ ಚಿತ್ತದಿಂದ ॥
ತಿಳಿದೊರೆವರಾರು ಸೃಷ್ಟಿಯ ಗೂಢತತ್ವವುಂ ।
ತಿಳಿದವರೆ ತಿಳಿಯದವರಂತಿರಲ್ ತುದಿಮೊದಲ ।
ತಿಳಿಯಲಾಗದ ಜಗದ ಸಾಗರದ ತೀರದಲಿ ಬಾಲಕರ ಗುಂಪಿದಲ್ತೆ ॥

'ಪ್ರಪಂಚವೆಂಬ ಸಾಗರದ ತೀರದಲ್ಲಿ ಮಾನವಕುಲವೆಂಬ ಬಾಲಕರ ಸಮೂ ಆಟವಾಡುತ್ತದೆ. ಸಮುದ್ರತೀರದಲ್ಲಿ ಅಡುವ ಅಜ್ಞಾನ ಬಾಲಕರು ಅದರ ರಹಸ್ಯವ ತಿಳಿಯದಿರದಂತೆ ಮಾನವನು ಪ್ರಪಂಚದ ಗುಟ್ಟನ್ನು ತಿಳಿಯಲಾರದೆ ತೊಳಲಾಡುವ ಎಂಬುದೇ ಈ ಕವಿತೆಯ ಭಾವವು.

Indeed when he is speaking of children....one is not cert that he is not also speaking of the saints.

ಗೀತಾಂಜಲಿಯ ಪ್ರಸ್ತಾವನೆ

ಕವೀಂದ್ರ ರವೀಂದ್ರರು ಕಣ್ಮರೆಯಾದುದನ್ನು ಕೇಳಿ ನಮಗೆ ದುಃಖವಾ ಏಕೆ? ಇದಕ್ಕೆ ನಮ್ಮ ಸ್ವಾರ್ಥದ ಭಾವನೆಯೇ ಕಾರಣ. ಅವರು ನಮ ಇನ್ನೂ ಬೇಕಾಗಿದ್ದರು. ಇಂಥ ಮಹಾವ್ಯಕ್ತಿಗಳು ಬೇಡೆನ್ನಿಸುವ ಬಗೆ ಹೇ ಅಂಥ ಕಾಲವೆಲ್ಲಿದೆ? ಹಾಗೆಯೇ ಪ್ರಪಂಚದಲ್ಲಿ ನಶ್ವರಶರೀರದಿಂದ ಚಿರಂಜೀ ಗಳಾಗಿ ಬಾಳಿದವರೆಲ್ಲಿದ್ದಾರೆ? ಇನ್ನು ಅವರ ದೃಷ್ಟಿಯಿಂದ ನೋಡೋಣ. ಅವ ಈ ಸಂಸಾರದಲ್ಲಿ ಅಂ ವರ್ಷಗಳಿಗಿಂತ ಹೆಚ್ಚು ಕಾಲ ಬಾಳಿದ್ದಾರೆ. ಮಾ ದನ್ನೆಲ್ಲ ಮಾಡಿದ್ದಾರೆ. ನೋಡಬೇಕಾದುದನ್ನೆಲ್ಲ ನೋಡಿದ್ದಾರೆ. ಕೊಡುವದ ಕೊಟ್ಟು, ಕೊಳ್ಳುವದನ್ನು ಕೊಂಡಿದ್ದಾರೆ. ಪ್ರಪಂಚದ ಸಾಹಿತ್ಯ ಭಾಂಡಾರ ನೀಡಬೇಕಾದುದನ್ನು ನೀಡಿ ಪಡೆಯಬೇಕಾದ ಕೀರ್ತಿಯನ್ನು ಅಶೇಷವಾ ಪಡೆದಿದ್ದಾರೆ. ಹೂವಾಗಿ, ಹೀಚಾಗಿ, ಕಾಯಾಗಿ, ಹಣ್ಣಾಗಿ, ಕೊನೆಗೆ ಸ್ವಾನಚ್ಯು ಯಾದ ಫಲದಂತೆ ಇವರ ಜೀವನವು ತಕ್ಕ ಕಾಲದಲ್ಲಿ ಕೊನೆಗಂಡಿದೆ. ಪರಮಾತ್ಮ ಪ್ರೇರಣೆಯಿಂದ ಜನ್ಮಿಸಿದ ಅವರ ಶರೀರ ಕುಸುಮವು ಅತನ ಪ್ರೇರಣೆಯಿಂದ ಬೆಳೆದು ಬಂದು ಅತನ ಪಾದದಲ್ಲಿ ಉರುಳಿ ಧನ್ಯತೆ ಪಡೆದಿದೆ. ಹಳೆಯ ಬೀಜ

ಶರೀರವನ್ನು ಬಿಟ್ಟು ಹೊಸ ಶರೀರವನ್ನು ತಳೆದುಬರಲು ಅವರ ಆತ್ಮವು ಹೊರಟಿದೆ. ಈ ಸಂದರ್ಭದಲ್ಲಿ ನಾವು ನಮ್ಮ ದಾರಿಯೊಳಗಿನ ಕೈಗಂಬವೊಂದು ಕಣ್ಮರೆಯಾಯಿ ತೆಂದು ನೊಂದುಕೊಂಡಿದ್ದೇವೆ. ಇಷ್ಟೆ.

ಕವೀಂದ್ರರು ಮೃತ್ಯುವಿಗೆ ಹೆದರಿದವರಲ್ಲ. ಮೃತ್ಯುದೇವತೆಯು ತಮ್ಮ ಉಪಕಾರಿಯೆಂದು ಭಾವಿಸಿದ ಧೀರೋದಾತ್ತ ಜೀವನವಿವರದು. ಅವರ ಜೀವನ ನೌಕೆಯು ಸಮುದ್ರದ ನಡುವೆ ಒಡೆದು ಮುಳುಗಿಲ್ಲ. ಅದು ತನ್ನ ವ್ಯವಸಾಯವನ್ನು ಮುಗಿಸಿ ಅಚೆಯ ದಂಡೆಯೊಳಗಿನ ತಕ್ಕ ಸ್ಥಾನವನ್ನು ಸೇರಿದಬಳಿಕ ನಾವಿಕಾಣಿಯವನು ಅದರ ದುರ್ಬಲತೆಯನ್ನೂ ನಿರುಪಯುಕ್ತತೆಯನ್ನೂ ನೋಡು ದೂರತಳ್ಳಿಬಿಟ್ಟ ಸ್ಥಿತಿಯಲ್ಲಿದೆ. ಅರ್ಥಾತ್ ಇವರ ಆತ್ಮವು ಜಗತ್ತಿನ ಸಂಕಟಗಳನ್ನೆಲ್ಲ ದೂರ ನೂಂಕಿ ಪ್ರಶಾಂತವಾದ ಸ್ಥಾನವನ್ನು ಸೇರಿದೆ. ಆದುದ ರಿಂದ ಅವರ ಮರಣಕ್ಕಾಗಿ ನಾವೇಕೆ ಶೋಕಿಸಬೇಕು? ಶಾಂತಿಯಿಂದ ತುಂಬಿ ತುಳುಕುವ ಈ ಶಾಂತದಾಂತ ವೇದಾಂತಿಯ ಆತ್ಮಕ್ಕೆ ನಾವೇಕೆ ಚಿರಶಾಂತಿ ಯನ್ನು ಕೋರಬೇಕು? ಇದೆಲ್ಲ ನಮಗಾಗಿ. ಆ ಮಹಾಪುರುಷನ ಪವಿತ್ರ ಜೀವನವನ್ನು ಸ್ಮರಿಸಿ ಅನುಸರಿಸುವ ಬುದ್ಧಿಯನ್ನು ಕಲಿತುಕೊಳ್ಳುವುದಕ್ಕಾಗಿ. ಮರಣದ ವಿಷಯದಲ್ಲಿ ಆ ಮಹನೀಯರು ಹಾಡಿದ ಹಾಡುಗಳನ್ನು ಕೇಳಿರಿ.

ಮರಣದೇವತೆ ಬಂದು ಕದವನು ।
ಬೆರಳಿನಲಿ ಸಿಡಿಸಿಡಿದು ಕರೆಯಲು ।
ನರನೆ ನೀನಂದಾತಗೇಂ ಕೊಡಲಾಪೆ ಪೇಳೆನಗೆ ॥

ಅರೆರೆ! ಅತಿಥಿಯನೆಂತು ಕಳುಹಲಿ ।
ಮರಳಿ ಬರಿಗೈಯಿಂದಲಾತಗೆ ।
ಕರೆದು ಕೊಡುವೆನು ಯೆನ್ನ ಜೀವನನೌಕೆಯನು ತುಂಬಿ ॥ ೧ ॥

ಧರೆಯ ಜೀವನ ಯಾತ್ರೆ ಮುಗಿಯಲು ।
ಮರಣದೇವತೆ ಬಂದು ಬಾಗಿಲ ।
ತೆರೆಯಲಪ್ಪಣೆಗೈವ ಸಮಯದೊಳಾತ ನಿದಿರಿನಲಿ ॥

ಇರಿಸುವೆನು ನಾಂ ನಿರ್ಮಲಾಂತಃ ।
ಕರಣದಿಂದಾಯುಷ್ಯದಲಿ ಗಳಿ- ।
ಸಿರುವ-ಇಷ್ಟಾನಿಷ್ಟ, ಧನಕನಕಾದಿ-ಗಳಿಕೆಗಳ ॥ ೨ ॥

ದೊರೆದುಪಪ್ಪಣೆ ಯೆನಗೆ ಮಿತ್ರರೆ ।
ಕರುಣೆಪುದು ನೀವೀಗಲಾಜ್ಞೆಯ ।
ನೆರಗಿ ಬೇಡುವೆನಿದೆಕೊ ! ಬಾಗಿಲ ಕೀಲಿಯಿದು ಮನೆಯ ॥

ತೊರೆದೆ ನೀ ಗೃಹವನ್ನು ಮಿತ್ರರೆ ।
ಹರುಷದಲಿ ಕೊಡಿರೆನಗೆಯಾಜ್ಞೆಯ ।
ತೊರೆದು ಮೋಹವ ತೆರಳಲೆನ್ನನು ಹರಸಿ ಕಳುಹಿಸಿರಿ ॥ ೧ ॥

ನೆರೆಯಲಿರ್ದೆವು ನಾವು ಬಹುದಿನ ।
ತಿರುಗಿ ನಾಂ ಕೊಡಲಾರೆನೆಲ್ಲವ ।
ಕರುಣೆಯಿಂ ನೀವೆನಗೆ ದಯವಾಡಿರುವ ವಸ್ತುಗಳ ॥

ಅರುಣನುದಯಿಸಲಿತ್ತಲೆನ್ನಯ ।
ಕರುಮನೆಯೊಳಾರಿದುದು ದೀಪವು ।
ಹೊರಟೆನಿದಕೋ ! ತೆರಳಲಾಮಂತ್ರಣವು ಬಂದಿಹುದು ॥ ೨ ॥

ಹೀಗೆ ಹಾಡಿ ನಮ್ಮೆಲ್ಲರ ಅಪ್ಪಣೆಯನ್ನು ಕೇಳಿ, ಮೃತ್ಯು ದೇವತೆಯನ್ನು ಆಮಂತ್ರಿಸಿ, ತಾಯೇ ನನಗೆ ಸೊಗಸಿನುದಯವ ಕೊಡೆಂದು ಕೇಳಿಕೊಂಡ ಇಲ್ಲಿಂದ ಅಲ್ಲಿಗೆ ಹೊರಟು ಹೋದರು ಈ ಮಹಾನುಭಾವರು. ಇಲ್ಲಿ ಇರಬೇಕಾದ ವೆಲ್ಲ ಇಲ್ಲಿಯೇ ಇವೆ. ಕೈಗಂಬ ಹೋದರೂ ಅದರ ಮೇಲಿನ ಬರೆಹಗಳೆಲ್ಲ ನಮ್ಮಲ್ಲಿ ಉಳಿದಿವೆ. ಅವನ್ನು ನೋಡಿ ನಡೆಯಬೇಕಾದುದು ನಮ್ಮ ಕೆಲಸ !

ಭಗವಂತನು ಕರುಣಿಸಲಿ; ಓಂ ಶಾಂತಿ : ಶಾಂತಿಃ ಶಾಂತಿಃ

ದುಃಖಿಯಾತ್ರೆ

ಭಾರತದೇಶದಲ್ಲಿ ಇಪ್ಪತ್ತು ವರುಷಗಳಿಗಿಂತ ಹೆಚ್ಚುಕಾಲ ಬೇರೆ ಬೇರೆ ತರಗತಿಯ ಅಧಿಕಾರಗಳಲ್ಲಿ ಕೆಲಸಮಾಡಿದ ಲಾರ್ಡ್ ವಿಲಿಂಗ್ಡನ್ ಸಾಹೇಬರು ೧೨-೮-೧೯೪೦ನೆಯ ತಾರೀಖಿನ ದಿವಸ ತಮ್ಮ ೭೫ನೆಯ ವಯಸ್ಸಿನಲ್ಲಿ ಮರಣಹೊಂದಿದರು. ಮತ್ತು ೧೫-೮-೧೯೪೦ನೆಯ ದಿನ ಭಾರತದೇಶದಲ್ಲಿ ಅವರ ಸ್ಮಶಾನಯಾತ್ರೆಯ ದಿನಾಚರಣೆ ನಡೆಯಿತು ಅಂದು ಎಲ್ಲ ಸರಕಾರೀ ಕಚೇರಿಗಳಿಗೆ ಬಿಡುವಿದ್ದಿತು. ಈ ಮಹನೀಯರ ಜೀವನಚರಿತ್ರೆಯ ಕೆಲವು ಅಂಶಗಳನ್ನು ಯಥಾವಕಾಶ ಪ್ರಕಟಿಸುವೆವು.

ದೇವರು ಇವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ.

ಇತಿಹಾಸ ಶಿಕ್ಷಣ.

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ.,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದ. ಭಾ. ಅವರಿಂದ.

ಇತಿಹಾಸವೆಂದರೇನು? ಮನುಷ್ಯನು ಅನುಭವದಿಂದ ಕಲಿತು ಜಾಣನಾಗ
ಲ್ಲ ಒಂದು ಪ್ರಾಣಿ. ಮಾನವ ಪ್ರಾಣಿಯ ಅನುಭವ ಮತ್ತು ಮಹತ್ಕಾರ್ಯಗಳ
ಂಗ್ರಹವೇ ಇತಿಹಾಸವು. ಆದರೆ ಇದು ಒಬ್ಬಿಬ್ಬರಿಗೆ ಸಂಬಂಧಿಸಿದ್ದಿರದೆ
ಲವೊಂದು ಜನಸಮುದಾಯದ ಅನುಭವವಾಗಿದೆ. ಓದುಬರಹಗಳ ಕಲಿಯು
ತ್ತಾಗುವದಕ್ಕಿಂತ ಮೊದಲು ಇಂಥ ಅನುಭವಗಳು ಹಿರಿಯರಿಂದ ಕಿರಿಯರಿಗೆ
ಮಾತುಕತೆಗಳಿಂದ ಸಾಗಿಬಂದವು. ಒಂದು ಜನಸಮುದಾಯದೊಳಗಿನ ಹಿರಿಯರು
ರಿಯರಿಗೆ ತಮ್ಮ ಅನುಭವಗಳನ್ನೂ ತಾವು ಮಾಡಿದ ಮಹತ್ಕಾರ್ಯಗಳನ್ನೂ
ಥಾರೂಪವಾಗಿ ಹೇಳುತ್ತಿದ್ದರು. ಇದರಿಂದ ಮುಂದಿನವರು ಹಿಂದಿನವರ ಅನು
ವಗಳಿಂದ ಹಲವು ಸಂಗತಿಗಳನ್ನು ಕಲಿತು ಜಾಣರಾಗಲು ಅನುವಾಯಿತು.
ುಂದಿನ ತಲೆಗಳಿಯುವರಿಗೆ ತಕ್ಕ ಸುಧಾರಣೆಯನ್ನು ಪಡೆಯಲಿಕ್ಕೂ ಪರಿಸ್ಥಿತಿಗೆ
ನುಗುಣವಾದ ರೀತಿಯಲ್ಲಿ ತಕ್ಕ ಪರಿವರ್ತನೆಯನ್ನು ಹೊಂದಲಿಕ್ಕೂ ಸಹಾಯ
ಾರಿಯಾದ ಪೂರ್ವಿಕರ ಒಳ್ಳೆಯ ಮತ್ತು ಕೆಟ್ಟ ಅನುಭವಗಳ ಸಂಗ್ರಹವೇ ಇತಿ
ಾಸವು. ಮನುಷ್ಯನು ಸಾಮಾನ್ಯವಾಗಿ ತಾನೇ ಪ್ರಯೋಗಮಾಡಿ ನೋಡಿ
ಪ್ಪುಗಳನ್ನು ತಿದ್ದಿಕೊಳ್ಳುತ್ತ ಹೋಗುವದರಿಂದ ಕಲಿಯಬೇಕೆಂಬದು ಸರ್ವ
ಾಮಾನ್ಯವಾದ ನಿಯಮ. ಆದರೆ ಈ ಪ್ರಯೋಗಪದ್ಧತಿಗೆ ಹೆಚ್ಚು ಕಾಲಾವಧಿಯು
ೇಕು. ಮತ್ತು ಹಲವು ಸಾರೆ ಅಪಾಯವೊದಗುವ ಸಂಭವವೂ ಉಂಟು. ಆಯು
ುದ ಅಲ್ಪತೆಯಿಂದಲೂ ಸಮಾಜದ ಕಗ್ಗಂಟಿನ ತೊಡಕುಗಳ ಮೂಲಕವಾಗಿಯೂ
ಲ್ಲವನ್ನೂ ಒಂದೇ ಆಯುಷ್ಯದಲ್ಲಿ ಸಪ್ರಯೋಗವಾಗಿ ಕಲಿಯುವದು ಸಾಧ್ಯವಲ್ಲ.
ದ್ದರಿಂದ ನಮ್ಮ ಜೀವನಕ್ರಮವು ಸರಿಯಾಗಿ ಸಾಗಬೇಕಾದರೆ ಸದ್ಯದ ಅಥವಾ
ಪೂರ್ವಕಾಲದ ಜನರ ಅನುಭವದಿಂದ ತಕ್ಕ ಲಾಭವನ್ನು ಹೊಂದಲೇಬೇಕು.
ಇತಿಹಾಸದ ಈ ವ್ಯಾಪಕವಾದ ಅರ್ಥವನ್ನು ನೋಡಿದರೆ ಲೋಕದೊಳಗಿನ ಶಾಸ್ತ್ರ,
ಸಾಹಿತ್ಯ, ಕಲೆ ಮೊದಲಾದ ಮಾನವ ಜ್ಞಾನದ ಎಲ್ಲ ಅಂಗಗಳಿಗೂ ಪೂರ್ವದ ಇತಿ
ಾಸವು ಇದ್ದೇ ಇರುವದೆಂದಂತಾಗುವದು. ಹೀಗಿದ್ದರೂ ಶಾಲೆಯಲ್ಲಿ ಕಲಿಸುವ
ಇತಿಹಾಸವಿಷಯದ ವಿಚಾರವನ್ನಷ್ಟೇ ತೆಗೆದುಕೊಂಡಾಗ, ಮಾನವಪ್ರಾಣಿಯು
ಮಾಡಿದ ಮಹತ್ಕಾರ್ಯಗಳ—ಕುಲ, (ಜನಾಂಗ) ದೇಶ ಅಥವಾ ಸಮಾಜ

ಇವನ್ನು ಅನುಸರಿಸಿರಚಿತವಾದ ಕೆಲವೊಂದು ಜನಸಮುದಾಯವು ಈಲೋ
ದಲ್ಲಿ ತಲೆತಲಾಂತರಗಳಿಂದ ಹೆರವರೊಡನೆ ಕಾದಾಡಿ ತಾನು ಬದುಕಿ ಬಾಳಿದ ರೀತಿ
ಮತ್ತು ಅದರ ಅನುಭವದ—ಸಂಗ್ರಹವೇ ಇತಿಹಾಸವೆಂಬ ಕಿಂಚಿತ್ ಸಂಕುಚಿತವ
ನಿರ್ದಿಷ್ಟವೂ ಆದ ಕೆಲವೊಂದು ವಿಶಿಷ್ಟ ಭಾಗವಷ್ಟೇ ನಮ್ಮೆದುರಿಗೆ ಬರುವದು.

ಇತಿಹಾಸದ ವ್ಯಾಪಕತೆ ಮತ್ತು ಮಹತ್ವ:— ಮಾನವ ಜಾತಿಯ
ಬಗೆಯ ಜೀವನ ಕಲಹವೂ ಅನುಭವವೂ ಮುಂದಿನ ಪೀಳಿಗೆಗೆ ತುಂಬ ಪ್ರಯೋಜ
ಕಾರಿಯಾಗಿರುವದು. ಇದರಿಂದ, ಮುಂದಿನ ಜನತೆಗೆ ತನ್ನ ಮಹತ್ಕಾರ್ಯಗ
ರಜನೆಗೆ ತಕ್ಕ ಅಸ್ತಿವಾರವು ದೊರೆಯುವದು. ಹಿಂದಿನವರ ಅನುಭವವು ಮುಂ
ನವರ ಜೀವನವನ್ನು ಸುಲಭಗೊಳಿಸುವದು. ಇತಿಹಾಸ ಶಿಕ್ಷಣವು ಮನುಷ್ಯರಿ
ಒಳ್ಳೆಯ ಜೀವನ ಕ್ರಮವನ್ನು ಕಲಿಸಬೇಕು. ನಾಗರಿಕರಿಗೆ ತಮಗೂ ಜಗತ್ತಿನೊ
ಗಿನ ತಮ್ಮ ಸರೀಕರಿಗೂ ಇರುವ ಸಂಬಂಧವನ್ನು ತಿಳಿಸಿಕೊಡಬೇಕು. ಮತ್ತ
ಅದರ ಸಂಪೂರ್ಣ ತಿಳುವಳಿಕೆಯ ಮೂಲಕ ಸಾಮಾಜಿಕ ರಾಜಕೀಯ ಘಟನೆಗಳನ
ಸುಧಾರಿಸಿಕೊಳ್ಳಲು ಅನುವಾಗಬೇಕು. ಆದ್ದರಿಂದ ಈ ಬಗೆಯ ಘಟನೆಗಳಿಗೆ ಅನ
ಕೂಲವಾದ ಅಸ್ತಿವಾರವನ್ನು ನಾವು ಮೊದಲೇ ಹಾಕಿಕೊಡಬೇಕಾಗುವದ
ಆದ್ದರಿಂದ ಆ ವಿಷಯಕ್ಕೆ ಸಂಬಂಧಿಸಿದ ಸರಿಯಾದ ಜ್ಞಾನವನ್ನೂ ತಿಳುವಳಿ
ಯನ್ನು ಮಾಡಿಕೊಡಬೇಕು. ನಮ್ಮ ಕುಲ ಪರಂಪರೆಗೆ ಅನುಗುಣವಾದ ಸಾಧ
ಸಾಧ್ಯ ವಿಚಾರಗಳನ್ನು ಆದಷ್ಟುಮಟ್ಟಿಗೆ ಸರಿಯಾಗಿ ತಿಳಿಸಿಕೊಡಬೇಕು. ಇಂ
ಎಲ್ಲ ಇತಿಹಾಸವು ಪುಸ್ತಕಗಳಲ್ಲಿ ಸಮಾವೇಶವಾಗಿರುವದಿಲ್ಲ. ಇತಿಹಾಸವು ಬೇ
ಬೇರೆ ಸ್ಥಳಗಳಿಗೂ ವ್ಯಕ್ತಿಗಳಿಗೂ ಸಂಬಂಧಿಸಿದ್ದಿರುವ್ದು; ಕಟ್ಟಡಗಳಿಗೂ ಐ
ಹಾಸಿಕ ಕುರುಹಿನ ಕಲ್ಲುಗಳಿಗೂ ಸಂಬಂಧಿಸಿದ್ದಿರಬಹುದು; ಅಥವಾ ಜನರ ರೀ
ನೀತಿಗಳಿಗೂ ಹಬ್ಬ ಹುಣ್ಣಿವೆಗಳಿಗೂ ಸಂಬಂಧಿಸಿದ್ದಿರಬಹುದು. ಇತಿಹಾಸ
ಹಲಕೆಲವು ಸಂಗತಿಗಳು ಹಳೆಯ ದಂತಕಥೆಗಳಲ್ಲಿಯೂ ಪುರಾಣಗಳಲ್ಲಿಯೂ ಹಾಡ
ಲಾವಣಿಗಳಲ್ಲಿಯೂ ಸಮಾವೇಶವಾಗಿರಬಹುದು ಎಷ್ಟೋ ಸಂದರ್ಭಗಳಲ್ಲಿ ನಾವ
ನಮ್ಮ ಸುತ್ತುಮುತ್ತಲೂ ಹಲವು ಐತಿಹಾಸಿಕ ಘಟನೆಗಳನ್ನು ಕಾಣಬಹುದು
ಒಟ್ಟಿಗೆ ಹೇಳುವದಾದರೆ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿಯೇ ನಮ್
ಇತಿಹಾಸವು ಗೋಚರವಾಗಬಹುದು. ಇತಿಹಾಸವನ್ನು ನಾವು ಈ ದೃಷ್ಟಿಯಿಂ
ಸಮಾಲೋಚನೆ ಮಾಡಿದರೆ ಅದು ನಮ್ಮ ಮುಂದಿನ ಜನತೆಗೆ ಹೊಸ ಹುರುಪನ್ನು
ಕೊಡುವದು; ಮತ್ತು ನಮಗೆ ಭವಿಷ್ಯದ ಕಷ್ಟನಷ್ಟಗಳಿಗೆ ಎದೆಗೊಟ್ಟು ನಿಲ್ಲ
ವದಕ್ಕೆ ಆವಶ್ಯಕವಿರುವ ಧಾಷ್ಟ್ರ್ಯವನ್ನು ತಂದು ಕೊಡುವದು. ಇತಿಹಾಸವನ್ನು
ಸರಿಯಾಗಿ ಓದಿ ಸರಿಯಾಗಿ ತಿಳಿದುಕೊಂಡರೆ ಪೂರ್ವ ಪರಂಪರೆಯ ಬೆಳಕಿನ್ನ

ಭವಿಷ್ಯದ ಉತ್ಕರ್ಷದ ದಾರಿಯನ್ನು ಕಲ್ಪಿಸಿಕಂಡುಕೊಳ್ಳಲು ಸುಲಭವಾಗುವದು
ಪೂರ್ವಿಕರ ಅನುಭವವು ನಮ್ಮ ಭವಿಷ್ಯದ ಕೃತಿಗಳಿಗೆ ಮಾರ್ಗದರ್ಶಿಯಾಗಿ ಜೀವ
ನನ್ನು ಸುಗಮಗೊಳಿಸುವದು ಎಂದರೆ ಇತಿಹಾಸವು ನಮ್ಮ ಸದ್ಯದ ನಾಗ
ತೆಯ ಹುಟ್ಟು ಗುಟ್ಟುಗಳನ್ನು ತಿಳಿಸಿ ನಮ್ಮ ಜೀವನಕ್ಕೆ ತಕ್ಕ ಬೆಲೆಯನ್ನು
ಕೊಡುವದು. ಮಾನವರೆನಿಸಿಕೊಂಡ ನಾವು ಹಲವುಸಾರೆ ಹಿಂದಿನವರ ಅನುಭವದಿಂ
ದ್ಧಿಗಲಿಯಲಾರದೆ ಹೋಗುವದರಿಂದ ನಮ್ಮ ಸಾಮಾಜಿಕ ರಾಜಕೀಯ ಘಟ
ಗಳಲ್ಲಿ ಬಗೆಬಗೆಯ ತೊಡಕು ತೊಂದರೆಗಳು ತಲೆದೋರುವವು.

ಶಾಲೆಯ ಅಭ್ಯಾಸಕ್ರಮದಲ್ಲಿ ಇತಿಹಾಸವು ಯಾಕೆ ಸಮಾವೇಶವಾಗಿದೆ ?

ನಮ್ಮ ಮುಂದಿನ ಪೀಳಿಗೆಯನ್ನು ಅದು ಬಾಳಿ ಬದುಕಬೇಕಾಗಿರುವ
ನೂಜದ ಜೀವನಕ್ಕೆ ತಕ್ಕುದ್ದನ್ನಾಗಿ ಮಾಡುವದು ನಮ್ಮ ಶಾಲೆಗಳ ಧ್ಯೇಯ
ದ್ದರಿಂದ ಶಾಲೆಗಳು ಬೇರೆ ಬೇರೆ ವಿಷಯಗಳಲ್ಲಿ ಪೂರ್ವಿಕರ ಅನುಭವವನ್ನು
ುಂದಿನ ಜನತೆಗೆ ಸಾಗಿಸುವ ಕಾರ್ಯವನ್ನು ಮಾಡಬೇಕಾಗಿದೆ. ಅರ್ಥಾತ
ನ್ನು ಪೂರ್ವಿಕರು ತಮ್ಮ ಜೀವನಕಲಹದಲ್ಲಿ ಪಡೆದ ಜ್ಞಾನಾನುಭವಗಳೇ
ಂದು ನಾವು ಶಾಲೆಯಲ್ಲಿ ಕಲಿಯಬೇಕಾದ ವಿಷಯಗಳು. ಮತ್ತು ಅವುಗಳ
ಭ್ಯಾಸದಿಂದ ವಿದ್ಯಾರ್ಥಿಗಳು ಇಂದಿನ ಪರಿಸ್ಥಿತಿಗೆ ಅನುಕೂಲವಾದ ರೀತಿಯಲ್ಲಿ
ಮ್ಮ ಜೀವನವನ್ನು ಮಾರ್ಪಡಿಸಿಕೊಳ್ಳಲು ಸಹಾಯವಾಗುವದು. ಈ
ಜ್ಞಾನವು ಬಾಲಕರಿಗೆ ತಮ್ಮ ಜೀವನವನ್ನು ಸುಖಮಯವಾಗಿಯೂ ಉನ್ನತ
ಾಗಿಯೂ ಮಾರ್ಪಡಿಸಿಕೊಳ್ಳಲು ಬೇಕಾದ ಹೊಸ ಹುರುಪನ್ನು ಕೊಡಬೇಕು
ಈ ದೃಷ್ಟಿಯಿಂದ ನೋಡಿದರೆ ಶಾಲೆಗಳಲ್ಲಿ ಕಲಿಸುವ ಇತಿಹಾಸವು ಬಾಲಕರ
ಜೀವನದಲ್ಲಿ ಇಂದು ನಾಳೆ ಉಪಯೋಗಕ್ಕೆ ಬೀಳುವ ವಿಷಯವಲ್ಲವೆಂಬ ಭಾವನೆ
ುಂಟಾಗಬಹುದು. ಆದರೆ ಈ ವಿಷಯದ ಅಭ್ಯಾಸವು ಬಾಲಕರ ಕಲ್ಪನಾ
ಶಕ್ತಿಯನ್ನು ಬೆಳೆಯಿಸಿ ಜೀವನದ ವಿಷಯದಲ್ಲಿ ಅವರ ಅಭಿಮಾನಗಳನ್ನು
ುಟ್ಟಿಸುವದು. ಮತ್ತು ಇದರಿಂದ ಅವರಿಗೆ ತಮ್ಮ ಪ್ರಕೃತದ ಜೀವನ
ುದಬಗ್ಗೆ ಸರಿಯಾದ ತಿಳಿವಳಿಕೆಯುಂಟಾಗುವದು. ಜಪಾನ ಜರ್ಮನಿ
ುಂತಾದ ದೇಶಗಳ ಪ್ರಜೆಗಳಂತೆ ಅವರಿಗೆ ಸ್ವದೇಶಾಭಿಮಾನವನ್ನು ಕಲಿಸುವದು.
ಾರ್ವಜನಿಕ ಹಾಗು ಸ್ವವಿಷಯಕ ಕಾರ್ಯ-ಕಲಾಪಗಳನ್ನು ಯಾವರೀತಿಯಾಗಿ
ಡೆಯಿಸಬೇಕೆಂಬದೂ ಇದರಿಂದ ಗೊತ್ತಾಗುವದು. ಒಂದೇ ಮಾತಿನಲ್ಲಿ ಹೇಳು
ದಾದರೆ ಇತಿಹಾಸವು ಬಾಲಕರಲ್ಲಿ ಒಳ್ಳೆಯ ನಾಗರಿಕನ ಗುಣಗಳನ್ನು ಒಡ

ಮೂಡಿಸಬೇಕು. ಸರಿಯಾದ ಕ್ರಮದಲ್ಲಿ ಇತಿಹಾಸವನ್ನು ಕಲಿಸಿದರೆ ಮತ್ತ
ಅದನ್ನು ಸರಿಯಾಗಿ ತಿಳಿದುಕೊಂಡರೆ ಶಾಲೆಯ ಅಭ್ಯಾಸ ಕ್ರಮದಲ್ಲಿ ಅದ
ತುಂಬ ಮಹತ್ವದ ಸ್ಥಾನವುಂಟಾಗುವದು.

ಶಾಲೆಯಲ್ಲಿ ಇತಿಹಾಸವನ್ನು ಕಲಿಸುವದರಿಂದಾಗುವ ಲಾಭಗಳು

ಶೈಕ್ಷಣಿಕ (ಸಂಸ್ಕಾರವನ್ನುಂಟುಮಾಡುವ) ವಿಷಯ ಎಂಬ ದೃ
ಯಿಂದ ನೋಡಿದರೆ ಶಾಲೆಯಲ್ಲಿ ಕಲಿಸುವ ಮಿಕ್ಕ ಎಲ್ಲ ವಿಷಯಗಳಿಗಿಂತ
ಇತಿಹಾಸಕ್ಕೆ ಹೆಚ್ಚು ಪ್ರಾಧಾನ್ಯವಿರುವದು. ಇತಿಹಾಸವು ಜನತೆ
ಜೀವನಕ್ಕೂ ಧರ್ಮಕ್ಕೂ ಸಂಬಂಧಿಸಿದ ವಿಷಯವು. ಉದಾಹರಣಾರ್ಥವಾ
ಹಿಂದುಗಳ ಎಷ್ಟೋ ಹಬ್ಬಹುಣ್ಣಿವೆಗಳು ಮುಂತಾದ ಧಾರ್ಮಿಕ ಕಾರ್ಯಗಳ
ಗಳು ಒಂದಿಲ್ಲೊಂದು ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದವಿರುವವು. ದಸರೆ
ಹಬ್ಬವು ದುರ್ಗಾದೇವಿಯು ರಾಕ್ಷಸರನ್ನು ಜಯಿಸಿದ ಮತ್ತು ಮಹಾಭಾರತದ
ಪಾಂಡವರು ಅಜ್ಞಾತವಾಸದ ನಂತರ ಶಸ್ತ್ರಧಾರಣಮಾಡಿದ ದಿನವನ್ನೂ ಮರಾ
ಮತ್ತು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಘಟನೆಗಳನ
ಸೂಚಿಸುವದು. ಆದ್ದರಿಂದ ದಸರೆಯ ಹಬ್ಬವು ಧಾರ್ಮಿಕವೂ ಪೌರಾಣಿಕ
ಐತಿಹಾಸಿಕವೂ ಆಗಿದೆ. ನಾವು ದೇವರನ್ನು ಪೂಜಿಸುವೆವು. ಹಾಗೆಯ
ವಿಜಯಶಾಲಿಗಳನ್ನು ಗೌರವಿಸುವೆವು. ಹಿರಿಯರು ಮಾಡಿದ ಮಹತ್ಕಾಯ
ಗಳನ್ನೂ ಗಳಿಸಿದ ವಿಜಯಗಳನ್ನೂ ನಮ್ಮ ಬಾಲಕರ ನೆನಪಿಗೆ ತಂದುಕೊಡ
ದಕ್ಕಾಗಿ ಮನೆಯಲ್ಲಿದ್ದ ಹಿರಿಯರ ಆಯುಧಗಳನ್ನು ಪೂಜಿಸುವೆವು. ಹಿಂದು
ವರ್ಷಾರಂಭದ ದಿನವು, (ಯುಗಾದಿಯ ಹಬ್ಬವು) ಇದೊಂದು ಐತಿಹಾ
ಘಟನೆಯ ಸ್ಮಾರಕವಾಗಿದೆ. ಅಂದು ನಾವು ನಮ್ಮ ಮನೆಗಳ ಮು
ನಮ್ಮ ಪೂರ್ವಜರ ವಿಜಯ ಪತಾಕೆಯ ಸೂಚಕವಾದ ಗುಡಿಯನ್ನು ಏರಿ
ವೆವು. ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ವಿಕ್ರಮಶಕ-ಶಾಲಿವಾ
ಶಕಗಳು ನಮ್ಮ ಪೂರ್ವದ ಚಕ್ರವರ್ತಿಗಳನ್ನು ನೆನಪಿಗೆ ತಂದುಕೊಡುವ
ಯಾವ ಹಿಂದೂಶಕವೂ ಹಿಜರೀಶಕ ಕ್ರಿಸ್ತೀಶಕಗಳಂತೆ ಧರ್ಮ ಗುರುವಿನ ಜ
ದಿನದಿನದಿಂದ ಪ್ರಾರಂಭವಾಗಿಲ್ಲ. ಮೊತ್ತಮೊದಲು ಸಂಸ್ಕೃತದಲ್ಲಿ ಬರೆಯಲ್ಪ
ಭಾರತ ರಾಮಾಯಣಗಳು ನಮ್ಮವರ ಪುರಾಣಗಳು; ಪುಣ್ಯಕಥೆಗಳು; ಅವ
ಧಾರ್ಮಿಕ ಭಾವನೆಗಳು ಜೋಡಾಗಿವೆ. ಆದರೆ ಅವು ನಿಜವಾಗಿ ನಮ್ಮ ಪೂರ್ವ
ಇತಿಹಾಸಗಳೇ ಸರಿ. ೧೭ನೆಯ ಶತಮಾನದ ಸುಪ್ರಸಿದ್ಧ ವೀರನೂ ಹಿಂ
ಸಾಮ್ರಾಜ್ಯ ಸ್ಥಾಪಕನೂ ಆದ ಶಿವಾಜಿಗೆ ಭಾರತ ರಾಮಾಯಣಗಳ ಕಥಾ ಶ್ರ
ದಿಂದಲೇ ಅಷ್ಟು ಉಜ್ವಲವಾದ ಹುಮ್ಮಸವುಂಟಾಯಿತು. ಆ ಪುಸ್ತಕ

ಾಜಕನದಿಂದ ನಮ್ಮ ಬಾಲಕರಲ್ಲಿ ಹೊಸ ಹುರುಪು ಹುಟ್ಟುವದು. ಇದೇ ರೀತಿ ಯಾಗಿ ಐತಿಹಾಸಿಕ ಲಾವಣಿಗಳೂ ಹಳೆಯ ಹಾಡುಗಳೂ ಬಾಲಕರಲ್ಲಿ ಉತ್ಸಾಹ ನ್ನುಂಟುಮಾಡುವದುಂಟು. ಇಂದು ನಮ್ಮೆದುರಿಗಿರುವ ರಾಜಕೀಯ ಸಾಮಾಜಿಕ ಸಮಸ್ಯೆಗಳು ಹಿಂದಿನ ಕಾಲದಲ್ಲಿಯೂ, ನಮ್ಮ ಪೂರ್ವಜರ ಮುಂದೆಯೂ, ಇದ್ದೇ ತ್ತಿದ್ದವು. ಆಗ ಅವರು ಅಂಥ ಸಂದರ್ಭಗಳಲ್ಲಿ ಯಾವ ರೀತಿಯಾಗಿ ನಡೆದುಕೊಂಡ ರಂಬುದನ್ನು ಅಭ್ಯಾಸ ಮಾಡುವದರಿಂದ ಇಂದು ನಮ್ಮ ಮುಂದಿರುವ ಸಮಸ್ಯೆ ಯನ್ನು ಹ್ಯಾಗೆ ಬಿಡಿಸಬೇಕೆಂಬುದು ಗೊತ್ತಾಗುವದು. ಸ್ವತಂತ್ರ ಲೇಖಕರು ರೆದ ಐತಿಹಾಸಿಕ ಲೇಖನಗಳಲ್ಲಿ ಈ ವಿಚಾರಗಳನ್ನೆಲ್ಲ ಚರ್ಚಿಸಿರುವರು. ನಮ್ಮ ಂದಿನ ಸಾಹಿತ್ಯ, ಪೌರಾಣಿಕ ಕಥೆಗಳು, ಹಿಂದಿನಕಾಲದ ದಂತ ಕಥೆಗಳು, ಇವು ನಮ್ಮ ತರುಣ ಪೀಳಿಗೆಗೆ ಹಿಂದಿನ ಅನುಭವವನ್ನು ಹೇಳಿ ಇಂದಿನ ಪರಿಸ್ಥಿತಿಯಲ್ಲಿ ಹೇಗೆ ನಡೆಯಬೇಕೆಂಬುದನ್ನು ಕಲಿಸಿಕೊಡುವವು. ಇದೀಗ ಇತಿಹಾಸ ಶಿಕ್ಷಣದಿಂದಾಗುವ ನ್ಯಾವುಖ್ಯವಾದ ಪ್ರಯೋಜನ. ಆದ್ದರಿಂದ ಶಿಕ್ಷಕರು ಕೇವಲ ಐತಿಹಾಸಿಕ-ಪಠ್ಯ ಪುಸ್ತಕಗಳ ಮೇಲೆಯೇ ಕೈಯಾಡಿಸದೆ ಇತಿಹಾಸದ ಈ ಅಂಗವನ್ನು ಕಣ್ಣು ಮುಂದಿಟ್ಟುಕೊಂಡೇ ಸಾಗಬೇಕು. ಚಿಕ್ಕ ಬಾಲಕರಿಗಂತೂ ಈ ಬಗೆಯ ಐತಿಹಾಸಿಕ ಶಿಕ್ಷಣವು ಹೆಚ್ಚು ಉತ್ಸಾಹಕರವೂ ಪ್ರಯೋಜನಕಾರಿಯೂ ಮನೋರಂಜಕವೂ ಆಗುವದರಲ್ಲಿ ಸಂದೇಹವಿಲ್ಲ.

ಇತಿಹಾಸದ ಅಪಾರ್ಥ ಹಾಗು ದುಷ್ಪರಿಣಾಮ

ಇತಿಹಾಸ ಶಿಕ್ಷಣದಿಂದ ದುಷ್ಪರಿಣಾಮವಾಗದಂತೆ ಎಚ್ಚರಗೊಳ್ಳಬೇಕು. ಾಗೆ ವಿಕ್ಷಿಪ್ತ ದೃಷ್ಟಿಯಿಂದ ಇತಿಹಾಸವನ್ನು ಕಲಿಸುವುದರಿಂದ ಮನುಷ್ಯನ ದೃಷ್ಟಿಯು ಸಂಕುಚಿತವಾಗಿ ಅವನಲ್ಲಿ ದುರಹಂಕಾರವು ತಲೆದೋರುವದು. ಕೆಲವು ಸಾರೆ ಸ್ವಂತದ ಅಥವಾ ಸ್ವಜನರ ಪರಾಕ್ರಮದ ಕಾರ್ಯಗಳಿಗೆ ಹೆಚ್ಚು ಮಹತ್ವಕೊಡುವ ಮತ್ತು ಪರರವನ್ನು ತಿರಸ್ಕಾರದಿಂದ ನೋಡುವ ಮನೋ-ವೃತ್ತಿಯು ಕಂಡುಬರುವದು. ಹಾಗೆ ಮಾಡುವದರಿಂದ ಪರಕೀಯರ ಮೇಲೆ ವಿಶ್ವಾಸವೂ ಭೇದಭಾವವೂ ಹುಟ್ಟಿಕಲಹಕ್ಕೆ ಕಾರಣವಾಗುವದು. ಈ ಭಾವನೆಯು ಪ್ರಬಲವಾಗಿ ಬೆಳೆಯಿತೆಂದರೆ ಬೇರೆ ಬೇರೆ ಜನಾಂಗಗಳ ಅಥವಾ ದೇಶಗಳ ನಡುವೆ ಯುದ್ಧಾರಂಭವಾಗುವದು. ಸ್ವಜನರ ಮಹತಿಯನ್ನು ಮನ್ನಿಸುವದರಲ್ಲಿ ಕೇಡಿಲ್ಲ. ಆದರೆ ಅದೇ ಕಾಲಕ್ಕೆ ಪರಕೀಯರ ಬಗ್ಗೆ ಗುಣಗ್ರಾಹಣತೆಯೂ ನಮ್ಮಲ್ಲಿರಬೇಕು. ಪರಸ್ಪರರಲ್ಲಿ ಹೆಚ್ಚು ಹೆಚ್ಚಾಗಿ ಒಳಕೆಯಾಗುವದರಿಂದ ಭಿನ್ನ ಭಿನ್ನ ದೇಶಗಳು ಪರಸ್ಪರಾವಲಂಬಿಗಳಾಗಿ ಬಾಳುವವು. ಜ್ಞಾನವು ನಿಶ್ಚಿತಸ್ವರೂಪಕ್ಕೆ ಬರುವದು.

ಮನುಷ್ಯನು ಪೂರ್ಣತೆಯನ್ನು ಹೊಂದುವನು. ಹೊಸ ಹೊಸ ಸುಧಾರಣೆ
ಮುಂದೆ ಬರುವವು. ನೂತನ ಶೋಧಗಳಾಗುವವು. ಪ್ರಕೃತಿಯು ಮಾನ
ವಶವಾಗುವದು. ಪೂರ್ವಿಕರ ಮತ್ಸರವನ್ನೂ ಬಡೆದಾಟಗಳನ್ನೂ ನಾವು ಮು
ಬಿಡಬೇಕು. ಸದ್ಯದ ಜನತೆಯು ಹೆಚ್ಚು ವಿಶಾಲವಾದ ದೃಷ್ಟಿಯಿಂದ ಬೆಳೆ
ಸಲ್ಪಡಬೇಕು. ಇತಿಹಾಸದ ಅಭ್ಯಾಸವು ಪರಸ್ಪರರಲ್ಲಿ ಮತ್ಸರ ಅವಿಶ್ವಾಸಗಳ
ಹುಟ್ಟಿಸುವ ಸಂಭವವುಂಟು. ಯುದ್ಧ ಬಡಿದಾಟಗಳಿಂದ ನಮಗೆ ಏನೂ ಪ್ರಯೋ
ಜನವಿಲ್ಲ. ಹೊಡೆದಾಟ ಬಡಿದಾಟಗಳಿಂದ ಸುಖ ಸಮಾಧಾನಗಳು ಅಡಗುವ
ಪರಸ್ಪರ ಮೈತ್ರಿ ಸಹನ ವಿಶ್ವಾಸಗಳಿಂದಲೇ ಸುಖಸಂತೋಷಗಳು ಹುಟ್ಟುವ
ಶಾಸ್ತ್ರೀಯ ಶೋಧಗಳನ್ನು ಪರಸ್ಪರರ ನಾಶಕ್ಕೆ ಉಪಯೋಗಿಸುವದರಿಂದ ಅಪಾ
ಹಾನಿ ಸಂಭವಿಸುವದು. ಶಾಸ್ತ್ರೀಯ ಜ್ಞಾನದೊಡನೆಯೇ ಅವುಗಳ ಸದು
ಯೋಗವನ್ನು ಕಲಿತುಕೊಳ್ಳುವದೂ ಅವಶ್ಯ.

ಹಿಂದಿನ ಘಟನೆಗಳನ್ನು ಆಯಾ ಕಾಲದ ದೃಷ್ಟಿಯಿಂದಲೇ ನೋಡಬೇಕು
ನಮ್ಮ ಇಂದಿನ ಜೀವನಕ್ಕೆ ಅವನ್ನು ಸಂಬಂಧಿಸಬಾರದು. ಉದಾಹರಣೆಗೆ
ನಮ್ಮ ದೇಶದ ಇತಿಹಾಸದಲ್ಲಿ ನಡೆದ ಹಿಂದಿನ ಹಿಂದೂ ಮುಸಲ್ಮಾನರ ಕಲಹವ
ಇಂದಿನ ಪರಿಸ್ಥಿತಿಗೆ ಸಂಬಂಧಿಸಕೂಡದು. ನಾವು ಇಂದು ನೂತನ ಶಾಸ್ತ್ರೀ
ಯುಗದಲ್ಲಿ ಜೀವಿಸುತ್ತಿದ್ದೇವೆ. ಆದ್ದರಿಂದ ನಮ್ಮ ಇತಿಹಾಸದ ಅಭ್ಯಾಸ
ನಿಷ್ಪಕ್ಷಪಾತ ದೃಷ್ಟಿಯಿಂದ ನಡೆಯಬೇಕು. ಅದು ನಮ್ಮ ಬಾಲಕರಿಗೆ ಪ
ಯೊಂದು ದೇಶದೊಳಗಿನ ಒಳ್ಳೆಯದನ್ನು ಗುಣಗ್ರಾಹಕ ದೃಷ್ಟಿಯಿಂದ ನೋ
ಅದನ್ನು ಸ್ವೀಕರಿಸಲು ಕಲಿಸಬೇಕು. ನಮಗೆ ಎಲ್ಲ ದೇಶಗಳ ಸಹಾಯ-ಸಹಾ
ಭೂತಿಗಳು ಬೇಕು; ಮತ್ತು ನಾವು ಎಲ್ಲ ಜನಾಂಗಗಳ ನೈತಿಕ ಹಾಗು ವಾಸ್ತವ
ಸಹಾಯವನ್ನು ಪಡೆದುಕೊಂಡು ಹೆಚ್ಚು ಸುವ್ಯವಸ್ಥಿತವಾದ ಜೀವನವನ್ನು
ಪಡೆಯಬೇಕಾಗಿದೆ. ಆದ್ದರಿಂದ ಇತಿಹಾಸದ ಅಪಾರ್ಥವೂಡಿ ಸಂಕುಚಿತ ದೃ
ಯಿಂದ ಅದರ ಅಭ್ಯಾಸವು ನಡೆಯದಂತೆ ನೋಡಿಕೊಳ್ಳುವದು ಅತ್ಯಾವಶ್ಯ
ವಾಗಿದೆ.

—ಮುಂದೆ ಸಾಗುವದು.

ಶಿಕ್ಷಣದ ಗೊತ್ತು ಗುರಿಗಳು

ಲೇಖಕರು :— ಶ್ರೀ. ಮು. ಗು. ಹಂದ್ರಾಳ, ಬಿ. ಎ. (ಆನರ್ಸ) ಬಿ. ಟಿ.

ುರಿಯು ಆವಶ್ಯಕತೆ:

ಯಾವುದಾದರೊಂದು ಕೆಲಸ ಮಾಡಲು ಹೊರಟ ಮನುಷ್ಯನು ತಾನು ಕೊಂಡ ಕೆಲಸದ ಗೊತ್ತು ಗುರಿಗಳನ್ನು ಮೊದಲೇ ನಿರ್ಧರಿಸ ಬೇಕಾಗುತ್ತದೆ. ರಿಯಿಲ್ಲದೆ ಹೊರಟರೆ ಯಾವ ಕೆಲಸವೂ ಕೈಗೂಡದು. ಕುಂಬಾರನು ಇಂತಹ ಂದು ಪಾತ್ರೆಯನ್ನು ಮಾಡ ಬೇಕೆಂದು, ಚಿತ್ರಗಾರನು ಇಂತಹದೊಂದು ೂರ್ತಿ ಮಾಡಬೇಕೆಂದು ಮೊದಲೇ ಕಲ್ಪಿಸಿ ಬಳಿಕ ಆ ಕೆಲಸಕ್ಕೆ ಕೈಹಾಕ ಕಾಗುತ್ತದೆ. ಇಷ್ಟೇ ಅಲ್ಲ; ಅವರು ಹೆಜ್ಜೆ ಹೆಜ್ಜೆಗೂ ತಾವು ಮಾಡ ಕೆಂದಿರುವ ವಸ್ತುವಿನ ಆದರ್ಶ ಸ್ವರೂಪವನ್ನು ಮನಶ್ಚಕ್ಷುವಿನ ಎದುರಿಗೆ ಟ್ಟುಕೊಂಡೇ ತಮ್ಮ ಕೆಲಸ ಸಾಗಿಸಬೇಕಾಗುತ್ತದೆ. ಹಾಗೆಯೇ ಶಿಕ್ಷಣ ರ್ಯವು ಯಶಸ್ವಿಯಾಗಿ ನೆರವೇರ ಬೇಕಾದರೆ ಅದರ ಗೊತ್ತು ಗುರಿಗಳನ್ನು ಂಚಿತವಾಗಿಯೇ ನಿರ್ಧರಿಸುವದು ಅತ್ಯಾವಶ್ಯಕ. ಗೊತ್ತು ಗುರಿಗಳಿಲ್ಲದ ಣವು ಎಂದಿಗೂ ಫಲಕಾರಿ ಯಾಗಲಾರದು.

ಣದ ಗುರಿಗಳು :

ಶಿಕ್ಷಣದ ಗುರಿಯನ್ನು ಕುರಿತು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ುದಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಅವುಗಳಲ್ಲಿ ುಖ್ಯವಾದವುಗಳನ್ನು ಮಾತ್ರ ಇಲ್ಲಿ ವಿವೇಚಿಸುತ್ತೇನೆ.

) ಉಪಜೀವನ-ಸಾಧನ :—

ಶಿಕ್ಷಣವು ಉದರ ನಿರ್ವಾಹದ ಮಾರ್ಗವನ್ನು ಕಲ್ಪಿಸಿ ಕೊಡ ಬೇಕೆಂಬುದು ಸಾಮಾನ್ಯದ ಅಭಿಪ್ರಾಯ. ಮಕ್ಕಳು ದೊಡ್ಡವರಾಗಿ ಸಮಾಜದಲ್ಲಿ ಬದುಕಿ ಬೇಕಾದರೆ ಅವರಿಗೆ ಸಾಕಷ್ಟು ವ್ಯವಹಾರಜ್ಞಾನವಾಗಬೇಕು, ಅವರು ವಲಂಬಿಗಳಾಗ ಬೇಕು, ಎಂದರೆ, ಅವರು ತಮ್ಮ ಉಪಜೀವನದ ಮಾರ್ಗವನ್ನು ುಕೊಳ್ಳಲು ಸಮರ್ಥರಾಗಬೇಕು. ಇದಕ್ಕೆ ಶಿಕ್ಷಣವು ಅವಶ್ಯವಾಗಿ ು. ಆದರೆ ಕೇವಲ ಉಪಜೀವನಕಾಗಿ ಶಿಕ್ಷಣ ಎನ್ನುವದು ಸಂಕುಚಿತ

ದೃಷ್ಟಿ. ಹಾಗೆಂದ ಪಕ್ಷದಲ್ಲಿ ಮಾನವನಿಗೂ ಪಶುವಿಗೂ ವಿಶೇಷ ಅಂತರ
ಉಳಿಯುವದಿಲ್ಲ. ಪಶುವಿನಲ್ಲಿರದ ಎಷ್ಟೋ ಶಕ್ತಿಗಳನ್ನು ದೇವರು ಮಾನವ
ದಯಪಾಲಿಸಿದ್ದಾನೆ. ಮಾನವನಿಗೆ ವಿಚಾರಶಕ್ತಿ ಇದೆ, ಆಧ್ಯಾತ್ಮಿಕ ಲಾ
ಗಳಿವೆ. ಈ ಶಕ್ತಿಗಳನ್ನು ವೃದ್ಧಿಪಡಿಸುವದಕ್ಕೂ ಈ ಲಾಲಸೆಗಳನ್ನು ತೃ
ಗೊಳಿಸಲಿಕ್ಕೂ ಶಿಕ್ಷಣವು ಬೇಕೆಂಬುದು ನಿರ್ವಿವಾದದ ಮಾತು, ಇದಲ್ಲದೆ ಈ
ಯಾಂತ್ರಿಕ ಯುಗದಲ್ಲಿ ಪ್ರತಿಯೊಬ್ಬನಿಗೂ ವಿರಾಮವು ಹೆಚ್ಚಾಗಿ ದೊರೆಯುತ್ತ
ಮನುಷ್ಯನಿಗೆ ತನ್ನ ವಿರಾಮಕಾಲದ ಸದುಪಯೋಗವನ್ನು ಮಾಡಿಕೊಳ್ಳಲ
ತಕ್ಕ ಶಿಕ್ಷಣವು ಬೇಕು. ಆದುದರಿಂದ ಉಪಜೀವನ ಸಾಧನೆಯೇ ಶಿಕ್ಷಣ
ಗುರಿಯಾಗಲಾರದು.

(೨) ಬುದ್ಧಿವಿಕಾಸ:

ಜ್ಞಾನ ಸಂಪಾದನೆಯೇ ಶಿಕ್ಷಣದ ಮುಖ್ಯ ಗುರಿ ಎಂದು ಅನೇಕ
ಮುಖ್ಯವಾಗಿ ಶಾಲಾ ಶಿಕ್ಷಕರ ಮತ. ಮಕ್ಕಳಿಗೆ ವಿಷಯ ಜ್ಞಾನವನ್ನು ಹೆಚ
ಹೆಚ್ಚಾಗಿ ಮಾಡಿ ಕೊಟ್ಟು ಅವರ ಬೌದ್ಧಿಕ ಶಕ್ತಿಯನ್ನು ಬಲಪಡಿಸುವದೇ ಶಿಕ್ಷ
ವೆಂದು ಅವರು ತಿಳಿಯುತ್ತಾರೆ. ಬಾಲಕರ ಬೌದ್ಧಿಕ ಶಕ್ತಿಗಳನ್ನು ಬಲಪಡಿಸ
ಅಭ್ಯಾಸ ವಿಷಯಗಳು ಅತ್ಯುತ್ತಮ ಸಾಧನಗಳಾಗಿರುವವೆಂಬ ಗ್ರಹಿಕೆಯು ರೂ
ವಾಗಿದೆ. ಜ್ಞಾನದಿಂದ ಮಾನವನಿಗೆ ಸಾಮರ್ಥ್ಯವುಂಟಾಗುತ್ತದೆ. ತನ್ನ ಬು
ಬಲದಿಂದ ಅವನು ಪ್ರಕೃತಿಯ ಶಕ್ತಿ-ವಿಶೇಷಗಳನ್ನು ಸ್ವಾಧೀನಪಡಿಸಿಕೊಂ
ಅವುಗಳನ್ನು ನಿಯಂತ್ರಿಸಬಲ್ಲನು, ಮತ್ತು ತನ್ನ ಸುತ್ತಲಿನ ಪರಿಸ್ಥಿತಿಯನ
ತನಗೆ ಅನುಕೂಲವಾಗುವಂತೆ ಮಾರ್ಪಡಿಸಬಲ್ಲನು. ಅಲ್ಲದೆ ವಿರಾಮಕಾಲ
ಸದುಪಯೋಗವನ್ನು ಮಾಡಿಕೊಳ್ಳಲು ಜ್ಞಾನವು ಬಹಳ ಸಹಾಯಕವಾಗುತ್ತ
ಆದರೆ ಜ್ಞಾನಾರ್ಜನೆಯೇ ಶಿಕ್ಷಣದ ಮುಖ್ಯ ಗುರಿಯಾಗಲಾರದು. ಹಾಗೆಂ
ಪಕ್ಷದಲ್ಲಿ ವೃತ್ತಿಶಿಕ್ಷಣವನ್ನು ಸಂಪೂರ್ಣವಾಗಿ ಉಪೇಕ್ಷಿಸಿದಂತಾಗುತ್ತದೆ
ಜ್ಞಾನಕ್ಕಾಗಿ ಜ್ಞಾನ ಸಂಪಾದಿಸುವದೆಂದರೆ ಕೃಪಣನು ಪ್ರಯೋಜನವಿಲ್ಲದೆ ಹ
ವನ್ನು ಸಂಗ್ರಹಿಸಿದಂತೆಯೇ ಸರಿ. ಕೇವಲ ಜ್ಞಾನೋಪಾಸನೆಯಿಂದ ಬುದ್ಧಿಯ
ಬಲಪಡಬಹುದಾದರೂ ವ್ಯವಹಾರಜ್ಞಾನವೂ ನೈತಿಕಸಾಮರ್ಥ್ಯವೂ ಉಂಟ
ಗುವವೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರುವದಿಲ್ಲ.

(೩) ಶೀಲ-ಸಂವರ್ಧನೆ:

ಮಕ್ಕಳನ್ನು ಸುಶೀಲರನ್ನಾಗಿ ಮಾಡುವದು ಶಿಕ್ಷಣದ ಗುರಿಯೆಂದು ಬಹು
ಕಾಲದಿಂದ ಪ್ರತಿಪಾದಿಸಲ್ಪಟ್ಟಿದೆ. ಸಮಾಜದಲ್ಲಿ ಎಲ್ಲರೂ ಸುಖಿಗಳಾಗಿ

ೇಕಾದರೆ ಸಮಾಜದ ಅಂಗವಾದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಂತ ಸುಖ
ನ್ನಲ್ಲದೆ ಪರರ ಸುಖವನ್ನೂ ಬಯಸಬೇಕಾಗುತ್ತದೆ. ಪ್ರತಿಯೊಬ್ಬನು ಪರೋಪ
ಕಾರಿಯೂ ದಯಾಪರನೂ ಸದ್ಗುಣಿಯೂ ಆಗಿರಬೇಕು. ಆದುದರಿಂದ ಶಿಕ್ಷಣಕ್ಕೆ
ೈತಿಕ ಗುರಿಯು ಅತ್ಯಾವಶ್ಯಕವಾದುದೆಂದು ಧಾರಾಳವಾಗಿ ಹೇಳಬಹುದು.
ದರೆ ಈ ಉದ್ದೇಶವೂ ಸಹ ಮೇಲೆ ವಿವೇಚಿಸಿದ "ಉಪಜೀವನ ಸಾಧನ",
ಬುದ್ಧಿವಿಕಾಸ" ಗುರಿಗಳಂತೆ ಏಕಪಕ್ಷೀಯವಾಗಿರುತ್ತದೆ. ಸುಶೀಲನಾದವನು
ೃಷ್ಠಕಾಯನೂ ಜ್ಞಾನಿಯೂ ಆಗಿರುವನೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರು
ಂತಿಲ್ಲ. ಸುಸ್ವಭಾವಿಯಾದ ಮನುಷ್ಯನಿಂದ ಸಮಾಜಕ್ಕೆ ಯಾವದೇತರದ ಅಹಿತ
ಾಗುವದಿಲ್ಲೆಂಬ ಮಾತು ನಿಜ; ಆದರೆ, ಅವನು ಸಮಾಜೋನ್ನತಿಯ ಕಾರ್ಯ
ಳನ್ನು ಕೈಕೊಳ್ಳದೇ ಇರಬಹುದು. ಇದಲ್ಲದೆ, ದೇಶದೇಶಗಳಲ್ಲಿ, ಕಾಲಕಾಲಕ್ಕೆ
ೈತಿಕ ವಿಚಾರಗಳು ಬದಲಾಗುವದರಿಂದ "ಶೀಲ-ಸಂವರ್ಧನೆ" ಗುರಿಯು
ಾಕಷ್ಟು ಯೋಗ್ಯವಾಗಿರುವದಿಲ್ಲ.

೪) ಸರ್ವಶಕ್ತಿಗಳ ಸಮನ್ವಿತ ವಿಕಾಸ:

ಎಲ್ಲ ಮಾನವ ಶಕ್ತಿಗಳನ್ನು ವಿಕಾಸಗೊಳಿಸುವದು ಶಿಕ್ಷಣದ ಗುರಿಯೆಂದು
ಲವರ ಅಭಿಪ್ರಾಯವಿದೆ. ಇನ್ನುಳಿದ ಗುರಿಗಳಂತೆ ಇದು ಏಕಪಕ್ಷೀಯ
ಾಗಿರುವದಿಲ್ಲ. ಮಗುವಿನ ವಿಕಾಸವೆಂದರೆ ಕೇವಲ ಅವನ ಶಾರೀರಿಕ, ಬೌದ್ಧಿಕ
ಲ್ಲವೆ ನೈತಿಕಶಕ್ತಿಗಳ ವಿಕಾಸವಲ್ಲ; ಅದು ಅವನಲ್ಲಿದ್ದ ಎಲ್ಲ ಶಕ್ತಿಗಳ ಸಮನ್ವಿತ
ಕಾಸ. ಆದರೆ ಶಿಕ್ಷಣದ ಈ ಗುರಿಯಲ್ಲಿ ಸರ್ವಶಕ್ತಿಗಳ ಸಮವಾದ ಇಲ್ಲವೆ
ಪೂರ್ಣವಾದ ಬೆಳವಣಿಗೆಯಾಗಬೇಕೆಂದು ಯಾರಾದರೂ ಪ್ರತಿಪಾದಿಸಬಹುದು.
ರೆ ವ್ಯಕ್ತಿವ್ಯಕ್ತಿಗಳಲ್ಲಿ ಅಂತರವಿರುವದರಿಂದ ಪ್ರತಿಯೊಬ್ಬನಲ್ಲಿ ಎಲ್ಲ ಶಕ್ತಿಗಳನ್ನೆ
ಷ್ಟೇ ಪ್ರಮಾಣದಲ್ಲಿ ಬೆಳೆಸುವದು ಅಸಾಧ್ಯ. ಹಾಗೆಯೇ ಪ್ರತಿಯೊಬ್ಬನ
ನಮಾನದಲ್ಲಿ ಅವನ ಪ್ರತಿಯೊಂದು ಶಕ್ತಿಯನ್ನು ಸಂಪೂರ್ಣವಾಗಿ ಬೆಳೆಸುವದೂ
ಾಧ್ಯ. ಇದಲ್ಲದೆ ಕೆಲವು ಶಕ್ತಿಗಳನ್ನು ದುರ್ಲಕ್ಷಿಸಿ ಹಲವು ಶಕ್ತಿಗಳನ್ನು
ಯಿಸುವದು ಅಪಾಯಕರವಾಗಿರುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ.
ಗುರಿಯು ಈಗ ಅಲ್ಲಗಳೆದ ಸಾಂಪ್ರದಾಯಿಕ ಶಕ್ತಿಪೋಷಣೆ ಎಂಬ ಧ್ಯೇಯ
ಟ್ಟುಕೊಂಡ ಮನಶ್ಶಾಸ್ತ್ರದ ಆಧಾರದ ಮೇಲೆ ಪ್ರತಿಪಾದಿಸಲ್ಪಟ್ಟಿದೆ. ಮನ
ನ ಶಕ್ತಿಗಳಿಗೆ ಸ್ವತಂತ್ರವಾದ ಅಸ್ತಿತ್ವವಿದೆ ಎಂಬ ಕಲ್ಪನೆಯನ್ನು ಈ ಗುರಿಯು
ಿಸುತ್ತದೆ. ಆದರೆ ಈ ಕಲ್ಪನೆಯನ್ನು ಆಧುನಿಕ ಮಾನಸಶಾಸ್ತ್ರಜ್ಞರು
ಗಳೆದಿದ್ದಾರೆ.

(೫) ನಾಗರಿಕತೆ :

ಮಕ್ಕಳು ಸಮಾಜದಲ್ಲಿದ್ದುಕೊಂಡು ಜೀವಿಸಬೇಕಾದ್ದರಿಂದ ಅವರಿಗ ಅವರಿರುವ ಸಮಾಜಕ್ಕೂ ಹೊಂದಿಕೆಯನ್ನುಂಟು ಮಾಡುವದೇ ಶಿಕ್ಷಣದ ಗ ಯೆಂದು ಹೇಳುವದುಂಟು. ಮನುಷ್ಯನು ಸಮಾಜದ ಉಪಯುಕ್ತ ಅಂಗವಾ ಬೇಕಾದರೆ ಅವನಲ್ಲಿರುವ ಪಶುಪ್ರವೃತ್ತಿಗಳು ನಿಯಂತ್ರಿಸಲ್ಪಡಬೇಕು. ಅವ ಸ್ವಾವಲಂಬಿಯಾಗಬೇಕು. ಹಾಗು ಸಮಾಜಕ್ಕೆ ಸಂಬಂಧಿಸಿದ ತನ್ನ ಹೊ ಗಳನ್ನು ಅರಿಯಬೇಕು ; ಎಂದರೆ ಅವನು ಉತ್ತಮ ನಾಗರಿಕನಾಗಬೇಕು. ಆ ಶಿಕ್ಷಣ ಕಾರ್ಯದಲ್ಲಿ ಸಾಮಾಜಿಕ ಗುರಿಯನ್ನೇ ಪ್ರಾಮುಖ್ಯವಾಗಿಟ್ಟುಕೊಂ ವ್ಯಕ್ತಿತ್ವ ವಿಕಾಸವನ್ನು ಅಲಕ್ಷಿಸಿದಂತಾಗುತ್ತದೆ. ಶಿಕ್ಷಣದ ನಿಜವಾದ ಕಾಯ ಕ್ರಮದಲ್ಲಿ ಸಮಾಜಕ್ಕೆ ದೊರೆಯಬೇಕಾದಷ್ಟೇ ಪ್ರಾಶಸ್ತ್ಯವು ವ್ಯಕ್ತಿಗ ದೊರೆಯಬೇಕು.

(೬) ವೈಯಕ್ತಿಕತೆಯ ವಿಕಾಸ:—

ಮಗುವಿನ ವೈಯಕ್ತಿಯ ಪರಿಪೂರ್ಣ ವಿಕಾಸವು ಶಿಕ್ಷಣದ ಗುರಿಯ ಬೇಕೆಂದು ಡಾ। ನನ್ ಎಂಬ ಆಧುನಿಕ ಶಿಕ್ಷಣತಜ್ಞರು ಪ್ರತಿಪಾದಿಸಿದ್ದಾ ಮಾನವರೆಲ್ಲರೂ ಒಂದೇ ತೆರನಾದ ಯಂತ್ರಗಳಲ್ಲ; ಅವರಲ್ಲಿ ಅನೇಕ ವೈಯಕ್ತಿ ಭೇದಗಳುಂಟು; ಎಲ್ಲ ಮಾನವರಿಗೆ ಮೇಧಾಶಕ್ತಿಯನ್ನೂ ಕ್ರಿಯಾಶಕ್ತಿಯನ್ನ ದೇವರು ದಯಪಾಲಿಸಿದ್ದರೂ ಈ ಶಕ್ತಿಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಒಂ ಸಮನಾಗಿರುವದಿಲ್ಲ. ಈ ವೈಯಕ್ತಿಕ ಭೇದಗಳ ಮೂಲಕ ಪ್ರತಿಯೊಬ್ಬನು ಒಂ ರೀತಿಯಲ್ಲಿ ವಿಕಾಸ ಹೊಂದಲಾರನು, ಇದನ್ನನುಲಕ್ಷಿಸಿ ಪ್ರತಿಯೊಬ್ಬ ಬಾಲಕನ ಅನುಕೂಲವಾದ ರೀತಿಯಲ್ಲಿ ತಾನು ಬೆಳೆಯಲು ಅವಕಾಶವನ್ನು ಕಲ್ಪಿಸಬೇಕ ಬಾಲಕನ ಬೆಳವಣಿಗೆಗೆ ಅವಶ್ಯವಿದ್ದ ಸನ್ನಿವೇಶ–ಸಂದರ್ಭಗಳನ್ನು ಒದಗಿಸುವ ಶಿಕ್ಷಣದ ಕಾರ್ಯ; ಶಿಕ್ಷಣದ ಗುರಿ. ಆದರೆ, ವ್ಯಕ್ತಿಯ ಪರಿಪೂರ್ಣ ವಿಕಾಸ ಸಮಾಜದ ಸಂಪರ್ಕವು ಅತ್ಯವಶ್ಯಕ. ಆದುದರಿಂದ ಈ ಗುರಿಯಲ್ಲಿ ಸಾಮಾ (ನಾಗರಿಕತೆ) ಗುರಿಯೂ ಅಡಕವಾಗಿದೆ ಎಂದು ಹೇಳಬಹುದು, ಯಾಕೆಂ ಒಮ್ಮೊಮ್ಮೆ ಸಮಾಜದ ಇಲ್ಲವೆ ದೇಶದ ಸೇವೆಗಾಗಿ ವೈಯಕ್ತಿಕ ವಿಚಾರಗಳನ ಬದಿಗೊತ್ತುವ ಪ್ರಸಂಗಗಳು ಉದ್ಭವಿಸುತ್ತವೆ. ಆದುದರಿಂದ ವೈಯಕ್ತಿ ವಿಕಾಸವೊಂದೇ ಶಿಕ್ಷಣದ ಗುರಿಯೆನ್ನುವದು ಅಷ್ಟು ಸಮಂಜಸವೆನಿಸಲಾರದ ಮತ್ತು " ಸಮಾಜ ಸೇವೆಯಲ್ಲಿಯೇ ಆತ್ಮವಿಕಾಸ "ಇದೆ ಶಿಕ್ಷಣದ ಗುರಿಯೆಂ ಕೆಲವರ ಮತ.

ಸಮಾರೋಪಣ:—

ಶಿಕ್ಷಣದ ಗುರಿಯು ಬಹಳ ಚರ್ಚೆಗೂ ಭಿನ್ನಾಭಿಪ್ರಾಯಗಳಿಗೂ ಅವಕಾಶ ಕೊಟ್ಟಿದೆಯೆಂಬುದು ಇಲ್ಲಿಯ ವರೆಗೆ ವಿವರಿಸಿದ ಸಂಗತಿಗಳ ಮೇಲಿಂದ ಗೊತ್ತಾಗುವುದೆ. ಶಿಕ್ಷಣದ ಗುರಿಗಳನ್ನು ನಿರೂಪಿಸಿದವರೆಲ್ಲರೂ ತಮ್ಮೊಂದುರಿಟ್ಟುಕೊಂಡ ಜೀವನದ ಧ್ಯೇಯಗಗಳಿನುಸರಿಸಿ ಬೇರೆ ಬೇರೆ ಗುರಿಗಳನ್ನು ಪ್ರತಿಪಾದಿಸಿದ್ದಾರೆ. ಆದರೆ ಶಿಕ್ಷಣದ ನಿಜವಾದ ಗುರಿಯು ಜೀವನದ ಯಾವ್ರದೊಂದು ಭಾಗಕ್ಕೆ ಸಂಬಂಧಿಸದೆ ಅದರ ಎಲ್ಲ ಭಾಗಗಳಿಗೂ ಹೊಂದಿಕೆಯಾಗುವಷ್ಟು ವ್ಯಾಪಕವಾದ ಇರಬೇಕು ; ಅರ್ಥಾತ್, ಶಿಕ್ಷಣದ ಗುರಿಯು ಮಾನವನ ಒಟ್ಟು ಇರುವಿಕೆಯನ್ನು ನಿರ್ಣಯಿಸುವಷ್ಟು ವಿಶಾಲವಾಗಿರಬೇಕು. ಆದುದರಿಂದ ಮೇಲೆ ಸೂಚಿಸಿದ ಯಾವ್ರದಾದರೊಂದು ಗುರಿಯು ಶಿಕ್ಷಣದ ಸಂಪೂರ್ಣ ಸ್ವರೂಪವನ್ನು ವ್ಯಕ್ತಗೊಳಿಸಲಾರದು. ಮಾನವನು ಸ್ವಾವಲಂಬಿಯಾಗಬೇಕಾದರೆ ಅವನು ತನ್ನ ಜೀವನದ ನಿರ್ವಾಹದ ಮಾರ್ಗವನ್ನು ಕಂಡುಕೊಳ್ಳಬೇಕು. ಸರಿಯಾದ ಬುದ್ಧಿ ಸಂಸ್ಕಾರವಿರದಿದ್ದರೆ ತನ್ನನ್ನು ಬಳಸಿದ ಸನ್ನಿವೇಶವನ್ನು ತನಗನುಕೂಲವಾಗುವಂತೆ ಮಾರ್ಪಡಿಸಲಾರನು. ಅವನು ಎಷ್ಟೇ ಬುದ್ಧಿ ಸಂಸ್ಕಾರವನ್ನು ಪಡೆದರೂ ಅವನಲ್ಲಿ ಒಳ್ಳೆಯ ಶೀಲ ಸ್ವಭಾವವಿರದಿದ್ದರೆ ಹಾವಿನ ಹೆಡೆಯಲ್ಲಿ ರತ್ನವಿದ್ದಂತೆಯೇ ಸರಿ. ಮಾನವನು ಸಮಾಜದ ಅಂಗವಾದದ್ದರಿಂದ ಅವನಿಗೂ ಅವಸರವುವ ಸಮಾಜಕ್ಕೂ ಸಂಪೂರ್ಣ ಹೊಂದಿಕೆಯಾಗಬೇಕು ; ಮತ್ತು ಅವನ ವ್ಯೆಯಕ್ತಿಕತೆಯು ವಿಕಸಿತವಾಗದ ಹೊರತು ಅವನಿಗೂ ಮಾನವ ಪ್ರಪಂಚಕ್ಕೂ ಕಲ್ಯಾಣವಾಗಲಾರದು. ಒಟ್ಟಾರೆ, ಶಿಕ್ಷಣ ಪಡೆದ ಮಕ್ಕಳು ದೃಢಕಾಯರೂ, ಬುದ್ಧಿವಂತರೂ, ಸುಶೀಲರೂ, ಸುಸಂಸ್ಕೃತರೂ ತಮ್ಮ ಮತ್ತು ಸಮಾಜದ ಹಿತಚಿಂತಕರೂ ಉಜ್ವಲವಾದ ವ್ಯಕ್ತಿತ್ವ ಉಳ್ಳವರೂ ಆಗಬೇಕು. ಇವೆಲ್ಲ ಧ್ಯೇಯಗಳನ್ನು ಈಡೇರುವಂತೆ ಮಾಡುವದೇ ಶಿಕ್ಷಣದ ಆದರ್ಶದ ಗುರಿ.

ಪಾಠದ ಸಂಕ್ಷಿಪ್ತ ಟಿಪ್ಪಣಿ

೪ ನೆಯ ಇಯತ್ತೆ

ಕಲಿಸಿದವ: **ಕೃ. ರಾ. ಜೀವಣ್ಣವರ,** ೨ನೆಯ ವರ್ಷ ಟ್ರೆ. ಕಾ. ಧಾರವಾ

ಏಕಮಾನ ಪದ್ಧತಿಯಿಂದ ಪಂಚರಾಶಿಕ

ಮೆಟ್ಟಿಲುಗಳು	ವಿಷಯ	ಕಲಿಸುವ ಕ್ರಮ
ಪ್ರಸ್ತಾವನೆ ೧	೪ ಪುಸ್ತಕಗಳ ಬೆಲೆಯು ೧೨ ರೂ ಗಳಾದರೆ ೫ ಪುಸ್ತಕಗಳ ಬೆಲೆ ಎಷ್ಟು ? ೧ ಈ ಲೆಕ್ಕದಲ್ಲಿ ೩ ರಾಶಿಗಳು ಅವೆ. ೨ ಇಂಥ ಲೆಕ್ಕಗಳಿಗೆ ತ್ರೈರಾಶಿಕ ಲೆಕ್ಕ ಗಳೆನ್ನುತ್ತೇವೆ. ೩ ಇದನ್ನು ಏಕಮಾನ ಪದ್ಧತಿಯಿಂದ ಬಿಡಿಸಿದೆವು.	ಈ ಲೆಕ್ಕವನ್ನು ಮಾಡಿಸುವದು. ೧ ಈ ಲೆಕ್ಕದಲ್ಲಿ ಎಷ್ಟು ರಾಶಿಗಳು ಅ ೨ ಇಂಥ ಲೆಕ್ಕಗಳಿಗೆ ನೀವು ಎಂಥ ಗಳೆನ್ನುವಿರಿ ? ೩ ಇದನ್ನು ಯಾವ ಪದ್ಧತಿಯಿಂದ ಸಿದಿರಿ?
	೪ ಜನರು ೧೦ ದಿವಸಗಳಲ್ಲಿ ೪೦ ರೂ. ಗಳಿಸುತ್ತಾರೆ. ಆದರೆ ೧೨ ಜನರು ೬ ದಿವಸಗಳಲ್ಲಿ ಎಷ್ಟು ರೂ. ಗಳಿಸುವರು. ೪ ಈ ಲೆಕ್ಕದಲ್ಲಿ ೫ ರಾಶಿಗಳು ಅವೆ. ೫ ತೆಗೆಯಬೇಕಾದ ರಾಶಿ ೬ನೆಯದು.	ಈ ಲೆಕ್ಕವನ್ನು ಓದಿಸುವದು. ೪ ಈ ಲೆಕ್ಕದಲ್ಲಿ ಎಷ್ಟು ರಾಶಿಗಳು ಅ ೫ ತೆಗೆಯಬೇಕಾದ ರಾಶಿಯು ಎಂ ಯದು ?
	ಇಂಥ ಲೆಕ್ಕಗಳಿಗೆ ಪಂಚರಾಶಿಕದ ಲೆಕ್ಕಗಳೆನ್ನಬೇಕು.	ಇಂಥ ಲೆಕ್ಕಗಳಿಗೆ ಎಂಥ ಲೆಕ್ಕಗ ಬೇಕು ?
	ಉದ್ದೇಶ ಕಥನ: — ಇಂಥ ಪಂಚರಾಶಿಕದ ಲೆಕ್ಕಗಳನ್ನು ಏಕಮಾನ ಪದ್ಧತಿಯಿಂದ ಬಿಡಿಸಲು ಕಲಿಯೋಣ.	
ಶಿಕ್ಷಕನ ಮಾದರಿಯ ಕೃತಿ ೨	ಮೇಲಿನ ಉದಾಹರಣೆ. ೧ ಪಾಲು ಮಾಡಬೇಕು. ೨ ೧ ಇಪ್ಪು ಅರ ೧/೨ ನೆಯಪಾಲು ಆಗುವದು. ೩ ಮೊದಲು ೧ ದಿವಸಕ್ಕೆ ತೆಗೆಯಬೇಕು. ೪ ನಮಗೆ ೧೨ ಜನರ ಗಳಿಕೆಯನ್ನು ತೆಗೆಯಬೇಕಾಗಿದೆ.	ಈ ಲೆಕ್ಕದಲ್ಲಿ ಕೊಟ್ಟ ಮಾತ ಯಾರು ಬರೆಯುವಿರಿ ? ಒಬ್ಬ ಮನುಷ್ಯನು ೧೦ ದಿನಗ ಎಷ್ಟು ರೂ ಗಳಿಸುವನು? ೧ ಇದನ್ನು ಹೇಗೆ ಮಾಡಬೇಕು ? ೨ ೧ ಇಪ್ಪು ಅರ ಎಷ್ಟನೆಯ ಪಾಲು ಆಗುವದು ? ಪಾಲುಮಾಡಿ ಬರೆಯಿ ೩ ಆರು ದಿವಸಕ್ಕೆ ತೆಗೆಯಬೇಕಾ ಏನು ಮಾಡಬೇಕು ? ೪ ನಮಗೆ ಎಷ್ಟು ಜನರ ಗಳಿಕೆಯನ್ನ ತೆಗೆಯಬೇಕಾಗಿದೆ ?

ಮೆಟ್ಟಿಲುಗಳು	ವಿಷಯ	ಕಲಿಸುವ ಕ್ರಮ
	೫ ೧೨ ಇದು ೧೮ ಹನ್ನೆರಡು ಪಟ್ಟು ಅದೆ. ೬ ½ ರೂ. ಯು ೧೨ ಪಟ್ಟು ಮಾಡಿಕೊಳ್ಳಬೇಕು. ೭ ೧೨ ಜನರು ೧ ದಿವಸಕ್ಕೆ ೬ ರೂ ಗಳಿಸಿದಂತಾಯಿತು. ೮ ನಮಗೆ ೧೨ ಜನರ ೬ ದಿನಗಳ ಗಳಿಕೆಯನ್ನು ತೆಗೆಯಬೇಕಾಗಿದೆ. ೯ ಪಟ್ಟುಮಾಡಿಕೊಳ್ಳಬೇಕು. ೧೦ ೬ ರೂ. ಗಳ ೬ ಪಟ್ಟು ಮಾಡಿಕೊಳ್ಳಬೇಕಾಯಿತು. ೧೧ ೩೬ ರೂ. ೧೨ ಜನರ ೬ ದಿವಸಗಳ ಗಳಿಕೆಯಾದಂತಾಯಿತು.	೫ ೧೨ ಇದು ೧೮ ಎಷ್ಟು ಪಟ್ಟು ಅದೆ? ½ ರೂ. ಯು ಎಷ್ಟು ಪಟ್ಟು ಮಾಡಿಕೊಳ್ಳಬೇಕು? ೭ ೧೨ ಜನರು ೧ ದಿವಸಕ್ಕೆ ಎಷ್ಟು ರೂ. ಗಳಿಸಿದಂತಾಯಿತು? ನಮಗೆ ೧೨ ಜನರ ಎಷ್ಟು ದಿನಗಳ ಗಳಿಕೆಯನ್ನು ತೆಗೆಯಬೇಕಾಗಿದೆ? ೯ ಇದನ್ನು ಹೇಗೆ ಮಾಡಬೇಕು? ೧೦ ಹಾಗಾದರೆ ನಾವು ೬ ರೂ. ಗಳ ಎಷ್ಟು ಪಟ್ಟು ಮಾಡಿಕೊಳ್ಳಬೇಕು? ೧೧ ೩೬ ರೂ. ಎಷ್ಟು ಜನರ ಎಷ್ಟು ದಿನಗಳ ಗಳಿಕೆಯಾದಂತಾಯಿತು.
ರೂಢಿಯ ಲೆಕ್ಕ ೫	೨೪ ಜನರು ೮ ದಿನಗಳಲ್ಲಿ ೬೦ ರೂ. ಗಳಿಸುವರು. ಆದರೆ ೩೨ ಜನರು ೧೨ ದಿನಗಳಲ್ಲಿ ಎಷ್ಟು ರೂ ಗಳಿಸುವರು?	ವಿಷಯದಲ್ಲಿ ಬರೆದ ಲೆಕ್ಕವನ್ನು ಒಬ್ಬ ಬಾಲಕನಿಂದ ಓದಿಸಿ ಎಲ್ಲರಿಗೂ ಪದ್ಧತಿಗನುಸರಿಸಿ ಈಗ ಕಲಿತಂತೆ ಬಿಡಿಸಿರೆಂದು ಹೇಳುವದು. ಸಂಶಯ ಬಂದ ಹುಡುಗರಿಗೆ ಸಹಾಯ ಮಾಡುವದು.
ತಪ್ಪು ತಿದ್ದುವದು ೪	ಮೇಲೆ ಬರೆದ ಲೆಕ್ಕವನ್ನು ತಪ್ಪಿದವರಿಂದ ಮಾಡಿಸುವದು.	ತಪ್ಪಿದ ಲೆಕ್ಕವನ್ನು ಅವರಿಂದಲೇ ಕ. ಹ. ಮೇಲೆ ಮಾಡಿಸುವದು.
ಗೃಹಪಾಠ ೫	೧೬ ಕುದುರೆಗಳಿಗೆ ೫ ದಿನಸಗಳಿಗೆ ೯೦ ಸೇರು ಕಡಲೆ ಬೇಕಾಗುತ್ತದೆ. ೮ ಕುದುರೆಗಳಿಗೆ ೧೨ ದಿವಸಗಳಿಗೆ ಎಷ್ಟು ಸೇರು ಕಡಲೆ ಬೇಕಾಗುವವು?	ಈ ಲೆಕ್ಕವನ್ನು ಮನೆಯಲ್ಲಿ ಮಾಡಿಕೊಂಡು ಬರಲಿಕ್ಕೆ ಹೇಳುವದು.

★ ಕಪ್ಪು ಹಲಗೆಯು ★

೪ ಜನರು ೧೦ ದಿವಸಕ್ಕೆ ೪೦ ರೂ.

∴ ೧ ಮನುಷ್ಯ ೧೦ ,, ೫ ,,

∴ ೧ ,, ೧ ,, ½ ,,

∴ ೧೨ ಜನರು ೧ ,, ೬ ,,

∴ ೧೨ ,, ೬ ,, ೩೬ ,,

ಉತ್ತರವು ೩೬ ರೂ.

ರೂ. ೪೦ ÷ ೪ = ೫ ರೂ.

೫ ÷ ೧೦ = ½ ,,

½ × ೧೨ = ೬ ,,

೬ × ೬ = ೩೬ ,,

ಪತ್ರಗಳ ಮುಖ್ಯಾಂಶಗಳು

ನರೇಗಲ್ಲು— (ಹಾನಗಲ್ಲು ತಾಲೂಕು) " ಇಲ್ಲಿಯ ಪಂಚರಲ್ಲಿ ಹಿರಿಯರಾದ ಮೆ. ಇಮಾಮುಸಾಹೇಬರು ತಾ. ೯–೭–೧೯೪೧ ನೆಯ ದಿವಸ ಉರ್ದು ಶಾಲೆಗೆ ಭೆಟ್ಟಿಯನ್ನು ಕೊಟ್ಟರು. ಶಾಲೆಯಲ್ಲಿಯ ಶಿಕ್ಷಣದ ಪ್ರಗತಿಯನ್ನು ಕಂಡು ಆನಂದಭರಿತರಾಗಿ ಮೂರು ರೂಪಾಯಿ ಬೆಲೆ ಬಾಳುವ ಪಾಟಿಪುಸ್ತಕಗಳನ್ನು ಧರ್ಮಾರ್ಥವಾಗಿ ವಿದ್ಯಾರ್ಥಿಗಳಿಗೆ ಕೊಟ್ಟರು " ಹೀಗೆ ಆ ಶಾಲೆಯ ಹೆಡ್‌ಮಾಸ್ತರರಾದ ಅ. ಅ. ಖಾಜಿ ಅವರು ತಿಳಿಸುತ್ತಾರೆ.

ಹೆಗಡೆ— (ಕುಮಟಾ ತಾಲೂಕು) " ಇಲ್ಲಿಯ ಶಾಲೆಯ ಕೆಲಸವು ಚೆನ್ನಾಗಿ ಸಾಗಿದೆ. ಎಲ್ಲ ವರ್ಗಗಳ ಅಭ್ಯಾಸವು ಸಮಯಾನುಸಾರವಾಗಿ ನಡೆದಿದೆ. ಇಲ್ಲಿಯ ಶಿಕ್ಷಕರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿ ಲೋಕಪ್ರಿಯರಾಗಿರುವರು " ಹೀಗೆ ಅಲ್ಲಿಯ ಸ್ಕೂಲ ಕಮೀಟಿಯ ಚೇರಮನ್ನರು ತಿಳಿಸುತ್ತಾರೆ.

ಅಗರಖೇಡ— (ವಿಜಾಪುರ ಜಿಲ್ಹೆ) " ತಾರೀಖು ೨೬–೭–೧೯೪೧ನೆಯ ದಿವಸ ಈ ಭಾಗದ ಶಿಕ್ಷಕಶಿಕ್ಷಕಿಯರ ಸಮ್ಮೇಲನವು ಮೊದಲನೆಯ ಆ. ಡಿ. ಎ. ಇ. ಅವರು ಆದ ಶ್ರೀಮಾನ್ ಅಲಬಾಳರಾಯರ ನೇತೃತ್ವದಲ್ಲಿ, ಇಲ್ಲಿಯ ಶ್ರೀಮಂತರಾದ ರಾ. ಶೇ. ಜಹಾಗೀರದಾರರ ಅಧ್ಯಕ್ಷತೆಯಲ್ಲಿ ಜರುಗಿತು. ಆದರಾತಿಥ್ಯ ಸ್ವಾಗತಪದ, ಮಾದರಿಯ ಪಾಠಗಳು, ಮಕ್ಕಳ ಆಟನೋಟಗಳು, ಭಾಷಣಗಳು, ಶಿಕ್ಷಣ ವಿಷಯದಲ್ಲಿ ಚರ್ಚೆ ಮೊದಲಾದವೆಲ್ಲವು ತುಂಬ ಪರಿಣಾಮಕರವಾದವು. ಅಧ್ಯಕ್ಷರು ತಮಗಾದ ಪುತ್ರೋತ್ಸವದ ನಿಮಿತ್ತ ಶಾಲೆಯ ಕಟ್ಟಡಕ್ಕಾಗಿ ೪೦೦ ರೂ. ಗಳ ಸಹಾಯವನ್ನು ಕೊಡಲೊಪ್ಪಿದ್ದಾರೆ. ಇದು ಅವರಿಗೆ ಭೂಷಣವು " ಹೀಗೆ ಅಲ್ಲಿಯ ಹೆಡ್ ಮಾಸ್ತರರು ತಿಳಿಸುತ್ತಾರೆ.

ಸೂಡಿ— " ಇಲ್ಲಿಯ ಹೆಣ್ಣುಮಕ್ಕಳ ಶಾಲೆಯ ಕುಮಾರಿ ಸಂಘದವರು ರೋಣ ತಾಲೂಕದೊಳಗಿನ ಶಾರೀರಿಕ ಸ್ಪರ್ಧೆಯಲ್ಲಿ ಬೆಳ್ಳಿಯ ಕಪ್ಪನ್ನೂ ಏಳು ಪದಕಗಳನ್ನೂ ಬಹುಮಾನವೆಂದು ದೊರಕಿಸಿದರು. ಈ ರೀತಿಯಲ್ಲಿ ತಮ್ಮ ಗ್ರಾಮಕ್ಕೆ ಗೌರವವನ್ನು ತಂದ ಕುಮಾರಿಸಂಘದವರಿಗೆ ಇಲ್ಲಿಯ ಶ್ರೀಮಾನ್ ಪಟ್ಟಣಶೆಟ್ಟಿ ಸಂಗಪ್ಪನವರು ೫ ರೂಪಾಯಿಗಳ ಕಾಣಿಕೆಯನು ಕೊಟ್ಟಿರುವರು.

ಈ ಶ್ರೇಯಸ್ಸಿಗೆ ಇಲ್ಲಿಯ ಹೆ. ಮಾ. ರಾದ ಶ್ರೀ. ವಿಜಾಪುರ ಹಾಗೂ ಅವರ ಸಹಕಾರಿಗಳು ಕಾರಣರು" ಹೀಗೆ ಅಲ್ಲಿಯ ಗ್ರಾಮಪಂಚಾಯತಿಯ ಸೆಕ್ರೆಟರಿ ಯವರು ತಿಳಿಸುತ್ತಾರೆ.

ಯಕಸಂಬಿ— (ಬೆಳಗಾವಿ ಜಿಲ್ಲೆ) "ಇಲ್ಲಿಯ ಹತ್ತನೆಯ ನಂಬರಿನ ಶಾಲೆ ಯಲ್ಲಿ ತಾ. ೨೯—೨—೧೯೪೧ ನೆಯ ದಿವಸ ವಿದ್ಯಾರ್ಥಿಗಳ ಸಹಾಯಕ್ಕಾಗಿ ಊರೊಳಗಿನ ಪ್ರಮುಖರ ಸಭೆಯು ನೆರೆಯಿತು. ರಾವಸಾಹೇಬ ಶ್ರೀಮಂತ ಸಿ. ಎಮ್. ಕರಾಳೆ, ಶ್ರೀಮಾನ್ ಎಸ್. ಎಮ್. ಲಂಬೋ ಅಣ್ಣಾ, ಶ್ರೀಮಾನ್ ಎಮ್. ಎ. ಶಹಾ, ಡಾ. ಕುಲಕರ್ಣಿ ಮೊದಲಾದವರು ಕೂಡಿ ೧೪ ರೂ. ಹಾಗು ಪಾಟಿ-ಪುಸ್ತಕಗಳನ್ನು ಕೊಟ್ಟು ಪ್ರೋತ್ಸಾಹಿಸಿದರು" ಹೀಗೆ ಅಲ್ಲಿಯ ಹೆಡ್ ಮಾಸ್ತರರಾದ ಶ್ರೀ. ಬಿ. ಆರ್. ಗೋಠೆಯವರು ತಿಳಿಸುತ್ತಾರೆ.

ಬಂಕಾಪುರ— (ಧಾರವಾಡ ಜಿಲ್ಲೆ) "ತಾ. ೩—೮—೧೯೪೧ ನೆಯ ದಿವಸ ಇಲ್ಲಿಯ ಶಾಲೆಯಲ್ಲಿ ಈ ಭಾಗದ ಅ. ಡೆ. ಎ. ಇ. ಅವರಾದ ಶ್ರೀಮಾನ್ ಕಾಳೆ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಜರುಗಿತು. ಆಟ-ನೋಟ ವಿನೋದಗಳಾದ ನಂತರ ಪಾಸಾದ ವಿದ್ಯಾರ್ಥಿಗಳಿಗೆ ಪೆಜ್ಜುಗೆಯನ್ನು ಕೊಡಲಾಯಿತು. ಸಾಹೇಬರು ಮಾಯಾದೀಪದ ಸಹಾಯದಿಂದ ಉಪಯುಕ್ತ ವಿಷಯಗಳನ್ನು ತಿಳಿಸಿದರು. ಬಾಲಕರಿಂದ ಕೆಲವು ಆಟಗಳನ್ನು ಆಡಿಸಿದರು." ಹೀಗೆ ಶ್ರೀ. ಗು. ಶಂ. ಐರಣಿ ಇವರು ತಿಳಿಸುತ್ತಾರೆ.

ಕೊಡಗಾನೂರು— (ತಾಲೂಕ ಮುದ್ದೇಬಿಹಾಳ) "ಇಲ್ಲಿ ಶಾಲೆಯ ಕೆಲಸವು ಚೆನ್ನಾಗಿ ನಡೆದಿದೆ. ಹೆಡ್‌ಮಾಸ್ತರರು ವ್ಯಾಯಾಮ ಚಿಕ್ಕ ವಾಚನಾ ಲಯ, ಶಿಕ್ಷಣ-ಪ್ರಸಾರ ಮೊದಲಾದ ವಿಷಯಗಳ ಕಡೆಗೆ ಸಾಕಷ್ಟು ಗಮನಿಸಿದ್ದಾ ರೆಂದು ಶ್ರೀಮಾನ್ ಎಸ್. ಎಂ. ನಿರಕ್ತಮಠ ಚೇಅರಮನ್ ಡಿ. ಎಸ್. ಬಿ. ವಿಜಾಪುರ ಇವರ ಅಭಿಪ್ರಾಯವಿದೆ" ಹೀಗೆ ಶ್ರೀ. ಸಿ. ಟಿ. ವಾಳವೇಕರರು ತಿಳಿಸುತ್ತಾರೆ.

ಪ್ರಕಟನೆ

ಪ್ರಾಥಮಿಕ ಶಾಲಾ ಪ್ರಮಾಣಪತ್ರದ ಪರೀಕ್ಷೆ

ಪ್ರಕೃತಕ್ಕೆ ಪ್ರಚಾರದಲ್ಲಿರುವ "ಪ್ರಾಯ್ಮರಿಸ್ಕೂಲ್ ಲಿವ್ವಿಂಗ್ ಸರ್ಟಿ-ಫಿಕೇಟ ಪರೀಕ್ಷೆ" ಮತ್ತು ಪ್ರಾಯ್ಮರಿಸ್ಕೂಲ್ ಲಿವ್ವಿಂಗ್ ಪರೀಕ್ಷೆಯ ಸರ್ಟಿ-ಫಿಕೇಟು" ಈ ಹೆಸರುಗಳು ಉದ್ದವಾಗಿದ್ದು ತೊಂದರೆಗೆ ಕಾರಣವೆನಿಸುವದೆಂದೂ

ಇವುಗಳ ಬದಲು ಕ್ರಮವಾಗಿ "ಪ್ರಾಥಮಿಕ ಶಾಲಾ ಪ್ರಮಾಣ ಪತ್ರದ ಪರೀಕ್ಷೆ ಮತ್ತು "ಪ್ರಾಥಮಿಕ ಶಾಲಾ ಪ್ರಮಾಣ ಪತ್ರವು" ಎಂಬ ಹೆಸರುಗಳನ್ನು ಉಯೋಗಿಸಬೇಕೆಂದೂ ಸರಕಾರದವರು ನಿರ್ಣಯಿಸಿದ್ದಾರೆ. ಆದ್ದರಿಂದ ಇನ ಮುಂದೆ ಈ ವಿಷಯಗಳಿಗೆ ಸಂಬಂಧಿಸಿದ ಎಲ್ಲ ಸರಕಾರೀ ಕಾಗದ ಪತ್ರಗಳ ಇವೇ ಹೆಸರುಗಳನ್ನೇ ಉಪಯೋಗಿಸುವರು. ಶಿಕ್ಷಕರೂ ಶಾಲಾಧಿಕಾರಿಗಳ ಇದನ್ನು ತಿಳಿದುಕೊಂಡು ತಾವಾದರೂ ಇಂಥ ಎಲ್ಲ ಸಂದರ್ಭಗಳಲ್ಲಿ ಈ ಹೆಸರಗಳನ್ನೇ ಉಪಯೋಗಿಸತಕ್ಕದ್ದು.

ತಾ. ೪-೮-೧೯೪೧. *Sd/-* S. R. Tawde,
Educational Inspector S. D.

ಪ್ರಕಟನೆ

ಪ್ರಾಯ್ಮರಿ ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟಿ ಪರೀಕ್ಷೆ ೧೯೪೦

ಸನ್ ೧೯೪೦ ನೆಯ ಇಸ್ವಿಯ ಎಪ್ರಿಲ್ ತಿಂಗಳಲ್ಲಾದ ಪ್ರಾ. ಸ್ಕೂ. ಲಿ. ಪರೀಕ್ಷೆಯಲ್ಲಿ ಪಾಸಾದ ಹಲವರು ಉಮೇದುವಾರರು ತಮ್ಮ ಸರ್ಟಿಫಿಕೇಟಗಳನ್ನು ಕಳುಹಿಸಿಕೊಡಬೇಕೆಂದು ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೆ ಅರ್ಜಿ ಮಾಡುತ್ತಿದ್ದಾರೆ. ಆದರೆ ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರ ಆ ಸರ್ಟಿಫಿಕೇಟುಗಳಿಗೆ ತಮ್ಮ ಸಹಿಮಾಡಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿ ತಿರುಗಿ ಕಳುಹಿಸಿಕೊಟ್ಟು ಎಷ್ಟೋ ದಿವಸಗಳಾಗಿ ಹೋಗಿವೆ. ಮತ್ತು ಆಯಾ ಕೇಂದ್ರಗಳ ಪ್ರೆಸಿಡೆಂಟರು ಅವನ್ನು ಎಲ್ಲ ಉಮೇದುವಾರರಿಗೆ ಮುಟ್ಟಿಸುವದಕ್ಕೋಸ್ಕರ ಆಯಾ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ ಆಫೀಸರ ಮುಖಾಂತರ ಬೇರೆ ಬೇರೆ ತಾಲೂಕಗಳಲ್ಲಿರುವ ತಾಲೂಕ ಮಾಸ್ತರರಿಗೆ ಕಳುಹಿಸಿರುತ್ತಾರೆಂದೂ ಗೊತ್ತಾಗಿದೆ. ಆದ್ದರಿಂದ ಸದರಿ ಪರೀಕ್ಷೆಯಲ್ಲಿ ಪಾಸಾಗಿ ಇದುವರೆಗೂ ಸರ್ಟಿಫಿಕೇಟು ದೊರೆಯದೆ ಇದ್ದ ಉಮೇದುವಾರರು ಅದನ್ನು ತಮ್ಮ ಶಾಲೆಯ ಹೆಡ್‌ಮಾಸ್ತರರ ಅಥವಾ ತಾಲೂಕ ಮಾಸ್ತರರ ಮುಖಾಂತರ ಅವನ್ನು ದೊರಕಿಸಿಕೊಳ್ಳಬೇಕಲ್ಲದೆ ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಿಗೆ ಅರ್ಜಿ ಮಾಡಬಾರದು.

ತಾ. ೨೨-೭-೧೯೪೧. *Sd/-* H. S. Torgal
ಪ್ರಿನ್ಸಿಪಾಲ,
ಟ್ರೇನಿಂಗ ಕಾಲೇಜ, ಫಾರ್‌ಮೆನ್ ದಾರವಾಡ

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ಸಂಪುಟ ೮೦	ಸಪ್ಟಂಬರ ೧೯೪೧	ವರ್ಷ ೩. ಸಂ. ೬

ಮರಣ ಸಮಸ್ಯೆ

ತರಳರು ಕತ್ತಲೆಗಂಜುವರಂತೆಯೆ |
ಮರಣಕೆ ಮಾನವರಂಜುವರು ||

ಭೂತದ ಭೀತಿಯ ಕಥೆಗಳ ಕೇಳ್ದೊಡೆ |
ಆ ತರಳರ ಭಯ ಹೆಚ್ಚುವುದು ||

ನರಕದ ನಾಕದ ಕಥೆಗಳ ಕೇಳ್ದೊಡೆ |
ಮರಣದ ಭೀತಿಯು ಹೆಚ್ಚುವುದು ||

—ಬೇಕನ್.

ಮೃತ್ಯುದೇವತೆ ತನ್ನ ಮುದ್ರೆಯ- |
ನೊತ್ತಿ ನಾಣ್ಯವಗೈದು ಜೀವನ- |
ಕಿತ್ತುದದರಿಂ ನಿತ್ಯವಸ್ತುವ ಕೊಂಬ ಶಕ್ತಿಯನು ||

*　　*　　*　　*

ಮೃತ್ಯುವೆಂಬುದು ಜನ್ಮದಂತೆಯೆ |
ಹತ್ತಿಕೊಂಡಿದೆ ನರ ಶರೀರಕೆ- |
ಎತ್ತಿದಡಿಯನು ಭೂಮಿಗಿಡದಲೆ ನಡೆಯಲಾಗುವುದೇ ?

—ಕವೀಂದ್ರ ರವೀಂದ್ರರು.

ಇತಿಹಾಸಶಿಕ್ಷಣ

ಶ್ರೀಮಾನ್ ಎಸ್. ಆರ್. ತಾವಡೆ, ಎಮ್. ಎ.; ಎ. ಇನ್‌ಸ್ಪೆಕ್ಟರ ದ. ಭಾ. ಅವರು

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಇತಿಹಾಸಶಿಕ್ಷಣದ ಅವಾಂತರ ಉದ್ದೇಶಗಳು :— ಮೇಲೆ ವಿವರಿ
ಸಂಗತಿಗಳಿಂದ ಇತಿಹಾಸ ಶಿಕ್ಷಣದ ಮೂಲ ಉದ್ದೇಶವೇನೆಂಬದು ವಿದಿತವಾ
ವದು. ಇದಲ್ಲದೆ ಇತಿಹಾಸ ಶಿಕ್ಷಣದ ಅವಾಂತರ ಉದ್ದೇಶಗಳೂ ಹಲವು ಇ
ಇತಿಹಾಸಶಿಕ್ಷಣದಿಂದ ವಾಚನಾಭಿರುಚಿಯು ಹೆಚ್ಚುವದು. ಇತಿಹಾಸದೊಳ
ಪರಾಕ್ರಮದ ಮತ್ತು ಸಾಹಸದ ಕಾರ್ಯಗಳ ವಿವರಣೆಯುಳ್ಳ ಕಥೆಗಳ
ಓದಲು ಬಾಲಕರು ಆತುರಗೊಳ್ಳುವರು. ಕೇವಲ ಇತಿಹಾಸ ವಿಷಯದ ಪ
ಪುಸ್ತಕಗಳು ಈ ದೃಷ್ಟಿಯಿಂದ ಅಷ್ಟು ಪ್ರಯೋಜನಕಾರಿಯಾಗಲಾರವು. ಬ
ಬಾಲಕರಿಗಾಗಿಯೇ ಬರೆದ ಇಂಥ ಪುಸ್ತಕಗಳನ್ನು ಅವರಿಗೆ ಒದಗಿಸಿಕೊಡಬೇ
ಪ್ರಬುದ್ಧರಿಗಾಗಿ ಬರೆದ ಇತಿಹಾಸವು ಚಿಕ್ಕಮಕ್ಕಳಿಗೆ ರುಚಿಸಲಾರದು. ಚ
ಮಕ್ಕಳ ವಾಚನಕ್ಕಾಗಿ ಇತಿಹಾಸದ ಪುಸ್ತಕಗಳನ್ನು ಆರಿಸುವಾಗ ಈ ಸಂ
ಯನ್ನು ಮರೆಯಕೂಡದು. ಇತಿಹಾಸಶಿಕ್ಷಣದಲ್ಲಿ ಸುವ್ಯವಸ್ಥೆಯ ಕಲ್ಪನೆಯ
ಸಮಾವೇಶವಾಗುವದು. ಪೂರ್ವಾಪರ ವಿಚಾರವಿಲ್ಲದೆ ಯಾವ ಕಾರ್ಯವನ
ಮಾಡಕೂಡದು; ಸಮಾಜಕ್ಕೆ ಅಥವಾ ಜನಾಂಗಕ್ಕೆ ಒಬ್ಬ ಕಾರ್ಯವಾಹಕನ
ಚಾಲಕನು ಬೇಕು; ಮುಂದಿನ ಇಂಥ ಕಾರ್ಯವಾಹಕನಿಗೆ ಹಿಂದಿನವರ ಅನುಭವ
ಸಹಾಯಕಾರಿಯಾಗುವದು; ಮುಂದಿನವರು ಹಿಂದಿನವರ ಕಾರ್ಯಕಲಾಪಗಳ
ಟೀಕಿಸಿ ಅವರ ದೋಷಗಳನ್ನು ಮಾತ್ರ ಎತ್ತಿ ಆಡುವದಕ್ಕಿಂತಲೂ ಅದರಿಂದ ತ
ಹೊಂದಬಹುದಾದ ಅನುಭವ ಪ್ರಯೋಜನಗಳೇನೆಂಬದನ್ನು ತಿಳಿದಿರಬೇಕು; ಇ
ಮುಂತಾದ ಸಂಗತಿಗಳನ್ನು ಇತಿಹಾಸಶಿಕ್ಷಣದಿಂದ ವಿದ್ಯಾರ್ಥಿಗಳು ಕಲಿ
ಬಹುದು.

**ಜ್ಞಾನದ ಬೆಳವಣಿಗೆ ಮತ್ತು ಇತಿಹಾಸಶಿಕ್ಷಣದ ಮೂರು ಮೆ
ಗಳು :—** ಯಾವದೇ ಒಂದು ವಿಷಯದ ಜ್ಞಾನದ ಬೆಳೆವಣಿಗೆಯಲ್ಲಿ ಕೆಳಗೆ ಹೇ
ಮೂರು ಮೆಟ್ಟುಗಳಿರುವವು.

೧. ಆಶ್ಚರ್ಯ ಭಾವನೆ.
೨. ಪ್ರಯೋಜನ—ಮತ್ತು
೩. ಜ್ಞಾನದ ಸುವ್ಯವಸ್ಥೆ.

ಈ ಮೂರು ಮೆಟ್ಟಿಲುಗಳನ್ನು ಮಾನವಪ್ರಾಣಿಯು ಮನೋವೃತ್ತಿಯು ಬೆಳೆ
ಸುವಿಕೆಯಲ್ಲಿಯೂ ನಾವು ನೋಡಬಹುದು ಸಾಮಾನ್ಯವಾಗಿ ಚಿಕ್ಕಮಕ್ಕಳು
೧೧ ವರುಷದವರಾಗುವ ವರೆಗೂ ಆಶ್ಚರ್ಯಭಾವನೆಯಲ್ಲಿಯೇ ಹೆಚ್ಚಾಗಿ ಅಭಿರುಚಿ
ಯನ್ನು ಹೊಂದುವರು. ಅಲ್ಲಿಂದ ಮುಂದೆ ೧೪ ವರುಷದವರಾಗುವ ವರೆಗೆ ಅವರು
ಜ್ಞಾನದ ಉಪಯುಕ್ತತೆಯನ್ನು ಪರಿಶೀಲಿಸಿ ನೋಡಲು ಸಮರ್ಥರಾಗುವರು.
ಇನ್ನೆಯು ವರ್ಷದಿಂದ ಮುಂದಿನ ಅವಧಿಯಲ್ಲಿ ಮಾನವಪ್ರಾಣಿಯು ತಾನು ದೊರ
ಸಿದ ಜ್ಞಾನವನ್ನು ಸುವ್ಯವಸ್ಥಿತಗೊಳಿಸುವುದಕ್ಕೂ ಅದರ ತಾತ್ವಿಕ ವಿವೇಚನೆಯೇ
ಸಂಬಂಧವನ್ನು ಗ್ರಹಿಸುವುದಕ್ಕೂ ಅಭಿರುಚಿಯನ್ನು ತೋರಿಸುವನು. ಚಿಕ್ಕಮಕ್ಕಳು
ಪ್ರಬುದ್ಧರಿಗಿಂತಲೂ ಹೆಚ್ಚಾಗಿ ಕಾಲ್ಪನಿಕ ವಾತಾವರಣದಲ್ಲಿ ಸಂಚರಿಸುತ್ತಿರುವರು.
ಆದ್ದರಿಂದ ಅವರಿಗೆ ಕಾಲ್ಪನಿಕ ಮನೋವೃತ್ತಿಗೆ ಮೆಚ್ಚುಗೆಯಾಗುವಂಥ ಐತಿಹಾಸಿಕ
ವಿಂತಕಥೆಗಳನ್ನು ಹೇಳುವದು ಒಳಿತು. ಇಂಥ ಕಥೆಗಳ ಭಾಷೆಯು ತೀರ ಸುಲಭ
ವಾಗಿರಬೇಕು. ಮತ್ತು ಆ ಕಥೆಗಳ ಭಾವವು ಕೂಡ ಸುಲಭವಾಗಿಯೇ ಇರಬೇಕು.
ಏಚ್ಚು ವಿವರಣೆಯಿರಕೂಡದು ; ಮತ್ತು ಅವುಗಳ ಅರ್ಥವಿವೇಚನೆಯು ತೊಡಕಿನ
ವಾಗಿರಕೂಡದು.

ಇತಿಹಾಸಶಿಕ್ಷಣದ ಮೊದಲನೆಯ ಮೆಟ್ಟಿಲು :— ನಮ್ಮ ದೇಶದೊಳಗಿನ
ಚಿಕ್ಕಮಕ್ಕಳು ಭಾರತ ರಾಮಾಯಣಗಳ ಕಥೆಗಳನ್ನು ಆನಂದದಿಂದ ಓದಿ ಕೇಳುವರು.
ಅವರಿಗೆ ತಮ್ಮ ಸಾಲೆಗೆ ಬಿಡುವಿರುವ ದಿನಗಳಲ್ಲಿ ತಮ್ಮ ಮನೆಗಳಲ್ಲಿ ನಡೆಯುವ ಹಬ್ಬ
ಹುಣ್ಣಿವೆಗಳ ಬಗ್ಗೆ ಸುಲಭವಾದ ಮಾತುಗಳಿಂದ ಹೇಳಬಹುದು. ಎಷ್ಟೋ ಸಾಲೆ
ಗಳಲ್ಲಿ ಸಾಲೆಯು ಪ್ರಾರಂಭವಾಗುವದಕ್ಕಿಂತ ಮೊದಲು ವಿದ್ಯಾರ್ಥಿಗಳೆಲ್ಲರನ್ನು
ಒಂದು ವಿಶಾಲವಾದ ಕೋಣೆಯಲ್ಲಿ ಕೂಡ್ರಿಸಿ ಅವರಿಗೆ ಹಲಕೆಲವು ಧಾರ್ಮಿಕ ಸಂಗತಿ
ಗಳನ್ನು ಹೇಳುವ ಪರಿಪಾಠವುಂಟು. ಅಂಥ ಎಲ್ಲ ಕಥೆಗಳು ಅವರಿಗೆ ಒಂದಿಲ್ಲೊಂದು
ರೀತಿಯ ಐತಿಹಾಸಿಕ ಸಂಗತಿಗಳನ್ನು ಸೂಚಿಸುತ್ತಿರುವವು. ಅನೇಕ ನಾರೆ ಒಳ್ಳೆಯ
ಪುಸ್ತಕಗಳಿಂದ ಕಥೆಗಳನ್ನು ಆರಿಸಿ ಓದಿ ತೋರಿಸಬಹುದು. ಹಾಗೆ ಹೇಳಿದ ಕಥೆ
ಗಳನ್ನು ತಿರುಗಿ ಹೇಳಿರೆಂದು ಬಾಲಕರನ್ನು ಕೇಳಬಹುದು. ಆದರೆ ಕೆಳಗಿನ ತರಗತಿ
ಗಳಲ್ಲಿ ಇತಿಹಾಸವಿಷಯದಲ್ಲಿ ನಿಯಮಬದ್ಧವಾದ ಪರೀಕ್ಷೆಯಿರಕೂಡದು.
ಮಕ್ಕಳಿಗೆ ಓದಿ ತೋರಿಸಿದ ಅಥವಾ ಬಾಯಿಂದ ಹೇಳಿದ ಸಂಗತಿಗಳ ಪರಿಣಾಮವು
ಜಿಟ್ಟಿಲ್ಲದಿದ್ದರೆ ಸ್ವಲ್ಪವಾದರೂ ಆಗೇ ಆಗಿರುವದು. ಆದ್ದರಿಂದ ಅವರಿಗೆ ಅಂಥ
ಕಥೆಗಳನ್ನು ತಿರುಗಿ ಹೇಳಲಿಕ್ಕೆ ಬಾರದ ಮಾತ್ರಕ್ಕೆ ಅಥವಾ ಅವರ ಜ್ಞಾನವು
ಲಿಖಿತ ಪರೀಕ್ಷೆಯ ಒರೆಗೆ ಹತ್ತದೆ ಹೋದ ಮಾತ್ರಕ್ಕೆ ಅದು ನಿಷ್ಪ್ರಯೋಜಕ
ವಾಯಿತೆಂದು ಭಾವಿಸಲಾಗದು. ವರ್ಗದ ಶಿಕ್ಷಕನು ತಾನು ಹೇಳಬೇಕಾದ ಕಥೆ

ಗಳನ್ನು ಸಮರ್ಪಕವಾಗಿ ಹೇಳಿರುವೆನೆಂದೂ ತನ್ನ ವಿದ್ಯಾರ್ಥಿಗಳು ಅದರೊಳಗಿ
ಮಹತ್ವದ ಮಾತುಗಳನ್ನು ಸರಿಯಾಗಿ ಗ್ರಹಿಸಿಕೊಂಡಿರುವರೆಂದೂ ಸಮಾಧಾ
ಮಾಡಿಕೊಂಡರೆ ತೀರಿತು. ಮುಂದೆ ಮಕ್ಕಳು ಬರೆಹ ಮೂಲಕವಾಗಿ ಅಥವ
ಶಾಬ್ದಿಕವಾಗಿ ತಮ್ಮ ಮನೋಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಮರ್ಥರ
ಬಳಿಕ ಅವರಿಗೆ ಕಲಿಸಿದ ಇತಿಹಾಸವಿಷಯವನ್ನು ತಕ್ಕ ರೀತಿಯಿಂದ ಪರೀಕ್ಷೆ
ನೋಡಲು ಅಡ್ಡಿಯಿಲ್ಲ.

ಪುಸ್ತಕಗಳನ್ನು ಆರಿಸುವುದು :— ಕೆಳಗಿನ ತರಗತಿಗಳ ಸಲುವ
ಪುಸ್ತಕಗಳನ್ನು ಆರಿಸುವಾಗ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಯೋಗ್ಯತೆಯನ್ನ
ಮೊದಲು ನೋಡಬೇಕು. ಎಂದರೆ ಆ ಬಾಲಕರು ಹಳ್ಳಿಯ ನಿವಾಸಿಗಳೊ ಅಥವ
ಪಟ್ಟಣದಲ್ಲಿ ವಾಸಿಸುವವರೋ? ಆ ಪುಸ್ತಕಗಳು ಅವರ ವಯೋಮಾನಕ್ಕೆ ಅನುಗು
ವಾಗಿರುವವೋ ಹೇಗೆ? ಮುಂತಾದ ಸಂಗತಿಗಳನ್ನು ಅನುಲಕ್ಷಿಸಿ ನೋಡಬೇಕ
ಈ ಕಥೆಗಳು ಯಾವದೊಂದು ದೇಶಕ್ಕಾಗಲಿ, ಯಾವದೊಂದು ಕಾಲವಿಭಾಗಕ್ಕಾಗಿ
ಸಂಬಂಧಿಸಿ ಸಂಕುಚಿತ ದೃಷ್ಟಿಯುಳ್ಳದ್ದಾಗಿರಕೂಡದು. ಇತಿಹಾಸದೊಳಗಿ
ಪ್ರಾಮುಖ್ಯವಾದ ಸಂಗತಿಗಳ ಅನೂಚಾನವಾದ ಕಲ್ಪನೆಯು ಬರುವಂಥ ಕಥೆ
ದ್ದರೆ ಒಳಿತು. ನಮ್ಮ ದೇಶದ ಬಾಲಕರು ಪರದೇಶದ ಐತಿಹಾಸಿಕ ಕಥೆಗಳನ್ನ
ಓದುವ ಆವಶ್ಯಕತೆಯಿಲ್ಲ. ನಮ್ಮ ದೇಶವು ಅಷ್ಟು ವಿಸ್ತಾರವಾಗಿದೆ; ಅ
ಇತಿಹಾಸವು ಅಷ್ಟು ವಿವಿಧವಾಗಿದೆ; ಅಷ್ಟು ಪುರಾತನಪರಂಪರೆಯುಳ್ಳದ್ದಾಗಿ
ಮತ್ತು ಅದರ ಸಾಹಿತ್ಯ ಕಲೆ ಸಂಸ್ಕೃತಿ ಇವು ಅಷ್ಟು ವ್ಯಾಪಕವಾಗಿವೆ. ಅಖಿ
ಹಿಂದುಸ್ತಾನದ ಒಂದು ಸಂಯುಕ್ತ ಇತಿಹಾಸವಲ್ಲದೆ, ಪ್ರತಿ ಪ್ರಾಂತಕ್ಕೂ ಬೆ
ಬೇರೆ ಸ್ವತಂತ್ರ ಇತಿಹಾಸವು ಕೂಡ ಇದ್ದೇ ಇರುವುದು. ಮತ್ತು ಅವು ಆ
ಪ್ರಾಂತದ ವಿದ್ಯಾರ್ಥಿಗಳ ನಿವಾಸಗಳಿಗೆ ಸಮೀಪ ಸಂಬಂಧವುಳ್ಳವಿರುವ
ಹೀಗಿರುವದರಿಂದ ಪ್ರತಿ ಪ್ರಾಂತಕ್ಕೆ ಸೇರಿದ ೧೧ ವರ್ಷದ ಒಳಗಿನ ವಯಸ್ಸಿ
ವಿದ್ಯಾರ್ಥಿಗಳು ಅಖಂಡ ಹಿಂದುಸ್ತಾನದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿ
ಪುರಾತನ ಸಾಹಿತ್ಯಗ್ರಂಥಗಳಾದ ಭಾರತ ರಾಮಾಯಣಗಳ ಕಥೆಗಳನ್ನು ಕಲಿಯು
ದಲ್ಲದೆ ತಮ್ಮ ಮನೆಗಳಲ್ಲಿ ಆಚರಿಸುವ ಧಾರ್ಮಿಕ ಹಬ್ಬ-ಹುಣ್ಣುವೆಗಳಿ
ಪ್ರಾಚೀನ ಇತಿಹಾಸಕ್ಕೂ ಸಂಬಂಧಿಸಿದ ಕಥೆಗಳನ್ನೂ ತಮ್ಮ ಪ್ರಾಂತದ ಇತಿಹಾ
ದೊಳಗಿನ ಮಹತ್ವದ ಸಂಗತಿಗಳನ್ನೂ ಕಲಿಯಬೇಕು.

ನಟನೆ :— ಇತಿಹಾಸಕ್ಕೆ ಹೆಚ್ಚು ಸತ್ಯತೆಯನ್ನುಂಟುಮಾಡುವದಕ್ಕ
ಆ ಘಟನೆಗಳನ್ನು ಪ್ರತ್ಯಕ್ಷೀಕರಿಸಿ ತೋರಿಸುವದಕ್ಕೂ ಹಲಕೆಲವು ಐತಿಹಾ

ಕಥೆಗಳನ್ನು ಅಭಿನಯಿಸಿ ತೋರಿಸಿದರೆ ತುಂಬ ಪ್ರಯೋಜನಕಾರಿಯಾಗಬಹುದು. ಇಂಥ ಅಭಿನಯದಲ್ಲಿ ಪುರಾತನ ಕಾಲದ ಅರಸು-ಅರಸಿಯರ ಅಥವಾ ಇತರ ಜನರ ನುಡುಗೆತೊಡುಗೆಗಳನ್ನು ಅನುಕರಣೆ ಮಾಡಿರಬೇಕು. ಹಳೆಯ ಆಯುಧಗಳನ್ನೂ ಹಳೆಯ ಭಾಷೆಯನ್ನೂ ಉಪಯೋಗಿಸಬಹುದು. ಹೀಗೆ ಮಾಡುವದರಿಂದ ಆ ಕಥೆಯ ಸತ್ಯತೆಯು ಪ್ರಕಟವಾಗಿ ಮಕ್ಕಳು ಇದರಿಂದ ಆನಂದಪಡುವರು. ಮತ್ತು ಇತಿಹಾಸವು ಒಂದು ಒಣ ರಗಳೆಯೆನಿಸದೆ ಪ್ರಜಲಿತ ಜೀವನಕ್ಕೆ ಸಂಬಂಧಿಸಿದ ವಿಷಯವೆನಿಸುವದು. ಇಂಥ ಆಟಕ್ಕಾಗಿ ಉಪಯೋಗಿಸಲು ಹಳೆಯ ಆಯುಧಗಳನ್ನು ರಚಿಸುವದು ಚಿತ್ರ ನಕಾಶೆಗಳನ್ನು ತಯಾರಿಸುವದು ಇವುಗಳಿಂದ ಚಿತ್ರಕಲೆ ಕೈಕೆಲಸ ಈ ವಿಷಯಗಳನ್ನು ಇತಿಹಾಸದೊಡನೆ ಸಂಬಂಧೀಕರಿಸಿ ಕಲಿಸಬಹುದು.

ಇತಿಹಾಸಶಿಕ್ಷಣದ ಎರಡನೆಯ ಮೆಟ್ಟಿಲು :— ವಿದ್ಯಾರ್ಥಿಗಳು ಪ್ರಬುದ್ಧರಾಗುತ್ತ ಹೋದಂತೆ ಅವರು ತಾವು ದೊರಕಿಸಿದ ಜ್ಞಾನದ ಉಪಯುಕ್ತತೆಯನ್ನು ತಿಳಿದುಕೊಳ್ಳಲು ಸಮರ್ಥರಾಗುವರು. ಆಗ ಅವರಿಗೆ ಇತಿಹಾಸದ ಹಲಕೆಲವು ರುಚಿಕಟ್ಟಾದ ಕಥೆಗಳನ್ನೂ ಚಮತ್ಕಾರಿಕವಾದ ಸಂಗತಿಗಳನ್ನೂ ಓದಲಿಕ್ಕೆ ಹೇಳಿ ಅವುಗಳ ಮಹತ್ವವನ್ನು ವಿವರಿಸಿ ಹೇಳಬಹುದು. ಮತ್ತು ಈ ಅವಧಿಯಲ್ಲಿ ಹೇಳುವ ಕಥೆಗಳು ಪರಸ್ಪರ ಸಂಬಂಧವುಳ್ಳವಿದ್ದು ಅವಕ್ಕೆ ಸಂಬಂಧಿಸಿದ ಐತಿಹಾಸಿಕ ಸಂಗತಿಗಳನ್ನು ವಿವರಿಸಿ ಹೇಳಬಹುದು. ಈಗ ಆ ವಿದ್ಯಾರ್ಥಿಗಳು ಐತಿಹಾಸಿಕ ಕಥೆಗಳ ಪರಸ್ಪರ ಸಂಬಂಧವನ್ನೂ ಅವುಗಳ ಬೆಳೆವಣಿಗೆ ವಿಸ್ತರಣಗಳನ್ನೂ ತಾವೇ ತಿಳಿದುಕೊಳ್ಳುವಂತೆ ಮಾಡಬೇಕು. ಬಾಲಕರು ತಿಳಿದುಕೊಳ್ಳಲು ಸಾಧ್ಯವಿದ್ದ ಐತಿಹಾಸಿಕ ಮಹತ್ವವುಳ್ಳ ಘಟನೆಗಳನ್ನು ಆರಿಸಿ ಅವರ ಮುಂದಿರಿಸುವದಿಷ್ಟೆ ಶಿಕ್ಷಕನ ಕೆಲಸ. ಈ ಅವಧಿಯ ಕೊನೆಗೆ ಎಂದರೆ ೧೧ರಿಂದ ೧೪ರ ವರೆಗಿನ ವಯೋಮಾನದಲ್ಲಿ ನಮ್ಮ ದೇಶದ ವಿದ್ಯಾರ್ಥಿಗಳು ಹಿಂದುಸ್ಥಾನದ ಇತಿಹಾಸದಲ್ಲಿಯ ಮರಾಠಾ ಸಾಮ್ರಾಜ್ಯದ ಮತ್ತು ಬ್ರಿಟಿಷರ ಸತ್ತೆಯು ಬೆಳವಣಿಗೆಯವರೆಗಿನ ಘಟನೆಗಳ ನಿಶ್ಚಿತವಾದ ಜ್ಞಾನವನ್ನು ಪಡೆದಿರಬೇಕು.

ಮೂರನೆಯ ಮೆಟ್ಟಿಲು :— ಸುವ್ಯವಸ್ಥಿತವಾದ ಅಥವಾ ಶಾಸ್ತ್ರೀಯವಾದ ಜ್ಞಾನಸಂಪಾದನೆಯ ಈ ಮೂರನೆಯ ಮೆಟ್ಟಿನಲ್ಲಿ ವಿದ್ಯಾರ್ಥಿಗಳು ಪ್ರಬುದ್ಧರಾಗಿರುವದರಿಂದ ಇತಿಹಾಸವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಲು ಸಮರ್ಥರಾಗುವರು. ಈಗ ಅವರು ಇತಿಹಾಸವನ್ನು ಕಾರ್ಯಕಾರಣ ವಿವೇಚನೆಯೊಂದಿಗೆ ಅಭ್ಯಾಸ ಮಾಡಲಿ. ಇತಿಹಾಸದ ಜ್ಞಾನವು ವ್ಯವಸ್ಥಿತವಾಗಿರಬೇಕು. ಇತಿಹಾಸದೊಳಗಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಬೆಳವಣಿಗೆ

ಗಳನ್ನು ಅವರು ತಿಳಿದುಕೊಳ್ಳಬೇಕು. ತಮ್ಮ ದೇಶದ ಐತಿಹಾಸಿಕ ಘಟನೆಗಳ
ಸಂಬಂಧಿಸುವ ಮಟ್ಟಿಗೆ ಜಗತ್ತಿನ ಇತಿಹಾಸವನ್ನು ಕೂಡ ಅವರು ಅಭ್ಯಾಸ
ಬಹುದು. ಸಾಲೆಯಲ್ಲಿ ಇತಿಹಾಸ ಪಾಠವು ನಡೆದ ವೇಳೆಯಲ್ಲಿ ಶಿಕ್ಷಕರು ಒಳ್ಳೆ
ಪುಸ್ತಕಗಳನ್ನು ಓದಿಸಬಹುದು. ನಮ್ಮ ದೇಶದ ವಿದ್ಯಾರ್ಥಿಗಳು ಈ ಮೆಟ್ಟಿನ
ಇಂಗ್ಲಂಡಿನ ಇತಿಹಾಸವನ್ನು ಸಹ ಕಲಿಯಬಹುದು. ೧೪-೧೫ ವರುಷದ
ರಾದಾಗ ನಮ್ಮ ಮಕ್ಕಳು ಹೈಸ್ಕೂಲಿನ ತರಗತಿಗಳಲ್ಲಿ ಓದುತ್ತಿರುವರು. ಆ
ಅವರಿಗೆ ಹಿಂದುಸ್ತಾನದ ಇತಿಹಾಸದ ತಿಳಿವಳಿಕೆಯಿರುವದು. ಮತ್ತು ಬ್ರಿಟಿ
ಸಾಮ್ರಾಜ್ಯದ ಇತಿಹಾಸ, ಲೋಕನಿಯುಕ್ತ ಸರಕಾರದ ಆಡಳಿತ, ಜುನಾವ
ಇವುಗಳ ಕಲ್ಪನೆಯೂ ಅವರಿಗೆ ಆವಶ್ಯಕವೆನಿಸುವದು. ನಮ್ಮ ದೇಶದಲ್ಲಿ ಲೋ
ನಿಯುಕ್ತ ಸರಕಾರ, ಜುನಾವಣೆ ಮುಂತಾದವು ಈಗೀಗ ಹೆಚ್ಚಾಗಿ ಪ್ರಚಾರದ
ಬರತೊಡಗಿವೆ. ಇಂಗ್ಲಂಡಿನ ಇತಿಹಾಸದಲ್ಲಿ ಈ ಸಂಗತಿಗಳು ಪ್ರಚಾರದಲ್ಲಿ ಹೇ
ಬಂದವು? ಅವು ಪ್ರಚಾರದಲ್ಲಿ ಬರಬೇಕಾದರೆ ಎಷ್ಟು ಕಷ್ಟ ನಷ್ಟಗಳು ಸಂಭವಿ
ದುವು? ಇವೇ ಮುಂತಾದ ಸಂಗತಿಗಳ ವಿವರಣೆಯನ್ನು ಕಾಣಬಹುದು. ಆದ್ದರಿಂ
ನಮ್ಮವರಿಗೆ ಇಂಗ್ಲಂಡಿನ ಇತಿಹಾಸದ ಅಭ್ಯಾಸದಿಂದ ಈ ಸಂಗತಿಗಳ ಬಗ್ಗೆ ಸ
ಯಾದ ಜ್ಞಾನವಾಗಿ ತಕ್ಕ ಪ್ರಯೋಜನವಾಗಬಹುದು.

**ನಮ್ಮ ವಿದ್ಯಾರ್ಥಿಗಳಿಗೆ ಇಂಗ್ಲಂಡಿನ ಇತಿಹಾಸದ ಅಭ್ಯಾಸದಿಂ
ಆಗಬಹುದಾದ ಪ್ರಯೋಜನಗಳು ಹಲವಿವೆ:—** ನಮ್ಮ ದೇಶದ ರಾಜ
ದಾಡಳಿತೆಯಲ್ಲಿ ಸಮಾವೇಶವಾಗುವ ಕೌನ್ಸಿಲು, ಅಸೆಂಬ್ಲಿ, ಮಧ್ಯವರ್ತಿ ಸ
ಕಾರ, ಫೆಡರೇಶನ್ ಮುಂತಾದವುಗಳ ಘಟನೆಗಳು ಮೊತ್ತಮೊದಲು ಇಂಗ್ಲಂ
ದಲ್ಲಿ ಹೇಗೆ ಹೇಗೆ ಪೂರ್ಣತೆ ಹೊಂದುತ್ತ ಬಂದು ಈಗ ಪ್ರಚಾರದಲ್ಲಿ ಉಳಿದಿವೆಇವೆ
ಮೊದಲಾದ ಸಂಗತಿಗಳ ನಮ್ಮ ಜ್ಞಾನವು ದೇಶದ ನಾಗರಿಕರಿಗೆ ಆವಶ್ಯಕವೆನಿ
ಹತ್ತಿದೆ. ಆದ್ದರಿಂದ ಇಂಥ ಸಂಗತಿಗಳಿಗೆ ಸಂಬಂಧಿಸಿದ ಇಂಗ್ಲಂಡಿನ ಇತಿಹಾ
ದೊಳಗಿನ ಕಥೆಗಳನ್ನೂ ಘಟನೆಗಳನ್ನೂ ಅವರು ಓದಿ ತಿಳಿದಿರುವದು ಯೋಗ್ಯವೆನಿ
ಸುವದು. ನಮ್ಮ ಪ್ರಾಥಮಿಕ ಶಾಲೆಗಳ ಬಾಲಕರಲ್ಲಿ ಹಲವರು ೧೧ ವರ್ಷ
ತುಂಬುವದರೊಳಗಾಗಿಯೇ ಸಾಲೆಯನ್ನು ಬಿಟ್ಟುಬಿಡುವರು. ಅವರನ್ನು ಬಿಟ್ಟುಳಿದ
ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಇಂಥ ಐತಿಹಾಸಿಕ ಸಂಗತಿಗಳನ್ನು
ಕಥಾರೂಪವಾಗಿ ಕಲಿಸಬಹುದು. ಈ ಕಥೆಗಳೆಲ್ಲ ಒಹುತರವಾಗಿ ಇಂಗ್ಲಂಡಿನ
ಇತಿಹಾಸದ ಮಧ್ಯಕಾಲ ಮತ್ತು ಅರ್ವಾಚೀನ ಕಾಲಗಳ ಇತಿಹಾಸದಲ್ಲಿ ಸಮಾ
ವಿಷ್ಟವಾಗಿರುವವು. ಇಂಗ್ಲಂಡಿನ ಇತಿಹಾಸವನ್ನು ಮೇಲಿನ ತರಗತಿಗಳಲ್ಲಿ ಹೆಚ್ಚು
ಸುಸಂಘಟಿತವಾಗಿ ಕಲಿಸಬಹುದು.

ಮೇಲೆ ಹೇಳಿದ ಆಶ್ಚರ್ಯ ಭಾವನೆಯು ಕಾಲ, ಪ್ರಯೋಜನ ಮತ್ತು ತಾತ್ವಿಕ ವಿವೇಚನೆ ಇವುಗಳ ಕಾಲ ಈ ಮೂರು ಬೇರೆಬೇರೆಯಾಗಿರುತ್ತಿದ್ದರೂ ಮಾನವಪ್ರಾಣಿಯ ಎಲ್ಲ ಬಗೆಯ ಎಲ್ಲ ವಿಷಯಗಳ ಜ್ಞಾನದಲ್ಲಿಯೂ ಈ ಮೂರು ಘಟ್ಟಗಳು ಕಂಡುಬರುವವು. ಆದ್ದರಿಂದ ಇತಿಹಾಸಶಿಕ್ಷಣದಲ್ಲಿ ಈ ಮೂರು ಘಟ್ಟಗಳಲ್ಲಿ ಒಂದು ಎಲ್ಲಿಗೆ ಮುಗಿದು ಮುಂದಿನದು ಎಲ್ಲ ಪ್ರಾರಂಭವಾಗುವದೆಂಬ ನ್ನು ಗೆರೆ ಕೊರೆದು ವಿಂಗಡಿಸಿ ಹೇಳಲು ಸಾಧ್ಯವಿಲ್ಲ. ಈ ಮೂರೂ ಒಂದ ೂಡನೊಂದು ಬೆರೆತಿದ್ದು ಮುಂದಿನದು ಬೆಳೆದುಬರುತ್ತಿರುವಾಗಲೆ ಹಿಂದಿನದು ಂದೆ ಸರಿಯುತ್ತ ಹೋಗುವದು.

ಇತರ ವಿಷಯಗಳ ಸಂಗಡ ಇತಿಹಾಸದ ಸಂಬಂಧೀಕರಣ :—ಮಾನವ ಪ್ರಾಣಿಯ ಜ್ಞಾನಾನುಭವಗಳು ಸಾಮಾನ್ಯವಾಗಿವೆ. ಅದನ್ನು ಬೇರೆಬೇರೆ ವಿಷಯು ಳ ಮಟ್ಟಿಗೆ ಗೆರೆಕೊರೆದು ವಿಂಗಡಿಸುವದು ಸಾಧ್ಯವಲ್ಲ. ಮನಸ್ಸಿನ ಸರಿಯಾದ ಂಸ್ಕಾರಕ್ಕಾಗಿಯೇ ಶಾಲೆಯಲ್ಲಿ ಅನೇಕ ವಿಷಯಗಳು ಕಲಿಸಲ್ಪಡುವವು. ೂಗೋಲವನ್ನು ದೂರಸರಿಸಿಟ್ಟು ಇತಿಹಾಸವನ್ನು ಕಲಿಸುವದು ಯಾರಿಗೂ ಸಾಧ್ಯ ಲ್ಲ. ಇತಿಹಾಸವು ನಾಟಕಾಭಿನಯವಾಗಿದ್ದರೆ ಭೂಗೋಲವು ನಾಟಕಗೃಹ ಾಗುವದು. ಭಾಷಾಭ್ಯಾಸದ ನೆರವಿಲ್ಲದೆ ಇತಿಹಾಸ ಭೂಗೋಲಗಳ ಅಭ್ಯಾಸವು ಾಗಲಾರದು. ಭಾಷಾಭ್ಯಾಸವೇ ಎಲ್ಲ ವಿಷಯಗಳ ಅಭ್ಯಾಸಕ್ಕೆ ಮೂಲ ಸಾಧನ ಾಗಿದ್ದು ಆಯಾ ವಿಷಯಗಳಲ್ಲಿ ಅಭಿರುಚಿಯನ್ನು ಹುಟ್ಟಿಸಲಿಕ್ಕೆ ಅವಕ್ಕೆ ಸರಿಯಾದ ಾಷೆಯೇ ಮುಖ್ಯ ಕಾರಣವಾಗುವದು. ಸಂಸ್ಕೃತ ಮೊದಲಾದ ಪ್ರಾಚೀನ ಾಲದ ಭಾಷೆಗಳಲ್ಲಿ ಆ ಕಾಲದ ಇತಿಹಾಸವು ಸಮಾವೇಶವಾಗಿರುವದರಿಂದಲೇ ಆ ಾಷೆಗಳ ಅಭ್ಯಾಸಕ್ಕೆ ಮಹತ್ವವುಂಟಾಗಿರುವದು. ಚಿತ್ರಕಲೆ ಕೈಕೆಲಸಗಳ ಪಾಠ ಳಿಗೂ ಇತಿಹಾಸದ ಪಾಠಗಳ ಸಂಬಂಧೀಕರಣವುಂಟು. ಹೀಗೆ ಶಾಲೆಯಲ್ಲಿ ಕಲಿ ುವ ಬೇರೆ ವಿಷಯಗಳಿಗೂ ಇತಿಹಾಸಕ್ಕೂ ನಿಕಟ-ಸಂಬಂಧವಿರುವದರಿಂದ ಆ ಲ್ಲ ಪಾಠಗಳೊಡನೆ ತಕ್ಕ ಸಂಬಂಧವನ್ನಿಟ್ಟುಕೊಂಡೇ ಇತಿಹಾಸವನ್ನು ಕಲಿಸ ೀಕಾಗುವದು.

ಶಿಕ್ಷಕನ ವಾಚನ ಮತ್ತು ಪೂರ್ವಸಿದ್ಧತೆ:— ಇತಿಹಾಸವನ್ನು ಸರಿ ಾಗಿ ಕಲಿಸಲು ಸಮರ್ಥನಾಗಬೇಕಾದರೆ ಶಿಕ್ಷಕನು ಅದನ್ನು ಸರಿಯಾಗಿ ಓದಿ ಿಡುಕೊಂಡಿರಬೇಕು. ಅವನು ತಾನು ಕಲಿಸುವ ವರ್ಗದ ಪಾಠಪುಸ್ತಕಗಳನ್ನಷ್ಟೇ ನಿದರೆ ಸಾಲದು. ತನ್ನ ವಿದ್ಯಾರ್ಥಿಗಳಿಗೆ ಕಲಿಸಬೇಕಾಗಿರುವಷ್ಟೇ ವಿಷಯಗಳನ್ನು ಿತುಕೊಂಡ ಶಿಕ್ಷಕನು ಅದನ್ನು ಎಂದೂ ಸರಿಯಾಗಿ ಕಲಿಸಲಾರನು. ಅವನು

ಆ ವಿಷಯವನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ನಿಶ್ಚಿತವಾದ ಜ್ಞಾನವನ್ನ
ಪಡೆದಿರಬೇಕು. ಅದರಂತೆ ಇತಿಹಾಸದ ಶಿಕ್ಷಕನು ಅದರ ಮೂಲವನ್ನು ಕಂಡ
ಹಿಡಿದು ಅಲ್ಲಿಂದ ತನಗೆ ಬೇಕಾದ ಸಾಧನ ಸಾಮಗ್ರಿಗಳನ್ನು ದೊರಕಿಸಿಕೊಂಡಿ
ಬೇಕು. ಹಿಂದುಸ್ತಾನದ ನಿಜವಾದ ಇತಿಹಾಸವನ್ನು ಇನ್ನೂ ಬರೆಯಬೇಕಾಗಿ
ಹೊಸ ಹೊಸ ಶೋಧಗಳೂ ಆಧಾರಗಳೂ ಬಯಲಿಗೆ ಬರಹತ್ತಿದ್ದರಿಂದ ನಮ್ಮ
ಇತಿಹಾಸದ ಸತ್ಯಸ್ವರೂಪವು ಈಗೀಗ ಹೊರಬೀಳಹತ್ತಿರುವದು. ತಜ್ಞರಾ
ಶೋಧಕರು ಹಲವು ಹೊಸ ಸಂಗತಿಗಳನ್ನು ಕಂಡುಹಿಡಿದು, ಹಳೆಯ ಆಧಾರಗಳ
ಬೇರೆ ಬೇರೆ ಅರ್ಥವಿವರಣೆಯನ್ನೂ ಹೇಳುತ್ತಿದ್ದಾರೆ. ಇತಿಹಾಸದ ಶಿಕ್ಷಕನ
ಇವನ್ನೆಲ್ಲ ಅರಿತವನಾಗಿರಬೇಕು. ಮತ್ತು ತನಗೆ ಲಭ್ಯವಾಗಿರುವ ಸಾಧನಸಾಮಗ್ರಿ
ಗಳನ್ನೆಲ್ಲ ನಿಷ್ಪಕ್ಷಪಾತ ಬುದ್ಧಿಯಿಂದ ಪರಿಶೀಲಿಸಿ ಅವುಗಳಿಂದ ಯೋಗ್ಯವಾದ
ಗಳನ್ನು ಆರಿಸಿಕೊಂಡಿರಬೇಕು. ನಮ್ಮ ಹಳೆಯ ಸಾಹಿತ್ಯದಲ್ಲಿ ಐತಿಹಾಸಿಕ ಸಂಗ
ಗಳು ವಿಪುಲವಾಗಿ ಉಪಲಬ್ಧವಾಗುವವು. ಯಾವದೊಂದು ಕಾಲಾವಧಿಯ
ಸಾಹಿತ್ಯವೆಂದರೆ ಅದು ಆ ಕಾಲಾವಧಿಯ ಜನತೆಯ ಜೀವನದ ಮತ್ತು ವಿಚಾರ
ವ್ಯಕ್ತರೂಪವಲ್ಲದೆ ಬೇರೊಂದಲ್ಲ. "ಶಾಂತಿಸಮಯದಲ್ಲಿಯೇ ಆಗಲಿ, ಸಮ
ಸನ್ನಾಹದ ವೇಳೆಯಲ್ಲಿಯೇ ಆಗಲಿ ಸಾಧನಸಾಮಗ್ರಿಗಳಿಗಿಂತಲೂ ಅವುಗಳ ಉ
ಯೋಗಕ್ಕೆ ಮೂರು ಮಡಿ ಮಿಗಿಲು ಮಹತ್ವ"ವಂತೆ ಹಾಗೆಯೇ ನಮ್ಮ ಕನ್ನ
ದಲ್ಲೊಂದು ಗಾದೆಯ ಮಾತುಂಟು: "ಓದು ಒಕ್ಕಾಲು; ಬುದ್ಧಿ ಮುಕ್ಕಾಲು

ಶಿಕ್ಷಕರಿಗೆ ಪುಸ್ತಕಗಳನ್ನು ಒದಗಿಸುವದು:—ಶಿಕ್ಷಕನಿಗೆ ಬೇಕಾಗಿರು
ಎಲ್ಲ ಪುಸ್ತಕಗಳು ಒತ್ತಟ್ಟಿಗೆ ಉಪಲಬ್ಧವಾಗಲಾರವು. ಒಂದೇ ವಾಚನಾಲಯ
ದಲ್ಲಿ ಎಲ್ಲ ಪುಸ್ತಕಗಳು ದೊರೆಯಬಹುದಾದಂಥ ಒಳ್ಳೆಯ ವಾಚನಾಲಯಗಳ
ಕಡಿಮೆ. ಆದ್ದರಿಂದ ಶಿಕ್ಷಕರ ಸಲುವಾಗಿ ಸಂಚರಿಸುವ ವಾಚನಾಲಯಗಳ
ಬೇಕು. ಬೇರೆ ಬೇರೆ ವಿಷಯಗಳ ಮೇಲಿನ ಮೇಲ್ತರಗತಿಯ ಒಳ್ಳೆಯ ಪುಸ್ತ
ಗಳ ಸಂಗ್ರಹವುಳ್ಳ ಒಂದು ಪೆಟ್ಟಿಗೆಯನ್ನು ಮಾಡಿಸಿ ಅದನ್ನು ಒಂದು ಸಾಲೆಯಿಂ
ಮತ್ತೊಂದು ಸಾಲೆಗೆ ಸಾಗಿಸುವ ಯೋಜನೆಯಿರಬೇಕು. ಶಿಕ್ಷಕರ ಸಲುವಾ
ಬೇರೆ ಬೇರೆ ಕೇಂದ್ರಗಳಲ್ಲಿ ತಜ್ಞರಿಂದ ಯೋಗ್ಯಕ್ರಮದಲ್ಲಿ ಉಪನ್ಯಾಸಗಳನ್ನ
ಏರ್ಪಡಿಸಬೇಕು. ಸ್ಕೂಲ್‌ಬೋರ್ಡ ಮೊದಲಾದ ಸ್ಥಾನಿಕ ಅಧಿಕಾರಿ ಸಂಘ
ವರು ತಮ್ಮ ಶಿಕ್ಷಕರ ಉಪಯೋಗಕ್ಕಾಗಿ ಒಂದು ಮಧ್ಯವರ್ತಿ ವಾಚನಾಲಯ
ವನ್ನು ಸ್ಥಾಪಿಸಬೇಕು. ಒಂದು ಷಣ್ಮಾಸದಲ್ಲಿ ಒಂದಾದರೂ ಹೊಸ ಇತಿಹಾಸ
ಪುಸ್ತಕವನ್ನು ಓದುತ್ತ ಹೋದರೆ ಶಿಕ್ಷಕನ ಇತಿಹಾಸ-ಜ್ಞಾನವು ಸುಧಾರಿ
ಬಹುದು.

ವಿದ್ಯಾರ್ಥಿಗಳಿಗೆ ಒಳ್ಳೆಯ ಪುಸ್ತಕಗಳನ್ನು ಒದಗಿಸುವದು :— ವಿದ್ಯಾರ್ಥಿಗಳೂ ಸಹ ತಮ್ಮ ವರ್ಗಕ್ಕೆ ನಿಯಮಿಸಿದ ಒಂದೇ ಒಂದು ಇತಿಹಾಸದ ಪುಸ್ತಕದ ಮೇಲೆ ಅವಲಂಬಿಸಿರಕೂಡದು. ಅವರು ಅಭ್ಯಾಸ ಮಾಡಬೇಕಾಗಿರುವ ಯಾವದೊಂದು ಕಾಲಾವಧಿಯ ಇತಿಹಾಸದ ಬಗ್ಗೆ ಸರಿಯಾದ ಜ್ಞಾನವನ್ನು ಪೂರೈಸುವಂಥ ಪುಸ್ತಕಗಳ ಕಡೆಗೆ ಅವರ ಲಕ್ಷವನ್ನು ಎಳೆಯುವದು ಶಿಕ್ಷಕನ ಕರ್ತವ್ಯವೇ ಸರಿ. ಪ್ರತಿಯೊಂದು ವರ್ಗಕ್ಕೆ ಇಂಥ ಕೆಲವು ಒಳ್ಳೆಯ ಇತಿಹಾಸ ಗ್ರಂಥಗಳ ಸಂಗ್ರಹವಿರುವದು ಒಳಿತು. ಬಾಲಕರಿಗಾಗಿ ಬರೆದ ಇತಿಹಾಸದ ಪುಸ್ತಕಗಳು ಸುಲಭವಾದ ಭಾಷೆಯಲ್ಲಿದ್ದು ಆಕರ್ಷಕವಾಗಿರಬೇಕು. ವಿದ್ಯಾರ್ಥಿಗಳು ಓದುವದಕ್ಕೆ ಆ ಪುಸ್ತಕಗಳನ್ನು ತಮ್ಮ ಮನೆಗೆ ಒಯ್ಯಬಹುದು.

ಇತಿಹಾಸ ಶಿಕ್ಷಣದ ಬೇರೆ ಪದ್ಧತಿಗಳನ್ನು ಕುರಿತು ಬೇರೊಂದು ಲೇಖನದಲ್ಲಿ ಚರ್ಚಿಸೋಣ.

ಪ್ರಾಥಮಿಕ ಶಿಕ್ಷಣದ ಕಾಲನಿಯಂತ್ರಣ

ಜೆ. ಪಿ. ನಾಯಿಕ, ಬಿ. ಎ.

ಮುಂಬಯಿ ಸರಕಾರದ ಪ್ರಾಥಮಿಕ ಶಿಕ್ಷಣದ ಬೋರ್ಡಿನ ಸದಸ್ಯರು.

ಪ್ರಾಥಮಿಕ ಶಿಕ್ಷಣದ ಕಾಲನಿಯಂತ್ರಣದ ವಿಷಯಕ್ಕೆ ಇನ್ನೂ ಸಾಕಾದಷ್ಟು ಲಕ್ಷ್ಯವು ಪೂರೈಸಲ್ಪಟ್ಟಿಲ್ಲವೆಂದು ಹೇಳಲು ದುಃಖವಾಗುವದು. ಪ್ರಾಂತಿಕ ಸರಕಾರದ ವಿದ್ಯಾಖಾತೆಗಳು ಪ್ರಾಥಮಿಕ ಶಿಕ್ಷಣದ ಕಾಲಾವಧಿಯನ್ನು ಬೆಳೆಯಿಸುವದರಲ್ಲಿ ನಾ ಮುಂದೆ ನೀ ಮುಂದೆ ಎಂದು ಮೇಲಾಟವಾಡುವಂತೆ ಕಾಣುತ್ತದೆ. ಈ ತೆರದ ಪ್ರವೃತ್ತಿಯು ಸಾಕ್ಷರತೆಯ ಪ್ರಸಾರಕ್ಕೆ ಎರಡು ಬಗೆಯಿಂದ ವಿಘ್ನಕಾರಿಯಾಗಿದೆ. (೧) ಪ್ರಕೃತದ ದುಡ್ಡಿನ ಮುಗ್ಗಟ್ಟಿನ ಕಾಲದಲ್ಲಿ ಹೆಚ್ಚಿನ ವೆಚ್ಚಕ್ಕೆ ಕಾರಣವಾದ ಈ ಧೋರಣೆಯಿಂದ ಬರಗಾಲದಲ್ಲಿ ಅಧಿಕಮಾಸವೆಂಬಂತಾಗಿದೆ. (೨) ಬಡತನದಲ್ಲಿ ಬಳಲುತ್ತಿರುವ ಬಹುಸಂಖ್ಯಾಕರಾದ ಪಾಲಕರು ತಮ್ಮ ಮಕ್ಕಳನ್ನು ಸಾಕ್ಷರಿಗಳಾಗುವದಕ್ಕಿಂತ ಮೊದಲೇ ಶಾಲೆಯಿಂದ ಬಿಡಿಸಿ ಬಿಡಬೇಕಾಗಿದೆ. ಅರ್ಥಾತ್ ಇಂಥವರ ಶಿಕ್ಷಣಕ್ಕಾಗಿ ವೆಚ್ಚವಾದ ಅಷ್ಟು ಹಣವು

ಅಪವ್ಯಯವಾದಂತಾಗುವದು. ಸಾಕ್ಷರತೆಯನ್ನು ಪಡೆಯಲಿಕ್ಕೆ ಆವಶ್ಯಕವೆನಿಸುವ ಪ್ರಾಥಮಿಕ ಶಿಕ್ಷಣದ ಕಾಲಾವಧಿಯು ಸಾಧ್ಯವಿದ್ದಷ್ಟು ಕಡಿಮೆಯಿರುವದು ಸಾಮಾಧಾನಕರವಾದ ಶಿಕ್ಷಣದ ಧೋರಣೆಯಲ್ಲಿಯ ಒಂದು ಮುಖ್ಯ ಲಕ್ಷಣವು. ಪ್ರಕೃತದ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣದ ಕಾಲಾವಧಿಯನ್ನು ನಿಯಂತ್ರಿಸಿ ಅದನ್ನು ಸಾಧ್ಯವಿದ್ದಷ್ಟೂ ಕಡಿಮೆ ಮಾಡಲಿಕ್ಕೆ ಸಾಧನವಾಗಬಹುದಾದ ಸಂಗತಿಗಳನ್ನೆ ವಿವೇಚಿಸಿ ಅವನ್ನು ಹೇಗೆ ಕಾರ್ಯಕಾರಿಯಾಗುವಂತೆ ಮಾಡಬಹುದೆಂಬದನ್ನು ವಿವರಿಸಲು ಯತ್ನಿಸುವೆವು.

ಪ್ರಾಥಮಿಕ ಶಿಕ್ಷಣದ ಕಾಲನಿಯಂತ್ರಣವು ಈ ಕೆಳಿಗೆ ಹೇಳುವ ಐದು ಮಹತ್ವದ ಮಾತುಗಳ ಮೇಲೆ ಅವಲಂಬಿಸುವದೆಂದು ಸಾಮಾನ್ಯವಾಗಿ ಹೇಳುವದುಂಟು.

(೧) ಮಗುವಿನ ಅನುವಂಶಿಕ ಬುದ್ಧಿಸಾಮರ್ಥ್ಯ

(೨) ಮಗುವಿನ ಮನೆಯೊಳಗಿನ ಪರಿಸ್ಥಿತಿ

(೩) ಮಗುವು ಮೊದಲು ಶಾಲೆಗೆ ಹೋಗುವಾಗಿನ ವಯಸ್ಸು

(೪) ಅಭ್ಯಾಸಪತ್ರಿಕೆಯ ಸ್ವರೂಪ

(೫) ಓದು ಬರೆಹಗಳನ್ನು ಕಲಿಸುವ ಪದ್ಧತಿ

ಇವುಗಳಲ್ಲಿ ಮೊದಲನೆಯದು ಅತಿ ಮಹತ್ವದ್ದಾದರೂ ವಿದ್ಯಾ-ಇಲಾಖೆಯವರು ಆ ಒಗ್ಗೆ ವಿಚಾರ ಮಾಡಲು ಎಷ್ಟೂ ಸಾಧ್ಯವಿಲ್ಲ. ಸರಕಾರದವರು ಸರ್ವಸಾಮಾನ್ಯ ತರಗತಿಯ ಬುದ್ಧಿಶಕ್ತಿಯ ಮಕ್ಕಳನ್ನು ಅನುಲಕ್ಷಿಸಿ ಶಿಕ್ಷಣದ ಯೋಜನೆಯನ್ನು ತಯಾರಿಸಬೇಕಾಗುವದು. ಹೆಚ್ಚು ಬುದ್ಧಿಶಾಲಿಯಾದ ಒಂದು ಮಗುವು ನಿಯಮಿತ ಕಾಲಾವಧಿಗಿಂತ ಮೊದಲೇ ಸಾಕ್ಷರಿಯಾಗಬಹುದು; ಮಂದಬುದ್ಧಿಯ ಇನ್ನೊಂದು ಮಗುವು ಕುಂಟುತ್ತ ಸಾಗಿ ದೀರ್ಘಕಾಲದ ನಂತರ ಸಾಕ್ಷರತೆಯನ್ನು ಪಡೆಯಬಹುದು. ಹೀಗಿರುವದರಿಂದ ನಾವು ಈ ವಿಷಯವನ್ನು ಇಲ್ಲಗೆ ನಿಲ್ಲಿಸಿಬಿಡೋಣ.

ಇನ್ನು ಎರಡನೆಯ ವಿಚಾರ. ಮನೆಯವರೆಲ್ಲರೂ ಓದು ಬರೆಹಗಳನ್ನು ಒಲ್ಲವರಾಗಿದ್ದ ಕುಟುಂಬದಲ್ಲಿ ಬೆಳೆದ ಮಗುವು ಬೇಗನೆ ಸಾಕ್ಷರಿಯಾಗುವದು; ಮತ್ತು ತನ್ನ ಅಭ್ಯಾಸವನ್ನು ಬೇಗನೆ ಮರೆತುಬಿಡಲಾರದು. ಈ ಮಾತು ಸಾಮಾನ್ಯವಾಗಿ ಮುಂದುವರಿದ ವರ್ಗಗಳ ಮಕ್ಕಳಿಗೆ ಅನ್ವಯಿಸುವದು. ತದ್ವಿರುದ್ಧವಾಗಿ ನಿರಕ್ಷರಿಯಾದ ಕುಟುಂಬದಲ್ಲಿ ಹುಟ್ಟಿ ಬೆಳೆದ ಮಗುವು ಸಾಕ್ಷರಿಯಾಗಲು ಹೆಚ್ಚು

ಕಾಲಾವಧಿಯು ಬೇಕಾಗುವದು ; ಮತ್ತು ಶಾಲೆಯನ್ನು ಬಿಟ್ಟ ಕೆಲಕಾಲದಲ್ಲಿಯೇ ತಾನು ಕಲಿತದ್ದನ್ನೆಲ್ಲ ಮರೆತು ಬಿಟ್ಟು ಮತ್ತೆ ನಿರಕ್ಷರಿಯಾಗಿಬಿಡಬಹುದು. ನಮ್ಮ ಶಾಲೆಗಳಿಗೆ ಬರುವ ಮಕ್ಕಳಲ್ಲಿ ಬಹು ಜನರು ಇಂಥವರೇ ಇರುವರು. ಆದ್ದರಿಂದ ನಾವು ಕೈಕೊಳ್ಳಬಹುದಾದ ಸಾರ್ವತ್ರಿಕ ಒತ್ತಾಯದ ಶಿಕ್ಷಣದ ಎಲ್ಲ ಯೋಜನೆಗಳನ್ನು ಈ ಮಾತನ್ನು ಅನುಲಕ್ಷಿಸಿಯೇ ತಯಾರಿಸಬೇಕಾಗುವದು. ಸಾಕ್ಷರತಾ ಪ್ರಸಾರದ ಚಟುವಟಿಕೆಗಳು ಸಾಗುತ್ತಿರುವ ಪ್ರದೇಶದಲ್ಲಿ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯು ಹೆಚ್ಚಿರುವದೆಂಬದು ನಮ್ಮ ಅನುಭವದ ಮಾತು. ಎಷ್ಟೋ ಕಡೆಗೆ ಪಾಲಕರು ಸಾಕ್ಷರಿಗಳಾಗಿರುವರು. ಮತ್ತೆ ಹಲವೆಡೆಗಳಲ್ಲಿ ಅವರು ತಕ್ಕಷ್ಟು ತಾಳ್ಮೆಯಿಲ್ಲದೆ ಶಾಲೆಗೆ ಹೋಗುವದನ್ನೂ ಓದುಬರೆಹಗಳನ್ನು ಕಲಿಯುವ ಹವ್ಯಾಸವನ್ನೂ ಬಿಟ್ಟುಬಿಟ್ಟಿರುವರು. ಹೀಗೆ ಪಾಲಕರ ಸ್ವವಿಷಯವು ಏನೇ ಇದ್ದರೂ ಅವರು ತಮ್ಮ ಮಕ್ಕಳನ್ನು ಮಾತ್ರ ಪ್ರಾಥಮಿಕ ಶಿಕ್ಷಣಕ್ಕಾಗಿ ಶಾಲೆಗೆ ಕಳುಹಿಸಲೇಬೇಕೆಂಬ ನಿರ್ಧಾರದ ಬುದ್ಧಿಯನ್ನು ಹೊಂದಿರುವರು. ಆದ್ದರಿಂದ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಚಾರದಲ್ಲಿ ತರಬೇಕೆನ್ನುವ ಎಲ್ಲ ಪ್ರದೇಶಗಳಲ್ಲಿ ಮೊದಲು ಸಾಕ್ಷರತಾ ಪ್ರಸಾರದ ಚಟುವಟಿಕೆಗಳು ಪ್ರಾರಂಭಿಸಲ್ಪಟ್ಟು ವಿಶೇಷತಃ ತಾಯಂದಿರಿಗೆ ತಕ್ಕಷ್ಟು ಶಿಕ್ಷಣಕೊಡುವ ಉಪಾಯಗಳನ್ನು ಮೊದಲು ಕೈಕೊಳ್ಳಬೇಕು. ಇದರಿಂದ ತಕ್ಕ ಭೂಮಿಯು ತಯಾರಾಗಿ ಒತ್ತಾಯದ ಶಿಕ್ಷಣಕ್ಕೆ ತೀರ ಅವಶ್ಯಕವೆನಿಸುವ ಸಾರ್ವಜನಿಕರ ಅನುಕೂಲ ಮನೋಭಿಪ್ರಾಯವನ್ನು ಹುಟ್ಟಿಸುವದಕ್ಕೆ ಸಹಾಯವಾಗುವದು. ಮತ್ತು ಮಕ್ಕಳು ತೀವ್ರ ಸಾಕ್ಷರತೆಯನ್ನು ಹೊಂದುವದಕ್ಕೂ ತಾವು ಕಲಿತದ್ದನ್ನು ಪ್ರಚಾರದಲ್ಲಿಟ್ಟುಕೊಳ್ಳುವದಕ್ಕೂ ತಕ್ಕದಾದ ಕೌಟುಂಬಿಕ ವಾತಾವರಣವು ತಾನಾಗಿ ಸಿದ್ಧವಾಗುವದು.

ಮೂರನೆಯ ವಿಚಾರವು ಈ ಯೋಜನೆಯಲ್ಲಿ ತುಂಬ ಅನನುಕೂಲವನ್ನು ತಂದು ಒಡ್ಡುತ್ತಿದೆ ಮಗುವು ತಡವಾಡಿ ಶಾಲೆಗೆ ಪ್ರವೇಶಮಾಡಿದಷ್ಟೂ ತೀವ್ರವಾಗಿಯೂ ಸುಲಭವಾಗಿಯೂ ಸಾಕ್ಷರಿಯಾಗಬಲ್ಲುದು. ನಮ್ಮ ಶಾಲೆಗಳ ಸದ್ಯದ ಪರಿಸ್ಥಿತಿಯಲ್ಲಂತೂ ಈ ಮಾತು ಇನ್ನಷ್ಟು ಸತ್ಯವಾಗಿದೆ. ನಾವು ಎಂದೇ ಒಂದು ಶಾಲೆಯ ಕೋಣೆಯಲ್ಲಿ ಎಲ್ಲ ವಿದ್ಯಾರ್ಥಿಗಳನ್ನು ತುಂಬಿ ಶಿಕ್ಷಣ ಕೊಡಿಸುವಾಗ ವೈಯಕ್ತಿಕವಾಗಿ ಲಕ್ಷ್ಯವನ್ನು ಪೂರೈಸುವದು ಸಾಧ್ಯವೇ ಇಲ್ಲ ; ಇಂಥ ಶಾಲೆಗಳಲ್ಲಿ ಏನು ಕಲಿಸುತ್ತೇವೆ, ಹೇಗೆ ಕಲಿಸುತ್ತೇವೆ, ಎಂಬದು ನಮಗೇ ತಿಳಿಯದಾಗಿದೆ. ನಮ್ಮ ಶಿಕ್ಷಕರ ಅವಸ್ಥೆಯೂ ಅಂಥದೇ. ಅವರ ವಿಷಯಜ್ಞಾನವೂ ಕಷ್ಟಕಷ್ಟೆ. ಅವರಿಗೆ ದೊರೆಯುವ ಶೈಕ್ಷಣಿಕ ಸಂಸ್ಕಾರಗಳೂ ಆ ಜ್ಞಾನಕ್ಕೆ

ತಕ್ಕುದಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ನಮ್ಮ ಶಾಲೆಗಳಲ್ಲಿ ಹಸುಗೂಸುಗಳಿಗೆ ತಕ್ಕುವಾದ ಕಿಂಡರಗಾರ್ಟನ್ ಪದ್ಧತಿ ಮೊಂಟೆಸೊರಿ ಪದ್ಧತಿ ಮೊದಲಾದ ಶುಚ್ಛ ತರದ ಪದ್ಧತಿಯಿಂದ ಶಿಕ್ಷಣಕೊಡಲು ಸಾಧ್ಯವಿಲ್ಲ. ಅಂಥ ಶಿಕ್ಷಣಕ್ಕಾಗಿ ನಾವು ಶಿಶುಶಾಲೆಗಳನ್ನು ಏರ್ಪಡಿಸಬೇಕಾದೀತು. ಅಂಥ ಸುಕಾಲವು ನಮಗೆ ಇನ್ನೂ ಒಹುದೂರದಲ್ಲಿದೆ. ಅಂಥ ಪ್ರಭಾತ ಸೂಚನೆಯಾಗುವವರೆಗೂ ನಾವು ನಮ್ಮ ಚಿಕ್ಕಮಕ್ಕಳನ್ನು ಮನೆಯಲ್ಲಿಯೇ ಆಡಿ ಓಡಾಡಿ ಬೆಳೆಯಲೆಂದು ಬಿಟ್ಟುಬಿಡುವದೇ ಒಳಿತು. ಅವರು ತಿಂದುಂಡು ಅಡ್ಡಾಡಿ ಪ್ರಕೃತಿದೇವಿಯ ಉಡಿಯಲ್ಲಿ ನಲಿದಾಡಿ ತಮ್ಮ ಮುಂದಿರುವ ವಿಶಾಲವಾದ ಪ್ರಪಂಚದ ಶಾಲೆಯಲ್ಲಿಯೇ ನೋಡಿ ಆಡಿ ಮಾಡಿ ಕಲಿಯಲೆಂದು ಬಿಟ್ಟುಬಿಡೋಣ.

ಶ್ರೀಯುತ **ಆರ್. ವಿ. ಪರೂಳೆಕರ** ಇವರು ತಮ್ಮ "ಭರತಖಂಡದಲ್ಲಿ ಸಾಕ್ಷರತೆ" ಎಂಬ ವಿಚಾರಪರಿಪ್ಲುತವಾದ ಪುಸ್ತಕದಲ್ಲಿ ಈ ವಿಷಯದ ಶಾರೀರಿಕ ಮಾನಸಿಕ ಮತ್ತು ವ್ಯಾವಹಾರಿಕ ಅಂಗಗಳನ್ನೆಲ್ಲ ಪರ್ಯಾಲೋಚಿಸಿ **"ನಮ್ಮ ಬಾಲಕರು ಮೊತ್ತ ಮೊದಲು ಶಾಲೆಗೆ ಹೋಗುವ ವಯಸ್ಸು ಏಳು ವರುಷಗಳಿಗಿಂತ ಹೆಚ್ಚಿಗೆ ಇರುವದು ತುಂಬ ಹಿತಕರವು** ಎಂದು ಪ್ರತಿಪಾದಿಸಿದ್ದಾರೆ. ಇದಕ್ಕೂ ಮೊದಲೇ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಅದರಿಂದ ಸಾರ್ವಜನಿಕ ಹಣದ ಅಪವ್ಯಯವಾಗುವದಲ್ಲದೆ ಮಕ್ಕಳ ಬೆಳೆವಣಿಗೆಯೂ ಕೂಡ ಕುಂಠಿತವಾಗುವದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ ನೋಡಬೇಕೆಂದು ಎಲ್ಲ ಪ್ರಾಂತಿಕ ಸರಕಾರಕ್ಕೆ ನಮ್ಮ ಆಗ್ರಹದ ಸೂಚನೆಯಿದೆ. ಇದೊಂದೇ ಸಂಗತಿಯನ್ನು ಪ್ರಚಾರದಲ್ಲಿ ತಂದರೆ ನಮ್ಮ ಮಕ್ಕಳು ಶಾಲೆಗೆ ಬಂದ ಮೊದಲನೆಯ ವರ್ಷದಲ್ಲಿ ಆಗುತ್ತಿರುವ ಕುಂಠಿತ ಪ್ರಗತಿಯ ನಿವಾರಣೆಗೂ ಸಾಕ್ಷರತೆಯನ್ನು ಪಡೆಯಲಿಕ್ಕೆ ಹತ್ತುವ ಕಾಲಾವಧಿಯನ್ನು ನಿಯಂತ್ರಣೆ ಮಾಡುವದಕ್ಕೂ ಪ್ರಕೃತದ ಶಿಕ್ಷಣದ ವೆಚ್ಚದಲ್ಲಿಯ ದೊಡ್ಡ ರಕಮನ್ನು ಉಳಿಸಿಕೊಳ್ಳುವದಕ್ಕೂ ತುಂಬ ಸಹಾಯವಾಗುವದು.

ನಾಲ್ಕನೆಯ ವಿಚಾರವೂ ಕೂಡ ತುಂಬ ಮಹತ್ವವುಳ್ಳದ್ದು. ಪ್ರಾಥಮಿಕ ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಹೆಚ್ಚು ಹೆಚ್ಚು ವಿಷಯಗಳನ್ನು ತುಂಬುವ ಪ್ರವೃತ್ತಿಯೇ ಎಲ್ಲೆಡೆಗಳಲ್ಲಿ ಕಂಡುಬರುವದು ಜ್ಞಾನಭಂಡಾರವು ತೀವ್ರವಾಗಿ ಬೆಳೆವಣಿಗೆ ಹೋಗುತ್ತ ಹೋದಂತೆ ಮಾನವನ ಜೀವನ ಸಮಸ್ಯೆಯು ಹೆಚ್ಚು ಹೆಚ್ಚು ಜಟಿಲವಾಗುತ್ತ ಸಾಗಿದೆ. ನಮ್ಮ ಶಿಕ್ಷಣ-ಶಾಸ್ತ್ರಜ್ಞರು ಬಾಲಕರ ಮನಸ್ಸಿಗೆ ಪ್ರಬುದ್ಧರ ತಿಳಿವಳಿಕೆಗೆ ತಕ್ಕುವಾದ ಹಲವು ವಿಷಯಗಳ ಸಂಸಾರವನ್ನು

ಾಡುವ ಆವೇಶದ ಚಿತುರತೆಯಲ್ಲಿ ಅವರ ಅಭ್ಯಾಸಪತ್ರಿಕೆಯಲ್ಲಿ ಹಲವು ವಿಷಯು
ಳನ್ನು ಸಮಾವೇಶಮಾಡಿ ಬಿಡಹತ್ತಿದ್ದಾರೆ. ಆ ವಿಷಯಗಳು ಪ್ರಬುದ್ಧರ ಬುದ್ಧಿ
ಕ್ತಿಗೆ ಮೆಚ್ಚುವ ಹಾಗು ಉಪಯುಕ್ತ ವಿಷಯಗಳೇನೋ ಹೌದು. ಆದರೆ ಅವು
ಾಲಕರ ಬುದ್ಧಿಶಕ್ತಿಗೆ ಅನುಗುಣವಾಗಲಾರವು. ಆದುದರಿಂದಲೇ ಅವು ಅವರಿಗೆ
ಚಿಸಲಾರವು. ವಿಷಯಗಳ ಸಂಗ್ರಹಕ್ಕೇ ಮಹತ್ವ ಕೊಟ್ಟಿರುವ ಇಂಥ
ಭ್ಯಾಸ ಪತ್ರಿಕೆಯಿಂದ ಅವನ್ನು ಕಲಿಯುವ ಬಾಲಕರನ್ನು ಮರೆತು ಬಿಟ್ಟಂತಾಗು
ದೆಂದು ದುಃಖಿಸಿದೊಡನೆ ಹೇಳಬೇಕಾಗುವದು. ಮುಂದೆ ಪ್ರಬುದ್ಧರಾದಾಗ
ಪಯೋಗಕ್ಕೆ ಬೀಳುವಂಥ ಹಲವು ವಿಷಯಗಳನ್ನು ಕಲಿಸುವ ಹವಣಿಕೆಯಲ್ಲಿ
ಕ್ಷಕನು ಬಾಲಕರ ಸ್ವಾಭಾವಿಕ ಅಭಿರುಚಿ ಮನೋವೃತ್ತಿಗಳನ್ನೂ ಅವರ ವಿಷಯ
ಗ್ರಹಣ ಶಕ್ತಿಯನ್ನೂ ದುರ್ಲಕ್ಷಿಸಿ ಕೊರಗಿಸಿ ಬಿಡುವದು. ನುತ್ತು ಸಾಲೆಯಲ್ಲಿ
ಾಠ ನಡೆಯುವ ವೇಳೆಯ ಬಹುಭಾಗವೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ
ಉತ್ಸಾಹವೂ ಇಂಥ ಕಿರುಕುಳ ವಿಷಯಗಳ ಶಿಕ್ಷಣದಲ್ಲಿಯೇ ಕಳೆದು ಹೋಗಿ
ಮುಖ್ಯ ವಿಷಯಗಳಾದ ಓದು ಬರೆಹ ಗಣಿತ ಇವುಗಳ ಅಭ್ಯಾಸಕ್ಕೆ ತೀರ ಸ್ವಲ್ಪವೇ
ಅವಕಾಶವು ಉಳಿಯುವದು. ಮತ್ತು ಆ ವಿಷಯಗಳು ದುರ್ಲಕ್ಷಿಸಲ್ಪಡುವವು.
ಟ್ಟಿನಲ್ಲಿ ಹೇಳುವದಾದರೆ, ಅಭ್ಯಾಸಪತ್ರಿಕೆಯಲ್ಲಿ ಹೇರಳ ವಿಷಯಗಳನ್ನು ಗುಂಪು
ಾಡಿಸಿ ತುರುಕುವದರಿಂದ ಮುಖ್ಯ ವಿಷಯಗಳಾದ ಓದು ಬರೆಹ ಗಣಿತಗಳ
ಭ್ಯಾಸಕ್ಕೆ ತೀರ ಸ್ವಲ್ಪವೇ ಅವಕಾಶವುಳಿಯುವದು; ಮತ್ತು ಮಕ್ಕಳು ಸಾಕ್ಷರಿ
ಾಗಲು ಬೇಕಾಗುವ ಕಾಲಾವಧಿಯು ಹೆಚ್ಚುವದು; ಈ ಮಾತನ್ನು ಎಷ್ಟು
ೀಗನೆ ತಿಳಿದುಕೊಂಡು ಅಭ್ಯಾಸ ಪತ್ರಿಕೆಯನ್ನು ಸುಲಭಮಾಡುವೆವೊ ಅಷ್ಟು
ೀಘ್ರವಾಗಿ ಸಾಕ್ಷರತಾ ಪ್ರಸಾರವಾಗುವದು.

ಕೊನೆಯ ಮಾತೆಂದರೆ— ನಮ್ಮ ಪ್ರಕೃತದ ಶಿಕ್ಷಣ ಪದ್ಧತಿಯಲ್ಲಿ ತಕ್ಕ
ನಿರ್ಧಾರಣೆಯಾಗಬೇಕು. ಎಂದರೆ ನಾವು ನಮ್ಮ ಮಕ್ಕಳು ಅಲ್ಪಾವಧಿಯಲ್ಲೇಯೇ
ಸಾಕ್ಷರಿಗಳಾಗಲು ತಕ್ಕುದಾದ ಹೊಸದೊಂದು ಶಿಕ್ಷಣಕ್ರಮವನ್ನು ಕಂಡು-
ಕೊಳ್ಳಬೇಕು.

ಕೆಲಕೆಲವು ವಿಷಯಗಳ ಶಿಕ್ಷಣ ಕ್ರಮಗಳು ಮಾನಸಶಾಸ್ತ್ರಕ್ಕೆ ಅನುಗುಣ
ವಾಗಿದ್ದು ಮಕ್ಕಳು ತೀವ್ರವೇ ಸಾಕ್ಷರಿಗಳಾಗಲು ಅನುಕೂಲ ಮಾಡಿಕೊಡು
ವವು. ಅದಷ್ಟು ಅಲ್ಪಾವಧಿಯಲ್ಲಿಯೇ ಸಾಕ್ಷರಿಗಳಾಗಲು ಅನುಕೂಲವಾದ
ಕ್ಷಣ ಪದ್ಧತಿಯನ್ನು ಕಂಡುಹಿಡಿಯುವದು ಟ್ರೇನಿಂಗ್ ಕಾಲೇಜಗಳ ಶಿಕ್ಷಕ
ವರ್ಗದ ಮುಖ್ಯ ಕರ್ತವ್ಯವು. ಅಲ್ಲಿ ಹೊಸ ಹೊಸ ವಿಚಾರಗಳ ಪ್ರಯೋಗಾನು

ಭವಗಳಿಗೂ ತಕ್ಕ ಬದಲಾವಣೆಗಳಿಗೂ ಬೇಕಾದಷ್ಟು ಅನುಕೂಲತೆಯಿದೆ. ನಾ
ಶಿಕ್ಷಕರೂ ಟ್ರೇನಿಂಗ್ ಕಾಲೇಜಗಳ ಅಧ್ಯಾಪಕ ವರ್ಗವೂ ಹೊಸ ಹೊಸ ಶಿಕ್ಷ
ಪದ್ಧತಿಗಳ ಪ್ರಯೋಗ ಮಾಡುತ್ತಿದ್ದು ಶೀಘ್ರ ಪರಿಣಾಮಕಾರಿಯೂ ಉತ್ತಮ
ಆದ ಒಂದು ನೂತನ ಪದ್ಧತಿಯನ್ನು ಕಂಡು ಹಿಡಿಯಬೇಕು. ಶೈಕ್ಷಣಿಕ ಶೋ
ಗಳಿಗೆ ಇಲ್ಲಿ ಬೇಕಾದಷ್ಟು ಅವಕಾಶವೂ ಇದೆ; ಆಕರ್ಷಕ ಪರಿಸ್ಥಿತಿಯೂ ಇ
ಈ ಕೆಲಸಕ್ಕೆ ಬೇಕಾಗುವ ಬುದ್ಧಿ ಸಾಮರ್ಥ್ಯವು ಕೂಡ ನಮ್ಮಲ್ಲಿ ಇಲ್ಲವೆಂದ
ನಮಗೆ ಆ ಕೆಲಸವನ್ನು ಕೈಕೊಳ್ಳುವ ಮನಸ್ಸುಬೇಕು ; ಮತ್ತು ಅದನ್ನು ಬಿ
ಬಿಡದೆ ಸಾಗಿಸುವ ಮನಸ್ಥೈರ್ಯವೂ ಬೇಕು. ಬೆಲೆಯುಳ್ಳ ಉಪಕರಣಗಳಿಲ್ಲ
ಪ್ರಚಾರದಲ್ಲಿ ತರಲು ಸುಲಭವೂ ಕ್ಷಿಪ್ರ ಪರಿಣಾಮಕಾರಿಯೂ ಆದ ಶಿಕ್ಷ
ಕ್ರಮವನ್ನು ನಾವು ಬೇಗನೆ ಕಂಡು ಹಿಡಿಯೋಣ. ಇದರಿಂದ ಪ್ರಾಥಮಿ
ಶಿಕ್ಷಣದ ಕಾಲಾವಧಿಯನ್ನು ನಿಯಂತ್ರಣಮಾಡಿ ದೇಶವನ್ನೆಲ್ಲ ವ್ಯಾ
ನಿಂತ ನಿರಕ್ಷರತೆಯ ಭೂತನ ಉಚ್ಚಾಟನೆ ಮಾಡಲು ನಮಗೆ ತುಂಬ ಸಹಾ
ವಾಗುವದು.

(ಅನುವಾದಕರು—N. V. K.

ಇತಿಹಾಸಪಾಠದ ಒಂದು ಮಾದರಿಯ ಟಿಪ್ಪಣಿ

ಪ್ರೊ. ಆರ್. ಕೆ. ಲಕ್ಕುಂಡಿ, B.A. BT. S. T., College

ವರ್ಗ:— ೭ನೆಯ ಇಯತ್ತೆ. **ವಿಷಯ**— ಇತಿಹಾಸ.

ವೇಳೆ—೩೫ ನಿಮಿಷಗಳು.

ಉದ್ದೇಶ:— ಬಾಲಕರಿಗೆ ಬಾಳಾಜಿ ಬಾಜೀರಾಯನ ಚರಿತ್ರೆಯ
ಕಲಿಸುವದು.

ಉಪಕರಣಗಳು— ೨ ಚಿತ್ರಗಳು— (ಅ) ಬಾಳಾಜಿ ಬಾಜೀರ
(ಬ) ಮುದುಕನಾದ ಶಾಹೂ.

೨ ಕರಿಯು ಸುರಳಿಯು ಪಟಗಳು— (ಅ) ಶಾಹೂನು ಬಾಳಾಜಿ ಬಾ
ರಾಯನಿಗೆ ಪೇಶ್ವೆ ಪದಕ್ಕೆ ನಿಯಮಿಸುವ ಕಾಲದಲ್ಲಿ ಬರೆದ ಪತ್ರದ ನಕಲು.
ಬಾಳಾಜಿ ಬಾಜೀರಾಯನ ಅಳಿಕೆಗೆ ಸಂಬಂಧಪಟ್ಟ ಕೆಲವು ಮಾತುಗಳು. "ಬಾಳ
ಬಾಜೀರಾಯನ ಕಾಲಕ್ಕೆ ಮರಾಠಾ ರಾಜ್ಯವು ಘನತೆಯ ಶಿಖರಕ್ಕೆ ಮುಟ್ಟಿತ
ಆದರೆ....." (ಕ) ಅಭ್ಯಸನ.

ವಿಷಯ	ವಿಧಾನ
ಯ ಮೆಟ್ಟು. ಪ್ರಸ್ತಾವನೆ (ಅ) ಕ ವಿಷಯ) ೧ನೇ ಬಾಜೀರಾವ —ಳಂ ಅತನ ಆಕಾಂಕ್ಷೆಗಳು— ರಾಠಾ ರಾಜ್ಯವನ್ನು ವಿಸ್ತರಿಸು ೨. ದಿಲ್ಲಿಯ ಮೇಲೆ ಮರಾಠರ ಯನ್ನು ಹಚ್ಚುವದು.	ಮುಖ್ಯ ಮುಖ್ಯ ಪ್ರಶ್ನೆಗಳನ್ನು ಕೇಳಿ ಉಜಳಣಿ ಮಾಡುವದು— ಪ್ರಶ್ನೆ ೧. ಬಾಜೀರಾಯನು ಪೇಶ್ವೆ ಯಾದ ಕೂಡಲೆ, ಅತನ ಆಕಾಂಕ್ಷೆಗಳೇನೇನಿದ್ದವು ? ಪ್ರಶ್ನೆ ೨. ಅತನು ಮಾಡಿದ ಕೆಲಸ ಗಳೇನು ?
ನ ಉಪಾಯ:— ೧. ಸಯ್ಯದ ಮ್ಮಂದಿರ ವಿರುದ್ಧ ನಿಜಾಮನಿಗೆ ಯ ಮಾಡಿದ್ದು. ೨. ಕರ್ನಾಟಕದ ದಾಳಿ ಮಾಡಿದ್ದು. ೩. ನಿಜಾಮು ಯುದ್ಧ. ೪. ಮಾಳವ ದೇಶವನ್ನು ಮಾಡಿಕೊಂಡದ್ದು. ೫. ದಿಲ್ಲಿಯ ದಾಳಿ ಮಾಡಿದ್ದು. ೬. ವಸಯಿ ನ್ನು ಗೆದ್ದದ್ದು.	ಪ್ರಶ್ನೆ ೩. ಬಾಜೀರಾಯನು ಯಾವ ಸ್ಥಿತಿಯಲ್ಲಿ ಸತ್ತನು ? ೪. ಬಾಜೀರಾಯನು ಸಾಯುವಾಗ ಯಾವ ಕಾರ್ಯವು ಆಗದೆ ಉಳಿದಿತ್ತು?
ತನ ಮರಣ:— ರೇವೆಯಲ್ಲಿ ೧೭೪೦	
೪) ಉದ್ದೇಶ ಕಥನ:— ಮರಾಠಾ ದ ಇತಿಹಾಸದಲ್ಲಿ ಮುಂದೆ ಯಾವ ಘಟನೆಗಳಾದವೆಂಬುದನ್ನು ಈ ಕಲಿಯೋಣ.	
ಯ ಮೆಟ್ಟು. ವಿಷಯ ನಿರೂಪಣೆ. ತಕ್ಕ ವಿಷಯ:ಬಾಳಾಜಿ ಬಾಜಿರಾವ ಸಾಹೇಬ) ೧೭೪೦.	ಹೇಳುವದು:— ಪೇಶ್ವೆ ಪದವು ಬರಿ ದಾಗಿದ್ದದರಿಂದ ಯಾರನ್ನಾದರೂ ನಿಯಮಿಸಬೇಕಾಗಿತ್ತು.
ಶ್ವೆಪದಕ್ಕೆ ಅತನಿಗಿದ್ದ ಹಕ್ಕುಗಳು: ಪೇಶ್ವೆಯ ಹಿರಿಯ ಮಗನು. ಹೂನಿಗೂ ಅವನಿಗೂ ಪರಿಚಯ	ಪ್ರ:— ಬಾಜೀರಾಯನನ್ನು ಪೇಶ್ವೆ ಯ ಪದಕ್ಕೆ ನಿಯಮಿಸಬೇಕಾದರೆ ಇವನಿಗೂ ಸತ್ತ ಪೇಶ್ವೆಗೂ ಯಾವ ಯಾವ ಸಂಬಂಧವಿತ್ತು?

ಪ್ರ:— ಈ ಕಾಲಕ್ಕೆ ಬಂಗಾಲದ ಸಮೀಪ ಯಾವ ಮರಾಠಾ ಸರದಾರನಿರುತ್ತಿದ್ದನು? ಆ ಘಟನೆಯನ್ನು ಮನೋರಂಜಕವಾಗು ಪಂತೆ ಹೇಳುವದು.

ಆ ಮೇಲೆ, ಶಾಹೂನು ಪೇಶ್ವೆ ಮತ್ತು ಘೋಜಿ ಇವರ ಜಗಳವನ್ನು ಬಗೆಹರಿಸಿ ನು. ಪರಿಣಾಮ: ರಘೋಜಿಗೆ ಬಂಗಾಲ, ಹಾರ ಮತ್ತು ಓರಿಸಾದಲ್ಲಿ ಚೌಥವನ್ನೆ ಲು ಅವಕಾಶ ಶಿಕ್ಕಿತು.

೧೭೪೩ ರಘೋಜಿಯ ಸೇನಾಪತಿಯು ಂಗಾಲದ ಮೇಲೆ ಎರಡನೇ ಸಾರಿ ದಾಳಿ ನ್ನು ಮಾಡಿದನು.

೧೭೪೪ ರಘೋಜಿಯು ತನ್ನ ಮಗನಾದ ನಕೋಜಿಯನ್ನು ಬಂಗಾಲದ ವಿರುದ್ಧ ಳಿಸಿದನು. ಕಟಕವು ತಕ್ಕೊಳ್ಳಲ್ಪಟ್ಟಿತು; ಂಗಾಲದಲ್ಲಿ ಮೇಲಿಂದ ಮೇಲೆ ದಾಳಿಗಳು ಚಿಗರ ಕೊನೆಗೆ.

ಕಿನೆಯ ಮೆಟ್ಟು. ಪುನರಾವರ್ತನೆ ಕರಿಯ ಹಲಿಗೆಯ ಸಾರಾಂಶ

ಬಾಳಾಜಿ ಬಾಜೀರಾಯನ ಹಕ್ಕು

ಳು:— (೧) ಸತ್ತಪೇಶ್ವೆಯ ಹಿರಿಯಮಗ) ಶಾಹೂನ ಪರಿಚಯಸ್ಥ (೩) ಯುದ್ಧ ಲೆಯನ್ನು ಬಲ್ಲವನೂ ಕಲಿತವನೂ ದ್ದನು. (೪) ಪಂತಪ್ರಧಾನರ ಒಪ್ಪಿಗೆ.

ಅತನ ಬಗ್ಗೆ ಶಾಹೂನ ಇಚ್ಛೆ:— ಜೆಯ ಅಪೂರ್ಣವಾಗಿ ಉಳಿದ ಇಚ್ಛೆ ನ್ನು ಪೂರ್ಣಗೊಳಿಸುವದು.

ಎಲ್ಲ ವಿಷಯವನ್ನು ಮುಗಿಸಿ, ಅಥವಾ ಒಂದೊಂದು ಭಾಗವನ್ನು ತಕ್ಕೊಂಡು ಪ್ರಶ್ನೆಗಳ ಮೂಲಕ ಸಾರಾಂಶವನ್ನು ಬರೆಯುತ್ತ ಹೋಗಬಹುದು.

(೧) ಬಾಜೀರಾಯನಿಗೆ ಪೇಶ್ವೆ ಪದಕ್ಕೆ ಇದ್ದ ಹಕ್ಕುಗಳು ಯಾವ ಯಾವವು?

(೨) ಶಾಹೂನು ಇವನೇನು ಮಾಡ ಬೇಕೆಂದು ಇಚ್ಛಿಸಿದನು?

ಬಂಗಾಲದ ಘಟನೆ:— ರಘೋಜಿಯ ಸೇನಾಪತಿ ಮತ್ತು ಅಲಿವರ್ದಿಖಾನ ಪೇಶ್ವೆ, ಮೊಗಲ ಬಾದಶಹ ಮತ್ತು ಶಾಹೂ ರಘೋಜಿಯ ಮಗ ಮತ್ತು ಅಲಿವರ್ದಿಖಾನ ಕೊನೆಯ ಕರಾರುಗಳು.

(೩) ಬಂಗಾಲದಲ್ಲಿ ಆದ ಘಟನೆಯನ್ನು ಸ್ವಲ್ಪದರಲ್ಲಿ ವರ್ಣಿಸಿರಿ.

೪ನೆಯ ಮೆಟ್ಟು. ಅಭ್ಯಾಸ:— [ಕರಿಯ ಸುರಳಿಯ ಮೇಲೆ ಬರೆದ ವಿಷಯ] (೧) ಬಾಜೀರಾಯನು ಕ್ರಿ. ಶ. ೧೭೨೧ರಲ್ಲಿ ಹುಟ್ಟಿದನು, ಆದ್ದರಿಂದ ಆತನು ಪೇಶ್ವೆಪದಕ್ಕೆ .... ವರ್ಷದವನಿದ್ದನು. (೨) .... ಬಾಜೀರಾಯನು ಪೇಶ್ವೆಪದಕ್ಕೆ ಬರಬೇಕೆಂದು ಶಿಫಾರಸ ಮಾಡಿದರು. (೩) .... ಪೇಶ್ವೆ ಮತ್ತು ರಘೋಜಿಯವರ ಜಗಳವನ್ನು ಬಗೆಹರಿಸಿದನು. (೪) ೧೭೫೧ ರಲ್ಲಿ ಅಲಿವರ್ದಿಖಾನನು .... ಕೊಟ್ಟನು ಮತ್ತು ಬಂಗಾಲದ ಚೌಥವೆಂದು ..... ಕೊಡಲೊಪ್ಪಿದನು.

ವರ್ಗದ ಎದುರಿಗೆ ಹಾಕುವದು ಬಾಲಕರು ಬಿಟ್ಟ ಶಬ್ದಗಳನ್ನು ತುಂಬಬೇಕು.

೫ನೆಯ ಮೆಟ್ಟು. ಗೃಹಪಾಠ:—

ಬಂಗಾಲದ ಘಟನೆಯ ಮೇಲಿಂದ ಬಾಜೀರಾಯನಲ್ಲಿ ಪೇಶ್ವೆಪದಕ್ಕೆ ಒಪ್ಪುವಂಥ ಯಾವ ಯಾವ ಗುಣ ಗುಣಗಳಿದ್ದವೆಂದು ನಿಮಗೆ ಕಂಡು ಬರುತ್ತದೆ?

ಬಾಳಾಜಿ ಬಾಜೀರಾಯನನ್ನು ೧೭೪೦ ನೇ ಇಸ್ವಿಯ ಜೂನ ೨೦ ನೇ ತಾರೀಖಿನ ದಿವಸ, ಪೇಶ್ವೆ ಪದಕ್ಕೆ ನೇಮಿಸುವ ಕಾಲಕ್ಕೆ ಶಾಹೂನಿಂದ ಆತನಿಗೆ ಬಂದ ಪತ್ರ:—

"ನಿನ್ನ ತಂದೆಯಾದ ಬಾಜೀರಾಯನೂ ಅಜ್ಜನಾದ ಬಾಳಾಜಿಯೂ ಅತಿ ಪ್ರಾಮಾಣಿಕತನದಿಂದ ನನ್ನ ಸೇವೆಯನ್ನು ಮಾಡಿದರು. ಮತ್ತು ಅನೇಕ ಶೌರ್ಯದ ಕೆಲಸಗಳನ್ನು ಮಾಡಿ ತೋರಿಸಿದರು. ನಾನು ಬಾಜೀರಾಯನಿಗೆ ಪರ್ಷಿಯನ್ ಸರದಾರರನ್ನು ನಿರ್ಮೂಲನಮಾಡಿ ಮೊಗಲ ಬಾದುಶಹನ ಸತ್ಕೃಯು ನಡೆಯುವಂತೆ ಮಾಡ ಹೇಳಿದ್ದೆನು. ಆದರೆ ನನ್ನ ಇಚ್ಛೆಯನ್ನು ಪೂರೈಸುವ ಮೊದಲೇ ದುರ್ದೈವದಿಂದ ಅತನು ಸತ್ತನು. ಅತನ ಆಕಾಂಕ್ಷೆಯು ಮೊಗಲಬಾದಶಹನ ರಾಜ್ಯವನ್ನು ರಕ್ಷಿಸುವದೂ ಮತ್ತು ಅಖಿಲ ಹಿಂದುಸ್ತಾನವನ್ನು ಗೆಲ್ಲುವದೂ ಆಗಿತ್ತು. ನೀನು ಅಂಥ ಪೇಶ್ವೆಯ ಮಗನಿದ್ದಿಯೆ? ಆದ್ದರಿಂದ ಅತನ ಇಚ್ಛೆಯನ್ನು ತಿಳಿದು ನೋಡಿ ಕೆಲಸ ಮಾಡಬೇಕು. ನೀನು ನಿನ್ನ ರಾಹುತರನ್ನು ಅಟಕದ ಆಚೆಗೆ ಒಯ್ಯುವ ವ್ಯವಸ್ಥೆಯನ್ನು ಮಾಡು."

ಕೆಲವು ಸೂಚನೆಗಳು.

ವಿಷಯ ನಿರೂಪಣೆ: ಹೊಸದಾಗಿ ಹೇಳಿದ ಹೆಸರುಗಳನ್ನು ಕರಿಯ ಹಲಗೆಯ ಮೇಲೆ ಬರೆಯಬೇಕು. ಕೆಳಗಿನ ವರ್ಗಗಳಲ್ಲಿ ಚಿತ್ರದ ಸಹಾಯದಿಂದ ಹೆಸರುಗಳನ್ನು ಪರಿಚಯಮಾಡಿ ಕೊಡಬೇಕು.

ಪುನರಾವರ್ತನೆ: ಕಲಿಸತಕ್ಕ ವಿಷಯದ ಬೇರೆ ಬೇರೆ ವಿಭಾಗಗಳನ್ನು ಮುಂಡಿಸಿದ ಮೇಲೆ ಅವುಗಳ ತಾತ್ಪರ್ಯಿಕ ಸಾರಾಂಶವನ್ನು ಕರಿಯ ಹಲಗೆಯ ಮೇಲೆ ಬರೆಯಬೇಕು. ಭಾಗಗಳು ಸಣ್ಣವಿದ್ದರೆ ಒಟ್ಟಿನ ಸಾರಾಂಶವನ್ನು ಕೊನೆಗೆ ಬರೆಯಬೇಕು.

ಭಾಗವನ್ನು ಮುಂಡಿಸುವ ಮೊದಲು ಅದನ್ನು ಎದ್ದುಕಾಣುವಂತೆ ಬರೆಯ ಬೇಕು.

ವಿವೇಚನೆಯಾದ ಮೇಲೆ ಆ ಭಾಗವು ದೊಡ್ಡದಿದ್ದರೆ ಅದರ ಪುನರಾವರ್ತನೆ ಯನ್ನು ಮಾಡಬೇಕು. ಹಾಗೆ ಮಾಡುವ ಕಾಲಕ್ಕೆ ಟಿಪ್ಪಣಿಗಳನ್ನು ತಲೆಬರಹದ ಕೆಳಗೆ ಬರೆಯಬೇಕು. ಹೀಗೆ ಬರೆಯುವದರಿಂದ ಕಡೆಗೆ ಇಡಿಯ ಪಾಠದ ಸಾರಾಂಶ ವನ್ನು ಬರೆದಂತಾಗುವದು.

ಅಭ್ಯಸನ: ತೆರವಿದ್ದ ಸ್ಥಳಗಳನ್ನು ಕೊಟ್ಟ ವಿಧಾನದಲ್ಲಿ ತುಂಬುವದು. ಇಂಥ ಅಭ್ಯಸನಗಳು ಹುಡುಗರಲ್ಲಿ ಅಭಿರುಚಿಯನ್ನೂ ಹುಮ್ಮಸವನ್ನೂ ಹುಟ್ಟಿಸುವವು.

ಗೃಹಪಾಠ: ಇದು ಕಲಿತ ಪಾಠವನ್ನಷ್ಟೇ ಅವಲಂಬಿಸಿರದೆ ಮರುದಿವಸದ ಪಾಠಕ್ಕೆ ಸಹಾಯಕಾರಕವಾಗುವಂತಿರಬೇಕು.

ಬಾಲಕರ ವ್ಯಾಯಾಮಪಾಠ



ವ್ಯಾಯಾಮ ಪಾಠವನ್ನು ಕೊಡುವಾಗ ನಾವು ಬಾಲಕರ ಸ್ವಭಾವಗಳನ್ನೂ ಬೇಡಿಕೆಗಳನ್ನೂ ಅನುಲಕ್ಷಿಸಬೇಕು.

ಬಾಲಕರ ಶಾರೀರಿಕ-ಶಿಕ್ಷಣದ ಧ್ಯೇಯಗಳು

೧. ಚಪಲತೆ ಜಾಗರೂಕತೆ ಮತ್ತು ಸ್ವಾವಲಂಬನ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುವದು.

೨. ಶರೀರದ ಬೆಳೆವಣಿಗೆಯನ್ನು ಮತ್ತು ಆರೋಗ್ಯ ರಕ್ಷಣೆಯನ್ನು ಸಾಧಿಸುವದು.

೩. ಸಮಾಜದಲ್ಲಿ (ಸಂಘದಲ್ಲಿ) ಹೇಗೆ ವರ್ತಿಸಬೇಕೆಂಬುದನ್ನು ಕಲಿಸುವದು.

ಕಲಿಸುವ ಪದ್ಧತಿ

ಶಿಕ್ಷಕನು ಭಾಗವಹಿಸುವದು:—

ಸಣ್ಣ ಬಾಲಕರ ಚಟುವಟಿಕೆಗಳಲ್ಲಿಯೂ ಆಟಗಳಲ್ಲಿಯೂ ಶಿಕ್ಷಕನು ಭಾಗವಹಿಸುವದು ಅವಶ್ಯ. ಏಕೆಂದರೆ— ಬಾಲಕರು ಅನುಕರಣದಿಂದ ಕಲಿಯುವದು ಹೆಚ್ಚು. ಬಾಲಕರ ಆನಂದ ವೃತ್ತಿಗಳಲ್ಲಿ ತಾನು ಭಾಗವಹಿಸುವದರಿಂದ ಶಿಕ್ಷಕನು ನೇತೃತ್ವದಲ್ಲಿ ಬಾಲಕರು ಹುರುಪಿನಿಂದಲೂ ಚಟುವಟಿಕೆಯಿಂದಲೂ ಕೆಲಸಮಾಡುವರು. ವರ್ಗದಲ್ಲಿಯು ದೊಡ್ಡ ಹುಡುಗರನ್ನು ನಾಯಕರನ್ನಾಗಿಮಾಡಿ ಪಾಠ ಸಾಗಿಸಬೇಕು. ಆದರೂ ಶಿಕ್ಷಕನು ಆಟದಿಂದ ಅಲಿಪ್ತನಿದ್ದರೆ ಬಾಲಕರಲ್ಲಿ ಕಂಡು ಬರಬೇಕಾದ ಉತ್ಸುಕತೆಯು ಕಳೆಗುಂದುತ್ತದೆ. ಬಾಲಕರೊಡನೆ ಬಾಲಕನಾಗಿಯೇ ಶಿಕ್ಷಕನು ಆಡಬೇಕು.

ಅಪ್ಪಣೆಗಳು ಮತ್ತು ಸೀಟಿಯ ಉಪಯೋಗ

೫ರಿಂದ ೭-೮ ವರ್ಷದ ಚಿಕ್ಕ ಬಾಲಕರಿಂದ ಅಪ್ಪಣೆ ಪ್ರಕಾರ ವ್ಯಾಯಾಮ ಮಾಡಿಸುವದು ಕಷ್ಟ. ಅಪ್ಪಣೆಯ ಪ್ರಕಾರ ನಡೆಯುವ ಕೃತ್ರಿಮ ಅಂಗಸಾಧನೆಗಳಿಗೆ ಮಕ್ಕಳು ಬೇಸರಪಡುತ್ತಾರೆ. ಅವರಲ್ಲಿ ಸಮಾಧಾನವೂ ಕಡಿಮೆ. ಸ್ವೇಚ್ಛಾವೃತ್ತಿ ಮತ್ತು ಉತ್ಸುಕತೆ ಹೆಚ್ಚು, ಅಪ್ಪಣೆಗಳನ್ನು ಅನುಸರಿಸಿ ಕಾರ್ಯ ಮಾಡುವದನ್ನು ಬಾಲಕರು ಕಲಿಯುವದು ಉಚಿತ ಕಂಡರೂ ಅಪ್ಪಣೆಗಳನ್ನು ಮಿತ

ಯಿಂದಲೂ ಕ್ರಮವಾಗಿಯೂ ಉಪಯೋಗಿಸಬೇಕು. ಬಾಲಕರವರ್ಗಕ್ಕೂ ಗಿನೆಯ ಇಯತ್ತೆಯ ವಿದ್ಯಾರ್ಥಿಗಳಿಗೂ ಅಪ್ಪಣೆಗಳು ಅನವಶ್ಯಕವೆಂದು ತೋರುತ್ತದೆ. "ಹುಷಾರ್" ಸ್ಥಿತಿಯಲ್ಲಿ ನಿಲ್ಲಲಿಕ್ಕೆ ಹೇಳುವದು ತಪ್ಪು. ಹುಷಾರ್ ಆಗಿ ನಿಲ್ಲುವದು ಕೇವಲ ಶಾರೀರಿಕ ಕ್ರಿಯೆಯಷ್ಟೇ ಆಗಿರದೆ ಮಾನಸಿಕ ಕ್ರಿಯೆಯೂ ಆಗಿರುವದು. ಬಾಲಕರಲ್ಲಿ ಈ ಮಾನಸಿಕ ಕ್ರಮದ ಅಭಾವವು ಕಂಡುಬರುವದು. ಹುಷಾರ್ ಂದು ಅಪ್ಪಣೆ ಕೊಡುವದರ ಬದಲು "ಬಾಲಕರೇ ನೀಟಾಗಿನಿಲ್ಲಿರಿ;" "ಇದಿರು ೋಡಿರಿ;" "ಮೊಳಕಾಲು ಸರಳ ಇಡಿರಿ," "ಕಾಲು ಜೋಡಿಸಿರಿ" ("ಹಿಂಬಡ ೊಡಿಸಿರಿ);" "ಕೈ ತೊಡೆಗೆ ಹಚ್ಚಿರಿ," ಹೀಗೆಂದು ಬೋಧಿಸುವದರಿಂದ ಉದ್ದೇಶವು ಫಲವಾಗುತ್ತದೆ. ಇದನ್ನು ಕೂಡ ಕ್ವಚಿತ್ತಾಗಿ ಉಪಯೋಗಿಸಬೇಕು.

ವ್ಯಾಯಾಮ ಪಾಠದಲ್ಲಿ ಸೀಟಿಯು ಉಪಯೋಗವು ಅವಶ್ಯ. ಆಟ ಆಡು ಾಗಲಿತೂ ಸೀಟಿಯನ್ನು ಉಪಯೋಗಿಸಲೇಬೇಕು. ಆದರೆ ಬಾಲಕರ ಆಟದಲ್ಲಿ ನನ್ನು "ನಿಲ್ಲಿರಿ" ಎಂಬ ಒಂದೇ ಅರ್ಥದಲ್ಲಿ ಉಪಯೋಗಿಸಬೇಕು. ವ್ಯಾಯಾಮ ದಲಿಸುವ ವೇಳೆಯಲ್ಲಿಯೂ, ಅಘಾತ ಸಂಭವಿಸಬಹುದೆಂದು ಕಂಡುಬಂದ ಯೂ, ಸೀಟಿಯನ್ನು ಉಪಯೋಗಿಸಲೇಬೇಕು. ಇದಲ್ಲದೆ ಸೀಟಿಯ ಉಪ-ೋಗದಿಂದ ತಿಸ್ತಿನ ಕಲ್ಪನೆಯು ಬರುತ್ತದೆ.

ಸ್ವೇಚ್ಛಾಚಲನ

ಕೃತ್ರಿಮ ವ್ಯಾಯಾಮಕ್ಕಿಂತಲೂ ಸ್ವೇಚ್ಛಾಚಲನದಲ್ಲಿ ಬಾಲಕರ ಅಭಿರುಚಿ ಚ್ಚು. ಆದ್ದರಿಂದ ಕ್ರೀಡಾಂಗಣದಲ್ಲಿ ಬಾಲಕರು ಬೇಕಾದತ್ತ ಜಿಗಿದಾಡುವಂತೆ ಾಡಬೇಕು. ತಾಳಬದ್ಧ ವೇಳೆಯನ್ನು ಹಿಡಿದು ಅನುಕ್ರಮವಾಗಿ ಅಂಗಚಲಿಸುವ ್ಯಯೋಗಗಳನ್ನು ಮಾಡಲು ಹಚ್ಚಬಾರದು. ಸ್ವೇಚ್ಛಾಚಲನೆಯಲ್ಲಿಯೂ ಒಂದೊಂದು ಉದ್ದೇಶವನ್ನು ಸೂಚಿಸುತ್ತಿರಬೇಕು. ಉದಾಹರಣೆ–"ಮೇಲಕ್ಕೆ ಪುಟಿಯಿರಿ"! ತುದಿಗಾಲ ಮೇಲೆ ನಡೆಯಿರಿ" "ತಲೆ ಎತ್ತಿರಿ" "ಕೈಜೋರಿನಿಂದ ಬೀಸಿರಿ" ಮುಂತಾದವುಗಳು.

ಬಾಲಕರು ಅತ್ತಿತ್ತ ಜಿಗಿದಾಡುವದರಿಂದಲೂ, ಹಾರಾಡುವದರಿಂದಲೂ, ಓಡಾಡುವದರಿಂದಲೂ ಅವರ ಅವಯವಗಳು ಬಲಪಡುತ್ತವೆ. ಮೇಲಾಟವನ್ನು ಆಡುವದರಿಂದ ಧೈರ್ಯ, ಸಾಹಸ, ಸ್ವಾತಂತ್ರ್ಯವೃತ್ತಿಗಳು ಬೆಳೆಯುತ್ತವೆ.

ಪುನರಾವರ್ತನೆ

ಹಾಡಿದ್ದನ್ನೇ ಹಾಡುವದೂ, ಮಾಡಿದ್ದನ್ನೇ ಮಾಡುವದೂ ಬಾಲಕರಿಗೆ ೀರುತ್ತದೆ. ಮನೋರಂಜಕ ಆಟವನ್ನು ಪುನಃ ಪುನಃ ಆಡುವದರಲ್ಲಿಯೂ

ಬಾಲಕರು ಅಸಕ್ತಿಯನ್ನು ತೋರಿಸುತ್ತಾರೆ. ಪುನರಾವರ್ತನೆ ಇಲ್ಲದೆ ಹೋದ
ಅವರು ನಿರಾಶೆ ಹೊಂದುತ್ತಾರೆ. ಬಾಲಕರು ಪ್ರೀತಿಸುವ ಕೃತಿಗಳನ್ನೂ, ೇ
ಗಳನ್ನೂ ಅನೇಕಸಲ ಮಾಡಿಸಬೇಕು. ಅಂದರೆ ಎಲ್ಲ ವ್ಯಾಯಾಮ ಪಾಠಗ
ಒಂದೇ ತೆರನಾಗಿ ಇರಬೇಕಂದಲ್ಲ. ವೈವಿಧ್ಯತೆ ಇದ್ದರೆ ಬಾಲಕರಲ್ಲಿ ಹೆಚ
ಅಸಕ್ತಿ ಉಂಟಾಗುತ್ತದೆ.

ಅಂಗಸಾಧನೆಯನ್ನು ಬಹಳ ಸಾರೆ ಮಾಡಿಸುವದರಿಂದ ಸ್ನಾಯುಗ
ಬಲಪಡುವವೆಂಬದನ್ನು ಲಕ್ಷದಲ್ಲಿಡಬೇಕು. ಸಾಮಾನ್ಯವಾಗಿ ಒಂದು ಅ
ಸಾಧನೆಯನ್ನು ಕನಿಷ್ಟ ನಾಲ್ಕು ಸಾರೆಯಾದರೂ ಮಾಡಿಸಬೇಕು. ಪುನ
ವರ್ತನದಿಂದಲೇ ಕಲಿತ ಅಂಗಸಾಧನೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದ
ಸಾಧ್ಯ. ಚೆನ್ನಾಗಿ ಒಂದದ್ದನ್ನೇ ಪುನಃ ಪುನಃ ತೋರಿಸುವುದರಲ್ಲಿ ಹೆಮ್ಮೆ ಪಡುವ
ಸಹಜ ಪ್ರವೃತ್ತಿಯು.

ಕಲ್ಪನೆ

ಚಿಕ್ಕಮಕ್ಕಳು ಕವಿಗಳಂತೆ ಕಲ್ಪನಾ-ವಿಲಾಸಿಗಳು. ಶಾಲೆಯಲ್ಲಿ ಕಲಿಯು
ಕಥೆ, ಕವಿತೆ, ನಾಟಕ ಮುಂತಾದವುಗಳಲ್ಲಿ ಊಹೆ ಮತ್ತು ನಟನೆ ಈ ಪ್ರವೃತ್ತಿಗಳ
ಅನುವು ದೊರೆಯುವದು. ಸಾಭಿನಯ ಗೀತೆಗಳಲ್ಲಿಯೂ ಹಾಡು ಆಟಗಳಲ್ಲಿಯ
ನಟನೆ ಕಲ್ಪನೆ ಇವು ಪೋಷಣೆ ಹೊಂದುತ್ತವೆ. ಆದರೆ ಇಂಥ ಪ್ರಸಂಗಗಳ
ವ್ಯಾಯಾಮ ಮಾಡಿಸುವವೇ ಮುಖ್ಯ ಧ್ಯೇಯವೆಂಬುದನ್ನು ಮರೆಯಕೂಡದ
ಶರೀರದ ಅವಯವಗಳಿಗೆ ಚೆನ್ನಾಗಿ ದುಡಿತ ಬೀಳುವ ಕಥೆಯ ಆಟಗಳನ್ನು ಆಡಿ
ಬೇಕು. ಇದರಂತೆ ಪಶುಗಳ ಚಲನ ಮತ್ತು ಯಂತ್ರಗಳ ಚಲನಗಳನ
ಅನುಕರಿಸುವ ಕೃತಿಗಳನ್ನು ಬಾಲಕರ ಕಡೆಯಿಂದ ಮಾಡಿಸಬೇಕು. ಆನೆ, ಕರ
ಮಂಗ, ಮೊಲ, ವಿಮಾನ, ಮೋಟಾರ, ಉಗೆಒಂಡಿ, ಕಾಲಗಾಡಿ, ಮುಂತಾದ
ಗಳ ಅನುಕರಣವು ಬಾಲಕರಿಗೆ ರುಚಿಸುವದು.

ಸಂಗೀತ

ಸಂಗೀತದ ಆಟಗಳನ್ನೂ ಕುಣಿಯುವದನ್ನೂ ಬಾಲಕರು ಅತ್ಯಂತ ಪ್ರೀ
ಸುತ್ತಾರೆ. ಕೆಲವು ಸಾರೆ ಕೊಳಲು, ರಾಗದ ಪೆಟ್ಟಿಗೆ ಇವನ್ನು ಹಾಡುಗಳನ
ಓದುವಾಗಲೂ ಕೂಡುಮಾಡುವಾಗಲೂ ಜಿಗಿದಾಡುವಾಗಲೂ ಉಪಯೋಗಿ
ಬೇಕು. ಬ್ಯಾಂಡ, ತುತೂರಿ ಮತ್ತು ತಾಳ ಇವು ಆಡುವ ಬಾಲಕರಲ್ಲಿ ಸ್ಫೂರ್ತಿ
ಯನ್ನು ತುಂಬುತ್ತವೆ. ಅಂತೆಯೇ ದಂಡಿನ ಸಿಪಾಯಿಗಳು ಬ್ಯಾಂಡನ್ನು ಉ
ಯೋಗಿಸುತ್ತಾರೆ. ಟೊಪ್ಪಿಗೆಆಟ ಮೊದಲಾದವುಗಳು ರಾಗಸಮೇತವಾ
ಇದ್ದರೆ ಬಾಲಕರು ಅವುಗಳನ್ನು ಬಹಳ ಪ್ರೀತಿಸುತ್ತಾರೆ.

ಆರಂಭದ ಚಟುವಟಿಕೆ

ವ್ಯಾಯಾಮ ಪಾಠವು ಹುರುಪಿನಿಂದಲೂ ಚಪಲತೆಯಿಂದಲೂ ಉತ್ಸಾಹ
ದಲೂ ಆರಂಭವಾಗಬೇಕು. ಇದು ಸ್ವೇಚ್ಛೆಯ ಓಡಾಟದಿಂದ ಸಾಧ್ಯವಾಗು
ವೆ. ಆಟವೂ ಕೂಡ ಇದರಂತೆ ಉತ್ಸಾಹದಿಂದ ಸಾಗಬೇಕು. ಪಾಠದ
ಎಕ್ಕಾಯದಲ್ಲಿಯೂ ಬಾಲಕರು ಆನಂದವನ್ನು ವ್ಯಕ್ತಪಡಿಸಬೇಕು. ಆರಂಭದ
ವ್ಯಾಯಾಮವು ಪ್ರತಿಸಲ ಒಂದೇತೆರನಾಗಿ ಇರಕೂಡದು. ಅದು ಬಾಲಕರನ್ನು
ಸರಗೊಳಿಸುವದು. ಶಿಕ್ಷಕನು ಹೊಸ ಹೊಸ ಯೋಜನೆಗಳನ್ನು ಮಾಡಿ
ಳ್ಳಬೇಕು.

ಅಭ್ಯಾಸಪಾಠದಕಾಲಕ್ಕೆ ಕೋಣೆಯಲ್ಲಿ ಕುಳಿತಿರುವದರಿಂದ ಬಾಲಕರಲ್ಲಿ
ಜಡ್ಯವೂ ಆಲಸ್ಯವೂ ಒಂದಿರುತ್ತದೆ. ಇದನ್ನು ಕಳೆಯಲಿಕ್ಕೆ ದೇಹದ ಚಟುವಟಿ-
ಯು ಬೇಕಾಗುತ್ತದೆ. ವ್ಯಾಯಾಮದಿಂದ ಸ್ನಾಯುಗಳಿಗೆ ರಕ್ತ ಪೂರೈಸ
ಕಾದರೆ ರಕ್ತಾಭಿಸರಣವು ತೀವ್ರ ನಡೆಯಬೇಕಾಗುತ್ತದೆ. ಉಸುರಾಡಿಸುವದು
ಗದಿಂದ ಸಾಗಬೇಕಾಗುತ್ತದೆ. ಇದಕ್ಕಾಗಿ ವ್ಯಾಯಾಮ ಪಾಠದ ಆರಂಭದಲ್ಲಿ
ಲಕರನ್ನು ಚೇತರಿಸುವ ಚಟುವಟಿಕೆಗಳು ಬೇಕು. ಇದಲ್ಲದೆ ಅಭ್ಯಾಸದಲ್ಲಿ
ಟ್ಟಿರುವ ಮನಸ್ಸನ್ನೂ ವ್ಯಾಯಾಮದ ಕಡೆಗೆ ಹೊರಳಿಸಬೇಕಾಗಿದೆ. ಆದ್ದರಿಂದ
ಪಾಟದಲ್ಲಿ ಮೊದಲಿನ ಅಭ್ಯಾಸವನ್ನು ಬಿಟ್ಟು ವ್ಯಾಯಾಮಕ್ಕೆ ಸಜ್ಜಾಗುತ್ತಾರೆ.
ಲಕರು ಯಾವಾಗಲೂ ಮೂಗಿನಿಂದಲೇ ಉಸುರಾಡಿಸಬೇಕೆಂದು ಒತ್ತಿ
ಳಬೇಕು. ಆರಂಭದ ಚಟುವಟಿಕೆಗಳು ೩ ನಿಮಿಷ ನಡೆಯಬೇಕು.

ಟಿ—ಆಟವೆಂದರೆ ಬಾಲಕರಿಗೆ ಹುರುಪು. ಆಟಕ್ಕೆ ಕರೆದ ಕೂಡಲೇ ಜಿಗಿಯುತ್ತ
ುತ್ತ ಬರುವರು. ಆಟದಲ್ಲಿ ಆಸಕ್ತಿಯನ್ನು ತೋರಿಸಿದಷ್ಟು ಇನ್ನಿತರ ಕೃತ್ರಿಮ
ಸಾಧನೆಯಲ್ಲಿ ತೋರಿಸುವದಿಲ್ಲ. ಆಟದಲ್ಲಿ ಮನೋರಂಜನೆಯಾಗುವದಲ್ಲದೆ
ವ್ಯಾಯಾಮವೂ ಆಗುವದು. ಸಾಂಘಿಕ ಜೀವನವನ್ನೂ ಸ್ವನಿಯಂತ್ರಿತ
ಾಜದಾಡಳಿತೆಯನ್ನೂ ಕಲಿಯುವರು. ಆಟದ ಮೇಳದ ಪದ್ಧತಿ ಅಥವಾ ಗೃಹ
ತಿಯನ್ನೂ ಅನುಸರಿಸುವಲ್ಲಿ ಸಮಾಜ ನೀತಿಯ ಶಿಕ್ಷಣವು ಸಹಜವಾಗಿಯೇ
ವದು. ಸಾತ್ವಿಕ ಸ್ಪರ್ಧೆಯನ್ನು ಏರ್ಪಾಡು ಮಾಡುವದರಿಂದ ಯುದ್ಧ
ವೃತ್ತಿಯನ್ನು ಯೋಗ್ಯಮಾರ್ಗದಲ್ಲಿ ಹರಿಯಗೊಟ್ಟಂತಾಗುವದು. ಆದ್ದರಿಂದ
ದ ಮಹತ್ವವು ಬಹಳ. ವ್ಯಾಯಾಮ ಪಾಠದಲ್ಲಿ ಆಟಕ್ಕೆ ಪ್ರಾಧಾನ್ಯ ಕೊಡಬೇಕು.
ದ ವೇಳೆಯ ಅರ್ಧಭಾಗವನ್ನು ಆಟಕ್ಕಾಗಿಯೇ ಉಪಯೋಗಿಸಬೇಕು.
ಕೆಲವು ಆಟದ ಪೂರ್ಣ ಪಾಠಗಳೇ ಇರಬೇಕು. ಬಹಳ ನಿಯಮಗಳುಳ್ಳ
ಗಳನ್ನು ಮುಖ್ಯವಾಗಿ ಬಾಲಕರ ವರ್ಗಕ್ಕೆ ಆಡಿಸಬಾರದು.

ವರ್ಗವ್ಯೂಹ

ವ್ಯಾಯಾಮಕಾಲದಲ್ಲಿ ಪ್ರತಿಯೊಬ್ಬ ಬಾಲಕನಿಗೆ ಸಾಕಷ್ಟು ಸ್ಥಳವನ್ನು ಕೊಡುವದು ಅತ್ಯವಶ್ಯ. ಆದ್ದರಿಂದ ಅಂಗಸಾಧನೆಯನ್ನು ಮಾಡಿಸುವಾಗ್ಗೆ ಎಷ್ಟು ಸ್ಥಳವನ್ನು ಉಪಯೋಗಿಸಬೇಕು ಎಂಬ ಕಲ್ಪನೆಯನ್ನು ಶಿಕ್ಷಕನು ಮೊದಲೇ ಯೋಚಿಸಬೇಕು. ವರ್ಗವ್ಯೂಹವು (ಆಕೃತಿ) ಆಟದ ತರಹವನ್ನು ಅವಲಂಬಿಸಿರುತ್ತದೆ. (೧) ಸ್ವೇಚ್ಛೆಯಿಂದ ಒಬ್ಬರನ್ನೊಬ್ಬರು ತಡೆಹಾಯದಂತೆ ಅಡ್ಡಾಡುವದು (೨) ಸಾಲಾಗಿ ಎಡಬಲ ಪಾರ್ಶ್ವಹಿಡಿದು ನಿಲ್ಲುವದು. (೩) ಸಾಲಾಗಿ ಒಬ್ಬರ ಹಿಂದೆ ಒಬ್ಬರು ಒಂದು ತೋಳಿನ ಅಂತರ ಬಿಟ್ಟು ನಿಲ್ಲುವದು. (೪) ಗೋಲಾಕಾರವಾಗಿ ನಿಲ್ಲುವದು. (೫) ಎರಡು ಅಥವಾ ನಾಲ್ಕು ಸಾಲಾಗಿ ವಿಸ್ತರಿಸಿ ನಿಲ್ಲುವದು ಹೀಗೆ ಅನೇಕ ಪ್ರಕಾರವಾಗಿ ಬಾಲಕರನ್ನು ಕಲಿಸಬೇಕಾದ ವ್ಯಾಯಾಮಕ್ಕೆ ಅನುಕೂಲವಾಗುವ ಆಕೃತಿಯಲ್ಲಿ ನಿಲ್ಲಿಸಬೇಕು.

ವೇಳೆ ಮತ್ತು ಬಿಡುವು

ಬಾಲಕ ವರ್ಗಕ್ಕೆ ವ್ಯಾಯಾಮ ಪಾಠದ ವೇಳೆಯು ೧೫–೨೦ ನಿಮಿಷ ಇರಬೇಕು. ದೊಡ್ಡ ಹುಡುಗರಿಗೆ ೩೦–೪೦ ನಿಮಿಟಿನ ಪಾಠವಿರಬೇಕು. ಮುಂಜಾನೆ ೯ ಗಂಟೆಯ ಪೂರ್ವದಲ್ಲಿಯೂ ಮಧ್ಯಾಹ್ನ ೩ ಗಂಟೆಯ ನಂತರವೂ ವ್ಯಾಯಾಮ ಮಾಡುವದು ಯೋಗ್ಯವು. ವ್ಯಾಯಾಮವನ್ನು ಬಿಟ್ಟುಬಿಡದೆ ಸಾಗಿಸಿದರೆ ಬಾಲಕರು ದಣಿಯುವರು. ಆದ್ದರಿಂದ ಪಾಠದ ನಡುನಡುವೆ ವಿಶ್ರಾಂತಿಯೂ ಬಿಡುವು ಬೇಕೆಂದು ಬಹಳ ಜನರು ಅಭಿಪ್ರಾಯಪಡುತ್ತಾರೆ. ಇದು ಸಮಂಜಸ ಕಂಡರೂ ಸಾಠವು ತುಂಡು ತುಂಡಾಗಿ ಕಾಣದೆ ಒಂದೇ ಪ್ರವಾಹವಾಗಿ ಸಾಗಬೇಕು. ಚಟುವಟಿಕೆಯ ಬದಲಾವಣೆಯೇ ಒಂದು ತರದ ವಿಶ್ರಾಂತಿ. ಇದಲ್ಲದೆ ಬುದ್ಧಿಪೂರ್ವಕ ಕೊಟ್ಟ ಬಿಡುವಿನಲ್ಲಿಯೂ ಬಾಲಕರನ್ನು ಸುಮ್ಮನೆ ಕುಳಿತುಕೊಳ್ಳಿರೆಂದು ಹೇಳುವದು ತಪ್ಪು. ಆಟದ ಬೇರೆ ಬೇರೆ ಭಾಗಗಳಿಗೂ ಬಿಡುವುಗಳಿಗೂ ಒಂದು ಸಹಜ ಸಂಬಂಧವಿರಬೇಕು. ಬಿಡುವಿನಲ್ಲಿ ಆಟದ ವಿವೇಚನೆಯನ್ನಾಗಲಿ ವಿನೋದವನ್ನಾಗಲಿ ಮಾಡಬೇಕು. ಹುಡುಗರಿಂದ ಕೆಲವು ವಿನೋದದ ಮಾತುಗಳನ್ನು ಹೇಳಿಸಬೇಕು.

V. K. Javali,
B.A. (Hon.) B.T., Dip. P. Ed

ಮರಣದಾವರಣದಲ್ಲಿ



ಕವೀಂದ್ರ ರವೀಂದ್ರರು ಮರಣದಾವರಣದಲ್ಲಿ ಪ್ರತ್ಯಕ್ಷ ಸಿಲುಕಿ ಮೃತ್ಯುಶಯ್ಯೆಯಲ್ಲಿದ್ದಾಗ
ಹಾಡಿದ ಒಂದು ಹಾಡಿನ ಭಾವವೀಬಗೆಯಾಗಿದೆ.]

ಮರಣ ಭೀತಿಯು ಕಾಳರಾತ್ರಿಯು ।
ತಿರುತಿರುಗಿ ಬರಲೆನ್ನ ಬಾಗಿಲಿ- ।
ಗರಿತೆನದರಾಯುಧವ-ಭೀಕರ ನೃಶ್ಯವನು ಕಂಡೆ ॥

ಕರುಳಕೊರೆವತಿನೋವಿನಂಜಿಕೆ ।
ಕೊರಗಿದಾನನ ಸುಗಿದ ಭ್ರೂಕುಟಿ ।
ಕೊರಳ ಬಿಗಿಯುವ ದುಃಖದಿಂಗಿತಪರಿತೆ ನಾನಿಂತು ॥ ೧ ॥

" ಧರಿಸಿ ಭೀಕರ ಮುಖದ ಕವಚವ ।
ಚರಿಸಿ ನರರಿಗೆ ಕಪಟನಾಟಕ- ।
ದರಿವನೀಯದ ಗಾಢ ಕಳ್ತಲೆಯುದರ ಭೂಮಿಕೆಯು ॥

* * * *

ಸೋಲು ನಿಷ್ಫಲವಾಗಿ ಬಂದಿತು ।
ಸೋಲುಗೆಲುವಿದು ಮಾಯೆಯಾಟವು ।
ಬಾಲ್ಯದಿಂ ಬಿಡದಪ್ಪಿಕೊಂಡಿದೆ ಭೂತದೀ ಭವನೆ " ॥ ೨ ॥

ಮರಣ ಭೀತಿಯು ಕಪಟಜಾಲವ ।
ನರಿಯಲಸದಳವದರ ರಚನೆಯು ।
ಪರಿಪರಿಯು ಸುಳಿದಾಟ ನಟನೆಯು ಚಲನವಲನಗಳ ॥

ಮರಣದೇವತೆ ಚತುರತನದಲಿ ।
ವಿರಚಿಸಿರುವೀ ಕೃತಿಯು ಲೋಕದೊ ।
ಳರಿದು ಕಾರಿರುಳಂಧಕಾರದ ಗೂಢ ರಚನೆಯದು ॥ ೩ ॥

* * * *

ಮರಣ ದಾವರಣಕ್ಕೆ ಸಿಲುಕಿದ ।
ಹರಣದುಸ್ಮಳಕೇನು ಕಾರಣ ? ।
ನರನ ಮನಸಿನ ದುರ್ಬಲತೆಯೇ ಮುಖ್ಯಕಾರಣವು ॥

ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು

(ಕಳೆದ ಜುಲೈ ಸಂಚಿಕೆಯಿಂದ ಮುಂದೆ ಸಾಗಿದ್ದು)

ಟಿಪ್ಪಣಿ— ಪ್ರಾ. ಪ್ರಾಥಮಿಕ, ಮಾ. ಮಾಧ್ಯಮಿಕ, ಟ್ರೇ. ಟ್ರೇನಿಂಗ್, ಶಿ. ಶಿಕ್ಷಕ, ವಿ. ವಿದ್ಯಾರ್ಥಿ, ವಾ. ವಾಚನಾಲಯ, ಶಾ. ಶಾಲೆ,

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೮೦	**ಸುಲಭವ್ಯಾಕರಣ** ೬ನೆಯ ಆವೃತ್ತಿಯು ೧೯೩೭	ಏ. ಆರ್ ಶಿವನಾಗಪ್ಪ, ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ	೦–೪–೦	ಪ್ರಾ. ಶಾ. ಪಠ್ಯಪುಸ್ತಕ
೮೧	**ಕರ್ನಾಟಕ ಇತಿಹಾಸ** ೮ನೆಯ ಆವೃತ್ತಿ ೧೯೪೦	ಸದರ	೦–೮–೦	ಸದರ
೮೨	**ಹಿಂದುಸ್ತಾನದಲ್ಲಿ ಮುಸಲ್ಮಾನರ ಆಳಿಕೆ** ೧೯೩೯ರ ಆ. ಬುಕ್ ಕಮೀಟಿಯವರು ಸೂಚಿಸಿದಂತೆ ತಿದ್ದಬೇಕು.	ಸದರ	೦–೮–೦	ಸದರ
೮೩	**ಡೊಣ್ಣೆವರಸೆ** ಮೊದಲನೆಯ ಆವೃತ್ತಿಯು	ಎಲ್.ಎಸ್. ಕುಬಸದ, ಡ್ರಿಲ್ ಮತ್ತು ಜಿಮ್ನಾಸ್ಟಿಕ್ ಇನ್‌ಸ್ಪೆಕ್ಟರ	೦-೧–೦	ಪ್ರಾ.ಮಾ.ಟ್ರೇ.ಶಿ.ವಾ.
೮೪	**ಕವಾಯಿತು ಭಾಗ ೨** ಮೊದಲನೆಯ ಆವೃತ್ತಿ ೧೯೩೭	ಲ್ಯಾಮಿಂಗಟನ್ ಹಾಯಸ್ಕೂಲ ಹುಬ್ಬಳ್ಳಿ ಸದರ	೦–೧–೦	ಸದರ
		ಸದರ	೦–೨–೦	ಸದರ

೮೭	ಜೋಜಿಲೆ ಮೊ. ಆ. ೧೯೩೭	ಸದರ	೦-೧-೦	ಸದರ
೮೮	ಹೈದರಾಲಿ ೧೯೪೧ರ ಆವೃತ್ತಿಯು	ಗುರುದೇವಾರಾಧ್ಯ ಮದನಹಳ್ಳಿಮಠ ಕೊಲ್ಲೇಸಪೇಟೆ	೦-೧೦-೦	ಪ್ರಾ.ಮಾ.ಟ್ರೇ.ವಿ.ವಾ.
೮೯	ಜಯಚಾಮರಾಜೇಂದ್ರ ಶತಕ ೧೯೪೧ರ ಆವೃತ್ತಿಯು	ಸದರ		ಪ್ರಾ.ಮಾ.ಟ್ರೇ.ಶಿ.ವಾ.
೯೦	ಗೃಹ ವಿಜ್ಞಾನ ಶಾಸ್ತ್ರ ೧೯೪೧ರ ಆವೃತ್ತಿಯು	ಪ. ಚಿ. ಶಾಬಾದಿಮಠ ಬುಕ್‌ಡಿಪೊ ಗದಗ ಸಿಟಿ.	೦-೮-೦	ಪ್ರಾ. ಶಾ. ವಿ. ವಾ.
೯೧	ಮೈಸೂರಿನ ಆಳಿದ ಮಹಾಸ್ವಾಮಿಯವರ ರಾಜ ನಾಲ್ವಡಿ ಕೃಷ್ಣರಾಜ ಒಡೆಯರು ೧೯೪೧ರ ಆವೃತ್ತಿಯು	ಎಮ್. ಶ್ರೀಂಗಯ್ಯ ನಾರಾಯಣ ಕಾಟೇಜ ಕೃಷ್ಣ ಮೊಹಲ್ಲಾ ಮೈಸೂರು	೦-೧೦-೦	ಪ್ರಾ.ಮಾ.ಟ್ರೇ.ವಿ.ವಾ.
೯೨	ಜ್ಞಾನೋಪಾಸನೆ ಮೊ. ಆ. ೧೯೪೧	ಬಿ. ಜಿ. ಅವಧಾನಿ ಪೇಸಾಯಿ ಓಣಿ ಧಾರವಾಡ	ಸಾದಾ ೧-೮-೦ ಉತ್ತಮ ೨-೦-೦	ಸದರ
೯೩	ಮಗಳಿಗೆ ತಂದೆಯ ಓಲೆಗಳು ೧೯೪೧ರ ಆವೃತ್ತಿ	ಮಂಗಳೂರ ಗೋವಿಂದರಾಯರು ಸಾಹಿತ್ಯಭಾಂಡಾರ ಹುಬ್ಬಳ್ಳಿ.	ಸಾದಾ ೧-೦-೦ ಉತ್ತಮ ೧-೮-೦	ಸದರ

ಅ.ನಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೯೪	**ನಾಡದೇವಿಯರು** ೧೯೪೦ ರ ಆವೃತ್ತಿಯು	ಗಿರಿಜಾಬಾಯಿ ಇಚ್ಛಂಗಿಮಠ ಕಾಮನಕಟ್ಟಿ ಚೌಕಿ ಧಾರವಾಡ	೦-೧೦-೦	ಪ್ರಾ.ಮಾ.ಟ್ರೇ.ಶಿ.ವಾ.
೯೫	**ಬ್ಯಾಂಕುಗಳು** ಮತ್ತು **ಅವುಗಳ ವ್ಯವಹಾರವು** ಮೊ. ಆ. ೧೯೪೦	ಎಸ್. ವಿ. ಅಡ್ಡಣಗಿ ವಕೀಲರು ಬೆಳಗಾಂವಿ	೧-೦-೦	ಸದರ
೯೬	**ಆರೋಗ್ಯದೀಪ ಮೊದಲನೆಯ ಪುಸ್ತಕ** ೧ನೆಯ ಆ. ೧೯೪೦	ಕರ್ನಾಟಕ ಪಬ್ಲಿಶಿಂಗ ಹೌಸ್ ಮುಂಬಯಿ	೦-೧೦-೦	ಪ್ರಾ. ಶಾ. ಮೇಲಿನ ಇಯತ್ತೆಗಳಲ್ಲಿ ಪಠ್ಯಪುಸ್ತಕ ಮಾ. ಟ್ರೇ. ಪಠ್ಯಪುಸ್ತಕ
೯೭	**ಗಣಿತ ಶಿಕ್ಷಕ** ಐದನೆಯ ಆವೃತ್ತಿ ೧೯೪೧	ಬ. ದು. ಹಿರೇಮಠ ಶಿಕ್ಷಕ ಮ್ಯೂ. ವಿಜಾಪುರ	೧-೦-೦	ಪ್ರಾ. ಮಾ. ಟ್ರೇ. ಪಠ್ಯಪುಸ್ತಕ
೯೮	**ಗದ್ಯಪದ್ಯಾವಲಿ** ಮೂರನೆಯ ಆವೃತ್ತಿ ೧೯೪೧	ವಿದ್ಯಾವಿಲಾಸ ಬುಕ್‌ಡಿಪೋ ಗದಗ	೦-೧೫-೦	ಮಾ. ಟ್ರೇ. ಪಠ್ಯಪುಸ್ತಕ
೯೯	**ಧಾರವಾಡ ಜಿಲ್ಲೆಯ ಭೂಗೋಲು** ೧೯೪೧ ರ ಆವೃತ್ತಿ	ಎಸ್. ಬಿ. ಪಾವಟೆ ಆನಂದ ಬುಕ್‌ಡಿಪೋ ಹುಬ್ಬಳ್ಳಿ.	೦-೩-೦	ಪ್ರಾ. ಶಿ. ವಾ.
೧೦೦	**ಮರಾಠಾ ಕಾಲದ ಇತಿಹಾಸ** ೧ನೆಯ ಆ. ೧೯೪೧.	ಎಮ್. ಎಮ್. ಪೈ ಬ್ರದರ್ಸ ಕುಮಠಾ	೦-೬-೬	ಮಾ. ಏ. ವಾ.

ಪ್ರಕಟನೆ ೧

ಕನ್ನಡ "ವರ್ಧ ಪ್ರಾಯೋಜ" ಪರೀಕ್ಷೆ ೧೯೪೨.

೧೯೪೧ ನೆಯ ಇಸ್ವಿಯ ಮೇ-ಜೂನ್ ತಿಂಗಳುಗಳ ಸಂಯುಕ್ತ ಸಂಚಿಕೆಯ ನೆಯ ಪುಟದಲ್ಲಿ ಪ್ರಕಟವಾದ 'ವರ್ಧ ಪ್ರಾಯೋಜ' ಪರೀಕ್ಷೆಗೆ ಸಂಬಂಧಿಸಿದ ಪ್ರಕಟನೆಯನ್ನು ನೋಡಿರಿ—ಅದರಲ್ಲಿ ೧೦೦ ಗುಣಗಳುಳ್ಳ ಎರಡನೆಯ ಕಾಗದದಲ್ಲಿ ಕನ್ನಡ ಬಾವುಟ ದಲ್ಲಿಯ ಕವಿತಾ ಭಾಗ' ಎಂಬ ಒಂದು ವಿಭಾಗವು ಮಾವೇಶವಾಗಿದ್ದು ಅದಕ್ಕೆ ೩೦ ಗುಣಗಳು ಇರುವವು. ಆ ಕವಿತಾ ಭಾಗವು ಾವುದೆಂಬುದನ್ನು ಕೆಳಗೆ ಕೊಟ್ಟ ವಿವರಣೆಯಿಂದ ತಿಳಿಯಕೊಳ್ಳಬೇಕು.

೧. ರಾಷ್ಟ್ರಕೂಟ ರಾಜನ ಶಾಸನ.	ಪುಟ ೫
೨. ಕನ್ನಡನಾಡಿನ ಜೆಲುವು	ಪುಟ ೧೭–೨೦ ಪೂರ್ಣ
೩. ಬಸವಣ್ಣನವರ ಗುಣ	ಪುಟ ೪೫
೪. ಮಹಾದೇವಿಯಕ್ಕ	ಪುಟ ೪೬–೪೯ ಪೂರ್ಣ
೫. ಕನಕದಾಸರು	ಪುಟ ೫೯–೬೧ ಪೂರ್ಣ
೬. ಅರುಣೋದಯ	ಪುಟ ೯೭
೭. ಕಾರ್ಗಾಲದ ವೈಭವ	ಪುಟ ೧೦೦
೮. ಕೊಡಗು	ಪುಟ ೧೦೨
೯. ತೆಂಕಣ ಗಾಳಿಯಾಟ	ಪುಟ ೧೦೬
೧೦. ಕುಮಾರವ್ಯಾಸ	ಪುಟ ೧೨೧
೧೧. ಬೇಲೂರಿನ ಶಿಲಾಬಾಲಿಕೆಯರು	ಪುಟ ೧೩೬

ಈ ಕವಿತಾ ವಿಭಾಗಗಳನ್ನು ಸಂಪೂರ್ಣ ಅಭ್ಯಾಸಮಾಡಬೇಕು, ಮತ್ತು ಮೂರನೆಯ ಕಾಗದದ ವಿಷಯಗಳಲ್ಲಿ ೨೫ ಗುಣಗಳ 'ಹನ್ನೆರಡನೆಯ ತಮಾನದ ಕನ್ನಡ ಸಾಹಿತ್ಯ ಪರಿಚಯ' ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ನಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

Training College for men
Dharwar.
1st September 1941.

H. S. Torgal
Principal.

ಪ್ರಕಟನೆ ೨

ಅಸ್ಪೃಶ್ಯತಾ ನಿವಾರಣೆಯೂ ಕ್ರಮಿಕ ಪುಸ್ತಕಗಳೂ

ಕನ್ನಡ ಪ್ರಾಥಮಿಕ ಶಾಲೆಗಳ ಬಾಲಕ ಬಾಲಿಕೆಯರ ವಾಚನಕ್ಕಾಗಿ ಬರೆದಿರುವ ವಾಚನ ಪುಸ್ತಕಗಳಲ್ಲಿ ಅಸ್ಪೃಶ್ಯತಾನಿವಾರಣೆಗೆ ಸಂಬಂಧಿಸಿದ ಕೆಲವು ಸಾಮಾನ್ಯ ವಿಚಾರಗಳನ್ನೊಳಗೊಂಡ ಪಾಠಗಳನ್ನು ಸೇರಿಸುವದು ಆವಶ್ಯಕವೆಂದು ಮೈ॥ ಡಾಯರೆಕ್ಟರ ಆಫ್‌ಪಬ್ಲಿಕ್ ಇನ್‌ಸ್ಟ್ರಕ್ಶನ್‌ರವರ ಅಭಿಪ್ರಾಯವಿರುವದು ಈ ಪಾಠಗಳು ಆಯಾ ತರಗತಿಗೆ ತಕ್ಕಂತೆ ಕಥೆಗಳ ರೂಪದಿಂದ ಬರೆದವಿದ್ದು ಭಾಷಾದೃಷ್ಟಿಯಿಂದಲೂ ಯೋಗ್ಯವಾಗಿರಬೇಕು. ಆದ್ದರಿಂದ ಇಂಥ ವಾಚನಪುಸ್ತಕಗಳನ್ನು ಸದ್ಯಕ್ಕೆ ಬರೆದ ಗ್ರಂಥಕರ್ತರೂ ಅವನ್ನು ಪ್ರಕಟಿಸಿದ ಪ್ರಕಾಶಕರೂ ಈ ವಿಚಾರವನ್ನು ತಿಳಿದುಕೊಂಡು ತಮ್ಮ ಪುಸ್ತಕಗಳಲ್ಲಿ ತಕ್ಕ ಬದಲಾವಣೆಗಳನ್ನು ಮಾಡಲು ಅನುಕೂಲವಾಗಬೇಕೆಂದು 'ಪ್ರಾಥಮಿಕ ಶಿಕ್ಷಣ" ಪತ್ರಿಕೆಯಲ್ಲಿ ಇದನ್ನು ಪ್ರಕಟಿಸಲಾಗಿದೆ. ಇನ್ನುಮುಂದೆ ಇಂಥ ಪುಸ್ತಕಗಳನ್ನು ಬರೆದು ಪ್ರಕಟಿಸುವವರಿಗಂತೂ ಈ ಮಾತು ತಾನೆ ಅನ್ವಯಿಸುವದಷ್ಟೇ. ಅಸ್ಪೃಶ್ಯತಾನಿವಾರಣೆಗೆ ಸಂಬಂಧಿಸಿದ ಯೋಗ್ಯಪಾಠಗಳನ್ನು ಒಳಗೊಂಡಿರುವ ಕ್ರಮಿಕಪುಸ್ತಕಗಳಿಗೆ ಹೆಚ್ಚು ಮನ್ನಣೆಯನ್ನು ಕೊಡಬೇಕೆಂದು ಸ್ಕೂಲಬೋರ್ಡಿನವರಿಗೆ ಸೂಚಿಸಲಾಗಿದೆ.

Dharwar
1st August 1941

Sd/ **S. R. Tawde**
E. I. S. D.

ಪ್ರಕಟನೆ ೩

ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ

೧. ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ-ಪತ್ರ ಪರೀಕ್ಷೆಯು ಧಾರವಾಡ ಜಿಲ್ಲೆಯ ಮುಧಾಳ ಉಮೇದುವಾರರು ಧಾರವಾಡ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರುವ ಒಗ್ಗೆ ತಾತ್ಪೂರ್ತಿಕವಾಗಿ ಕೊಟ್ಟ ಅನುಮತಿಯು ಇನ್ನು ಮುಂದೆ ಕಾಯಂ ಆಗಿ ನಡೆಯುವದು. ಮತ್ತು ಅವರ ಉತ್ತರದ ಪುಸ್ತಕಗಳು ಈಗಿನಂತೆ ಬೆಳಗಾವಿಯ ಕೇಂದ್ರದ ಪರೀಕ್ಷಾ ಕಮೀಟಿಯವರಿಂದಲೇ ಪರೀಕ್ಷಿಸಲ್ಪಡುವವು.

೨. **ಮರಾಠಿ** ಉಮೇದುವಾರರಿಗೆ ಕಾರವಾರ ಕೇಂದ್ರದಲ್ಲಿ ಈ ಪರೀಕ್ಷೆಗೆ ಕೂಡ್ರುವದಕ್ಕೆ ಈ ಮೊದಲು ಕೊಟ್ಟಿದ್ದ ಅನುಮತಿಯ ಅಪ್ಪಣೆಯನ್ನು ಗಳತಿ ನೆಯ ಇಸ್ವಿಯ ಪರೀಕ್ಷೆ ಮೊದಲುಗೊಂಡು ತಿರುಗಿ ತೆಗೆದುಕೊಳ್ಳಲಾಗಿದೆ.

೩. ಇದೇ ರೀತಿಯಾಗಿ **ಮರಾಠಿ** ಉಮೇದುವಾರರಿಗೆ ಬೈಲಹೊಂಗಲ ಕೇಂದ್ರದಲ್ಲಿ ಈ ಪರೀಕ್ಷೆಗೆ ಕೂಡ್ರುವದಕ್ಕೆ ಈ ಮೊದಲು ಕೊಟ್ಟಿದ್ದ ಅನುಮತಿಯ ಅಪ್ಪಣೆಯನ್ನು ಗಳತಿನೆಯ ಇಸ್ವಿಯ ಪರೀಕ್ಷೆ ಮೊದಲುಗೊಂಡು, ಪುನಃ ಅಂಥ ಅನುಮತಿಯ ಅಪ್ಪಣೆಯ ಅವಶ್ಯಕತೆಯು ಕಂಡುಬರುವವರೆಗೂ, ತಿರುಗಿ ತೆಗೆದುಕೊಳ್ಳಲಾಗಿದೆ.

ಟೀಪು:— ಸದ್ಯಕ್ಕೆ ಕಾರವಾರ ಮತ್ತು ಬೈಲಹೊಂಗಲ ಕೇಂದ್ರಗಳಲ್ಲಿ ಪರೀಕ್ಷೆಗೆ ಕೂಡ್ರುತ್ತಿದ್ದ ಮರಾಠಿ ಉಮೇದುವಾರರು ಇನ್ನುಮುಂದೆ ಯಾವ ಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕೆಂಬುದನ್ನು ತಕ್ಕ ಕಾಲದಲ್ಲಿ ಪ್ರಕಟಿಸ ಲಾಗುವದು.

Training College for men
DHARWAR
1st September 1941

H. S. Torgal
Principal.

ಪತ್ರಗಳ ಮುಖ್ಯಾಂಶಗಳು

ಶಾಡಂಬಿ (ಧಾರವಾಡ ಜಿಲ್ಲೆ) "ದಕ್ಷಿಣ ಭಾಗದ ಕಮಿಶನರ ಸಾಹೇಬರ ಅಪ್ಪಣೆಯ ಮೇರೆಗೆ ಈ ಊರಲ್ಲಿ ಹೊಸದಾಗಿ ತೆರೆದಿರುವ ಹರಿಜನರ ಪ್ರೌಢ ಶಿಕ್ಷಣ ವರ್ಗಕ್ಕೆ ಈ ಭಾಗದ ಅಸಿಸ್ಟಂಟ ಡಿ. ಎ. ಇ. ಅವರಾದ ಶ್ರೀಮಾನ್ **ಕಾಳೆ ಬೀ. ಏ. ಬಿ.ಟಿ., ಪಿ.ಟಿ.ಡಿ.** ಸಾಹೇಬರು ತಾ. ೭-೮-೧೯೪೧ನೆಯ ದಿವಸ ಸಂದರ್ಶನವಿತ್ತು ಸಾಕಷ್ಟು ಪ್ರೋತ್ಸಾಹನೆಯನ್ನು ಕೊಟ್ಟರು" ಹೀಗೆ ಶ್ರೀ. ಜೆ. ಎಸ್. ದೇವಧರ ಇವರು ತಿಳಿಸುತ್ತಾರೆ.

ಮುಡ್ಲಿ (ಧಾರವಾಡ ಜಿಲ್ಲೆ) "ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ಇನಾಮಿನ ಸಮಾರಂಭವು ಈ ಭಾಗದ ಅಸಿಸ್ಟಂಟ ಡಿ. ಎ. ಇ. ಅವರಾದ ಶ್ರೀಮಾನ್ **ಕಾಳೆ ಬೀ. ಏ., ಬಿ. ಟಿ., ಪಿ. ಟಿ. ಡಿ.** ಸಾಹೇಬರ ಅಧ್ಯಕ್ಷತೆಯಲ್ಲಿ ತಾರೀಖು ೭-೮-೧೯೪೧ನೆಯ ದಿವಸ ಜರುಗಿತು. ಅನೇಕ ಮಹನೀಯರು ಆಗಮಿಸಿದ್ದರು. ಶಿಕ್ಷಣ ಪದ್ಧತಿಯ ಒಗ್ಗೆ ಚರ್ಚೆ ಆದನಂತರ ಸಮಾರಂಭವು ಸಡಗರದಿಂದ ಜರುಗಿತು." ಹೀಗೆ ಶ್ರೀ. ಡಿ. ಬಿ. ನಾಗನಗೌಡರು ತಿಳಿಸುತ್ತಾರೆ.

ಹಾವೇರಿ ಇಲ್ಲಿಯ ಮೊದಲನೆಯ ನಂಬರ ಶಾಲೆಯಲ್ಲಿ ತಾ. ೬-೮-೪೧ ಳಗಿನ ದಿವಸ ಈ ಭಾಗದ ಅಸಿಸ್ಟಂಟ ಡೆ. ಎ. ಇ. ಅವರಾದ ಶ್ರೀಮಾನ್ ಪಕೀ ಬಿ. ಎ. ಸಾಹೇಬರ ಅಧ್ಯಕ್ಷತೆಯಲ್ಲಿ ಈ ಊರೊಳಗಿನ ಪ್ರಾಥಮಿಕ ಶಿಕ್ಷ ಶಿಕ್ಷಕಿಯರ ಸಭೆಯು ಸೇರಿತು. ಆಗ ಶಾರೀರಿಕ ಶಿಕ್ಷಣದ ಅಧಿಕಾರಿಗಳ ಶ್ರೀಮಾನ್ ವಿ. ಬಿ. ದೇಸಾಯಿ ಅವರು ಬೌದ್ಧಿಕ ಶಿಕ್ಷಣದ ತಳಹದಿಯ ಶರೀರ ಶಿಕ್ಷಣದ ಮಹತ್ವವನ್ನು ಪೌರಾಣಿಕ ಉದಾಹರಣೆಗಳಿಂದ ವಿಶದಪಡಿಸಿದ ಶರೀರಶಿಕ್ಷಣ ಕೊಡುವ ಬಗೆಗಳ ಮೇಲೆಯೂ ಉಪನ್ಯಾಸ ಮಾಡಿದ ಸಾಮೂಹಿಕ ಡ್ರಿಲ್ಲಿನ ೧೧ ತರಗತಿಗಳನ್ನು ಪ್ರತ್ಯಕ್ಷಮಾಡಿ ತೋರಿಸಿ, ಯ ಯಾವ ತರಗತಿಯಿಂದ ಶರೀರದ ಯಾವ ಯಾವ ಭಾಗದ ಮೇಲೆ ಏನೇ ಪರಿಣಾಮಗಳಾಗುತ್ತವೆಂಬುದನ್ನು ವಿವರಿಸಿದರು " ಹೀಗೆ ಅಲ್ಲಿಯ ಹೆಡ್‌ಮಾಸ್ತರರಾದ ಶ್ರೀ. ರಾ. ಡೆ. ಕುಲಕರ್ಣಿಯವರು ತಿಳಿಸುತ್ತಾನೆ.

ತಾಳಿಕೋಟೆ (ವಿಜಾಪುರ ಜಿಲ್ಲೆ) " ಈ ಊರ ಶಾಲೆಯಲ್ಲಿ ಈ ಭಾ ಶಿಕ್ಷಕರ ಸಮ್ಮೇಲನವು ತಾ. ೧೬-೮-೪೧ ಳಗಿನೆಯ ದಿವಸ ಈ ಭಾಗದ ಅಸಿಸ್ಟಂ ಡೆ.ಎ.ಇ. ಅವರಾದ ಶ್ರೀಮಾನ್ ಮುಜಪಕವಿ ಸಾಹೇಬರ ನೇತೃತ್ವದಲ್ಲಿ ಜರುಗಿ ಊರಲ್ಲಿಯ ಹಿರಿಯರು ಆಸ್ಥೆಯಿಂದ ಸಭೆಗೆ ದಯಮಾಡಿಸಿದ್ದರು. ಇತಿಹ ಸಂಶೋಧಕರಾದ ಶ್ರೀಮಾನ್ ರಾಜಪುರೋಹಿತರು ಅಕಸ್ಮಾತ್ ಆಗಮಿಸಿ ಕನ್ನ ಲಿಪಿಯ ಸೌಂದರ್ಯ ಹಾಗು ತಾಳಿಕೋಟೆಯ ಇತಿಹಾಸವನ್ನು ತಿಳಿಯಪ ದರು. ಮಕ್ಕಳ ವ್ಯಾಯಾಮ, ಮೂಡದಿಯ ಪಾಠಗಳು, ವಿವಿಧ ವಿನೋದಗ ಆದನಂತರ ಶ್ರೀಮಾನ್ ಶಿವಬಸವ ಸ್ವಾಮಿಗಳ ಹಸ್ತದಿಂದ ವಿದ್ಯಾರ್ಥಿಗ ಮೆಚ್ಚುಗೆಗಳನ್ನು ಕೊಡಿಸಲಾಯಿತು." ಎಂದು ಅಲ್ಲಿಯ ಹೆಡ್‌ಮಾಸ್ತರರ ಶ್ರೀ. ಏ. ಬಿ. ಜೋಸಿ ಅವರು ತಿಳಿಸುತ್ತಾರೆ.

ನಿಡಸೋಸಿ (ಬೆಳಗಾವಿ ಜಿಲ್ಲೆ) " ಈ ಊರ ಶಾಲೆಯಲ್ಲಿ ತಾರೀ ೫-೮-೪೧ ಳಗಿನೆಯ ದಿವಸ ಈ ಭಾಗದ ಅಸಿಸ್ಟಂಟ ಡೆ. ಎ. ಇ. ಅವರ ಶ್ರೀಮಾನ್ ಕಳಸೂರ ಸಾಹೇಬರ ಅಧ್ಯಕ್ಷತೆಯಲ್ಲಿ ಈ ಭಾಗದ ಶಿಕ್ಷ ಸಮ್ಮೇಲನವು ನೆರೆಯಿತು. ಹೊಸ ಶಿಕ್ಷಣ, ಹೊಸ ಪದ್ಧತಿಗಳು, ಹೊ ಅಭ್ಯಾಸಪತ್ರಿಕೆ, ಶಿಕ್ಷಕರ ಕರ್ತವ್ಯ ಮೊದಲಾದ ವಿಷಯಗಳ ಬಗ್ಗೆ ತು ಜರ್ಜೆ ಆಯಿತು. ತಾಲೂಕಿನ ಎಲ್ಲ ಶಿಕ್ಷಕ-ಶಿಕ್ಷಕಿಯರ ದೊಡ್ಡ ಸಮ್ಮೇ ಕ್ಕಿಂತಿಲೂ ಇಂತಹ ಒಂದೊಂದು ಭಾಗದ ಶಿಕ್ಷಕರ ಸಮ್ಮೇಲನವು ಹೆಚ ಒಳ್ಳೆಯದೆಂದು ಕಂಡು ಬಂದಿತು " ಹೀಗೆ ಅಲ್ಲಿಯ ಹೆಡ್‌ಮಾಸ್ತರರಾದ ಎಸ್ ಆರ್. ಕುಲಕರ್ಣಿ ಅವರು ತಿಳಿಸುತ್ತಾರೆ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ಸಂಪುಟ ೮೦	ಅಕ್ಟೋಬರ ೧೯೪೧	ವರ್ಷ ೧೩. ಸಂ. ೭

ದಿವಂಗತ ಕವೀಂದ್ರ ರವೀಂದ್ರರು

ದಿವಂಗತ ಕವಿ ಸಾವ್ರಾಟ ಡಾ. ರವೀಂದ್ರನಾಥ ಠಾಕೂರ, ಇವರ ಬಗ್ಗೆ ಭಕ್ತಿಪುರಸ್ಸರವಾಗಿ ಹೊರಟ ಉದ್ಗಾರಗಳಿವು.

ಷೋಡಶ ಪದ್ಯರತ್ನಾವಲಿ

ಬರೆಹಗಾರರು:—ಚ. ಬ. ಧಾರವಾಡ, ಸಂಪಗಾವ, ಹೆಡ್‌ಮಾಸ್ತರ
ಶಾಲಾ ಪಾರಿಶವಾಡ, ಕ. ಗಂ.

ಶಾ. ವಿ. ವೃತ್ತ

ಶ್ರೀಮದ್ಭಾರತ ಪುಣ್ಯಮಾತೆ ನಿಜದಿಂ, ಪಾವಿತ್ರ್ಯದಿಂ ಭವ್ಯದಿಂ ।
ಪ್ರೇಮೋತ್ಸಾಹದಿ ಶಾಂತಿ ಸಾಗರದಿ ಮೇಣ್, ಸದ್ವಿದ್ಯೆಯಿಂ
ಲೋಕದೊಳ್ ॥
ಸೀಮಾತೀತ ತಪೋಬಲಾತ್ಮ ಬಲದೊಳ್, ಪೂತಾತ್ಮರಿಂ ಪೂಜ್ಯರಿಂ ।
ಧೀಮಾನ್ ನೈಜ ಕವೀಂದ್ರರಿಂ ವಿಬುಧರಿಂ, ಶೋಭಿರ್ಪಳೇಂ
ಬಣ್ಣಿಪೆಂ ॥ ೧ ॥

ಮ. ವಿ. ವೃತ್ತ

ವರ ಬಂಗಾಲದ ರಾಜಧಾನಿ ಪುರದೊಳ್, ಸದ್ವಂಶ ಸಂಭೂತರುಂ ।
ನೆರೆ ಠಾಕೂರ ಗೃಹಾಭಿಧಾನದೊಳುತಾಂ, ವಿಖ್ಯಾತಿಯಂ ಪೊಂದಿದಾ ॥
ಚಿರ ಸತ್ಕೀರ್ತಿ ಪ್ರಕಾಶ ಭಾಸುರ ಮಹಾ, ತೇಜಸ್ಸಿನಿಂ ಭೂಷಿಪಾ ।
ವರ ಸದ್ವೀರ ರವೀಂದ್ರನಾಥ ಕವಿನೀಂ, ವಿಶ್ವಕ್ಕೆ ಮೇಲ್ಪಂಕ್ತಿಯೈ ॥ ೨ ॥

॥ ಕಂದ ॥

ಬಾಲತ್ವದೊಳ್ ಕವೀಂದ್ರನೆ ।
ಲೋಲದಿ ಪದಿನೆಂಟು ವರುಷದಾಯುಷ್ಯದೊಳುಂ ॥
ಲೀಲೆ ವಿಗೆ ಸೃಷ್ಟಿ ಸೊಬಗ– ।
ನ್ನಾಲೋಕಿಸು ತೆಂದು ತೊಡಗಿದೈ ಪದಕೃತಿಯೊಳ್ ॥ ೩
" ರವಿ ಕಾಣದುದಂ ಜಗದೊಳ್ ।
ಕವಿ ಕಾಣುವ "ನೆಂದು ಪೇಳ್ವ ' ಸಾಮತಿ ' ನಿನ್ನೊಳ್ ॥
ಜವದಿಂ ಮೂಡಿದುದೆಂಬುದು ।
ತವ ಕವಿತಾ ರಚನೆಯಿಂದೆ ಲೋಕಕೆ ಸಾಗ್ರುಂ ॥ ೪
ನಿನ್ನಯ ಕೃತಿ ಗೀತಾಂಜಲಿ–।
ಯುನ್ನತ ಪಥತೋರ್ವ ಸುಕೃತಿಯಂ ಸಲೆತೋರ್ಕುಂ ॥
ಸನ್ನುತ ಪರಮಾತ್ಮನೊಳುಂ ।
ಬಿನ್ನಣದಿಂದಾತ್ಮ ಬೆರೆವ ಸತ್ಪಥತೋರ್ದ್ಯೆ ॥ ೫
ಪರಿಕಿಸೆ ತವ ಗೀತಾಂಜಲಿ ।
ಪರತವು " ನೋಬೆಲ್ " ಸುಪದವಿಯಂ ವಿಶ್ವದೊಳುಂ ॥
ನೆರೆ ತಾಳ್ದ ಕಾವ್ಯಗಳೊಳುಂ ।
ಮೆರೆಯುತಲಿಹುದೈ ಕವೀಂದ್ರ ಬಣ್ಣಿಪರಳವೇ ॥ ೬
ತವ ಶಾಂತಿನಿಕೇತನದೊಳ್ ।
ಭುವನದೊಳಾಬಾಲವೃದ್ಧ ಖ್ಯಾತ್ಯವ್ಯಾತಂ ॥
ಜವದಿಂ ಕಲಿಯುತ್ಪಿರ್ಪುದು ।
ಭುವನದ ಬಾಂಧವ್ಯ ಸಕಲ ವಿಷಯಾದಿಗಳಂ ॥ ೭ ।
ವಿಶ್ವವ ದೇಶವ ವೋಲಿಸಿ ।
ವಿಶ್ವೈಕ್ಯಂ ದೇಶದೈಕ್ಯದಿಂ ಪಿರಿದೆನುತುಂ ॥
ವಿಶ್ವಮತಿ ನೀನೆ ಸಾರಿದೆ ।
ವಿಶ್ವೈಕ್ಯದೊಳೀತತ್ತ್ವ ಪೇಳ್ದ ನಿನಗೆಣೆಯುಂಟೇ ? ॥ ೮ ।
ಜಗದೊಳ್ ಕವಿವರ್ಯರೊಳುಂ ।
ವಿಗೆ ನೀನಾಧುನಿಕ ಕಾಲದೊಳ್ ಶ್ರೇಷ್ಠತೆಯುಂ ॥
ಜಗಮಾನ್ಯ ರವೀಂದ್ರಾರ್ಯನೆ ।
ಸೊಗಯಿಪ ನಿಪುಣತೆಯನಾಂತು ಜನಮುಂ ಪಡೆದೈ ॥ ೯ ॥

ಹಿಂದೊಂದು ಕಾಲದೊಳ್ ನೀಂ ।
ಚೆಂದದಿ ಕರ್ನಾಟ ಪ್ರಾಂತ ಕೈತಂದಾಗಳ್ ॥
ಬಂಧುರ ಕನ್ನಡ ದೇವಿಯ ।
ಸುಂದರತೆಯನೊಲ್ದು ನೈಜದಿಂ ಬಣ್ಣಿಸಿದೈ ॥ ೧೦ ॥

ಅರುವತ್ತುಮೂರು ವರುಷದಿ ।
ಸರಸದಿ ಕಾವ್ಯ ಪ್ರವಾಹ ಪ್ರವಹಿಸಿದುದು ಮೇಣ್ ॥
ಪರಮ ಪವಿತ್ರಾತ್ಮಕ ತವ ।
ನೆರೆ ಕಾವ್ಯೋದಧಿ ತರಂಗ ವಿಶ್ವಪ್ರಸಿದ್ಧಂ ॥ ೧೧ ॥

ನಿನ್ನಿಂ ಠಾಕೂರ ಗೃಹಂ ।
ನಿನ್ನಿಂದಲೆ ವಂಗಪ್ರಾಂತ ಭಾರತದೇಶಂ ॥
ನಿನ್ನಿಂದೆ ವಿಶ್ವದೊಳ್ ಸಲೆ ।
ಉನ್ನತಪದವಾಂತು ಮೆರೆದುವೈ ಕವಿಚಂದ್ರಾ ॥ ೧೨ ॥

ಅಳಿವುದು ಕಾಯಂ ಜಗದೊಳ- ।
ಗುಳಿವುದು ಜಸಮಚಲಮೆಂಬ ಧರ್ಮೋಕ್ತಿಯವೋಲ್ ॥
ವಿಲಸತ್ ಕೀರ್ತಿ ಶರೀರವ- ।
ನುಳಿಸಿಹ ಕವಿರತ್ನ ನೀನೆ ಧನ್ಯಂ ಜಗದೊಳ್ ॥ ೧೩ ॥

ಭಾರತದ ವೀರಪುತ್ರನೆ ।
ಭಾರತ ಮುಕುಟಮಣಿ ವಿಶ್ವಬಂಧು ಕವೀಂದ್ರಾ ॥
ಭಾರತದ ಪಿತಾಮಹನೀಂ ।
ಸಾರಿದೆ ಪರಲೋಕಕೀಗಳೆಮ್ಮನ್ನಗಲ್ದುಂ ॥ ೧೪ ॥

ಹಾ ! ಭರತವರ್ಷ ಹಿರಿಮಣಿ ।
ಹಾ ! ಭಾರತ ದೇಶಭಕ್ತ ವಿಶ್ವಪ್ರೇಮೀ ॥
ಹಾ ! ಭಾರತ ವಿದ್ವನ್ಮಣಿ ।
ಹಾ ! ಭುವನಖ್ಯಾತ ಪರಮನೊಳ್ ಸೇರಿದೆಯಾ ॥ ೧೫ ॥

ಇಂತೀ ಲೋಕವನಗಲ್ದಿಹ ।
ಸಂತತ ವಿಶ್ವೋಪಕಾರಿಯಾಗಿರ್ದು, ಮಹಾ ॥
ಸಂತಸದೊಳ್ ನಿನ್ನಾತ್ಮಕೆ ।
ಕಂತುಹರಂ ಶಾಂತಿಯೀಯಲೆಂದಾಂ, ನುತಿಪೆಂ ॥ ೧೬ ॥

ಇತಿಹಾಸ ಶಿಕ್ಷಣದ ಬೇರೆ ಬೇರೆ ಪದ್ಧತಿಗಳು

ಶ್ರೀಮಾನ್ ಎಸ್. ಆರ್. ತಾವಡೆ, ಎಂ. ಎ., ಎಜ್ಯುಕೇಶನಲ್ ಇ. ದಕ್ಷಿಣ ಭಾ. ಅವರಿಂದ.

೧. **ಡಾಲ್ಟನ್ ಪ್ಲ್ಯಾನ್** :– ಇತಿಹಾಸ ಶಿಕ್ಷಣದಲ್ಲಿ ಡಾಲ್ಟನ್ ಪ್ಲ್ಯಾನ್ ಪದ್ಧತಿಯನ್ನು ಅನುಸರಿಸುವಾಗ ಅದನ್ನು ಅಮೇರಿಕನ್ ಪದ್ಧತಿಯಿಂದಲೇ ಸಾಗಿಸುವದು ಸಾಧ್ಯವಾಗದು ; ನಮ್ಮ ಪರಿಸ್ಥಿತಿಗೆ ಅನುಗುಣವಾಗಿ ಅದರಲ್ಲಿ ತುಸು ಹೆಚ್ಚು ಕಡಿಮೆಗಳನ್ನು ಮಾಡಿಕೊಳ್ಳಬೇಕಾಗುವದು. ಈ ಪದ್ಧತಿಯು ಚಿಕ್ಕ ಬಾಲಕರಿಗೆ ಬಹಳ ಅನುಕೂಲವಾಗಲಾರದು. ಮಧ್ಯಮವಯಸ್ಸಿನ ಅಂದರೆ೧೧ರಿಂದ ೧೪ ವರುಷಗಳ ವರೆಗಿನ ವಯಸ್ಸಿನ ಬಾಲಕರಿಗೆ ಅದು ತಕ್ಕದ್ದೆನಿಸುವದು. ಆ ಪದ್ಧತಿಯನ್ನು ಅನುಸರಿಸುವಾಗ ಶಿಕ್ಷಕನು ಈ ಕೆಳಗಿನಂತೆ ಕೆಲಸಮಾಡಬೇಕಾಗುವದು.

೧. ಮೊದಲು ತನ್ನ ವಿದ್ಯಾರ್ಥಿಗಳಿಗೆ ಒಂದು ವರ್ಷದಲ್ಲಿ ಕಲಿಸಬೇಕಾದ ಇತಿಹಾಸದ ಭಾಗವನ್ನು ಹದಿನೈದು ದಿವಸಗಳಿಗೆ ಅಥವಾ ಒಂದು ತಿಂಗಳಿಗೆ ಒಂದೊಂದರಂತೆ ಬೇರೆ ಬೇರೆ ಪಾಠಗಳ ಗುಂಪುಗಳಾಗಿ ವಿಭಾಗಿಸಿಕೊಳ್ಳಬೇಕು. ಇದಕ್ಕೆ ಅಭ್ಯಾಸಪತ್ರಿಕೆಯ ಕ್ರಮವಿಭಾಗವೆಂದರೂ ಸಲ್ಲುವದು.

೨. ಹಾಗೆ ಇತಿಹಾಸದ ಅಭ್ಯಾಸಪತ್ರಿಕೆಯನ್ನು ವಿಭಾಗಿಸಿಕೊಂಡನಂತರ ತನ್ನ ವರ್ಗದ ಬಾಲಕರಿಗೆ ಒಂದೊಂದೇ ವಿಭಾಗಗಳನ್ನು ಆರಿಸಿಕೊಟ್ಟು ಗೊತ್ತು ಪಡಿಸಿದ ಕಾಲಾವಧಿಯಲ್ಲಿ ಅಂದರೆ ಹದಿನೈದು ದಿವಸಗಳ ಅಥವಾ ಒಂದು ತಿಂಗಳ ಅವಧಿಯಲ್ಲಿ ಆ ವಿಭಾಗಗಳನ್ನು ನೀವೇ ಓದಿಕೊಂಡು ಬನ್ನಿರೆಂದು ಹೇಳಬೇಕು.

೩. ಆರಂಭಕ್ಕೆ ಇಡಿಯ ವರ್ಗದ ವಿದ್ಯಾರ್ಥಿಗಳನ್ನೆಲ್ಲ ಒಂದೆಡೆಯಲ್ಲಿ ಕೂಡ್ರಿಸಿ ಈ ವಿಭಾಗದಲ್ಲಿ ನೀವು ಇಂಥಿಂಥ ಸಂಗತಿಗಳನ್ನು ಪರ್ಯಾಲೋಚಿಸಿ ಅಭ್ಯಾಸಮಾಡಬೇಕಾಗುವದೆಂಬುದನ್ನು ಸೂಚಿಸಬೇಕು. ಮತ್ತು ಮುಂದೆ ಅವರು ಅಭ್ಯಾಸ ನಡೆಯಿಸಿದಾಗ ಪ್ರತಿ ವಿದ್ಯಾರ್ಥಿಗೂ ಬೇರೆಬೇರೆಯಾಗಿ ಅವರವರು ಬಯಸುವ ಮಟ್ಟಿಗೆ ಸಹಾಯಮಾಡಬೇಕು. ಅವರಲ್ಲಿ ಕಂಡುಬರುವ ಕುಂದುಕೊರತೆಗಳನ್ನು ತಿದ್ದುತ್ತ ಸಾಗಬೇಕು.

೪. ವಿಷಯ ವಿಭಾಗವನ್ನು ಆರಿಸಿಕೊಡುವಾಗ ಶಿಕ್ಷಕನು ತನ್ನ ವಿದ್ಯಾರ್ಥಿಗಳು ಓದಬೇಕಾದ ಬೇರೆ ಬೇರೆ ಪುಸ್ತಕಗಳನ್ನೂ ಆಯಾ ವಿಷಯಗಳನ್ನು ಚರ್ಚಿಸಿರುವ ಪುಟಗಳನ್ನು ತಾನೇ ವಿಂಗಡಿಸಿ ತೋರಿಸಿಕೊಡುವನು.

೫. ಶಾಲೆಗಳಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳು ಎಲ್ಲ ವಿದ್ಯಾರ್ಥಿಗಳಿಗೂ ಸಾಲುವಷ್ಟು ಇರಬೇಕಾಗುವದು.

೬. ವಿದ್ಯಾರ್ಥಿಗಳು ಆಯಾ ಪುಸ್ತಕಗಳನ್ನು ನಾಲ್ಕು--ಐದು--ಆರು ಸಾರೆ ಚೆನ್ನಾಗಿ ಓದಿ ತಿಳಿದುಕೊಂಡ ನಂತರ ಒಬ್ಬೊಬ್ಬರಾಗಿ ಶಿಕ್ಷಕರ ಕಡೆಗೆ ಬಂದು ತಮ್ಮ ಪಾಠಗಳನ್ನು ಒಪ್ಪಿಸುವರು.

ಈ ವಿಭಾಗಗಳನ್ನು ಪೂರ್ಣಮಾಡಲಿಕ್ಕೆ ಎಲ್ಲ ವಿದ್ಯಾರ್ಥಿಗಳಿಗೆ ಅಷ್ಟೇ ಕಾಲಾವಧಿಯು ಹಿಡಿಯುತ್ತಿರುವದಿಲ್ಲ. ಚುರುಕು ಬುದ್ಧಿಯ ವಿದ್ಯಾರ್ಥಿಗಳು ೧೫ ದಿನಗಳ ಅಭ್ಯಾಸವನ್ನು ಎಂಟೇ ದಿವಸಗಳಲ್ಲಿ ಮುಗಿಸಬಹುದು. ಕೆಲವರು ೧೦ ದಿನಗಳಲ್ಲಿ ಮತ್ತೆ ಕೆಲವರು ೧೨ ದಿನಗಳಲ್ಲಿ ಹಲವರು ೧೩--೧೪--೧೫ ದಿನಗಳಲ್ಲಿ ಮುಗಿಸಬಹುದು, ಮಂದಬುದ್ಧಿಯ ತೀರ ಸ್ವಲ್ಪ ವಿದ್ಯಾರ್ಥಿಗಳು ಶಿಕ್ಷಕನ ವಿಶೇಷ ಸಹಾಯದಿಂದಲೂ ಸಹ ಅದನ್ನು ಸರಿಯಾಗಿ ಓದಿ ತಿಳಿದು ಕೊಂಡಿರಲಾರರು.

೭. ಶಿಕ್ಷಕನು ಹಾಗೆ ಗೊತ್ತಾದ ಅಭ್ಯಾಸವನ್ನು ಮುಗಿಸಿಕೊಂಡು ತನ್ನ ಬಳಿಗೆ ಬಂದ ವಿದ್ಯಾರ್ಥಿಗಳನ್ನು ಪರೀಕ್ಷಿಸಿ ನೋಡಿ ತನ್ನ ವರ್ಗದಲ್ಲಿಟ್ಟ ಪಟದಲ್ಲಿ ಆಯಾ ವಿದ್ಯಾರ್ಥಿಗಳ ಹೆಸರಿನ ಮುಂದೆ ಅವರವರಿಗೆ ಅನುಗುಣವಾಗಿ ಶರಾ ಬರೆದು ಸಹಿಮಾಡುವನು.

೮. ಈ ಪದ್ಧತಿಯಲ್ಲಿ ಶಿಕ್ಷಕನು ತನ್ನ ವರ್ಗದಲ್ಲಿಯ ಎಲ್ಲ ವಿದ್ಯಾರ್ಥಿಗಳನ್ನು ಒಂದೆಡೆಗೆ ಕಲೆಹಾಕಿ ಪಾಠ ಸಾಗಿಸದೆ ವೈಯಕ್ತಿಕವಾಗಿ ವಿದ್ಯಾರ್ಥಿಗಳಿಗೆ ನೇರವಾಗುವನು.

ಈ ಪದ್ಧತಿಯಿಂದ ಪಾಠ ಸಾಗಿಸಿದರೆ ವಿದ್ಯಾರ್ಥಿಗಳಲ್ಲಿ ಸ್ವಪ್ರಯತ್ನದ ಅಭ್ಯಾಸವು ನೆಲೆಗೊಳ್ಳುವದು; ತನ್ನ ಅಭಿಪ್ರಾಯಗಳನ್ನು ಪರರಿಗೆ ವಿಷದೀಕರಿಸಿ ಹೇಳುವ ಸಾಮರ್ಥ್ಯವು ಬೆಳೆಯುವದು; ವಾಚನಾಭಿರುಚಿಯು ಹೆಚ್ಚುವದು.

೯. **ವಿಶಿಷ್ಟ ಶಿಕ್ಷಕರೇ ಪಾಠ ಹೇಳುವದು** :— ನಮ್ಮ ಶಾಲೆಗಳಲ್ಲಿ ಎಲ್ಲ ವಿಷಯಗಳನ್ನು ಒಬ್ಬನೇ ಶಿಕ್ಷಕನು ಕಲಿಸುವ ಪರಿಪಾಠವೇ ಹೆಚ್ಚು. ವಿಶಿಷ್ಟ ವಿಷಯಗಳನ್ನು ಚೆನ್ನಾಗಿ ಅಭ್ಯಾಸಮಾಡಿಕೊಂಡು ಶಿಕ್ಷಕರು ಆಯಾ ವಿಷಯ ಗಳನ್ನಷ್ಟೇ ಕಲಿಸುವ ಯೋಜನೆಯಿರುವ ಶಾಲೆಗಳೂ ಉಂಟು. ಇತಿಹಾಸ ಶಿಕ್ಷಣದ ಬಗ್ಗೆ ಹೇಳುವದಾದರೆ, ಆರಂಭದ ತರಗತಿಗಳಲ್ಲಿ ಈ ರೀತಿಯಾಗಿ ವಿಶಿಷ್ಟ ಶಿಕ್ಷಕರ ಆವಶ್ಯಕತೆಯೇನೂ ಕಂಡುಬರುವದಿಲ್ಲ. ಚಿಕ್ಕ ಬಾಲಕರಿಗೆ ಕಥೆಗಳನ್ನು ಹೇಳುವಂತೆಯೇ ಇತಿಹಾಸದ ಪಾಠಗಳನ್ನು ಹೇಳಬೇಕಾಗುವದು. ಇಂಥವರಿಗೆ

ವರ್ಗದ ಶಿಕ್ಷಕನೇ ಇತರ ವಿಷಯಗಳೊಡನೆ ಇತಿಹಾಸವನ್ನೂ ಕಲಿಸಿದರೆ ತಾಗುವದು. ಯಾಕಂದರೆ ವರ್ಗದ ಶಿಕ್ಷಕನಿಗೆ ತನ್ನ ವಿದ್ಯಾರ್ಥಿಗಳ ಗುಣದೋ ಗಳು ಚೆನ್ನಾಗಿ ಗೊತ್ತಿರುವವು. ಮತ್ತು ಯಾವ ವಿದ್ಯಾರ್ಥಿಯನ್ನು ಯ ರೀತಿಯಾಗಿ ನಡಿಸಿಕೊಳ್ಳಬೇಕೆಂಬದು ಅವನಿಗೆ ಗೊತ್ತು. ಆದುದರಿಂದ ವಿದ್ಯಾರ್ಥಿಗಳ ಪಾಠವು ಸರಿಯಾಗಿ ಸಾಗಲು ಅನುಕೂಲವಾಗುವದು.

ಹೈಸ್ಕೂಲಿನ ತರಗತಿಗಳಲ್ಲಿ ಎಂದರೆ ೧೫ನೆಯ ವರ್ಷದಿಂದ ಅಥವಾ ಅದ ಮುಂದೆ ಇಂಥ ವಿಶಿಷ್ಟ ವಿಷಯಗಳನ್ನು ಅಭ್ಯಾಸಮಾಡಿದ ಶಿಕ್ಷಕರೇ ಆ ವಿಷಯಗಳನ್ನು ಕಲಿಸುವ ಪದ್ಧತಿಯು ಅನುಕೂಲವಾಗುವದು. ಇಂಥ ಹಾಸದ ಶಿಕ್ಷಕನು ತನ್ನ ವಿಷಯವನ್ನು ಚೆನ್ನಾಗಿ ಅಭ್ಯಾಸಮಾಡಿದವನಿರಬೇ ಇಂಥ ಶಿಕ್ಷಕನು ಎಲ್ಲ ವಿಷಯಗಳನ್ನು ಕಲಿಸುವ ಶಿಕ್ಷಕನಿಗಿಂತಲೂ ಹೆ ಚೆನ್ನಾಗಿ ತನ್ನ ವಿಷಯವನ್ನು ಕಲಿಸಬಲ್ಲನು. ಹೈಸ್ಕೂಲಿನ ತರಗತಿ ಮುಖ್ಯಾಧ್ಯಾಪಕನು ತನ್ನ ಸಾಲೆಯೊಳಗಿನ ಶಿಕ್ಷಕರಲ್ಲಿ ಯಾರು ಯಾವ ವಿಷ ವನ್ನು ಚೆನ್ನಾಗಿ ಕಲಿಸಬಲ್ಲರೆಂಬದನ್ನು ಗೊತ್ತುಮಾಡಿಕೊಂಡು ಅವರಿ ವಿಷಯವನ್ನು ಕೊಡಬೇಕು. ಎಂದರೆ ಇತಿಹಾಸ ವಿಷಯದಲ್ಲಿ ಹೆಚ್ಚು ಆಭಿ ಯಿದ್ದು ಅದನ್ನು ಚೆನ್ನಾಗಿ ಅಭ್ಯಾಸ ಮಾಡಿದ ಒಬ್ಬಿಬ್ಬರು ಶಿಕ್ಷಕರಿಗೆ ವರ್ಗಗಳ ಇತಿಹಾಸ ಶಿಕ್ಷಣವನ್ನು ಒಪ್ಪಿಸುವದು ಒಳಿತು.

೩. ಇತಿಹಾಸವನ್ನು ಕಲಿಸುವಾಗ ಕ್ರಮದಿಂದ ಹೆಚ್ಚು ವಿವರ ಸಾಗುವ (ಕ್ರಮವಿಕಾಸ)ಪದ್ಧತಿಯನ್ನು ಅನುಸರಿಸಬಹುದು. ಉದಾಹರಣೆಗೆ ಏಕಕೇಂದ್ರಪದ್ಧತಿಯನ್ನು ತೆಗೆದುಕೊಳ್ಳೋಣ. ಇದನ್ನು ಬಹುತರವಾಗಿ ಕೆ ತರಗತಿಗಳಲ್ಲಿ ಅನುಸರಿಸುವದು. ವಿದ್ಯಾರ್ಥಿಗಳಿಗೆ ಕಲಿಸಬೇಕಾಗಿರುವ ಇತಿಹ ವಿಭಾಗದೊಳಗಿನ **ಎಲ್ಲ ಮುಖ್ಯ ವ್ಯಕ್ತಿಗಳನ್ನೂ, ಅವರ ಮಹ ಕಾರ್ಯಗಳನ್ನೂ ಆರಂಭದಲ್ಲಿಯೇ ತೆಗೆದುಕೊಳ್ಳಬಹುದು.** ಮತ್ತು ಅವ ಮೂಲಕ ಇತಿಹಾಸದೊಳಗಿನ ಬೇರೆ ಬೇರೆ ಮಹತ್ವದ ಘಟನೆಗಳನ್ನು ಪರ ಲೋಚಿಸಬಹುದು. ಮೇಲಿನ ತರಗತಿಗಳಿಗೆ ಹೋದಂತೆ ಅವೇ ಪ ಗಳನ್ನೂ ಅವರ ಕಾರ್ಯಗಳನ್ನೂ ಹೆಚ್ಚುಹೆಚ್ಚಾಗಿ ವಿವರಿಸುತ್ತ ಸಾಗಿ ಇತಿ ಸದ ಅಂಗೋಪಾಂಗಗಳನ್ನೆಲ್ಲ ಪರಿಶೀಲಿಸಿ ಅದನ್ನೆಲ್ಲ ಸಂಪೂರ್ಣ ಮಾಡಬಹು ಒಂದು ಚಿತ್ರವನ್ನು ತೆಗೆಯುವಾಗ, ಮೊದಲು ಅದರ ಬಾಹ್ಯರೇಷೆಯನ್ನು ತೆ ಇಡಿಯ ಚಿತ್ರದ ಕಲ್ಪನೆ ಬರುವಂತೆ ಮಾಡುವದು, ಆಮೇಲೆ ಬೇರೆ ಬೇರೆ ಭ ಗಳನ್ನು ಚಿತ್ರಿಸಿ ಅದನ್ನು ಹೆಚ್ಚು ವಿಷದೀಕರಿಸುವದು, ಕೊನೆಗೆ ಆ ಚಿತ್ರ ಬೆಳಕು ಕತ್ತಲೆ ಮೊದಲಾದ ಸೂಕ್ಷ್ಮ ಅಂಗಗಳನ್ನೆಲ್ಲ ತುಂಬಿ ಚಿತ್ರವು ಎ

ಣುವಂತೆ ಮಾಡುವದು, ಕಟ್ಟಕಡೆಗೆ ಬಣ್ಣಕೊಟ್ಟು ಚಹರೆ ಮುಂತಾದವು
ನ್ನೆಲ್ಲ ಒಡಮೂಡಿಸಿ ತಿದ್ದಿ ತೀಡಿ ಪ್ರತ್ಯಕ್ಷ ವಸ್ತುವಿನಂತೆಯೇ ತೋರುವಂತೆ
ಡಿ ಚಿತ್ರವನ್ನು ಪೂರ್ಣ ಮಾಡುವರು, ಈ ರೀತಿಯಾದ ಹಲವು ಮೆಟ್ಟು
ರುವಂತೆಯೇ ಇತಿಹಾಸದ ಶಿಕ್ಷಣದಲ್ಲಿ ಏಕಕೇಂದ್ರ ಪದ್ಧತಿಯಿಂದ ಸಾಗು
ಗಲೂ ಸಹ ಬೇರೆ ಬೇರೆ ಮೆಟ್ಟುಗಳನ್ನು ಮಾಡಿಕೊಂಡು ಅಷ್ಟಷ್ಟರ ಮಟ್ಟಿಗೆ
ನ್ನು ಸ್ವತಂತ್ರವಾಗಿ ಪೂರ್ಣಮಾಡುತ್ತ ಸಾಗಬೇಕಾಗುವದು.

ಈ ಪದ್ಧತಿಯಲ್ಲಿ ಒಂದು ದೋಷವಿದೆ. ಈ ಪದ್ಧತಿಯಿಂದ ಒಂದು ಕಾಲ
ಾಗದ ಇತಿಹಾಸವನ್ನು ಕಲಿಸುವಾಗ ಅದರೊಳಗೆ ಬರುವ ಎಲ್ಲ ಮುಖ್ಯ ವ್ಯಕ್ತಿ
ನ್ನೂ ಘಟನೆಗಳನ್ನೂ ಒಮ್ಮೆ ಹೇಳಿದ ತರುವಾಯ ಮುಂದಿನ ಮೆಟ್ಟಿನಲ್ಲಿ ಅವೇ
ಯಗಳನ್ನು ಪುನಃ ಹೇಳಬೇಕಾಗುವದರಿಂದ ಆಗ ಬಾಲಕರಿಗೆ ಪಾಠದಲ್ಲಿ ಅಭಿ-
ಚಿಯು ಎಷ್ಟೂ ಉಳಿಯುವಾರದು. ಹೇಳಿದ್ದನ್ನೆ ಪುನಃ ಹೇಳುವ ಸಂದರ್ಭಗಳಲ್ಲಿ
ಲಕರ ಅಭಿರುಚಿಯನ್ನು ಕಾಯ್ದುಕೊಳ್ಳುವದು ಸುಲಭವಲ್ಲ. ಈ ಪದ್ಧತಿಯು
ಕ್ಕಬಾಲಕರಿಗೆ ಒಂದು ವೇಳೆ ಅನುಕೂಲವೆನಿಸಿದರೂ ಪ್ರಬುದ್ಧ ವಿದ್ಯಾರ್ಥಿಗಳಿಗೆ
ತ್ರ ಈಪದ್ಧತಿಯು ತುಂಬ ಬೇಸರವೆನಿಸಿಬಿಡುವದು. ಹೈಸ್ಕೂಲಿನ ತರಗತಿಗಳಲ್ಲಿ
ತಿಹಾಸವನ್ನು ಕಾಲಾನುಕ್ರಮದಿಂದ ಕಲಿಸುವ ಪದ್ಧತಿಯನ್ನು ಅನುಸರಿಸುವದು
ತು. ಇತಿಹಾಸವನ್ನು ಬೇರೆ ಬೇರೆ ಕಾಲಾವಧಿಗಳಲ್ಲಿ ವಿಭಾಗಿಸಿಕೊಂಡು
ಠಸಾಗಿಸಬೇಕು. ಹಾಗೆ ಅನುಕೂಲಕ್ಕಾಗಿ ಇಡಿಯ ಇತಿಹಾಸವನ್ನು
ಾಗಿಸಿಕೊಂಡರೂ ಅವು ಕೊನೆಯವರೆಗೂ ಒಂದರಿಂದೊಂದು ಭಿನ್ನವಾಗಿಯೇ
ಿಯಲಾರವೆಂಬದನ್ನು ಮಾತ್ರ ಮರೆಯಕೂಡದು. ಒಂದು ಕಾಲ ವಿಭಾಗ
ದ ಇನ್ನೊಂದು ಕಾಲವಿಭಾಗಕ್ಕೆ ಸಾಗುವಾಗ ಹಿಂದಿನದನ್ನು ಸಿಂಹಾವಲೋಕನ
ಾಡಲೇಬೇಕು. ಮತ್ತು ಆ ಕಾಲದ ಘಟನೆಗಳಿಂದ ಮುಂದಿನ ಕಾಲದ
ೀಲಾಗುವ ಪರಿಣಾಮಗಳನ್ನೆಲ್ಲ ಪರ್ಯಾಲೋಚಿಸಲೇಬೇಕು. ಆದ್ದರಿಂದ ಅಭ್ಯಾಸ
ಕ್ರಿಕೆಯ ಮೇರೆಗೆ ಒಂದು ವರ್ಗಕ್ಕೆ ಕೆಲವೊಂದು ಕಾಲ ವಿಭಾಗವನ್ನಷ್ಟೇ ಕಲಿಸ
ಕಾಗಿದ್ದರೂ ಆ ಶಿಕ್ಷಕನು ಅಖಂಡ ಇತಿಹಾಸವನ್ನೆಲ್ಲ ತನ್ನ ಕಣ್ಣಮುಂದ
ಟ್ಟುಕೊಳ್ಳಬೇಕಾಗುವದೆಂಬದನ್ನು ಮರೆಯಕೂಡದು.

ಇತಿಹಾಸವನ್ನು ಈ ಪದ್ಧತಿಯಿಂದ ಕಲಿಸುವಾಗ ಇನ್ನೊಂದು ಪರಿಪಾಠವು
ಟು. ಸದ್ಯದ ರಾಜಕೀಯ ಆಂದೋಲನದಿಂದ ಅದನ್ನು ಪ್ರಾರಂಭಿಸಬಹುದು
ಮ್ಮ ಸದ್ಯದ ರಾಜಕೀಯ ಘಟನೆಗಳು ಎಂದಿನಿಂದ ಹೇಗೆ ಪ್ರಾರಂಭವಾದವು
ದೆಯಾವ ಯಾವ ಕಾಲದಲ್ಲಿ ಅವು ಯಾವ ಯಾವ ರೀತಿಯಾಗಿದ್ದವು? ಮುಂತಾದ
ಶ್ನೆಗಳನ್ನು ಬಿಡಿಸಲು ಯತ್ನಿಸುತ್ತ ಹೋಗುವದರಿಂದ ಇಂದಿನಿಂದ ತೀರ ಪುರಾ

ತನ ಕಾಲದ ವರೆಗಿನ ಇತಿಹಾಸವನ್ನು ವಿವೇಚಿಸುತ್ತ ಸಾಗಬಹುದು. ಪ
ಆಯಾ ಬದಲಾವಣೆಗಳಿಗೆ ಕಾರಣವಾಗುವ ಐತಿಹಾಸಿಕ ವ್ಯಕ್ತಿಗಳನ್ನೂ ಘ
ಗಳನ್ನೂ ವಿವೇಚಿಸಬಹುದು. ಆದರೆ ಈ ಕ್ರಮವು ಚಿಕ್ಕಮಕ್ಕಳಿಗೆ ರುಚಿಸಲಾ
ಅದು ಅವರ ಆಕಲನಶಕ್ತಿಗೆ ಮೀರಿದ್ದಾಗುವದು. ನಮ್ಮ ದೇಶದ ಸದ್ಯದ ರಾಜಕಿ
ಇತಿಹಾಸವು ಬಲು ತೊಡಕಿನದು. ಬಾಲಕರು ಸಾದಾ ಜೀವನಕ್ಕೆ ಹೆಚ
ಮೆಚ್ಚುವರು. ಅವರಿಗೆ ನಮ್ಮ ಪ್ರಾಚೀನ ಇತಿಹಾಸವು ಹೆಚ್ಚು ರುಚಿಸಬಹು

ಇತಿಹಾಸವನ್ನು ಮತ್ತೊಂದು ಕ್ರಮದಿಂದಲೂ ಕಲಿಸಬಹುದು. ಬೇರೆ ಕಾಲದ ರಾಜರು ಅವರ ಆಳಿಕೆ ಬಾಳಿಕೆಗಳು ಇವನ್ನೆಲ್ಲ ಬಿಟ್ಟುಬಿಟ್ಟು ಬೇರೆ ಐತಿಹಾಸಿಕ ಘಟನೆಗಳನ್ನಷ್ಟೇ ಆರಿಸಿಕೊಂಡು ಇತಿಹಾಸವನ್ನು ವಿವೇ ಬಹುದು. ಆದರೆ ಚಿಕ್ಕ ಬಾಲಕರಿಗೆ ಈ ಕ್ರಮವೂ ಕೂಡ ಅಷ್ಟು ರು ಆಗಾರದು. ಏಕೆಂದರೆ ಅವರಿಗೆ ಕೇವಲ ಅಮೂರ್ತ ಸಂಗತಿಗಳಿಂದ ಮನ ತಕ್ಕಷ್ಟು ಸಮಾಧಾನವಾಗಲಾರದು.

ಈ ಎಲ್ಲ ವಿವರಣೆಗಳಿಂದ ತಿಳಿಯುವದೇನೆಂದರೆ ಇತಿಹಾಸವನ್ನು ಕ ವಾಗ ಪ್ರಾರಂಭದಲ್ಲಿ ಏಕಕೇಂದ್ರ ಪದ್ಧತಿಯಿಂದ ಹೊರಟು ಬರಬರುತ್ತ ವಿಭಾಗ ಪದ್ಧತಿಯಿಂದ ಅಭ್ಯಾಸವನ್ನು ಮುಂದರಿಸಬೇಕು. ಕಾಲವಿಭಾಗವ ಕಾಲಾನುಕ್ರಮದಿಂದ ಆರಿಸಿಕೊಳ್ಳಬೇಕು. ಕೊನೆಯ ವರ್ಷದಲ್ಲಿ ಸಂಪೂ ಇತಿಹಾಸವನ್ನು ಪರ್ಯಾಲೋಚಿಸಿ ಮುಗಿಸಬೇಕು.

೪. **ಇತಿಹಾಸ ಶಿಕ್ಷಣದಲ್ಲಿ ಪ್ರೊಜೆಕ್ಟ (ಯೋಜನಾ)ಪದ್ಧತಿಯ ಉ ಯೋಗ:**—ಇದು ನಮ್ಮವಿದ್ಯಾರ್ಥಿಗಳಿಗೆ ಅಷ್ಟು ಅನುಕೂಲವಾಗಲಾರದು. ನಾ ಇಲ್ಲಿ ಹೇಳುವ ಉದಾಹರಣೆಯಿಂದ ಪ್ರೊಜೆಕ್ಟ ಪದ್ಧತಿಯೆಂದರೇನೆಂಬದರ ವಿವ ನೆಯು ಸರಿಯಾಗಿ ಆಗಬಹುದು ಇಷ್ಟೆ. ನಾನು ೧೯೩೧ನೆಯ ಇಸ್ವಿಯಲ್ಲಿ ಅಮೆ ಯೊಳಗೆ ಒಂದು ಟ್ರೇನಿಂಗ್ ಸ್ಕೂಲಿನಲ್ಲಿ ಶಿಕ್ಷಣಪಡೆಯುತ್ತಿದ್ದೆನು. ೧೯೩೧ನ ಇಸ್ವಿಯು ನಮ್ಮ ಇತಿಹಾಸದಲ್ಲಿ ತುಂಬ ಮಹತ್ವವುಳ್ಳದ್ದೆಂಬದನ್ನು ಹ ಬೇಕಾಗಿಲ್ಲ. ಮಹಾತ್ಮಾ ಗಾಂಧಿಯವರು ಆಗ ದೇಶದೊಳಗಿನ ಚಳುವಳಿ ಸೂತ್ರಧಾರಿಗಳಾಗಿದ್ದರು. ಭಾರತ ದೇಶದ ರಾಜಕೀಯ ಆಂದೋಲನವೆಲ್ಲ ಅ ಸೂತ್ರಚಾಲನೆಗೆ ಒಳಗಾಗಿತ್ತು. ಭಾರತೀಯ ಸ್ವತಂತ್ರಕ್ಕೆ ಸಂಬಂಧಿಸಿದ ಹ ಲೇಖನಗಳು ಅಮೇರಿಕೆಯ ವೃತ್ತಪತ್ರಿಕೆಗಳಲ್ಲಿಯೂ ಮಾಸಿಕಗಳಲ್ಲಿಯೂ ಹ ನಿಯತ ಕಾಲಿಕಗಳಲ್ಲಿಯೂ ಆಗಾಗ ಪ್ರಕಟವಾಗುತ್ತಿದ್ದವು. ಆಗ ನಾ ಶಿಕ್ಷಣ ಪಡೆಯುತ್ತಿದ್ದ ಶಾಲೆಯ ವಿದ್ಯಾರ್ಥಿಗಳು ಇಂಥ ಲೇಖನಗಳನ್ನು ತು ಆಸ್ಥೆಯಿಂದ ಓದುತ್ತಿದ್ದರು. ಅವರು ಭಾರತದ ಇತಿಹಾಸದ ಅಭ್ಯಾಸ

'ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೇ ಕೊಡಬಾರದೇ" ಎಂಬ ಪ್ರಶ್ನೆ
ಯನ್ನು ಆರಿಸಿಕೊಂಡರು. ಅವರು ತಮ್ಮಲ್ಲಿ ಎರಡು ಗುಂಪುಗಳನ್ನು ರಚಿಸಿ
ಕೊಂಡರು. ಮತ್ತು ತಮ್ಮ ವರ್ಗದ ಶಿಕ್ಷಕನ ಮೇಲ್ವಿಚಾರಣೆಯ ಕೆಳಗೆ ಈ
ಪ್ರಶ್ನೆಯನ್ನು ಕೂಲಂಕಷವಾಗಿ ಅಭ್ಯಾಸಮಾಡತೊಡಗಿದರು ; ಕೆಲವು ವಿದ್ಯಾರ್ಥಿ
ಗಳು ದೈನಿಕ ಸಪ್ತಾಹಿಕ ಮುಂತಾದ ವೃತ್ತಪತ್ರಿಕೆಗಳಿಂದ ಮಾಹಿತಿಯನ್ನು
ಸಂಗ್ರಹಿಸಿದರು ; ಕೆಲವರು ಮಾಸಿಕ ಮುಂತಾದ ನಿಯತ ಕಾಲಿಕಗಳನ್ನು
ಮತ್ತು ಈ ವಿಷಯದ ಚರ್ಚೆಗೆ ಅವಶ್ಯಕವಿದ್ದ ಸಂಗತಿಗಳನ್ನು ಆರಿಸಿದರು ;
ಕೆಲವರು ಭಾರತೀಯರ ಸಾಮಾಜಿಕ ಜೀವನವನ್ನು ಅಭ್ಯಾಸಿಸಿದರು; ಮತ್ತೆ ಕೆಲ
ವರು ನಮ್ಮ ರಾಜಕೀಯ ಪರಂಪರೆಯನ್ನು ವಿಮರ್ಶಿಸಿಕೊಂಡರು. ಉಳಿದವರಲ್ಲಿ
ಬೇರೆ ಬೇರೆ ಚಿಕ್ಕ ಚಿಕ್ಕ ಗುಂಪಿನವರು ಭಾರತೀಯರ ಜನಜೀವನ ರೀತಿನೀತಿಗಳು,
ಅವರಲ್ಲಿರುವ ಎಡರು ತೊಡರುಗಳು, ಅವರ ಧಾರ್ಮಿಕ ಜೀವನ ಮುಂತಾದವು
ಗಳನ್ನು ಬೇರೆಬೇರೆಯಾಗಿ ಅಭ್ಯಾಸ ಮಾಡಿದರು. ಎಲ್ಲ ವಿದ್ಯಾರ್ಥಿಗಳು ತಾವು
ಆರಿಸಿಕೊಂಡ ವಿಭಾಗಗಳನ್ನು ತಮಗೆ ಉಪಲಬ್ಧವಾದ ಎಲ್ಲ ಮಾರ್ಗಗಳಿಂದ ಈ
ಪ್ರಶ್ನೆಗೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ಸಂಗ್ರಹಿಸಿಕೊಂಡ ತರುವಾಯ
ಭಾರತೀಯ ಮತ್ತು ಅಮೇರಿಕೆಯೊಳಗಿನ ತಜ್ಞರಿಂದ ಈ ವಿಷಯಗಳ ಮೇಲೆ
ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಈ ರೀತಿಯಾಗಿ ಆರು ತಿಂಗಳುಗಳ
ಅವಧಿಯಲ್ಲಿ ಇದೊಂದೇ ಪ್ರಶ್ನೆಯನ್ನು ಅವರೆಲ್ಲರೂ ಆಮೂಲಾಗ್ರವಾಗಿ
ಅಭ್ಯಾಸಮಾಡಿದರು. ಶಿಕ್ಷಕನು ತನ್ನ ವಿದ್ಯಾರ್ಥಿಗಳ ಸಿದ್ಧತೆಯು ಸಾಕಷ್ಟು
ಪ್ರಮಾಣದಿಂದ ನೆರವೇರಿದೆಯೆಂಬದನ್ನು ಮನಗಂಡ ತರುವಾಯ ಈ ಪ್ರಶ್ನೆ
ಯನ್ನು ವಾದವಿವಾದ ಸಂಘದ ಮೂಲಕವಾಗಿ ಚರ್ಚೆಗೆ ಒಡ್ಡಿದರು.
ವರ್ಗದ ಎಲ್ಲ ವಿದ್ಯಾರ್ಥಿಗಳನ್ನು ಎರಡು ಪಂಗಡಗಳಾಗಿ ವಿಂಗಡಿಸಿದರು. ಒಂದು
ಪಂಗಡದವರು ಹಿಂದು ಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ವಾದಿ
ಸಿದರು. ಇನ್ನೊಂದು ಪಂಗಡದವರು ಭಾರತೀಯರು ರಾಜಕೀಯ ಸ್ವಾತಂತ್ರ್ಯಕ್ಕೆ
ಅನರ್ಹರೆಂದು ಅವರ ಹೇಳಿಕೆಯನ್ನು ಪ್ರತಿರೋಧಿಸಿದರು. ಕೊನೆಯ
ನಿರ್ಣಯವೇನಾಯಿತೆಂಬ ದಾಗಲಿ ಅದರ ಪರಿಣಾಮವೇನೆಂಬದಾಗಲಿ ಮಹತ್ವದ
ವಾತಲ್ಲ ; ಪ್ರೊಜೆಕ್ಟ ಪದ್ಧತಿಯೆಂದರೇನೆಂಬದನ್ನೂ ಆ ಪದ್ಧತಿಯಲ್ಲಿ ವಿದ್ಯಾರ್ಥಿ
ಗಳು ಯಾವ ರೀತಿಯಾಗಿ ಅಭ್ಯಾಸಮಾಡುವರೆಂಬದನ್ನೂ ವಿವೇಚಿಸುವದೇ
ಈ ಉದಾಹರಣೆಯ ಧ್ಯೇಯ. ನಮ್ಮ ವಿದ್ಯಾರ್ಥಿಗಳಿಗೆ ಈ ಪದ್ಧತಿಯಿಂದ
ಅಭ್ಯಾಸಮಾಡಲು ಪರಿಸ್ಥಿತಿಯು ಸಾಕಾದಷ್ಟು ಅನುಕೂಲವಾಗಿಲ್ಲವೆಂಬದನ್ನು
ಮೊದಲೇ ಹೇಳಿದೆಯಷ್ಟೆ ?

೫. **ಇತಿಹಾಸ ಶಿಕ್ಷಣದ ಸಾಮಾನ್ಯ ವಿವೇಚನೆ :—** ಇತಿಹಾಸವ
ಇಂಥದೇ ಪದ್ಧತಿಯಿಂದ ಕಲಿಸಿರೆಂದು ನಿರ್ಣಯಿಸಿ ಹೇಳುವದು ಸುಲಭವ
ಈ ಮಾತು ವಿದ್ಯಾರ್ಥಿಗಳು, ಅವರ ಪರಿಸ್ಥಿತಿ, ಶಾಲೆಯ ಆವರಣ ಮುಂತಾ
ಅನೇಕ ಸಂಗತಿಗಳನ್ನು ಅವಲಂಬಿಸುವದು. ಆದರೂ ಇಲ್ಲಿ ಹಲಕೆಲ
ಸಾಮಾನ್ಯ ಸೂಚನೆಗಳನ್ನು ಮುಂಡಿಸುವದಕ್ಕೆ ಪ್ರತ್ಯವಾಯವೇನೂ ಇರಲಾರದ
ಆ ಸೂಚನೆಗಳನ್ನು ಹತ್ತು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿಕೊಂಡಿದೆ.

೧. **ಕಥನ :—** ಹೊಸ ಸಂಗತಿಗಳನ್ನು ಕಲಿಸುವದಿದ್ದಾಗ ಶಿಕ್ಷಕ
ಅವನ್ನು ತಮ್ಮ ವಿದ್ಯಾರ್ಥಿಗಳಿಗೆ ಕಥನಪದ್ಧತಿಯಿಂದ ವಿವರಿಸಿ ಹೇಳಬಹುದ
ಆದರೆ ಆ ವಿವರಣೆಯ ಕ್ರಮವು ಬಾಲಕರಿಗೆ ಆಕರ್ಷಕವಾಗಿರಬೇಕು. ಚಿ
ಮಕ್ಕಳ ವರ್ಗದಲ್ಲಿ ಅದನ್ನು ಕಥೆಯನ್ನು ಹೇಳುವಂತೆಯೇ ಹೇಳಬೇಕಾಗುವದ
ಮಧ್ಯಮ ತರಗತಿಯಲ್ಲಿ ಈ ಕಥನ ಕ್ರಮವನ್ನು ಬಾಯಿಯಿಂದ ಹೇಳಿದರ
ಅಡ್ಡಿಯಿಲ್ಲ ; ಪುಸ್ತಕದಿಂದ ಓದಿತೋರಿಸಿದರೂ ಅಡ್ಡಿಯಿಲ್ಲ. ಶಿಕ್ಷಕರು ತಮ
ಅನುಕೂಲತೆಯ ಮೇರೆಗೆ ಈ ಎರಡು ಕ್ರಮಗಳಲ್ಲಿ ಒಂದನ್ನು ಅನುಸರಿ
ಬಹುದು. ವಿದ್ಯಾರ್ಥಿಗಳು ತುಲನಾತ್ಮಕ ದೃಷ್ಟಿಯಿಂದ ಇದನ್ನು ಪಯಾ
ಲೋಚಿಸಿ ಇಂಥ ಬೇರೆ ಘಟನೆಗಳಿಗೂ ಇದಕ್ಕೂ ಇರುವ ಸಾಮ್ಯವೈಷಮ
ಗಳನ್ನು ಕಂಡುಕೊಂಡು ತಮ್ಮ ಅನುಮಾನಗಳನ್ನು ಕಂಡುಹಿಡಿಯಬೇಕು
ಶಾಲೆಯಲ್ಲಿ ಅಭ್ಯಾಸಕ್ಕಾಗಿ ನಿಯಮಿಸಿದ ಪಾಠಪುಸ್ತಕವು ಈ ಕೆಲಸಕ್ಕೆ ಸಾಕಷ್ಟು
ಸಹಾಯಕಾರಿಯಾಗಲಾರದು. ಶಿಕ್ಷಕನು ತಾನು ಓದಿ ಅಭ್ಯಾಸಮಾಡಿ
ಪುಸ್ತಕಗಳಿಂದ ಆಯಾ ಐತಿಹಾಸಿಕ ಘಟನೆಗಳಲ್ಲಿಯ ಮೂಲ ಆಧಾರಗಳನ
ವಿದ್ಯಾರ್ಥಿಗಳಿಗೆ ಓದಿ ತೋರಿಸಿದರೆ ಅದರಿಂದ ಹೆಚ್ಚು ಸುಪರಿಣಾಮವಾಗುವದು

೨. **ಉಪಕರಣಗಳು :—** ಸಾಕಷ್ಟು ಚಿತ್ರಗಳನ್ನು ಉಪಯೋಗಿ
ದಿದ್ದರೆ ಇತಿಹಾಸದ ಪಾಠವು ಸುಗಮವೂ ಸುಪರಿಣಾಮಕಾರಿಯೂ ಆಕರ್ಷಕ
ಆಗಲಾರದು. ಶಿಕ್ಷಕನು ಕರಿಯ ಹಲಗೆಯ ಮೇಲೆ ತಕ್ಕಷ್ಟು ವರ್ಣನಾತ್ಮ
ವಾದ ನಕಾಶೆ ಪ್ಲ್ಯಾನುಗಳನ್ನು ತಾನೇ ತೆಗೆಯಬಹುದು. ಮುದ್ರಿತವಾ
ಒಳ್ಳೆಯ ಚಿತ್ರಗಳನ್ನು ಸಂಗ್ರಹಿಸಿ ತಂದು ಬಾಲಕರಿಗೆ ತೋರಿಸಬಹುದು.
ಚಿತ್ರಗಳು ಕೇವಲ ಕಾಲ್ಪನಿಕವಾಗಿರಕೂಡದು. ಸತ್ಯಸಂಗತಿಗಳಿಗೆ ಸಮಸ್ವ
ವಾಗುವಂಥ ಚಿತ್ರಗಳೇ ಇರುವದು ಅವಶ್ಯ. ಚಿತ್ರಗಳು ಸಾಕಾದಷ್ಟು ದೊ
ಪ್ರಮಾಣದವಿರಬೇಕು. ಇಡಿಯ ವರ್ಗಕ್ಕೆ ಕಾಣಿಸುವಷ್ಟು ದೊಡ್ಡದಿದ್ದ
ಒಳಿತು. ಐತಿಹಾಸಿಕ ನಕಾಶೆಗಳನ್ನು ಅಲ್ಲಲ್ಲಿ ಉಪಯೋಗಿಸಲೇಬೇಕು. ಭೌ

ನ್ನ ಐತಿಹಾಸಿಕ ಕಾಲಗಳ ಕಲ್ಪನೆಯು ಬಾಲಕರ ಆಕಲನಶಕ್ತಿಗೆ ಸುಗುಮ ಲ್ಲ. ಅದಕ್ಕಾಗಿ ಶಿಕ್ಷಕನು 'ಕಾಲರೇಖಾ' ಮುಂತಾದ ಸಾಧನಗಳನ್ನು ಚ್ಚಾಗಿ ಉಪಯೋಗಿಸಿಕೊಳ್ಳಬೇಕಾಗುವದು. ಹೆಚ್ಚು ದೊಡ್ಡ ಅಂಕೆಸಂಖ್ಯೆ ಳನ್ನೂ ಯುದ್ಧದೊಳಗಿನ ಸೈನ್ಯದ ಪರಿಮಾಣ ಮುಂತಾದವುಗಳನ್ನೂ ಸರಿ ಯಾಗಿ ಕಲ್ಪಿಸಿಕೊಳ್ಳಲಿಕ್ಕೆ ಅನುಕೂಲವಾಗುವಂಥ 'ಗ್ರಾಫ' ಮುಂತಾದ ಟಗಳನ್ನು ಶಿಕ್ಷಕನು ತಾನೇ ತಯಾರಿಸಿಕೊಳ್ಳಬೇಕು. ರಣಭೂಮಿಯ ನಕಾಶೆ ಛಾಚಿತ್ರ ಆಕೃತಿ ಮುಂತಾದವುಗಳನ್ನು ಪಾಠದಲ್ಲಿ ಅಲ್ಲಲ್ಲಿಗೆ ಉಪಯೋಗಿಸಿ ಳ್ಳದಿದ್ದರೆ ವಿದ್ಯಾರ್ಥಿಗಳ ಜ್ಞಾನವು ಕೇವಲ ಶಾಬ್ದಿಕವಾಗಿಯೇ ಉಳಿದು ಡುವ ಸಂಭವವುಂಟು. ಒಟ್ಟಿಗೆ ಇತಿಹಾಸದ ಪಾಠದಲ್ಲಿ ನಕಾಶೆ, ಚಿತ್ರ, ಟಗಳು, ಗ್ರಾಫ ಆಕೃತಿಗಳು, ನಿಶಾನೆ ಕೋಟಿಕೊತ್ತಳಗಳು ಆಯುಧಗಳು ುಂತಾದವುಗಳ ಮಾದರಿಗಳು ಇವನ್ನು ವಿಪುಲವಾಗಿ ಉಪಯೋಗಿಸಿಕೊಂಡು ಾಠವನ್ನು ಸಾಧ್ಯವಿದ್ದ ಮಟ್ಟಿಗೂ ಸ್ಪಷ್ಟೀಕರಿಸುತ್ತ ಸಾಗಬೇಕಾಗುವದು. ರಿಯ ಹಲಗೆಯು ಇತಿಹಾಸ ಪಾಠಗಳಲ್ಲಿ ಮಿಕ್ಕ ಪಾಠಗಳಿಗಿಂತಲೂ ಹೆಚ್ಚು ಪ್ರಮಾಣದಿಂದ ಉಪಯೋಗಿಸಲ್ಪಡಬೇಕಾಗುವದು.

೩. **ಇತರ ಸಾಧನಗಳು :—** ಆಧುನಿಕ ಕಾಲದಲ್ಲಿ ಸಿನೇಮಾ, ೀಡಿಯೋ, ಮಾಯಾದೀಪ ಮುಂತಾದ ಸಾಧನಗಳನ್ನು ಕೂಡ ಶಿಕ್ಷಣದ ಾಧನಗಳಾಗಿ ಉಪಯೋಗಿಸಲು ಸಾಧ್ಯವಾಗಿದೆ. ಮಾಯಾದೀಪವೂ ಸ್ಟಿರಿಯೋ ಗ್ರಾಫ ಚಿತ್ರಗಳೂ ಐತಿಹಾಸಿಕ ಚಿತ್ರಗಳನ್ನು ಪ್ರದರ್ಶಿಸಲು ತುಂಬ ಸಹಾಯ ಾರಿಯಾಗಿವೆ. ಎಪಿಡೋಸ್ಕೋಪ ಯಂತ್ರದ ಸಹಾಯದಿಂದ ಮಾಸಪತ್ರಿಕೆ ೂದಲಾದ ನಿಯತಕಾಲಿಕಗಳಲ್ಲಿ ಬರುವ ಚಿತ್ರಗಳನ್ನು ಬಾಲಕರಿಗೆ ವಿಷದೀ ರಿಸಿ ತೋರಿಸಿದರೆ ಇತಿಹಾಸದ ಪಾಠವು ತುಂಬ ಆಕರ್ಷಕವಾಗಿ ಸಾಗುವದು. ುತ್ತು ನಿಜವಾದ ಜ್ಞಾನವಾಗಲು ಅನುವಾಗುವದು. ಸಿನೇಮಾಗಳಲ್ಲಿ ಎಷ್ಟೋ ತಿಹಾಸಿಕ ಘಟನೆಗಳನ್ನು ನೋಡಲು ಸಾಧ್ಯವಾಗಬಹುದು. ರೇಡಿಯೋಗಳಲ್ಲಿ ಲವು ರಾಜಕೀಯ ಮುಂದಾಳುಗಳು ಐತಿಹಾಸಿಕ ಘಟನೆಗಳನ್ನು ಕುರಿತು ಾತಾಡುತ್ತಿರುವರು. ರೇಡಿಯೋ ಕಂಪನಿಯವರು ವಿದ್ಯಾರ್ಥಿಗಳಿಗಾಗಿಯೇ ಂಥ ಉಪನ್ಯಾಸಗಳನ್ನೂ ಕಾರ್ಯಕ್ರಮಗಳನ್ನೂ ಏರ್ಪಡಿಸುವದೂ ಉಂಟು. ವನ್ನೆಲ್ಲ ಶಿಕ್ಷಕರು ಸರಿಯಾಗಿ ಉಪಯೋಗಿಸಿಕೊಳ್ಳಬಹುದು.

೪. **ಐತಿಹಾಸಿಕ ಪ್ರವಾಸಗಳು :—** ಐತಿಹಾಸಿಕ ಮಹತ್ವವುಳ್ಳ ಸ್ಥಳ ಕ್ಕೆ ವಿದ್ಯಾರ್ಥಿಗಳನ್ನು ಕರೆದುಕೊಂಡುಹೋಗಿ ಪ್ರವಾಸಮಾಡಿ ಬರುವದರಿಂದ ತಿಹಾಸದ ಪುಸ್ತಕೀಯ ಜ್ಞಾನಕ್ಕಿಂತ ಸಾವಿರಮಡಿ ಹೆಚ್ಚು ಪ್ರಯೋಜನ

ವಾಗುವದು. ಇಂಥ ಪ್ರವಾಸಕ್ಕೆ ಹೊರಡುವದಕ್ಕಿಂತ ಮೊದಲು ಶಿಕ್ಷಕನು ವಿದ್ಯಾರ್ಥಿಗಳಿಗೆ ಆಯಾ ಸ್ಥಳಗಳ ಇತಿಹಾಸವನ್ನು ಅವರಿಗೆ ಹೇಳಿರಬೇಕು. ಪ್ರವಾಸದಿಂದ ತಿರುಗಿ ಬಂದಬಳಿಕ ವಿದ್ಯಾರ್ಥಿಗಳು ತಾವು ನೋಡಿಬಂದ ಸಂಗತಿಗಳನ್ನೆ ಒಂದು ಚಿಕ್ಕ ಪ್ರಬಂಧವಾಗಿ ಬರೆಯಬೇಕು. ಬೇರೆ ಬೇರೆ ದೇಶ ಕಾಲಗಳ ನಿಶಾನೆಗಳು, ನಾಣ್ಯಗಳು, ಆಯುಧಗಳು, ಇವುಗಳನ್ನು ಸಂಗ್ರಹಿಸಿಟ್ಟಿರುವ ವಸ್ತುಸಂಗ್ರಹಾಲಯಗಳುಳ್ಳ ಸ್ಥಳಗಳಿಗೆ ಪ್ರವಾಸಕ್ಕೆ ಹೋದಾಗ ಅವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಶಾಲೆಯ ಕೋಣೆಯಲ್ಲಿ ಕುಳಿತು ಕಲಿತ ಹಲವು ಪಾಠಗಳಿಗಿಂತಲೂ ಇಂಥ ಐತಿಹಾಸಿಕ ಪ್ರವಾಸಗಳಿಂದ ಕಲಿತ ಸ್ವಲ್ಪ ಸಂಗತಿಗಳೆ ಹೆಚ್ಚು ಪರಿಣಾಮಕಾರಿಯೆಂಬದನ್ನು ಶಿಕ್ಷಕರು ಮರೆಯುವಂತಿಲ್ಲ.

೫. **ಇತಿಹಾಸದೊಳಗಿನ ಇಸ್ವಿಗಳು :—** ಇತಿಹಾಸದ ಪಾಠಗಳಲ್ಲಿ ಇಸ್ವಿಗಳ ಉಪಯೋಗವೇನೋ ಇದ್ದೇ ಇದೆ. ಐತಿಹಾಸಿಕ ಸಂಗತಿಗಳನ್ನು ತಕ್ಕ ಸ್ಥಾನ ಕಾಲಗಳನ್ನು ಅನುಲಕ್ಷಿಸಿಯೇ ಓದಿ ನೋಡಬೇಕು. ಕಾಲದ ಕಲ್ಪನೆಗೆ ಇಸವಿಗಳು ಬೇಕೇಬೇಕು. ಆದ್ದರಿಂದ ಇತಿಹಾಸದ ಪಾಠಗಳಲ್ಲಿ ಕಾಲರೇಖೆ ಮತ್ತು ಕಾಲನಿರೂಪಕಪಟ ಇವುಗಳ ಆವಶ್ಯಕತೆಯು ತುಂಬಾ ಇದ್ದೆ ಇರುವದು. ವಿದ್ಯಾರ್ಥಿಗಳು ಇತಿಹಾಸದೊಳಗಿನ ಇಸವಿಗಳನ್ನೂ ಹಲಕೆಲವು ತುಂಬ ಮಹತ್ವವುಳ್ಳ ತಾರೀಖುಗಳನ್ನೂ ಪಾಠಮಾಡಿ ನೆನಪಿಟ್ಟುಕೊಳ್ಳಬೇಕು. ಮಹತ್ವದ ಇಸವಿ ತಾರೀಖುಗಳು ಐತಿಹಾಸಿಕ ಪ್ರವಾಸದ ಮಾರ್ಗದೊಳಗಿನ ಮೈಲುಗಲ್ಲು ಫರ್ಲಾಂಗಿನಕಲ್ಲುಗಳಂತೆಯೇ ಉಪಯೋಗವಾಗುವವು. ಅವನ್ನು ದುರ್ಲಕ್ಷಿಸಿದರೆ ಸಾಗದು.

೬. **ಟಿಪ್ಪಣಿಗಳು :—** ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿತ ಅಥವಾ ತಾವು ಓದಿಕೊಂಡ ಐತಿಹಾಸಿಕ ಸಂಗತಿಗಳನ್ನು ತಾವೇ ಟಿಪ್ಪಣಿಮಾಡಿಡುವ ರೂಢಿಯನ್ನು ಪಡೆದಿರಬೇಕು. ಕೆಳಗಿನ ತರಗತಿಗಳಲ್ಲಿ ಈ ತರಹದ ಟಿಪ್ಪಣಿಗಳ ಆವಶ್ಯಕತೆಯಿರದು. ಶಿಕ್ಷಕರು ಟಿಪ್ಪಣಿಗಳನ್ನು ತಾವೇ ಹೇಳಿ ಬರೆಯಿಸುವ ರೂಢಿಯು ಒಳ್ಳೆಯದಲ್ಲ. ಇತಿಹಾಸದ ಪಾಠವು ನಡೆದಾಗ ಶಿಕ್ಷಕನು ಕರಿಯ ಹಲಗೆಯ ಮೇಲೆ ಸಂಕ್ಷೇಪ ಟಿಪ್ಪಣಿಗಳನ್ನು ಬರೆಯಬೇಕು. ಮತ್ತು ವಿದ್ಯಾರ್ಥಿಗಳು ಪಾಠದ ಕೊನೆಗೆ ಅದನ್ನು ನಕಲುಮಾಡಿಕೊಳ್ಳಲು ಅಡ್ಡಿಯಿಲ್ಲ. ಪಾಠವು ನಡೆದಾಗ ವಿದ್ಯಾರ್ಥಿಗಳು ನಡುನಡುವೆ ಟಿಪ್ಪಣಿಮಾಡಿಕೊಳ್ಳುವದಕ್ಕಾಗಿ ಪಾಠವನ್ನು ದುರ್ಲಕ್ಷಿಸಿ ತೊಂದರೆಗೀಡುಮಾಡಲಾಗದು.

೭. **ಶಾಲೆಯ ವೇಳಾಪತ್ರಿಕೆ:—** ಇತಿಹಾಸವು ಮಾನವಜೀವನದಲ್ಲಿ ಸಾಮಾಜಿಕ ಸಂವರ್ಧನೆಗೆ ಸಹಾಯಕಾರಿಯಾದ ತುಂಬ ಮಹತ್ವವುಳ್ಳ ವಿಷಯವಾಗಿದ್ದರೂ ಶಾಲೆಯ ಅಭ್ಯಾಸಕ್ರಮದಲ್ಲಿ ಅದಕ್ಕೆ ಅಷ್ಟು ಮಹತ್ವವಿಲ್ಲ. ಮತ್ತು ವೇಳಾಪತ್ರಿಕೆಯಲ್ಲಿ ಅದಕ್ಕೆ ೪೦–೪೫ ನಿಮಿಷಗಳ ಒಂದೆರಡು ತಾಸುಗಳಷ್ಟೆ ಅವಕಾಶವು ದೊರೆಯುವದು. ಶಿಕ್ಷಕನು ತನ್ನ ವರ್ಗದ ವೇಳಾಪತ್ರಿಕೆಯಲ್ಲಿರುವ ಅವಕಾಶಕ್ಕೆ ತಕ್ಕಷ್ಟೇ ವಿಷಯವನ್ನು ಕಲಿಸಲು ಹವಣಿಸಬೇಕಲ್ಲದೆ ಹೆಚ್ಚು ವಿಷಯಗಳನ್ನು ಸೇರಿಸಿಕೊಂಡು ಅತ್ತೂ ಇಲ್ಲ ಇತ್ತೂ ಇಲ್ಲದಂತೆ ಮಾಡುವದು ಸರಿಯಲ್ಲ. ಪ್ರತಿ ಪಾಠದಲ್ಲಿಯೂ ಒಂದಿಲ್ಲೊಂದು ಹೊಸ ಸಂಗತಿಯು ಸಮಾವೇಶವಾಗುವಂತೆ ನೋಡಿಕೊಳ್ಳಬೇಕು. ಮುಂದಿನ ಪಾಠದ ಪ್ರಾರಂಭದಲ್ಲಿ ಹಿಂದಿನ ಪಾಠದ ಮುಖ್ಯ ಸಂಗತಿಗಳನ್ನು ವಿದ್ಯಾರ್ಥಿಗಳ ಸ್ಮರಣೆಗೆ ತಂದು ಕೊಡಬೇಕು. ಮತ್ತು ಇತಿಹಾಸದ ಪಾಠದ ಉಪಯೋಗವು ಇಂದಿನ ಜನಜೀವನಕ್ಕೆ ಹೇಗೆ ಸಂಬಂಧಿಸುವದೆಂಬುದನ್ನು ವಿವೇಚಿಸಬೇಕು. ಇವೆಲ್ಲ ಸಂಗತಿಗಳನ್ನು ನೋಡಿದರೆ ಇತಿಹಾಸದ ಪಾಠಕ್ಕೆ ಸಾಕಾದಷ್ಟು ಅವಕಾಶವು ಬೇಕೆಂಬದನ್ನೂ ಶಾಲೆಯ ವೇಳಾಪತ್ರಿಕೆಯಲ್ಲಿ ದೊರೆಯಬಹುದಾದ ಅವಕಾಶಕ್ಕೆ ಅನುಗುಣವಾಗಿಯೇ ವಿಷಯವನ್ನು ಕಲಿಸುವ ಯೋಜನೆಯನ್ನು ಕೈಕೊಳ್ಳಬೇಕೆಂಬದನ್ನೂ ಶಿಕ್ಷಕರು ಮರೆಯಲಾಗದು. ವಿದ್ಯಾರ್ಥಿಗಳು ಕಲಿಯಬೇಕಾದ ಸಂಗತಿಗಳು ಹಲವಿದ್ದರೂ ಅವನ್ನೆಲ್ಲ ಕಲಿಯಲು ಸಾಕಾದಷ್ಟು ಅವಕಾಶವೂ ಅನುಕೂಲವೂ ನಮ್ಮ ಶಾಲೆಯ ಜೀವನದಲ್ಲಿ ಸಾಧ್ಯವಿಲ್ಲವೆಂಬದನ್ನು ಬೇರೆ ಹೇಳಬೇಕಾಗಿಲ್ಲ.

೮. **ಇತಿಹಾಸದ ಕೋಣೆ:—** ಇತಿಹಾಸದ ಪಾಠವು ನಡೆದಾಗ ವಿದ್ಯಾರ್ಥಿಗಳೆಲ್ಲರು ಐತಿಹಾಸಿಕ ವಾತಾವರಣದಲ್ಲಿಯೇ ಇರುವದು ಒಳಿತು. ಇದ್ದರಿಂದ ಸಾಧ್ಯವಿದ್ದಲ್ಲಿ ಇತಿಹಾಸದ ಪಾಠಗಳಿಗಾಗಿ ಸ್ವತಂತ್ರವಾದೊಂದು ಕೋಣೆಯನ್ನೇ ರಚಿಸಿಕೊಂಡರೆ ಅದರಿಂದ ತುಂಬ ಸಹಾಯವಾಗುವದು. ಆ ಕೋಣೆಯ ಗೋಡೆಗಳಲ್ಲಿ ಐತಿಹಾಸಿಕ ನಕಾಶೆಗಳನ್ನು ಚಿತ್ರಗಳನ್ನು ತೂಗಹಾಕಬೇಕು. ಮತ್ತು ಕಲಿಸುವ ಪಾಠಕ್ಕೆ ಅನುಗುಣವಾಗಿ ಅವನ್ನು ಆಗಾಗ ಬದಲಿಸಬೇಕು. ಗೋಡೆಯಮೇಲೆ ಕಾಲರೇಷೆಯನ್ನು ಕೊರೆದು ಅದರಲ್ಲಿ ಮಹತ್ವದ ಇಸವಿಗಳನ್ನು ಗುರುತಿಸಿರಬೇಕು. ವಿಶಾಲವಾದೊಂದು ಕರಿಯು ಹಲಗೆಯೂ ಚಿತ್ರಪ್ರದರ್ಶನಕ್ಕೆ ತಕ್ಕದ್ದೊಂದ ಪಡದೆಯೂ ಅಲ್ಲಿ ಇರಬೇಕು. ಅನುಕೂಲತೆಯಿದ್ದರೆ ಮಾಯಾದೀಪದ ಚಿತ್ರಗಳನ್ನು ತೋರಿಸುವದಕ್ಕೆ ಆವಶ್ಯಕವಾದ ಕತ್ತಲೆಯ ಕೋಣೆಯಾಗಿ ಮಾರ್ಪಡಿಸುವದಕ್ಕೆ ಬೇಕಾದ ಕಪ್ಪು ಪಡದೆ

ಗಳನ್ನು ಆ ಕೋಣೆಯ ಬಾಗಿಲು ಕಿಡಕಿಗಳಿಗೆ ಹಾಳತಾಗಿ ರಚಿಸಿಕೊಂಡಿ ಬೇಕು. ವಿದ್ಯಾರ್ಥಿಗಳೂ ಶಿಕ್ಷಕರೂ ಕಾಲಕಾಲಕ್ಕೆ ಸಂಗ್ರಹಿಸಿದ ಐತಿಹಾಸಿ ವಸ್ತುಗಳ ಸಂಗ್ರಹವೂ ಕೂಡ ಅದೇ ಕೋಣೆಯ ಒಂದು ಭಾಗದಲ್ಲಿದ್ದರೆ ಹೆಚ್ಚು ಅನುಕೂಲವಾಗುವದು. ಇನ್ನೂ ಹೆಚ್ಚು ಅನುಕೂಲವಿದ್ದ ಪ್ರಸಂಗದಲ್ಲಿ ಐತಿಹಾಸಿಕ ಘಟನೆಗಳನ್ನು ಅಭಿನಯಿಸಲು ತಕ್ಕದ್ದಾದ ಒಂದು ಚಿಕ್ಕ ರಂಗಮಂಟಪವನ್ನು ಕೂಡ ಅದಕ್ಕೆ ಜೋಡಿಸಬಹುದು. ಇಂಥ ಬಹುವಿಧ ಅನುಕೂಲತೆಗಳಿಂದ ಇತಿಹಾಸದ ಪಾಠಗಳಿಗೆ ಜೀವಕಳೆ ಬರುವದು. ಆಧುನಿಕ ಶಾಲಾಗೃಹಗಳಲ್ಲಿ ಭೂಗೋಲದ ಕೋಣೆಯ ಆವಶ್ಯಕತೆಯಿರುವಷ್ಟೆ ಇತಿಹಾಸದ ಕೋಣೆಯ ಕೊರತೆಯೂ ಅನುಭವಕ್ಕೆ ಬರಹತ್ತಿದೆ.

೯. **ಪೌರನೀತಿಯೂ ರಾಜ್ಯದಾಡಳಿತೆಯೂ**:— ರಾಜ್ಯದಾಡಳಿತೆಯ ಕ್ರಮನಿರೂಪಣೆ ಮತ್ತು ಅದರ ಕ್ರಮಬದ್ಧವಾದ ಬೆಳವಣಿಗೆ ಇವುಗಳ ಅಭ್ಯಾಸವಿಲ್ಲದೆ ಇತಿಹಾಸದ ಅಭ್ಯಾಸವು ಸಂಪೂರ್ಣವಾಗಲಾರದು. ಇತಿಹಾಸವೂ ಪೌರನೀತಿಯೂ ಜೋಡುಜೋಡಾಗಿ ಸಾಗಬೇಕು. ಯೋಗ್ಯ ನಾಗರಿಕರಾಗಲು ತಕ್ಕ ತರಬೇತು ಪಡೆಯುವದಕ್ಕಾಗಿಯೇ ವಿದ್ಯಾರ್ಥಿಯು ಸಾಲೆಗೆ ಹೋಗುವನು ಮತ್ತು ಅವನು ರಾಜ್ಯದಾಡಳಿತೆಯ ಮತ್ತು ನಾಗರಿಕನ ಕರ್ತವ್ಯಗಳ ಜ್ಞಾನವನ್ನು ಪಡೆಯದೆ ಯೋಗ್ಯ ನಾಗರಿಕನಾಗಲಾರನು. ಹಲವು ಪ್ರಜಾಸತ್ತೆಯ ಸಂಸ್ಥೆಗಳು ನಮ್ಮ ದೇಶದಲ್ಲಿ ಇನ್ನೂ ಪ್ರಯೋಗಾವಸ್ಥೆಯಲ್ಲಿಯೇ ಉಳಿದಿವೆ ಮತ್ತು ನಮ್ಮ ನಾಗರಿಕರು ಇವುಗಳ ಅಸ್ತಿವಾರವನ್ನೂ ಘಟನೆಗಳನ್ನೂ ಅಭಿವೃದ್ಧಿಮಾರ್ಗವನ್ನೂ ತಿಳಿದಿರಬೇಕು. ಆದ್ದರಿಂದ, ನಮ್ಮ ಸಾಲೆಗಳಲ್ಲಿ ಈ ವಿಷಯಗಳನ್ನು ಇತಿಹಾಸದ ಅಂಗಗಳಾಗಿ ಕಲಿಸಲೇಬೇಕು.

೧೦. **ಹಿಂದುಸ್ತಾನದ ಇತಿಹಾಸದ ವೈಶಿಷ್ಟ್ಯವೇನು?**:— ನಮ್ಮ ದೇಶವು ಬಹು ಪುರಾತನಕಾಲದಿಂದಲೂ ಸುಶಿಕ್ಷಿತವಾದ ಒಂದು ರಾಷ್ಟ್ರವಾಗಿ ಬಾಳಿ ಬದುಕಿದೆ. ಅದಕ್ಕೆ ತಕ್ಕಂತೆ ನಮ್ಮ ಸಾಹಿತ್ಯ ಸಂಸ್ಕೃತಿ ಸುಧಾರಣೆಗಳು ಕೂಡ ಬಹು ಪುರಾತನ ಪರಂಪರೆಯುಳ್ಳವೇ ಆಗಿವೆ. ಜಗತ್ತಿನಲ್ಲೆಲ್ಲ ವಿಖ್ಯಾತವಾದ ಧಾರ್ಮಿಕ ಪುರುಷರು ನಮ್ಮಲ್ಲಿ ಉದಯವಾಗಿದ್ದಾರೆ. ನಮ್ಮಲ್ಲಿ ಅಸಂಖ್ಯ ಭಾಷೆಗಳಿದ್ದರೂ ಕೆಲವು ಮುಖ್ಯ ಭಾಷೆಗಳು ತಮ್ಮ ಪುರಾತನ ಸಾಹಿತ್ಯ ಭಾಂಡಾರದಿಂದ ತುಂಬ ಉಚ್ಚತರಗತಿಗೆ ಸೇರಿದುವು. ಹಾಗೆಯೇ ನಮ್ಮ ದೇಶದ ಮುಖ್ಯ ಇತಿಹಾಸವು ಹಲವು ಪ್ರಾಂತಿಕ ಇತಿಹಾಸಗಳಲ್ಲಿ ವಿಭಾಗ ಹೊಂದಿದೆ. ಹೀಗಿರುವದರಿಂದ ನಮ್ಮ ಶಾಲೆಗಳ ಬಾಲಕರು ಯೋಗ್ಯ ನಾಗರಿಕ

ರಾಗಿ ಮೂರ್ಪಡಬೇಕಾದರೆ ಇವೆಲ್ಲ ವೈಶಿಷ್ಟ್ಯಗಳನ್ನು ಅನುಲಕ್ಷಿಸಿಯೇ ಇತಿಹಾಸದ ಅಭ್ಯಾಸವನ್ನು ಸಾಗಿಸಬೇಕಾಗುವದೆಂಬದನ್ನು ನಮ್ಮ ಇತಿಹಾಸ ಶಿಕ್ಷಕರು ನೆನಪಿಡಬೇಕು. ಆದ್ದರಿಂದ ನಮ್ಮ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬನು ಮೊದಲು ಹಿಂದುಸ್ತಾನದ ಇತಿಹಾಸವನ್ನು ತಾನು ಭಾರತಮಾತೆಯ ಮಗುವೆಂಬ ದೃಷ್ಟಿಯಿಂದ ಅಭ್ಯಾಸಮಾಡಿದ ತರುವಾಯ ನಮ್ಮ ದೇಶವನ್ನಾಳುವ ರಾಜ್ಯ ಕರ್ತರ ಮತ್ತು ನಮ್ಮ ದೇಶದ ಪ್ರಕೃತದ ರಾಜಕಾರಣಕ್ಕೆ ಸಂಬಂಧಿಸಿದ ಇತಿಹಾಸವನ್ನು ತುಲನಾತ್ಮಕ ದೃಷ್ಟಿಯಿಂದ ಓದಬೇಕು.

ಈ ಎಲ್ಲ ವಿವರಣೆಯಿಂದ ಇತಿಹಾಸ ಶಿಕ್ಷಣದ ಮಹತ್ವವೂ ಅದನ್ನು ಕೈಕೊಂಡ ಶಿಕ್ಷಕನ ಹೊಣೆಗಾರಿಕೆಯೂ ವಿದಿತವಾಗುವವಷ್ಟೇ! ನಮ್ಮ ಪ್ರಾಥಮಿಕ ಶಾಲಾ ಶಿಕ್ಷಕರು ಈ ವಿಚಾರಗಳನ್ನು ಆಸ್ಥೆಯಿಂದ ಓದಿ ವಿಮರ್ಶಿಸಿ ಇವನ್ನು ಎಷ್ಟರಮಟ್ಟಿಗೆ ತಮ್ಮ ಕಾರ್ಯರಂಗಕ್ಕೆ ಇಳಿಸಬಹುದೆಂಬದನ್ನು ಪರ್ಯಾಲೋಚಿಸಿ ನೋಡಬೇಕು. ತಮ್ಮ ಹೊಣೆಗಾರಿಕೆಯನ್ನು ಅರಿತು ಆಸ್ಥೆಯಿಂದ ಪಾಠಸಾಗಿಸಬೇಕು.

ತಿದ್ದುಪಡಿ

ಪ್ರಾಥಮಿಕ ಶಿಕ್ಷಣದ ಅಗಷ್ಟ ತಿಂಗಳ ಅಂಕದ ೨೦ನೆಯ ಪುಟದ ೨೪ನೆಯ ಸಾಲಿನಲ್ಲಿ ಹಿಜರೀ ಶಕ ಎಂದಿರುವದನ್ನು ಫಸಲೀ ಶಕ ಎಂದು ತಿದ್ದಿ ಓದಬೇಕು.

—ಸಂ. ಪ್ರಾ.

ಸ್ವೀಕಾರ

೧. ಸಾಂಘಿಕ ಆಟಗಳ ಗುಣಪತ್ರಿಕೆ—ರಚಿಸಿದವರು– ಶ್ರೀ. ಜ. ಚಾಪಟ
ಅಭಿಪ್ರಾಯವನ್ನು ಅನುಕೂಲವಾದಾಗ ಪ್ರಕಟಿಸುವೆವು.

—ಸಂಪಾದಕರು

ಶಿಕ್ಷಣವೂ ಮಾನಸಶಾಸ್ತ್ರವೂ

ಲೇಖಕ:— ಶ್ರೀ. ವ್ಹಿ. ಕೆ. ಜವಳಿ. ಬಿ. ಎ. ಆನರ್ಸ ಬಿ. ಬಿ. ಡಿಪ್. ಪಿ. ಇಡಿ

ವಿದ್ಯಾಭ್ಯಾಸ ಮಾಡಿಸುವಲ್ಲಿ ಗುರುವು ವಿದ್ಯಾರ್ಥಿಯ ಅಥವಾ ಶಿಷ್ಯ
ಯೋಗ್ಯತೆಯನ್ನು ಅರಿತಿರಬೇಕೆಂಬ ತತ್ವವನ್ನು ಪೂರ್ವದ ಆಚಾರ್ಯರೂ ಬು
ವಂತರೂ ಕಂಡುಹಿಡಿದಿದ್ದರು. ಬೋಧೆಯು ಮಾತೃಭಾಷೆಯಲ್ಲಿ ಆಗಬೇಕೆಂದ
ಸ್ತ್ರೀ-ಪುರುಷರ ವರ್ತನದಲ್ಲಿ ವ್ಯತ್ಯಾಸ ಇರುವದೆಂದೂ ಗೌತಮ ಬುದ್ಧ
ಹಿಂದೆಯೆ ಸಾರಿರುವನು. ನಾಲಂದ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಂ
ಬೇಕಾದರೆ ವಿದ್ಯಾರ್ಥಿಯು ಮೊದಲು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂ
ಬೇಕಾಗುತ್ತಿತ್ತು. ವಿಷಯವನ್ನು ಕಲಿಸುವ ಪೂರ್ವದಲ್ಲಿ ಯೋಗ್ಯ ಲಕ್ಷಣಗಳು
ಶಿಷ್ಯನಿಗೆ ಮಾತ್ರ ವೇದಾಭ್ಯಾಸ ಮಾಡಿಸಬೇಕೆಂದು ಶಂಕರಾಚಾರ್ಯರು ಹೇಳಿ
ವರು. ವಿದ್ಯಾರ್ಥಿಯ ಬುದ್ಧಿ ಸಾಮರ್ಥ್ಯವನ್ನು ಅಳೆಯಬೇಕೆಂಬ ತತ್ವವೇ ಇದರ
ಉದಕವಾಗಿದೆ. ಶಿಕ್ಷಣ ಯೋಜನೆಯು ಶಿಷ್ಯನ ಸ್ವಭಾವವನ್ನು ಅನುಸರಿ
ಬೇಕೆಂದು ಗ್ರೀಕ ತತ್ವಜ್ಞಾನಿಯಾದ ಪ್ಲೇಟೋ ಇವನು ಅಭಿಪ್ರಾಯ ಪಡ
ತ್ತಾನೆ. ಆದರೆ ಸ್ವಿತ್ಸರ್‌ಲಂಡದ ಶಿಕ್ಷಕನಾದ ಪೆಸ್ಟಾಲಾಝಿಯು ಶಿಕ್ಷಣಕ್ರ
ಮಾನಸ ಶಾಸ್ತ್ರಕ್ಕೂ ನಿಕಟ ಸಂಬಂಧವುಂಟೆಂದು ಜಗತ್ಪ್ರಸಿದ್ಧ ಮಾಡಿರುವನ
ತನ್ನ ಶಿಷ್ಯನ ಮನಸ್ಸು ತಿಳಕೊಳ್ಳುವದೇ ಗುರುವಿನ ಆದ್ಯಕರ್ತವ್ಯವೆಂದೂ ಮತ್ತ
ಶಾಲೆಯ ಶಿಕ್ಷಣಕ್ರಮವು ಮನಸ್ಸಿನ ಕಾರ್ಯಕಲಾಪಗಳ ಯೋಗ್ಯ ಜ್ಞಾನವನ್ನೆ
ಅವಲಂಬಿಸಿರಬೇಕೆಂದೂ ಹೇಳುವವರಲ್ಲಿ ಇವನೇ ಮೊದಲಿನವನು. ಆಧುನಿ
ಶಿಕ್ಷಣ ಸುಧಾರಕರೆಲ್ಲ ಇವನ ಮಾರ್ಗವನ್ನೇ ಅನುಸರಿಸಿರುವರು. ರುಸೋ
ಹರಬಾರ್ಟ, ಫ್ರೊಬೆಲ್, ಮೊಂಟಿಸರಿ ಮೊದಲಾದವರು ತಮ್ಮ ಶಿಕ್ಷಣ
ಯೋಜನೆಗಳನ್ನು ವಿದ್ಯಾರ್ಥಿಯ ಸ್ವಭಾವದೃಷ್ಟಿಯಿಂದಲೇ ಏರ್ಪಡಿಸಿರುವರು
ಟಾಗೋರ ಮತ್ತು ಮಹಾತ್ಮಾ ಗಾಂಧಿಯವರ ಶಿಕ್ಷಣಪದ್ಧತಿಯಲ್ಲಿ ಬಾಲಕ
ಶೀಲ, ಸ್ವಭಾವವೇ ಪ್ರಾಧಾನ್ಯವಾಗಿರುವದು. ಮಾನಸ ಶಾಸ್ತ್ರದ ಪರಿಚಯವ
ಶಿಕ್ಷಕನಿಗೆ ಅತ್ಯವಶ್ಯವೆಂಬ ಮಾತನ್ನು ಸರ್ ಜಾನ್ ಅಡ್ಯಾಮ್ಸನು ಸೂತ್ರರೂ
ದಲ್ಲಿ ಹೇಳಿರುತ್ತಾನೆ. "ಶಿಕ್ಷಕನು ಈತನಿಗೆ ಗಣಿತ ಕಲಿಸುತ್ತಾನೆ." ಅಂದ
ಶಿಕ್ಷಕನು ವಿಷಯಜ್ಞಾನವಲ್ಲದೆ ಮಾನಸ ಶಾಸ್ತ್ರದ ಪರಿಚಯವನ್ನೂ ಮಾ
ಕೊಳ್ಳಬೇಕೆಂದು ಸ್ಪಷ್ಟವಾಗುವದು. (?)

ಶಿಕ್ಷಣ ವ್ಯವಸಾಯದಲ್ಲಿ ಮಾನಸ ಶಾಸ್ತ್ರದ ಸಹಾಯವು ಬಹಳ ಅವಶ್ಯ. ಬಾಲಕನ ವಿದ್ಯಾರ್ಜನೆಯು ಸೊಗಸಾಗಿಯೂ, ಸುಲಭವಾಗಿಯೂ, ಶೀಘ್ರವಾಗಿಯೂ ಸರಳವಾಗಿಯೂ ಆಗಬೇಕೆಂದು ಹೊಸ ಶಿಕ್ಷಕನು ಅಪೇಕ್ಷಿಸುತ್ತಾನೆ. ವಿಷಯವನ್ನು ಯಾವ ರೀತಿಯಿಂದ ಕಲಿಸಿದರೆ ವಿದ್ಯಾರ್ಥಿಗೆ ಅದು ರುಚಿಸುವದು, ಅದಕ್ಕೆ ಅವನು ಲಕ್ಷ್ಯವನ್ನುಕೊಡುವನು, ಕಲಿಸಿದುದು ಮನಸ್ಸಿನಲ್ಲಿ ನಡುವನಲ್ಲದೆ ಮತ್ತು ಅದನ್ನು ಹೆಚ್ಚಾಗಿ ತಿಳಕೊಳ್ಳಬೇಕೆಂಬ ಕುತೂಹಲವು ಉಂಟಾಗುವದು, ಎಂಬ ಯೋಜನೆಯನ್ನು ಶಿಕ್ಷಣ ಕಲಾನಿಪುಣನಾದ ಅಧ್ಯಾಪಕನು ಮಾಡುತ್ತಾನೆ. ಇದು ಸಫಲವಾಗಬೇಕಾದರೆ ಅವನು ಬಾಲಕನ ಮನಸ್ಸಿನ ವ್ಯಾಪಾರಗಳನ್ನು ಅರಿತುಕೊಳ್ಳಬೇಕು. ಬಾಲಕನು ಯಾವುದನ್ನು ಅಪೇಕ್ಷಿಸುತ್ತಾನೆ, ಯಾವ ರೀತಿಯಿಂದ ವಿಚಾರಿಸುತ್ತಾನೆ, ಯಾವುದನ್ನು ತಿಳಿದಿರುತ್ತಾನೆ, ಯಾವುದನ್ನು ತಿಳಿದಿರುವದಿಲ್ಲ ಎಂಬುದನ್ನು ಶಿಕ್ಷಕನು ಕಂಡು ಹಿಡಿಯಬೇಕು. ಹೀಗೆ ಮನೋವೃತ್ತಿಗಳನ್ನು ಅಭ್ಯಾಸಿಸುವಲ್ಲಿ ಮಾನಸಶಾಸ್ತ್ರವು ಸಹಾಯಮಾಡುತ್ತಿದೆ. ಇದಲ್ಲದೆ ವಿಷಯ ವಿವೇಜನೆಯು ಕೆಲವು ಮೆಟ್ಟುಗಳಂತೆ ಸಾಗಬೇಕೆಂತಲೂ ಮತ್ತು ಶಿಕ್ಷಣದ ಸಾಮಾನ್ಯ ತತ್ವಗಳನ್ನು ಅನುಸರಿಸಬೇಕೆಂತಲೂ ಹರ್ಬಾರ್ಟ್ ಮೊದಲಾದ ಶಿಕ್ಷಣ ಪಂಡಿತರು ಹೇಳುವಲ್ಲಿ ಮಾನಸ ಶಾಸ್ತ್ರವನ್ನೇ ಆಧಾರವಾಗಿ ಇಟ್ಟುಕೊಳ್ಳುತ್ತಾರೆ. ಅಂತು ಬೋಧನೆಯ ಕ್ರಮವು ಮಾನಸಶಾಸ್ತ್ರದ ನಿಯಮಗಳಿಗೆ ಒಳಪಟ್ಟಿರಬೇಕು. ಕಲಸುವ ಹೊಸ ಪದ್ಧತಿಯನ್ನು ಶೋಧಿಸುವಲ್ಲಿಯೂ ಹೊಸ ಪ್ರಯೋಗವನ್ನು ಮಾಡುವದರಲ್ಲಿಯೂ ಶಿಕ್ಷಣ ಯೋಜನೆಯ ಹೊಸ ರೀತಿಯನ್ನು ಕಂಡು ಹಿಡಿಯುವಲ್ಲಿಯೂ ಮಾನಸಶಾಸ್ತ್ರದ ಉಪಯೋಗವಾಗುತ್ತದೆ.

ಹೊಸ ಶಿಕ್ಷಣವು ಕೇವಲ ಬೋಧನೆಯಿಂದ ತೃಪ್ತಿ ಪಡುವದಿಲ್ಲ. ಬಾಲಕನ ಸಹಜ ಸ್ವಭಾವ ತಿದ್ದುವದೇ ಶಿಕ್ಷಣದ ಹೆಗ್ಗುರಿಯೆಂದು ಈಗಿನ ತಜ್ಞರ ಮತ. ಸಹಜಸ್ವಭಾವವು ಹೇಗೆ ವಿಕಾಸ ಹೊಂದುತ್ತದೆ, ಪರಿಸ್ಥಿತಿಯು ಬಾಲಕನ ಮೇಲೆ ಯಾವ ಪರಿಣಾಮ ಮಾಡುತ್ತದೆ, ಒಂದು ವ್ಯಕ್ತಿಯ ವರ್ತನವನ್ನು ಮತ್ತೊಂದು ವ್ಯಕ್ತಿಯ ಮೇಲೆ ಹೇಗೆ ಬೀಳುತ್ತದೆ, ಸಂಘ ಜೀವನವು ವ್ಯಕ್ತಿಯ ವರ್ತನವನ್ನು ಹೇಗೆ ಮಾರ್ಪಡಿಸುತ್ತದೆ, ಎಂಬುದನ್ನು ತಿಳಿದುಕೊಳ್ಳುವದು ಶಿಕ್ಷಕನ ಕರ್ತವ್ಯಗಳಲ್ಲಿ ಮುಖ್ಯವಾದುದು. ಸ್ವಭಾವ ಮತ್ತು ವರ್ತನದ ಬಗ್ಗೆ ನಮಗೆ ನಿಜವಾದ ಕಲ್ಪನೆಯು ಆಗಬೇಕಾದರೆ ನಾವು ಮಾನಸ ಶಾಸ್ತ್ರದ ಕಡೆಗೆ ಹೊರಳಲೇಬೇಕು.

ಶಾಲೆಗೆ ಸಂಬಂಧಪಟ್ಟ ಇನ್ನಿತರ ಮುಖ್ಯ ವಿಷಯಗಳಲ್ಲಿಯೂ ಮಾನಸಶಾಸ್ತ್ರದ ಅಭ್ಯಾಸವು ನೆರವಾಗುತ್ತದೆ. ಬಾಲಕನ ಯಾವ ಯಾವ ವಯಸ್ಸಿನಲ್ಲಿ

ಯಾವ ಯಾವ ವಿಷಯಗಳನ್ನು ಕಲಿಸಬೇಕೆಂದು ಯೋಚಿಸುವಾಗ ಬಾಲಕ
ಬುದ್ಧಿ ಸಾಮರ್ಥ್ಯವನ್ನೂ ಬೇಡಿಕೆಗಳನ್ನೂ ಅರಿತಿರಬೇಕು. ಮನುಷ್ಯನ ಬೆ
ವಣಿಗೆಗೆ ತಕ್ಕ ಶಿಕ್ಷಣಯೋಜನೆಯನ್ನು ತಯಾರಿಸುವಾಗ ಮೊದಲು ಬೆಳವಣಿಗೆಯ
ಮುಖ್ಯ ಅವಸ್ಥೆಗಳನ್ನು ಹಾಗೂ ಅವುಗಳ ಲಕ್ಷಣಗಳನ್ನು ತಿಳಿದಿರಬೇಕು
ಬುದ್ಧಿ ಬೆಳವಣಿಗೆಯ ವಿಷಯವು ಮಾನಸಶಾಸ್ತ್ರವನ್ನು ಓದುವದರಿಂದ ಗೊತ್ತಾ
ಗುತ್ತದೆ. ಹೀಗೆ ಅಭ್ಯಾಸಪತ್ರಿಕೆ ಮತ್ತು ವೇಳಾಪತ್ರಿಕೆಗಳನ್ನು ರಚಿಸುವಲ್ಲಿ ಮನೋ
ವಿಜ್ಞಾನವು ತುಂಬಾ ನೆರವಾಗುತ್ತದೆ. ಇದಲ್ಲದೆ ಆಧುನಿಕ ಶಿಕ್ಷಣಸಮಸ್ಯೆಗಳನ್ನು
(ಸಾಮಾನ್ಯ ಶಿಕ್ಷಣ, ಪ್ರೌಢ ಶಿಕ್ಷಣ, ಸಹಶಿಕ್ಷಣ, ವೃತ್ತಿಶಿಕ್ಷಣ, ಶಾರೀರಿ
ಶಿಕ್ಷಣ ಮುಂತಾದವುಗಳು) ಬಿಡಿಸುವಾಗ ಮಾನಸಶಾಸ್ತ್ರದ ಪರಿಚಯವೂ
ತುಂಬಾ ಸಹಾಯವಾಗುತ್ತದೆ.

ಮನುಷ್ಯನನ್ನು ಕುರಿತು ವಿವೇಚಿಸುವ ಸರ್ವ ಶಾಸ್ತ್ರಗಳಿಗೂ ಮಾನಸಶಾಸ್ತ್ರದ
ಬೆಂಬಲವು ಬೇಕೇಬೇಕು. ಶಿಕ್ಷಣಶಾಸ್ತ್ರವು ಮನುಷ್ಯನ ಸಂಸ್ಕೃತಿಗೆ ಸಂಬಂಧಿ
ಸಿದ ಸಂಗತಿಗಳನ್ನು ಆಲೋಚಿಸುವದರಿಂದ ಅದು ಮಾನಸಶಾಸ್ತ್ರದ ಸಹಾಯ
ವನ್ನು ಕೋರಲೇ ಬೇಕು. ಮನಸ್ಸಿನ ಸ್ವರೂಪ, ಮನುಷ್ಯನ ಪ್ರವೃತ್ತಿಗಳು
ಪರಂಪರೆ ಮತ್ತು ಪರಿಸ್ಥಿತಿಗಳು ಬುದ್ಧಿಯ ಮೇಲೆ ಮತ್ತು ಸ್ವಭಾವದ ಮೇಲೆ
ಮಾಡುವ ಪರಿಣಾಮ, ಜ್ಞಾನದ ಬೆಳವಣಿಗೆ, ಬುದ್ಧಿಮಾಪನ, ಮನಸ್ಸಿನ ವಿಕಾಸ
ಶೀಲ, ಚಟ, ಬೇಸರ, ಆಸಕ್ತಿ, ಅವಧಾನ, ಸ್ಮರಣ, ವಿವೇಚನೆ, ತರ್ಕ, ಊಹೆ
ಶಿಕ್ಷಕನ ಪ್ರತಿಭೆ (ವ್ಯಕ್ತಿತ್ವ) ಮೊದಲಾದ ಶಿಕ್ಷಣವ್ಯವಸಾಯದಲ್ಲಿ ಸಹಾಯ
ವಾಗುವ ವಿಷಯಗಳ ಜ್ಞಾನವಾಗಬೇಕಾದರೆ ಮಾನಸಶಾಸ್ತ್ರದ ಅಭ್ಯಾಸವೂ
ಶಿಕ್ಷಕನಿಗೆ ಅವಶ್ಯ.

ಅಂದಮೇಲೆ ಮಾನಸಶಾಸ್ತ್ರವು ಇಂದಿನ ಶಿಕ್ಷಣತತ್ವಗಳಲ್ಲಿ ಒಂದ
ಪ್ರಾಮುಖ್ಯ ಸ್ಥಾನವನ್ನು ಪಡೆದಿರುತ್ತದೆ. ಆದರೆ ಶಿಕ್ಷಣಕ್ಷೇತ್ರವು ವಿಶಾಲವಾ
ದ್ದಿದ್ದು ಅದರಲ್ಲಿ ಮಾನಸಶಾಸ್ತ್ರವು ನಿರ್ಣಯಿಸಿದ ಕೆಲವು ವಿಷಯಗಳು ಮಾತ್ರ
ಅಡಕವಾಗಿರುತ್ತವೆ. ಶಿಕ್ಷಣದ ಧ್ಯೇಯಗಳನ್ನು ಗೊತ್ತುಪಡಿಸುವದು ಮಾನಸ
ಶಾಸ್ತ್ರವಲ್ಲ. ಇದು ತತ್ವಶಾಸ್ತ್ರದ ಕೆಲಸವು ಶಿಕ್ಷಕನು ಯಾವ ಉದ್ದೇಶಗಳನ್ನು
ಇಟ್ಟುಕೊಂಡಿರಬೇಕು, ಯಾವ ಯಾವ ಧ್ಯೇಯವನ್ನು ಸಾಧಿಸಬೇಕು, ಯಾವ
ಗುರಿಯನ್ನು ಮುಟ್ಟಬೇಕು, ಎಂಬ ಉದಾತ್ತ ವಿಚಾರಗಳನ್ನು ಹೇಳುವದು. ಶಿಕ್ಷಣ
ಧ್ಯೇಯಗಳನ್ನು ನಿಶ್ಚಯಿಸುವದು ಮಾನಸಶಾಸ್ತ್ರವಲ್ಲದಿದ್ದರೂ ಅವುಗಳ ಸಾಧ್ಯ
ಸಾಧ್ಯತೆಯನ್ನು ಅದು ಹೇಳಬಲ್ಲದು. ಉದಾಹರಣಾರ್ಥ:— ಮೂಲ ಪ್ರವೃತ್ತಿ
ಯನ್ನು ನಾಶಮಾಡುವ ಧ್ಯೇಯವು ಅಸಾಧ್ಯವೆಂದು ಮಾನಸಶಾಸ್ತ್ರವು ಹೇಳುತ್ತದೆ

ವ್ಯಕ್ತಿವಿಕಾಸವೇ ಶಿಕ್ಷಣಧ್ಯೇಯವೆಂದು ಸರ್ ಟಿ. ಪರ್ಸಿನನ್ನ ಇವರು ಅಭಿಪ್ರಾಯ ಪಡುತ್ತಾರೆ. ಮತ್ತು ಇದೊಂದೇ ನಿಸರ್ಗಾನುಗಾಮಿಯಾದ ಶಿಕ್ಷಣವೆಂದು ತೋರಿಸಲು ಮಾನಸಶಾಸ್ತ್ರದ ಆಧಾರವನ್ನೇ ತಕ್ಕೊಳ್ಳುತ್ತಾರೆ. ಶಿಕ್ಷಕನು ಕೊನೆಗೆ ತನ್ನ ಕಾರ್ಯವು ಎಷ್ಟರಮಟ್ಟಿಗೆ ಫಲದಾಯಕವಾಗಿದೆ ಎಂಬುದನ್ನು ಮಾನಸಶಾಸ್ತ್ರದ ಸಹಾಯದಿಂದಲೇ ಪರೀಕ್ಷಿಸಬಲ್ಲನು. ವಿದ್ಯಾರ್ಥಿಯು ಆಚಾರವಿಚಾರಗಳನ್ನು ತಿದ್ದುವ ಕಾರ್ಯದಲ್ಲಿ ತಾನು ಜಯಶೀಲನಾದನೋ ಇಲ್ಲವೋ ಎಂಬುದನ್ನು ಶಿಕ್ಷಕನು ಮಾನಸಶಾಸ್ತ್ರದ ಸಹಾಯವಿಲ್ಲದೆ ಅರಿಯಲಾರನು. ಯಾವ ಮಾರ್ಗವನ್ನು ಅನುಸರಿಸಿದರೆ ತನ್ನ ಧ್ಯೇಯವು ಸಾಧ್ಯವೆಂದು ಶೋಧಿಸುವಲ್ಲಿ ಶಿಕ್ಷಕನಿಗೆ ಮಾನಸಶಾಸ್ತ್ರವು ಅತ್ಯಂತ ಸಹಾಯಕಾರಿಯಾದುದು.

ಮಾನಸಶಾಸ್ತ್ರದ ಪರಿಚಯ ಮಾಡಿಕೊಂಡಾಕ್ಷಣವೇ ನಾವು ಉತ್ತಮ ಶಿಕ್ಷಕರಾಗಲಾರೆವು. ನಾವು ಗಳಿಸಿದ ಶಾಸ್ತ್ರೀಯ ಜ್ಞಾನದ ಉಪಯೋಗವನ್ನು ಪ್ರತಿನಿತ್ಯ ಮಾಡಿಕೊಳ್ಳುವ ಜಾಣತನವೂ, ಕುಶಲತೆಯೂ, ಪ್ರತಿಭಾಸಂಪನ್ನತೆಯೂ ನಮ್ಮಲ್ಲಿ ಬೇಕು. ವಿದ್ಯಾರ್ಥಿಯು ಜೊತೆಯಲ್ಲಿದ್ದಾಗ ಹೇಗೆ ವ್ಯವಹರಿಸಬೇಕೆಂಬದನ್ನು ಪ್ರತಿಯೊಬ್ಬ ಶಿಕ್ಷಕನು ತುಂಬ ಚತುರತೆಯಿಂದ ತಿಳುಕೊಳ್ಳಬೇಕು.

ಮಾನಸಶಾಸ್ತ್ರದಲ್ಲಿ ಅನೇಕ ಪ್ರಭೇದಗಳುಂಟು. ಅವೆಲ್ಲವುಗಳ ಪರಿಚಯವು ಶಿಕ್ಷಕನಿಗೆ ಒಂದೊಂದು ರೀತಿಯಿಂದ ಸಹಾಯವಾಗುವದು. ಆದರೆ ತನ್ನ ಮನಸ್ಸಿನ ವ್ಯಾಪಾರಗಳ ಮತ್ತು ತನ್ನ ವರ್ತನದ ಸ್ವಂತ ನಿರೀಕ್ಷಣೆಯೂ, ತಾನು-ಬಾಲ್ಯಾವಸ್ಥೆಯಲ್ಲಿದ್ದಾಗ ತಾನುಮಾಡುತ್ತಿದ್ದ ವಿಚಾರಗಳ, ಕಾರ್ಯಗಳ, ಮತ್ತು ಅನುಭವಗಳ ಸ್ಮರಣೆಯೂ ಹೆಚ್ಚು ಪ್ರಯೋಜನಕಾರಿಯಾಗುವದು. ಇದಲ್ಲದೆ ಚಿಕ್ಕಮಕ್ಕಳ ವರ್ತನವನ್ನು ಪರೀಕ್ಷಿಸಬೇಕು. ಮಾನಸಶಾಸ್ತ್ರದ ಪುಸ್ತಕಗಳನ್ನೋದಿ ತಿಳಕೊಂಡ ಜ್ಞಾನವನ್ನು ಪ್ರಾಯೋಗಿಕ ರೀತಿಯಿಂದ ನಿದರ್ಶನಕ್ಕೆ ತಂದುಕೊಳ್ಳಬೇಕು.

ರೋಗಿಯನ್ನು ಪರೀಕ್ಷಿಸಿ ವೈದ್ಯನು ಔಷಧ ಕೊಡುವಂತೆ ವಿದ್ಯಾರ್ಥಿಯನ್ನು ಪರೀಕ್ಷಿಸಿ ಶಿಕ್ಷಕನು ವಿದ್ಯೆಯನ್ನು ಕಲಿಸಬೇಕು. ವೈದ್ಯನಿಗೆ ಶರೀರ ವಿಜ್ಞಾನದ ಅಭ್ಯಾಸವು ಹೇಗೆ ಅವಶ್ಯವೋ ಹಾಗೆಯೇ ಶಿಕ್ಷಕನಿಗೆ ಮನೋ ವಿಜ್ಞಾನದ ಅಭ್ಯಾಸವು ಅವಶ್ಯ. ಆದ್ದರಿಂದ ಶಿಕ್ಷಣಪ್ರೇಮಿಗಳು ಮಾನಸ ಶಾಸ್ತ್ರವನ್ನು ಆಳವಾಗಿಯೂ ಆಸ್ಥೆಯಿಂದಲೂ ಅಭ್ಯಸಿಸಬೇಕು. ಈ ತರದ ಜ್ಞಾನವಿಲ್ಲದ ಶಿಕ್ಷಕನು ಚುಕ್ಕಾಣಿಯಿಲ್ಲದ ಹಡಗದ ಸ್ಥಿತಿಯನ್ನು ಅನುಭವಿಸಬೇಕಾಗುವದು.

ಓಂ ನಲ್

ನೇಮಿಚಂದ್ರ ಕವಿಯ

ಲೀಲಾವತೀ ಲಾಲಿತ್ಯ

ಬರೆದವರು :- ಕವಲಿ ಚೆನ್ನಬಸವ ಹಾವೇರಿ

ಎಂಟುನೂರು ವರ್ಷಗಳ ಹಿಂದೆ! ಅಂದು ಇಂದಿನಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿ। ಕ್ರಾಂತಿಯು ಕಹಳೆಯ ಕೂಗಿನಿಂದ ಸಾಹಿತ್ಯಕ್ಷೇತ್ರದಲ್ಲಿಯೂ ಕಲಕೇ ದ್ದಿದೆ. "ಸಾಹಿತ್ಯವು ಸಾರ್ವಭೌಮರಿಗಾಗಿ! ಪದ್ಯಪ್ರಬಂಧಗಳು ಪಂಡಿತರಿಗಾಗಿ! ಸರಸ್ವತಿಯು ಶ್ರೀಮಂತರ ಸೊತ್ತು! ಸಂಸ್ಕೃತ ಸಹಾಯವಿಲ್ಲದೆ ಕನ್ನಡವು ಸಾಯಲೇಬೇಕು!" ಎಂದು ಮುಂತಾಗಿ ಮೋಹದಲ್ಲಿದ್ದ ಕನ್ನಡಿಗರಿಗೆ ಬೇದದಿಂದಾರಂಭಿಸಿ ಬೀದಿಯ ಬೈಗುಳಗಳ ವರೆಗೂ ಕನ್ನಡದಲ್ಲಿ ಕೊರತೆಯಿಲ್ಲ ವೆಂದು ತೋರಿಸಿಕೊಟ್ಟರು, ಶ್ರೀಮದ್ಬಸವಾದಿ ವಚನವಾಙ್ಮಯಕಾರರು! ಈ ವಾಙ್ಮಯದಿಂದ ಸಾಮಾನ್ಯರಿಗೂ ಸಾಹಿತ್ಯ ಸ್ವಾಮಿತ್ವವು ಸಲ್ಲುವಂತಾಯಿತು. ಇದು ಜೈನಸಾಹಿತ್ಯ ಪ್ರವಾಹಕ್ಕೆ ದೊಡ್ಡದೊಂದು ತಡೆಯೇ ಎನ್ನುವಂತಿದೆ. ಅಂತೆಯೇ ದಿವಂಗತ ಆರ್. ನರಸಿಂಹಾಚಾರ್ಯ ಮುಂತಾದವರು ೧೨ ನೆಯ ಶತಮಾನಕ್ಕೆ ಜೈನಸಾಹಿತ್ಯ ಸಮಾಪ್ತಿಯನ್ನು ಹೇಳಿದ್ದಾರೆ. ಈ ಪರಿಸ್ಥಿತಿಯನ್ನು ದಿರಿಸಿ ಕಹಳೆಯದಕ್ಕೆ ಹೊಸ ಮುದ್ರೆಯನ್ನು ಹಾಕಿ, ಗುಪ್ತಗಾಮಿನಿಯಾದ ಜೈನ ಕಾವೇರಿಂಗೆಯು ಮತ್ತೆ ಧಾರಾಳವಾಗಿ ಹರಿಯುವಂತೆ ಮಾಡಿದ ಕವಿಯು ಜೈನರಲ್ಲಿ ಗಂಟಾಗಿದ್ದರೆ, ಆತನು ಅಸಾಮಾನ್ಯ ಉದ್ದಾಮ ಕವಿಯಿರಬೇಕಲ್ಲವೇ? ಈತನೆ ನೇಮಿಚಂದ್ರ ಕವಿ!

ಹನ್ನೆರಡನೆಯ ಶತಕದ ಮಧ್ಯಭಾಗದಲ್ಲಿ ವೀರಶೈವ ವಚನಕಾರರು ಸಾಹಿತ್ಯವನ್ನು ಸಾಮಾನ್ಯರ ಸೊತ್ತಾಗಿ ಮಾಡಿದರು. ಭೂಪಾಲನಿಂದ ಗೋಪಾಲನ ವರೆಗಿನ ಎಲ್ಲರ ಅಂತರಾತ್ಮನೂ ಅಲ್ಲಾಡುವಂತೆ ಕರುಳಿನ-ತಿರುಳಿನ-ಹುರುಳಿನ ವಚನಗಳನ್ನು ಬರೆದು ಸತ್ಯತತ್ತ್ವವನ್ನು ಸುಲಭವಾಗಿ ಸಾರಿಬಿಟ್ಟರು, ಇಂತಹ ಬದಲುಕಾಲದಲ್ಲಿ ಅಳಿಯುತ್ತಿದ್ದುದನ್ನು ಉಳಿದು ಬೆಳೆಯುವಂತೆ ಮಾಡಿದ ಕವಿಗಳಿಂದೇ ಮಧುರ ಕವಿಯು :

ಶಾಸ್ತ್ರ ಲೌಕಿಕ ಕಲೆಯೋಳ್ ಬೇರ್ವರಿದ ನೇಮಿಜನ್ನಿಯ। ರಿರ್ವರೆ ಕರ್ಣಾಟ ಕೃತಿಗೆ ಸೀಮಾಪುರುಷರ್। ಎಂದು ನೇಮಿಚಂದ್ರ ಕವಿಯನ್ನು ಹೊಗಳಿದ್ದಾನೆ

ಇಷ್ಟೇ ಅಲ್ಲ, ಈ ಜನ್ನಕವಿ–ಚತುರ್ಭಾಷಾಚಕ್ರವರ್ತಿ–ಕವಿಚಕ್ರವರ್ತಿ ಬಿರುದಾಂಕಿತ ಜನ್ನಕವಿಯು : ಏಮಾತೊ ನವ್ಯಕಾವ್ಯಕ । ಲಾ ಮಹಿಯೋಳ್ ಬಿಡದೆ ಬೀದಿವರಿವೊಡೆ ಮೊದಲೋಳ್ । ನೇಮಿಯ ನೆವಮ್ಮಗೆಯಿಲ್ಲದೊ । ಡೀ ಮುತ್ತಿನ ಕವಿಮನೋರಥಂ ನಡೆದಪುದೇ ॥ ಎಂದು ಹೊಗಳಿರುವದರಿಂದ ನೇಮಿಚಂದ್ರನ ಅಸಾಧಾರಣ ಕವಿತಾಸಾಮರ್ಥ್ಯದ ಕಲ್ಪನೆಯಾಗುವಂತಿದೆ. ಎಂತೆಯೆ :

ಯುವತಿ ಸರಸತಿ ಪುರಾತನ । ಕವಿವಿರಹಮನರಿದಳಿಲ್ಲ ನಿರ್ಮಲದರ್ಶನ ।
ಚ್ಛವಿ ಕುಸುಮಿತರಸನಾಪ । ಲ್ಲವ ತಳ್ಪದೊಳಿರ್ದು ಸುಕರಕವಿಶೇಖರನಾ ॥

"ಕವಿತಾ ಬಳವಾರಳವು ಸುಕರಕವಿಶೇಕರನಾ," ಎಂದು ನೇಮಿಚಂದ್ರ ಕವಿಯು ಹಿಗ್ಗಿನಿಂದ ಹೆಮ್ಮೆಯಿಂದ ಹಾಡಿಕೊಂಡಿದ್ದಾನೆ. ಅದಕ್ಕೆ ಆತ್ಮಶ್ಲಾಘನೆಯ ಆಘಾತವನ್ನು ಕೊಡದೆ ಆತ್ಮವಿಶ್ವಾಸದ ಹೆಗ್ಗುರುತೆಂದೇ ಹೇಳಬೇಕಾಗುತದು.

ಈತನು ಚತುರ್ಭಾಷಾಚಕ್ರವರ್ತಿ ಎಂದೂ, ಕವಿಕುಂಜರನೆಂದೂ, ಸುಕವಿಕಂಠಾಭರಣನೆಂದೂ, ಸಾಹಿತ್ಯ ವಿದ್ಯಾಧರನೆಂದೂ, ಇನ್ನೂ ಅನೇಕ ಬಿರುದುಗಳು ಕಂಡುಬರುತ್ತವೆ. ಆದರೆ ಅವು ಆರಿಂದ ಬಂದವೋ ಐತಿಹಾಸಿಕ ಆಧಾರವಿಲ್ಲ; ಇದರೆ ಅವೆಲ್ಲವೂ ಆತನಿಗೆ ತಕ್ಕವೇ ಎಂಬುದರಲ್ಲಿ ಸಂದೇಹವಿಲ್ಲ.

ಈತನು ಬರೆದ ಗ್ರಂಥದಲ್ಲಿ ಮೊದಲನೆಯದು ಲೀಲಾವತಿ ಇದನ್ನು ಬರೆಯುವದರಲ್ಲಿ ಕವಿಗೆ ಸಣ್ಣದೊಂದು ಕಲ್ಪಿತಾ-ಸುಬಂಧುವಿನ ವಾಸವದತ್ತೆಯಿಂತಹ ಕಲ್ಪಿತ–ಕಥೆ ಆಧಾರ. ಇದರಲ್ಲಿ ಬರುವ ಕಥಾಭಾಗವು ಇಷ್ಟು ಮುತ್ತು ಇಂತು.

ಕದಂಬರ ರಾಜಧಾನಿಯಾದ ಜಯಂತಿಪುರ ಅಥವಾ ಬನವಾಸಿಯಲ್ಲಿ ಚೂಡಾಮಣಿ ಎಂಬ ರಾಜ, ಆತನಿಗೆ ಪದ್ಮಾವತಿ ಪಟ್ಟದ ರಾಣಿ. ಇವರ ಮಗನೇ ಕಥಾನಾಯಕ ಕಂದರ್ಪದೇವ, ಗುಣಗಂಧನೆಂಬ ಮಂತ್ರಿಯ ಮಗ ಮಕರಂದ॥ ಗೆಳೆಯ. ಕಂದರ್ಪನು ಯುವರಾಜ ಪಟ್ಟವನ್ನು ಹೊಂದಿ ಒಂದುರಾತ್ರಿ ಕನಸಿನಲ್ಲಿ ಒಬ್ಬ ಸ್ತ್ರೀಯನ್ನು ಕಂಡು ಮರುದಿವಸ ಆ ಸ್ತ್ರೀ ಇರುವದಿಕ್ಕಿಗೆ ಹೊರಡುವನು.

ಕುಸುಮಪುರದ ದೊರೆಯಾದ ಶೃಂಗಾರಶೇಖರನ ಮಗಳೇ ಕಥಾನಾಯಿಕೆ ಲೀಲಾವತಿ. ಅವಳೂ ಈತನನ್ನು ಸ್ವಪ್ನದಲ್ಲಿ ಕಂಡು ಹುಡುಕುವದಕ್ಕಾಗಿ ಅಳುಳನ್ನು ಕಳುಹುವಳು. ಬಳಿಕ ಇವರಿಬ್ಬರ ವಿವಾಹ. ಆ ಮೇಲೆ ಕಂದರ್ಪನು ಲೀಲಾವತಿಯನ್ನು ಕುಸುಮಪುರಕ್ಕೆ ಕರೆತಂದು ಸುಖವಾಗಿ ರಾಜ್ಯಮಾಡುತ್ತಾನೆ.

ಅಂತೂ ಇದು ಕಲ್ಪಿತ ಕಥೆ. ಇದನ್ನು ಬರೆಯುವದರಲ್ಲಿ ಕವಿಯ ಉದ್ದೇಶಗಳಿವು ಕೃತ ಪರಿಸ್ಥಿತಿಗಿದಿರಾಗುವುದೊಂದಸೆಯದು. ಹನೆ ರಡನೆಯ ಶತಕದ ಮದ್ದಲಿ

ವೀರಶೈವ ಕವಿಗಳು ಮಾಡಿದ ಕ್ರಾಂತಿಯನ್ನು ಸ್ವಲ್ಪದರಲ್ಲಿ ಹೇಳಿದೆ. ಹಾ
ಗಾರಿಕೆಗೂ, ಹೇಳುಗಾರಿಕೆಗೂ ಅನುಕೂಲವಾಗುವಂತೆ ಭಾವಗೀತಗಳು ವಚ
ಗಳನ್ನು ರಚಿಸಿ ಕಾವ್ಯರಾಸಾಸ್ವಾದನದಲ್ಲಿ ಜನತೆಗೆ ಹೊಸಬಗೆಯನ್ನು ಹುಟ್ಟಿಸಿದ್ದರ
ಅದಕ್ಕೆ ಇದಿರಾಗಿ ಜೈನತತ್ತ್ವದ ಪುನರುತ್ಥಾನವಾಡುವದಕ್ಕಾಗಿ,

"ಬಗೆಬಗೆಯೊಳ್ ಬರೆಯಿಂ ರಾ । ಗಿಗಳೋದಲ್ ತಕ್ಕ ಕೃತಿಯನೆನೆ"

ಲೀಲಾವತಿ ಪ್ರಬಂಧವನ್ನು ಬರೆದಂತೆ ಕವಿಯು ಕೊನೆಯ ಆಶ್ವಾಸದಲ್ಲಿ ಹೇ
ತ್ತಾನೆ. ಎಂತೆಯೇ ಇದರಲ್ಲಿ ಸರಳವಾದ ವಚನಗಳು ಒನಕೆವಾಡುಗಳು ರಗಳೆಗ
ಮುಂತಾಗಿ ಗಮಕಕಲೆಗೆ ಸುಲಭಸಾಧ್ಯವಾದ ಭಾಗಗಳು ಹೊಸಬಗೆಯಲ್ಲಿ ಸೇ
ಕೊಂಡಿವೆ.

ಎರಡನೆಯ ಉದ್ದೇಶವೆಂದರೆ ಸಾಂಪ್ರದಾಯಶರಣತೆಯನ್ನು ತೆಗೆದುಹಾ
ಸಾಮಾನ್ಯರಿಗೂ ಸಾಹಿತ್ಯದ ತತ್ತ್ವವನ್ನು ಸಲ್ಲಿಸುವದು.

ಮೊದಲಿನ ಜೈನಕವಿಗಳ ಕಾವ್ಯಗಳು ಕೇವಲ ಪಾಂಡಿತ್ಯ ಪ್ರದರ್ಶನಕ್ಕಾ
ಬರೆದವು. ಪಾಮರರಿಗೆ ಪ್ರವೇಶವೇ ಇಲ್ಲ ಅವುಗಳಲ್ಲಿ. ಮೊಟ್ಟಿಮೊಟ್ಟಿಯಾಗಿ ಸಮಸ
ಪದಗಳನ್ನು ತುಂಬುವದೂ ಸಭಂಗ ಅಭಂಗ ಶ್ಲೇಷಗಳಿಂದ ವಚನಗಳನ್ನು ಒಡೆಯು
ಒಗಟುಗಳನ್ನು ಮಾಡುವುದೂ ಆಗಿನ ಸಾಂಪ್ರದಾಯ. ಇದನ್ನು ವೀರಶೈವ ಕ
ಗಳು ತೆಗೆದುಹಾಕಿದರತೆ, "ಕವಿಯಿಂದ ಹುಟ್ಟಿದುದು ಓದುಗರ ಒಗೆಯನ
ಮುಟ್ಟಿದಾಗಲೇ ಕವಿಗೆ ಕೀರ್ತಿ, ಜನತೆಗೆ ಶಾಂತಿ" ಎಂಬ ತತ್ತ್ವದಂತೆ.

ಲೋಗರ ಬಗೆಗೋದಿನೊಳನು । ರಾಗವನಾಗಿಸದೊಡೋದಿದಂಗೋ
ದೋಡೋ । ದಾಗದು—

ಈ ಯಂದದಿನತಿ ಚತುರ । ಸ್ತ್ರೀಯರು ಮತಿ ಚತುರ ಕವಿಗಳುಂ ಕೇಳೊ
ಲವಿಂ । ಬಾಯಂ ಬಿಡುತಿರೆ ಕರ್ಣರ । ಸಾಯನವೆನೆ ಪೇಳ್ವೆನೆಸೆಯೆ ಲೀಲ
ವತಿಯಂ ॥ ಎಂದು ಪೂಣ್ದು ಮೊದಲಿಗಿಂತಲೂ ಸುಲಭ ಸರಣಿಯಲ್ಲಿ ಹೆಣ
ಮುಕ್ಕಳಿಗೂ ತಿಳಿಯುವ ಸರಣಿಯಲ್ಲಿ ಹೇಳಿದಂತಿದೆ.

ಮೂರನೆಯ ಉದ್ದೇಶವೆಂದರೆ, ಆತ್ಮಪ್ರೌಢಿಯಲ್ಲಿರುವ ವಿಸ್ವಾಸ. ಮೊದಲಿ
ಕವಿಗಳು, ಬಾಳಬಟ್ಟೆ ಪರಮಾಗಮವೆಂದು ತೀರ್ಥಂಕರರ ಚರಿತ್ರೆಯನ್ನು ಒ
ಯುವುದೊಂದು. ತನಗೆ ಆಶ್ರಯಕೊಟ್ಟ ಅರಸನನ್ನು ಪ್ರಾಚೀನ ಪ್ರಸಿದ್ಧ ಪು
ಷರಿಗೆ ಹೋಲಿಸಿ "ಗುಣಾರ್ಣವ ಭೂಭುಜನಂ ಕಿರೀಟಿಯೊಳ್" ಅನಿಲಜನೊ
ಪೋಲಿಸಿ....." ಹೇಳುವುದು ಮುನ್ನಿನಧಾಟಿ. ಆದರೆ ಕವಿಯು ಬಾಳಬ
ಪರಮಾಗಮವಾಗುವಂತೆ ಅರ್ಥ ನೇಮಿಪುರಾಣವನ್ನು ಬರೆದನಾದರೂ ಈ ಲೀ

ವತಿಯನ್ನು ಬರೆಯುವ ಕಾಲಕ್ಕೆ ಅದೆಲ್ಲವನ್ನು ತಿರಸ್ಕರಿಸಿದ್ದಾನೆ. ಆ ಪದ್ಯದಲ್ಲಿ "ನಿಲ್ಲದ ತಣ್ಣೆಲರ್‌ಗಳಿಗೆಯೊಳ್ ಕಳಿವಾ ಫಲವೊಂದು ಮೂರ್ತಮುಂ । ಸಲ್ಲದ ಬೇಂಟ ಮುಲ್ಲಟಿಸಿ ಮಿಂಚುವ ಮಿಂಚುರುಳಾಗಿ ಪೊತ್ತಱಿಂ । ಗಿಲ್ಲದ ಚಂದ್ರ ಕಾಂತಿ ನೆಲೆಗೊಂಡುದು ಗಂಡುಮದೇಕೆ ಕಾವ್ಯದೋಳ್ । ಬಲ್ಲ ಮಹಾತ್ಮರುಂ ನಿಲಿಸಲೊಲ್ಲರೊ ಭಂಗಜಲದುಗ್ಗಣಂಗಳಂ" ॥

ಈ ಲೀಲಾವತಿಯು ಶೃಂಗಾರ ಪ್ರಧಾನವಾದ ಕಾವ್ಯ ॥ ಆದರೆ ಶೃಂಗಾರದಲ್ಲಿ ಶಾಂತಿರಸವನ್ನು ತುಂಬುವ ಈತನ ಬಗೆ ಹೊಸದು. ಗುಡಚಿವ್ಹಿಕಾ ಪ್ರಯೋಗ (Sugar Quoted Pills) ದಂತೆ ಶೃಂಗಾರಕ್ಕಾಗಿ ಕಿವಿ ಬಾಯಿಗಳನ್ನು ತೆರಿಸಿ ಅದೇಸಮಯದಲ್ಲಿಯೇ ಜೈನತತ್ವಗಳನ್ನು ಸೇರಿಸಿದ್ದಾನೆ. ಕಂದರ್ಪ ದೇವನು. ಲೀಲಾವತಿಯನ್ನು ಹುಡುಕಹೊರಟಾಗ ನಡುವೆ ಯಕ್ಷಯಕ್ಷಿ ಇಂದ್ರಕೂಟಜಿನಾಲಯ ಮತ್ತು ಚಂದ್ರಪ್ರಭದೇವನ ಮೂರ್ತಿಗಳನ್ನು ವರ್ಣಿಸು ವಾಗ ತನ್ನ ಧಾರ್ಮಿಕಭಾವನೆಯ ಪರಮಾವಧಿಯನ್ನು ತೋರಿದ್ದಾನೆ.

ಈ ಕಾವ್ಯದ ಬಗೆಗೆ ಕವಿಯೇ ಶೃಂಗಾರಕಾವ್ಯವೆಂದು ಹೆಸರಿಟ್ಟು ಪ್ರಾಚೀನ ಕವಿಗಳಂತೆ ಪರಂಪರೆಯಲ್ಲಿ ಕೆಲವು ವಿಷಯವನ್ನು ಹೇಳಿ ಕಥಾರಂಭದಲ್ಲಿ ಕಾಮದೇವನನ್ನು ಸ್ತುತಿಸಿದ್ದಾನೆ.

ಪೂಸುವ ಬೂದಿ ಗಂಗಭವನಂ ಭವಸಾರನನಾರ್ದು ಸುಟ್ಟು ಭೂ । ತೀಶನ ಬುದ್ಧ ಗುದ್ದವರಿದಾಂ ಪೊಗಳೆಂ ಪೊಗಳ್ವೆಂ ಮನೋಜನಂ । ಕೇಸುರಿಯಂತೆ ಪರ್ಬಿ ಪಟುವಾಗಿ ಪೊಗಳ್ದಳುರ್ದಂತರಂಗಮುಂ । ಕಾಸಿಕಪಾಲಿಯುಂ ಪಿಡಿದೊರಲ್ದರೆ ವೆಣ್ಣನೆ ಮಾಡಿ ಬಿಟ್ಟನಂ ॥

ಈ ಕವಿಯು ಲೀಲಾವತಿಯಲ್ಲಿ ಬರುವ ವಿಷಯಗಳನ್ನು ಹೇಳಿರುವದು ಈ ಬಗೆಯಲ್ಲಿ—

"..ನಲ್ಲರಟ್ಟಿದೊ । ಳ್ಮಾತುಗಳಂತೆ ಮಾತುಗಳೊಳಿಂ ಪೊಸರುತ್ತಿರೆ ಕಾವ್ಯ ಭೂಷಣಾ । ರ್ಥಾತಿಶಯಂ ಪ್ರಿಯರ್‌ತುಡಿಸಿದರ್ಥ ವಿಭೂಷಣದ । ದೊರತಿ ರೊಪ್ಪೆ ॥

ಲಲಿತಾಲಂಕಾರೆಯಂ ಚಾತುರ ವಚನೆಯು ನತ್ಯಾಯತೋತ್ಪ್ರೇಕ್ಷೆಯಂ । ಕೋಮಳೆಯಂ ವೃತ್ತಸ್ಥನಾ ಕ್ರಾಂತೆಯನಖಿಲ ಕಲಾಪ್ರೌಢೆಯೆಂ....॥

ಈ ರೀತಿಯಾಗಿ ನೋಡಿದರೆ ಇದೊಂದು ಅತ್ಯುತ್ತಮ ಲಕ್ಷಣ ಗ್ರಂಥವೆನ್ನು ವಂತಿದೆ. ಉದಾಹರಣೆಗಾಗಿ :—

ಉತ್ತಮ ಕಾವ್ಯಕ್ಕೆ— ಧ್ವನಿಯೇ ಪ್ರಧಾನವಾದುದು ಉತ್ತಮಕಾವ್ಯ.

ಕಂದರ್ಪದೇವನ ಮಿತ್ರನು ತೋರಿಸಿದ ಭಾವಚಿತ್ರವನ್ನು ಲೀಲಾವತಿಗೆ ತೋರಿಸಿದೆ. ತಿರುಗಿ ಕೊಟ್ಟದ್ದರಿಂದ, "ಪ್ರತ್ಯಕ್ಷಸ್ಯ ಪ್ರೇಮ್ಣಃ ಸ್ಖಲಿತಮವಿಷಹ್ಯಂಹಿಭವತಿ", ಎಂಬ ಮಾತಿನಂತೆ ಲೀಲಾವತಿ ಲತೆಯಾಗಿಬಿಡುತ್ತಾಳೆ. ಅವಳನ್ನು ಹುಡುಕುವದಕ್ಕೆ ತಿರುಗಿ ಬೇಸತ್ತು ಯಾರನ್ನು ಕಳುಹಬೇಕೆಂದು ನಿಸರ್ಗವನ್ನು ಕುರಿತು ಹೇಳಿದಮಾತಿದು.

ಇನಿಯಳನಾರಯಲ್ಕೆ ಸರಲಟ್ಟುವೊಡಂ ಮುಡಿಗಂಡು ಕಾಳ್ಯುಸ । ರ್ಪನ ತನುವೆಂದೆ ನೊಂದಪುದು ತುಂಬಿಯನಟ್ಟು ವೊಡೆಯ್ದೆ ಬಾಯಕಂ । ಪಿನಸವಿ ಗಂಡುನಿಂದಪುದು ಹಂಸೆಯ ನಟ್ಟು ವೊಡೀರ್ಷೆಯಿಂದೆ ಜ । ಕ್ಕನೆ ಜರಿದೆಯ್ದೆ ಬಿಂದಪುದು ಕಂಡೊಡೆಕಾಂತೆಯ ಮುಂದಯಾನಮುಂ ॥

ಇದೇ ರೀತಿಯಾಗಿ ಸಂಸ್ಕೃತದಲ್ಲಿ.

ಸಮಾತುಂ ಶಕ್ಯಂ ಮೇ ನಯನಯುಗಮಾಲೀ ಕರತಲೈಃ । ತನುಜ್ಯೋ ತ್ಸ್ನಾ ಜೇಯಂ ವಿಘಟಯತಿ ಗಾಢಾಂಧ ತಮಸಂ । ಸಖೀನಾಮಾಹೂತಿಂವಿರಚ ಯತಿ ಸೌಗಂಧ್ಯ ಮಿತಿತಾಂ । ರುದನ್ತೀಂ ತನ್ಮಾತಾ ಹಸಿತವದನಾ ಚುಂಬತಿ ಮುಹುಃ ॥ ಎಂಬ ಉತ್ತಮ ಕಾವ್ಯೋದಾಹರಣಕ್ಕೆ ಹೊಂದಿಸಿ ನೋಡಬಹುದು.

ನೇಮಿಚಂದ್ರನು ಇದನ್ನು ಒಳ್ಳೇ ಉತ್ತಮ ಲಕ್ಷಣ ಗ್ರಂಥವನ್ನಾಗಿಯೂ ಮಾಡಬೇಕೆಂಬ ಹಿರಿಹಂಬಲವನ್ನಿಟ್ಟುಕೊಂಡಿರುವದರಿಂದ ಪ್ರಾಚೀನ ಲಕ್ಷಣ ಗ್ರಂಥಕಾರರ ಅಭಿಪ್ರಾಯದಂತೆ ಲಲಿತಾಲಂಕಾರೆಯ ? – ಇತ್ಯಾದಿಯಾಗಿ ಮನೋಹರವಾದ ಉತ್ಪೇಕ್ಷೆಗಳನ್ನು ಅದೆಷ್ಟೋ ತುಂಬಿದ್ದಾನೆ.

ಕಂದರ್ಪದೇವನು ವೇಶ್ಯಾವಾಟವನ್ನು ನೀರೀಕ್ಷಿಸುತ್ತಿದ್ದಾಗ ಒಬ್ಬಳು ಉಯ್ಯಲೆಯಮೇಲೆ ಕುಳಿತು ಕಾಲುಬೀಸುತ್ತ ಬೆಳ್ದಿಂಗಳಲ್ಲಿ ಆಡುತ್ತಿರುವದನ್ನು ಕವಿಯು ಈ ರೀತಿಯಾಗಿ ಉತ್ಪ್ರೇಕ್ಷಿಸುತ್ತಾನೆ.

ಇದು ನಿನ್ನೀಯೇಣ ನೆನ್ನೀಕ್ಷಣಕೆ ಸೆಣಸಿತಾಂ ಬೆರ್ಚಿನೋಳ್ಪೊಂದುದರ್ಪ । ಕ್ಕಿದು ನಿನ್ನೀಯಾಲವೆನ್ನೀಯುಧರ ದಳದೊಳಾದೀರ್ಷೆಯಿಂ ಪಣ್ತಗರ್ವ । ಕ್ಕಿದು ನೀನೆನ್ನಾ ಸ್ಯದೊಳ್ ಮಚ್ಚರಿಸುವ ಮರುಕಕ್ಕೆಂದು ಕಾಲಾಗ್ಗಲೊಳೀವಂ । ದದೆ ಚಂದ್ರಗುತ್ಕ್ರಹಾರಂಗಳ ನೊದೆದೊಲವಿಂದುಯ್ಯಲಾಡುತ್ತ ವಿರ್ದಳ್ ॥

ಮತ್ತೊಂದೆಡೆಯಲ್ಲಿ ಜೋಡೆಯರ ಜಾಣ್ಮುಡಿಯನ್ನು — ಪದರುನುಡಿಯನ್ನು — ಕ್ರಮಾಲಂಕಾರ ಸರಣಿಯಲ್ಲಿ ಹೊಂದಿಸಿದ ಹೊಲನಿದು.

ನಗೆಗಣ್ಣಂ ಪೋಲ್ತುದೆಂದೆನ್ನಯ ಮೊಗರಸಮುಂ ಪೋಲ್ತುದೆಂದತ್ತಿಕಂಪಂ ಎಗೆಪೊಲ್ತುದೆಂದೇಕೆ ಮಗಮಗಿಪ ಪೂವಿಂಗೆ ಚಂದ್ರಂಗೆ ತೆಂಗಾ । ಳಿಗೆಕಾಯ್ದಿನ್ನಿನಾಪೊಗಳೆ ಮನಸಿಜವಂಬಾಗಿಯೀ ಚಂದ್ರನಲ್ತೇ । ಬಗೆದುಂ ರೆಚ್ಚಾಗಿಯಿಂಬೆತಿರೆ ಮುನಿದುಸಂತಾಗಿ ಕೊಂದಪ್ಪು ದೀಗಳ್ ।

ಕಂದರ್ಪದೇವನೂ ಮಕರಂದನೂ, ತುರುಪಟ್ಟಿಯು ತುರನೆಲೆಯಲ್ಲಿ ನಿಂದೋಡುತ್ತಿರುವಾಗ ಇದಿರಿಗೆ ಬರುವ ಗೂಳಿಯನ್ನು ವರ್ಣಿಸಿದ ಸ್ವಭಾವೋಕ್ತಿ ಯಿದು.

ಅಡೆಯಂ ಕೋದೆತ್ತುತುಂ ಮಾರ್ದನಿಗೆ ಮುಸಗುತುಂ ದರ್ಪದಿಂ ಛಾಯೆ ಕೊಳೆಕ್ಕೀ । ಡಿಡುತಂ ಮೂಕಾದಿ ಪುಣ್ದಿಂತಿಣಿಗೆರಗೆ ನೊಳಂ ಶೀರ್ಣಶೃಂಗಾಗ್ರದಿನಾ । ರ್ದೊಡೆಯುತ್ತಂ ಪಾಯುವ್ದು ಪಿಂಡಂ ಕಲಕಿ ಕೆಲೆಯುತಂ ಬೆರ್ಚಿ ಬಲೂಗಳ್ ಬೆಂ । ಗುಡೆ ಗಂಡಂ ಸೂಸುತುಂ ಬಂದುದು ಮದವಿದಳತ್ಪಿಂಗಳಾಕ್ಷಂ ಮಹೋಕ್ಷಂ ॥

ಏಕೋಹಿ ದೋಷೋಗುಣ ಸನ್ನಿಪಾತೇ ನಿಮುಜ್ಜತೀಂದೋಃ ಕಿರಣೇಷಿವಾಂಕಃ । ಎಂಬ ಸಂಸ್ಕೃತ ಲೋಕೋಕ್ತಿಯನ್ನು ಅರ್ಥಾಂತರವಾಗಿ ಜೋಳಿಸಿ ತೊಸ ಬಗೆಯಿದು.

ಮೃಗಲಕ್ಷ್ಮಂ ಸಂಜೆಗೆಂಪಿಂ ಪುದಿದುದಯಿಸಿ ಸರ್ವೋರ್ವಿಗಾನಂದಮಾ । ರ್ಧಿಗೆ ವೆರ್ಚಂ ಮಾಡಿ ಮುನ್ನಂ ಬಳಿಕೆರ್ದೆಗರೆಯಂ ತೋರೆಯುಂ ಕಂಡ ಲೋಕಂ । ಬಗೆ ಗೊಂಡಾಲಂ ಪೊಲಂ ಪುತ್ತೆರಲೆಯೆನುತದಂ ಕೂರ್ತು ಕೈಗೆ ತೊಳಿನ್ನುಂ । ಪೊಗಳ್ದಪ್ಪರ್ ಭಾವು । ಲೋಕಕ್ಕುಪಕರಿಸುವನೆಲೋಳ್ ದೋಷವುಂ ಸತ್ಯಮಲ್ತೇ ।

ಈ ಬಗೆಯಿಂದ ಅರ್ಥಾಲಂಕಾರದ ಬೆಡಗಿನತಕ್ಕಂತೆ, ಪದಸಂದರ್ಭ ಸೌಮ್ಯತ್ರಿಯೂ ಈ ಕವಿಯಲ್ಲಿ ಅನ್ಯಾದೃಶ್ಯವಾಗಿದೆ.

ಚೂರ್ವಪ್ರಿಯನೆಂಬ ಶುಕವು ರಾತ್ರಿ ಎಷ್ಟಾದರೂ ಬಾರದಿರಲು ಅಸಾಹಯ ನಿರೀಕ್ಷಣೆಯಲ್ಲಿನ ತವಕದ ತಳಮಳವನ್ನು ಕವಿಯು ಚಿತ್ರಿಸುವದರಲ್ಲಿ ಪದಸಂದರ್ಭ ಮೈತ್ರಿಯಿಂತಿರಿಸಿದ್ದಾನೆ.

ಗೂಡಿನ ಸುತ್ತಲುಂ ಸುಳಿಗು ಮಾಲಿಸುಗುಂ ಸಲೆಬರ್ಪ ಬಟ್ಟೆಯುಂ ತೋಡುಗು ಮಳ್ಗು ಮೇಳ್ಗು ಮೊಳಗಂ ಪುಗುಗುಂ ತಳಿರೊಳ್ ಪುರುಳ್ಗುವಿ ಹೊರ್ದಿರೆ

ಇದರಂತೆ, ಹಂದಿಗೆ ಕಂದರ್ಪನ ಬಾಣವು ತಗಲಿದಾಗ ಏರುಗೊಂಡು ಎಕ್ಕೇ ವೋಡಿದುದುರಲ್ಲಿಯೂ ಇದೇ ತೆರನಾದ ರಸಾನುಗುಣ್ಯ ಶಬ್ದರಚನೆಯಿದೆ.

ರಕ್ಕಸನಂ ಬೆಂಗೊಳ್ವಂ ಲಕ್ಷ್ಮಣನಂತದಂ ಬೆಂಗೊಂಡು ಒಳಿಯನುಳಿಯದ ಪರಿಯೆ । ಕೆಯ್ಪೊಲನುಂ, ಬೆಯ್ಪೊಲನುಮುಂ, ಕರುಂಬ ನಿರುಂಬಮುಂ, ತಾಗುಮುಂ ಬಾಗುಮುಂ, ಪಳ್ಳಮುಮುಂ । ಕೊಳ್ಳಮುಮುಂ, ನೆಳರುಮುಂ ಕಳರುಮುಂ, ವಿರಿ ಗಲುಮುಂ ಗಿಡುದುರಗಲಮುಂ, ದರಿಯುಮುಂ, ಕುಮ್ಮರಿಯುಮುಂ, ಮೊರಡುಮುಂ ಕೊರಡುಮುಂ, ಗುಳಿಯುಮುಂ ಕುಳಿಯುಮುಂ.

ಪ್ರಾಣಾಪಾಯ ಭಯದಿಂದೋಡುವ ಹಂದಿಯ ತಡೆಯಿಲ್ಲದ ಓಟದಲ್ಲಿಯೂ ಕವಿಯ ರಚನಾ ಪ್ರವಾಹದಲ್ಲಿಯೂ ಅದೆಂತಹ ಪದಸಂದರ್ಭ ಮೈತ್ರಿ !

ಬಣ್ಣಿಸರಂ ಪೊಸತಾಗೆ ಬಾಸಿಗಂ ಕಟ್ಟುವನಂತೆ ಕಬ್ಬಮುಂ ಕಟ್ಟುವುದು ಎಂದು ಹೇಳುವ ಕವಿಯ ಕಲ್ಪನಾ ವೈಖರಿಯೆಂತಿದೆಯೆಂಬುದನ್ನೂ ಹೊಸ ಒಣ್ಣಿ ಬಣ್ಣನೆಯು ಹೇಗೆ ಹೊರಹೊಮ್ಮಿದೆಯೆಂದೂ ನೋಡುವಾ,

ಕನಸಿನಲ್ಲಿ ಕಂಡ ಲೀಲಾವತಿಯ ಅವಯವ ಸೌಷ್ಠವವನ್ನು ಬಣ್ಣಿಸುವಾಗ " ತರುಣಿಯ ಮುಖಚಂದ್ರಮನೊಳ್ । ಹರಿಣನುಮುಂ ಮರೆಯಲೆಂದು ಭಾವಿ ಬಿದಿಸುಂ । ದರತೆಗೆ ಮರುಳ್ದು ಒರಿಗೊಂ । ಬೆರಡೆನೆ ಬರೆದಂತಿರಸಿಯ ಪುವ್ವು ಗಳೆಸೆಗುಂ ॥ ಎಂದು ಹುಬ್ಬುಗಳನ್ನು ಒಣ್ಣಿಸುವಾಗಲೂ,

ಸ್ತನದ ನಿತಂಬದ ಬಣ್ಪಂ । ವನಜಭವಂ ತೂಗಿನೋಡೆ ನಡುವಂ ಪಿಡಿದಾ ತನ ಬೆರಲ ಪಜ್ಜೆ ಪತ್ತಿದು । ವೆನೆವಳಿಗಳ್ ಕಣ್ಗೆವಂದುವಾ ಕೋಮಳೆಯಾ ॥

ಎಂದು ತಿವಳಿಗಳ ಬೆಡಗನ್ನು ಒಣ್ಣಿಸುವಾಗಲೂ ಕವಿಯ ಕಲ್ಪನ ವೈಖರಿಯ ಕಲ್ಪನೆಯಾಗುವಂತಿದೆ.

ಇದೇ ಕಲ್ಪನೆಯ ಕುಸುರು ಒಂದೇ ವಸ್ತುವನ್ನು ಬೇರೆ ಬೇರೆ ಬಗೆಯು ಬಣ್ಣಿಸುವಾಗಲೂ ಬಂದಿದೆ. ಚಂದ್ರಮಂಡಲ, ಸೂರ್ಯಬಿಂಬ, ಪೌರನಾರಿಯರು ಇವುಗಳ ವನವರ್ಣನೆಗಳನ್ನು ಚಿತ್ರಿಸುವಾಗ ಈ ಕೈವಾಡವನ್ನು ನೋಡಬಹುದು.

ತಾಡಗೆಗಳ ಬಗೆಯಲ್ಲಿ

ಅಮರೇಂದ್ರಾಶಾವಧು ಚಂ । ದ್ರಮುಖಿ ಸುಧಾರಶ್ಮಿ ಸೀಧು ರಸಧಾ ಯನಂ । ದುಮುಳೆ ನಭಃ ಕೇಸರಮೆ । ಯ್ದೆ ಮುಗುಳ್ತಂತಹರೆ ತೊಳಗಿದುವ ತಾರಗೆಗಳ್ ॥ ಓಸರಿಸೆ ಸಂಜೆಜವನಿಕೆ । ಯೋಸರಿಸಿದ ತೆರದೆ ರಾತ್ರಿ ನರ್ತ ಪುಗುತುಂ । ಸೂಸಿದ ಪುಷ್ಪಾಂಜಳಿಯೆನೆ । ಭಾಸಿಸಿದುವು ಗಗನರಂಗದೊಳ ತಾರಗೆಗಳ್ ॥

ಕಾವ್ಯ ಕಲ್ಪನೆಯಲ್ಲಷ್ಟೇ ಅಲ್ಲದೆ, ಕವಿಯು ವ್ಯಾಕರಣದೃಷ್ಟಿಯಿಂದಲೂ ಚಮತ್ಕಾರವನ್ನು ತೋರಿಸಿದ್ದಾನೆ. ಆ ವೇಶ್ಯಾವಾಟದಲ್ಲಿ ಓರ್ವಳ್ ಕೆಳದಿಯ ಕಾಲಮೇಲೆ ಬಿಳ್ದು,

ನೆರೆಬಂದೀ ಮಧುವೆನ್ನ ನಂಗಭವನೆನ್ನಂ ಚಂದ್ರನೆನ್ನಂದವೆಂ । ದರಿಯೆಂ ಕೇವಳಮೆನ್ನ ನೆಂದರಿಯದೀಗಳ್ ವಿಯೋಗಾರ್ತೆಯಂ । ನೆರೆಂದೀ ಮಧುವೆನ್ನ ನಂಗಭವನೆನ್ನಂ ಕೊಲಲ್ । ತರಿಸಂದಿರ್ದ ಪರಾತನೊಳ್ ನೆರವುನೀಂ ಶ್ರೀರೂಪ ಕಂದರ್ಪನೊಳ್ ।

ಇಲ್ಲಿ ವಿಂತಪ್ಪ=ಎನ್ನಂ, ಎನ್ನಂ=ನನ್ನನ್ನು ಎಂದು ವ್ಯಾಕರಣ ಮೂಲವಾದ ಶ್ಲೇಷ ಚಮತ್ಕಾರವಿದೆ.

ಶೃಂಗಾರ ಸಾಗರದಲ್ಲಿ ಇಷ್ಟು ಆಳವಾಗಿ ಮುಳುಗುತ್ತಿದ್ದರೂ, ನೀತಿಸ್ತ್ರದ ಪಾಠವನ್ನು ಕೊಡುತ್ತಿದ್ದಾನೆ. ಈ ಕವಿ ಮಹಾಶ್ವೇತೆಯ ಮೋಹದಲ್ಲಿ ಬಳುಗಿದ ಪುಂಡರೀಕನಿಗೆ ಮಿತ್ರನಾದ ಕಪಿಂಜಲನು ಉಪದೇಶಮಾಡಿದಂತೆ, ಲಾವತಿಯ ಲಲಿತರೂಪಕ್ಕೆ ಮುಗ್ಧನಾದ ಕಂದರ್ಪನ ಕಿವಿಗೆ ಹರಳುಹಚ್ಚುವಾತಿದು.

" ಉದಯಿಪ ನೇಸರಿಂ ಕಿಡಿದ ಕಳ್ತಲೆ ಕಿತ್ತಲಗಿಂ ಕುರುತ್ತುಕು । ತ್ತದ ವೆನೆ ಮಂತಕನ ಬಾರಿಗೆ ಬಾರದ ಸಾವುಕಳ್ಳನು । ಣ್ಣದ ಕಡುಸೊರ್ಕು ಕ್ಷಿನುರಿಪತ್ತದೆ ಪೊತ್ತುವ ಬೀಗೆ ಪಾವು ತಿ । ನ್ನದ ತನಿನಂಜು ತನ್ವಿಯ ಳಾದಳುಪಿಂ ಪೆರತುಂಟೆ ಲೋಕದೊಳ್ " " ಬದವಿದ ಪೆಂಪನೊಲ್ಲದೊಡೆ ತಿಯನೊಲ್ಲದೊಡೆ ಒಲ್ವುದು ಪೆಣ್ಣಿವಾನವಂ " ಈ ಕವಿಯ ಕಾವ್ಯವು ಲಕ್ಷಣ ಂಥವಾಗಿದೆಯೆಂದು ಹಿಂದೊಮ್ಮೆ ಹೇಳಿದೆ. ಆ ದೃಷ್ಟಿಯಿಂದ ವಿಚಾರಿಸಿದರೆ ವರಸಗಳನ್ನು ಇದರಲ್ಲಿ ಕಾಣಬಹುದು. ಶೃಂಗಾರ ರಸವಂತೂ ಈ ಕವಿಗೆ ರಾಜರ ವಸ್ತುಗಳಲ್ಲಿಯೂ ಕಾಣುತ್ತಿದೆ, ಸ್ತ್ರೀ ಸೃಷ್ಟಿಯಲ್ಲಿಯೇ ಶೃಂಗಾರ ಸಪ್ರವಾಹವನ್ನು ಕೇಳಬೇಕೆ! ಲೀಲಾವತಿಯ ವರ್ಣನೆ, ಸಮಷ್ಟಿಯಲ್ಲಿ ಳಲೆಗೆ ಗಣ್ಣಿನೋಂಕಲತೆಯೇ ಲಲಿತಾಂಗಿಯೋ, ಮುದ್ದುಗೆಯ್ತುವೊ ! ಲ್ದೆಳಸಿದ ನ್ನ ಪುತ್ತಳಿಯೊ ಕಾಂತೆಯೊ ; ಪೂಮುಡಿಬಿಟ್ಟು ಬೆನ್ನನ । ಪ್ಪಳಿಸುವ ಸೈಪಿ ಬ್ಜಿನಿಯೊ ಕಾಮಿನಿಯೋ ; ಮೊಲೆವೊತ್ತ ಭಾಗ್ಯಮಂ । ತಳೆದೆಳವಿಂಜೊ ೋಮಳೆಯೊ ಪೇಳೆನೆ ಬಾಳಕಿಯಾದ ಮೊಪ್ಪಿದಳ್ ॥

ಹಾಸ್ಯರಸ

ಕಾವುದು ದೇವ ಯಾಜಕನ ನಂಜದಿರಂಜದಿರೇಕೆ, ನೇಲ್ವ ತೋ । ನ್ಪಾವತೊ ಯತ್ನವಾರಣದ ಸೊಂಡಿಲೊ, ಕಾದೆರ್ದೆವೃತ್ತಿ ನಿಂದೆ ಪೆ । ಬಾರ್ದ

ಹೊಡ್ಡಗೊಂಡು ಪೊರಮಟ್ಟುವೊ ಪೋದೊಡೆಪೊಯ್ದುವೆನ್ನನೋ । ಪೋವ
ಭೀತಿಯಾದಪುದು ಸೂಳೆಯ ಸೋರ್ವೊಲೆ ಗಂಡು ಭೂಪತೀ ॥ ಇದರಂತೆಯೆ
ಇನ್ನು ಎಲ್ಲ ರಸಗಳ ಬಗೆಗೂ ಅಷ್ಟವಿಧ ಶೃಂಗಾರನಾಯಿಕೆಯರು ನಾಯಕರ
ಕವಿಸಮಯಗಳು ಸಂಗೀತ ನೃತ್ಯಗಳ ವಿಚಾರಗಳು ಮುಂತಾದವುಗಳ ವಿಷಯ
ದಲ್ಲಿಯೂ ಹೆಜ್ಜೆಹೆಜ್ಜೆಗೆ ಉದಾಹರಣ ಕೊಡಬಹುದು. ಈ ಶಬ್ದಸಂಪತ್ತ
ನವರಸ ಪರಿಪ್ಲುತೆ— ಕೂಲಂಕಷವರ್ಣನಾವೈಖರಿ— ಅಲಂಕಾರಚಾತುರ್ಯ—
ವಿಲಕ್ಷಣ ಭಾಷಾಪ್ರಭುತ್ವ ಹೊಸಹೊಸ ಛಂದಸ್ಸುಗಳ ಮೂಲಕ ಗಮ
ಕಲೆಗೆ ಅನುಕೂಲ ಮಾಡಿಕೊಡುವ ಸಂಗೀತ ಜ್ಞಾನ ಮುಂತಾದವುಗಳೊಡ
ಉದ್ದಾಮ ಕೃತಿಯನ್ನು ನೆನೆಸಿದರೆ, ಸಂಸ್ಕೃತದಲ್ಲಿ ಭವಭೂತಿ ಕವಿಯ ಸ್ಥಾನ
ಇನ್ನೂ ಈತನಿಗೆ ಕಡಮೆಯಾಯಿತೆಂದೇ ಹೇಳಬೇಕು !

ಆದರೆ.... ....ಆದರೆ.... ....ಅಭಿನವಕಾಳಿದಾಸ ಬಸಪ್ಪಶಾಸ್ತ್ರಿಗಳು ಹೇಳಿದ
ವಂತೆ, 'ಈಗಳಿನಾಳಿಕೆಯೊಳೆ ಜನಗರ್ಗಾಗಿಪುವಭಿಮಾನವುಂ ಜನ ಸಹಾ
ಯತೆಯುಂ। ಮೇಗಣಧಿಕಾರಪದವುಂ। ನಾಗದು ತಕ್ಕುಗೆ ಸಲ್ವನೇವು
ನೇಡುಂ॥

ಎನ್ನುವಂತೆ ನಿಸ್ಸಹಾಯತೆಯಿಂದ ಈತನಿಗೆ ವಿದ್ಯೆಗೆ ತಕ್ಕ ಮನ್ನಣೆ ಸಿಕ್ಕಲಿಲ್ಲ
ಅಥವಾ ಸಿಕ್ಕುವಂತಿದ್ದರೂ ಯಾವನೋ ಪಂಡಿತಂ ಮನ್ಯನು ಈತನನ್ನು
ಹಿಂದೆ ದೂಡಿ ರಾಜಾಶ್ರಯನನ್ನು ಪಡೆದಿರಬೇಕು, ಅದು,

ಅನುಂಬುಧರೊಡನೆನೃಪಾ । ಸ್ಥಾನದೊಳಿರ್ದ್ದಪ್ಪೆನೆಂದು, ಕುಕವಿಕದಂಬಂ
ಬಾನುದ್ದಮಪ್ಪುದೇಕು । ದ್ಯಾನದೊಳೊಡನಿರವೆ, ಕಾಗೆಯುಂ ಕೋಗಿಲೆಯುಂ
ತಲೆಯುಂ ತೂಗುವನೊರ್ವನರ್ವಿಂ .... ಕಾಳ್ಕಬ್ಬುಮುಂ ಕಟ್ಟಿ.... .... ಒಲ್ದವ
ಚಾತುರ್ಯಕ್ಕೆ ಕೈವಾರಮುಂ ಪೊಲೆಗೆಟ್ಟೀವವನೊರ್ವ ನಿಂತಕಟ ....

ಈ ಪದ್ಯಗಳಿಂದ ಸೂಚ್ಯವಾಗುವಂತಿದೆ.

ಎಂತೆಯೆ, ಒಂದೆಗಡಬರಿಸಕ್ಕೆ ಇಂತಹ ಮಹಾಕಾವ್ಯವನ್ನು ಬರೆಯುವ
ಕವಿಯಿಂದ ಇಡಿಯ ಜನ್ಮದಲ್ಲಿ ೧॥ ಕಾವ್ಯವು ಸಿಕ್ಕುವಪೆಂದರೆ ಕನ್ನಡದ ದುರ್ದೈ
ವದ ಪರಮಾವಧಿಯಲ್ಲವೇ ! ನೇಮಿನಾಥ ಪುರಾಣದ ಉಳಿದರ್ದಭಾಗವನ್ನಾ
ದರೂ ಮಹಾಜನಗಳು ಶೋಧಿಸಿದರೆ ಇದ್ದ ಅರ್ಧ ಭಾಗದ ಅಶುದ್ಧತೆಯನ್ನಾದರೂ
ತಿದ್ದಿದರೆ ಕನ್ನಡದ ಮೇಲೆ ಮಹದುಪಕಾರವಾಗುವದು.

ಇಂತಹ ಮಹಾಕವಿಗೆ — ಕ್ರಾಂತಿಕವಿಗೆ ಕನ್ನಡದಲ್ಲಿ ನಿಶ್ಚಿತವಾದ ಸ್ಥಾ
ನವಿಲ್ಲದಿರುವದು ಶೋಚನೀಯವೂ ಅಹುದು ; ಕನ್ನಡ ತಾಯಿಯ ಅಪಮಾನವೂ

ಹುದು ! ಕವಿಚಕ್ರವರ್ತಿಗಳಾದ ಮುವ್ವರು ಕವಿಗಳಿದ್ದರೂ ಯಾವ ಪ್ರಶಸ್ತಿಯೂ ಇಲ್ಲದ ಆದಿಪಂಪನು ಕವಿತಾಚಾರ್ಯನಾಗಿ ಕುಳಿತಿದ್ದಾನೆ. ನೇಮಿಚಂದ್ರನಿಗೆ ಸ್ಥಾನವನ್ನು ಕಲ್ಪಿಸುವದಾದರೆ..ಆತನ ಮೇಲಿರಿಸಲಿಕ್ಕೆ ಹೇಳಿದರೆ ಅದಕ್ಕೆ ಈಗಲೇ ಒಪ್ಪತಕ್ಕ ಮಾತಲ್ಲದಾದುದರಿಂದ ಆತನ ನೆರೆಯಲ್ಲಿಯೇ ಕಲ್ಪಿಸಬೇಕೆಂದು ಹೇಳುವ ದಕ್ಕೆ ಹೆಚ್ಚಿನ ಎದೆ–ಹೆಚ್ಚಿನ ಎದೆಗಾರಿಕೆಯೇ–ಬೇಕಾಗಿಲ್ಲ.

ಲೀಲಾವತಿ ವಿಮರ್ಶೆ ಎಂಬ ವಿಷಯವನ್ನು ತೆಗೆದುಕೊಂಡಿದ್ದರೂ ಸಮಯಾ ಭಾವದ ಮೂಲಕ ಯಥಾಸಮಯವಾಗಿ ಲೀಲಾವತಿಯ ಲಾಲಿತ್ಯಪರಿಚಯಮಾಡಿ ಕೊಡಲು ಯತ್ನಿಸಿದ್ದೇನೆ. ನೀರಿಳಿಯದ ಗಂಟಲೊಳ್ ಕಡುಬಂತುರುಂಕಿದಂತಾ ಗಿದೆಯೋ ಹೆಳವಂ ಹೆಮ್ಮಾರದುದಿಯೂ, ಪಳಮಂ, ವಿಗೆಬಯಸುವಂತೆ ನಗೆಗೆ ಪಕ್ಕಾಗಿದೆಯೇ ಯಾರು ಒಲ್ಲರು? ನಿರ್ಣಯಿಸುವ ಪೂರ್ವದಲ್ಲಿಯೇ ಕ್ಷಮೆ ಯನ್ನು ಕೇಳಿಕೊಂಡು ಕುಳಿತುಬಿಡುವೆ.

ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಶಿಕ್ಷಣ ಹಾಗು ಸಂಬಳ

ಮುಂಬಯಿ ಸರಕಾರದ ಹೊಸಯೋಜನೆಗಳ ಮುಖ್ಯಾಂಶಗಳು

ಶಿಕ್ಷಣ :– ಶಿಕ್ಷಕ-ಶಿಕ್ಷಕಿಯರ ಶಿಕ್ಷಣವಿಷಯದಲ್ಲಿ ಸರಕಾರದವರು **ಮೋರೆ** ಸಮಿತಿಯವರ ಶಿಫಾರಸುಗಳನ್ನು ಸ್ವೀಕರಿಸಿರುವರು. ಈಗ ಮೊದಲನೆಯ ವರ್ಷದ ಟ್ರೇನಿಂಗ್ ಪಡೆದು ನೌಕರಿಯ ಮೇಲಿರುವ ೨೨ ರಿಂದ ೪೦ ರವರೆಗಿನ ವಯಸ್ಸಿನ ಎಲ್ಲ ಶಿಕ್ಷಕ-ಶಿಕ್ಷಕಿಯರಿಗೆ ಇನ್ನೊಂದು ವರ್ಷದ ಮತ್ತು ಇದೇ ವಯಸ್ಸಿನ ಅನ್-ಟ್ರೇಂಡರಿಗೆ ಒಂದೇಸವನೆ ಎರಡು ವರ್ಷಗಳ ಶಿಕ್ಷಣವನ್ನು ಕೊಡುವುದರಲ್ಲಿ ರುವದು. ಟ್ರೇಂಡ್ ಶಿಕ್ಷಕ-ಶಿಕ್ಷಕಿಯರ ಸಂಖ್ಯೆಯನ್ನು ಹೆಚ್ಚಿಸುವದರ ಸಲು ಗಾಗಿ, ಅನೇಕ ತರದ ಅನುಕೂಲತೆಗಳನ್ನು ಒದಗಿಸಲಾಗಿದೆ. ಇನ್ನು ೧೦ ವರ್ಷ ಗಳಲ್ಲಿ ಬಹುತರ ಎಲ್ಲರು ಟ್ರೇಂಡರಾಗುವಂತೆ ಯೋಜನೆಯನ್ನು ಕೈಕೊಳ್ಳ ಲಾಗಿದೆ.

ಸಂಬಳ :– ಈ ವಿಷಯದಲ್ಲಿ ಸರಕಾರದವರು ಸಾಕಷ್ಟು ವಿಚಾರಮಾಡಿ ಮುಂದೆ ಕೊಟ್ಟಂತೆ ಅಪ್ಪಣೆಯನ್ನು ಕೊಟ್ಟಿರುವರು.

ಸನ್ ೧೯೩೫ ನೇ ಎಪ್ರಿಲ್ ೧ ನೆಯ ತಾರಿಖಿಗಿಂತಲೂ ಮೊದಲು ಕಾಯಮ್ ನೌಕರಿಯ ಮೇಲೆ ಇದ್ದು, ೧೯೩೫ ರ ತರುವಾಯ ಹೊಸದಾಗಿ ಹೆಚ್ಚಿನತರಗತಿಯ

ಟ್ರೇನಿಂಗ್ ಪಡೆಯದೆ ಇದ್ದವರಿಗೆ ಈ ಮೊದಲು ಕೊಡುತ್ತಲಿದ್ದ ಸ್ಕೇಲಿನಂತೆ ಸಂಬಳ ಕೊಡಲಾಗುವದು. ಇನ್ನುಳಿದವರಿಗೆ ಸನ್ ೧೯೪೧ನೆಯ ಇಸ್ವಿಯ ಎಪ್ರಿಲ್ ತಿಂಗಳ ೧ನೆಯ ತಾರೀಖಿನಿಂದ ಕೊಡುವ ಸ್ಕೇಲು ಈ ರೀತಿಯಾಗಿದೆ :–

೧. ೧೯೪೬ ರಿಂದ ೫೯ ರ ವರೆಗಿನ ಅವಧಿಯಲ್ಲಿ **ಮೂರನೆಯ ವರ್ಷದ** ಪರೀಕ್ಷೆ ಪಾಸಾದವರಿಗೆ :–

(ಅ) ಡಿ. ಲೋ. ಬೋ. ಹಾಗು ನಾನ್ ಲೋಕಲ್ ಅಥಾರಿಟಿ ; ಮ್ಯುನಿಸಿಪಾಲಿಟಿ ರೂ. ೩೦–೨–೩೫ ೧–೫೦.

(ಆ) ಲೋಕಲ್ ಅಥಾರಿಟಿ–ಮುನಿಸಿಪಾಲಿಟಿ ರೂ. ೩೫–೨–೪೫–೧–೫೦.

೨. ೧೯೪೬ ರಿಂದ ಮುಂದೆ **ಎರಡನೆಯ ವರ್ಷದ** ಪರೀಕ್ಷೆ ಪಾಸಾದ ವರಿಗೆ :–

ರೂ. ೨೫–೨–೩೦–೧–೪೦.

೩. ೧೯೪೬–೫೯ ರ ಕಾಲದಲ್ಲಿ **ಮೊದಲನೆಯ ವರ್ಷದ** ಪರೀಕ್ಷೆ ಪಾಸಾದವರಿಗೆ :–

(ಅ) ಡಿ. ಲೋ. ಬೋ. ಹಾಗೂ ನಾನ್ **ಲೋಕಲ್** ಅಥಾರಿಟಿ ಮುನಿಸಿಪಾಲಿಟಿ ರೂ. ೨೦–೨–೨೪–೨–೩೦.

(ಆ) ಲೋಕಲ್ ಅಥಾರಿಟಿ ಮುನಿಸಿಪಾಲಿಟಿ, ರೂ. ೨೫–೨–೩೦.

೪. (ಅ) ಪ್ರಾಥಮಿಕ–ಶಾಲಾ–ಪ್ರಮಾಣಪತ್ರ ಪರೀಕ್ಷೆ ಪಾಸಾಗಿದ್ದು ಟ್ರೇನಿಂಗ್ ಆಗದೆ ಕಾಯಮ್ ನೌಕರಿಗೆ ಸೇರಿದವರಿಗೆ. ರೂ. ೨೦

(ಆ) ಬದಲಿ ಶಿಕ್ಷಕರಿಗೆ. ರೂ. ೧೫.

ಈ ಯೋಜನೆಯಿಂದ ಹಿಂದಿನ ಮತ್ತು ಮುಂದಿನ ಎಲ್ಲ ಶಿಕ್ಷಕ-ಶಿಕ್ಷಕಿಯರು ಎರಡನೆಯ ವರ್ಷದ ಟ್ರೇನಿಂಗ್ ಶಿಕ್ಷಣ ಪಡೆಯುವರೆಂದೂ ಎಲ್ಲರಿಗೂ ಸರಿಸಮಾನವಾದ ಹಾಗು ಜೀವನಯೋಗ್ಯವಾದ ಸಂಬಳವು ದೊರೆತು ಅಸಂತುಷ್ಟತೆಗೆ ಆಸ್ಪದವಿಲ್ಲದಂತಾಗುವದೆಂದೂ, ಶಿಕ್ಷಣದ ಮಟ್ಟು ಬೆಳೆಯುವದೆಂದೂ ಆಶಿಸಲಾಗಿದೆ.

ಪ್ರಕಟನೆ

೧೯೪೧ನೆಯ ಇಸ್ವಿಯ ಮಾರ್ಚ ತಿಂಗಳಲ್ಲಾದ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರದ ಪರೀಕ್ಷೆಯಲ್ಲಿ ಪಾಸಾದ ಈ ಕೆಳಗಿನ ಉಮೇದು ವಾರರಿಗೆ ಜಾರ್ಡಾಯಿನ್ ಪ್ರಾಯಿಜಗಳನ್ನು ಕೊಡಲಾಗಿದೆ.

ಸಂ.	ಹೆಸರು	ಪರೀಕ್ಷೆಯ ನಂಬರು ಭಾಷೆ	ಜಾತಿ	ಕೇಂದ್ರ	ರಕಮು
	ಸಾಮಾನ್ಯರಿಗೆ				
೧	ಇಂದು ಪೀತಾಂಬರ ಶೇಟಕೆ	೩ ಮರಾಠಿ	ಬ್ರಾಹ್ಮಣ	ಹುಬ್ಬಳ್ಳಿ	೫ ರೂ.
೨	ಮನು ಶಿವರಾಮ ಕಾಳೆ	೯ ಮರಾಠಿ	ಬ್ರಾಹ್ಮಣ	ಹುಬ್ಬಳ್ಳಿ	೫ ರೂ.
೩	ತುಳಸಾ ಹನುಮಂತರಾವ ಪಾಟೋಳೆ	೧೪ ಮರಾಠಿ	ಸಿಂಪಿ	ಹುಬ್ಬಳ್ಳಿ	೫ ರೂ.
	ಮಧ್ಯಮ ವರ್ಗದವರಿಗೆ				
೧	ವಿಠುಬಾಯಿ ಬಾಬೂರಾವ ಚಿಕ್ಕೋಡ್ಕೆ	೪೨ ಕನ್ನಡ	ಕ್ರಿಸ್ತಿಯನ್	ಗದಗ	೫ ರೂ.
೨	ಗಂಗಾಬಾಯಿ ಫಕೀರಪ್ಪ ಜಾಧವ	೫೩ ಕನ್ನಡ	ಮರಾಠಾ	ಧಾರವಾಡ	೫ ರೂ.
	ಹಿಂದುಳಿದ ವರ್ಗದವರಿಗೆ				
೧	ಬಾಳವ್ವ ಸೋಮಪ್ಪ ಉಳ್ಳಿ	೧ ಕನ್ನಡ	ದಾಸರ	ಹುಬ್ಬಳ್ಳಿ	೫ ರೂ.
	ಮುಸಲ್ಮಾನರಿಗೆ				
೧	ಫಜಲುನ್ನೀಸಾ ಜೈನುದ್ದೀನ ಸಾಹೇಬ ಮೌಲ್ವಿ	೪ ಉರ್ದು	ಮುಸಲ್ಮಾನ	ಹುಬ್ಬಳ್ಳಿ	೫ ರೂ.

ಧಾರವಾಡ (ಸಹಿ) ಜೆ. ಆರ್. ಭಂಡಿವಾಡ,

ತಾ. ೧೦–೧೦–೪೧ ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ಪತ್ರಗಳ ಮುಖ್ಯಾಂಶಗಳು.

ಹಂಸಭಾವಿ— (ಧಾರವಾಡ) ಈ ಊರ ಶಾಲೆಯಲ್ಲಿ ಹಿರೇಕೆರೂರ ತಾಲೂಕಿನ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವಾಯಿತು. ಮಾನುಲೇದಾರರಾದ ಶ್ರೀ. ಎಸ್. ಜಿ. ಸಾಲಿಯವರು ಅಧ್ಯಕ್ಷರಾಗಿದ್ದರು. ಶಾಲೆಗಳ ಸಹಾಯಕ್ಕಾಗಿ ೧೫ ರೂ. ಗಳ ವಾಗ್ದಾನವಾಯಿತು.

ತಿಳಿಸಿದವರು : ಶ್ರೀ. ತಿ. ಭ. ವೈಶ್ಯರ, ಹೆ. ಮೂ. ಹಂಸಭಾವಿ.

ಕನವಳ್ಳಿ— (ಧಾರವಾಡ) ಇಲ್ಲಿಯ ವಿದ್ಯಾರ್ಥಿಗಳು ವಿನಾಯಕನ ಹಬ್ಬದ ಸನುಯದಲ್ಲಿ ನಾಟಕವಾಡಿ ತೋರಿಸಿದರು. ಊರ ಹಿರಿಯರು ಶಾಲೆಯಲ್ಲಿ ತೇವಿನ ತೊಂದರೆಯಾಗಬಾರದೆಂದು ಸಾಕಷ್ಟು ಚಾಪೆಗಳನ್ನು ಪೂರೈಸಿರುವರು.

ತಿಳಿಸಿದವರು : ಶ್ರೀ. ಮು. ಮು. ನೆಗಳೂರ, ಹೆ. ಮೂ ಕನವಳ್ಳಿ.

ಸೂರಣಗಿ— (ಧಾರವಾಡ) ಈ ಊರಲ್ಲಿ ಶ್ರೀ. ಶಾ. ಗು. ಅಮೂರ ಇವರ ಮುಂದಾಳುತನದಲ್ಲಿ ವಿದ್ಯಾರ್ಥಿಗಳು ವಿನಾಯಕನ ಹಬ್ಬವನ್ನು ಸಡಗರ ದಿಂದ ಜರುಗಿಸಿದರು. ಹಾಗು ನಾಡಹಬ್ಬದ ಕಾರ್ಯಕಲಾಪಗಳಲ್ಲಿ ಊರವರು, ಶಿಕ್ಷಕರು ವಿದ್ಯಾರ್ಥಿಗಳು ತುಂಬ ಸಹಕರಿಸಿದರು.

ತಿಳಿಸಿದವರು : ಶ್ರೀ. ಮೂದಾಪುರ ಬಸಯ್ಯನವರು (ಪ್ರೇಕ್ಷಕರು.)

ದುಃಖವಾರ್ತೆ

ನಮ್ಮ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಶ್ರೀ. ಗೋಪಾಲ ಮಧ್ವಾಚಾರ್ಯ ಸಾತೇನಹಳ್ಳಿಯವರು ಮೊನ್ನೆ ಪರಲೋಕವಾಸಿಗಳಾದರೆಂದು ಬರೆಯಲು ತುಂಬ ವಿಷಾದ ವಾಗುವದು. ಹತ್ತು ಹದಿನೈದು ವರುಷಗಳಿಂದಲೂ ಇಲ್ಲಿ ಕೆಲಸಮಾಡುತ್ತಿದ್ದು ಪ್ರಾ. ಶಿ. ಕ್ಕೆ ಹಲವು ರೀತಿಯಿಂದ ನೆರವು ಕೊಟ್ಟ ಈ ಮಹನೀಯರು ಶಾಂತದಾಂತ ಸದ್ಗುಣಿಗಳಾಗಿದ್ದು ಮೊನ್ನೆ ಮೊನ್ನೆ ಸೇವಾನಿವೃತ್ತರಾಗಿದ್ದರು. ಅವರ ಚಿರಂಜೀವಿಯೊಬ್ಬನು ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ನಿಯಮಿಸಲ್ಪಟ್ಟಿದ್ದರೂ ಇವರ ವಿಯೋಗದಿಂದ ಆ ಕುಟುಂಬಕ್ಕೆ ತುಂಬ ಆಘಾತ ವಾದಂತಾಯಿತು. ದೈವ ಇಚ್ಛೆಯನ್ನು ಮೀರಲು ಸಾಧ್ಯವೆಲ್ಲಿದೆ? ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲಿ.

—ಸಂ. ಪ್ರಾ. ಶಿ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ಸಂಪುಟ ೮೦	ನವಂಬರ್ ೧೯೪೧	ವರ್ಷ ೧೩. ಸಂ. ೮

ಪ್ರಬುದ್ಧರ ಶಿಕ್ಷಣ

ಮುಂಬಯಿ ಸರಕಾರದವರು ಪ್ರಬುದ್ಧರ ಶಿಕ್ಷಣದ ವಿಷಯದಲ್ಲಿ ತುಂಬ ಆಸ್ಥೆಯಿಂದ ಕೆಲಸ ನಡಿಸಿದ್ದು ಈ ವರ್ಷದ ಅಂದಾಜ ಪತ್ರಿಕೆಯಲ್ಲಿ ಅದಕ್ಕೆ ೬೦ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿರುವರು.

ಪ್ರಬುದ್ಧರ ಶಿಕ್ಷಣದ ಕಾರ್ಯದಲ್ಲಿ ತೊಡಗಿದವರ ಸಂಖ್ಯೆಯನ್ನು ಬೆಳೆಯಿಸುವದರಿಂದಾಗಲಿ ಸಾಕ್ಷರಿಗಳಾದ ಪ್ರಬುದ್ಧರ ಸಂಖ್ಯೆಯನ್ನು ವರದಿಗಳಿಂದ ಸಂಗ್ರಹಿಸಿಕೊಂಡು ಅದು ಬೆಳೆದಿದೆಯೆಂದು ತಿಳಿದುಕೊಂಡಮಾತ್ರದಿಂದಾಗಲಿ ಪ್ರಬುದ್ಧರ ಶಿಕ್ಷಣದ ಕಾರ್ಯಕ್ರಮವು ಯಶಸ್ವಿಯಾಯಿತೆಂದು ಹೇಳಲು ಸಾಧ್ಯವಿಲ್ಲ. ಪ್ರಬುದ್ಧರು ಪಡೆಯುವ ಶಿಕ್ಷಣದ ಮಟ್ಟವು ಬೆಳೆಯಬೇಕು; ಮತ್ತು ಆ ಸಾಕ್ಷರತೆಯು ಸ್ಥಿರವಾಗಿ ಉಳಿದು ಗ್ರಾಮವಾಸಿಗಳ ಸ್ಥಿತಿಗತಿಗಳ ಸುಧಾರಣೆಗೆ ಅನುಕೂಲವಾದ ರೀತಿಯಲ್ಲಿ ಅವರ ಆ ಶಿಕ್ಷಣವು ಮುಂದುವರಿಯಬೇಕು. ಈ ಎರಡು ಕಾರ್ಯಗಳು ಸರಿಯಾಗಿ ನೆರವೇರಿದಾಗಲೇ ಈ ಕಾರ್ಯದಲ್ಲಿ ತೊಡಗಿದ ಕಾರ್ಯಕರ್ತರ ಶ್ರಮವೂ ಅದಕ್ಕಾಗಿ ವೆಚ್ಚವಾದ ಹಣವೂ ಸಾರ್ಥಕವಾದಂತಾಗುವವು. ಈ ಉದ್ದೇಶದಿಂದ ಸರಕಾರದವರು ಮುಂದೆ ವಿವರಿಸುವ ಎರಡು ಯೋಜನೆಗಳನ್ನು ಕೈಕೊಂಡಿರುವರು.

೧. ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸುವ ಕೆಲಸಗಾರರಿಗೆ ತಕ್ಕ ಶಿಕ್ಷಣ ಕೊಡುವದು.

೨. ಪ್ರಬುದ್ಧರು ಪಡೆದ ಸಾಕ್ಷರತೆಯನ್ನು ಸ್ಥಿರಗೊಳಿಸಿಕೊಳ್ಳಲು ಅನುಕೂಲವಾಗುವಂತೆ ಪುಸ್ತಕಾಲಯಗಳನ್ನು ಸ್ಥಾಪಿಸಿ ಅವಕ್ಕೆ ತಕ್ಕ ಪ್ರೋತ್ಸಾಹನೆ ಕೊಡುವದು.

ಇವೇ ಸಂಚಿಕೆಯ ೧೫-೨೦ ಪುಟಗಳಲ್ಲಿ ಈ ಹಳ್ಳಿಯ ಪುಸ್ತ
ಲಯಗಳ ಯೋಜನೆಯ ಸವಿಸ್ತರವಾದ ವಿವರಣೆಯಿರುವದು.

ಪ್ರಬುದ್ಧರ ಶಿಕ್ಷಣದ ಕೆಲಸಗಾರರ ವರ್ಗದ ಒಗ್ಗೆ ಮುಂಬಯಿ ಸರಕ
ದವರು ಒಂದು ನಿರ್ಣಯವನ್ನು ಸ್ವೀಕರಿಸಿ ಈ ಕೆಳಗಿನಂತೆ ಕಾರ್ಯಕ್ರಮವನ
ಕೈಕೊಳ್ಳಬೇಕೆಂದು ಗೊತ್ತುಪಡಿಸಿದರು. [G. R. E. D. No. 713

(೧) ೧೯೪೧ನೆಯ ಇಸ್ವಿಯ ಅಕ್ಟೋಬರ ತಿಂಗಳ ಸೂಟಿಯ
ಪ್ರತಿಯೊಂದು ಭಾಗದೊಳಗಿನ ಟ್ರೇನಿಂಗ್ ಕಾಲೇಜದಲ್ಲಿ ಪ್ರಬುದ್ಧರ ಶಿಕ್ಷಣ
ವರ್ಗಗಳನ್ನು ನಡೆಯಿಸುವ ಕೆಲಸಗಾರರಿಗೆ ತಕ್ಕ ಮಾರ್ಗದರ್ಶಿಯಾದ ಒಂ
ವರ್ಗವನ್ನು ಎರಡು ವಾರಗಳ ವರೆಗೆ ನಡೆಯಿಸಬೇಕು. ಆದರೆ ಇಂಥದೊಂ
ವರ್ಗವನ್ನು ಪ್ರಾರಂಭಿಸುವದಕ್ಕೆ ತೀರ ಕಡಿಮೆಯೆಂದರೆ ೨೦ ಜನ ಕೆಲಸಗ
ರಾದರೂ ಈ ವರ್ಗಕ್ಕೆ ಹೋಗಲು ಸಮ್ಮತಿ ಕೊಟ್ಟಿರಬೇಕು. ಯಾವ ಟ್ರೇನಿಂ
ಕಾಲೇಜದಲ್ಲಿ ಈ ವರ್ಗವು ನಡೆಯಿಸಲ್ಪಡುವದೋ ಆ ಟ್ರೇನಿಂಗ್ ಕಾಲೇ
ಇಬ್ಬರು ಆರಿಸಿದ ಶಿಕ್ಷಕರ ಕಡೆಗೆ ಈ ವರ್ಗವನ್ನು ನಡೆಯಿಸುವ ಕಾರ್ಯವ
ಒಪ್ಪಿಸಬೇಕು. ಮತ್ತು ಅವರಲ್ಲಿ ಪ್ರತಿಯೊಬ್ಬರಿಗೆ ೨೫ ರೂ.ಗಳ ಸಂಭಾವನೆಯ
ಕೊಡಬೇಕು. ಅವರು ಎಲ್ಲ ಪೂರ್ವ ಸಿದ್ಧತೆಗಳನ್ನು ಮೊದಲೇ ಮಾಡಿ
ಕೊಂಡು ವರ್ಗವು ಪ್ರಾರಂಭವಾದ ಕೂಡಲೆ ಎರಡು ವಾರಗಳ ವರೆಗಿನ
ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಅಡೆತಡೆಗಳಿಲ್ಲದೆ ನಡೆಯಿಸಬೇಕು.

(೨) ಈ ವರ್ಗಗಳಿಗೆ ಆರಿಸಲ್ಪಟ್ಟ ಎಲ್ಲ ಕೆಲಸಗಾರರು ಈ ಮೊದಲೆ
ಪ್ರಬುದ್ಧರ ಶಿಕ್ಷಣದ ವರ್ಗಗಳ ಕೆಲಸಗಾರರೆಂದು ರಜಿಸ್ಟರ ಮಾಡಿಸಿಕೊಂಡ
ರಿರಬೇಕು. ಪ್ರತಿ ಕೆಲಸಗಾರನಿಗೆ ಅವನು ಅಲ್ಲಿ ಶಿಕ್ಷಣಹೊಂದುತ್ತಿರುವಾಗಿ
ವೆಚ್ಚಕ್ಕೆಂದು ಹತ್ತುರೂಪಾಯಿ ವೇತನವನ್ನು ಕೊಡಲಾಗುವದು. ಅವನ
ಟ್ರೇನಿಂಗ್ ಕಾಲೇಜದ ವಸತಿಗೃಹದಲ್ಲಿ ಬಾಡಿಗೆಯಿಲ್ಲದೆ ಇಳಿದುಕೊಳ್ಳಬಹುದ
ಆದರೆ ಈ ಕೆಲಸಗಾರನು ಮುಂದಿನ ೧೨ ತಿಂಗಳುಗಳ ಅವಧಿಯಲ್ಲಿ ತೀರ ಕಡಿವೆ
ಯೆಂದರೆ ಹತ್ತುಜನ ನಿರಕ್ಷರಿಗಳಾದ ಪ್ರಬುದ್ಧರನ್ನು ಸಾಕ್ಷರಿಗಳಾಗಿ ಮಾಡು
ಹೊಣೆಯನ್ನು ಒಪ್ಪಿಕೊಳ್ಳಬೇಕು. ಹಾಗೆ ಹತ್ತು ಜನರನ್ನು ಸಾಕ್ಷರಿಗಳಾ
ಮಾಡದೆ ಇದ್ದ ಪ್ರಸಂಗದಲ್ಲಿ ಅವನು ತಾನು ತೆಗೆದುಕೊಂಡ ಈ ಹತ್ತು ರೂಪಾಯ
ಗಳನ್ನು ಸರಕಾರಕ್ಕೆ ತಿರುಗಿ ಕೊಡಬೇಕಾಗುವದು.

(೩) ಈ ವರ್ಗಗಳನ್ನು ನಡೆಯಿಸುವದಕ್ಕೆ ಬೇಕಾಗುವ ಪಾಟಿಪುಸ್ತ
ಗಳು ಮುಂತಾದ ಉಪಕರಣಗಳನ್ನು ಕೊಳ್ಳುವದೇ ಮೊದಲಾದ ಇತರ ಕೆಲ
ಗಳಿಗಾಗಿ ೨೫ ರೂ. ಗಳನ್ನು ವೆಚ ಮಾಡಬಹುದು.

ಮೇಲೆ ವಿವರಿಸಿದ ಸರಕಾರದ ನಿರ್ಣಯಕ್ಕೆ ಅನುಸಾರವಾಗಿ ಧಾರವಾಡದ
ನಿಂಗ್ ಕಾಲೇಜದಲ್ಲಿ ೨೩-೧೦-೧೯೪೧ರಿಂದ ೫-೧೧-೧೯೪೧ರ ಪೂರ್ಣ
ಡು ವಾರಗಳಲ್ಲಿ ಇಂಥದೊಂದು ವರ್ಗವು ತುಂಬ ಯಶಸ್ವಿಯಾಗಿ ನಡೆಯಿತು.
ಕಾರದವರ ಯೋಜನೆಯು ಮೇರೆಗೆ ೨೦ ಜನ ಕೆಲಸಗಾರರಷ್ಟೆ ಸಾಕಾಗಿದ್ದರೂ
ಮ್ಮ ಭಾಗದೊಳಗಿನ ೪ ಜಿಲ್ಲೆಗಳಿಂದ ಸೇರಿ ೬೦ ಜನ ಕೆಲಸಗಾರರು ತುಂಬ
ತ್ಸಾಹದಿಂದ ಈ ವರ್ಗಕ್ಕೆ ಬಂದಿದ್ದರು. ಅವರಲ್ಲಿ ನಾಲ್ವರು ಶಿಕ್ಷಕಿಯರು.
ನಿಂಗ್ ಕಾಲೇಜದ ಪ್ರಿನ್ಸಿಪಾಲರೂ ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯು
ಶನಲ್ ಇನ್‌ಸ್ಪೆಕ್ಟರರೂ ಈ ವರ್ಗದ ಕಾರ್ಯಕಲಾಪಗಳ ಯೋಜಕರಾಗಿದ್ದರು.

ಕೆಲಸಗಾರರಿಗೆ ಶಿಕ್ಷಣಕೊಡುವದೆಂದರೆ ಟ್ರೇನಿಂಗ್ ಕಾಲೇಜಗಳಲ್ಲಿ ಶಿಕ್ಷಕ
ಗೆ ಟ್ರೇನಿಂಗ್ ಕೊಡುವಂಥ ಸವಿಸ್ತರವಾದ ಕಾರ್ಯಕ್ರಮ ಯೋಜನೆಯಲ್ಲ.
ವಲ ಎರಡು ವಾರಗಳ ಅವಧಿಯಲ್ಲಿ ಎಲ್ಲ ಕೆಲಸಗಳನ್ನು ಪೂರೈಸಬೇಕಾಗಿದ್ದಿತು.
ಕೆಲಸಗಾರರಿಗೆ ಒದಗಿಸಿಕೊಟ್ಟ ಸಹಾಯ ಸಲಹೆಗಳನ್ನು ಈ ಕೆಳಗೆ ಹೇಳು
ಂತೆ ವಿಭಾಗಿಸಿಕೊಳ್ಳಲಾಗಿತ್ತು.

(ಅ) ಮುಖ್ಯ ವಿಷಯಗಳು — ೧. **ಓದು, ೨. ಬರೆಹ, ೩. ಅಲ್ಪಸ್ವಲ್ಪ ಗಣಿತ.** ಈ ವಿಷಯಗಳನ್ನು ಪ್ರಬುದ್ಧರಿಗೆ ತೀರ ಸ್ವಲ್ಪ ಅವಧಿಯಲ್ಲಿ ಸುಗಮವಾಗಿಯೂ ಸುಲಲಿತವಾಗಿಯೂ ಕಲಿಸಬಹುದಾದ ಬೇರೆ ಬೇರೆ ಪದ್ಧತಿಗಳು; ಅವುಗಳ ವಿವೇಚನೆ.

(ಆ) ಸಾಮಾನ್ಯಜ್ಞಾನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳು— (೪) ಆರಿಸಿದ ಪುಸ್ತಕಗಳನ್ನು ಓದುವದು (ಸಾಕ್ಷರತೆಯ ದೃಢೀಕರಣ) (೫) ಪ್ರಚಲಿತ ವಿಷಯಗಳು (ಪ್ರಬುದ್ಧರ ಮನೋಭೂಮಿಕೆ. ಪ್ರಬುದ್ಧರ ವರ್ಗಗಳನ್ನು ನಡೆಯಿಸುವಾಗಿನ ತೊಡರು ತೊಂದರೆ ಮು.)

(ಇ) ವಿನೋದಕರವಾದ ವಿಷಯಗಳು (೬) ಹಾಡು (೭) ಕಥೆ ಹೇಳುವದು. (೮) ಗ್ರಾಮ ಸುಧಾರಣೆಯ ಇತರ ಚಟುವಟಿಕೆಗಳು ಮುಂ.

ಈ ವಿಷಯಗಳ ತಾತ್ವಿಕ ವಿವೇಚನೆಯೊಂದಿಗೆ ಅವನ್ನು ಪ್ರತ್ಯಕ್ಷ
ಲಸಮಾಡುವಾಗ ಹೇಗೆ ಅನುಸರಿಸಬೇಕೆಂಬದನ್ನು ಕೂಡ ಕೆಲಸಗಾರರಿಗೆ
ೋರಿಸಿಕೊಡಲಾಯಿತು. ಪ್ರಬುದ್ಧರಿಗೆ ಓದು ಕಲಿಸುವಾಗ ಕಥನಪದ್ಧತಿ
ುಂದ ಪ್ರಾರಂಭಿಸಿ ವಾಕ್ಯಗಳನ್ನೂ ಪದಗಳನ್ನೂ ಆರಿಸಿಕೊಂಡು ಹೇಗೆ
ನೋರಂಜಕವಾಗಿ ಪಾಠಸಾಗಿಸಬಹುದೆಂಬದನ್ನು ಮೂರು ನಾಲ್ಕುಮಾದರಿಯ
ಾಠಗಳಲ್ಲಿ ತೋರಿಸಲಾಯಿತು. ಬಳಿಕ ಕೆಲಸಗಾರರಾದ ಶಿಕ್ಷಕರಲ್ಲಿಯೇ
ಲವರು ಉತ್ಸಾಹದಿಂದ ಮುಂದೆ ಬಂದು ಕೆಲವು ಪಾಠಗಳನ್ನು ಕಲಿಸಿದರು

ಪ್ರಬುದ್ಧರಿಗೆ ವಾಚನ ಬರೆಹಗಳನ್ನು ಕಲಿಸುವ ಶಿಕ್ಷಕರು ಈ ಕೆಳಗಿನ 'ಕ'ಕಾರ ಸೂತ್ರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂಬದನ್ನು ಅನುಭವದಿಂದ ಮನಗಂಡರು.

(೧) ಕಣ್ಣಿನಿಂದ ಕಾಣು — ಶಿಕ್ಷಕನು ಬರೆದಿಟ್ಟ ವಾಕ್ಯ ಪದಗಳನ್ನು ನೋಡು.

(೨) ಕಿವಿಯಿಂದ ಕೇಳು — ಶಿಕ್ಷಕನು ಓದಿ ತೋರಿಸಿದ್ದನ್ನು ಕೇಳು.

(೩) ಕಂಠದಿಂದ ಕರೆ — ಶಿಕ್ಷಕನಂತೆ ತಾನೂ ಅದನ್ನು ಉಚ್ಚರಿಸುವದು.

(೪) ಕೈಯಿಂದ ಕೊರೆ — ತಾನೂ ಅದರಂತೆ ಬರೆಯಲು ಯತ್ನಿಸುವದು.

ವಾಚನ ಪಾಠದಲ್ಲಿ ಮೊದಲಿನ ಮೂರು ಮೆಟ್ಟಿಲುಗಳನ್ನಷ್ಟೇ ಇಟ್ಟುಕೊಂಡು ಕಲಿಸಿ — ಓದುವ ರೂಢಿಯಾದ ತರುವಾಯ, ಬರೆಹದ ಮೆಟ್ಟಿಲನ್ನು ಸೇರಿಸಿ ಬರೆಹದ ಪಾಠವನ್ನು ಸಾಗಿಸಬೇಕು. ಪ್ರಬುದ್ಧರ ಶಿಕ್ಷಣದ ಕೆಲಸಗಾರರ ವರ್ಗದಲ್ಲಿ ಪಾಠಗಳು ಹೇಗೆ ಸಾಗಿದವೆಂಬದಕ್ಕೆ ಇದೊಂದು ಉದಾಹರಣೆ ಸಾಕು.

ಪ್ರಬುದ್ಧರ ಶಿಕ್ಷಣದ ಕೆಲಸಗಾರರ ವರ್ಗಕ್ಕೆ ಬಂದವರಲ್ಲಿ ಬಹುಜನರು ಬೋರ್ಡಿನ ಶಾಲೆಗಳಲ್ಲಿ ಕೆಲಸಮಾಡುವ ಶಿಕ್ಷಕರೇ ಆಗಿದ್ದರು. ಅವರಿಗೆ ಮುಂದೆ ತಮ್ಮ ವರ್ಗಗಳಲ್ಲಿ ನಡೆಯಿಸುವ ಕೆಲಸಗಳಿಗೆ ಆವಶ್ಯಕವಿರುವ ಉಪಕರಣಗಳನ್ನು ತಯಾರಿಸಿಕೊಳ್ಳಲು ತಕ್ಕ ಸಹಾಯ ಸಲಹೆಗಳನ್ನು ಈ ವರ್ಗದಲ್ಲಿ ಒದಗಿಸಲಾಯಿತು. ಒಗೆಒಗೆಯ ಪಟಗಳನ್ನು ತಯಾರಿಸಿಕೊಳ್ಳಲು ಬೇಕಾದ ಕಾಗದ ಮೊದಲಾದ ಉಪಕರಣಗಳನ್ನೂ ಕೆಲವು ಮುದ್ರಿತವಾದ ಪಟ ಪುಸ್ತಕಗಳನ್ನೂ ಒದಗಿಸಿ ಕೊಡಲಾಯಿತು. ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಮೆ. ತಾವಡೆ ಸಾಹೇಬರು ಈ ವಿಷಯದಲ್ಲಿ ಅತಿಶಯ ಕಳಕಳಿಯಿಂದ ಕೆಲಸಮಾಡಿದರು. ಕೆಲಸಗಾರರ ಸುಖಸೌಕರ್ಯಗಳ ಸಂಬಂಧದಿಂದ ಆಗಾಗ ಮೇಲ್ವಿಚಾರಿಸಿ ಸಹಾಯ ಸೂಚನೆಗಳನ್ನು ಕೊಡುವ ವಿಷಯದಲ್ಲಿಯೂ ಅವರು ಬಹು ಜಾಗರೂಕರಾಗಿದ್ದರು. ಆರಂಭ ಮತ್ತು ಕೊನೆಯ ದಿನಗಳಲ್ಲಿ ಕೆಲಸಗಾರರನ್ನು ಉದ್ದೇಶಿಸಿ ಮಾಡಿದ ಅವರ ಭಾಷಣಗಳು ತುಂಬ ಉದ್ಬೋಧಕವಾಗಿರುವದರಿಂದ ಅವನ್ನು ಮುಂದೆ ಕೊಡಲಾಗಿದೆ.

ಶ್ರೀ. ಎಸ್. ಆರ್. ತಾವಡೆ, ಎಮ್. ಎ. ಅವರ ಪ್ರಾಸ್ತಾವಿಕ ಭಾಷಣದ ಮುಖ್ಯಾಂಶಗಳು

ಸದ್ಗೃಹಸ್ಥರೆ, ಶಿಕ್ಷಕ ಒಂಧುಗಳೇ, ಇಂದಿನ ಕಾರ್ಯಕಲಾಪಗಳ ಪ್ರಾರಂಭವಾಗಲು ತುಸು ತಡವಾಯಿತು. ಮತ್ತು ನಿಮಗೆ ತಿಳಿಯಹೇಳಬೇಕಾದ ವಿಷಯವನ್ನು ಕನ್ನಡದಲ್ಲಿ ಅಷ್ಟು ಸುಗಮವಾಗಿ ಹೇಳಲು ನನಗೆ ಸಾಧ್ಯವಿಲ್ಲ; ಅದಕ್ಕಾಗಿ ನನಗೆ ತುಂಬ ಅಸಮಾಧಾನವೆನಿಸುವದು. ಇರಲಿ. ನಿಮ್ಮಲ್ಲಿ ಬಹು

ನರು ಬೋರ್ಡಿನ ಶಿಕ್ಷಕರು. ಮಿಕ್ಕವರೂ ಸಹ ದೇಶದಲ್ಲಿ ಸಾಕ್ಷರತಾ ಪ್ರಸಾರ ಗೂಡುವಂಥ ಪವಿತ್ರಕಾರ್ಯದಲ್ಲಿ ಮನಸ್ಸುಹಾಕಿ ದುಡಿದವರು; ಮುಂದೆ ಹಾಗೆ ಕೆಲಸಮಾಡಲು ಉತ್ಸಾಹವನ್ನು ತೋರಿಸುತ್ತಿದ್ದೀರಿ. ಇದನ್ನು ನೋಡಿ ನನಗೆ ಕುಂಬ ಆನಂದವೆನಿಸುವದು.

ನಮ್ಮ ದೇಶವು ಈ ವಿಷಯದಲ್ಲಿ ಇತರ ದೇಶಗಳಿಗಿಂತಲೂ ಬಹಳ ಹಿಂದೆ ನಿದ್ದಿರುವದು. ನೂರರಲ್ಲಿ ೯೦ ಜನರು ನಿರಕ್ಷರಿಗಳಾಗಿದ್ದವರು ಇತ್ತೀಚೆಗೆ ನೂರಕ್ಕೆ ೮೦–೪೧ ರಷ್ಟಕ್ಕೆ ಬಂದಿದ್ದಾರೆ. ಆದರೂ ಸಾಕಾದಷ್ಟು ಪ್ರಗತಿಯಾಗಿಲ್ಲ. ದೇಶದಲ್ಲಿ ನಾನಾತರದ ಬೇನೆಯಿಂದ ಬಳಲುವವರು ಎಷ್ಟೋ ಜನರಿದ್ದಾರೆ. ಕುರು ಡರು ಕುಂಟರು ವಿಕಲಾಂಗರಾದ ವ್ಯಂಗರೂ ವಿಕಲಾಂಗರೂ ಹಲವರಿದ್ದಾರೆ. ಆದರೆ ನಿರಕ್ಷರಿಗಳಾಗಿ ಕುರುಡರೆನಿಸಿದವರ ಸಂಖ್ಯೆಯು ಮಾತ್ರ ಅತಿಶಯ ದೊಡ್ಡ ದಾಗಿದೆ. ನಿರಕ್ಷರತೆಯು ನಮ್ಮ ದೇಶದ ಪ್ರಬಲ ವೈರಿ. ಆ ವೈರಿಯು ಅಖಂಡ ಭಾರತ ದೇಶವನ್ನೆಲ್ಲ ವ್ಯಾಪಿಸಿದ್ದಾನೆ; ಬಹುಕಾಲದಿಂದಲೂ ಇಲ್ಲಿ ನೆಲೆಗೊಂಡು ನಿಂತಿದ್ದಾನೆ. ಮದ್ದುಗುಂಡು ತೋಪ್ಪುತುಬಾಕಿಗಳ ಸೈನಿಕರು ಈ ವೈರಿಗೆ ತಕ್ಕ ಪ್ರತೀಕಾರಮಾಡಲು ಸಾಧ್ಯವಿಲ್ಲ. ಪ್ರಾಥಮಿಕ ಶಾಲೆಗಳೂ ಶಿಕ್ಷಕರೂ ನಡೆಯಿ ಸುವ ಕಾರ್ಯವು, ಜಗತ್ತನ್ನು ವ್ಯಾಪಿಸಿದ ಕತ್ತಲೆಯನ್ನು ಬೆಳಗಿಸಲು ಯತ್ನಿಸುವ ಹರಳೆಣ್ಣೆಯ ಹಣತಿಯ ಕಾರ್ಯದಂತೆ, ಎಲ್ಲಿಯೋ ಒಂದು ಮೂಲೆಯಲ್ಲಿ ಸಾಗಿ ನಿರಕ್ಷರತಾ ವೈರಿಯನ್ನು ಎದುರಿಸಲು ತೀರ ಅಸಮರ್ಥವಾಗಿದೆ. ಬೇನೆಬೇಸರಿಕೆ-ಗಳೂ ಸಾಮಾಜಿಕ ರೂಢಿಗಳೂ ಮಾಡುವ ಅಹಿತದ ನೂರಾರು ಮಡಿ ಅಹಿತವನ್ನು ನಿರಕ್ಷರತೆಯೆಂಬ ವೈರಿಯು ಮಾಡಿ ನಮ್ಮ ದೇಶವನ್ನು ನಾಶಮಾಡುತ್ತಿದ್ದಾನೆಂಬ ದನ್ನು ನಾವು ಇಂದು ಅರಿತುಕೊಂಡಿದ್ದೇವೆ. ಆ ವೈರಿಯನ್ನು ಎದುರಿಸಲು ಪ್ರಬುದ್ಧರ ಶಿಕ್ಷಣವೇ ಉತ್ತಮಸಾಧನವೆಂಬದು ಕೂಡ ನಮಗೆ ಗೊತ್ತಾಗಿದೆ. ನಮ್ಮದೇಶಬಾಂಧವರೆಲ್ಲರೂ ಸಾಕ್ಷರಿಗಳಾದರೆ ನಾವು ದೊಡ್ಡದೊಂದು ಕುತ್ತ ದಿಂದ ಪಾರಾಯೆವೆನ್ನಲು ಏನೂ ಅಡ್ಡಿಯಿಲ್ಲ. ಆದಕ್ಕಾಗಿ ಸುಶಿಕ್ಷಿತನಾದ ಪ್ರತಿಯೊಬ್ಬನೂ ಯತ್ನಿಸಬೇಕು. ಶಿಕ್ಷಕರಷ್ಟೇ ಈ ಕಾರ್ಯಕ್ಕೆ ಹೊಣೆಗಾರರಲ್ಲ ವೆಂಬದನ್ನು ಸಮಾಜವು ಅರಿತಿರಬೇಕು. ಯಾವದೇ ಖಾತೆಯ ನೌಕರನಾಗಿರಲಿ, ಉದ್ಯೋಗಸ್ಥನಾಗಿರಲಿ, ಸುಶಿಕ್ಷಿತನಾದ ಪ್ರತಿ ವ್ಯಕ್ತಿಯು ತನ್ನ ಬಂಧು ಭಗಿನಿಯರನ್ನು ಸಾಕ್ಷರಿಗಳನ್ನಾಗಿ ಮಾಡುವಂಥ ಪವಿತ್ರಕರ್ತವ್ಯಕ್ಕೆ ತನ್ನಿಂದಾದಷ್ಟು ನೆರವಾಗಲೇಬೇಕು.

ಶಾಲೆಗಳಲ್ಲಿ ಶಿಕ್ಷಕರು ಮಾಡುವ ಯತ್ನದಿಂದ ಸಾಕ್ಷರಿಗಳ ಪ್ರಮಾಣವು ಒಂದು ವರ್ಷದಲ್ಲಿ ನೂರಕ್ಕೆ ಒಂದರಷ್ಟು ಮಾತ್ರ ಬೆಳೆಯುತ್ತಲಿದೆ. ಆವರು ಚಿಕ್ಕ

ಬಾಲಕರಿಗಷ್ಟೇ ಕಲಿಸುವರು. ಇಷ್ಟು ಮುಂದಗತಿಯಿಂದ ಸಾಗಿದರೆ ನಮ್ಮ ದೇಶವು ತೀರ ಕಡಿವೆಯೆಂದರೆ ಒಂದು ನೂರುವರ್ಷಗಳಿಗಿಂತ ಹೆಚ್ಚುಕಾಲ ಕತ್ತಲೆಯಲ್ಲಿ ಕಣ್ಣುಮುಚ್ಚಿ ಮುಂದಡಿಯಿಡುವ ಹೆಳವನ ಗತಿಯಿಂದ ಪ್ರಗತಿ ಹೊಂದಬೇಕಾದೀತು. ಇದರಿಂದ ನಮಗೆಂದೂ ಮುಕ್ತಿಯಿಲ್ಲ. ನಿರಕ್ಷರಿಯಾದ ಮನುಷ್ಯರು ಅಂಧರು; ಪಶುಸಮಾನರು. ಅವರನ್ನು ನೋಡಿ ಸುಶಿಕ್ಷಿತರು ಕನಿಕರ ಪಡಬೇಕು. ಎಲ್ಲರೂ ಒಮ್ಮನಸ್ಸಿನಿಂದ ಪ್ರಯತ್ನಮಾಡಬೇಕು. ಹೀಗಿದ್ದರೂ ಯಿಕ್ಕವರಿಗಿಂತಲೂ ಪ್ರಾಥಮಿಕ ಶಾಲಾ ಶಿಕ್ಷಕರೇ ಈ ಕೆಲಸಕ್ಕೆ ಯೋಗ್ಯರು. ಈಗಿರುವ ಶಿಕ್ಷಣಖಾತೆಯು ಸೂತ್ರ ಚಾಲಕರೇ ಪ್ರಬುದ್ಧರ ಶಿಕ್ಷಣಕಾರ್ಯವನ್ನೂ ಕೈಕೊಳ್ಳಬೇಕು. ಸರಕಾರವಾಗಲಿ, ಸ್ಥಾನಿಕ ಸಂಘಗಳಾಗಲಿ ತನ್ನ ಅಡಳಿತಕ್ಕೆ ಈ ಕಾರ್ಯವನ್ನು ಸೇರಿಸಿಕೊಳ್ಳಬೇಕು.

ಪ್ರಬುದ್ಧರ ವರ್ಗಕ್ಕೆ ಬರುವ ವಿದ್ಯಾರ್ಥಿಗಳು ಚಿಕ್ಕವರಲ್ಲ. ೧೪ ರಿಂದ ೪೦ ವರುಷಗಳ ವರೆಗೆ ಅವರ ವಯೋಮಾನವಿರುವದು. ಅವರಲ್ಲಿ ಹಲವರಿಗೆ ತಿನ್ನಲು ಕೂಳಿಲ್ಲ; ಹೊದ್ದುಕೊಳ್ಳಲು ಬಟ್ಟೆ-ಬರೆಗಳಿಲ್ಲ. ಕುಟುಂಬದ ದುಃಖದುರವಸ್ಥೆಗಳು ಅವರನ್ನು ಮನೆಯ ಕೆಡೆಗೆ ಸಳೆಯುತ್ತಿರುತ್ತವೆ. ಅವರು ಶಾಲೆಗೆ ಬರಲು ನಮ್ಮ ತಿಸುವದಿಲ್ಲ, ಒಂದರೂ ಮನಸ್ಸಿಲ್ಲ ಆ ಕಡೆಗೇ ಇರುವದರಿಂದ ಇಲ್ಲಿ ಆಸ್ಥೆಯಿಂದ ಕಲಿಯಲು ಹವಣಿಸುತ್ತಿರುವದಿಲ್ಲ. ಇಂಥವರೊಡನೆ ಕೂಡಿ ನಡೆದು ನೀವು ಕೆಲಸ ಮಾಡಬೇಕಾಗಿದೆ. ಇದು ತುಂಬ ತೊಂದರೆಯ ಕೆಲಸವೆಂಬದು ನನಗೆ ಗೊತ್ತುಂಟು. ಆದರೂ ಪ್ರಾಥಮಿಕ ಶಾಲಾಶಿಕ್ಷಕವೃಂದವು ಮನಸ್ಸುಮಾಡಿ ಯತ್ನಿಸಿದರೆ ಈ ಕಾರ್ಯವು ಸುಸೂತ್ರವಾಗಿ ಸಾಗುವದೆಂಬದರಲ್ಲಿ ಸಂದೇಹವಿಲ್ಲ.

ಶಿಕ್ಷಕರು ಈ ಕೆಲಸಕ್ಕೆ ಪ್ರತಿಫಲವನ್ನೇನು ಪಡೆಯುವರೆಂಬದೂ ಒಂದು ಪ್ರಶ್ನೆ. ಕೆಲಸಕ್ಕೆ ತಕ್ಕ ಪ್ರತಿಫಲವು ಬೇಕೆಂಬದು ಒಂದು ಸರಳ ಮಾತು. ಆದರೆ ಕೆಲಸದ ಬೆಲೆಯನ್ನು ಹಣದಿಂದ ಅಳತೆಮಾಡುವದು ಮಾತ್ರ ಎಲ್ಲ ಸಂದರ್ಭಗಳಲ್ಲಿ ಸರಿಹೊಂದಲಾರದು. ಒಬ್ಬ ತಜ್ಞನಾದ ಡಾಕ್ಟರನು ಕಣ್ಣಿಗೆ ಪರೆ ಮುಸುಕಿ ಅಂಧನಾದವನಿಗೆ ದೃಷ್ಟಿಯನ್ನು ಕೊಡುವದಕ್ಕಾಗಿ ಶಸ್ತ್ರಕ್ರಿಯೆ ಮಾಡುವನೆಂದು ತಿಳಿಯೋಣ. ಡಾಕ್ಟರನು ಆ ವಿಷಯದಲ್ಲಿ ತಜ್ಞನಾಗಿರುವದರಿಂದ ಅವನ ಶಸ್ತ್ರ-ಕ್ರಿಯೆಯು ಒಬ್ಬನ ಕಣ್ಣಿನ ವಿಷಯದಲ್ಲಿ ಹೆಚ್ಚಿನದು ಇನ್ನೊಬ್ಬನ ಕಣ್ಣಿನ ವಿಷಯದಲ್ಲಿ ಕಡಿಮೆತರದ್ದು ಎಂದು ಹೇಳಲಾದೀತೆ? ಆದರೂ ಆ ಡಾಕ್ಟರನು ಒಬ್ಬ ಶ್ರೀಮಂತನಾದ ಇನಾಮ್‌ದಾರನ ಕಣ್ಣಿಗೆ ಶಸ್ತ್ರಕ್ರಿಯೆ ಮಾಡಿದಾಗ ಪಡೆಯುವಷ್ಟೇ ಪ್ರತಿಫಲವನ್ನು ಒಬ್ಬ ಬಡ ರೈತನ ಕಣ್ಣನ್ನು ಸರಿಮಾಡಿದಾಗಲೂ ಪಡೆಯುವಾರನು; ಇಷ್ಟೇ ಅಲ್ಲ, ಒಬ್ಬ ಪರದೇಶಿ ಭಿಕ್ಷುಕನಿಗೆ ದೃಷ್ಟಿದಾನ

ಮಾಡುವದಕ್ಕಾಗಿ ಶಸ್ತ್ರಕ್ರಿಯೆ ನಡೆಯಿಸಿದಾಗ ಯಾವ ಪ್ರತಿಫಲವನ್ನೂ ಅಪೇಕ್ಷಿಸ ಲಾರನು; ಮೇಲಾಗಿ ಕೆಲ ದಿನಗಳ ವರೆಗೆ ಅವನಿಗೆ ಅವಶ್ಯಕವೆನಿಸುವ ಉಪಚಾರ ಗಳನ್ನು ನಡೆಯಿಸುವದಕ್ಕಾಗಿ ತನ್ನ ಕೈಯಿಂದಾದಷ್ಟು ಅಲ್ಪಸ್ವಲ್ಪ ವೆಚ್ಚವನ್ನು ಕೂಡ ಮಾಡಬಹುದು. ಪ್ರಬುದ್ಧರ ಶಿಕ್ಷಣಕಾರ್ಯದಲ್ಲಿ ತೊಡಗಿದ ಕೆಲಸ ಗಾರರೂ ಕೂಡ ಇದೇ ದೃಷ್ಟಿಯಿಂದ ತಮ್ಮ ಕೆಲಸಕ್ಕೆ ಪ್ರತಿಫಲವನ್ನು ಪಡೆಯ ಬಹುದು. ನಮ್ಮ ದೇಶವು ಬಡತನದ ಬೀಡು. ಹಳ್ಳಿಗಳಂತೂ ಆ ಬಡತನದ ಆಶ್ರಯಸ್ಥಾನವೇ ಸರಿ. ತನಗೇ ಇಲ್ಲದ ಪರದೇಶಿಯು ಪರರಿಗೇನು ಕೊಡಬಲ್ಲನು? ಸರಕಾರದಿಂದ ದೊರೆಯಬಹುದಾದ ಸಹಾಯದ್ರವ್ಯದ ಮಾತೂ ಅಷ್ಟಕ್ಕಷ್ಟೇ. ನಿಮ್ಮ ಶ್ರಮದ ಮಾನದಿಂದ ಒಬ್ಬ ಸಾಕ್ಷರಿಯಾದವನ ಬಗ್ಗೆ ನಿಮಗೆ ದೊರೆಯುವ ೩ ಅಥವಾ ೪ ರೂಪಾಯಿಗಳು ಏನೂ ಅಲ್ಲ. ಅನಾಥ ಬಿಕ್ಷುಕನಿಗೆ ದೃಷ್ಟಿದಾನ ಮಾಡಿದ ಡಾಕ್ಟರನು ಅವನಿಂದ ಪಡೆಯುವ ಕೃತಜ್ಞತೆ, ತಾನು ಒಂದು ಸತ್ಕಾರ್ಯ ಮಾಡಿದೆನೆಂಬ ಮನಸ್ಸಿನ ಆನಂದ, ಇಷ್ಟರಿಂದಲೇ ತೃಪ್ತಪಡುವಂತೆ ನಿರಕ್ಷರಿಗಳಾದ ನಮ್ಮ ದೇಶಬಾಂಧವರನ್ನು ಸಾಕ್ಷರಿಗಳಾಗಿ ಮಾಡುವ ಪವಿತ್ರಕಾರ್ಯದಲ್ಲಿ ತೊಡಗಿರುವೆನೆಂಬ ಮನಸ್ಸಿನ ತೃಪ್ತಿ, ಆ ಸಾಕ್ಷರಿಗಳಾದವರು ನಿಮಗೆ ತೋರಿಸುವ ಕೃತಜ್ಞತೆ, ಇದರ, ಇವುಗಳಿಂದಲೆ ನೀವು ಸಮಾಧಾನಹೊಂದಬೇಕು.

ಇನ್ನೂ ಒಂದು ಉದಾಹರಣೆ; ನೋಡಿರಿ. ಕೂಲಿಯ ಆಳಿನ ಕೆಲಸವನ್ನು ಅಳೆದು ನೋಡಿ ಅವನಿಗೆ ಕೂಲಿಯನ್ನು ಕೊಡುವರು. ಗಿರಣಿಯ ಕೂಲಿಯವನು ೨೦ ವಾರು ಅರಿವೆಯನ್ನು ನೆಯ್ದರೆ ೫ ಆಣೆ ದೊರೆಯಬಹುದು. ಆದರೆ ನಿರಕ್ಷರಿ ಗಳನ್ನು ಸಾಕ್ಷರಿಗಳಾಗಿ ಮಾಡಿದ ಪುಣ್ಯತಮವಾದ ಕಾರ್ಯದ ಬೆಲೆಯನ್ನು ಕಟ್ಟುವ ಬಗೆ ಹೇಗೆ? ಹಳ್ಳಿಹಳ್ಳಿಗಳಲ್ಲಿ ಸೆಲಸಿ ಪವಿತ್ರವಾದ ಶಿಕ್ಷಣಕಾರ್ಯ ವನ್ನು ನಡೆಯಿಸಿರುವ ಅಲ್ಪತುಷ್ಟಿಯ ಪ್ರಾಥಮಿಕ ಶಿಕ್ಷಕರೇ ಪ್ರಬುದ್ಧರ ಶಿಕ್ಷಣದ ಪುಣ್ಯಕಾರ್ಯವನ್ನು, ದೇಶೋದ್ಧಾರದ ಪವಿತ್ರಕಾರ್ಯವನ್ನು, ಮಾಡಲು ಸರ್ವವಿಧದಿಂದಲೂ ಸಮರ್ಥರೆಂದೂ ಅವರೇ ಈ ವಿಷಯದಲ್ಲಿ ದೇಶದ ಉದ್ಧಾರಕರೆಂದೂ ನಾನು ಪುನಃಪುನಃ ಹೇಳುತ್ತ ಬಂದಿರುವೆನು.

ಹಳ್ಳಿಯ ವಾತಾವರಣವು ಈ ವಿಷಯಕ್ಕೆ ಅನುಕೂಲವಾಗಿಲ್ಲವೆಂಬದನ್ನು ಇನ್ನೊಮ್ಮೆ ಹೇಳುವೆನು. ಸಾರ್ವತ್ರಿಕ ಶಿಕ್ಷಣದ ಕಾಯದೆಯ ವ್ಯಾಪ್ತಿಯು ಈಗಿನಂತೆ ೬ ವರ್ಷಗಳಿಂದ ೧೧ ವರ್ಷಗಳ ವರೆಗಿನ ಚಿಕ್ಕ ಮಕ್ಕಳಿಗಷ್ಟೇ ಆಗದೆ ಪ್ರಬುದ್ಧ ಸ್ತ್ರೀಪುರುಷರಿಗೂ ಆಗಿ ಒತ್ತಾಯದ ಶಿಕ್ಷಣವು ಪ್ರಚಾರದಲ್ಲಿ ಒರುವಂತಿ ದ್ದರೆ ಅದು ಬಹಳ ಒಳ್ಳೆಯ ಸಾಧನವಾಗಿ ನಿರಕ್ಷರತೆಯೆಂಬ ಮೈರಿ ರಾಕ್ಷಸ ನನ್ನು ನಾವು ಅಲ್ಪಕಾಲದಲ್ಲಿ ಹಣಿದುಹಾಕಬಹುದಾಗಿತ್ತು. ಆದರೆ ಅಂಥ

ಕಾಯಿದೆಯ ಪ್ರಚಾರಕ್ಕೆ ಕಾಲವು ಅನುಕೂಲವಾಗಿಲ್ಲ. ಆದುದರಿಂದ ಶಿಕ್ಷಣ ಕಾರ್ಯವನ್ನು ಒಪ್ಪಿಕೊಂಡ ನಾವೇ ಆ ಕಾರ್ಯವನ್ನು ಬಹುವಿಧದ ತೊಡಕು ತೊಂದರೆಗಳನ್ನು ಎದುರಿಸಿ ಸಾಗಿಸಬೇಕಾಗಿದೆ.

ಪ್ರಬುದ್ಧರನ್ನು ಶಾಲೆಗೆ ತರುವದು ಮೊದಲನೆಯ ಕೆಲಸ. ಇದಕ್ಕಾಗಿ ನೀವು ಹಲವು ಹಂಚಿಕೆಗಳನ್ನು ಮಾಡಬೇಕಾಗುವದು. ಭಜನ, ಕೀರ್ತನ, ಪುರಾಣ, ಆಟ-ನೋಟಗಳು ಇಂಥ ಸಾರ್ವಜನಿಕ ಸಾಮೂಹಿಕ ಕಾರ್ಯಕಲಾಪಗಳ ಮೂಲಕವಾಗಿ ಅವರನ್ನು ಮೊದಲು ಆಕರ್ಷಿಸಿಕೊಳ್ಳಬೇಕು.

ಸಾಲೆಗೆ ಬಂದವರೂ ಕೂಡ ಮರುದಿನವೇ ತಮ್ಮ ಕೆಲಸದ ಪ್ರತಿಫಲವೇನೆಂಬುದನ್ನು ನೋಡಿಕೊಳ್ಳುವಷ್ಟು ಆತುರರಾಗಿರುವರು. ಅವರ ಜೀವನವು ಅಷ್ಟು ತಾಪತ್ರಯದಿಂದ ತುಂಬಿಹೋಗಿದೆ. ಅವರಿಗೆ ಅವಕಾಶವಿಲ್ಲ. ಹೊಲಮನೆಯ ಕೆಲಸಗಳು, ಮಕ್ಕಳುಮರಿಗಳ ಆರೋಗ್ಯ, ಮುಂತಾದ ವ್ಯಾಪಗಳು ಅವರನ್ನು ಅತ್ತ ಸೆಳೆಯುತ್ತಿವೆ. ಪ್ರಬುದ್ಧರ ವರ್ಗಗಳನ್ನು ಆರುತಿಂಗಳು ಸಾಗಿಸಿ, ಅಷ್ಟು ಅವಧಿಯಲ್ಲಿ ಅವರನ್ನು ಸಾಕ್ಷರಿಗಳಾಗಿ ಮಾಡಿದರೆ ತೀರಿತೆಂದು ಲೆಕ್ಕಹಾಕಿದರೆ ನಿಮ್ಮ ಗಣಿತದ ಉತ್ತರವು '೦' ಯಾಗುವದು.

ಪ್ರಬುದ್ಧರು ಚಿಕ್ಕಮಕ್ಕಳ ಹಾಗೆ ಬಂದೇದಿಶೆಯಲ್ಲಿ ಕೆಲಸಮಾಡಲು ತಕ್ಕ ಶಾರೀರಿಕ ಮಾನಸಿಕ ಅವಸ್ಥೆಗಳುಳ್ಳವರಿರುವದಿಲ್ಲ. ಹಗಲೆಲ್ಲ ದುಡಿದು ಹಣ್ಣಾಗಿ ಮನೆಗೆ ಬಂದು ಅಲ್ಲಿಯ ತಾಪತ್ರಯಗಳಿಂದ ಸುಟ್ಟುಸುಣ್ಣವಾಗಿ ಅರೆಹೊಟ್ಟೆಯುಂಡು ಹರಕುಬಟ್ಟೆಯನ್ನು ಹೊತ್ತು ನಿಮ್ಮ ಕುರುಡು ದೀಪದ ರಾತ್ರಿಯು ಶಾಲೆಗೆ ಬರುವ ರೈತನ ಸ್ಥಿತಿಯನ್ನು ನೆನೆಸಿಕೊಂಡರೆ ಮಾನಸಶಾಸ್ತ್ರ ಶರೀರಶಾಸ್ತ್ರ ಶಿಕ್ಷಣಶಾಸ್ತ್ರಗಳ ಪಂಡಿತರ ಕೈಕಾಲೇ ಕಳಚಿಬೀಳಬಹುದು. ನೀವು ಅಲ್ಪ ಸಂತೋಷಿಗಳಾದ ಕೆಚ್ಚೆದೆಯ ಕಾರ್ಯತತ್ಪರರಾದ ಪ್ರಾಥಮಿಕ ಶಿಕ್ಷಕರಾದುದರಿಂದಲೇ ನಿಮ್ಮಿಂದ ಈ ಕಾರ್ಯವು ಸಾಧ್ಯವಾಗಬೇಕು. ಹೆಚ್ಚಿಗಿನ್ನೇನು ಹೇಳಬೇಕು? ನೀವು ಈ ಪವಿತ್ರಕಾರ್ಯವನ್ನು ಒಪ್ಪಿಕೊಂಡು ಕೆಲಕಾಲ ಕೆಲಸ ಮಾಡಿ ಅನುಭವ ಪಡೆದು ಹೆಚ್ಚಿನ ಜ್ಞಾನವನ್ನು ಪಡೆಯುವದಕ್ಕೆ ಉತ್ಸಾಹಿತರಾಗಿ ಬಂದಿದ್ದೀರಿ. ನಿಮಗಿರುವ ಅಡೆತಡೆಗಳನ್ನು ದೂರಮಾಡಲು, ತಕ್ಕ ಹಂಚಿಕೆಗಳನ್ನು ಸೂಚಿಸಲು, ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರು ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು ಮೊದಲಾದ ಅನುಭವಿಕರಾದ ಹಿರಿಯರು ಆತುರರಾಗಿ ನಿಂತಿದ್ದಾರೆ. ನಿಮ್ಮ ಕಾರ್ಯವು ಸಾಗಲಿ. ಕೊನೆಯದಿನ ಮತ್ತೊಮ್ಮೆ ಅನುವು ಸಿಕ್ಕರೆ ಇಲ್ಲಿಗೆ ಬಂದು ನಿಮ್ಮ ಕಾರ್ಯಕಲಾಪಗಳನ್ನು ನೋಡಿ ಸಂತೋಷಪಡಲು ಬಯಸುವೆನು– .....ಇತ್ಯಾದಿ.

ಶ್ರೀಮಾನ್ ಕಾವಡೆ ಸಾಹೇಬರ
ಉಪಸಂಹಾರ ಭಾಷಣದ ಮುಖ್ಯಾಂಶಗಳು

ದ್ಗೃಹಸ್ಥರೇ, ಸ್ನೇಹಿತರೇ, ಶಿಕ್ಷಕ ಬಂಧುಗಳೇ,

ಎರಡು ವಾರಗಳ ಹಿಂದೆ ನೀವು ಇಲ್ಲಿಗೆ ಬಂದ ದಿನದ ಚಹರೆಗಿಂತಲೂ ನಿಮ್ಮ ಂದಿನ ಚಹರೆಯು ಹೆಚ್ಚು ಉತ್ಸಾಹಜನಕವಾಗಿದೆ. ಈ ಅವಧಿಯಲ್ಲಿ ನೀವು ಲವು ಸಂಗತಿಗಳನ್ನು ಕೇಳಿ ತಿಳಿದುಕೊಂಡಿರುವಿರಿ. ನಿಮ್ಮ ಹಳೆಯ ಅನುಭವಕ್ಕೆ ನ್ನನೇಕ ವಿಶೇಷಜ್ಞಾನದ ಹೊಸ ಅನುಭವವನ್ನು ಜೋಡಿಸಿಕೊಂಡು ಮುಂದಿನ ಕಾರ್ಯಕ್ಕೆ ತಕ್ಕ ಜ್ಞಾನ ಅನುಭವ ಸ್ಫೂರ್ತಿಗಳನ್ನು ಪಡೆದಿರುವಿರಿ. ನೀವು ರೆದುಕೊಂಡ ಟಿಪ್ಪಣಿಗಳನ್ನೂ ನೀವು ತಯಾರಿಸಿಕೊಂಡ ಚಿತ್ರ-ಸಟ-ಉಪಕರಣ ಳನ್ನೂ ನೋಡಿದೆನು. ಇದರಿಂದ ಇಲ್ಲಿಯ ಕಾರ್ಯಕರ್ತರ ಎರಡು ವಾರಗಳ ರಿಶ್ರಮವು ಸಾರ್ಥಕವಾಯಿತೆಂದೂ ನಿಮ್ಮ ವರ್ಗವು ತುಂಬ ಯಶಸ್ವಿಯಾಗಿ ೂನೆಗಂಡಿತೆಂದೂ ನನ್ನ ಮನವರಿಕೆಯಾಯಿತು.

ಇಷ್ಟರಿಂದಲೆ ನಾವಾಗಲಿ ನೀವಾಗಲಿ ತೃಪ್ತಿಹೊಂದುವಂತಿಲ್ಲ. ನಿಮ್ಮ ಜವಾದ ಕೆಲಸವು ಇಂದು ಮುಗಿಯಲಿಲ್ಲ—ಪ್ರಾರಂಭವಾಯಿತು. ಇಲ್ಲಿ ನೀವು ಳಿಸಿದ ಗಳಿಕೆಯ ಸದ್ವಿನಿಯೋಗವಾಹುವ ಕಾಲವು ಮುಂದಿದೆ. ನಿಮ್ಮ ದ್ಯಾರ್ಥಿಗಳು ನಾಲ್ಕೂ ಜಿಲ್ಲೆಗಳೊಳಗಿನ ಚಿಕ್ಕ ದೊಡ್ಡ ಹಳ್ಳಿಗಳಲ್ಲಿ ನೀವೇನು ರುವಿರೋ ಎಂದು ಎದುರು ನೋಡುತ್ತಲಿದ್ದಾರೆ.

ಪ್ರಬುದ್ಧರ ಶಿಕ್ಷಣದ ವರ್ಗವನ್ನು ಸಾಗಿಸುವದು ತುಂಬ ಕಠಿಣವಾದ ಲಸವೆಂಬದನ್ನು ಮರೆಯಬೇಡಿರಿ. ಇನೇನು? ಓದು-ಬರೆಹಗಳನ್ನು ಕಲಿಸುವದು; ನಿಷ್ಟರ ಕಾರ್ಯ? ಎಂದು ದುಡುಕಬೇಡಿರಿ. ಸಾವಧಾನ! ದುಡುಕುವವರು ಡವಿ ಬೀಳುವದು ನಿಶ್ಚಯ. ನಿಮ್ಮ ಕೆಲಸವು ಕೇವಲ ನಿಮ್ಮ ಉತ್ಸಾಹ ರಿಶ್ರಮ ಜಾಣ್ಮೆ ಇವುಗಳ ಮೇಲೆಯೇ ಅವಲಂಬಿಸಿಲ್ಲ. ನಿಮ್ಮ ಬುತ್ತಿಯ ಂಟನ್ನು ಕ್ಷಣಮಾತ್ರದಲ್ಲಿ ಅರಗಿಸಿ ಬಿಡುವಷ್ಟು ನಿರುತ್ಸಾಹಕಾರಿಯಾಗಿದೆ. ಮ್ಮ ಹಳ್ಳಿಗಳ ಸ್ಥಿತಿ; ಹಳ್ಳಿಗರ ಜೀವನ. ಇಷ್ಟು ಪೂರ್ವಪೀಠಿಕೆಯನ್ನು ಅರಿತು ೊಂಡೇ ನೀವು ಇಲ್ಲಿಂದ ಹೊರಡಬೇಕು.

ನಿಮ್ಮ ವರ್ಗಗಳನ್ನು ನಡೆಯಿಸುವ ಸಂಬಂಧದ ಮಾಹಿತಿಯನ್ನು ನಿಮಗೆ ಂಪೂರ್ಣವಾಗಿ ಕೊಟ್ಟಿರುವೆವೆಂದು ಇಲ್ಲಿಯ ಕೆಲಸಗಾರರು ಭಾವಿಸಿಲ್ಲ; ನಾನೂ ಸಿಲ್ಲ. ನಿಮ್ಮ ನಿಮ್ಮ ಪರಿಸ್ಥಿತಿಗನುಗುಣವಾದ ಸಾಧನ ಸಾಮಗ್ರಿಗಳನ್ನೆಲ್ಲ ೀವೇ ತಯಾರಿಸಿಕೊಳ್ಳಬೇಕು. ಅದಕ್ಕೆ ಹೊಂದಿಕೆಯಾಗುವ ಬದಲಾವಣೆಗಳನ್ನು ಮ್ಮಲ್ಲಿ ನೀವೇ ಮಾಡಿಕೊಳ್ಳಬೇಕು. ನಾನು ಈಗ ಹೇಳುವ ಮಾತುಗಳನ್ನೆಲ್ಲ

ನೀವು ತಿಳಿದೇ ಇದ್ದರೂ, ನಿಮ್ಮ ಶಿಕ್ಷಕರು ನಿಮಗೆ ಇವನ್ನೆಲ್ಲ ವಿವರಿಸಿ ಹೇಳಿದ್ದರೂ, ನನ್ನ ಕರ್ತವ್ಯ ಪಾಲನೆಯ ದೃಷ್ಟಿಯಿಂದ ನಾನು ಮತ್ತೊಮ್ಮೆ ಹೇಳಬೇಕಾಗಿದೆ.

೧. ಪ್ರಬುದ್ಧರಿಗೆ ನಿಮ್ಮ ಶಾಲೆಯು ಆಕರ್ಷಕವಾಗಿರಲಿ; ಅವರನ್ನು ಎಂದೂ ಯಾವ ಕಾರಣದಿಂದಲೂ ನಿರುತ್ಸಾಹಗೊಳಿಸಬೇಡಿರಿ.

೨. ಅವರಿಗೆ ಮೊದಲು ಓದು ಕಲಿಸಿರಿ. ಓದುವದನ್ನು ಕಲಿತ ತರುವಾಯವೇ ಬರೆಹಕ್ಕೆ ಪ್ರಾರಂಭಿಸಿರಿ. ಮೊದಲೇ ಪಾಟಿ ಪೆನ್ಸಿಲು ಬೇಡ. ಮೈಲಿ ಚುಚ್ಚುವ ಡಾಕ್ಟರನ ಪೆಟ್ಟಿಗೆಯು ಚಿಕ್ಕಮಕ್ಕಳನ್ನು ಅಂಜಿಸಿ ಓಡಿಸುವಂತೆ ಅವು ಪ್ರಬುದ್ಧರನ್ನು ಬೆದರಿಸುವವು; ಬೇಸರಗೊಳಿಸುವವು.

೩. ಅಕ್ಷರಪದ್ಧತಿಯಿಂದ ಕಲಿಸಲು ಹವಣಿಸದೆ ಅರ್ಥವುಳ್ಳವೂ ಅವರ ಪರಿಚಯದವೂ ಆದ ಪದ ವಾಕ್ಯ ಇವುಗಳಿಂದಲೇ ವಾಚನಪಾಠವನ್ನು ಪ್ರಾರಂಭಿಸಿರಿ.

೪. ಕರಿಯ ಹಲಗೆಯನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಿರಿ. ಓದುವ ಪಾಠಗಳನ್ನು ಬರೆಯಲಿಕ್ಕೂ ಚಿತ್ರ ತೆಗೆಯಲಿಕ್ಕೂ ಇದನ್ನು ಉಪಯೋಗಿಸಿದಷ್ಟೂ ನಿಮ್ಮ ಕಾರ್ಯವು ಸುಲಭವಾಗುವದು.

೫. ನಿಮ್ಮ ಶಾಲೆಯಲ್ಲಿ ಚಿಕ್ಕಮಕ್ಕಳ ಶಾಲೆಯಂತೆ ಓದು ಬರೆಹಗಳಷ್ಟೇ ಸಾಗಿದರೆ ಸಾಲದು. ದಣಿದು ಬಂದ ಶರೀರಕ್ಕೂ ಪ್ರಪಂಚದ ತಾಪತ್ರಯಗಳಿಂದ ನೊಂದು ಬಂದ ಮನಸ್ಸಿಗೂ ಅಲ್ಲಿ ವಿಶ್ರಾಂತಿ ದೊರೆಯಬೇಕು. ಆಟ, ನೋಟ, ಹಾಡು, ಭಜನೆ, ಕೀರ್ತನೆ, ಪುರಾಣಗಳು ಮುಂತಾದ ಹಲವು ಚಟುವಟಿಕೆಗಳು ಅಲ್ಲಿ ಸಾಗಬೇಕು. ಇವು ಅನ್ನ ರೊಟ್ಟಿಗಳೆಂದು ತಿಳಿದರೆ ಓದು ಬರೆಹಗಳು ಚಟ್ನಿ ಉಪ್ಪಿನಕಾಯಿಗಳಂತೆ ಭಾವಿಸಲು ಅಡ್ಡಿಯಿಲ್ಲ.

೬. ಪ್ರಬುದ್ಧರನ್ನು ಹೆಚ್ಚು ಕಾಲಾವಧಿಯವರೆಗೆ ಶಾಲೆಯಲ್ಲಿ ಜಟ್ಟು ಕೊಳ್ಳುವೆನೆಂಬ ಭರವಸೆ ಬೇಡ. ಆದಷ್ಟು ಬೇಗ ನಿಮ್ಮ ಸಾಕ್ಷರತೆಯ ಕಾರ್ಯವು ಮುಗಿದುಹೋಗಬೇಕು; ಮುಂದೆ ಸಾಗುತ್ತಿರಬೇಕು.

ಒಟ್ಟಿನಮೇಲೆ ನೀವು ಕೈಕೊಳ್ಳಲಿರುವ ಪವಿತ್ರಕಾರ್ಯವನ್ನು ಸ್ಮರಿಸಿ ಕೊಂಡು ಇಲ್ಲಿ ಪಡೆದ ಜ್ಞಾನಾನುಭವಗಳನ್ನು ಚೆನ್ನಾಗಿ ಉಪಯೋಗಿಸಿಕೊಂಡು ನೀವೆಲ್ಲರೂ ನಿಮ್ಮ ಕಾರ್ಯದಲ್ಲಿ ಯಶಸ್ವಿಗಳಾಗಿರೆಂದು ಹಾರೈಸಿ ನನ್ನ ಮಾತು ಮುಗಿಸುವೆನು. ದೇವರಲ್ಲಿ ವಿಶ್ವಾಸವಿಡಿರಿ. ನಿಮಗೆ ನಿಮ್ಮ ಈ ಕಾರ್ಯದಲ್ಲಿ ಯಾವ ವಿಘ್ನವುಂಟಾದರೂ ಅತನು ನಿಮ್ಮ ಬೆಂಬಲಕ್ಕಿರುವನೆಂಬ ಭರವಸೆಯಿರಲಿ. ಸತ್ಕಾರ್ಯಕ್ಕೆ ಸಹಾಯಮಾಡುವದು ಭಗವಂತನ ದೊಡ್ಡ ಗುಣ. ಆ ಭಗವಂತನು ನಿಮಗೆ ನೆರವಾಗಲಿ.

ಹಿಟ್ಲರನ ಅಸತ್ಯಪ್ರಚಾರ

(ವೈಕಾವುಂಟ್ 'ಮಾಫ್ಯವ್' ಇವರ ಪುಸ್ತಕಗಳ ಆಧಾರದಿಂದ ಬರೆದದ್ದು)

ಹಿಟ್ಲರನಿಗೆ ತನ್ನ ಉದ್ದೇಶವನ್ನು ಸಾಧಿಸುವದಕ್ಕಾಗಿ ಅಸತ್ಯಪ್ರಚಾರ ಮಾಡುವುದೊಂದು ಬಲವಾದ ಸಾಧನವಾಗಿರುತ್ತದೆ. ಇಂತಹ ಪ್ರಚಾರ ಕಾರ್ಯದಿಂದ ಸಾಮಾನ್ಯ ಜನತೆಯು ತನ್ನ ಕಡೆಗೆ ಒಲಿಯುವದೆಂದು ಅತನ ಭಾವನೆಯಿರುವದು. ಈತನ ಚರಿತ್ರೆಯು ಅಸತ್ಯಪ್ರಚಾರಗಳಿಂದ ತುಂಬಿಹೋಗಿದೆ. ಇವನು ಸನ್ ೧೯೩೩ ರಲ್ಲಿ ಮಾಡಿದ ಒಂದು ಭಾಷಣದಲ್ಲಿ—"ನಮ್ಮ ನೆರೆಹೊರೆಯವರ ಸಂಗಡ ಗೆಳೆತನದಿಂದಲೂ ಶಾಂತತೆಯಿಂದಲೂ ನಡೆದುಕೊಳ್ಳಬೇಕೆಂದು ನಮಗೆ ಬಲವತ್ತರವಾದ ಇಚ್ಛೆಯಿದೆ. ಆದುದರಿಂದ ನಾವು ನಮ್ಮ ದೇಶದಲ್ಲಿ ಹೋಫು, ಬಾಂಬುಹಾಕುವ ವಿಮಾನ, ವಿಷವಾಯು, ಮೊದಲಾದ ಯಾವದೇ ಪ್ರಕಾರದ ಯುದ್ಧಸಾಮಗ್ರಿಗಳನ್ನು ಇಟ್ಟುಕೊಂಡಿಲ್ಲ." ಈಗ ಈ ಸಂಗತಿಗಳು ಹೇರ ಅಸತ್ಯವೆಂಬದನ್ನು ಇಡಿಯ ಯುರೋಪಖಂಡವು ಮನಗಂಡಿರುವದು. ಒಳಗೆ ಎತ್ತರದಿಂದ ಯುದ್ಧಸಾಹಿತ್ಯಗಳನ್ನು ಸಿದ್ಧಮಾಡುತ್ತಲಿರುವಾಗಲೇ ಹೊರಗೆ ಹೇಡುವ ಮಾತುಗಳಲ್ಲಿ ಇಂಥ ಅಸತ್ಯವು ತುಂಬಿಹೋಗಿತ್ತು. ೧೯೩೬ ರ ವರೆಗೆ ಹಿಟ್ಲರನು ಮಾಡಿದ ಕೆಲವು ಭಾಷಣಗಳ ಸಾರಾಂಶವನ್ನು ಅತನ ಶಬ್ದಗಳಲ್ಲಿಯೇ ಕೆಳಗಿನಂತೆ ಹೇಳಬಹುದು.

"ಜಗತ್ತಿನಲ್ಲಿ ಶಾಂತತೆಯಿರುವದೇ ನಮಗೆ ಬೇಕಾಗಿದೆ. ಈ ಧೋರಣೆಯನ್ನು ಅನುಸರಿಸಿ ನಾವು ಪೋಲಂಡದವರ ಸಂಗಡ ಅನಾಕ್ರಮಣದ ಒಪ್ಪಂದವನ್ನು ಮಾಡಿಕೊಂಡೆವು. ಸಾರಪ್ರಾಂತವು ನಮಗೆ ದೊರಕಿದ ಮೇಲೆ ಫ್ರಾನ್ಸ್‌ದವರ ಸಂಗಡ ನಮಗೆ ವೈಮನಸ್ಯವುಳಿಯಲು ಕಾರಣವಿಲ್ಲ. ಆಸ್ಟ್ರಿಯಾದ ಆಂತರ್ಗತ ಅಡಳತೆಯಲ್ಲಿ ಹೆಚ್ಚು ಕಡಿಮೆಮಾಡುವ ಇಚ್ಛೆಯು ನಮಗೆ ಸ್ವಲ್ಪವೂ ಇಲ್ಲ. ರಶಿಯಾದ ಬೋಲ್ಶೇವಿಜ್ಮವು ಮಾತ್ರ ನಮಗೆ ಬೇಡಾಗಿದೆ. ರಶಿಯನ್ ಸರ್ವಾಧಿಕಾರಿಗಳು ಕ್ರಾಂತಿಕಾರಕರಿರುವದರಿಂದ ಅವರಿಗೂ ನಮಗೂ ಕೂಡಿ ಹೊಡೆಯುವಂತಿಲ್ಲ." ಇತ್ಯಾದಿ. ಹಿಟ್ಲರನ ಮುಂದಿನ ಕೃತ್ಯಗಳೇ ಅತನ ಮಾತುಗಳಲ್ಲಿಯ ಅಸತ್ಯತೆಯನ್ನು ಜಗತ್ತಿಗೆ ತೋರಿಸುವವು.

ಆಸ್ಟ್ರಿಯಾ:—ಹಿಟ್ಲರನು ಮೊಟ್ಟಮೊದಲು ಆಸ್ಟ್ರಿಯಾವನ್ನು ಒಲಿಯಾಗಿ ಹಿಡಿದುಕೊಂಡನು. ಆಸ್ಟ್ರಿಯಾದ ಸಂಗಡ ಗೆಳೆತನದ ಒಪ್ಪಂದಮಾಡಿಕೊಂಡ

ಮೇಲೆ ಕೇವಲ ೧೯ ದಿವಸಗಳೊಳಗಾಗಿ ಜರ್ಮನ್ ಸೈನ್ಯವು ಆಸ್ಟ್ರಿಯಾವನ್ನು ಪೂರ್ಣವಾಗಿ ವ್ಯಾಪಿಸಿಕೊಂಡಿತು. ಇದಕ್ಕೊಂದು ಕುಂಟು ನೆವವನ್ನು ಅವರು ತೋರಿಸುವರು. ಅದೇನೆಂದರೆ—"ಆಸ್ಟ್ರಿಯಾದ ಚಾನ್ಸಲರರು ವೈಯಕ್ತಿಕ ಮತ್ತು ದಾನದ ಅಪ್ಪಣೆಯನ್ನು ಕೊಟ್ಟು ದೇಶದಲ್ಲಿಯ ಬಹುಮತವನ್ನು ದಬ್ಬುವ ಪ್ರಯತ್ನ ಮಾಡಿದರು"

ಝೆಕೋಸ್ಲಾವ್ಹಾಕಿಯಾ :— ಆಸ್ಟ್ರಿಯಾದ ನಂತರ ಝೆಕೋಸ್ಲಾವ್ಹಾಕಿಯಾದ ಕಡೆಗೆ ಹಿಟ್ಲರನ ವಕ್ರದೃಷ್ಟಿಯು ಹೊರಳಿತು. ಅವನು ಸುಡೇಟಾನ್-ಲ್ಯಾಂಡ ಎಂಬ ಭಾಗದಲ್ಲಿರುವ ೩೫ ಲಕ್ಷ ಜರ್ಮನ್ನರನ್ನು ಝೆಕರು ಪರಿಪರಿಯಿಂದ ಕಾಡುತ್ತಲಿರುವರೆಂಬ ನಿಮಿತ್ತವನ್ನು ಮೊದಲು ಮುಂದೆ ಮಾಡಿ ಸುಡೇಟಾನ್ ಭಾಗವು ಜರ್ಮನಿಗೆ ದೊರಕಿದರೆ ಸಾಕು; ಝೆಕ ಜನರು ಸ್ವತಂತ್ರವಾಗಿ ಬಾಳಲಿ ಎಂದು ಹೇಳುತ್ತ ಮುಂದೆ ೧೯೩೯ ರಲ್ಲಿ ಝೆಕೋಸ್ಲಾವ್ಹಾಕಿಯಾವನ್ನೆಲ್ಲ ನುಂಗಿ ಬಿಟ್ಟುದನ್ನು ಎಲ್ಲರೂ ತಿಳಿದಿರುವರು.

ಪೋಲಂಡ :— 'ಕೆಲಾಗ್' ಕರಾರಿನಲ್ಲಿ ಹೇಳಿದಂತೆ ಜರ್ಮನಿ ಮತ್ತು ಪೋಲಂಡ ದೇಶಗಳು ತಮ್ಮತಮ್ಮ ಧೋರಣೆಯನ್ನು ಅನುಸರಿಸಿ ನಡೆಯಬೇಕೆಂದು ಇವೆರಡೂ ದೇಶಗಳಲ್ಲಿ ೧೯೩೪ ರಲ್ಲಿ ಒಪ್ಪಂದವಾಯಿತು. ಆಗ ಹಿಟ್ಲರನು ಮಾಡಿದ ಭಾಷಣದಲ್ಲಿ—"ಪೋಲಂಡದವರ ಸಂಗಡ ಸ್ಥಿರವಾದ ಸ್ನೇಹದಿಂದ ನಡೆಯಲಿಚ್ಛಿಸುವೆವು. ಪೋಲಂಡದ ವಿಷಯವಾಗಿ ಜರ್ಮನಿಗೆ ಬಹಳೇ ಆದರವುಂಟು." ಇತ್ಯಾದಿ ಹೇಳಿದನು. ಸುಡೇಟಾನ-ಜರ್ಮನಿಯ ತೊಡಕಿನ ಪ್ರಶ್ನೆಯನ್ನು ಬಿಡಿಸಿದ ನಂತರ ಯುರೋಪದೊಳಗಿನ ಯಾವ ಪ್ರಾಂತವನ್ನೂ ಆಕ್ರಮಿಸುವ ಇಚ್ಛೆಯು ಜರ್ಮನಿಗೆ ಇಲ್ಲವೆಂದು, ಇಂಗ್ಲಂಡದ ಮುಖ್ಯ ಮಂತ್ರಿಗಳಾದ ಚೆಂಬರ್ಲಿನರು ಸಹ ಆಗ ಖಾಸಗೀ ರೀತಿಯಲ್ಲಿ ಹೇಳಿದರು. ಆದರೇನು? ಮುಂದೆ ಒಂದೇ ಒಂದು ವರ್ಷದೊಳಗಾಗಿ ಅಂದರೆ ೧೯೩೯ ನೆಯ ಸಪ್ಟಂಬರದಲ್ಲಿ ಜರ್ಮನ್ ಸೈನ್ಯವು ಒಮ್ಮಿಂದೊಮ್ಮೆ ಪೋಲಂಡದ ಮೇಲೆ ಏರಿ ಹೋಯಿತು. ಪೋಲಂಡವನ್ನು ರಶಿಯಾ-ಜರ್ಮನಿಗಳು ಹರಿದು ಹಂಚಿಕೊಂಡವು. ಹುಟ್ಟು ಹಗೆಗಳಾಗಿದ್ದ ರಶಿಯಾ-ಜರ್ಮನಿಗಳಲ್ಲಿ ಆಗ ಗೆಳೆತನವಾಯಿತು. ಆದರೆ ಅದು ಎಷ್ಟು ದಿವಸ ಉಳಿಯಬಲ್ಲದು? ಈಗ ಅವರಲ್ಲಿ ತುಂಬಿದ್ದ ದ್ವೇಷವು ಹೊರಬಿದ್ದು ಘನಘೋರ ಯುದ್ಧವನ್ನು ಸಾಗಿಸಿದೆ.

ನಾರ್ವೆ ಮತ್ತು **ಡೆನ್ಮಾರ್ಕ :—** ಈ ದೇಶಗಳ ವಿಷಯದಲ್ಲಿ ಕೂಡ ಹಿಟ್ಲರನು ವಿಶ್ವಾಸಘಾತಮಾಡಿದ್ದು ಕಂಡುಬಂದಿದೆ. ಈ ದೇಶಗಳನ್ನು ಆಕ್ರಮಿಸಿಕೊಳ್ಳುವಾಗ ಹಿಟ್ಲರನು ಹೀಗೆ ಹೇಳಿದನು— "ಗ್ರೇಟಬ್ರಿಟನ್ ಮತ್ತು

ಫ್ರಾನ್ಸ್ ದೇಶದವರು ನಿಮ್ಮ ದೇಶಗಳನ್ನು ಬೇಗನೆಯೆ ಆಕ್ರಮಿಸಿಕೊಳ್ಳುವರಿದ್ದಾರೆ. ನಿಮ್ಮ ಸಂರಕ್ಷಣೆಗಾಗಿಯೇ ನಾವು ಪ್ರಯತ್ನ ಮಾಡಬೇಕಾಗಿದೆ.'' ಮಿತ್ರ ರಾಷ್ಟ್ರಗಳು ನಾರ್ವೆ ಡೆನ್ಮಾರ್ಕ್‌ಗಳನ್ನು ಆಕ್ರಮಿಸಿಕೊಳ್ಳುವೆಂಬುದು ತೀರ ಸುಳ್ಳು. ಆಕ್ರಮಣದ ಪೂರ್ವ ಸಿದ್ಧತೆಯನ್ನೆಲ್ಲ ಜರ್ಮನಿಯೇ ಮಾಡಿಕೊಂಡಿತ್ತು. ನಾರ್ವೆ ದೇಶದ ಅರಸರು ಜರ್ಮನಿಯ ಅಭಿಪ್ರಾಯದಂತೆ ಮಂತ್ರಿಮಂಡಳವನ್ನು ನಿರ್ಮಿಸದಿರಲು ಹಿಟ್ಲರನು ಯುದ್ಧ ಹೂಡಿ ನಾರ್ವೆ ದೇಶದ ಸ್ವಾತಂತ್ರ್ಯವನ್ನು ಅಪಹರಿಸಿದನು. 'ಎಷ್ಟು ಉಳಿಯುವದೋ ಉಳಿಯಿಲಿ; ಅಷ್ಟನ್ನಾದರೂ ಉಳಿಸಿಕೊಳ್ಳೋಣ'ವೆಂದು ಡೆನ್ಮಾರ್ಕ್‌ವು ತಾನಾಗಿಯೇ ಜರ್ಮನಿಗೆ ಶರಣುಹೋಯಿತು.

ಹಾಲಂಡ ಮತ್ತು ಬೆಲ್ಜಿಯಮ್ :— ಇತ್ತೀಚೆಗೆ ಒಳಿಕ ಜರ್ಮನಿಯ ಸೈನ್ಯವು ಹಾಲಂಡ್ ಬೆಲ್ಜಿಯಮ್ ದೇಶಗಳ ಮೇಲೆ ದಾಳಿಯಿಟ್ಟಿತು. ೧೯೪೦ ನೆಯ ವರ್ಷದ ಮೇ ತಿಂಗಳ ೯ನೆಯ ತಾರೀಖಿನ ದಿವಸ ಕೊನೆಯ ಪತ್ರವನ್ನು ಕಳುಹಿಸಿ ಮರು ದಿವಸವೇ ಅಸಂಖ್ಯ ಕಾಲಾಳು, ಟ್ಯಾಂಕು, ವಿಮಾನ, ಕೊಡೆವಿಮಾನಗಳ ಸೈನಿಕರು ಇವೆಲ್ಲ ಸೇರಿ ಯುದ್ಧವನ್ನು ಆರಂಭಿಸಿ ಇವೆರಡೂ ದೇಶಗಳನ್ನು ಪಾದಾಕ್ರಾಂತ ಮಾಡಲಾಯಿತು. ಈ ಎರಡೂ ದೇಶಗಳು ತಟಸ್ಥವಾಗಿದ್ದವು. ''ಮಿತ್ರ ರಾಷ್ಟ್ರಗಳವರು ಜರ್ಮನಿಯ ಮೇಲೆ ದಾಳಿ ಮಾಡುವ ಸಲುವಾಗಿ ಈ ದೇಶಗಳಲ್ಲಿ ವಿಶೇಷವಿರದ ಚಟುವಟಿಕೆಗಳನ್ನು ನಡಿಸಿದ್ದು ಅವುಗಳ ಕಡೆಗೆ ಈ ದೇಶಗಳ ಸರಕಾರದವರು ಲಕ್ಷ್ಯ ಮಾಡಿದ್ದಾರೆ.'' ಎಂದು ಹಿಟ್ಲರನು ಸುಳ್ಳು ಆರೋಪವನ್ನು ಹೊರಿಸಿದನು.

ನೌಕಾಯುದ್ಧ :— ಹಿಟ್ಲರನ ಈ ತರದ ಅಸತ್ಯ ವಿಧಾನಗಳ ಪರಂಪರೆಯು ಮಹಾಸಾಗರಗಳೊಳಗಿನ ನೌಕಾಯುದ್ಧದಲ್ಲಿಯೂ ಕಂಡುಬರುವದು. ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುವೆವು.

೧೯೩೯ ನೆಯ ವರ್ಷದ ಸಪ್ಟಂಬರ ತಿಂಗಳ ೪ನೆಯ ತಾರೀಖಿನ ದಿನ ಬ್ರಿಟಿಶರ ಲುಥೀನಿಯಾ ಎಂಬ ಹಡಗವನ್ನು ಜರ್ಮನ್ ಯು ಬೋಟು ಅಯರ್ಲಂಡದಿಂದ ಪಶ್ಚಿಮಕ್ಕೆ ೨೫೦ ಮೈಲುಗಳಮೇಲೆ ಮುಳುಗಿಸಿತು. ಈ ಲುಥೀನಿಯಾದಲ್ಲಿ ಕುಳಿತ ೪೦೦ ಪ್ರಯಾಣಿಕರು ಕಾನಡಾಕ್ಕೆ ಹೊರಟಿದ್ದರು. ಜರ್ಮನಿ—ಇಂಗ್ಲಂಡ್‌ಗಳಲ್ಲಿ ಆದ ನಾವಿಕ ಒಪ್ಪಂದದ ವಿರುದ್ಧವಾಗಿ ಈ ಕೃತ್ಯನಡೆಯಿತು. ಜರ್ಮನ್ ವೃತ್ತಪತ್ರಗಳು ಈ ಸಂಗತಿಯನ್ನು ಪ್ರಸಿದ್ಧಿಸಿದ ರೀತಿಯೇ ಬೇರೆ. ನೂರಾರು ಜನರು ಸತ್ತುಹೋಗಿದ್ದರೂ ಕೂಡ ಎಲ್ಲರೂ ಬದುಕಿರುವರೆಂದೂ ಮಿ. ವಿನ್ಸ್‌ಟನ್ ಚರ್ಚಿಲ್‌ರ ಆಜ್ಞೆಯಮೇರೆಗೆ ಬ್ರಿಟಿಶ ಜಲಾಂತರ್ಗಾಮಿಯು, ಲುಥೀನಿಯಾವನ್ನು ಮುಳುಗಿಸಿತೆಂದೂ ಅವರು ಬರೆದರು. ಹೀಗೆ ಅಸತ್ಯ ಪ್ರಲಾಪಮಾಡುವದು ನ್ಯಾಯವರೆಗೆ ?

ಬ್ರಿಟಿಶರ 'ಆರ್ಕ್ ರಾಯಲ್' ಎಂಬ ವಿಮಾನವಾಹಕ ಉಗಿಹಡಗದ ವಿಷಯದಲ್ಲಿಯೂ ಸುಳ್ಳು ಸುದ್ದಿಯನ್ನು ಹಬ್ಬಿಸಲಾಗಿತ್ತು. ಈ ಸುದ್ದಿಯು ನಿಜವೆಂದು ನಂಬಿಯೇ ತೀರಬೇಕೆಂದು ಜರ್ಮನ್ನರು ತಮ್ಮ ವಿಮಾನಪಡೆಯ ಮುಖ್ಯಾಧಿಕಾರಿಯಾದ ಲಾನ್ಸ್ ಕಾವೋರ್ಡರಲ್ ಫ್ರಾರೇ ಇವನಿಗೆ ಮೊದಲನೆಯ ತರಗತಿಯ ಆಯುನಕ್ಕಾಸವನ್ನು ಪಾರಿತೋಷಕವಾಗಿ ಕೊಟ್ಟರು. ಅವನಿಗೆ ಲೆಫ್ಟಿನೆಂಟ ಅಧಿಕಾರವನ್ನು ಕೂಡ ಕೊಡಲಾಯಿತು. ಆದರೇನು? ಮುಂದೆ ಕೆಲವು ದಿವಸಗಳಲ್ಲಿಯೇ ಆರ್ಕ್ ರಾಯಲ್ ಮುಳುಗಿಲ್ಲವಿಷ್ಟೇ ಅಲ್ಲ; ಸಂಪೂರ್ಣ ಸುರಕ್ಷಿತವಾಗಿರುವದೆಂದು ಗೊತ್ತಾಗಿಬಿಟ್ಟಿತು. ಇದೇ ತರದ ಸುದ್ದಿಗಳನ್ನು ಬ್ರಿಟಿಶರ ರಾವಳಪಿಂಡಿ ಮೊದಲಾದ ಉಗಿಹಡಗಗಳ ವಿಷಯದಲ್ಲಿಯೂ ಹಬ್ಬಿಸಿದ್ದರು. ಬ್ರಿಟಿಶರ ವ್ಯಾಪಾರಿ ಹಡಗುಗಳ ವಿಷಯದಲ್ಲಿಯೂ ಅಸಂಬದ್ಧ ಹಾಗೂ ಅಸತ್ಯ ಸಂಗತಿಗಳನ್ನು ಇಂದಿಗೂ ಹಬ್ಬಿಸುತ್ತಲಿರುವರು. ೧೯೪೦ನೆಯ ವರ್ಷದ ನವ್ಹೆಂಬರ ೧೦ನೆಯ ದಿನದ ವರೆಗೆ ೭೧೬೨೨೦ ಟನ್ನಗಳಷ್ಟು ಹಡಗಗಳನ್ನು ಮುಳುಗಿಸಲಾಯಿತೆಂದು ಜರ್ಮನ್ನರು ಹೇಳಿದರು. ಇದು ಸತ್ಯ ಸಂಗತಿಯಾಗಿದ್ದರೆ, ಬ್ರಿಟನ್ನಿನ ಅನ್ನಸಂಗ್ರಹ ಹಾಗು ಆಯಾತ ನಿರ್ಯಾತ ವ್ಯಾಪಾರಗಳು ನಡೆಯುತ್ತಲೇ ಇರಲಿಲ್ಲ.

ವೈಮಾನಿಕಯುದ್ಧ:— ನೆಲಜಲಗಳ ಯುದ್ಧ-ಆಕ್ರಮಣಗಳಂತೆ ವೈಮಾನಿಕ ಯುದ್ಧಗಳಲ್ಲಿಯೂ ಜರ್ಮನ್ನರು ಸುಳ್ಳುಸಂಗತಿಗಳನ್ನು ಹಬ್ಬಿಸುವದಕ್ಕೆ ಕೊರತೆಯಿಲ್ಲ. ೧೯೪೦ನೆಯ ವರ್ಷದ ಆಗಸ್ಟ ೨೫ನೆಯ ದಿವಸದಿಂದ ಸಪ್ಟಂಬರ ೭ನೆಯ ದಿವಸದವರೆಗೆ ಬ್ರಿಟಿಶರ ೯೨೨ ವಿಮಾನಗಳನ್ನು ನಾಶಮಾಡಲಾಯಿತೆಂದು ಜರ್ಮನ್ ಅಧಿಕಾರಿಗಳು ಹೇಳುವರು. ಈ ಸಂಗತಿಯು ಸತ್ಯವಾಗಿದ್ದರೆ ಯುದ್ಧವು ಎಂದೋ ಮುಗಿದು ಹೋಗುತ್ತಲಿದ್ದಿತು!

ಬ್ರಿಟಿಶರು ಪ್ರಸಿದ್ಧಿಸುವ ಸಂಗತಿ-ಸಂಖ್ಯೆಗಳು ಸರಿಯಾಗಿರುವವೆಂದು ಅಮೇರಿಕನ್ ಅಧಿಕಾರಿಗಳ ಸ್ಪಷ್ಟ ಅಭಿಪ್ರಾಯವಿರುವದು. ಯುದ್ಧದ ಸತ್ಯಸಂಗತಿಗಳನ್ನು ತಿಳಿಯಬೇಕು, ಮತ್ತು ಜರ್ಮನ್ನರ ಸುಳ್ಳುಸುದ್ದಿಗಳನ್ನು ನಂಬಬಾರದು ಎಂಬ ಸ್ತುತ್ಯ ಉದ್ದೇಶದಿಂದ ಮಿ. ವ್ಹಾಯಕಾವುಂಟ ಮಾಘವು ಇವರು ಬರೆದ ಪುಸ್ತಕದೊಳಗಿನ ಕೆಲವು ಸಂಗತಿಗಳನ್ನು ಇಲ್ಲಿ ಕೊಟ್ಟಿರುವೆವು.

ಪ್ರ ಕ ಟ ನೆ

ಪ್ರಬುದ್ಧರ ಶಿಕ್ಷಣದ ಕಾರ್ಯಕ್ರಮ ಯೋಜನೆಯಲ್ಲಿ ಸಮಾವಿಷ್ಟವಾದ
ಹಳ್ಳಿಯ ಪುಸ್ತಕಾಲಯಗಳನ್ನು ರಜಿಸ್ಟರ ಮಾಡುವ
ಮತ್ತು ಸಹಾಯ ದ್ರವ್ಯವನ್ನು ಕೊಡುವ
ಸಂಬಂಧದ ನಿಯಮಗಳು.

ಹಳ್ಳಿಯ ಪುಸ್ತಕಾಲಯಗಳನ್ನು ರಜಿಸ್ಟರ ಮಾಡುವದು.

೧. ಖಾಸಗಿ ಜನರು, ಗ್ರಾಮಪಂಚಾಯತಿಯವರು, ಆರೋಗ್ಯಸಮಿತಿ
ು, ಗ್ರಾಮಸುಧಾರಣೆಯ ಸಂಸ್ಥೆಗಳು, ಸಹಕಾರಿ ಸಂಘಗಳು ಇಲ್ಲವೆ
ಾವದೊಂದು **ಸಮಿತಿ**ಯವರು ಅಥವಾ **ಸಂಸ್ಥೆ**ಯವರು ಯಾವದೊಂದು **ಪ್ರದೇಶ**
ಪುಸ್ತಕಾಲಯವನ್ನು ನಡೆಯಿಸಲು ಬಯಸುತ್ತಿದ್ದರೆ, ಆಯಾ ಜಿಲ್ಲೆಯ
್ಯಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನ ಕಡೆಗೆ ಗೊತ್ತಾದ ನಮೂನೆಯಲ್ಲಿ
ಸ್ಟ್ರೇಶನ್ನದ ಬಗ್ಗೆ ಅರ್ಜಿಯನ್ನು ಮಾಡಬಹುದು.

ವಿವರಣೆ:— ೧ (ಅ) "**ಸಮಿತಿ**" ಎಂದರೆ ಆಯಾ ಪ್ರದೇಶದೊಳಗಿನ
ಾಸಗಳಲ್ಲಿ ಪುಸ್ತಕಾಲಯವನ್ನು ನಡೆಯಿಸುವದಕ್ಕೆ ಬೇಕಾಗುವ ಹಣದ ಸಲು
ಗಿ ಗೊತ್ತಾದ ವರ್ಗಣಿಯನ್ನು ಸಲ್ಲಿಸಿದ ಸದಸ್ಯರ ಸಮೂಹವು. "**ಸಂಸ್ಥೆ**"
ದರೆ ಗಲಟಣೆಯ ಇಸ್ಪಿಯ ತಿಗನೆಯ ಸಂಬರಿನ ಸಂಸ್ಥೆಗಳ ರಜಿಸ್ಟ್ರೇಶನ್
ಯದೆಯಂತೆ ರಜಿಸ್ಟರಾದ ಸಂಸ್ಥೆ ಅಥವಾ ಸಂಘ ಎಂದು ತಿಳಿಯಬೇಕು.

ಯಾವದೊಂದು ಸಂಸ್ಥೆಯವರು ತಮ್ಮಿಂದ ನಡೆಯಿಸಲ್ಪಡುವ ಅಥವಾ ತಮ್ಮ
ಸ್ಥೆಗೆ ಜೋಡಿಸಲ್ಪಟ್ಟ ಪುಸ್ತಕಾಲಯದ ಕಾರ್ಯಕಾರೀ ಸಮಿತಿಯ ಪರವಾಗಿ
ಸಮಿತಿಯ ಅನುಮತಿಯಿಂದ ಸಹಾಯ ದ್ರವ್ಯದ ಸಲುವಾಗಿ ಅರ್ಜಿಯನ್ನು
ಾಡಬಹುದು. ಆದರೆ ಆ ಅರ್ಜಿಯಸಂಗಡ ತಾವು ಸಹಾಯದ್ರವ್ಯದ ಸಲು
ಗಿ ಅರ್ಜಿಯನ್ನು ಮಾಡುವ ಪ್ರತಿಯೊಂದು ಪುಸ್ತಕಾಲಯದ ಸಂಬಂಧದಿಂದ
ಕಾರದಿಂದ ಗೊತ್ತಾದ ಫಾರ್ಮಿನಲ್ಲಿ ಅದಕ್ಕೆ ಸಂಬಂಧಿಸಿದ ಸಂಪೂರ್ಣ
ಾಹಿತಿಯನ್ನು ತುಂಬಿ ಕಳುಹಿಸಬೇಕು.

ವಿವರಣೆ:— ೨ (ಅ) '**ಪ್ರದೇಶ**' ಎಂದರೆ ಯಾವದೊಂದು ಮ್ಯುನಸಿ-
ಲಿಟಿಗೆ ಸೇರದೆ ಇದ್ದ, ಸುತ್ತುಮುತ್ತು ಒಂದು ಮೈಲು ಪರಿಘದೊಳಗಿನ

ಹಳ್ಳಿಗೆ ಅಥವಾ ಹಳ್ಳಿಗಳ ಸಮೂಹಕ್ಕೆ ಒಳಪಟ್ಟ, ತೀರ ಕಡಿಮೆಯೆಂದ ನಾಲ್ಕನೆಯ ಇಯತ್ತೆಯ ವರೆಗಾದರೂ ಕಲಿಸುವ ಪ್ರಾಥಮಿಕ ಶಾಲೆಯುಳ್ಳ ಪ್ರದೇಶವೆಂದು ತಿಳಿಯಬೇಕು.

೨. ಅರ್ಜಿಯು ಮುಟ್ಟಿದ ತರುವಾಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನು ತನಗೆ ಅವಶ್ಯಕವೆನಿಸುವ ವಿಚಾರಣೆಗಳನ್ನು ನಡೆಯಿಸಿ, ರಜಿಸ್ಟರ ಮಾಡದೆ ಇರಲಿಕ್ಕೆ ಬೇಕಾದ ವಿಶೇಷ ಕಾರಣಗಳಿಲ್ಲವೆಂಬುದನ್ನು ತಿಳಿದುಕೊಂಡು, ಯಾವದೊಂದು ಪುಸ್ತಕಾಲಯವನ್ನು ರಜಿಸ್ಟರ ಮಾಡಿದ ಬಗ್ಗೆ ಸರ್ಟಿಫಿಕೇಟನ್ನು ಕೊಡುವನು. ಮತ್ತು ಆ ಸರ್ಟಿಫಿಕೇಟಿನ ಒಂದು ಪ್ರತಿಯನ್ನು ಆ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿಗೂ ಇನ್ನೊಂದು ಪ್ರತಿಯನ್ನು ಪ್ರಬುದ್ಧರ ಶಿಕ್ಷಣದ ಇಲಾಖಾ ಬೋರ್ಡಿಗೂ ಕಳಿಸುವನು.

೩. ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿಗೆ ಯಾವದೊಂದು ಪುಸ್ತಕಾಲಯವನ್ನು ರಜಿಸ್ಟರ ಮಾಡದಿರುವದಕ್ಕೆ ವಿಶೇಷಕಾರಣಗಳು ಕಂಡುಬಂದರೆ ಅದನ್ನು ಕುರಿತು ಪ್ರಬುದ್ಧರ ಶಿಕ್ಷಣದ ಇಲಾಖಾ ಸಮಿತಿಗೆ ರಿಪೋರ್ಟು ಮಾಡುವನು. ಇಲಾಖಾಸಮಿತಿಯವರು ಆ ರಿಪೋರ್ಟಿನ ಮೇಲೆ ತಮ್ಮ ಅಭಿಪ್ರಾಯದ ಶರಾ ಬರೆದು ಅದನ್ನು ಆ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿಗೆ ಕಳಿಸುವರು. ಈ ವಿಷಯದಲ್ಲಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನ ನಿರ್ಣಯವೇ ಕೊನೆಯದು.

೪. ಯಾವುದೊಂದು ಪುಸ್ತಕಾಲಯವನ್ನು ರಜಿಸ್ಟರ ಮಾಡದೆ ಇದ್ದ ಸಂದರ್ಭದಲ್ಲಿ ಅದರ ಕಾರ್ಯಕಾರೀ ಸಮಿತಿಯವರು ಅವರ ಅರ್ಜಿಯನ್ನು ಮಂಜೂರ ಮಾಡುವದಿಲ್ಲವೆಂದು ಹುಕುಂ ಬಂದು ಮೂರು ತಿಂಗಳು ಕಳೆದ ತರುವಾಯ ರಜಿಸ್ಟರ ಮಾಡುವ ಬಗ್ಗೆ ಪುನಃ ಅರ್ಜಿಯನ್ನು ಮಾಡಬಹುದು.

೫. ಸಾಮಾನ್ಯವಾಗಿ ಒಂದು 'ಪ್ರದೇಶ'ದಲ್ಲಿ ಒಂದೇ ಪುಸ್ತಕಾಲಯಕ್ಕೆ ಮಾನ್ಯತೆಯು ದೊರೆಯುವದು. ಹೀಗಿದ್ದರೂ ಹೆಂಗುಸರ ಮತ್ತು (ಅಥವಾ) ಚಿಕ್ಕಮಕ್ಕಳ ಸಲುವಾಗಿ ವಿಶೇಷ ಪುಸ್ತಕಾಲಯಗಳನ್ನು ಪ್ರಾರಂಭಿಸಬಹುದು ಉಳಿದ ಪ್ರಸಂಗಗಳನ್ನು ಆಯಾ ಸಂದರ್ಭಗಳ ಗುಣಾವಗುಣಗಳ ಅವಲೋಕನದಿಂದ ಸ್ವತಂತ್ರವಾಗಿ ನಿರ್ಣಯಿಸಲಾದೀತು.

೬. ಪುಸ್ತಕಾಲಯದ ಹಣದ ವೆಚ್ಚವನ್ನು ಈ ರೀತಿ ನಿಯಮನ ಮಾಡಬಹುದು:—

(೧) ನೂರರಲ್ಲಿ ೪೦ ರಷ್ಟು (ಹಣವನ್ನು) ವರ್ತಮಾನಪತ್ರ-ನಿಯತ ಕಾಲಿಕಗಳಿಗಾಗಿ;

(೨) ನೂರರಲ್ಲಿ ೪೦ ರಷ್ಟು ಪುಸ್ತಕಗಳಿಗಾಗಿ;

(೩) ನೂರರಲ್ಲಿ ೨೦ರಷ್ಟು ಇತರ ವೆಚ್ಚಕ್ಕಾಗಿ.

ಮೂರನೆಯ ಸದರಿನಲ್ಲಿ ಹೆಚ್ಚಾಗಿ ಉಳಿದ ಶಿಲಕು ಹಣವನ್ನು ಮಿಕ್ಕುಳಿದ ಸದರುಗಳಿಗಾಗಿ ವೆಚ್ಚ ಮಾಡಬಹುದು.

೭. ಪುಸ್ತಕಾಲಯದ ಕಾರ್ಯಕಾರೀ ಸಮಿತಿಯು, ಪ್ರತಿವರ್ಷ ಎಪ್ರಿಲ್ ತಿಂಗಳಲ್ಲಿ ಅದರ ಕಾರ್ಯಕಲಾಪಗಳ ವಾರ್ಷಿಕ ವರದಿಯನ್ನು ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನಿಗೆ ಕಳುಹಿಸಬೇಕು.

೮. (ಅ) ಮೊದಲನೆಯ ವರ್ಷದಬಗ್ಗೆ ಸಹಾಯದ್ರವ್ಯವನ್ನು ಕೊಡುವದು.

ಪುಸ್ತಕಾಲಯವು ಪ್ರಾರಂಭವಾದ ಮೊದಲನೆಯ ವರ್ಷದಲ್ಲಿ ಅದು ಈ ನಿಯಮಗಳಿಗೆ ಅನುಸಾರವಾಗಿ ರಜಿಸ್ಟರ ಮಾಡಲ್ಪಟ್ಟಿದ್ದರೆ ೨೦ ರೂಪಾಯಿಗಳನ್ನು ಅಥವಾ ಅದರಲ್ಲಿಯ ಪುಸ್ತಕ-ಪತ್ರಿಕೆಗಳನ್ನು ಕೊಳ್ಳಲು ತಗಲಿದ ವೆಚ್ಚದ ಮೂರರಲ್ಲಿ ಎರಡುಪಾಲು ಹಣ, ಇವೆರಡರಲ್ಲಿ ಯಾವದು ಕಡಿಮೆಯಾಗುವದೋ ಅಷ್ಟು ರಕಮನ್ನು ಸಹಾಯ ದ್ರವ್ಯವೆಂದು ಕೊಡಲಾಗುವದು. ದೊಡ್ಡ ಹಳ್ಳಿಗಳಲ್ಲಿ ಈ ನಿಯಮಗಳಿಗೆ ಅನುಸರಿಸಿ ರಜಿಸ್ಟರಾದ ಪುಸ್ತಕಾಲಯಕ್ಕೆ ೫೦ ರೂ. ಅಥವಾ ಅದರ ನಿಜವಾದ ವೆಚ್ಚದ ಮೂರರಲ್ಲಿ ಎರಡುಪಾಲು ಇವೆರಡರಲ್ಲಿ ಯಾವದು ಕಡಿಮೆಯಾಗುವದೋ ಅಷ್ಟು ರಕಮನ್ನು ಸಹಾಯದ್ರವ್ಯವೆಂದು ಕೊಡಲಾಗುವದು. ಯಾವದೊಂದು ಪುಸ್ತಕಾಲಯಕ್ಕೆ ಹೆಚ್ಚಿನ ಸಹಾಯ ದ್ರವ್ಯವನ್ನು ಕೊಡಬಹುದೋ ಹೇಗೆಂಬುದನ್ನು ಆಯಾ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನು ನಿರ್ಣಯಿಸುವನು. ಸಹಾಯದ್ರವ್ಯವನ್ನು ಹಣದ ರೂಪದಲ್ಲಿ ಯಾಗಲಿ ಪುಸ್ತಕ-ಪತ್ರಿಕೆಗಳ ರೂಪದಲ್ಲಿಯಾಗಲಿ ಕೊಡಬಹುದು.

(ಬ) ಮುಂದಿನ ವರ್ಷಗಳ ಬಗ್ಗೆ ಸಹಾಯದ್ರವ್ಯವನ್ನು ಕೊಡುವದು.

ರಜಿಸ್ಟರಾದ ಪುಸ್ತಕಾಲಯಕ್ಕೆ ಒಮ್ಮೆ ಸರಕಾರದಿಂದ ಸಹಾಯ ದ್ರವ್ಯವು ದೊರಕಿದ ಒಳಿಕ ಮೂರು ವರ್ಷಗಳು ಕಳೆದ ತರುವಾಯ ಸರಕಾರದ ಆರ್ಥಿಕ ಸ್ಥಿತಿಯು ಅನುಕೂಲವಾಗಿದ್ದರೆ ಮತ್ತೊಮ್ಮೆ ಇದೇ ರೀತಿಯಾಗಿ ಸಹಾಯ ದ್ರವ್ಯವನ್ನು ಕೊಡಬಹುದು.

ರಜಿಸ್ಟರ ಮಾಡುವ ಸಂಬಂಧದ ಶರ್ತುಗಳು

೯. ಈ ಕೆಳಗಿನ ಶರ್ತುಗಳನ್ನು ಅನುಸರಿಸಿ ನಡೆಯುವ ಪುಸ್ತಕಾಲಯಗಳಿಗಷ್ಟೇ ಸರಕಾರದ ಸಹಾಯ ದ್ರವ್ಯವು ದೊರೆಯುವದು.

(೧) ಪುಸ್ತಕಾಲಯದ ಅಡಳಿತೆಯು ಕರ್ತವ್ಯದಕ್ಷವೂ ವಿಶ್ವಾಸಾರ್ಹವೂ ಆದ ಸಮಿತಿಯ ಕೈಯ್ಯಲ್ಲಿರಬೇಕು.

(೨) ಅದು ಎಲ್ಲ ಜಾತಿ ಮತ ಪಂಗಡಗಳ ಜನರ ಉಪಯೋಗಕ್ಕೆ ಮುಕ್ತದ್ವಾರವಾಗಿರಬೇಕು. ಎಲ್ಲರಿಗೂ ಉಚಿತವಾಗಿ ಪ್ರವೇಶವಿರಬೇಕು.

(೩) ಅದನ್ನು ಪ್ರತಿದಿನ ತೀರಕಡಿಮೆಯೆಂದರೆ ಒಂದು ತಾಸಿನವರೆಗಾದರೂ ತೆರೆದಿರಬೇಕು.

(೪) ಅದರಲ್ಲಿ ಈ ಕೆಳಗಿನ ರಿಕಾರ್ಡುಗಳನ್ನು ಇಟ್ಟಿರಬೇಕು.

(ಅ) ಅಲ್ಲಿ ಬರುವ ವರ್ತಮಾನಪತ್ರ ಮತ್ತು ನಿಯತಕಾಲಿಕಗಳ ಯಾದಿ.

(ಆ) ಕೊಂಡು ಕೊಂಡ ಪುಸ್ತಕಗಳ ಯಾದಿ.

(ಇ) ಪುಸ್ತಕಗಳನ್ನು ವರ್ಗೀಕರಿಸಿದ ಯಾದಿ.

(ಈ) ಸದಸ್ಯರ ಮತ್ತು ಪುಸ್ತಕಗಳ ರಜಿಸ್ಟರು ಅಥವಾ ಪತ್ರಿಕೆ

(ಉ) ಇಶ್ಯೂ ರಜಿಸ್ಟರು.

(ಊ) ಡೆಡ್‌ಸ್ಟಾಕ ಸಾಮಾನುಗಳ ಯಾದಿ.

(ಎ) ಉತ್ಪನ್ನ ವೆಚ್ಚಗಳ ಲೆಕ್ಕದ ಪುಸ್ತಕ ಮತ್ತು ಪಾವತಿಗಳ ಫೈಲುಗಳು.

(ಏ) ಶರಾ ಬರೆಯುವ ಪುಸ್ತಕ.

(೫) ಸರಕಾರದ ವಿದ್ಯಾಖಾತೆಯ ಅಧಿಕಾರಿಗಳಾಗಲಿ, ಪ್ರಬುದ್ಧ ಶಿಕ್ಷಣದ ಪ್ರಾವಿನ್ಸಿಯಲ್ ಬೋರ್ಡಿನ ಸದಸ್ಯರಾಗಲಿ ತಪಾಸಣೆ ಮಾಡುವದಕ್ಕಾಗಿ ಕೇಳಿದರೆ ಪುಸ್ತಕಾಲಯದ ಲೆಕ್ಕದ ಪುಸ್ತಕಗಳನ್ನೂ ಪಾವತಿ ಫೈಲುಗಳನ್ನೂ ಅವರಿಗೆ ತೋರಿಸಬೇಕು.

೧೦. ಪ್ರತಿಯೊಂದು ಪುಸ್ತಕಾಲಯಕ್ಕೆ ಸರಕಾರದ ಒಕ್ಕಲತನ, ಪಶುವೈದ್ಯ, ಆರೋಗ್ಯರಕ್ಷಣೆ ಮತ್ತು ಸಹಕಾರಿ ಖಾತೆಗಳವರು ಆಗಾಗ ಪ್ರಕಟಿಸುವ, ಜನರಿಗೆ ಉಪಯುಕ್ತವಾದ, ಪುಸ್ತಕ-ಪತ್ರಿಕೆಗಳನ್ನು ಸಾಧ್ಯವಿದ್ದಮಟ್ಟಿಗೆ ಉಚಿತವಾಗಿ ಕೊಡಲುಗುವದು. ಹೀಗೆ ಉಚಿತವಾಗಿ ಬಂದಿರುವ ಪುಸ್ತಕ-ಪತ್ರಿಕೆಗಳ ಯಾದಿಯೊಂದನ್ನು ಸಾಧ್ಯವಿದ್ದಮಟ್ಟಿಗೆ ಸರಿಯಾಗಿ ಇಟ್ಟಿರುವದು ಇಂಥ ಪುಸ್ತಕಾಲಯದ ಅಡಳಿತೆಗಾರರ ಕರ್ತವ್ಯವು.

೧೧. ಪುಸ್ತಕಾಲಯದ ಹೊಣೆಗಾರನೆನಿಸುವ ಅದರ ಕಾರ್ಯದರ್ಶಿಯು ಸ್ಥಾನಿಕ ಪ್ರಾಥಮಿಕ ಶಾಲೆಯ ಹೆಡ್‌ಮಾಸ್ತರನಾಗಿರಬಹುದು; ಇಲ್ಲವೆ ಬೇರೆ ಯಾವುದಾದರೂ ಸರಕಾರೀ ನೌಕರನಿರಬಹುದು; ಅಥವಾ ಖಾಸಗೀ ಮನುಷ್ಯ ನಿರಬಹುದು. ಆದರೆ ಅವನ ಹೆಸರನ್ನು ಡೆಪ್ಯೂಟಿ ಎಜ್ಯುಕೇಶಲ್ ಇನ್‌ಸ್ಪೆಕ್ಟರನಿಗೆ ತಿಳಿಸಿರಬೇಕು. ಮತ್ತು ಡಿ. ಎ. ಇ. ನ ಕಚೇರಿಯಲ್ಲಿ ಅದು ದಾಖಲೆಯಾಗಿರ ಬೇಕು.

೧೨. ಆವಶ್ಯಕವೆನಿಸಿದಷ್ಟು ಸಾರೆ, ತೀರ ಕಡಿಮೆಯೆಂದರೆ ಒಂದು ವರ್ಷದಲ್ಲಿ ಒಂದು ಸಾರೆಯಾದರೂ ಪ್ರತಿಯೊಂದು ಪುಸ್ತಕಾಲಯವನ್ನು ತಪಾಸಮಾಡುವದು ವಿದ್ಯಾಖಾತೆಯ ತಪಾಸಣೆಯ ಅಧಿಕಾರಿಯ ಕರ್ತವ್ಯವಾಗಿರುವದು.

೧೩. ಮೇಲೆ ಹೇಳಿದ ಯಾವುದೊಂದು ನಿಯಮವನ್ನು ಅಥವಾ ನಿಯಮ ಗಳನ್ನು ಯೋಗ್ಯ ಎಚ್ಚರಿಕೆಯನ್ನು ಕೊಟ್ಟರೂ ಸಹ ಉಲ್ಲಂಘಿಸುವ ಪುಸ್ತಕಾ ಲಯದ ರಜಿಸ್ಟ್ರೇಶನ್ನವನ್ನು ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನು ರದ್ದು ಮಾಡಬಹುದು.

೧೪. ಯಾವುದೊಂದು ಪುಸ್ತಕಾಲಯವು ನಿಂತು ಹೋದಬಳಿಕ ಅದರೊಳ ಗಿನ ಪುಸ್ತಕಗಳನ್ನೂ ಇತರ ಸಾಮಗ್ರಿಗಳನ್ನೂ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶ ನಲ್ ಇನ್‌ಸ್ಪೆಕ್ಟರನ ವಶಕ್ಕೆ ಒಪ್ಪಿಸಬೇಕು. ಅವನು ಅವನ್ನು ಸಾಧ್ಯವಿದ್ದಮಟ್ಟಿಗೆ ಕಾದಿಟ್ಟು ಅದೇ ಹಳ್ಳಿಯ ಅಥವಾ ಹಳ್ಳಿಗಳ ಜನರ ಉಪಯೋಗಕ್ಕೆ ವಿನಿಯೋಗಿಸ ಬಹುದು.

೧೫. ಪುಸ್ತಕಾಲಯಗಳಿಗೆ ಸಲ್ಲುವ ಹಣದ ಬಿಲ್ಲುಗಳಿಗೆ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನು ತನ್ನ ಮುನ್ನಣಿಯ ಸಹಿ ಮಾಡಿ ಆಯಾ ಪುಸ್ತಕಾ ಲಯಗಳ ಕಾರ್ಯದರ್ಶಿಗಳಿಗೆ ಕಳುಹಿಸಬೇಕು. ಜಿಲ್ಲೆಯ ಮುಖ್ಯ ಸ್ಥಳವುಳ್ಳ ತಾಲೂಕಿನಲ್ಲಿರುವ ಪುಸ್ತಕಾಲಯಗಳಿಗೆ ಸಂಬಂಧಿಸಿದ ಬಿಲ್ಲುಗಳ ಹಣವನ್ನು ಆಯಾ ಸೆಕ್ರೆಟರಿಗಳು ಜಿಲ್ಲೆಯ ಟ್ರೇಝುರಿಯಿಂದ ತರಿಸಿಕೊಳ್ಳಬೇಕು. ಮತ್ತು ಇತರ ತಾಲೂಕುಗಳಲ್ಲಿರುವ ಪುಸ್ತಕಾಲಯಗಳಿಗೆ ಸಲ್ಲುವ ಗ್ರ್ಯಾಂಟಿನ ಹಣವನ್ನು ಆಯಾ ತಾಲೂಕಿನ ಟ್ರೇಝುರಿಗಳ ಮೇಲೆ ಕ್ಯಾಶ್ ಆರ್ಡರುಗಳನ್ನು ತೆಗೆದು ಸಲ್ಲಿಸ ಲಾಗುವದು. ಇಂಥ ಎಲ್ಲ ಕ್ಯಾಶ್ ಆರ್ಡರುಗಳನ್ನು ಸಕಾಲದಲ್ಲಿ ಹೊರಡಿಸಿ ಆಯಾ ಪುಸ್ತಕಾಲಯಗಳ ಕಾರ್ಯದರ್ಶಿಗಳಿಗೆ ಗ್ರ್ಯಾಂಟಿನ ಹಣವು ತಡವಿಲ್ಲದೆ ಮುಟ್ಟುವಂತೆ ಮಾಡುವದು ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನ ಕರ್ತವ್ಯ ವೆನಿಸುವದು.

ಹಳ್ಳಿಯ ಪುಸ್ತಕಾಲಯಗಳನ್ನು ರಜಿಸ್ಟರ ಮಾಡುವದಕ್ಕೂ ಸಹಾಯ ದ್ರವ್ಯವನ್ನು ಪಡೆಯುವದಕ್ಕೂ ಮಾಡುವ ಅರ್ಜಿಯ ನಮೂನೆ.

(೧೯ನೆಯ ನಿಯಮವನ್ನು ನೋಡು)

೧. ಪುಸ್ತಕಾಲಯವನ್ನು ಸ್ಥಾಪಿಸಿರುವ ಪ್ರದೇಶ—
(ಗ್ರಾಮ, ತಾಲೂಕು, ಜಿಲ್ಲೆ, ಪೋಸ್ಟಆಫೀಸು)

೨. ಪುಸ್ತಕಾಲಯವು ಇರುವ ನಿರ್ದಿಷ್ಟವಾದ ಸ್ಥಳ—

೩. ವ್ಯಕ್ತಿಯ, ಸಮಿತಿಯ ಅಥವಾ ಸಂಸ್ಥೆಯ ಹೆಸರು—

೪. ಪುಸ್ತಕಾಲಯದ ಪರವಾಗಿ ಪತ್ರವ್ಯವಹಾರ ನಡೆಯಿಸಲು ಅಧಿಕಾರ ಪಡೆದ ಅದರ ಕಾರ್ಯದರ್ಶಿ—

೫. ಸ್ಥಾಪನೆಯ ತಾರೀಖು—

೬. ಚಾಲೂ ವರ್ಷದ ಅಂದಾಜ ವೆಚ್ಚದ ವಿವರಣೆ—

೭. ಸ್ಥಾನಿಕ ವರ್ಗಣಿಯ ವಿವರ ಮತ್ತು ಪ್ರಕಾರ—

೮. ಇತರ ವಿವರಣೆಗಳು

(ಏನಾದರೂ ಇದ್ದರೆ. ಇದೇ ಪ್ರದೇಶದಲ್ಲಿ ಬೇರೊಂದು ಪುಸ್ತಕಾಲಯವು ಇರುವದೋ ಹೇಗೆ?)

.. ..

ತಾರೀಖು. .. .. ಅರ್ಜಿದಾರ ಹುದ್ದೆ.

ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರನ ಅಭಿಪ್ರಾಯದ ಶರಾ

೧. ಅರ್ಜಿಯು ಮುಟ್ಟಿದ ತಾರೀಖು—

೨. ರಜಿಸ್ಟರ ಮಾಡಿದ ತಾರೀಖು—

೩. ರಜಿಸ್ಟರ ಮಾಡದೆ ಇದ್ದರೆ—
ಹಾಗೆ ರಜಿಸ್ಟರ ಮಾಡದಿರುವ ಕಾರಣ.

.. ..

ತಾರೀಖು.

ಸಹಿ.

ನಮ್ಮ ನಾಡ ಶಿಲ್ಪಿಗರು

ಶೀಮಾನ್ ಮುದವೀಡು ಕೃಷ್ಣರಾಯರಿಂದ *

ಧಾರವಾಡದಲ್ಲಿಯ ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯದ ಮಾತನ್ನೆತ್ತಿದ ಕೂಡಲೆ ಈ ಸಂಸ್ಥೆಯ ಸ್ಥಾಪಕರ, ವರ್ಧಕರ, ಅಧ್ಯಾಪಕರ ಹಾಗೂ ಮುಖ್ಯಾಧ್ಯಾಪಕರ ಸ್ಮರಣೆಯಾಗದೆ ಹೋಗುವದಿಲ್ಲ. ಕರ್ನಾಟಕಕ್ಕೆ ಈ ಸಂಸ್ಥೆಯು ಮಾಡಿದ ಉಪಕಾರವು ಅಷ್ಟಿಷ್ಟಲ್ಲ. ಇದರ ಹಿರಿಮೆಯು ದೊಡ್ಡದು. ಇದರಲ್ಲಿ ಶಿಕ್ಷಣ ಪಡೆದು ಹಳ್ಳಿಹಳ್ಳಿಗಳಲ್ಲಿ ಜ್ಞಾನಪ್ರಸಾರಮಾಡಿದ ಪುಣ್ಯಾತ್ಮರಾದ ಪ್ರಾಥಮಿಕ ಶಿಕ್ಷಕರ ಹೊಣೆಗಾರಿಕೆಯು ಬಲು ದೊಡ್ಡದು. ಅವರಿಗೆ ನನ್ನ ಅನಂತ, ಪ್ರಣಾಮಗಳು.

ಕನ್ನಡ ನಾಡಿನಲ್ಲಿ ಶಿಲ್ಪಕಲೆಯನ್ನು ನೋಡಲು ಹಂಪೆ, ಹಳೆಬೀಡು, ಬೇಲೂರು, ಗದಗು ಮೊದಲಾದ ವಿಶಿಷ್ಟ ಊರುಗಳಿಗೇ ಹೋಗಬೇಕು, ಹೀಗೇನೂ ಇಲ್ಲ. ಕರ್ನಾಟಕದ ಪ್ರತಿಯೊಂದು ಊರಲ್ಲಿ, ನೆರೆಯ ಊರಲ್ಲಿ ಶಿಲ್ಪಕಲೆಯ ಪ್ರದರ್ಶನವನ್ನೇ ಕಾಣಬಹುದಾದಷ್ಟು ಮಟ್ಟಿಗೆ ಪೂರ್ವಕಾಲದಲ್ಲಿಯ ನಮ್ಮ ಶಿಲ್ಪಿಗರು ಹೇರಳವಾಗಿ ಕಲ್ಲಿನಲ್ಲಿ ಕೆತ್ತಿಗೆಯ ಕೆಲಸ ಮಾಡಿಟ್ಟಿದ್ದಾರೆ. ಅವುಗಳನ್ನೆಲ್ಲ ಮಣ್ಣುಗೂಡಿಸದೆ, ಮಣ್ಣೊಳಗಡಗಿದುದನ್ನು ಮೇಲಕ್ಕೆ ತೆಗೆದು ನೋಡಿ, ನಲಿದಾಡಿ, ಅಭ್ಯಾಸಮಾಡಿ, ನಮ್ಮ ಸಂತತಿಗೆ, ನಮ್ಮ ವಿದ್ಯಾರ್ಥಿಗಳಿಗೆ, ಹೇಳಿಕೊಡುವ–ತಿಳಿಸಿಕೊಡುವ ಪುಣ್ಯಾತ್ಮರದೆ ಈಗ ಕೊರತೆಯಿದೆ. ನಮ್ಮ ನಾಡಿನಲ್ಲಿ ಪೌರಾಣಿಕ ಐತಿಹಾಸಿಕ ಕಾಲಗಳಲ್ಲಿ ಶಿಲ್ಪಿಗರೂ-ಶಿಲ್ಪಕಲಾಪ್ರವೀಣರೂ ಶಿಲ್ಪಿಗರ ಗುರುದೇವರೂ ಆಗಿಹೋಗಿದ್ದಾರೆ. ಹಾಗಾದರೆ ನಮಗೆ ಈಗ ಎಂಥ ಶಿಲ್ಪಿಗರು ಬೇಕು ?

ನಮಗೆ ನಾಡನ್ನು ಕಟ್ಟುವ ಶಿಲ್ಪಿಗರು ಬೇಕಾಗಿದ್ದಾರೆ. ನಮ್ಮಲ್ಲಿ ಇಂಥವರು ಯಾರಿದ್ದಾರೆ, ಎಲ್ಲಿದ್ದಾರೆ, ಅವರು ಈಗ ಎಷ್ಟೊಂದು ಕಾರ್ಯವನ್ನು ಮಾಡಿದ್ದಾರೆ, ಮಾಡುತ್ತಲಿದ್ದಾರೆ, ಏನು ಮಾಡಬೇಕಾಗಿದೆ, ಇವನ್ನು ತಮ್ಮೆಲ್ಲರಿಗೆ ತಿಳುಹಿಸಬೇಕೆಂದು ಬಯಸುತ್ತೇನೆ.

---

* ಧಾರವಾಡ ಟ್ರೇನಿಂಗ ಕಾಲೇಜದ ವಾದವಿವಾದ ಕೂಟದ ನಿತಿಯಿಂದ ತಾರೀಖು ೩೦–೪-೧೯೪೧ ನೆಯ ದಿನ ಆದ ಭಾಷಣದ ಸಾರಾಂಶವನು ಇಲ್ಲಿ ಕೊಟ್ಟಿದೆ.

ನಮ್ಮ ನಾಡು ಕನ್ನಡ ನಾಡು; ನಮ್ಮ ನಾಡು ಹಿರಿಯ ನಾಡು; ನಮ್ಮ ನಾಡು ಭಾರತದ ವೈಶಿಷ್ಟ್ಯವನ್ನು ನೂತನ ಜಗತ್ತಿಗೆ ತೋರಿಸುತ್ತಿರುವ ಹೆಮ್ಮೆಯ ನಾಡು; ಹಿಂದೂ ಸಂಸ್ಕೃತಿಯಿಂದ ಮಾನವ ಪ್ರಗತಿಯ ಪರಿಪೂರ್ಣ ವಿಕಾಸದಿಂದ ಮೆರೆದದ್ದು ನಮ್ಮ ಕನ್ನಡನಾಡು, ಎಂಬುದನ್ನು ನಮ್ಮ ವೇದ-ಪುರಾಣ ಇತಿಹಾಸಗಳು ಒತ್ತಿ ಹೇಳುತ್ತಲಿವೆ. ಈಗಿನ ಭಾರತದ ಅವಸ್ಥೆಯನ್ನು—ಕನಾಟಕದ ಅವಸ್ಥೆಯನ್ನು-ನಮ್ಮ ಅವಸ್ಥೆಯನ್ನು—ಕಂಡರೆ ಅಂತಃಕರಣವು ಕರಗಿ ನೀರಾಗುವದು. ಇದಕ್ಕೆ ನಮ್ಮ ಅರಿವುಗೇಡಿತನವೇ ಕಾರಣವು. ಜ್ಞಾನ ಜ್ಯೋತಿಯು ಎಂದು ಬೆಳಗಹತ್ತಿತೋ ಅದು ನಮ್ಮ ಬುದ್ದಿಗೆ ಹರಿಯಲಾ ಮಾತಾಗಿದ್ದರೂ ಸಾವಿರಾರು ವರ್ಷಗಳಿಂದ ಸಾವಿರಾರು ಬಗೆಗಳಿಂದ ನಮ್ಮ ಕರ್ನಾಟಕವು – ಭಾರತವು – ವಿಶಿಷ್ಟಭಾರತವು – ವಿಶಾಲಭಾರತವು – ಜ್ಞಾನದ ಬೆಳವಣಿಗೆ ಸಂಸ್ಕೃತಿಗಳ ವರ್ಧನಕ್ಕೆ ಮೂಲಕಾರಣವಾಗಿದೆ. ಪ್ರತಿಯೊಂದ ವಿಧದಲ್ಲಿ ಭಾರತದ ಹೆಸರನ್ನು ಮುಂದೆ ತಂದದ್ದು ನಮ್ಮ ಕನ್ನಡ ನಾಡು. ಈ ಕನ್ನಡ ನಾಡನ್ನು ಪಲವುಂ ನಾಲಿಗೆಯುಳ್ಳವನಿಗೇ ವರ್ಣಿಸಲಿಕ್ಕೆ ಆಗದಿರಲು ನಾನು ಏನು ಹೇಳುವೆನು? ನನ್ನ ನಾಲಿಗೆಯಲ್ಲಿ ಅಂಥ ಶಕ್ತಿ ಇಲ್ಲ; ಬರೆಯಲೂ ಬರುವದಿಲ್ಲ. ಅದನ್ನು ನೆನೆದರೆ ಆನಂದಬಾಷ್ಪಗಳು ತುಂಬಿಬರುವವು; ಕುತಿಗೆಯು ಬಿಗಿಯುವದು. ಆ ಆನಂದಾಶ್ರುಗಳು ಈಗ ದುಃಖಾಶ್ರುಗಳಾಗುತ್ತಲಿವೆ ಇಂತಹ ಕನ್ನಡನಾಡು ಈಗ ಹರಿಹರಿದು ಹತ್ತಿಪ್ಪತ್ತು ಹೋಳಾಗಿದೆ. ಪೂರ್ವದ ವೈಭವ ವಂದಿರದ ಗೋಡೆ, ಕೊತ್ತಳ, ಕಳಸಗಳು ಬಿದ್ದುಹೋಗಿವೆ! ಅಡಗಿ ಹೋಗಿವೆ! ಹೂಳಿಹೋಗಿವೆ! ಅವೆಲ್ಲವನ್ನು ಹೊರಗೆ ತೆಗೆದು ಸರಿಯಾಗಿ ನಮ್ಮ ನಾಡನ್ನು ಕಟ್ಟುವ, ಕಳಸವಿಡುವ, ನಿಜವಾದ ಶಿಲ್ಪಿಗರು ಬೇಕಾಗಿದ್ದಾರೆ.

ಕನ್ನಡ ನಾಡನ್ನು ಹೊಸದಾಗಿ ಒಂದುಗೂಡಿಸಿ ಹೆಮ್ಮೆಯಿಂದ ಕಟ್ಟುವ ಶಿಲ್ಪಿಗರು ನಮಗೆ-ಕನ್ನಡಿಗರಿಗೆ-ಬೇಕಾಗಿರುವಂತೆ ಈ ಭರತಖಂಡಕ್ಕೆ-ನಮ್ಮ ಹಿಂದುಸ್ತಾನಕ್ಕೆ ಬೇಕಾಗಿದ್ದಾರೆ. ಆದುದರಿಂದ ಕನ್ನಡ ನಾಡಿನ ಹಿಂದುಸ್ತಾನದ ಮಹತ್ವವನ್ನು ನಾವು ಮೊದಲು ತಿಳಿಯಬೇಕು. ಈಗ ಒದಗಿರುವ ಅವನತಿ ಅಧೋಗತಿ-ದುರ್ಗತಿಗಳನ್ನೂ ತಿಳಿಯಬೇಕು; ನಮ್ಮ ಗೊತ್ತುಗುರಿಗಳನ್ನು ಅರಿಯಬೇಕು; ಆಶೆ ಆಕಾಂಕ್ಷೆಗಳನ್ನು ಪರಿಭಾವಿಸಬೇಕು. ಆಗ ನಮಗೆ ಬೇಕಾದ ನಾಡಶಿಲ್ಪಿಗರೂ ಅವರ ಸಹಾಯಕರೂ ದೊರೆಯಬಹುದು; ಕಾಣಬಹುದು; ನಮ್ಮೊಳಗಿನವರೇ ಹೊಸದಾಗಿ ರೂಪುಗೊಳ್ಳಬಹುದು; ಬೆಳಗಬಹುದು.

ಗ್ರೀಕರ ಅಲೆಕ್ಸಾಂಡರನು ನಮ್ಮ ದೇಶದ ಪುರುಷೋತ್ತಮರಾಜನ ಮೇಲೆ ಯುದ್ಧ ಹೂಡಿದ ಸಮಯದಲ್ಲಿ ಕೂಡ ನಾಲಂದ ವಿಶ್ವವಿದ್ಯಾನಿಲಯದಲ್ಲಿ ಐದತ್ತು

ಸಾವಿರ ವಿದ್ಯಾರ್ಥಿಗಳು ಕಲಿಯುತ್ತಲಿದ್ದರಂತೆ ಪುಲಿಕೇಶಿ ಮಾಹಾರಾಜನ ಕಾಲದಲ್ಲಿ ಸಾಲಪಟ್ಟಿಕಾ (ಈಗ ಸಾಲೊಟಗಿ ವಿಜಾಪುರಜಿಲ್ಲೆ) ಗ್ರಾಮದಲ್ಲಿ ಹತ್ತೆಂಟು ಸಾವಿರ ವಿದ್ಯಾರ್ಥಿಗಳು ಕನ್ನಡ ಕುಲಗುರುಗಳಲ್ಲಿ—ಭಾರತದ ಪ್ರಾಧ್ಯಾಪಕರಲ್ಲಿ—ಉಪಾಧ್ಯಾಯ-ಮಹೋಪಾಧ್ಯಾಯ-ಮಹಾಮಹೋಪಾಧ್ಯಾಯರಲ್ಲಿ ವಿವಿಧ ದೇಶಗಳ ವಿವಿಧ ಪ್ರಾಂತಗಳ ವಿದ್ಯಾರ್ಥಿಗಳು, ಬಗೆಬಗೆಯ ಶಾಸ್ತ್ರ-ಕಲೆಗಳನ್ನು ಕಲಿತ್ತು—ನಿಜವಾಗಿ ಕಲಿತು ಜ್ಞಾನಜ್ಯೋತಿಯನ್ನು—ಅರಿವಿನ ಬೆಳಕನ್ನು ಕನ್ನಡ ನಾಡಿನ-ಭಾರತದ ಶ್ರೇಷ್ಠತೆಯನ್ನು-ಹಿರಿಮೆಯನ್ನು ಮೇಲ್ಮೆಯನ್ನು ಪೂರ್ವ-ಪಶ್ಚಿಮ-ರಾಷ್ಟ್ರಗಳಿಗೆ-ದೇಶಗಳಿಗೆ-ನಾಡುಗಳಿಗೆ-ಊರುಗಳಿಗೆ ಮನೆಮನೆಗೆ ಮುಟ್ಟಿಸುತ್ತಿದ್ದರು. ಆ ನಮ್ಮ ಕನ್ನಡ ನಾಡು ಆ ನಮ್ಮ ಭಾರತವು ವಿದ್ಯೆ—ಕಲೆ—ಸಂಸ್ಕೃತಿ—ನಾಗರಿಕತೆಗಳನ್ನು ಇಂಥ ವಿಶ್ವವಿದ್ಯಾನಿಲಯಗಳಲ್ಲಿ ರೂಪುಗೊಳಿಸಿ ಬೆಳೆಯಿಸಿ ಒಳದೇಶ ಪರದೇಶಗಳಿಗೆ, ಭೂಭಾಗದ ಮಾನವಜನಾಂಗಕ್ಕೆ, ಒದಗಿಸುತ್ತಿತ್ತು. ಅಂಥ ಭಾಗ್ಯ ನಮ್ಮ ಭಾರತಕ್ಕಿತ್ತು. ನಮ್ಮ ಕನ್ನಡ ನಾಡಿಗಿತ್ತು. ನಮ್ಮ ನಿಮ್ಮ ಹಿರಿಯರಿಗಿತ್ತು!

ಆ ಭಾರತದಲ್ಲಿ—ಆ ಸುವರ್ಣಮಯ ಭಾರತದಲ್ಲಿ-ಆ ಕಸೂರಿಯ ಕನ್ನಡ ನಾಡಿನಲ್ಲಿ ಆ ಶಾಂತಿ-ಪುಷ್ಟಿ-ತುಷ್ಟಿಗಳಿಂದ ಭರಿತವಾದ ನಾಡಿನಲ್ಲಿ ಈಗ ಒದನೆಯು ಕಾಯಿ ಭರಿತವೂ ಸಿಗಲೊಲ್ಲದು. ತಿನ್ನಲಿಕ್ಕೆ ಕೂಳು ಇಲ್ಲ. ಮೈಗೆ ಬಟ್ಟೆ ಇಲ್ಲ. ಭಾರತೀಯ ಯುದ್ಧದಕಾಲದಲ್ಲಿ ಕೌರವ ಪಾಂಡವರ ಬಳಿಕೆಯ ಪೌರಾಣಿಕ ಕಾಲದಲ್ಲಿ ಪಾಶ್ಚಾತ್ಯರ ಈಗಿನ ದೃಷ್ಟಿಯಿಂದ ಆ ನಮ್ಮ ಹಳೆಯ ಕಾಡು ಕಾಲದಲ್ಲಿ ಕೂಡ ಭಾರತದ ಜನಸಂಖ್ಯೆಯು ೧೦೦ ಕೋಟಿಗಿಂತ ಮಿಗಿಲಾಗಿತ್ತೆಂದು ಇತಿಹಾಸ ಸಂಶೋಧಕರು ಹೇಳುವರು. ಕೃಷ್ಣ, ಧರ್ಮ, ದುಯೋರ್ಧನಾದಿಗಳು ನೂರಕ್ಕೆ ಮುಕ್ಕಿದ ವಯಸ್ಸಿನವರಾಗಿದ್ದರು. ಇಷ್ಟೊಂದು ವೀರ್ಯ-ತೇಜಸ್ಸು-ಸತ್ವಗಳು ಆಗ ಇದ್ದವು. ಸರ್ವ ವಿಧ ಸುಸಂಸ್ಕೃತಿಯಿಂದ ಜೀವನ ಸಾಗಿಸಲು ನೂರು ಕೋಟಿ ಜನರಿಗೆ ಅನ್ನ-ವಸ್ತ್ರ-ಶಕ್ತಿಗಳನ್ನು ಈಯಲು ನಮ್ಮ ಭಾರತವು ಸಮರ್ಥವಿತ್ತು. ಆ ಸುವರ್ಣಭೂಮಿಗೆ ಸಾಮ್ರಾಟ್‌ರಾಗುವ ಪಾಂಡವರಿಗೆ ಆಪತ್ಕಾಲದಲ್ಲಿ ಆಶ್ರಯವಿತ್ತುದು ನಮ್ಮ ಕನ್ನಡ ನಾಡು. ರಾಮನಿಗೆ ಹನುಮಂತನಂಥ ಏಕನಿಷ್ಠ ಭಂಟನು ದೊರಕಿದ್ದು ನಮ್ಮ ಕನ್ನಡ ನಾಡಿನಲ್ಲಿಯೇ! ಆದರೆ! ಆದರೆ! ಆ ನವಖಂಡ ಪೃಥ್ವಿಯಲ್ಲಿ ಭಾಗ್ಯದಿಂದ ಮೆರೆದ ಭಾರತೀಯರು ಈಗ ತಲೆ ಕೆಳಗೆ ಮಾಡಿ ನಡೆಯಬೇಕಾಗಿದೆ. ಆ ನಮ್ಮ ದರ್ಪ ಆ ನಮ್ಮ ಸದ್ಗುಣ ಆ ನಮ್ಮ ಧರ್ಮ-ಕರ್ಮ-ಯೋಗ-ಭೋಗ-ತ್ಯಾಗಗಳು ಈಗ ಯಾವ ಪರಿಸ್ಥಿತಿಯಲ್ಲಿವೆ? ತಾನು ಬಾಳಿ ಪರರನ್ನು ಬಾಳಗೊಡುವದು ನಮ್ಮ ಸಂಸ್ಕೃತಿಯ ಮೂಲಮಂತ್ರವು.

ಈ ಮಹಾಮಂತ್ರವನ್ನು ಜಪಿಸುತ್ತ ನಮ್ಮ ಪೂರ್ವಜರು ರಾಷ್ಟ್ರಕಾರ್ಯಗಳನ್ನ
ಮಾಡಿದರು. ಎಂಗಿಲಾದ ನಾಡು ಕಟ್ಟಿದರು. ಶತಂಜೀವ.... ಎಂಬು
ನಮ್ಮ ಹಿರಿಯರ ಆಶೀರ್ವಾದವು. ಈಗಾದರೋ ನಮ್ಮ ಆಯುಷ್ಯದ ಸರಾಸರಿಯ
೨೫ಕ್ಕೆ ಒಂದಿದೆ. ಆ ತಿನಿಸು, ಆ ಉಣಿಸು, ಆ ಶಕ್ತಿ, ಆ ಹೈನ ಹಾಲು, ಎಲ್ಲ
ಅಡಗಿಹೋಗಿವೆ. ನಮ್ಮ ಬಾಳುವೆಯು ನೊಣ ನೊರಜುಗಳಿಗಿಂತ ಕಡಿ
ದಾಗಿದೆ. ಇಂತಹ ಪೌರುಷವಿಲ್ಲದ ಬಾಳುವೆಯನ್ನು ತಕ್ಕೊಂಡು ಏ
ಮಾಡಬೇಕು? ಹುಟ್ಟಿದ ತಪ್ಪಿಗೆ ಬದುಕುತ್ತೇವೆ! ಬದುಕಿರುವ ತಪ್ಪಿಗೆ ಬಾ
ಸಾಗಿಸಿದ್ದೇವೆ!

ಕನ್ನಡ ನಾಡಿನ— ಭಾರತದ— ಗತವೈಭವವನ್ನು ಅಗತವೈಭವವನ್ನಾ
ಮಾಡಲು ಪ್ರಯತ್ನಗಳು ನಡೆದಿವೆ. ಈ ಸಮಯದಲ್ಲಿ ಕನ್ನಡಿಗರು ನವ
ಉಳಿದ ಬಂಧುಗಳಿಂದ ಹಿಂದೆ ಬೀಳುವದುಂಟೇ? ನೇಪಾಳದಿಂದ ಮೊದಲುಗೊಂ
ಜಾವಾ ಸುಮಾತ್ರಾಗಳ ವರೆಗೆ ಕನ್ನಡಿಗರು ತಮ್ಮ ಸಾಮ್ರಾಜ್ಯವನ್ನು ಕ
ಅನೇಕ ಶತಮಾನಗಳವರೆಗೆ ಉಳಿ ಬಾಳುತ್ತಲಿದ್ದುದಕ್ಕೆ ಇತಿಹಾಸವೇ ಸಾ
ಯಾಗಿದೆ. ೧೬ನೆಯ ಶತಮಾನದ ಮಧ್ಯದವರೆಗೂ ಕನ್ನಡಿಗರ ಸಾಮ್ರಾಜ್ಯ
ವಿದ್ಯೆಯೂ ಕಲೆಗಳೂ ಮೆರೆಯುತ್ತಲಿದ್ದುವು. ವಿಜಯನಗರದ ಅಧಃಪತನದಿ
ಇಂದಿನವರೆಗೆ ಒಂದೇಸವನೆ ೪೦೦ ವರ್ಷಗಳ ಕಾಲವು ನಮಗೆ ಕರಿಗಾಲ–ಬಿಳಿಗಾ
ವಾಗಿ ಗಂಟುಬಿದ್ದಿದೆ. ನಮಗೆ ತಲೆಯೆತ್ತಲು ಅವಕಾಶವಿಲ್ಲದಾಗಿದೆ. ಕನ್ನ
ನಾಡಿನ ಹೆಸರು ಸಹ ಇತ್ತೀಚೆಯ ಇತಿಹಾಸದಲ್ಲಿ ಕಾಣದಾಯಿತು. ಅಕರ್ನಾ
ನವಾಬನ ಕಾಲದ ಕರ್ನಾಟಕವು ಉಳಿಯಲಿಲ್ಲ. ಕಿತ್ತೂರ–ಚನ್ನಮ್ಮ ಬೆಳವಡಿ
ಮಲ್ಲಮ್ಮರ ಕನ್ನಡ ನಾಡು ಉಳಿಯಲಿಲ್ಲ. ಮರಾಠಿ, ತೆಲಗು, ತಮಿಳು, ಉದ
ಗಳ ಕಾಳಗಕ್ಕೆ ನಮ್ಮ ನಾಡು ಕಣವಾಯಿತು. ಪೇಶಾವರ–ಅಟಕಗಳಿಂ
ತಂಜಾವರದವರೆಗೆ ಮಹಾರಾಷ್ಟ್ರವೆಂದು ಮರಾಠಿಗರು ಸಾಧಿಸಹತ್ತಿದರ
ಉತ್ತರ ಕರ್ನಾಟಕವು ದಕ್ಷಿಣ ಮಹಾರಾಷ್ಟ್ರವಾಯಿತು. ನಮ್ಮ ನಾಡಿನ
ಮರಾಠಿ ಸರದಾರರು ಸಂಸ್ಥಾನಗಳನ್ನು ಕಟ್ಟಿಕೊಂಡರು ರಾಜಭಾಷೆಯೂ
ಕಾಗದಪತ್ರಗಳ ಭಾಷೆಯೂ ಮರಾಠಿಯಾಗಿಬಿಟ್ಟವು. ಕನ್ನಡಿಗರಿಗೆ ತಾ
ಕನ್ನಡಿಗರೆಂದು ಹೇಳಿಕೊಳ್ಳುವದು ಕೂಡ ಅಪಮಾನಾಸ್ಪದವೆನಿಸಹತ್ತಿತ
ಕರ್ನಾಟಕತ್ವದ–ಕನ್ನಡತನದ ಅರಿವು ಉಳಿಯಲಿಲ್ಲ. ಇಂಗ್ಲಿಷರ ಆಳಿಕೆಯ
ಕನ್ನಡ ನಾಡಿನ ಬಹುಭಾಗವು ಇವರ ವಶಕ್ಕೆ ಬಂದರೂ ಅದು ಮುಂಬಯಿ
ಮದ್ರಾಸ, ಕೊಡಗು ಈ ಮೂರು ಪ್ರಾಂತಗಳಲ್ಲಿ ಹರಿದು ಹಂಚಿಹೋಯಿತ
ಇದರಿಂದುಗೂಡಲಿಲ್ಲ. ಸನ್ ೧೯೨೦ರಲ್ಲಿ ಸಾರ್ವಜನಿಕ ಶಿಕ್ಷಣಕ್ಕೆ ಆರಂ

ನಾಯಿತು. ಆಗ ನಮ್ಮಲ್ಲಿ ಕನ್ನಡ ಶಾಲೆಗಳೇ ಇರಲಿಲ್ಲ. ನಮ್ಮ ಸಾಮಾನ್ಯ ಜನರ ವಿಚಾರಕ್ರಾಂತಿಗೆ ಅಸ್ಪದವಿರಲಿಲ್ಲ. ಶಿಕ್ಷಣದ ಕೇಂದ್ರ ಅಧಿಕಾರವು ಮುಂಬಯಿ ಪುಣೆಗಳಲ್ಲಿ ಉಳಿಯಿತು.

ಇಂತಹ ದುರವಸ್ಥೆಯಲ್ಲಿ, ಕನ್ನಡವು ಸಾಯುತ್ತಿರುವ ಕಾಲದಲ್ಲಿ ಅಮೃತ ದಂಥ ದಿವ್ಯ ಔಷಧರೂಪವಾಗಿ ಟ್ರೇನಿಂಗ ಕಾಲೇಜವು ಶಿಕ್ಷಕರ ಶಿಕ್ಷಣಾಲಯವು ದೊರಕಿತು. ಶ್ರೀಮಾನ್ ತುರಮುರಿ ಗಂಗಾಧರಪ್ಪನವರು, ಶ್ರೀಮಾನ್ ಧಾರವಾಡ ಚೆನಬಸಪ್ಪನವರು, ಶ್ರೀಮಾನ್ ವೆಂಕಟ ರಂಗೋ ಕಟ್ಟಿಯವರು, ಮೊದಲಾದ ಮಹನೀಯರು ಮುಂದೆ ಬಂದರು. ಈ ಟ್ರೇನಿಂಗ ಸಂಸ್ಥೆಯು ನಾಲಂದ ಗುರುಕುಲ ದಂತೆ ಏಕೆ ಅದಕ್ಕೂ ಹೆಚ್ಚಿನದೆಂದು ನಾನು ಹೇಳುವೆನು. ೧೮೮೨ ರಿಂದ ೧೯೫೩ರ ವರಗೆ ಏರಿಕೆಯ ಅಳತೆಯಿಂದಲೂ ಮುಂದೆ ೧೨ ವರ್ಷ ಸಂಕ್ಷೇಪವಾಗಿಯೂ ಮತ್ತೆ ಈಗ ಬೆಳೆಯುತ್ತಲೂ ಇರುವದು. ಅಖಂಡ ಕರ್ನಾಟಕದ ಕಲ್ಪನೆಯಿಂದ ಇಲ್ಲಿ ಕಲಿತ ನಮ್ಮ ಪ್ರಾಥಮಿಕ ಶಿಕ್ಷಕರು ನಮ್ಮ ನಾಡಿಗೆ ಮಾಡಿದ ಉಪಕಾರವು ಅಷ್ಟಿಷ್ಟಲ್ಲ. **ಇವರೇ ನಮ್ಮ ನಾಡಿನ ನಿಜವಾದ ಶಿಲ್ಪಿಗರು.**

ಧಾರವಾಡದ ಶಿಕ್ಷಕರ ಶಿಕ್ಷಣಾಲಯದಲ್ಲಿ ಶಿಕ್ಷಣ ಪಡೆದು ಉತ್ತರ ಕರ್ನಾಟಕದ ತುಂಬ ಚದರಿಹೋಗಿ ಕನ್ನಡತನವನ್ನು ಬೆಳೆಯಿಸುತ್ತಲಿರುವ ನಮ್ಮ ಗುರುಗಳಷ್ಟು ಶಾಂತ-ದಾಂತ-ಸಂತುಷ್ಟ ಜೀವಿಗಳನ್ನು ನಾನು ಮತ್ತೆಲ್ಲಿಯೂ ಕಾಣೆನು. ಇವರಲ್ಲಿ ಕರ್ತವ್ಯನಿಷ್ಠರು ಹೇರಳವಾಗಿರುವರು. ಹಲವರು ತಮ್ಮ ಹೊಟ್ಟೆಯ ಉದ್ಯೋಗ ಮಾಡಿಕೊಂಡು ಉಳಿದ ವೇಳೆಯನ್ನು ವ್ಯರ್ಥಕಳೆಯದೆ ಹಿರಿಯ ಹೊತ್ತಿಗೆಗಳನ್ನು ಓದಿರುವರು. ಅನೇಕರು ಲೇಖಕರೂ, ಕವಿಗಳೂ, ಗಾಯಕರೂ, ಗಮಕಿಗಳೂ ಆಗಿರುವರು. ಕರ್ನಾಟದ ಆದ್ಯರಾಷ್ಟ್ರೀಯ ಕವಿಗಳಾದ ಶ್ರೀ. ಬಾಳಾಚಾರ್ಯ ಸಕ್ಕರಿ(ಶಾಂತಕವಿ)ಅವರು ಇಲ್ಲಿಯೇ ಕಲಿತರು. ಕಾದಂಬರಿಕಾರರಾದ ಶ್ರೀ. ಗಳಗನಾಥರು ಅಧ್ಯಯನಮಾಡಿದ್ದು ಇಲ್ಲಿಯೇ. ಹಿಂದಕ್ಕೆ ವಿಜಾಪುರದ ಕಲೆಕ್ಟರರಾಗಿದ್ದ ಶ್ರೀಮಾನ್ ನಾಯಿಕರು ಇಲ್ಲಿಯೇ ಓದಿಕೊಂಡಿದ್ದರು. ಕನ್ನಡಕ್ಕೆ ಅಪರಿಮಿತವಾಗಿ ಸೇವೆಯನ್ನು ಸಲ್ಲಿಸುತ್ತಿರುವ ಪಂಡಿತ ಪೂಜಾರರೂ ಶ್ರೀಮಾನ್ ಕುರಡಿ ನಾರಾಯಣರಾಯರೂ ಇಲ್ಲಿಯೇ ಅಧ್ಯಯನ ಅಧ್ಯಾಪನಗಳನ್ನು ಮಾಡಿದರು. ಇಂತಹ ಉದ್ಧಾರಕರವಾದ-ಸ್ಫೂರ್ತಿದಾಯಕವಾದ ಟ್ರೇನಿಂಗ ಸಂಸ್ಥೆಯ ಹಿರಿಮೆಯು ಹೆಚ್ಚಿನದಾಗಿದೆ. ಇಲ್ಲಿ ಕಲಿತ ಶಿಕ್ಷಕರ ಬಳಿಯಲ್ಲಿ ಕಲಿತು ಈಗ ಮಂಡಾಳುಗಳೆನ್ನಿಸಿಕೊಳ್ಳುವರಲ್ಲಿ ಕನ್ನಡನಾಡಿನ ಏಕೀಕರಣ-ಪ್ರಾಂತೀಕರಣ ಮಂದಿರಗಳ ಆಶೆಗಳು ಒಡಮೂಡಿದ್ದು ಈ ಪ್ರಾಥಮಿಕ ಶಿಕ್ಷಕರನ್ನು-ಈ ನಿಜವಾದ ನಾಡಶಿಲ್ಪಿಗರನ್ನು ನೋಡಿಯೇ. ಪ್ರಾಥಮಿಕ ಶಿಕ್ಷಕರಿಗೆ ಅನೇಕ ತೊಂದರೆಗಳಿರುವ

ವೆಂಬುದು ನನಗೆ ಗೊತ್ತಿದೆ. ಅವರು ತೀರ ಕಡಿಮೆ ಸಂಬಳದಲ್ಲಿ ಹಳ್ಳಿಯಲ್ಲಿ ಮೈಮುರಿ ದುಡಿಯಬೇಕಾಗುತ್ತದೆ. ಅನೇಕ ವಿಷಯಗಳನ್ನು ಕಲಿಸಬೇಕಾಗುತ್ತದೆ. ಅಧಿಕಾರಿಗಳ ಆಶೆ, ಒಲವುಗಳಿಗೆ ಅನುಸರಿಸಿ ಕಾಲಮಾನದಂತೆ ದುಡಿಮೆಯಲ್ಲಿ ತಿದ್ದುಪಾಟುಮಾಡಿಕೊಳ್ಳಬೇಕಾಗುತ್ತಲಿದೆ. ಜ್ಞಾನವರ್ಧಕ ಸಾಧನಗಳು ಅವರಿಗೆ ದುರ್ಲಭ. ಹೀಗಿದ್ದರೂ ಹೊಸಗನ್ನಡದ ಶಿಲ್ಪಿಗರು ಅವರೇ ಅಲ್ಲದೆ ಮತ್ತಾರೂ ನನಗೆ ಅಷ್ಟೊಂದು ಯೋಗ್ಯರಾಗಿ ತೋರರು. ಹಳೆಯಕನ್ನಡ ನಡುಗನ್ನಡಗಳಿಂದ ಯೋಗ್ಯವಿದ್ದುದನ್ನು ಆರಿಸಿಕೊಂಡು ಹಳ್ಳಿಗರಿಗೆ ಕೂಡ ತಿಳಿಯುವಂತಹ ಮಾತಿನಲ್ಲಿ ಬರೆಹದಲ್ಲಿ ಹೊಸಗನ್ನಡದಲ್ಲಿ–ತಿಳಿಗನ್ನಡದಲ್ಲಿ–ಹೂಗನ್ನಡದಲ್ಲಿ ಹೇಳಲು ಪ್ರಾಥಮಿಕ ಶಿಕ್ಷಕರೇ ಸಮರ್ಥರು. ಕನ್ನಡಿಗರಲ್ಲಿ ಕನ್ನಡತನವನ್ನು ಇನ್ನಿಷ್ಟು ತಂದುಕೊಡಲು ಈ ನಾಡ ಶಿಲ್ಪಿಗರಿಗೆ ಬೇಡಿಕೊಳ್ಳುತ್ತೇನೆ.

ಕನ್ನಡಿಗರು ನಿಜವಾಗಿಯೂ ವೀರರು, ಕೆಚ್ಚೆದೆಯವರು, ಜಾಣರು. ಇವರಿಗೆ ಹಿಂದಿನ ಅರಿವು ಸಾಕಷ್ಟು ಇಲ್ಲದಾಗಿದೆ. ಇಂದಿನ ತೊಂದರೆ ತೊಡಕುಗಳು ತಿಳಿಯದಾಗಿವೆ. ಹೊಳೆಯದಾಗಿವೆ. ತಮ್ಮ ಭಾಷೆಯ ರುಚಿಯು ಗೊತ್ತಾಗದಾಗಿದೆ. ಹೋಗುತ್ತಲಿದೆ, ಕೈಬಿಡುತಿದೆ, ಕನ್ನಡನಾಡು ! ಸಾಯುತಿದೆ ನಮ್ಮ ಕನ್ನಡನುಡಿಯು ! ಜಗಜಟ್ಟಿಗಳಾದ ಕನ್ನಡಿಗರು ಕಡ್ಡೀ ಖಂಡೇರಾಯರಾಗುತ್ತಲಿದ್ದಾರೆ ! ಇದಕ್ಕೆ ಉಪಾಯವೇನು ? ಏನಾದರೂ ಮಾಡಲೇಬೇಕಲ್ಲವೆ. ಅದನ್ನು ಯಾರು ಮಾಡಬೇಕು ? ಪಟ್ಟಣದಲ್ಲಿ ಯಾರಾದರೂ ಸಿಗಬಹುದು. ಆದರೆ ಹಳ್ಳಿಯಲ್ಲಿ ಯಾರು ಸಿಗಬೇಕು ? " ಹಳ್ಳಿಯೆಂದರೆ ತಿಪ್ಪೆ, ಹಳ್ಳಿಯೆಂದರೆ ಅಜ್ಞಾನದ ಮೊಟ್ಟೆ, ಹೀಗೆ ಅನೇಕರು ಹೇಳುತ್ತಲಿರುವಾಗ ಇಂತಹ ಹಳ್ಳಿಯಲ್ಲಿ ಕೆಲಸಮಾಡುವದು ಎಷ್ಟು ಕಠಿಣವಿದೆಯೆಂಬುದು ಅನುಭವದಿಂದ ತಿಳಿಯಬೇಕಲ್ಲದೆ ಬರೆಹದಿಂದ ಹೇಳಲಿಕ್ಕೆ ಆಗದು. ನನ್ನ ಇಂದಿನವರೆಗಿನ ಅನುಭವದಿಂದ ಹೇಳುವದಾದರೆ ಹಳ್ಳಿಯಲ್ಲಿ ಕನ್ನಡದ ಅಭಿಮಾನವು ಬೆಳೆದು ಕನ್ನಡನಾಡು ಹೊಂದಿಕೆಯಾಗಿ ಮೆರೆಯುವಂತಾಗಬೇಕಾದರೆ ಈ ಪ್ರಾಥಮಿಕ ಶಿಕ್ಷಕರ ಸಹಾಯವು ಇಲ್ಲದೆ ಕೆಲಸವಾಗದು. ರೊಕ್ಕಕೊಡದೆ ಕೆಲಸಮಾಡಿಸಿಕೊಳ್ಳಬೇಕಾದರೆ ಯಾರಿಗೆ ಹೇಳಬೇಕು ? ಪ್ರಾಥಮಿಕ ಶಿಕ್ಷಕರಿಗೆ. ಈ ತರದ ಪ್ರವೃತ್ತಿಯು ಇತ್ತೀಚೆಗೆ ಒಡಮೂಡಿ ಬೆಳೆಯುತ್ತಿರುವದು ನನಗೆ ಗೊತ್ತಿದೆ. ನಾನು ಇಂತಹ ದುಡಿಮೆಯ ಕೆಲಸಗಳನ್ನು ಪ್ರಾಥಮಿಕ ಶಿಕ್ಷಕರ ಮೇಲೆ ಹೇರದೆ ಅವರು ಈಗ ಮಾಡುತ್ತಲಿರುವ–ಮಾಡಿರುವ ಕಾರ್ಯಗಳಲ್ಲಿಯೇ ಇನ್ನಿಷ್ಟು ವ್ಯವಸ್ಥೆಗೊಳಿಸಬೇಕೆಂದು ಸೂಚಿಸುವೆನು. ನಾನು ಹೇಳುವ ಕೆಲಸಗಳನ್ನು ಪ್ರಾಥಮಿಕ ಶಿಕ್ಷಕರು ಸ್ವತಃ

ಮಾಡಲೇಬೇಕೆಂದು ಒತ್ತಾಯದ ನುಡಿಯು ನೆನ್ನದಿಲ್ಲ. ಯೋಗ್ಯ ಜನರನ್ನೆ, ಹಳ್ಳಿಯ ಜನರನ್ನೆ ಮುಂದೆಮಾಡಿ ತಾನು ಸೂತ್ರಚಾಲಕ-ಮಾಂತ್ರಿಕ-ದಿಗ್ದರ್ಶಕ ನಾಗಿರಬೇಕೆಂದು ನನ್ನ ಇಚ್ಛೆ. ಅಂತಹ ಕೆಲವು ಸೂಚನೆಗಳನ್ನು ಇಲ್ಲಿ ಕೊಡುವೆನು.

೧. **ಗರಡೀ ಮನೆಗಳ ಪ್ರಸಾರ ಮಾಡಬೇಕು**— ಈ ಕೆಲಸಕ್ಕೆ ಯಾರಿಂದಲೂ ತೊಂದರೆ ಬರುವಂತಿಲ್ಲ. ಎಂಥ ಹಳ್ಳಿಯಲ್ಲಿ ಕೂಡ ನಾಲ್ಕಾರು ಹುರುಪಿನ ಹುಡುಗರು ಈ ಕೆಲಸಕ್ಕೆ ಮುಂದಾಗಿ ಬರುವರು. ಸ್ಥಳದ ಕೊರತೆ ಇಲ್ಲ. ಹನುಮಪ್ಪನ ಗುಡಿಯಂತೂ ಇದ್ದೇ ಇರುವದು. ಶಾರೀರ ಬಲವಿಲ್ಲದೆ ಮನೋಧೈರ್ಯ ವುಳಿಯದೆಂಬುದನ್ನು ಹೇಳಲು ಬಹಳ ಶ್ರಮ-ವೇಳೆ-ವಿದ್ವತ್ತೆಗಳು ಬೇಕಾಗುವದಿಲ್ಲ. ನಮ್ಮ ಭಾರತದಲ್ಲಿ ಬಲವರ್ಧನದ ಯುದ್ದೋಪಯುಕ್ತ ಸಾಧನ ಗಳು ಇಲ್ಲವಾಗಿವೆ. ಹಳೆಯ ಗರಡಿಯ ಮನೆಗಳು ಗವಿಗಳಂತಾಗಿ ಕೂಡ ಈಗ ಉಳಿದಿಲ್ಲ. ಬೈತಕಸಾಮು, ಕುಸ್ತಿ ಇಷ್ಟಾದರೂ ಉಳಿದರೆ ನಮ್ಮ ಮುಂದಿನ ಎಲ್ಲ ಆಶೆಗಳಿಗೆ ಅಲ್ಪಸ್ವಲ್ಪ ಆಸ್ಪದ ಉಳಿದೀತು.

೨. **ಪ್ರಾಥಮಿಕ ಶಿಕ್ಷಕರು ಶೀಲವಂತರಾಗಬೇಕು**— ಹಳ್ಳಿಯ ಜನರಲ್ಲಿ ಆದರ್ಶರಾದವರು ಪ್ರಾಥಮಿಕ ಶಿಕ್ಷಕರೇ ಸರಿ. ಅಲ್ಲಿ ಓದು ಬರೆಹ ಬಾರದವರು ೧೦೦ ಕ್ಕೆ ೯೯ ರಷ್ಟು ಇರುವರು. ಶೀಲವಂತರಾಗಬೇಕೆಂದರೆ ಮಡಿವಾಡ ಬೇಕೆಂದು ಅಲ್ಲ, ಮುಟ್ಟೀ ಮುಟ್ಟೀ ಎಂದು ಹಾರಾಡುವದಲ್ಲ. ಅಂತರಂಗಶುದ್ಧಿ-ಸದಾಚರಣೆಗಳು ಬೇಕು. ಶ್ರೀ. ಬಸವಣ್ಣನವರು ಹೇಳುವಂತೆ " ಕಳಬೇಡ-ಕೊಲಬೇಡ ಹುಸಿಯನುಡಿಯಲು ಬೇಡ ಆರ ಹಳಿಯಲು ಬೇಡ." ಹೀಗೆ ಇದ್ದರೆ ಸಾಕು. ಬಾಲ-ಬಾಲಿಕೆಯರು ಅನುಕರಣ ಪ್ರಿಯರು. ಆದುದರಿಂದ ಶಿಕ್ಷಕರು ಶೀಲವಂತರಾದರೆ ಕನ್ನಡ ನಾಡು ಒಹು ಬೇಗ ಕಮ್ಮತ್ತಾದನಾಡು ಆಗುವದರಲ್ಲಿ ಸಂಶಯವೇನಿದೆ?

೩. **ಕನ್ನಡದ ರುಚಿ ತೋರಿಸಬೇಕು**— ಪ್ರಾಥಮಿಕ ಶಿಕ್ಷಕರಿಗೆ ಹಣದ ಕೊರತೆ ಇರುವದೆಂಬುದು ಎಲ್ಲರಿಗೂ ಗೊತ್ತಿದೆ. ಅವರಿಗೆ ಈಗ ಗದ್ಯಪದ್ಯಗಳ ಶಿಕ್ಷಣವಾದರೂ ಕಡಿಮೆಯಾಗುತ್ತಲಿದೆಯಂತೆ. ಹೇಳಲಿಕ್ಕೆ ಬಾರದ ಇನ್ನೂ ಅನೇಕ ತೊಂದರೆಗಳುಂಟು. ಆದರೂ ಕೂಡ ಲಕ್ಷ್ಮೀಶನ-ಜೈಮಿನಿಭಾರತ, ಕುಮಾರ-ವ್ಯಾಸನ-ಭಾರತ, ಬಸವಣ್ಣನವರ-ವಚನ, ಸರ್ವಜ್ಞನ-ವಚನ ಮೊದಲಾದವುಗಳನ್ನು ಸಂಗ್ರಹಿಸಿ ತಾನು ಓದುತ್ತ, ಕೇಳಲು ಬಂದ ನೆರೆಹೊರೆಯವರಿಗೆ ಕೂಡ ತುಸತುಸ ಓದಿ ತೋರಿಸುತ್ತಲಿದ್ದರೆ, ಕನ್ನಡಿಗರು ಒಂದುಗೂಡಲು, ನಮ್ಮ ಒಡಕು-ತೊಡಕು ಸಿಟ್ಟು-ಸಿಡುಕುಗಳು ದೂರಾಗಲು, ತುಂಬ ಅನುಕೂಲವಾಗುವದು. ರಾಜಭಾಷೆಯೆಂದು ಇಂಗ್ಲೀಷವೂ ರಾಷ್ಟ್ರಭಾಷೆಯೆಂದು ಹಿಂದುಸ್ತಾನಿಯೂ ದೇವಭಾಷೆಯೆಂದು ಸಂಸ್ಕೃತವೂ ನೆರೆಯ ಭಾಷೆ, ಹಿರಿಯಭಾಷೆ, ವ್ಯಾಪಾರದ ಭಾಷೆ, ಎಂದು ಮರಾಠಿ ತೆಲಗು ತಮಿಳುಗಳೂ ನಮ್ಮನ್ನು ಕಾಡುತ್ತಲಿವೆ!

ಅಯ್ಯಯ್ಯೋ, ಸಾಯುತ್ತಲಿದೆಯೋ ನಮ್ಮ ಕನ್ನಡ ! ನಮ್ಮ ಕನ್ನಡ !! ಇಂತಹ ಕಾಲದಲ್ಲಿ ಕನ್ನಡದಲ್ಲಿ **ಹರ** ಬರೆಯುವನು **ಹರಿ** ತಿರಿಯುವನು ಕನ್ನಡವೇ ಹಿರಿಯ ಭಾಷೆ ಎಂದು **ಹಳ್ಳಿಗರಿಗೆ** ತಿಳಿಸಬೇಕಾದರೆ, ಚಿಕ್ಕ ಬಾಲಕರಲ್ಲಿ ಮನದಟ್ಟಾಗಿ ಮೂಡಿಸಬೇಕಾದರೆ, ಪ್ರಾಥಮಿಕ ಶಿಕ್ಷಕರ ಹೊರತು ಮತ್ತಾರು ಸಮರ್ಥರು ಇದ್ದಾರೆ ? ನೀವೇ ಹೇಳಿರಿ.

ಈಗ ಭಾರತದಲ್ಲಿ ತುಸ ಬೆಳಕು ಕಾಣು ಹತ್ತಿದೆ ! ನಾಲ್ವತ್ತು ಕೋಟಿ ಜನರಲ್ಲಿ ನಾಲ್ಕಾರು ಜನರು ಮಹಾಪುರುಷರಿದ್ದಾರೆ. ಸ್ವತಂತ್ರ ಭಾರತವು– ಸ್ವರಾಜ್ಯ ಸುರಾಜ್ಯಗಳ ಭಾರತವು ಪ್ರಬಲವಾಗಿರಬೇಕಾದರೆ ಭಾಷಾನುಗುಣವಾಗಿ ಪ್ರಾಂತ ರಚನೆಯಾಗಬೇಕೆಂಬುದು ಸ್ಪಷ್ಟವಿದೆ. ಈಗ ಮರಾಠಿ, ಬಂಗಾಲಿ, ಉರಿಯಾ, ಹಿಂದಿ, ತೆಲಗು, ತಮಿಳು ಮೊದಲಾದ ಭಾಷೆಗಳಿಗೆ ಸಮರ್ಥರಾದ ಮುಂದಾಳು ಗಳು ದೊರೆತಿದ್ದಾರೆ. ಅವರು ಈಗಿನ ರಾಜಕಾರಣಗಳಲ್ಲಿಯೂ ಅಗ್ರಗಣ್ಯರಾಗಿ ದ್ದಾರೆ. ಅಂತಹ ಭಾಗ್ಯವು ಕನ್ನಡಕ್ಕೆಲ್ಲಿದೆ? ಈಗಿನ ಮುಂದಾಳುಗಳಲ್ಲಿ– ಭಾರತದ ಮುಂದಾಳುಗಳಲ್ಲಿ-ಐದಾರು ಜನರನ್ನು ಆರಿಸಿ ತೆಗೆದರೆ, ಅದರಲ್ಲಿ ಕನ್ನಡಿಗರು ಬರುವದುಂಟೇ ? ಇಲ್ಲ ; ಇಲ್ಲಿಲ್ಲ. ಈಗಿನ ವ್ಹಾಯಿಸರಾಯರ ಕಾರ್ಯಕಾರಿ ಮಂಡಲದಲ್ಲಿಯೂ ಭಾರತ ಸಂರಕ್ಷಕ ಸಮಿತಿಯಲ್ಲಿಯೂ ಕನ್ನಡಿಗರಾದವರು ಯಾರಿದ್ದಾರೆ ? ಹೀಗೆಂದ ಮಾತ್ರಕ್ಕೆ ನಮ್ಮಲ್ಲಿ ನಾಡಿನ ಉನ್ನತಿಗಾಗಿ ಪ್ರಯತ್ನಿಸು ವಂಥವರು ಯಾರೂ ಇಲ್ಲವೆಂತಲ್ಲ. ಇದ್ದಾರೆ. ಆದರೆ ಅವರ ಬೆಳಕು ನಕ್ಷತ್ರದಂತೆ ಇದೆ. ನಮಗೆ ಸೂರ್ಯನಂತೆ ಬೆಳಗುತ್ತ ಹೊಳೆಯುವ ಮುಂದಾಳುವು ಬೇಕಾ-ಗಿದ್ದಾನೆ. ಇಂತಹ ಮುಂದಾಳುವಿನ ನಿರ್ಮಾಣಕರು ನಮ್ಮ ಪ್ರಾಥಮಿಕ ಶಿಕ್ಷಕರು. ಭಾರತದ ವಿಶಾಲವಾದ–ದೇದೀಪ್ಯಮಾನವಾದ ಭವನದಲ್ಲಿ ಕನ್ನಡದ ಸಡುಮನೆಯು ಕತ್ತಲೆಯಿಂದ ಕವಿದಿದೆ. ಹಿಂದೆ ಹೀಗಿದ್ದಿಲ್ಲ. ಮುಂದೆ ಹೀಗೆಯೇ ಇರುವದೆಂದು ಹೇಳುವ ಹೇಡಿಗಳು ನಮ್ಮಲ್ಲಿ ಇಲ್ಲವೇ ಇಲ್ಲ. ನಾವೆಲ್ಲರೂ ಮನಸ್ಸು ಮಾಡಿದರೆ ಕತ್ತಲೆಯು ಹೆಸರುಳಿಸದಂಥ ದೀಪವು ನಮ್ಮ ನಾಡಿನಲ್ಲಿ ಹುಟ್ಟಬಹುದು. ದೀಪವಿಷ್ಟೇ ಏಕೆ? ಎಂಜು ಹುಟ್ಟಬಹುದು ! ದಿವ್ಯಜ್ಯೋತಿ ಹುಟ್ಟಬಹುದು ! ಬ್ರಹ್ಮಾಂಡವನ್ನೇ ಬೆಳಗಬಹುದು. ಇಂತಹ ದಿವ್ಯ ಜ್ಯೋತಿಯು ಹುಟ್ಟಲಿ! ಇಂತಹ ಮುಂದಾಳುವು ನಮಗೆ ಬೇಗನೆ ದೊರೆಯಲಿ! ಬಾಲರೂಪದಲ್ಲಿ ಅಡಗಿರುವ ಇಂತಹ ಬಹುಜನ ಮುಂದಾಳುಗಳನ್ನು ನಮಗೆ ಪ್ರಾಥಮಿಕ ಶಿಕ್ಷಕರು ಒದಗಿಸಿಕೊಡಲಿ.

ಈ ಹೊಣೆಯನ್ನು ಅರಿತುಕೊಂಡು ಪ್ರಾಥಮಿಕ ಶಿಕ್ಷಕರು ತಮ್ಮ ಪವಿತ್ರ ವಾದ ಹೋರೆಯನ್ನು ಸಾಗಿಸಿ ನಾಡಶಿಲ್ಪಿಗರೆಂಬ ತಮ್ಮ ಹೆಸರನ್ನು ಸಾರ್ಥಕ ಗೊಳಿಸಬೇಕೆಂದು ನಾನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಕನ್ನಡ ನಾಡಿಗೆ ಗೆಲುವಾಗಲಿ।

ಪತ್ರಗಳ ಮುಖ್ಯಾಂಶಗಳು

ಕರಗಾವಿ— (ಬೆಳಗಾವಿ) ಗ್ರಾಮಸುಧಾರಣಾ ಮಂಡಳದ ಚೇಅರ ಮನ್ನರಾದ ಶ್ರೀಮಾನ್ ಕೆ. ಶ್ರೀ. ಕುಲಕರ್ಣಿ ಇವರು ಶಾಲೆಯಲ್ಲಿಯ ಹರಿಜನ ಹಾಗೂ ಬಡವರಾದ ವಿದ್ಯಾರ್ಥಿಗಳಿಗೆ ತಕ್ಕಷ್ಟು ಪಾಟಿಗಳನ್ನು ಕೊಟ್ಟರು.

ತಿಳಿಸಿದವರು—ಕರಗಾವಿ ಕನ್ನಡ ಶಾಲೆಯ ಹೆಡ್‌ಮಾಸ್ತರರು.

ಕಿತ್ತೂರು— ಇಲ್ಲಿಯ ಕನ್ನಡ ಮೊದಲನೆಯ ನಂಬರಿನ ಶಾಲೆಯಲ್ಲಿ ವಿನಾಯಕನ ಹಬ್ಬದ ಸಮಯದಲ್ಲಿ ಶ್ರೀಮಾನ್. ಎಮ್. ಪೀ. ವಾಲಿ, ಶ್ರೀ. ಎನ್. ಆರ್. ಕುಲಕರ್ಣಿ ಮೊದಲಾದ ಮಹನೀಯರ ವ್ಯಾಖ್ಯಾನಗಳಾದವು.

ತಿಳಿಸಿದವರು—ಶ್ರೀ. ಬ. ವಿ. ಸಾಣಿಕೊಪ್ಪ, ಅ. ಮೂ. ಕಿತ್ತೂರು.

ಬಾಗೇವಾಡಿ— (ವಿಜಾಪುರ) ಈ ಊರ ಶಾಲೆಯಲ್ಲಿ ಕಳೆದ ಅಗಷ್ಟ ತಿಂಗಳ ಕೊನೆಗೆ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀಮಾನ್ ಆರ್. ಕೆ. ನಾಯಿಕ ಇವರ ಅಧ್ಯಕ್ಷತೆಯಲ್ಲಿ ತಾಲೂಕಿನ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನ ಹಾಗು ಸ್ಕೌಟರ್ಯಾಲಿಗಳು ಜರುಗಿದವು.

ತಿಳಿಸಿದವರು—ಶ್ರೀ. ವೆ. ಕೃ. ಬಾಡಗಿಂಡಿ, ಹೆ. ಮೂ. ಗರ್ಲಸ್ಕೂಲ ಬಾಗೇವಾಡಿ.

ಚಿಮ್ಮಲಗಿ— (ವಿಜಾಪುರ) ಈ ಊರ ಶಾಲೆಗೆ ಒಂದು ಗಡಿಯಾಳವನ್ನು ಕೊಡುವೆವೆಂದು ಹೈದರಾಬಾದದ ವ್ಯಾಪಾರಿಗಳಾದ ಶ್ರೀಮಾನ್ ಚಿಮ್ಮಲಗಿ ಭೀಮಾಚಾರ್ಯರು ಆಶ್ವಾಸನವಿತ್ತರು.

ತಿಳಿಸಿದವರು— ಶ್ರೀ. ವ್ಹಿ. ಆರ್. ಶೆಟ್ಟಿ, ಹೆ. ಮೂ. ಚಿಮ್ಮಲಗಿ.

ಹಲಗೇರಿ— (ಧಾರವಾಡ) ಇಲ್ಲಿಯ ಶಾಲೆಯಲ್ಲಿ ಈ ಭಾಗದ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಅ. ಡೆ. ಎ. ಇ. ಅವರಾದ ಶ್ರೀಮಾನ್ ಬಿ. ಬಿ. ಬೂದಿಹಾಳ ಅವರ ಅಧ್ಯಕ್ಷತೆಯಲ್ಲಿ ಸಾಗಿತು. ಊರ ಹಿರಿಯರು ಅತಿಥಿ ಸತ್ಕಾರ ಮಾಡಿದರು.

ತಿಳಿಸಿದವರು— ಶ್ರೀ. ಹ. ಕಾ. ಜೋಶಿ, ಹೆ. ಮೂ. ಅಂತರವಳ್ಳಿ.

ಉಪ್ಪಿನಪಟ್ಟಣ— (ಕಾರವಾರ) ಇಲ್ಲಿಯ ಪ್ರೌಢ ಶಿಕ್ಷಣ ಶಾಲೆಗೆ ಅ. ಡೆ. ಎ. ಇ. ಅವರಾದ ಶ್ರೀಮಾನ್ ಆರ್. ಎಸ್. ಹೆಗಡೆ ಅವರು ಭೆಟ್ಟಿಯನ್ನಿತ್ತು ಸಮಾಧಾನವನ್ನು ವ್ಯಕ್ತಮಾಡಿದರು.

ತಿಳಿಸಿದವರು—ಶ್ರೀ. ಪಾ. ಹ. ಶೇಟ, ಅ. ಮೂ. ಉಪ್ಪಿನಪಟ್ಟಣ.

ಸಿಗ್ಗಾವಿ— (ಧಾರವಾಡ) ಬಂಕಾಪುರ ತಾಲೂಕಿನ ಕೇಂದ್ರ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಮಾನುಲೇದಾರರಾದ ಶ್ರೀಮಾನ್ ಎಸ್. ಟಿ. ವಿರಕ್ತಮಠ ಇವರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದ ಸಾಗಿತು.

ತಿಳಿಸಿದವರು— ಶ್ರೀ. ವ್ಹಿ. ಆರ್. ಮಠದ, ತಾ. ಮಾ. ಸಿಗ್ಗಾವಿ.

ಮೇಲಿನಕೇರಿ— (ಕಾರವಾರ) ಇಲ್ಲಿಯ ಶಾಲೆಯಲ್ಲಿ ೭ ಹಳ ವರ್ಷ ಕೆಲಸ ಮಾಡಿ ಸೇವಾನಿವೃತ್ತರಾದ ಶ್ರೀ. ಹೆಗಡೆ ಚಿದಂಬರಯ್ಯನವರಿಗೆ ಊರವರು ಸತ್ಕಾರ ಮಾಡಿದರು.

ತಿಳಿಸಿದವರು— ಶ್ರೀ. ಚಿ. ಪ. ಹೆಗಡೆ, ಮಾಸ್ತರ ಮೇಲಿನಕೇರಿ.

ಶಿರಸಂಗಿ— (ಬೆಳಗಾವಿ) ಈ ಊರ ಕೋ. ಕ್ರೆ. ಸೊಸಾಯಿಟಿಯ ಚೇಅರಮನ್ನರಾದ ಶ್ರೀಮಾನ್ ಪಾಟೀಲ ಕಲ್ಲನಗೌಡರು ಲಾಭದಲ್ಲಿಯ ಹದಿನೈದು ರೂಪಾಯಿಗಳ ಪಾಟಿ ಪುಸ್ತಕಗಳನ್ನು ಶಾಲೆಯಲ್ಲಿಯ ಬಡವರಾದ ವಿದ್ಯಾರ್ಥಿಗಳಿಗೆ ಕೊಟ್ಟರು.

ತಿಳಿಸಿದವರು— ಶ್ರೀ. ಬ. ಸಿ. ಹಲ್ಯಾಪುರ ಹೆ. ಮಾ. ಶಿರಸಂಗಿ

ಗಜೇಂದ್ರಗಡ— (ಧಾರವಾಡ) ಇಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆಯಲ್ಲಿ ಶ್ರೀಮಂತ ಘೋರಪಡೆ ಜಯಸಿಂಗರಾಯರ ಹಿರಿಯತನದಲ್ಲಿ ನಾಡ-ಹಬ್ಬವು ಚೆನ್ನಾಗಿ ಜರುಗಿತು.

ತಿಳಿಸಿದವರು— ಶ್ರೀ. ಭೀ. ಗ. ಪುರದ ಗೌರವಕಾರ್ಯದರ್ಶಿಗಳು.

ಹಂಚಿನಾಳ— (ಬೆಳಗಾವಿ) ಇಲ್ಲಿಯ ಶಾಲೆಯ ಕಟ್ಟಡವು ವಿದ್ಯಾರ್ಥಿಗಳಿಗೆ ಸಾಲುತ್ತಲಿರಲಿಲ್ಲ. ಊರಹಿರಿಯರು ೧೫೦ ರೂ. ವೆಚ್ಚಮಾಡಿ ಕಟ್ಟಡವನ್ನು ತಕ್ಕಮಟ್ಟಿಗೆ ಬೆಳೆಯಿಸಿ ಕಟ್ಟಿಕೊಟ್ಟರು. ಶ್ರೀ. ಕುಲಕರ್ಣಿ ಶ್ಯಾಮರಾಯರು ವಿದ್ಯಾರ್ಥಿಗಳಿಗೆ ಸಾಕಷ್ಟು ಮೆಚ್ಚುಗೆ ಕೊಟ್ಟರು.

ತಿಳಿಸಿದವರು— ಶ್ರೀ. ವಿ. ಗು. ಕುಂದಣಗಾರ, ಹೆ. ಮಾ. ಹಂಚಿನಾಳ

ಹಿರಿಯಬಾಗೆವಾಡಿ— (ಬೆಳಗಾವಿ) ಇಲ್ಲಿಯ ಹರಿಜನ ಕೇರಿಯಲ್ಲಿರುವ ಗಾವಠೀ ಶಾಲೆಗೆ ಶ್ರೀಮಾನ್ ಶಿವನಗೌಡರು ಹಾಗೂ ಶ್ರೀಮತಿ ನಿಂಬವ್ವಕ್ಕನವರು ಬಂದು ನೋಡಿ ೧೦ ರೂ. ಗಳ ಉಪಕರಣಗಳನ್ನು ಕೊಟ್ಟು ಪ್ರೋತ್ಸಾಹಿಸಿದರು.

ತಿಳಿಸಿದವರು— ಶ್ರೀ. ನಾ. ವೀ. ಮಠಪತಿ ಗಾವಠೀಶಾಳಾಮಾಸ್ತರ

ಮುದ್ದೇಬಿಹಾಳ— ಈ ಊರಲ್ಲಿ ತಾಲೂಕಿನ ಶಿಕ್ಷಕ ಶಿಕ್ಷಕಿಯರ ಸಮ್ಮೇಲನ ಹಾಗೂ ಸ್ಕೌಟರ್ಯಾಲಿಗಳು ತಾ॥ ೨೦-೯-೧೯೪೧ನೆಯ ದಿವಸ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾದ ಶ್ರೀ. ಆರ್. ಕೆ. ನಾಯಿಕ ಅವರ ಅಧ್ಯಕ್ಷತೆಯಲ್ಲಿ ನೆರವೇರಿದವು.

ತಿಳಿಸಿದವರು— ಶ್ರೀ. ಆರ್. ಸಿ. ಬಸವಶ್ರೇಷ್ಠಿ ಇಂಗ್ಲಿಷ ಕ್ಲಾಸಮಾಸ್ತರ

ಕರಜಿಗಿ—(ಧಾರವಾಡ) ಈ ಊರ ಶಾಲೆಯಲ್ಲಿ ತಾ॥ ೨೭-೯-೧೯೪೧ನೆಯ ದಿವಸ ಧಾರವಾಡ ಡಿ. ಸ್ಕೂ. ಬೋ. ನ ವ್ಹಾಯಿಸ್ ಚೇಅರಮನ್ನರಾದ ಶ್ರೀಮಾನ್ ಕರಿಯಪ್ಪ ಹುಚ್ಚಣ್ಣನವರ ಹಿರಿಯತನದಲ್ಲಿ ಕೇಂದ್ರ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಅನುಕರಣೀಯವಾಗಿ ಸಾಗಿತು.

ತಿಳಿಸಿದವರು— ಶ್ರೀ. ಸಿ. ಫ. ಬಂಡಿವಾಡ, ಹೆಡ್‌ಮಾಸ್ತರ

ಕುಂಭಾರವಾಡಾ—(ಕಾರವಾರ) ಈ ಊರ ಶಾಲೆಯ ಹಿರಿಯರು ಸರಸ್ವತಿ ಪೂಜಾಸಮಾರಂಭಕಾಲದಲ್ಲಿಯೂ ನಾಡ ಹಬ್ಬದಲ್ಲಿಯೂ ಶಾಲೆಯ ಹುಡುಗರ ಆಟ ವಿನೋದಗಳನ್ನು ಕಂಡು ಆಸ್ಥೆಯಿಂದ ಉತ್ತೇಜನವಿತ್ತರು.

ತಿಳಿಸಿದವರು— ಶ್ರೀ. ಸ್ಕೂಲಕಮೀಟಿಯ ಚೇಅರಮನ್ನರು ಕುಂಭಾರವಾಡಾ

ಗಂದಿಗವಾಡ— (ಬೆಳಗಾವಿ) ತಾ॥ ೨೭-೯-೧೯೪೧ ನೆಯ ದಿವಸ ಈ ಊರ ಶಾಲೆಯಲ್ಲಿ ಶಿಕ್ಷಕರ ಸಮ್ಮೇಲನವಾಯಿತು. ಮೊದಲನೆ ಅ. ಡೆ. ಅವರಾದ ಶ್ರಿಮಾನ್ ನಾಡಕರ್ಣಿ ಇವರು ನೇತೃತ್ವವನ್ನು ವಹಿಸಿದ್ದರು.

ತಿಳಿಸಿದವರು— ಶ್ರೀ. ಬ [illegible]ವಿ. ಮೂಲಿಮನೆ ಅ. ಮಾ. ಗಂದಿಗವಾಡ.

ಸೂಡಿ— (ಧಾರವಾಡ) ಇಲ್ಲಿಯ ಹೆಣ್ಣುಮಕ್ಕಳ ಶಾಲೆಯಲ್ಲಿ ಕುಮಾರಿ ಸಂಘದವರು ಶಾರದಾ ಪೂಜೆಯನ್ನು ರೋಣ ತಾಲೂಕಿನ ಮಾಮಲೇದಾರರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಸಭಿಕರು ವಿದ್ಯಾರ್ಥಿನಿಯರ ಚಟುವಟಿಕೆಗಳನ್ನು ನೋಡಿ ೧೨ ರೂ. ಗಳ ಬಹುಮಾನವನ್ನು ಕೊಟ್ಟರು.

ತಿಳಿಸಿದವರು— ಶ್ರೀ. ಮು ಬ. ಸೂಡಿ ಸೆಕ್ರೆಟರಿ ಗ್ರಾಮಪಂಚಾಯತ ಕಮೀಟಿ

ಹತ್ತರವಾಟ—(ಬೆಳಗಾವಿ) ಇಲ್ಲಿಯ ಶ್ರೀ. ಮಹಮ್ಮದ ಸಾಹೇಬ ಇವರು ಪ್ರತಿವರ್ಷದಂತೆ ಶಾಲೆಯ ಬಡವಿದ್ಯಾರ್ಥಿಗಳಿಗೆ ೧೨ ಪಾಟಿ ಪೇನ್‌ಸೀಲುಗಳನ್ನು ಕೊಟ್ಟರು.

ತಿಳಿಸಿದವರು—ಶ್ರೀ. ಬಿ.ಎಫ್, ಪಾಟೀಲ, ಹೆ. ಮಾ. ಹತ್ತರವಾಟ

ಯಲಗೆಚ್ಚು— (ಹಾವೇರಿ) ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ತಾ. ೧೦-೧೦-೪೧ ನೆಯ ದಿವಸ ಶ್ರೀಮಾನ್ ದೇಶಪಾಂಡೆ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಗ್ಯಾದರಿಂಗ ಸಮಾರಂಭವು ಯಶಸ್ವಿಯಾಗಿ ಕೊನೆಗಂಡಿತು.

ತಿಳಿಸಿದವರು—ಶ್ರೀ. ಲಿ. ಮು. ಕುಲಕರ್ಣಿ, ಸ್ಕೂಲ ಕಮಿಟಿ ಮೆಂಬರ.

ನವಿಲುಗುಂದ— (ಧಾರವಾಡ) ಇಲ್ಲಿಯ ಶ್ರೀಮಂತರೂ ವಿದ್ಯಾಪ್ರಸಾರಕ್ಕಾಗಿ ತುಂಬ ಪ್ರಯತ್ನಿಸುವವರೂ ಆದ ಆನೆಗುಂದಿ ಜೀವಪ್ಪನವರು ತಾ ೧೧-೧೦-೪೧ನೆಯ ದಿವಸ ಪರಲೋಕವಾಸಿಗಳಾದರು.

ಸಿರಿವಂತರಾಗಿ ದಾನದಲಿ ! ಪರಿಶುದ್ಧ ದೇಶಕಾರ್ಯದಲಿ । ವರನಾಡು ನುಡಿಯ ಸೇವೆಯಲಿ । ನೆರೆಪಡೆದು ಕೀರ್ತಿ ನಿರುತದಲಿ ॥ ೧ ॥ ಇಂತಿರ್ದ ಶಾಂತ

ಜೀವನಿಗೆ । ಇಂತಿರ್ದ ಪ್ರೇಮ ಸದ್ಗುಣಿಗೆ ಇಂತಿರ್ದ ಜೀವನಾತ್ಮನಿಗೆ ॥ ಶಾಂತಿ ಯದು ಕಾಲಕಾಲಕ್ಕೆ ॥ ೨ ॥ ಇತ್ಯಾದಿಯಾಗಿ ಅವರ ಗುಣವರ್ಣನೆಯಿದೆ.

ತಿಳಿಸಿದವರು—ರಾ. ಸ್ವಾ. ಮುತಾಲಿಕ ದೇಸಾಯಿ ನವಿಲಗುಂದ.

ಶಿರಸಿ— (ಕಾರವಾರ) ಇಲ್ಲಿಯ ಶಿಕ್ಷಕ-ಶಿಕ್ಷಕಿಯರು ತಾ. ೨–೧೦–೪೧ ನೆಯ ದಿವಸ ಏರ್ಪಡಿಸಿದ ಗಾಂಧಿ ಜಯಂತಿಯ ಸಮಾರಂಭದ ಕಾಲದಲ್ಲಿ ಪರಸ್ಪರ ಸೌಹಾರ್ದ ಸಹಕಾರಗಳನ್ನೂ ಬಾಲಬಾಲಿಕೆಯರ ಚಟುವಟಿಕೆಗಳನ್ನೂ ಕಂಡು ಆನಂದವಾಯಿತು. ಕಸಬಾಶಾಲೆಯ ಹೆಡ್‌ಮಾಸ್ತರರು ಅನುಕರಣೀಯ ಮಾರ್ಗದರ್ಶಿಗಳಾಗಿದ್ದಾರೆ. ಹೀಗೆ ಶ್ರೀ ಎಸ್. ಪಿ. ಪಂಡಿತ ಬಿ.ಎ., ಎಲ್‌ಎಲ್.ಬಿ., ಅಡ್‌ವೊಕೇಟ ಶಿರಸಿ ಅವರ ಅಭಿಪ್ರಾಯವಿದೆ.

ತಿಳಿಸಿದವರು—ಹೆ. ಮಾ. ಕನ್ನಡ ಗಂ. ಮು. ಶಾಲೆ ನಂ. ೧ ಶಿರಸಿ.

ಉಣಕಲ್— (ಧಾರವಾಡ) ಹುಬ್ಬಳ್ಳಿ ತಾಲೂಕಿನೊಳಗಿನ ಉಣಕಲ್ಲ ಭಾಗದ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ತಾ॥ ೯–೧೦–೪೯ನೆಯ ದಿವಸ ಅಸಿಸ್ಟಂಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಅವರಾದ ಶ್ರೀಮಾನ್ ಪೋತದಾರ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪದ-ಪಾಠ-ಚರ್ಚೆಗಳು ಚೆನ್ನಾಗಿಸಾಗಿದವು.

ತಿಳಿಸಿದವರು—ಶ್ರೀ. ನಾ. ಲ. ಪುರೋಹಿತ, ಅ. ಮಾ. ಗೋವನಕೊಪ್ಪ.

ಕಲಘಟಗಿ—(ಧಾರವಾಡ) ಇಲ್ಲಿಯ ಗಂಡುಮಕ್ಕಳ ಶಾಲೆಯಲ್ಲಿ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ತಾ॥ ೧೬–೧೦–೪೯ನೆಯ ದಿವಸ ಧಾರವಾಡ ಡಿ. ಎಲ್. ಬಿ. ಮೆಂಬರರಾದ ಶ್ರೀಮಾನ್ ಬಿ. ಸಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅ. ಡೆ. ಎ. ಇ. ಅವರಾದ ಶ್ರೀ. ಎಚ್. ಎಮ್. ಕಾಳೆ ಅವರು ನೂತನ ಶಿಕ್ಷಣ, ಈ ವಿಷಯವನ್ನು ಚೆನ್ನಾಗಿ ತಿಳುಹಿಸಿದರು.

ತಿಳಿಸಿದವರು—ಶ್ರೀ. ಟೋಪಣ್ಣನವರ ಇಂಗ್ಲಿಷ ಕ್ಲಾಸ ಮಾಸ್ತರ ಕಲಘಟಗಿ.

ಶಿರೂರು—(ವಿಜಾಪುರ) ಇಲ್ಲಿಯ ಲೋಕಪ್ರಿಯ ಮಾಸ್ತರರಾದ ರಾ. ದೇ. ಪಾಟೀಲ ಅವರು ತಾ॥ ೧೩–೯–೪೯ನೆಯ ದಿವಸ ಪರಲೋಕವಾಸಿಗಳಾದರು. ಮೃತರ ಆತ್ಮಕ್ಕೆ ಶಾಂತಿಯಿರಲಿ.

ತಿಳಿಸಿದವರು—ಶ್ರೀ. ಎಫ್. ಟಿ. ಕಲ್ಯಾಣಶೆಟ್ಟಿ, ಟ್ರೇ. ಕಾ. ಧಾರವಾಡ.

ಮೂರೂರು—(ಕಾರವಾರ) ಇಲ್ಲಿಯ ಶಾಲೆಯ ಬಾಲ-ಬಾಲಿಕೆಯರ ಸಮ್ಮೇಲನವು ಕುಮಟೆಯ ವಕೀಲರಾದ ಶ್ರೀಮಾನ್ ವ್ಹಿ. ಟಿ. ಹೆಗಡೆ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ವೆಚ್ಚಕ್ಕಾಗಿ ಪಂಚಾಯತ ಕಮೀಟಿಯವರು ಮೂರು ರೂಪಾಯಿಗಳನ್ನು ದಯಪಾಲಿಸಿದರು.

ತಿಳಿಸಿದವರು—ಶ್ರೀ. ಸು. ವೆ. ಹೆಗಡೆ, ಚೇರಮನ್ ಸ್ಕೂಲ ಕಮಿಟಿ ಮೂರೂರು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್ ಎಂ. ಎ.

ಸಂಪುಟ ೮೦	ಡಿಸೆಂಬರ್ ೧೯೪೧	ವರ್ಷ ೧೪. ಸಂ. ೧೦

ಶಾರೀರಿಕ ಶಿಕ್ಷಣದ ಶಿಬಿರ

ಕಳೆದ ನವಂಬರ ತಿಂಗಳಲ್ಲಿ ಧಾರವಾಡ ಜಿಲ್ಲೆಯ ಉತ್ತರ ಭಾಗದ ೭ ತಾಲೂ ಗಳ ಶಿಕ್ಷಕರ ಶಾರೀರಿಕ ಶಿಕ್ಷಣದ ಶಿಬಿರವು ಧಾರವಾಡ ಕೇಂದ್ರದಲ್ಲಿ ನೆರ-ವೇರಿತು. ಈ ಕೇಂದ್ರದಲ್ಲಿ ಪ್ರಾಮುಖ್ಯವಾಗಿ ೬೮ ಪ್ರಾಥಮಿಕ ಶಿಕ್ಷಕರು ೧೬ ಶಿಕ್ಷಕಿಯರು ಟ್ರೆನಿಂಗ್ ಕಾಲೇಜದಿಂದ ಮೂವರು ಶಿಕ್ಷಕಿಯರು ಇತರ ಮಾಧ್ಯ ಮಿಕ ಶಾಲೆಗಳ ಒಬ್ಬಿಬ್ಬರು ಶಿಕ್ಷಕರು ಸೇರಿ, ಇವರು ಶಿಕ್ಷಕರು, ಇವರು ಶಿಕ್ಷಿಕೆ ಯರು, ಎಂಬ ಭೇದಭಾವವಿಲ್ಲದೆ ಶಿಕ್ಷಣ ಹೊಂದಿದರು. ಶ್ರೀ. ವಿ.ಬಿ. ದೇಸಾಯಿ ಯರು ಇದರ ಮುಖ್ಯ ಸಂಚಾಲಕರಾಗಿದ್ದರು. ಸ್ಥಾನಿಕ ಶಿಕ್ಷಣ ಸಂಸ್ಥೆಗಳ ಕೆಲ ವರ ಶಿಕ್ಷಕರ ನೆರವಿನಿಂದ ಅವರು ಈ ಕಾರ್ಯವನ್ನು ತುಂಬ ಯಶಸ್ವಿಯಾಗಿ ನಿರ್ವಹಿಸಿದರು. ಇದೇ ಅವಧಿಯಲ್ಲಿ ೮ ಶಿಕ್ಷಕ-ಶಿಕ್ಷಿಕೆಯರಿಗೆ ಸ್ಕೌಟ್ ಶಿಕ್ಷಣವು ಸಹ ಕೊಡಲ್ಪಟ್ಟಿತು. ಈ ಭಾಗದ ಹಿಂದುಸ್ತಾನ ಸ್ಕೌಟ್ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ. ಹಲಸಿಗಿಯವರು ಸ್ಕೌಟ್ ಶಿಕ್ಷಣದ ಯೋಜನೆಯನ್ನು ತೆಗೆದುಕೊಂಡು ಸಾಂಗಗೊಳಿಸಿದರು.

ಇತ್ತೀಚೆಗೆ ಶಾರೀರಿಕ ಶಿಕ್ಷಣದ ಚಟುವಟಿಕೆಗಳ ಕಡೆಗೆ ಮಹಾಜನರ ಲಕ್ಷ್ಯವು ಹೊರಳಿದ್ದು ಸರಕಾರವೂ ಜನತೆಯೂ ಅದನ್ನು ಆದರದೃಷ್ಟಿಯಿಂದ ನೋಡಹತ್ತಿರುವವು. ಶಿಕ್ಷಣ ಸಂಸ್ಥೆಗಳೂ ಈ ವಿಷಯದಲ್ಲಿ ತುಂಬ ಆಸ್ಥೆಯನ್ನು

ತೋರಿಸಹತ್ತಿವೆ. ಧಾರವಾಡದ ಸ್ಕೂಲ್‌ಬೋರ್ಡಿನವರು ಕಳೆದವರ್ಷ ಹಾವೇರಿಯ ಕೇಂದ್ರದಲ್ಲಿ ದಕ್ಷಿಣ ಭಾಗದ ತಾಲೂಕುಗಳ ಶಿಕ್ಷಕರಿಗಾಗಿ ಶಿಬಿರವನ್ನು ಏರ್ಪಡಿಸಿದ್ದರು. ಧಾರವಾಡದ ಈ ಶಿಬಿರದ ಕಾರ್ಯಗಳು ೩೦-೧೦-೧೯೪೧ ರಿಂದ ೧೯-೧೧-೧೯೪೧ ರ ವರೆಗೆ ಮೂರು ವಾರ ನಡೆದಿದ್ದು ಈಗ ಅರ್ಧಕಾರ್ಯವು ಸಾಗಿದಂತಾಗಿದೆ ಇವರೇ ಮತ್ತೊಮ್ಮೆ ಇಂಥ ಶಿಬಿರದಲ್ಲಿ ನೆರೆದು ಈಗ ಅರ್ಧ ಸಾಗಿದ ಶಿಕ್ಷಣವನ್ನು ಪೂರ್ಣಮಾಡಿಕೊಳ್ಳಬೇಕಾಗುವದು.

ಕೊನೆಯದಿನ (೧೯-೧೧-೧೯೪೧) ಈ ಎರಡೂ ಕಾರ್ಯಗಳ ಸಮಾರೋಪಕ ಸಮಾರಂಭಕ್ಕೆ ನಮ್ಮ ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರಾದ, ಶಾರೀರಿಕ ಶಿಕ್ಷಣದಲ್ಲಿ ತುಂಬ ಆಸ್ಥೆಯನ್ನು ತೋರ್ಪಡಿಸುವ, ಶ್ರೀಮಾನ್ **ಸೀತಾರಾಮರಾವ ತಾವಡೆ** ಸಾಹೇಬರೇ ಅಧ್ಯಕ್ಷರಾಗಿದ್ದರು. ಇದೇಸಮಯದಲ್ಲಿ ಧಾರವಾಡದ ಶಾರೀರಿಕ ಶಿಕ್ಷಣ ಸಮಿತಿಯವರು ಇಡಿಯ ಧಾರವಾಡ ನಗರದೊಳಗಿನ ಎಲ್ಲ ಮಾಧ್ಯಮಿಕ ಶಾಲೆಗಳ ಒಟ್ಟು ೧೬೦೦ ವಿದ್ಯಾರ್ಥಿಗಳ ಸಾಮೂಹಿಕ ಕವಾಯತು ಮಾಡಿಸುವ ಅತಿಶಯ ಮಹತ್ವದ ಕಾರ್ಯವನ್ನು ಅತ್ಯಂತ ವ್ಯವಸ್ಥೆಯಿಂದ ನೆರವೇರಿಸಿ ತೋರಿಸಿದರು.

ಈ ಸಮಾರಂಭದ ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದ ಶ್ರೀಮಾನ್ **ತಾವಡೆ** ಸಾಹೇಬರು ತಮ್ಮ ಸ್ವಾಭಾವಿಕ ಸ್ಫೂರ್ತಿಯುಕ್ತವಾದ ಭಾಷಣದಿಂದ ಶಿಕ್ಷಕ ವರ್ಗದಲ್ಲಿಯೂ ನೆರೆದ ಜನಸಮೂಹದಲ್ಲಿಯೂ ಉತ್ಸಾಹವನ್ನು ತುಂಬಿ ತುಳುಕಿಸಿದರು. ನಮ್ಮ ಡೆ. ಎ. ಇ. ರಾದ ಶ್ರೀಮಾನ್ **ಕೊಪ್ಪಳ ಗುಂಡೇರಾಯರು** ಆ ಭಾಷಣವನ್ನು ಅಷ್ಟೇ ಉತ್ಸಾಹಕರವಾಗಿ ಕನ್ನಡಿಸಿದರು. ಆ ಭಾಷಣದ ಮುಖ್ಯಾಂಶಗಳನ್ನು ನಮ್ಮ ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

"ಸ್ನೇಹಿತರೆ, ಶಿಕ್ಷಕ ಬಂಧು ಭಗಿನಿಯರೇ,

ಇಂದಿನ ದಿನವು ನಮ್ಮ ಧಾರವಾಡದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲು ತಕ್ಕದ್ದಾಗಿದೆ. ಇಲ್ಲಿಯ ಎಲ್ಲ ಸ್ಥಾನಿಕ ವಿದ್ಯಾಸಂಸ್ಥೆಗಳು ಸೇರಿ ಒಮ್ಮನಸ್ಸಿನಿಂದ ಕಾರ್ಯ ಮಾಡಲು ಮುಂದೆ ಬಂದು ಸುಮಾರು ೧೬೦೦ ವಿದ್ಯಾರ್ಥಿಗಳನ್ನು ಒತ್ತಟ್ಟಿಗೆ ಸೇರಿಯಿಸಿ ಅವರಿಂದ ಶಾರೀರಕ ಚಟುವಟಿಕೆಗಳನ್ನು ಮಾಡಿ ತೋರಿಸಿ ನಮ್ಮನ್ನು ಆನಂದಗೊಳಿಸಿದರು. ಇದು ತಾತ್ಕಾಲಿಕ ಆನಂದದ ಮಾತಲ್ಲ. ಇಂಥ ಚಟುವಟಿಕೆಗಳು ಸದಾ ಸರ್ವದಾ ನಡೆಯುತ್ತಿರಬೇಕು. ನಮ್ಮ ಜನತೆಯಲ್ಲಿ ಶಿಸ್ತು ಕಡಿಮೆ. ಸಂತೆಯಲ್ಲಿ, ಜಾತ್ರೆಯಲ್ಲಿ, ಬಹುಜನರು ಕೂಡುವ ಇನ್ನನೇಕ ಸಂದರ್ಭಗಳಲಿ ನಮ್ಮ ಜನರಿಗೆ ಸುವ್ಯವಸ್ಥೆಯಿಂದ ನಡೆದುಕೊಳ್ಳುವ

ಭ್ಯಾಸವಿಲ್ಲ. ಇಂಥ ಸಂದರ್ಭಗಳಲ್ಲಿ ಏನಾದರೂ ಗೊಂದಲವು ಹುಟ್ಟಿದರಂತೂ ೀರೇಹೋಯಿತು. ಒಲವುಳ್ಳವರು ಮುಂದೆ ನುಸುಳಿ ಹೆಂಗುಸರು ಹುಡುಗರು ುಂತಾದ ದುರ್ಬಲರನ್ನು ನುಗ್ಗಿಸಿ ಕೊಡಲು ಆಪಘಾತಗಳಿಗೀಡು ಮಾಡಿ ಡುವರು. ಅಮೇರಿಕಾ ಇಂಗ್ಲಂಡ ಮೊದಲಾದ ಪರದೇಶಗಳಲ್ಲಿ ಈ ರೀತಿ ವ್ಯವಸ್ಥೆಯು ಎಂದೂ ಆಗಲಾರದು. ಲಕ್ಷ-ದಶಲಕ್ಷ ಜನರು ಒತ್ತಟ್ಟಿಗೆ ನೆರೆದು ಲಸ ಮಾಡುವರು. ಜನರು ಅಲ್ಲಿಗೆ ಬರುವಾಗಲೂ ಹೋಗುವಾಗಲೂ ಸುವ್ಯವ ್ಥೆಯಿಂದ ನಡೆದುಕೊಳ್ಳುವರು. ಅವರಿಗೆ ಈ ವಿಷಯದಲ್ಲಿ ತಕ್ಕ ಶಿಕ್ಷಣವು ೂರೆದಿರುವದು. ನಮ್ಮ ಜನರಿಗೂ ಇಂಥ ಶಿಕ್ಷಣವು ಬೇಕೇಬೇಕು. ಧಾರ ಾಡದಲ್ಲಿ ಇಂದು ಪ್ರಾರಂಭವಾದ ಈ ಕೆಲಸವು ಉತ್ತರೋತ್ತರ ಅಭಿವೃದ್ಧಿ ೂಂದಲೆಂದು ಮನಃಪೂರ್ವಕವಾಗಿ ಹಾರೈಸುವೆನು. ಬರೇ ಮಾಧ್ಯಮಿಕ ಶಾಲೆ ಳಷ್ಟೇ ಅಲ್ಲದೆ, ಎಲ್ಲ ಪ್ರಾಥಮಿಕ ಶಾಲೆಗಳೂ ಇದರಲ್ಲಿ ಭಾಗ ವಹಿಸಬೇಕು.

ಧಾರವಾಡದೊಳಗಿನ ಬಾಲಬಾಲಕಿಯರೆಲ್ಲರೂ ಒತ್ತಟ್ಟಿಗೆ ಸೇರಿ ಇಂಥ ಕೆಲಸ ಾಡಲು ತಕ್ಕ ರೂಢಿ ಮಾಡಿಕೊಳ್ಳಬೇಕು. ನಾನು ಪುಣೆಯಲ್ಲಿದ್ದಾಗ ಇಂಥ ಾರ್ಯವು ಮೊತ್ತಮೊದಲು ಪ್ರಾರಂಭಿಸಲ್ಪಟ್ಟಿತು. ಆನಂತರ ಇಂಥದೊಂದು ಮಾರಂಭದಲ್ಲಿ ೫ ಸಾವಿರ ವಿದ್ಯಾರ್ಥಿಗಳು ಊರೊಳಗಿನ ಮುಖ್ಯ ಬೀದಿಗಳಲ್ಲಿ ುವ್ಯವಸ್ಥಿತವಾಗಿ ಮೆರವಣಿಗೆ ಸಾಗಿರುವದನ್ನು ನೋಡಿ ಜನರು ಆನಂದದಿಂದ ರಗಾಗಿ ನಿಲ್ಲುತ್ತಿದ್ದರು. ಮುಂದೆ ಅಂಥ ಕಾರ್ಯಕ್ರಮವು ಹಲವು ಸಾರೆ ನಡೆದು ಗ ಹೆಚ್ಚು ರೂಢಮೂಲವಾಗಿದೆ. ಒಮ್ಮೆ ನಾನು ೧೮ ಸಾವಿರ ವಿದ್ಯಾರ್ಥಿಗಳ ಂಥ ಕಾರ್ಯಕ್ರಮವನ್ನು ಒಂದೂವರೆ ತಾಸಿನವರೆಗೆ ತುಂಬ ಸುವ್ಯವಸ್ಥೆಯಿಂದ ಡೆಯಿಸಿರುವೆನು. ೧೯೩೮ರ ಇಸ್ವಿಯಲ್ಲಿ ನಾನು ಪ್ರಾರಂಭಿಸಿದ ಬಾಲ ದಿನದ ಾರ್ಯಕ್ರಮದ ಪದ್ಧತಿಯು ಮಧ್ಯಭಾಗದ ಹಳ್ಳಿಹಳ್ಳಿಗೂ ಹೋಗಿ ಮುಟ್ಟಿದೆ. ದು ಉತ್ತರೋತ್ತರ ಬೆಳೆಯುತ್ತಲೇ ಇದೆ. ಜನತೆಯಲ್ಲಿ ಸುವ್ಯವಸ್ಥೆಯಿಂದ ಡೆಯುವಂಥ ಉತ್ತಮ ಚಟದ ಉತ್ಪತ್ತಿ ಬೆಳವಣಿಗೆಗಳಿಗೆ ಕಾರಣವಾಗುವ ಂಥ ಸಾಮೂಹಿಕ ಕವಾಯಿತು ಮೆರವಣಿಗೆ ಮೊದಲಾದವು ಹೆಚ್ಚು ಹೆಚ್ಚು ್ರಮಾಣದಿಂದ ಆಗಾಗ ನಡೆಯುವಂತೆ ಪ್ರೋತ್ಸಾಹಿಸುವದು ಅತ್ಯವಶ್ಯವಾಗಿದೆ. ಂದಿನ ಕಾರ್ಯಕ್ರಮವು ಆರಂಭದ್ದೆಂಬ ದೃಷ್ಟಿಯಿಂದ ಅತ್ಯುತ್ತಮವಾಗಿತ್ತು. ಳ್ಳೆಯ ಆರಂಭವು ಉತ್ತಮ ಪ್ರಗತಿಯನ್ನು ಸೂಚಿಸುವದಲ್ಲವೇ ?

(೨) ಇಲ್ಲಿ ನಡೆದ ಸ್ಕೌಟ್ ಶಿಕ್ಷಣದ ಅಥವಾ ಶಾರೀರಿಕ ಶಿಕ್ಷಣದ ಕಾರ್ಯ ್ರಮಗಳಲ್ಲಿ ಶಿಕ್ಷಕ-ಶಿಕ್ಷಿಕೆಯರು ಭೇದಭಾವವಿಲ್ಲದೆ ಒಬ್ಬರೊಡನೊಬ್ಬರು ಸಹಕರಿಸಿ ಡೆದಿರುವರೆಂಬದು ಇಂದಿನ ಕಾರ್ಯಕಲಾಪಗಳ ಮೂಲಕ ನಮಗೆ ಕಂಡು

ಬಂದಿರುವದು. ಇದರಿಂದ ನಮ್ಮೆಲ್ಲರಿಗೂ ಅತ್ಯಾನಂದವಾಗಿರುವದು. ಸಹ ಶಿಕ್ಷಣವು ಅಪಾಯಕರವಲ್ಲವೆಂಬವನ್ನು ಪರದೇಶದವರು ಒಪ್ಪಿ ಆಚರಣೆಯಲ್ಲಿ ತರು ತ್ತಿದ್ದಾರೆ. ನಮ್ಮಲ್ಲಿ ಹೆಣ್ಣು ಗಂಡು ಎಂಬ ಭೇದಭಾವವೂ ತಾರತಮ್ಯವೂ ಬೇರೂರಿ ನಿಂತಿವೆ. ಇದು ಸರಿಯಲ್ಲ. ಗಂಡುಸರಂತೆಯೆ, ಹೆಣ್ಣು ಮಕ್ಕಳಿಗೂ ಜೀವನದಲ್ಲಿ ತಕ್ಕ ಹೊಣೆಗಾರಿಕೆಯಿದೆ. ತಕ್ಕ ಸಂದರ್ಭಗಳನ್ನು ಒದಗಿಸಿಕೊಟ್ಟರೆ ಅವರೂ ಕೂಡ ಹೆಚ್ಚಿನ ಕೆಲಸಗಳನ್ನು ಮಾಡಿತೋರಿಸಬಲ್ಲರು. ಇಂದಿನ ಕಾರ್ಯ ಕಲಾಪಗಳೆಲ್ಲವೂ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಕಾರ್ಯಗಳನ್ನು ವಿಂಗಡಿ ಸಲಿಕ್ಕೆ ಬರದಷ್ಟು ಸಮತೂಕದವಾಗಿದ್ದವೆಂದು ನಮ್ಮೆಲ್ಲರ ಮನವರಿಕೆಯಾಗಿದೆ. ಈ ಮೂರು ವಾರಗಳಲ್ಲಿ ನೀವು ದೊರಕಿಸಿಕೊಂಡ ಶಿಕ್ಷಣವ ಪ್ರಯೋಜನವನ್ನು ನಿಮ್ಮ ವಿದ್ಯಾರ್ಥಿಗಳಿಗೆ ಒದಗಿಸಿ ಕೊಡುವ ಭಾರವನ್ನು ಹೊತ್ತುಕೊಂಡು ನೀವು ಇಲ್ಲಿಂದ ಹೊರಡುವಿರೆಂಬದನ್ನು ಮರೆಯಬೇಡಿರಿ. ನಿಮ್ಮ ಶಾಲೆಗಳಿಗೆ ಬರುವ ತಪಾಸಣೆಯ ಅಧಿಕಾರಿಗಳು ಕೂಡ ಶಾರೀರಿಕ ಶಿಕ್ಷಣದ ಮತ್ತು ಸ್ಕೌಟ್ ಶಿಕ್ಷಣದ ಕಾರ್ಯಗಳಲ್ಲಿ ತಕ್ಕ ಉತ್ಸಾಹವನ್ನು ತೋರಿಸಿ ನಿಮಗೆ ತಕ್ಕ ಮಾರ್ಗದರ್ಶಿಗಳಾಗಿ ನಡೆದುಕೊಳ್ಳುವರು.

(೩) ಸ್ಕೌಟ್ ಶಿಕ್ಷಣದ ವಿಷಯದಲ್ಲಿ ನಾನು ನಾಲ್ಕು ಮಾತು ಹೆಚ್ಚಿಗೆ ಆಡಲು ಬಯಸುವೆನು. ಯಾಕಂದರೆ ಅದು ನನ್ನ ಪ್ರೀತಿಯ ವಿಷಯ. ನಾನು ೧೯೩೬ನೆಯ ಇಸ್ವಿಯಲ್ಲಿ ಇಂಗ್ಲಂಡಕ್ಕೆ ಹೋಗಿದ್ದೆನು. ಆಗ ನನಗೆ ೪೧-೪೨ ವರ್ಷ ವಯಸ್ಸು; ಶರೀರದ ಆರೋಗ್ಯವೂ ಚೆನ್ನಾಗಿರಲಿಲ್ಲ; ಆಸ್ಪತ್ರೆಯಲ್ಲಿ ಆರೈಕೆ ಹೊಂದುತ್ತಿದ್ದೆನು. ಇದೇ ಸಮಯದಲ್ಲಿಯೇ ಅಲ್ಲಿಯ ಒಂದು ಸ್ಕೌಟ್ ಕ್ಯಾಂಪಿ ನಲ್ಲಿ ನಡೆಯುವ ಶಿಕ್ಷಣಕ್ರಮವನ್ನು ನೋಡಿ ನನಗೆ ಹುರುಪು ಒಂದು ನಾನೂ ಅದನ್ನು ಸೇರಿದೆನು. ಅಲ್ಲಿಯ ಸ್ಕೌಟ್ ಶಿಕ್ಷಣವು ಇಲ್ಲಿಯಷ್ಟು ಸುಲಭಸಾಧ್ಯ ವಿಷಯವಿಲ್ಲವೆಂಬದನ್ನು ತೋರಿಸುವದಕ್ಕಾಗಿ ಒಂದೇ ಒಂದು ಉದಾಹರಣೆಯನ್ನು ನಿಮ್ಮ ಮುಂದಿರಿಸುವೆನು. ಒಂದು ದಿನ ನಮ್ಮ ಕ್ಯಾಂಪಿನವರೆಲ್ಲರೂ ಬೇರೆ ಬೇರೆ ಯಾಗಿ ಒಂದೊಂದು ಸ್ಥಳಕ್ಕೆ ಹೋಗಿ ಪ್ರವಾಸಮಾಡಿ ಬರಬೇಕೆಂದು ಗೊತ್ತಾ ಗಿತ್ತು. ಸುಮಾರು ಮಧ್ಯಾಹ್ನ ನಾಲ್ಕು ಗಂಟೆಗೆ ನಮ್ಮೆಲ್ಲರ ಕೈಯಲ್ಲಿ ಒಂದೊಂದು ಮುಚ್ಚಿದ ಪಾಕೀಟನ್ನು ಕೊಟ್ಟರು. ಪ್ರತಿಯೊಬ್ಬನೂ ಬೇರೆ ಬೇರೆ ದಿಕ್ಕಿಗೆ ಒಂದೆರಡು ಮೈಲು ಹೋದ ಬಳಿಕ ಆ ಪಾಕೀಟನ್ನು ಒಡೆದು ನೋಡಿ ಅದರಲ್ಲಿ ಬರೆದುಕೊಟ್ಟ ನಕಾಶೆ ವಿವರಣೆಗಳ ಸಹಾಯದಿಂದ ೧೫-೨೦ ಮೈಲು ದೂರದಲ್ಲಿ ರುವ ಸ್ಥಳಗಳಿಗೆ ಹೋಗಿ ರಾತ್ರಿಯನ್ನು ಕಳೆದು ಮರಳಿ ಬರಬೇಕಾಗಿತ್ತು. ಅದರಂತೆ ನಾನು ನನ್ನ ಕೈಯೊಳಗಿನ ಪಾಕೀಟನ್ನು ನಿರ್ದಿಷ್ಟ ಸ್ಥಳಕ್ಕೆ ಮುಟ್ಟಿದ

ಬಳಿಕ ಒಡೆದು ನೋಡಿದೆನು. ಆಗ ನಾನು ಹೋಗಬೇಕಾಗಿರುವ ಸ್ಥಳವು ಅಲ್ಲಿಂದ ೧೮ ಮೈಲು ದೂರದಲ್ಲಿ ಇರುವದೆಂದೂ ಜನರಿಲ್ಲದಿರುವ ಕಾಡುದಾರಿಯಲ್ಲಿ ಪ್ರವಾಸಮಾಡಬೇಕಾಗುವದೆಂದೂ ತಿಳಿಯಿತು. ಆಕಾಲದಲ್ಲಿ ಅಲ್ಲಿ ದಿನದ ೨೪ ತಾಸುಗಳಲ್ಲಿಯೂ ಮಳೆಯಾಗುತ್ತಿತ್ತು. ಕತ್ತಲೆಯ ಕಾಡುದಾರಿಯಲ್ಲಿ ಒಂಟಿಗನಾಗಿ ಕೈಯಲ್ಲಿರುವ ಸಕಾಶೆಯೊಂದರ ನೆರವಿನಿಂದಲೆ ಸಾಗಿ ನಾನು ನಿರ್ದಿಷ್ಟಸ್ಥಳವನ್ನು ಸೇರಿದೆನು. ತಿನ್ನುವದಕ್ಕಾಗಿ ಸಂಗಡ ಒಯ್ದಿದ್ದ ಹಿಟ್ಟಿನಿಂದ ಅರ್ಧಮರ್ಧ ಬೇಯಿಸಿದ ರೊಟ್ಟಿಯನ್ನು ನಾನೇ ತಯಾರಿಸಿಕೊಳ್ಳಬೇಕಾಯಿತು. ಹಾಸುವದಕ್ಕೂ ಹೊತ್ತುಕೊಳ್ಳುವದಕ್ಕೂ ಸಾಕಾದಷ್ಟು ಬಟ್ಟೆಯಿರಲಿಲ್ಲ. ಇಂಥ ಕಠಿಣವಾದ ಪ್ರವಾಸವನ್ನು ಮುಗಿಸಿಕೊಂಡು ಮರುದಿವಸ ಮರಳಿ ಬಂದಾಗ ನನಗೆ ಪುನರ್ಜನ್ಮ ಬಂದಂತೆ ತೋರಿತು.

ಸ್ಕೌಟ್ ಕ್ಯಾಂಪಿನಲ್ಲಿರುವದು ಒಂದು ಸುಯೋಗವೆಂದು ಭಾವಿಸಬೇಕು. ಯಾಕಂದರೆ ಇಲ್ಲಿ ವ್ಯಕ್ತಿಗತ ಸುಖ-ದುಃಖ ಭೇದಭಾವನೆಗಳನ್ನೆಲ್ಲ ಮರೆತು ಬಿಡಬಹುದು. ಹೆಂಡಿರುಮಕ್ಕಳ ಸಂಸಾರದ ನೆನಪಾಗದು. ಇಲ್ಲಿ ಕಷ್ಟನಷ್ಟಗಳ ಭಾವನೆ ನಮ್ಮಿಂದ ದೂರಾಗಿರುವದು. ಇಲ್ಲಿ ನೆರೆದಿರುವವರೆಲ್ಲರೂ ತಮ್ಮ ವಯೋಮಾನವನ್ನು ಮರೆತು ತರುಣರೆಂದೇ ಭಾವಿಸಿಕೊಳ್ಳಬೇಕಾಗುವದು. ಎಲ್ಲಿ ನೋಡಿದಲ್ಲಿ ನೂತನ ಉತ್ಸಾಹ, ಹೊಸ ಹುರುಪು, ಉಕ್ಕಿಬರುವ ಹುಮ್ಮಸ ಇವೇ ಗೋಚರವಾಗುವವು. ಸ್ಕೌಟ್ ಶಿಕ್ಷಣವು ನಮ್ಮ ದೇಶದ ಭಾವೀಪೀಳಿಗೆಗೆ ನವ ಜೀವನವನ್ನು ಕೊಡುವಂಥ ಪವಿತ್ರ ಉದ್ದೇಶವುಳ್ಳದ್ದೆಂಬ ಭಾವನೆಯನ್ನು ಮರೆಯಬೇಡಿರಿ. ನಿಮಗೆ ಬಾಲ್ಯದಲ್ಲಿ ಇಂಥ ಶಿಕ್ಷಣವು ದೊರೆತಿರಲಿಲ್ಲ. ಆದ್ದರಿಂದ ನಿಮ್ಮ ಮುಂದಿನ ಪೀಳಿಗೆಯು ನೀವು ಕೈಕೊಳ್ಳಲು ಸಾಧ್ಯವಾಗದಿರುವ ಹೆಚ್ಚಿನ ಕಾರ್ಯಗಳನ್ನು ಸಾಧಿಸುವದೆಂಬ ಹಂಬಲದಿಂದ ಸಮಾಧಾನ ಹೊಂದಿರಿ; ಅದರಂತೆ ಕೆಲಸ ಮಾಡಿರಿ. ನಿಮ್ಮಲ್ಲಿರುವ ಲೋಪದೋಷಗಳನ್ನು ಹುರಿದು ಸುಟ್ಟುಬಿಡಿರಿ.

ಇನ್ನು, ಪ್ರಕೃತದ ಶಾರೀರಿಕ ಶಿಕ್ಷಣದ ಮತ್ತು ಸ್ಕೌಟ್‌ಶಿಕ್ಷಣದ ಯೋಜನೆಯನ್ನು ಕೈಕೊಂಡ ಧಾರವಾಡ ಜಿಲ್ಲೆಯ ಸ್ಕೂಲ್‌ಬೋರ್ಡಿನ ವಿಚಾರವಾಗಿ ಒಂದೆರಡು ಸಂಗತಿಗಳನ್ನು ಹೇಳಿ ನನ್ನ ಮಾತು ಮುಗಿಸುವೆನು. ಸಾರ್ವಜನಿಕ ಹಿತಕ್ಕಾಗಿ ಹುಟ್ಟಿರುವ ಸಂಸ್ಥೆಗಳು ಯಾವಾಗಲೂ ವಿಶಾಲದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡಬೇಕಾಗುವದು. ನಮ್ಮ ಬೋರ್ಡಿನ ಸದಸ್ಯರೂ ಚೇರಮನ್ ಮೊದಲಾದ ಅಧಿಕಾರಿಗಳೂ, ಇಂಥ ವಿಶಾಲದೃಷ್ಟಿಯಿಂದಲೇ ಕೆಲಸ ಕೈಕೊಂಡಿದ್ದಾರೆ. ಸರಕಾರದ ಅಧಿಕಾರಿಗಳೆಂದರೆ ಜನತೆಯ ಸೇವಕರು. ಅವರ ಲೋಪದೋಷಗಳನ್ನು ತೋರಿಸಿಕೊಟ್ಟು ಅವರೊಡನೆ ಸಹಕರಿಸಿ ಕೆಲಸಮಾಡಿಸಿ ಜನತೆಯು

ಪಿತವಾಡುವದು ಇಂಥ ಸಂಸ್ಥೆಗಳ ಚಾಲಕರ ಕೆಲಸ. ಈ ದೃಷ್ಟಿಯಲ್ಲಿ ಕೂಡ ಈ ನಮ್ಮ ಸ್ಕೂಲ್‌ಬೋರ್ಡಿನವರು ತಕ್ಕ ಮಾರ್ಗದಲ್ಲಿಯೇ ಕೆಲಸ ಮಾಡುತ್ತಿರುವದನ್ನು ದೋಡಿ ನನಗೆ ಸಂತೋಷವಾಗಿದೆ. ಮತ್ತು ತುಂಬ ಮಹತ್ವದ ಅವರ ಎಲ್ಲ ಕಾರ್ಯಕಲಾಪಗಳಿಗಾಗಿ ನಾನು ಮತ್ತೊಮ್ಮೆ ಅವರ ಉಪಕಾರವೆಣಿಸಿ ಈ ಶಾರೀರಿಕ ಶಿಕ್ಷಣದ ಶಿಬಿರದ ಮತ್ತು ಸ್ಕೌಟ್ ಶಿಕ್ಷಣದ ಚಾಲಕರಾದ ಶ್ರೀ ದೇಸಾಯಿ ಮತ್ತು ಶ್ರೀ. ಹಲಸಗಿ ಇವರನ್ನು ಅಭಿನಂದಿಸಿ ನನ್ನ ಮಾತ ಮುಗಿಸುವೆನು.''

ಮೈಸೂರಿನ ಪ್ರವಾಸ

ಪ್ರವಾಸವು ಜ್ಞಾನಾರ್ಜನೆಯ ಒಂದು ಸಾಧನ. ಆದುದರಿಂದ 'ಪ್ರವಾಸ ಎಲ್ಲದೆ ಶಿಕ್ಷಣವು ಪೂರ್ಣವಾಗಲಾರದು' ಎಂಬ ತಿಳುವಳಿಕೆಯುಂಟಾಗಿದೆ. ಇದಕ್ಕನುಗುಣವಾಗಿ ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗುವ ರೂಢಿಯು ಮೊದಲಿನಿಂದಲೂ ನಡೆದುಬಂದಿರುವದು. ಈ ವರ್ಷ ಟ್ರೇನಿಂಗ ಕಾಲೇಜದ ಎರಡನೆಯ ವರ್ಷದ ೩೧ ಜನ ವಿದ್ಯಾರ್ಥಿ-ಶಿಕ್ಷಕರು ಕಾಲೇಜಿನ ಶಿಕ್ಷಕರಲ್ಲೊಬ್ಬರಾದ ಶ್ರೀ. ಆರ್. ಎಸ್. ಬಿದರಿ, ಬಿ.ಎ.; ಬಿ.ಟಿ. ಇವರ ನೇತೃತ್ವದಲ್ಲಿ ಮೈಸೂರು ನಾಡಿನಲ್ಲಿ ಪ್ರವಾಸಮಾಡಿ ಬಂದರು. ಆ ವಿದ್ಯಾರ್ಥಿ ಶಿಕ್ಷಕರಲ್ಲೊಬ್ಬರಾದ ಶ್ರೀ. ಸಿಂಪಿ ಲಿಂಗಣ್ಣ ಇವರು ತಮ್ಮ ಪ್ರವಾಸ ವೃತ್ತಾಂತವನ್ನು ವರ್ಣನಪರ ಶೈಲಿಯಲ್ಲಿ ಬರೆದಿರುವದನ್ನು ಇಲ್ಲಿ ಪ್ರಕಟಿಸಿದೆ.

ಸಂ.

ಸಪ್ಟಂಬರ ತಿಂಗಳ ೨೧ ನೆಯ ತಾರೀಖಿನ ದಿನ ಮುಂಜಾನೆ ೪ ಗಂಟೆಯ ಗಾಡಿಯಿಂದ ಧಾರವಾಡದಿಂದ ಹೊರಟ ನಾವು ಸುಮಾರು ೧೦ ಗಂಟೆಗೆ ಹರಿಹರಕ್ಕೆ ಮುಟ್ಟಿದೆವು. ಸೂರ್ಯಗ್ರಹಣದ ಸಂಯೋಗದಲ್ಲಿ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ ಹರಿಹರೇಶ್ವರನ ದರ್ಶನ ತಕ್ಕೊಂಡು ಪುನೀತರಾದ ನಾವು ಊಟ ಮುಗಿಸಿಕೊಂಡು ಮೈಸೂರಿನ ಗಡಿದಾಟಿ ಉಗಿಬಂಡಿಯು ನಿಲ್ದಾಣಕ್ಕೆ ಬಂದ ಮೈಸೂರ ರೇಲ್ವೆಖಾತೆಯವರು ನಮಗೆ ಕೊಟ್ಟ ಸವಲತ್ತುಗಳಂತೆ, ವ್ಯವಸ್ಥೆಮಾಡಿಕೊಂಡು ಗಾಡಿಯನ್ನೇರಿದೆವು. ಚಿತ್ರಕಲ್ಲ ದುರ್ಗದ ಫಲವತ್ತಾದ ಪ್ರದೇ

ವನ್ನು ನೋಡುತ್ತ, **ಬೀರೂರ** ಜಂಕ್ಷನ್‌ಕ್ಕೆ ಬಂದೆವು. ಸಂಜೆಯಾಗಿತ್ತು. ಮುಂದಿನ ಗಾಡಿ ಹೊರಡುವದಕ್ಕೆ ಇನ್ನೂ ಅವಕಾಶವಿತ್ತು. ಊಟವನ್ನು ನಿಲ್ದಾಣದ ಒಂದು ಊಟದ ಮನೆಯಲ್ಲಿ ತೃಪ್ತಿಕರವಾಗಿ ಮುಗಿಸಿಕೊಂಡೆವು. ಬೀರೂರಿನ ವೀರಭದ್ರ ದೇವಾಲಯದಲ್ಲಿ ಎತ್ತು, ಸಿಂಹ, ನವಿಲು, ಕುದುರೆ ಈ ನಾಲ್ಕು ಹಿತ್ತಾಳೆಯ ಮೂರ್ತಿಗಳು ನಮ್ಮ ಎಸೆಯು ಎತ್ತರದವಿದ್ದು, ನೋಡುವು ದಕ್ಕೆ ಚೆಲುವಾಗಿದ್ದವು.

ಭದ್ರಾವತಿ— ತಾ. ೨೨ ನೆಯ ಬೆಳಗಿನ ೫ ಗಂಟೆಗೆ ಭದ್ರಾವತಿಯ ದರ್ಶನ ವಾಯಿತು. ಭದ್ರಾವತಿಯು ಇರುಳು ಜವ್ವನೆಯಂತೆ ರತ್ನಾಭರಣಗಳನ್ನು ನಾಚಿಸುವಂಥ ವಿಂಚುದೀಪಗಳನ್ನು ಧರಿಸಿ, ಭದ್ರಾನದಿಯ ಕನ್ನಡಿ ಹಿಡಿದು ಕೊಂಡು ನೋಡುತ್ತಿರುವ ಸಮಯವು ಇನ್ನೂ ವೀರಿದ್ದಿಲ್ಲ. ನಾವು ಅಕಸ್ಮಾತ್ ಬಂದಿಳಿದೆವು. ರಾತ್ರಿ ಭದ್ರಾವತಿಗೆ ಚಿಕ್ಕೆಗಳೆಲ್ಲ ಇಳಿದು ಬಂದಂತೆಯೂ, ಅಷ್ಟೇ ಚಿಕ್ಕೆಗಳು ಭದ್ರಾ ನದಿಯಲ್ಲಿ ಮುಳುಗಿದಂತೆಯೂ ಕಂಗೊಳಿಸಿದ್ದವು. ಏನು ಬೆಳಕು! ಎಷ್ಟು ಥಳಕು!

ಅಲ್ಲಿಯ ವಿಂಡಲ್ ಸ್ಕೂಲಿನ ಅಧಿಕಾರಿಗಳ ದಯೆಯಿಂದ ನಾವೆಲ್ಲರೂ ಆ ಶಾಲೆಯಲ್ಲಿ ಇಳಕೊಂಡೆವು; ತಂಜಾವೂರ ಖಾನಾವಳಿಯಲ್ಲಿ ಊಟದ ವ್ಯವಸ್ಥೆ ಯಾಗಿತ್ತು. ಆ "ಅನ್ನ— ಕೂಟ"ಗಳ ನಂಟುತನವು ನಮಗೆ ಒಗ್ಗಲಿಲ್ಲ. ಸಾರು ಬಳಿಸಾರುವಂತಿರಲಿಲ್ಲ. ಯಾರೋ ಗೊಣಗಿದರು—"ಸಾರಾಸಾರ ವಿಚಾರ ಮಾಡಿದರ ಸಾರದಾಗ ಏನೂ ಇಲ್ಲ! ಸೇರದಿದ್ರು ಸುರಿಬೇಕು ಮೈಸೂರ ಸಾರು!!" ಇದಕ್ಕೆ ಲಾವಣಿ ಧಾಟಿ. ಕೆಲವರು "ಅಳುನುಂಗಿ ನಕ್ಕರು."

ಮಧ್ಯಾಹ್ನದ ನಂತರ **ಕಾಗದದ ಕಾರ್ಖಾನೆ** ನೋಡುವುದಕ್ಕೆ ಹೊರಟಿವು ೧೯೧೭ ರಿಂದ ಉದ್ದವಾದ ಬಿದಿರುಗಳನ್ನು ಯಂತ್ರದ ಬಾಯಲ್ಲಿ ಕೊಟ್ಟರೆ, ಟಕಟಲ್ ಎಂದು ಒಡೆದು ಚೆಕ್ಕಿಯು ಪುಡಿಯಾಗಿ, ನೀರೊಡನೆ ಬೆರೆತು ಗಾವಿನಿಂದ ಕುದಿದು ಕಷಾಯವಾಗುತ್ತದೆ. ಅದನ್ನು ಕೆಲವು ಔಷಧಿ ಯಂದರೆ (ಕಾಸ್ಟಿಕ್ ಸೋಡಾ, ಸೋಡಿಯಂ ಸಲ್ಫಾಯಿಡ್ ವಿಶ್ರಣ) ಹಾಕಿ ಮದ್ದಗೊಳಿಸುತ್ತಾರೆ. ಬಳಿಕ ನೀರಿನ ಅಂತವು ಸೋರಿ ಹೋಗಲು, ಮೊಸರಿನಂಥ ಾಗವು ತೆಳ್ಳಗಾಗುತ್ತ ಸಾಗಿ ಬಿಳಿ ಹಾಳೆಯ ಥಾನು ಹೊರಬೀಳುತ್ತದೆ. ಮುಂದೆ ಾಳೆಗಳು ಕತ್ತರಿಸಲ್ಪಟ್ಟು ಸಜ್ಜಾಗಿ ಹೊರಬೀಳುವವು. ಅದರಂತೆ ಅರಿವೆಯ ಿಂದಿಯಿಂದ ರಟ್ಟು ತಯಾರಿಸುತ್ತಾರೆ. ಇಲ್ಲಿ ೯೫೦ ಜನ ದುಡಿಮೆಗಾರರು. ನಾಲು ೧೮–೨೦ ಟನ್ ಕಾಗದ ಹೊರಬೀಳುತ್ತದೆ. ಕೂಲಿಕಾರನ ಕನಿಷ

ದಿನಗೂಲಿ ೬ ಆಣೆ. ವ್ಯವಸ್ಥಾಪಕನಿಗೆ ತಿಂಗಳಿಗೆ ೭೦೦ ರೂ॥ ಸಂಬಳ. ಕಾಗದದ ಕಾರ್ಖಾನೆ ನೋಡಲಿಕ್ಕೆ ೧೫ ತಾಸು ಹಿಡಿಯಿತು. ಕಾರ್ಖಾನೆಯವರು ಕೊಟ್ಟ ಒಂದು ಪ್ರಕಟನೆಯಿಂದ ನಮಗೆ ತಿಳಿದು ಬಂದ ಸಂಗತಿಗಳೇನಂದರೆ—"೧೯೩೬ರಲ್ಲಿ ಕಾರ್ಖಾನೆಯ ಆರಂಭ. ಶೇ೪೯ ಹೋಲ್ಡರ್‌ರಿಂದ ನಡೆದದ್ದು. ಸರ್ಕಾರವು ಪುಕ್ಕಟೆಯಾಗಿ ಸ್ಥಳಕೊಟ್ಟಿದೆ. ಸುತ್ತಲಿನ ಅರಣ್ಯಗಳಲ್ಲಿ ಬೆಳೆಯುವ ಬಿದಿರು ಗಿಡದ ತೊಗಟೆಗಳನ್ನು ಅಗ್ಗವಾಗಿ ಕೊಡುವ ಹಾಗೂ ತಯಾರಾದ ಕಾಗದವನ್ನು ಕೊಂಡುಕೊಳ್ಳುವ ಕರಾರಿಗೆ ಸರ್ಕಾರವು ಒಪ್ಪಿಕೊಂಡಿದೆ. ಜರ್ಮನ್ ವೈಜ್ಞಾನಿಕರು ಇದರ ಮೇಲ್ವಿಚಾರಣೆ ಮಾಡುತ್ತಿದ್ದು, ಈಗ ಯುದ್ಧದ ಸಲುವಾಗಿ ಅವರು ತಮ್ಮ ದೇಶಕ್ಕೆ ಹೊರಟುಹೋಗಿದ್ದಾರೆ' ಇತ್ಯಾದಿ.

ಸ್ವಲ್ಪ ವಿಶ್ರಾಂತಿಯ ನಂತರ ನಾವು **ಸಿಮೆಂಟ್ ಕಾರ್ಖಾನೆಯನ್ನು** ಪ್ರವೇಶಿಸಿದೆವು. ಇಲ್ಲಿಯ ಕಚ್ಚಾಮಾಲೆಂದರೆ—ವಜ್ರದುಂಡೀ ಕಲ್ಲು, ಉಸುಕು, ರಂಗೋಲಿ ಕಲ್ಲು, ಕರ್ಲಮಣ್ಣು. ಕಲ್ಲು ಹೊತ್ತು ತಂದ ಉಗಿಬಂಡಿಯ ಡಬ್ಬಿಯನ್ನು ಒಂದು ತಗ್ಗಿನಮೇಲೆ ನಿಲ್ಲಿಸಿ, ಡಬ್ಬಿಯ ಬುಡದ ಕಿಂಡಿಯನ್ನು ತೆಗೆಯಲು ಕಲ್ಲು ಕೆಳಗೆ ತಗ್ಗಿನಲ್ಲಿ ಇಳಿಯುವವು. ಅಲ್ಲಿ ಹವಣಿಯಾದ ಹಳಕು ಸಿದ್ಧವಾಗುವದು. ಕಲ್ಲು, ಉಸುಕು ಬೇರೆ ಬೇರೆ ಬೀಸುವಾಗ ಅದರಲ್ಲಿ ನೀರು ಬಂದು ಸುರಿದು, ಒಂದುಗೂಡುವದು, ಒಳಿಕ ಅದು ಕಾವಿನಿಂದ ಕಪ್ಪು ಬಣ್ಣ ಧಾರಣ ಮಾಡಿ, ಹರಳುಹರಳಾಗುವದು. ಮತ್ತೆ ಅದು ರಂಗೋಲಿ ಹರಳಿನೊಡನೆ ಬೀಸಲ್ಪಡುವದು ಬೀಸುವಾಗಲೆ ಅದರಲ್ಲಿ ಕಲ್ಲುನಾರಿನ ರಸ ಬೆರೆಸುವರೆಂದು ಹೇಳುವರು. ಮುಂದೆ ಕರ್ಲಮಣ್ಣಿನ ರಾಡಿಯನ್ನು ಅದರಲ್ಲಿ ಬೆರೆಸಿ, ಪುನಃ ಪ್ರವಾಹಿರೂಪಕ್ಕೆ ತಂದು, ಅದನ್ನು ಬಂಬಿನಲ್ಲಿ ಹಾಕಿ ೫೦೦° ಉಷ್ಣತೆ ಕೊಡುವದರಿಂದ ಅದು ಆರಿ, ದೊಡ್ಡ ದೊಡ್ಡ ಗುಳಿಗೆಗಳಾಗುತ್ತವೆ. ಅದನ್ನು ಪುಡಿ ಮಾಡಿ ಪೈಪಿನಲ್ಲಿ ಮೇಲೆ ಕಳಿಸುವರು. ತೂಕ ಮಾಡಿ ಒಂದೊಂದು ಚೀಲದಲ್ಲಿ ೧೧೨ ಪೌಂ. ತುಂಬಿ, ಸೀಲು ಮಾಡುವರು. ಆ ಕಾರ್ಖಾನೆಯಲ್ಲಿ ದಿನಾಲು ೭೫ ಟನ್ನು ಸಿಮೆಂಟು ತಯಾರಾಗುತ್ತದೆ.

ಅಂದು ರಾತ್ರಿ ಹಾಗೂರಿನಲ್ಲಿಯ ತಾ.ಮುಂಜಾನೆ **ಕಬ್ಬಿಣದ ಕಾರ್ಖಾನೆಯನ್ನು** ನೋಡಿದೆವು. ಭದ್ರಾವತಿಯಿಂದ ೮–೯ ಮೈಲು ದೂರವಾಗಿದ್ದ ಕೆಮ್ಮಣ್ಣುರಡಿಯಿಂದ ಕಬ್ಬಿಣದ ಅದುರು ಬರುವುದೆಂದು ಹೇಳಿದರು. ಅದರಿಂದ ಬೀಡು, ಕಬ್ಬಿಣ, ಉಕ್ಕು ಇವುಗಳನ್ನು ತಯಾರಿಸುವರು. ಅದುರು ಕರಗಿಸುವ ಕ್ರಮ ಹೇಗೆಂದರೆ—ಒಂದು ಹೂಡೆಯಂಥ ದೊಡ್ಡ ಮುಸಿಯಲ್ಲಿ ಅದುರಿನ ಒಂದು ಥರ, ಕಲ್ಲಿದ್ದಲಿನ ಒಂದು ಥರ, ಈ ಪ್ರಕಾರ ತುಂಬಿ ಅದಕ್ಕೆ ೫೦೦° ಉಷ್ಣತೆ ಕೊಡುತ್ತಾರೆ ಅದರಿಂದ ಅದುರಿನೊಳಗಿನ ಕಬ್ಬಿಣದಅಂಶವು ಕರಗಿ ಹರಿದು ಬೇರಾಗುತ್ತದೆ. ಅದೇ

ೀಡು. ಆ ಬೀಡನ್ನು ಪುನಃ ಸುಣ್ಣದ ಹರಳಿನ ಥರದಲ್ಲಿ ಕಾಯಿಸಲು ಅದರಲ್ಲಿಯ ಹೊಲಸು ಹೋಗಿ ಬಿಡುತ್ತದೆ. ಆ ಮೇಲೆ ಅದರಲ್ಲಿ ಹಳೆಯ ಕಬ್ಬಿಣ ರಸವನ್ನು ಇರೆಯಿಸಿ, ಮ್ಯಾಂಗೇನೀಜ್, ಸುಣ್ಣದ ಹರಳು ಇವುಗಳೊಡನೆ ಕರಗಿಸಿದರೆ ಉಕ್ಕು ಆಗುತ್ತದೆ.

ಸುಮಾರು ೨ ಬಿಘೆಯಷ್ಟು ಸ್ಥಳದಲ್ಲಿ ಉಸುಕಿನಿಂದ ರಚಿಸಿದ ಪಡಿಯಚ್ಚಿನಲ್ಲಿ, ಬೀಡಿನ ರಸದ ಪ್ರವಾಹವು ಬಂದು ಬೀಳುತ್ತಿರುವ ದೃಶ್ಯವನ್ನು ನೋಡಿದರೆ, ವ್ಯಕ್ತಿಗತ-ಪರಮಾತ್ಮನ ಅಗಾಧಸಾಮರ್ಥ್ಯಕ್ಕೆ ಭಯಪಡಬೇಕಾಗುತ್ತದೆ. ಅಲ್ಲಿಯ ಕೆಲಸಗಾರರು, ವಿಶ್ವಕರ್ಮವನ್ನೆಸಗುವ ವೀರಕರ್ಮಿಗಳಂತೆ ಕುಶಲತೆಯಿಂದ ಕರ್ಮವನ್ನೆಸಗಬೇಕಾಗುತ್ತದೆ. ಈ ಅದ್ಭುತ ಕಾರ್ಯಸೃಷ್ಟಿಗೆ ಮಾನ್ಯರಾದ—**ಸರ್ ಎಶ್ವೇಶ್ವರಯ್ಯನವರ ಅಭೀಪ್ಸೆಯು, ವಿಶ್ವನಾಥನ ಇಚ್ಛೆಯಂತೆ** ಅದಮನೀಯವಾದ ಕಾರಣವಾಗಿಬಿಟ್ಟಿರುವುದು! ಎಲುವಿನ ಗೂಡಿನಂಥ ಒಬ್ಬ ಪುಡಿ ಮನುಷ್ಯನು ಎಂಥ ಅದ್ಭುತ ಶಕ್ತಿಯ ನಿರ್ಮಾಣಕ್ಕೆ ಕಾರಣನಾಗಿರುವನಲ್ಲ! ಇರಲಿ.

ಇಲ್ಲಿ ಪೈಪು, ನಳದ ಕೊಳಿವೆ, ಕಟಾಂಜನ, ಕುರ್ಚಿ, ಅಡಿಗಲ್ಲು, ಚಕ್ರಗಳು, ಕೊಲೆ-ಕಂಬಗಳು, ಲಂಗರಪಟ್ಟಿ, ರೇಲ್‌ವೇಹಳಿ, ಚಕ್ಕಡಿ ಹಳಿ ಮುಂತಾದವುಗಳು ಅದ್ಧವಾಗಿ ಹೊರಬೀಳುತ್ತವೆ. ಸು. ನಾಲ್ಕು ಸಾವಿರ ಕೆಲಸಗಾರರು ಬಿಡುವಿಲ್ಲದೆ ದುಡಿಯುತ್ತಾರೆ.

ತಾ. ೨೩ ನೆಯ ಮಧ್ಯಾಹ್ನ ೧೦೨ ಗಂಟೆಗೆ ಹೊರಟು ೪೨ ಗಂಟೆಗೆ ಹಾಸನಕ್ಕೆ ಬಂದೆವು. ಅಲ್ಲಿಯ ಮಿಡಲ್ ಹೈಸ್ಕೂಲಿನ ಮಾಸ್ತರರು, ನಿಲ್ದಾಣಕ್ಕೆ ಬಂದು ನಮ್ಮನ್ನು ಕರೆದೊಯ್ದು, ತಮ್ಮ ಹೈಸ್ಕೂಲಿನಲ್ಲಿ ಇಳಿಸಿದರು. ಮತ್ತು ಅವರೆಲ್ಲರೂ ಮಹನೀಯರು ನಮ್ಮ ಪ್ರವಾಸಕ್ಕೆ ಅವಶ್ಯವೇ ಅನುಕೂಲತೆಗಳನ್ನು ಒದಗಿಸಿಕೊಟ್ಟು, ನಮ್ಮ ಸಂಗಡ ಬಂದು ನೋಡತಕ್ಕಂಥ ಸ್ಥಳಗಳನ್ನು ಚೆನ್ನಾಗಿ ತೋರಿಸಿದುದಕ್ಕೆ ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು. ಮರುದಿನ ಮುಂಜಾನೆ ಸ್ಪೇಶಲ್ ಮೋಟಾರಿನಲ್ಲಿ ಹಳೆಬೀಡು ಬೇಲೂರುಗಳಿಗೆ ಹೋಗಿ ಮಧ್ಯಾಹ್ನಕ್ಕೆ ಮರಳಿ ಬಂದೆವು.

ಹಳೆಬೀಡಿನಲ್ಲಿ ಹೊಯ್ಸಳೇಶ್ವರ, ಕೇದಾರೇಶ್ವರ ಎಂಬ ಎರಡು ದೇವಾಲಯವಿವೆ. ಹೊಯ್ಸಳೇಶ್ವರ ದೇವಾಲಯದ ಹೊರಮಗ್ಗಲಿಗೆ, ಶಿಲಾಪ್ರತಿಮೆಗಳಿಂದ ರಾಮಾಯಣ, ಭಾರತ, ಶಿವ–ವಿಷ್ಣು ಇವರ ವಿವಿಧಲೀಲೆ, ಇವನ್ನೆಲ್ಲ ತೋರಿಸಿದ್ದಾರೆ. ೫ ಮೊಳ ಎತ್ತರವಾದ ಎರಡು ಬಸವಣ್ಣನ ವಿಗ್ರಹಗಳು, ಹಂಪೆಯ ಕಡಲೆ ಗಣಪನನ್ನು ಸ್ಮರಣೆಗೆ ತರುತ್ತವೆ. ಸುಳುಹಿನ ಅಂದವೇನು? ನಾಟ್ಯ-ನಟಿ

ಯರ ಭಂಗಿಯೇನು? ವಾದನಕಾರರ ಹಾವಭಾವವೇನು?—ಕಲ್ಲುಗಳೆಲ್ಲ ಮೂತ ನಾಡುವವು; ನೋಡಹೋದವರೇ ಕಲ್ಲಿನಂತೆ ನಿಂತುಬಿಡುತ್ತಾರೆ!

ಕೇದಾರೇಶ್ವನ ಗುಡಿಯಲ್ಲಿಯೂ ಕೆಲವು ಸುಂದರವಾದ ವಿಗ್ರಹಗಳಿರುತ್ತವೆ. ಆದರೆ ಮೂರ್ತಿಯಿಲ್ಲ.

ಬೇಲೂರ ಚೆನ್ನಕೇಶವ ದೇವಾಲಯ:— "ನಿನ್ನ ನೋಡದ ಈ ಜನ್ಮ ವ್ಯರ್ಥ। ಚೆನ್ನಕೇಶವಾ।" ಎಂದು 'ಶ್ರೀನಿವಾಸ'ರು ಯಾವ ಅರ್ಥದಲ್ಲಿಯೇ ಹಾಡಿರಲಿ, ಅದು ನಮಗಿಲ್ಲಿ ಸರಿಹೊಂದಿತು. ವಿಷ್ಣುವರ್ಧನನೆಂಬ ಅರಸನು ಜೈನ ಧರ್ಮವನ್ನು ಬಿಟ್ಟು ಶ್ರೀವೈಷ್ಣವ ಮತವನ್ನು ಸ್ವೀಕರಿಸಿ, ಈ ದೇವಾಲಯವನ್ನು ೧೧೧೭ ರಲ್ಲಿ ಕಟ್ಟಿಸಿದನು. ಚೆನ್ನಕೇಶವ ದೇವರಿಗೆ ವಿಜಯನಾರಾಯಣ ಎಂಬ ಇನ್ನೊಂದು ಹೆಸರಿರುತ್ತದೆ. ಐದು ಅಂತಸ್ತುಗಳ ಗೋಪುರವು ಮಹಾದ್ವಾರದಲ್ಲಿದೆ. ದೇವಾಲಯದ ಪ್ರಾಕಾರದ ೧೨ ಗುರುಸ್ಥಾನಗಳಲ್ಲಿ ೧೨ ಗುರುಮೂರ್ತಿಗಳಿವೆ. ದೇವರ ರಥ, ಸಿಂಹ, ಕುದುರೆ ಮುಂತಾದ ಹಿತ್ತಾಳೆಯ ವಾಹನಗಳು ೫ ಫೂಟು ಎತ್ತರವಾಗಿರುತ್ತವೆ.

ಹೊಯ್ಸಳೇಶ್ವರ ದೇವಾಲಯಕ್ಕೆ ಹೊರಮಗ್ಗಲಿಗೆ ಮೂರ್ತಿಗಳ ಸೊಬಗು ಕಂಡುಬಂದರೆ, ಚೆನ್ನಕೇಶವ ದೇವಾಲಯದಲ್ಲಿ ಒಳಮಗ್ಗಲು ನೋಡುವದು ಹೆಚ್ಚು ಅನ್ನಬೇಕು. ಕನ್ನಡಿ ನೋಡಿ ಎಡಕ್ಕೆ ಬೈತಲೆ ತೆಗೆಯುವ ಚೆಲುವೆ, ಅರ್ಧ ವಸ್ತ್ರವನ್ನು ಧರಿಸುವಷ್ಟರಲ್ಲಿ ಚೇಳನ್ನು ಕಂಡು ಗಾಬರಿಯಿಂದ ಅರಿವೆ ಜಾಡಿಸಿ ನಿಂತ ಸ್ತ್ರೀ, ಒಬ್ಬ ಸ್ತ್ರೀಯ ತಿರುಗುವ ಕೈಬಳೆ, ಬಹಳವೇನು, ಒಂದು ನೊಣ ಇವನ್ನೆಲ್ಲ ಕಲ್ಲಿನಲ್ಲಿ ಕಟೆದರೆಂದರೆ, ಶಿಲ್ಪಿಯ ತಪಸ್ಸು ಆದೆಂಥದೋ? ಈಗಿನ ಬೋಲ್ಟು, ನಟ್ಟು, ಸರಪಳಿ ಮೊದಲಾದವುಗಳ ಮೂಲಕಲ್ಪನೆಯನ್ನು ಇಲ್ಲಿಯ ಶಿಲ್ಪಗಳಲ್ಲಿ ಕಾಣಬಹುದು.

ಒಳಮಗ್ಗಲು ೪೪ ಕಂಬಗಳಿವೆ. ಹೊರಗಿನ ವಿಗ್ರಹಗಳನ್ನೆಲ್ಲ ಒಂದೇ ಒಂದು ಕಂಬದಲ್ಲಿ ಕೆತ್ತಿದ್ದಾರೆ. ಒಂದು ಕಂಬದಂತೆ ಇನ್ನೊಂದಿಲ್ಲ. ಅಷ್ಟು ವೈವಿಧ್ಯ! ನಂದಿಯ ವಿಗ್ರಹವೊಂದು **ಬೇಳೆಯ** ಕಾಳಿನಷ್ಟು ಸ್ಥಳದಲ್ಲಿ ಕೆತ್ತಲ್ಪಟ್ಟಿದೆ! ದೇವಾಲಯದ ಕಂಬಗಳೇ ಇಷ್ಟು ಶೋಭಿಸುವಾಗ, ಮೂರ್ತಿಯು ಬಂಗಾರದ ಒಡವೆಗಳಲ್ಲಿ ಪರಿಶೋಭಿಸುವುದು ವಾಸ್ತವವಲ್ಲವೇ? ದೇವರ ಆಸ್ತಿ ಲಕ್ಷಾಂತರ ರೂಪಾಯಿಗಳದು. ಉತ್ಸವಕಾಲದಲ್ಲಿ ಹರಿಜನರಿಗೂ ಮೂರು ದಿನ ಒಳಗೆ ಬರಲಿಕ್ಕೆ ಬುನಾದಿಯಿಂದ ಅಪ್ಪಣೆ ಆದೆಯಂತೆ.

ಆಂಗಳದಲ್ಲಿ ಸು. ೬೦ ಅಡಿಯ ಒಂದೇ ಕಲ್ಲಿನ ಕಂಬವು ಕಟ್ಟೆಯೊಂದರ ಮೇಲೆ ನಿಲ್ಲಿಸಲ್ಪಟ್ಟಿದೆ. ಅದಕ್ಕೆ ಗಚ್ಚು-ಸಿಮೆಂಟು ಇವುಗಳ ಸಂಪರ್ಕವೇ ಇಲ್ಲ.

ಒಳಿಕ ಪುನಃ ಹಾಸನಕ್ಕೆ ಬಂದು, ಜಳಕ-ಊಟಗಳನ್ನು ಮುಗಿಸಿಕೊಂಡೆವು. ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಶಾಖೆಯಾಗಿ ಇಲ್ಲೊಂದು ಕಾರ್ಖಾನೆಯಿದೆ. ಇಲ್ಲಿ ಚಾಕು, ಕತ್ತರಿ, ಚೂರಿ, ಸಲಿಕೆ, ಕಬ್ಬಿಣದ ಒಲೆ ಮುಂತಾದವು ತಯಾರಾಗುತ್ತವೆ. ಮರುದಿನ ಈ ಕಾರ್ಖಾನೆಯನ್ನು ನೋಡಿದ ಒಳಿಕ ಶ್ರೀ. ಮುರಾರಯ್ಯ ಎಂಬ ವ್ಯಾಪಾರಿಗಳೊಬ್ಬರ ಒಲುಮೆಯ ಆಮಂತ್ರಣದ ಪ್ರಕಾರ ಅವರಲ್ಲಿ ಉಪಾಹಾರ ತೀರಿಸಿಕೊಂಡು ಬಂದು, ಸಂಜೆಯ ೫ ಗಂಟೆಗೆ ಸ್ವೀ. ಮೋಟಾರಿನಲ್ಲಿ ಶ್ರವಣ ಬೆಳುಗೊಳಕ್ಕೆ ಚೆನ್ನರಾಯ ಪಟ್ಟಣದ ಮೇಲಿಂದ ಹಾದು ಹೋದೆವು. ಅಲ್ಲಿಯೂ ಇಳಕೊಳ್ಳಲಿಕ್ಕೆ ಮಿಡಲ್‌ಸ್ಕೂಲು. ರಾತ್ರಿ ೯ಕ್ಕೆ ಜೈನಮಠವೊಂದಕ್ಕೆ ಹೋಗಿ ಅಲ್ಲಿ ನಡೆದ ಶಾರದಾ ಪೂಜೆಯನ್ನು ನೋಡಿಬಂದೆವು.

ಮರುದಿನ ಬೆಳಗಿಗೆ (೨೬-೯) ಚಿಕ್ಕ ಬೆಟ್ಟವನ್ನು ಹತ್ತಿ ಭರತೇಶ, ಭುಜಬಲಿ ಇವರ ದೊಡ್ಡ ವಿಗ್ರಹಗಳನ್ನೂ ಚಂದ್ರಗುಪ್ತನ ಬಸದಿಯನ್ನೂ ನೋಡಿ, ಕೆಳಗಿಳಿದೆವು. ಹೊಟ್ಟೆಗೆ ಹಾಕದೆ ದೊಡ್ಡ ಬೆಟ್ಟ ಏರಲಿಕ್ಕೆ ಶಕ್ಯವಾಗಲಿಲ್ಲ. ದೊಡ್ಡ ಬೆಟ್ಟವೂ ಚಿಕ್ಕ ಬೆಟ್ಟದಂತೆ ಒಂದೇ ಒಂಡೆಯೆನ್ನಬಹುದು.

(ಮುಂದೆ ಸಾಗುವದು.)

ದುಃಖವಾರ್ತೆ

ನಮ್ಮ ಟ್ರೇನಿಂಗ್ ಕಾಲೇಜಕ್ಕೆ ಕಾರವಾರ ಜಿಲ್ಲಾ ಸ್ಕೂಲ್ ಬೋರ್ಡಿನಿಂದ ಬಂದ ಎರಡನೆಯ ವರ್ಷದ ವಿದ್ಯಾರ್ಥಿಗಳಲ್ಲೊಬ್ಬರಾದ **ಮಿ. ಬಿ. ಎಸ್. ನಾಯಿಕ** ಇವರು ತಾ॥ ೨೭-೧೧-೧೯೪೧ನೆಯ ದಿನ ಅಕಸ್ಮಾತ್ ನಿಧನ ಹೊಂದಿದರು. ಇದನ್ನು ಕೇಳಿ ಕಾಲೇಜದ ಶಿಕ್ಷಕರೂ ವಿದ್ಯಾರ್ಥಿಗಳೂ ಸಭೆ ಸೇರಿ ಈ ಕೆಳಗಿನಂತೆ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಿ ಅವರ ಕುಟುಂಬದವರಿಗೆ ತಿಳಿಸಿದರು.

"ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ಎರಡನೆಯ ವರ್ಷದ ವಿದ್ಯಾರ್ಥಿಗಳಲ್ಲೊಬ್ಬರಾದ **ಶ್ರೀ. ಮಿ. ಬಿ. ಎಸ್. ನಾಯಿಕ** ಇವರು ಈ ಹೊತ್ತು ಅಕಾಲಿಕವಾಗಿಯೂ ಅಕಸ್ಮಾತ್ತಾಗಿಯೂ ನಿಧನ ಹೊಂದಿರ ಸಂಗತಿಯನ್ನು ಕೇಳಿ ಟ್ರೇನಿಂಗ ಕಾಲೇಜದ ಶಿಕ್ಷಕವರ್ಗಕ್ಕೂ ಎಲ್ಲ ವಿದ್ಯಾರ್ಥಿಗಳಿಗೂ ಅತ್ಯಂತ ವಿಷಾದವಾಗಿರುವದು. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲೆಂದು ನಾವೆಲ್ಲರೂ ಅನನ್ಯಭಾವದಿಂದ ಪ್ರಾರ್ಥಿಸುವೆವು."

ಈ ವರ್ಷದ ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ		ವಿಷಯ	ಗುಣಗಳು.
	ಇಂದ	ವರೆಗೆ		
ಗುರುವಾರ	೧೧-೦	೧೧-೧೫	ಉಮೇದುವಾರರ ಹೆಸರು ಹಚ್ಚಿಕೊಳ್ಳುವದು	
೫-೨-೧೯೪೨	೧೧-೩೦	೧೨-೩೦	ಅಂಕಗಣಿತ	೧೦೦
	೧೨-೩೦	೨ -೧೫	ಸಾಮಾನ್ಯವಿಜ್ಞಾನ-ಮೊದಲನೆಯ ಕಾಗದ (ಇತಿಹಾಸ ಮತ್ತು ರಾಜಕೀಯ ಭೂಗೋಲ)	೫೦
	೩-೦	೩ -೪೫	ಸಾಮಾನ್ಯವಿಜ್ಞಾನ-ಎರಡನೆಯ ಕಾಗದ (ಪ್ರಾಕೃತಿಕ ಭೂಗೋಲ ಮತ್ತು ಶಾಸ್ತ್ರೀಯ ವಿಷಯ)	೫೦
ಶುಕ್ರವಾರ ೬-೨-೧೯೪೨	೨-೦	೨ -೪೫	ಪ್ರಾಂತಿಕ ಭಾಷೆ-ಮೊದಲನೆಯ ಕಾಗದ (ಮೌನವಾಚನ, ಪುನರ್ಲೇಖನ ಮತ್ತು ನಿಬಂಧ)	೫೦
	೪-೦	೪ -೪೫	ಪ್ರಾಂತಿಕ ಭಾಷೆ-ಎರಡನೆಯ ಕಾಗದ (ವಾಚನ, ಅರ್ಥ ತಿಳಿದುಕೊಳ್ಳುವದು, ಮುಂತಾದವು.)	೫೦

ಧಾರವಾಡ ಜಿಲ್ಲೆಯಲ್ಲಿ ವೆಂಕಾಸಾನಿ ಸ್ಕಾಲರ್‌ಶಿಪ್ಪಿನ ಮತ್ತು ಮಹಮ್ಮಡನ ಬರ್ಸರಿ ಫಂಡಿನ ಸ್ಕಾಲರ್‌ಶಿಪ್ಪಿನ ಸಲುವಾಗಿ ನಡೆಯುವ ಪರೀಕ್ಷೆಗಳೂ ಇದೆ ಕಾಲದಲ್ಲಿಯೇ ನಡೆಯುವವು.

(ಸಹಿ.) J. R. Bhandiwad

ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ಪ್ರಾಥಮಿಕ ಶಾಲೆಗಳಲ್ಲಿ ಅಪವ್ಯಯ

ಶ್ರೀ. ಜೆ. ಪಿ. ನ್ಯಾಯಿಕರು, ಬಿ. ಎ
ಮುಂಬಯಿ ಪ್ರಾಂತಿಕ ಸರಕಾರದ ಪ್ರಾಥಮಿಕ ಶಿಕ್ಷಣ ಸಮಿತಿಯ ಸದಸ್ಯರು.

೧. **ಅಪವ್ಯಯವೆಂದರೇನು?** ಶಿಕ್ಷಣ ವಿಷಯಕ ಚರ್ಚೆಯಲ್ಲಿ ಅಪವ್ಯಯ ಎಂಬ ಪದವನ್ನು ಕೆಲಕೆಲವು ಸಾರೆ ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಉಪಯೋಗಿಸುವುದುಂಟು. ಕಾಲದ ಅಪವ್ಯಯ ಶ್ರಮದ ಅಪವ್ಯಯ ಮುಂತಾದವುಗಳಿಗೆ ಕಾರಣವಾಗುವ ಪದ್ಧತಿಯ ದೋಷಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಅಪವ್ಯಯವು ಇದರಲ್ಲಿ ಸಮಾವೇಶವಾಗುವದು. ಕೆಳಗೆ ಹೇಳಿರುವ ಅವತರಣದಲ್ಲಿ ಅದರ ಲೇಖಕರು ಅಪವ್ಯಯವೆಂಬ ಪದವನ್ನು ಎಷ್ಟು ವ್ಯಾಪಕಾರ್ಥದಲ್ಲಿ ಉಪಯೋಗಿಸಿರುವರೆಂಬುದರ ವಿವೇಚನೆಯನ್ನು ಕಾಣಬಹುದು.

"ಆರ್ಥಿಕ–ಶೈಕ್ಷಣಿಕ ಮತ್ತು ಆಡಳಿತೆಗೆ ಸಂಬಂಧಿಸಿದ ಅಪವ್ಯಯಗಳ ಕಾರಣಗಳನ್ನು ಕುರಿತು ಆಯಾ ಪ್ರಾಂತಿಕ ಸರಕಾರಗಳ ವರದಿಯಲ್ಲಿ ವಿವೇಚಿಸಲಾಗಿದೆ. (೧) ಚಿಕ್ಕಮಕ್ಕಳು ಸಾಕಾದಷ್ಟು ಶಿಕ್ಷಣವನ್ನು ಪಡೆಯುವದಕ್ಕಿಂತ ಮೊದಲೆ ಅವರನ್ನು ಶಾಲೆಯಿಂದ ಬಿಡಿಸುವದು. ಇಂಥವರಲ್ಲಿ ಒಕ್ಕಲಿಗರ ಮತ್ತು ಕೂಲಿಕಾರರ ಮಕ್ಕಳೇ ಹೆಚ್ಚಾಗಿರುವರು. ಯಾಕಂದರೆ ಅವರು ತಮ್ಮ ತಂದೆ ತಾಯಿಗಳ ಉದ್ಯೋಗ–ವ್ಯವಸಾಯಗಳಿಗೆ ಅಲ್ಪ ಸ್ವಲ್ಪ ನೆರವಾಗಲು ತಕ್ಕಷ್ಟು ಪ್ರಬುದ್ಧರಾದ ಕೂಡಲೆ ಬಡತನದ ಮೂಲಕ ಚಿಕ್ಕಮಕ್ಕಳನ್ನು ಶಾಲೆಯಿಂದ ಬಿಡಿಸಿ ತಮ್ಮ ಕೆಲಸದಲ್ಲಿ ತೊಡಗಿಸಿಬಿಡುವರು. (೨) ಹೆಚ್ಚು ಶಾಲೆಗಳಿಗೆ ಸಾಕಾದಷ್ಟು ಸ್ಥಳವೂ ಶಿಕ್ಷಕರ ಸಂಖ್ಯೆಯೂ ಇಲ್ಲದಿರುವದು. (೩) ಒಬ್ಬನೇ ಶಿಕ್ಷಕನು ಅನೇಕ ಕ್ಲಾಸುಗಳನ್ನು ಕಲಿಸಬೇಕಾಗಿರುವದು. (೪) ಶಿಕ್ಷಕರು ಸಾಕಾದಷ್ಟು ಶಿಕ್ಷಣ ಹೊಂದದೆ ಇರುವದು. (೫) ಅಯೋಗ್ಯವಾದ ಶಿಕ್ಷಣ ಮತ್ತು ಯೋಗ್ಯವಾದ ಮೇಲ್ವಿಚಾರಣೆ ಇಲ್ಲದಿರುವದು. (೬) ಇಡಿಯ ವರ್ಷದಲ್ಲೆಲ್ಲ ಕಾಲ ನಿರ್ಬಂಧವಿಲ್ಲದೆ ವಿದ್ಯಾರ್ಥಿಗಳ ಹೆಸರು ಹಚ್ಚಿಕೊಳ್ಳುವದು. (೭) ಅನಿಯಮಿತ ಹಾಜರಿ. (೮) ಸ್ಥಾನಿಕ ಸಂಸ್ಥೆಯ ಆಡಳಿತೆಯ ದೋಷಗಳು. ಇವೇ ಮೊದಲಾದ ಕಾರಣಗಳ ಮೂಲಕ ಪ್ರಾಥಮಿಕ ಶಾಲೆಗಳಲ್ಲಿ ಅಪವ್ಯಯವಾಗುತ್ತಿರುವದು. ಇವಿಷ್ಟೆ ಅಲ್ಲ. ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಪ್ರಗತಿಯು ತಕ್ಕಂತೆ ಆಗದಿರುವದರಿಂದ ಒಂದು ವರ್ಗದಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಉಳಿಯು

ಬೇಕಾಗುವದರಿಂದ ಆಗುವ ಅಪವ್ಯಯವೂ ಕೂಡ ಇದರಲ್ಲಿ ಸಮಾವೇಶ ವಾಗುವದು."

ಹರ್ಟಾಗ್ ಕಮೀಟಿಯವರು ತಮ್ಮ ವರದಿಯಲ್ಲಿ "ಚಿಕ್ಕಮಕ್ಕಳು ಪ್ರಾಥಮಿಕ ಶಾಲೆಯ ಅಭ್ಯಾಸಕ್ರಮವನ್ನು ಪೂರ್ಣಮಾಡುವದಕ್ಕಿಂತ ಮೊದಲೆ ಅವರನ್ನು ಬೇಕಾದಾಗ ಶಾಲೆಯಿಂದ ಬಿಡಿಸುವದೇ ಅಪವ್ಯಯವು" ಎಂದು ಅರ್ಥ ಮಾಡಿರುವರು. ಈ ಸಂದರ್ಭದಲ್ಲಿ "ಅಪವ್ಯಯ" ಈ ಶಬ್ದವನ್ನು ಕೆಲವೊಂದು ನಿಯಮಿತ ಅರ್ಥದಲ್ಲಿಯಷ್ಟೇ ಉಪಯೋಗಿಸಲಾಗಿದೆ. ಮತ್ತು ಇದರಿಂದ ನಮ್ಮ ಪ್ರಾಥಮಿಕ ಶಿಕ್ಷಣದ ಒಂದು ದೊಡ್ಡ ದೋಷವನ್ನು ಎತ್ತಿ ತೋರಿಸಿದಂತಾಗು ವದು. ಸಾಮಾನ್ಯ ತರಗತಿಯವರ ಮಕ್ಕಳು ಶಾಲೆಯಲ್ಲಿ ಕಲಿಯುವ ತೀರ ಸ್ವಲ್ಪ ಕಾಲಾವಧಿಯೂ ಇದರಿಂದ ಸೂಚಿತವಾಗುವದು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಬಗೆಯ ಶಾಸ್ತ್ರೀಯ ಚರ್ಚೆಯಲ್ಲಿಯೂ ವಿಮರ್ಶೆಯಲ್ಲಿಯೂ ಇಷ್ಟೇ ನಿಯಮಿತ ಅರ್ಥದಲ್ಲಿಯೇ ಈ 'ಅಪವ್ಯಯ' ಎಂಬ ಶಬ್ದವನ್ನು ಉಪ ಯೋಗಿಸುವದು ತುಂಬ ಅವಶ್ಯಕವೆನಿಸುವದರಿಂದ ಈ ಲೇಖನದಲ್ಲಿಯೂ ಕೂಡ ಇಷ್ಟೇ ನಿಯಮಿತ ಅರ್ಥದಲ್ಲಿಯೇ ಈ ಪದವನ್ನು ಪ್ರಯೋಗಿಸಲಾಗಿದೆ.

೨. ಅಪವ್ಯಯದ ಲೆಕ್ಕವನ್ನು ತೆಗೆಯುವ ಬೇರೆ ಬೇರೆ ರೀತಿಗಳು

೧. ಹಿಂದುಸ್ತಾನ ಸರಕಾರದ ಎಜ್ಯುಕೇಶನಲ್ ಕಮಿಶನರರಾದ ಸರ್ ಎಚ್, ಶಾರ್ಪ ಎಂಬವರು ಅಪವಯ್ಯದ ಲೆಕ್ಕವನ್ನು ತೆಗೆಯುವ ರೀತಿಯನ್ನು ನಮಗೆ ಮೊತ್ತಮೊದಲು ಹೇಳಿದರು. ಅವರು ಹಿಂದುಸ್ತಾನದೊಳಗಿನ ಶಿಕ್ಷಣದ ೧೯೦೭ ರಿಂದ ೧೯೧೭ ರ ವರೆಗಿನ ಪಂಚವಾರ್ಷಿಕ ವಿಮರ್ಶೆ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿರುವರು. ಅವರು ಜನಗಣನೆ ಮತ್ತು ವಿದ್ಯಾಖಾತೆಯ ವರದಿ ಇವುಗಳಲ್ಲಿ ಕೊಟ್ಟಿರುವ ಅಂಕೆ ಸಂಖ್ಯೆಗಳನ್ನು ತುಲನೆಮಾಡಿ ನೋಡಿ ಅಪವ್ಯಯದ ಲೆಕ್ಕವನ್ನು ತೆಗೆಯಲು ಹವಣಿಸಿದ್ದಾರೆ. ಅವರ ಅಪವ್ಯಯದ ಲೆಕ್ಕದ ರೀತಿಯು ಈ ಬಗೆಯಾಗಿದೆ:—

೧೯೦೧ರ ಮತ್ತು ೧೯೧೧ರ ಜನಗಣನೆಯ ಲೆಕ್ಕವನ್ನು ತೆಗೆದುಕೊಳ್ಳೋಣ. ೧೯೦೧ ರಲ್ಲಿ ೫ ರಿಂದ ೧೦ ವರ್ಷಗಳ ವರೆಗಿನ ವಯಸ್ಸಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನೂ ಅದೇ ವಯಸ್ಸಿನ ಗುಂಪಿಗೆ ಸೇರುವ ಸಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯನ್ನೂ ತಕ್ಕೊಂಡು ಆ ಎರಡು ಸಂಖ್ಯೆಗಳ ಪ್ರಮಾಣವನ್ನು ಮೊದಲು ಗೊತ್ತುಮಾಡೋಣ ಮತ್ತು ೧೯೧೧ನೆಯ ಜನಗಣನೆಯಲ್ಲಿ ೫ ರಿಂದ ೧೦ ವರ್ಷಗಳ ವಯಸ್ಸಿನ ಗುಂಪಿನವರು ೧೫–೨೦ರ ವರೆಗಿನ ವಯಸ್ಸಿನವರ

ಗುಂಪಿಗೆ ಹೋಗುವದರಿಂದ ಅವರಲ್ಲಿ ಸಾಕ್ಷರಿಗಳಾದವರ ಸಂಖ್ಯೆಗೂ ಆ ವಯಸ್ಸಿನ ಗುಂಪಿನವರ ಸಂಖ್ಯೆಗೂ ಇರುವ ಪ್ರಮಾಣವನ್ನೂ ಗೊತ್ತುಮಾಡೋಣ ಇದು ಹಿಂದಿನ ಪ್ರಮಾಣಕ್ಕಿಂತ ಎಷ್ಟು ಕಡಿಮೆಯಾಗುವದೋ ಅಷ್ಟು ಅಪವ್ಯಯ ವಾಯಿತೆಂದು ಗೊತ್ತಾಗುವದು.

೧೯೨೧ ರಲ್ಲಿ $\frac{\text{೫ರಿಂದ ೧೦ ವಯಸ್ಸಿನ ಮಕ್ಕಳಲ್ಲಿ ಶಾಲೆಗೆ ಹೋಗುತ್ತಿದ್ದವರ ಸಂಖ್ಯೆ}}{\text{೧೫ರಿಂದ ೨೦ ವಯಸ್ಸಿನವರಲ್ಲಿ ಸಾಕ್ಷರಿಗಳಾದವರ ಸಂಖ್ಯೆ}}$

$= \frac{\text{೫ರಿಂದ ೧೦ ವಯಸ್ಸಿನ ಮಕ್ಕಳ ಒಟ್ಟು ಸಂಖ್ಯೆ}}{\text{೧೫ರಿಂದ ೨೦ ವಯಸ್ಸಿನ ಜನರ ಒಟ್ಟು ಸಂಖ್ಯೆ}}$ ೧೯೩೧ ರಲ್ಲಿ

ಈ ಪ್ರಮಾಣದಲ್ಲಿ ಹೊರಡುವ ಸಂಖ್ಯೆಯು ಅಪವ್ಯಯದ ಮಾನವನ್ನು ತೋರಿಸುವದು. ಮತ್ತು ಇದಕ್ಕೆ ಪ್ರಾಥಮಿಕ ಅಭ್ಯಾಸಕ್ರಮವನ್ನು ಮುಗಿಸದೆ ಶಾಲೆಯನ್ನು ಬಿಡುವದೇ ಮುಖ್ಯಕಾರಣವಾಗಿದೆ. ಒಮ್ಮೆ ಸಾಕ್ಷರಿಗಳಾಗಿದ್ದು ತಿರುಗಿ ನಿರಕ್ಷರಿಗಳಾದವರ ಸಂಖ್ಯೆಯು ಇದರಲ್ಲಿ ಸೇರಿದ್ದರೂ ಅದು ಅಷ್ಟು ಹೆಚ್ಚಾಗಿರುವದಿಲ್ಲವಾದ್ದರಿಂದ ಅದನ್ನು ಬಿಟ್ಟು ಬಿಡಬಹುದು. ಒಮ್ಮೆ ಕಲಿತದ್ದನ್ನು ಪೂರಾ ಮರೆತು ಬಿಟ್ಟು ನಿರಕ್ಷರಿಗಳಾಗುವದಕ್ಕೆ ಬರೇ ಹತ್ತು ವರ್ಷಗಳ ಅವಧಿಯು ತೀರ ಚಿಕ್ಕದೆನಿಸುವದು.

ಈ ಪದ್ಧತಿಯು ನಿಜವಾಗಿಯೂ ಯೋಗ್ಯವಾದುದೇನೋ ಹೌದು. ಆದರೆ ಇದರಲ್ಲಿ ಕೇವಲ ಜನಗಣನೆಯ ಅಂಕೆ ಸಂಖ್ಯೆಗಳ ಮೇಲೆಯೇ ಅವಲಂಬಿಸ ಬೇಕಾಗುವದು. ಮತ್ತು ಈ ಅಂಕೆ ಸಂಖ್ಯೆಗಳಲ್ಲಿ ತಪ್ಪು ಹೊರಡುವ ಸಂಭವವೂ ಹೆಚ್ಚು. ಮೇಲಾಗಿ ಹತ್ತು ಹತ್ತು ವರ್ಷಗಳಿಗೊಮ್ಮೆಯೇ ನಮಗೆ ಈ ಅಂಕೆ-ಸಂಖ್ಯೆಗಳು ದೊರೆಯುವವು. ಬಹು ತೀವ್ರವಾಗಿ ಬದಲಾಗುತ್ತ ಸಾಗಿರುವ ಈಗಿನ ಕಾಲದಲ್ಲಿರುವ ನಾವು ನಮ್ಮ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲಿಕ್ಕೆ ಹತ್ತು ವರುಷಗಳವರೆಗೂ ದಾರಿ ನೋಡುತ್ತ ಕೂಡ್ರುವದು ಸಮಂಜಸವಾಗಲಾರದು. ಅರ್ಥಾತ್ ಈ ರೀತಿಯು ವ್ಯಾವಹಾರಿಕ ದೃಷ್ಟಿಯಿಂದ ನಮಗೆ ಅಷ್ಟು ಪ್ರಯೋಜನಕಾರಿಯಾಗಲಾರದು.

೨. ಹಿಂದುಸ್ತಾನ ಸರಕಾರದ ಎಜ್ಯುಕೇಶನಲ್ ಕಮಿಶನರರಾದ ಮಿ. **ಲಿಟೆಲ್‌ಹೇಲಿಸ್** ಎಂಬ ಇನ್ನೊಬ್ಬರು ಅಪವ್ಯಯದ ಲೆಕ್ಕವನ್ನು ತೆಗೆಯುವ ಇನ್ನೊಂದು ರೀತಿಯನ್ನು ಸೂಚಿಸಿರುವರು. ಹರ್ಟಾಗ್ ಕಮೀಟಿಯವರೂ ಇದೇ ಕ್ರಮವನ್ನು ಅನುಸರಿಸಿರುವರು. ಮತ್ತು ಎಲ್ಲ ವಿದ್ಯಾಖಾತೆಯ ಡಾಯರೆಕ್ಟರರು ಇದೇ ಕ್ರಮದಿಂದಲೇ ತಮ್ಮ ತಮ್ಮ ಪ್ರಾಂತಗಳ ಅಪವ್ಯಯದ

ಲೆಕ್ಕವನ್ನು ತೆಗೆಯುವರು. ಈ ಪದ್ಧತಿಯಲ್ಲಿ ಯಾವದೊಂದು ವರ್ಷದ ಲೆಕ್ಕದಲ್ಲಿ ಆರಂಭದ ವರ್ಗದಲ್ಲಿ ಇರುವ ಮತ್ತು ಕೆಲವೊಂದು ನಿಯಮಿತ ಕಾಲಾವಧಿಯ ತರುವಾಯ ಎಲ್ಲಕ್ಕೂ ಹೆಚ್ಚಿನ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗಳನ್ನು ತೆಗೆದುಕೊಂಡು ತುಲನೆ ಮಾಡುವರು. ಉದಾಹರಣೆಗಾಗಿ ಮುಂಬಯಿ ಇಲಾಖೆಯಲ್ಲಿ ಪ್ರಾಥಮಿಕ ಅಭ್ಯಾಸಕ್ರಮವು ೫ ವರ್ಷಗಳ ಅವಧಿಯದಿರುವದು. ೧೯೩೫-೩೬ನೆಯ ವರ್ಷದಲ್ಲಿ ಮುಂಬಯಿ ಇಲಾಖೆಯಲ್ಲಿ ಬಾಲಕರ ವರ್ಗದಲ್ಲಿ ೩೬೫೫೫೩ ಮಕ್ಕಳು ಓದುತ್ತಿರುವರೆಂದೂ ೧೯೩೯-೪೦ನೆಯ ವರ್ಷದಲ್ಲಿ ನಾಲ್ಕನೆಯ ಇಯತ್ತೆಯಲ್ಲಿ ೧೩೨೬೬೭ ವಿದ್ಯಾರ್ಥಿಗಳು ಇರುವರೆಂದೂ ಆಯಾ ವರ್ಷಗಳ ವರದಿಗಳಿಂದ ಗೊತ್ತಾಗುವದು. ಇದನ್ನು ನೋಡಿದರೆ ಈ ಅವಧಿಯಲ್ಲಿ ೨೩೨೮೮೬ ವಿದ್ಯಾರ್ಥಿಗಳು ಪ್ರಾಥಮಿಕ ಅಭ್ಯಾಸಕ್ರಮವನ್ನು ಮುಗಿಸದೆ ನಡುವೆಯೇ ಶಾಲೆಯನ್ನು ಬಿಟ್ಟಿರುವರೆಂದೂ ಅಷ್ಟು ಅಪವ್ಯಯವಾಯಿತೆಂದೂ ಗೊತ್ತಾಗುವದು. ಮತ್ತು ಇದು ನೂರಕ್ಕೆ ೬೫.೩ ದಷ್ಟು ಹೊರಡುವದು.

ಈ ಪದ್ಧತಿಯಲ್ಲಿಯೂ ಕೆಲವು ದೋಷಗಳಿವೆ. ಮೇಲಿನ ಉದಾಹರಣೆ ಯೊಳಗಿನ ಐದು ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆ ಯಾಗುವದಕ್ಕೆ ಮೂರು ಮುಖ್ಯ ಕಾರಣಗಳು ಇರುವವು.

೧. ವಿದ್ಯಾರ್ಥಿಗಳ ಮರಣ.

೨. ಕುಂಠಿತ ಪ್ರಗತಿಯು ಮೂಲಕ ಅಥವಾ ನಾಪಾಸಾಗಿ ಒಂದಕ್ಕಿಂತ ಹೆಚ್ಚು ವರ್ಷ ಒಂದೇ ಇಯತ್ತೆಯಲ್ಲಿ ಉಳಿಯುವದು.

೩. ತಕ್ಕ ಅವಧಿಗಿಂತ ಮೊದಲೆ ಶಾಲೆಯನ್ನು ಬಿಟ್ಟು ಹೋಗುವದು.

ನಮ್ಮ ದೇಶದಲ್ಲಿ ಬಾಲಮರಣದ ಸಂಖ್ಯೆಯೂ ಹಳ್ಳಿಯ ಶಾಲೆಗಳಲ್ಲಿ ಬಾಲಕರ ವರ್ಗವೇ ಮೊದಲಾದ ಕೆಳಗಿನ ತರಗತಿಗಳಲ್ಲಿ ಸಾಕಷ್ಟು ಪ್ರಗತಿ ಯಾಗದೆ ಇದ್ದು ಅಲ್ಲಿ ಹೆಚ್ಚು ಕಾಲ ಕಳೆಯುವವರ ಸಂಖ್ಯೆಯೂ ಹೆಚ್ಚಾಗಿರುವದ ರಿಂದ ನಿಜವಾದ ಅಪವ್ಯಯದ ಅಂಕೆ-ಸಂಖ್ಯೆಗಳು ಈ ಪದ್ಧತಿಯ ಲೆಕ್ಕದಿಂದ ಗೊತ್ತಾಗುವ ಸಂಭವವು ಕಡಿಮೆ ಎಂಬುದು ಸಹಜವೇ ಸರಿ.

೩. ಅಪವ್ಯಯದ ಲೆಕ್ಕವನ್ನು ತೆಗೆಯುವ ಇನ್ನೊಂದು ರೀತಿಯನ್ನು ಕೆಲಕೆಲವು ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುವದುಂಟು. ಯೋಗ್ಯವಾದ ಪದ್ಧತಿಯಿಂದ ಶಿಕ್ಷಣವು ಸಾಗಿರುವಾಗ ಆ ಪ್ರದೇಶದೊಳಗಿನ ಶಾಲೆಗಳಲ್ಲಿ ಬೇರೆ ಬೇರೆ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪ್ರಮಾಣವು ನಿರ್ದಿಷ್ಟವಾದದ್ದಿರು ವದು. ಉದಾಹರಣೆಗಾಗಿ, ಯಾವದಾದರೊಂದು ವರ್ಷದಲ್ಲಿ ಯಾವದೊಂದು

ಾಲೆಯೊಳಗಿನ ಬಾಲಕರ ವರ್ಗ ಮತ್ತು ೧ ರಿಂದ ೪ ಇಯತ್ತೆಗಳು (ಒಟ್ಟು
ುದು ವರ್ಗಗಳು) ಇವುಗಳಲ್ಲಿ ಕೂಡಿ ೧೦೦ ವಿದ್ಯಾರ್ಥಿಗಳು ಇರುವರೆಂದ
ಳಿಯೋಣ. ಆ ಸಂದರ್ಭದಲ್ಲಿ ಶಾಲೆಯ ಪರಿಸ್ಥಿತಿಯು ತುಂಬ ಯೋಗ್ಯವಾ
ುರುವದೆಂದು ಕಲ್ಪಿಸಿಕೊಂಡಾಗ ಎಲ್ಲ ತರಗತಿಗಳಲ್ಲಿ ಅಷ್ಟಷ್ಟೇ ವಿದ್ಯಾರ್ಥಿಗಳ
ಂದರೆ ಪ್ರತಿಯೊಂದು ವರ್ಗದಲ್ಲಿ ೨೦ ವಿದ್ಯಾರ್ಥಿಗಳು (೧೦೦÷೫=೨೦
ಇರಬೇಕಾಗುವದು. ಆದರೆ ನಿಜವಾಗಿ ನಾಲ್ಕನೆಯ ಇಯತ್ತೆಯ ಹಾಜ
ುಲ್ಲಿ ಕೇವಲ ಎಂಟೇ ವಿದ್ಯಾರ್ಥಿಗಳಿದ್ದರೆ (೨೦-೮=೧೨) ತ್ತಿಂ ದಷ್ಟು ಅಂದ
ೂರಕ್ಕೆ ೬೦ ಗಷ್ಟು ಅಪವ್ಯಯವಾಯಿತೆಂದು ಲೆಕ್ಕವು ಹೊರಡುವದು
ಈ ಪದ್ಧತಿಯು ಮೇಲೆ ಹೇಳಿದ ಎರಡು ಪದ್ಧತಿಗಳಿಗಿಂತಲೂ ಹೆಚ್ಚು ಸರಳವಾಗಿರ
ುದು. ಯಾಕಂದರೆ, ಇದರಲ್ಲಿ ೫ ಅಥವಾ ೧೦ ವರ್ಷಗಳ ಅಂಕೆ ಸಂಖ್ಯೆಗಳ
ೀಕಾಗಿರದೆ ಯಾವದಾದರು ಒಂದೇ ಒಂದು ವರ್ಷದ ಲೆಕ್ಕವು ಸಿಕ್ಕ ಕೂಡ
ಿದರಿಂದ ಅಪವ್ಯಯದ ಪ್ರಮಾಣವು ಸುಲಭವಾಗಿ ಹೊರಡುವದು. ಆದರೆ ಈ
ಪದ್ಧತಿಯೂ ನಿರ್ದುಷ್ಟವಾಗಿಲ್ಲ. ಇದರಲ್ಲಿ ಹಿಂದಿನ ಪದ್ಧತಿಗಳಲ್ಲಿ ಕಂಡುಬರು
ಎಲ್ಲ ದೋಷಗಳೂ ಕಂಡುಬರುವಲ್ಲದೆ ಇನ್ನೊಂದು ಹೆಚ್ಚಿನ ದೋಷ
ಇದರಲ್ಲಿ ಸಮಾವೇಶವಾಗಿರುವದು. ಇತ್ತೀಚೆಗೆ ಸಾಮಾನ್ಯ ಜನತೆಯು ಎಚ್ಚ
ುವದರಿಂದ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆದು ದಿನದಿನಕ
ಹೆಚ್ಚು ಹೆಚ್ಚು ಹೊಸ ಶಾಲೆಗಳು ಹುಟ್ಟುತ್ತಿರುವವು; ಮತ್ತು ಹೊಸಶಾಲೆಗಳ
ಸೊತ್ತವೊಡಲು ಬಾಲಕರವರ್ಗವೇ ದೊಡ್ಡದಾಗಿರುವದು. ಆದುದರಿಂ
ಬಾಲಕರ ವರ್ಗದಲ್ಲಿದ್ದಷ್ಟೇ ವಿದ್ಯಾರ್ಥಿಗಳು ಏಕ್ಕವರ್ಗಗಳಲ್ಲಿಯೂ ಇರು
ರೆಂಬುವ ಮೂಲ ತಿಳಿವಳಿಕೆಗೇ ಬಾಧೆ ಬರುವದು. ಮೇಲಾಗಿ ಮರಣ, ಕುಂಠಿ
ಪ್ರಗತಿಯಿಂದ ಒಂದು ವರ್ಗದಲ್ಲಿ ಹೆಚ್ಚು ಕಾಲ ಉಳಿಯುವದು, ಮತ್ತು ಸಾ
ುನ್ನು ಬಿಡುವದು ಮುಂತಾದ ಮೇಲೆ ಹೇಳಿದ ಕಾರಣಗಳಂತೂ ಇದರಲ್ಲಿಯು
ಇದ್ದೇ ಇರುವವು. ಆದ್ದರಿಂದ ಈ ವಿಷಯವನ್ನು ಶಾಸ್ತ್ರೀಯವಾಗಿ ವಿಮರ್ಶಿಸ
ಾಗ ಈ ಪದ್ಧತಿಯೂ ಕೂಡ ಸಮಂಜಸವಾಗಲಾರದು.

ಮೇಲೆ ಹೇಳಿದ ಎಲ್ಲ ಪದ್ಧತಿಗಳಲ್ಲಿ ವಿದ್ಯಾರ್ಥಿಗಳು ಅಕಾಲದಲ್ಲಿ ಸಾ
ುನ್ನು ಬಿಡುವರೆಂಬ ಮಾತೇನೋ ಇದ್ದೇ ಇರುವದು. ಆದರೆ ಚಿಕ್ಕಮಕ್ಕಳ
ಾಗೆ ಶಾಲೆಯನ್ನು ಅಕಾಲದಲ್ಲಿ ಯಾಕೆ ಬಿಟ್ಟುಹೋಗುವರೆಂಬುದರ ವಿವರಣೆಯು
ವುಗಳಲ್ಲಿ ಸರಿಯಾಗಿ ಸಿಗುವದಿಲ್ಲ. ಅವರು ಶಾಲೆಯನ್ನು ಬಿಡುವದಕ್ಕೆ ಅನೇ
ಾರಣಗಳಿರಬಹುದು. ಕೇವಲ ಅಂಕೆ ಸಂಖ್ಯೆಗಳನ್ನು ಹುಡುಕುವ ದೃಷ್ಟಿಯೊ
ನ್ನೇ ಇಟ್ಟುಕೊಂಡರೆ ಸಮ, ಕೆಲಸವು ಸಂಪೂರ್ಣವಾಗಲಾರದು. ಈ ಅಪವ್ಯಯವ

ಬೇರೆ ಬೇರೆ ಕಾರಣಗಳನ್ನೂ ಹೀಗೆ ಬೇರೆ ಬೇರೆ ಕಾರಣಗಳಿಂದಾಗುವ ಅಪವ್ಯಯದ ಲೆಕ್ಕವನ್ನೂ ಪ್ರಮಾಣವನ್ನೂ ಕಂಡುಕೊಳ್ಳುವದು, ಅದರ ನಿವಾರಣೋಪಾಯವನ್ನು ಕಂಡುಹಿಡಿಯಲಿಕ್ಕೆ ತೀರ ಅವಶ್ಯಕವೆನಿಸುವದು. ಮೇಲೆ ಹೇಳಿದ ಯಾವ ಪದ್ಧತಿಯಲ್ಲಿಯೂ ಈ ವಿವರಣೆಯು ಗೊತ್ತಾಗುವದಿಲ್ಲ.

೩. ಅಪವ್ಯಯದ ಸರಿಯಾದ ಲೆಕ್ಕವನ್ನು ತೆಗೆಯಲಿಕ್ಕೆ ಈ ಕೆಳಗಿನ ಪದ್ಧತಿಯನ್ನು ಉಪಯೋಗಿಸಬಹುದು.

(ಅ) ಶಾಲಾಖಾತೆಯವರು ಪ್ರತಿವರ್ಷ ಪ್ರತಿಯೊಂದು ಶಾಲೆಯ ಹೆಡ್ ಮಾಸ್ತರನಿಂದ ಒಂದು ವರದಿಯನ್ನು ತರಿಸಿಕೊಳ್ಳಬೇಕು. ಅದರಲ್ಲಿ ಹಿಂದಿನ ವರ್ಷದಲ್ಲಿ ಸಾಕ್ಷರತೆಯ ಅಭ್ಯಾಸಕ್ರಮವನ್ನು ಪೂರ್ಣಮಾಡಿಕೊಳ್ಳದೆ, ಎಂದರೆ ಪ್ರಾಥಮಿಕಶಾಲೆಯ ನಾಲ್ಕನೆಯ ಇಯತ್ತೆಯಲ್ಲಿ ತೀರ ಕಡಿಮೆಯಂದರೆ ೧೨೦ ದಿವಸಗಳವರೆಗೆ ಹಾಜರ ಇರದೆ ಶಾಲೆಯನ್ನು ಬಿಟ್ಟುಹೋದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕೊಟ್ಟಿರಬೇಕು. ಮತ್ತು ಆ ವಿದ್ಯಾರ್ಥಿಗಳ ಬಗ್ಗೆ ಕೆಳಗಿನ ವಿವರಣೆಯನ್ನು ಕೊಟ್ಟಿರಬೇಕು.

(೧) ಆ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವಾಗ ಕಲಿಯುತ್ತಿದ್ದ ಇಯತ್ತೆ.
(೨) ವಿದ್ಯಾರ್ಥಿಗಳು ಶಾಲೆಯನ್ನು ಬಿಡುವಾಗಿನ ವಯಸ್ಸು.
(೩) ಆ ವಿದ್ಯಾರ್ಥಿಗಳ ಜಾತಿ.
(೪) ಅವರು ಶಾಲೆಯನ್ನು ಬಿಡುವ ಕಾರಣ.

ಈ ವಿವರಣೆಯು ಶಾಲೆಯ ಜನರಲ್ ರಜಿಸ್ಟರಿನಲ್ಲಿ ಇರುವದೆಂದು ಗ್ರಹಿಸಿದರೆ ತಪ್ಪಾಗಲಾರದು. ಆದರೂ ಈ ಸಂದರ್ಭದಲ್ಲಿ ಒಂದು ಮುಂಜಾಗ್ರತೆಯ ಸೂಚನೆಯನ್ನು ಕೊಡುವದು ಅವಶ್ಯಕವೆನಿಸುವದು. ಶಿಕ್ಷಕರು ಸಾಮಾನ್ಯವಾಗಿ ಜನರಲ್ ರಜಿಸ್ಟರದೊಳಗಿನ 'ಶಾಲೆಯನ್ನು ಬಿಡುವ **ಕಾರಣ**' ಎಂಬ ಸದರನ್ನು ತುಂಬುವಾಗ ಸಾಕಾದಷ್ಟು ಲಕ್ಷ್ಯವೊರೈಸುವದು ಕಡಿಮೆ. ಹಲವು ವಿದ್ಯಾರ್ಥಿಗಳ ಹೆಸರಿನ ಮುಂದೆ 'ಬಿಟ್ಟನು' 'ಶಾಲೆಗೆ ಬಾರದ್ದರಿಂದ' ಮುಂತಾದ ಅಸ್ಪಷ್ಟ ಕಾರಣಗಳನ್ನೇ ಬರೆದಿರುವದುಂಟು. ಅಪವ್ಯಯದ ಕಾರಣವನ್ನು ಹುಡುಕುವ ಪಕ್ಕೆ ಹೊರಟಾಗ ಇಂಥ ಅಸ್ಪಷ್ಟ ಕಾರಣಗಳು ಯಾವ ವಿಚಾರಕ್ಕೂ ಒದಗಲಾರವು. ಹಳ್ಳಿಯ ಶಾಲೆಗಳ ಶಿಕ್ಷಕರು ಮನಸ್ಸು ಮಾಡಿದರೆ ಇದೇನು ಕಠಿಣ ಕಾರ್ಯವೆನಿಸಲಾರದು. ಇಷ್ಟೇ ಅಲ್ಲ, ದೊಡ್ಡ ದೊಡ್ಡ ಊರುಗಳ ಅಥವಾ ಪಟ್ಟಣಗಳ ಶಾಲೆಗಳಲ್ಲಿಯೂ ಸಹ ಶಾಲೆಯಲ್ಲಿಯ ಎಲ್ಲ ವಿದ್ಯಾರ್ಥಿಗಳ ತಂದೆ ತಾಯಿಗಳ ಪಾಲಕರ ಸಂಬಂಧದ ವಿವರಣೆಯುಳ್ಳ ಒಂದು ರಜಿಸ್ಟರವನ್ನಿಟ್ಟು ಅದರಲ್ಲಿ ತಕ್ಕ

ಮಾಹಿತಿಯನ್ನು ಬರೆಯುವ ಕೆಲಸವನ್ನು ಬೇರೆ ಬೇರೆ ಶಿಕ್ಷಕರಲ್ಲಿ ಹಂಚಿಕೊಟ್ಟರೆ ಒಳಿತಾಗುವದು. ಇದನ್ನು ಇಡುವದಕ್ಕೆ ಹತ್ತುವ ಶ್ರಮಕ್ಕಿಂತಲೂ ಇದರಿಂ ದಾಗುವ ಪ್ರಯೋಜನವು ಹೆಚ್ಚು ಬೆಲೆಯುಳ್ಳದ್ದೆಂಬುದನ್ನಂತೂ ಹೇಳಲೇ ಬೇಕಾಗಿಲ್ಲ. ವಿದ್ಯಾಖಾತೆಯವರು ಈ ಬಗ್ಗೆ ತಕ್ಕ ಸೂಚನೆ ಕೊಟ್ಟು ಶಿಕ್ಷಕರಿಂದ ಈ ಕೆಲಸ ಮಾಡಿಸಿಕೊಳ್ಳಲು ಅಂತಹ ಪ್ರತಿಬಂಧವೇನೂ ಇರಲಾರದು. ವಿ. ಗಳು ಸಾಲೆಯನ್ನು ಬಿಟ್ಟ ಕಾರಣವನ್ನು ಬಾಲಕರನ್ನು ಪಾಲಕರನ್ನು ಕೇಳಿ ತಿಳಿದು ಕೊಂಡು ರಜಿಸ್ಟರಿನಲ್ಲಿ ತುಂಬಲಿಕ್ಕೆ ಇದರಿಂದ ಅನುಕೂಲವಾಗುವದು.

(ಬ) ಮೇಲಿನ ಮಾಹಿತಿಯುಳ್ಳ ಪತ್ರಿಕೆಯನ್ನು ಪರಿಶೀಲಿಸುವದರಿಂದ ಒಂದು ವರ್ಷದಲ್ಲಿ ಸಾಕ್ಷರತೆಯ ಅಭ್ಯಾಸಕ್ರಮವನ್ನು ಪೂರ್ಣಮಾಡಿಕೊಳ್ಳದೆ ಸಾಲೆಯನ್ನು ಬಿಟ್ಟ ವಿದ್ಯಾರ್ಥಿಗಳ ಸಂಖ್ಯೆಯೂ ಅವರು ಸಾಲೆಯನ್ನು ಬಿಟ್ಟ ಕಾರಣಗಳೂ ಗೊತ್ತಾಗುವವು. ಇದೇ ವಿವರಣೆಯಲ್ಲಿ 'ಬೇರೆ ಸಾಲೆಗೆ ಹೋದನು' ಎಂಬ ಕಾರಣದಿಂದ ಸಾಲೆಯನ್ನು ಬಿಟ್ಟವರ ಸಂಖ್ಯೆಯೂ ಗೊತ್ತಾಗುವದು. ಇದೇರೀತಿಯಾಗಿ ಆಯಾಶಾಲೆಗಳಿಗೆ ನಾಲ್ಕನೆಯ ಇಯತ್ತೆಗೆ ಅಥವಾ ಕೆಳಗಿನ ಇಯತ್ತೆಗಳಿಗೆ ಬೇರೆ ಶಾಲೆಗಳಿಂದ ಲೀವ್ಹಿಂಗ್ ಸರ್ಟಿಫಿಕೇಟು ತಂದು ಹೊಸದಾಗಿ ಸೇರುವ ವಿದ್ಯಾರ್ಥಿಗಳ ಸಂಖ್ಯೆಯನ್ನೂ ನಾವು ದೊರಕಿಸಬಹುದು. ಶಾಲೆಯನ್ನು ಬಿಟ್ಟವರ ಸಂಖ್ಯೆಯಿಂದ ಹೀಗೆ ಒಂದು ಸಾಲೆಯಿಂದ ಬಿಟ್ಟು ಮತ್ತೊಂದು ಸಾಲೆಯನ್ನು ಸೇರಿದವರ ಸಂಖ್ಯೆಯನ್ನು ವಜಾ ಮಾಡಿದರೆ ಉಳಿಯುವ ಸಂಖ್ಯೆಯು ನಿಜವಾದ ಅಪವ್ಯಯದ ಸಂಖ್ಯೆಯಾಗುವದು. ಈ ಕೆಳಗಿನ ಸಮೀಕರಣದಿಂದ ಅಪವ್ಯಯದ ಶೇಕಡಾ ಪ್ರಮಾಣವನ್ನು ಕಂಡುಹಿಡಿಯಬಹುದು.

$$\left.\begin{matrix}\text{ಅಪವ್ಯಯದ}\\ \text{ಶೇಕಡಾ ಪ್ರಮಾಣ}\end{matrix}\right\} = ೧೦೦ \times \frac{\left(\begin{matrix}\text{ಸಾಕ್ಷರತೆಯನ್ನು ಹೊಂದುವ}\\ \text{ಮೊದಲೇ ಸಾಲೆಯನ್ನು ಬಿಟ್ಟ}\\ \text{ವರ ಸಂಖ್ಯೆ}\end{matrix}\right) - \left(\begin{matrix}\text{ಬೇರೆ ಸಾಲೆಗೆ ಹೋಗಿ}\\ \text{ಸೇರಿದ ವಿದ್ಯಾರ್ಥಿ}\\ \text{ಗಳ ಸಂಖ್ಯೆ}\end{matrix}\right)}{\begin{matrix}\text{ಬಾಲಕರ ವರ್ಗ ಮತ್ತು ಮೊದಲಿನ ನಾಲ್ಕು ಇಯತ್ತೆಗಳಲ್ಲಿ}\\ \text{ರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ.}\end{matrix}}$$

ಮೇಲಿನ ಪದ್ಧತಿಯಲ್ಲಿ ಈ ಕೆಳಗೆ ಹೇಳಿರುವ ದೋಷಗಳಷ್ಟೇ ಸೇರಿರುವ-ವೆಂಬುದನ್ನು ಮನಗಾಣಬಹುದು.

೧. ಒಂದು ಪ್ರಾಂತದೊಳಗಿನ ಬ್ರಿಟಿಷ ಪ್ರದೇಶದಿಂದ ಸಾಲೆಯನ್ನು ಬಿಟ್ಟು ದೇಶೀಯ ಸಂಸ್ಥಾನಗಳಿಗೆ ಹೋದವರು ಮತ್ತು ಪರಪ್ರಾಂತಗಳಿಗೆ ಹೋದವರು. ೨. ಒಂದು ವರ್ಷದಲ್ಲಿ ಸಾಲೆಯನ್ನು ಬಿಟ್ಟು ಮನೆಯಲ್ಲಿ ಉಳಿದು ಎರಡನೆಯ ವರ್ಷ ಸಾಲೆಗೆ ಬಂದ ವಿದ್ಯಾರ್ಥಿಗಳು. ಇಂಥ ವಿದ್ಯಾರ್ಥಿಗಳಷ್ಟೆ ಮೇಲಿನ ಸಮೀಕರಣದಲ್ಲಿ ಸಮಾವೇಶವಾಗಿರುವದಿಲ್ಲ. ಆದರೆ ಇಂಥವರ ಸಂಖ್ಯೆಯು ತೀರ ಸ್ವಲ್ಪವೇ

ಇರುವದರಿಂದ ಅದನ್ನು ಗಣನೆಗೆ ತಾರದ ಮಾತ್ರಕ್ಕೆ ಅಪವ್ಯಯದ ಪ್ರಮಾಣವು ತಪ್ಪೀತೆಂದು ಅಂಜುವ ಕಾರಣವಿಲ್ಲ. ಆದ್ದರಿಂದ ಈ ರೀತಿಯು ತೀರ ಸ್ವಲ್ಪ ದೋಷಯುಕ್ತವಾಗಿರುವದೆಂದೂ ಎಲ್ಲರೂ ಈ ರೀತಿಯಿಂದಲೇ ಅಪವ್ಯಯದ ಪರಿಮಾಣವನ್ನು ಕಂಡುಕೊಳ್ಳಬಹುದೆಂದೂ ನಮ್ಮ ಅಭಿಪ್ರಾಯವಿರುವದು. ಮತ್ತು ಈ ಪದ್ಧತಿಯಿಂದ ಲೆಕ್ಕಮಾಡುವಾಗ ನಮಗೆ ಈ ಕೆಳಗಿನ ಹೆಚ್ಚಿನ ಮಾಹಿತಿಯು ದೊರೆಯುವದು.

(೧) ಅಪವ್ಯಯದ ಕಾರಣ ಮತ್ತು ಬೇರೆ ಬೇರೆ ಕಾರಣಗಳಿಂದ ಶಾಲೆಯನ್ನು ಬಿಟ್ಟವರ ಪ್ರಮಾಣ.

(೨) ಚಿಕ್ಕಮಕ್ಕಳು ಶಾಲೆಯನ್ನು ಬಿಡುವ ವಯೋಮಾನ.

(೩) ಬೇರೆ ಬೇರೆ ಜಾತಿಗಳ ಜನರಲ್ಲಾಗುವ ಅಪವ್ಯಯದ ಮಾನ.

ಈ ಸಂಗತಿಗಳ ತಿಳಿವಳಿಕೆಯಿಂದ ಒತ್ತಾಯದ ಪ್ರಾಥಮಿಕ ಶಿಕ್ಷಣ ಪ್ರಸಾರ ಮಾಡಬೇಕೆನ್ನುವವರಿಗೆ ತುಂಬಾ ಪ್ರಯೋಜನವುಂಟು. ಆದ್ದರಿಂದ ವಿದ್ಯಾ ಇಲಾಖೆಯವರು ಈ ರೀತಿಯನ್ನು ಅನುಸರಿಸಬೇಕೆಂದು ನಮ್ಮ ಮನಃಪೂರ್ವಕವಾದ ಅಭಿಪ್ರಾಯವಿರುವದು.

೪. ಮಾಹಿತಿಯನ್ನು ದೊರಕಿಸುವ ಒಂದು ಕ್ರಮದ ರೂಪರೇಷೆ.

ಅಪವ್ಯಯದ ಕಾರಣವನ್ನು ಶೋಧಿಸಬೇಕೆಂಬ ಉದ್ದೇಶದಿಂದ ಈ ಕೆಳಗಿನ ಕ್ರಮದಿಂದ ನಾನು ಧಾರವಾಡ ತಾಲೂಕಿನೊಳಗಿನ ೮ ಸಾವಿರ ವಿದ್ಯಾರ್ಥಿಗಳ ಸಂಬಂಧದ ಮಾಹಿತಿಯನ್ನು ದೊರಕಿಸಿರುವೆನು.

ಮೊದಲು ಸಾಕ್ಷರತೆಯ ಅಭ್ಯಾಸಕ್ರಮವನ್ನು ಪೂರ್ಣಮಾಡುವದಕ್ಕಿಂತಲೂ ಮೊದಲೇ ಶಾಲೆಯನ್ನು ಬಿಟ್ಟು ಹೋದ ವಿದ್ಯಾರ್ಥಿಗಳ ಸಂಬಂಧದಿಂದ ಈ ಕೆಳಗಿನ ನಮೂನೆಯಲ್ಲಿ ಹೇಳಿರುವಂತಹ ಎಲ್ಲ ಮಾಹಿತಿಯನ್ನು ದೊರಕಿಸಿಕೊಂಡೆನು.

(೧) ಅನುಕ್ರಮ ಸಂಖ್ಯೆ.
(೨) ವಿದ್ಯಾರ್ಥಿಯ ಪೂರ್ಣ ಹೆಸರು.
(೩) ಶಾಲೆಯನ್ನು ಬಿಡುವಾಗಿನ ವಯಸ್ಸು.
(೪) ಶಾಲೆಯನ್ನು ಬಿಡುವಾಗ ಕಲಿಯುತ್ತಿದ್ದ ಇಯತ್ತೆ.
(೫) ಲೀವ್ಹಿಂಗ್ ಸರ್ಟಿಫಿಕೇಟು ಕೊಟ್ಟಿತ್ತೋ ಹೇಗೆ ?
(೬) ಶಾಲೆಯನ್ನು ಬಿಡುವ ಕಾರಣ.
(೭) ವಿದ್ಯಾರ್ಥಿಯ ಜಾತಿ.
(೮) ಶರಾ.

(ಮುಂದೆಸಾಗುವದು)

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

೧. ಹಿತವಚನಗಳು

ಶ್ರೀಮಾನ್ ಎಸ್. ಆರ್. ತಾವಡೆ, ಎಂ. ಎ., ಎ. ಇ., ದ. ಭಾ. ಅವರಿಂದ

೧. ಎಚ್ಚೆತ್ತವರು ಏಳುವರು; ಮಲಗಿದವರು ಮಲಗಿಯೇ ಉಳಿಯುವರು.

೨. ನಿರಕ್ಷರಿಗಳಾದ ಬಂಧು ಭಗಿನಿಯರೇ,
ದಾನಕೊಡಿರಿ—ಗ್ರಹಣಕಾಲವು ಕಳೆಯುತ್ತಿದೆ.
ದಿನಾಲು ರಾತ್ರಿ ಶಾಲೆಗೆ ಹೋಗಿರಿ.
ವೆಚ್ಚವಿಲ್ಲದೆ ಓದು ಬರೆಹ ಕಲಿಯಿರಿ.
ಇದೇ ನೀವು ಕೊಡಬೇಕಾದ ದಾನ.

ಈ ದಾನದಿಂದ ನಿಮ್ಮ ನಿರಕ್ಷರತೆಯ ಗ್ರಹಣದ ಬಿಡುಗಡೆಯಾಗುವದು. ಗ್ರಹಣದ ಬಿಡುಗಡೆಯಾದಕೂಡಲೆ ನಿಮ್ಮ ಕಷ್ಟಗಳ ಪರಿಹಾರವಾಗುವದು; ನಿಮ್ಮ ಜೀವನವು ಸುಧಾರಿಸುವದು.

೩. ಕೈ ಹಿಡಿದು ವೆಚ್ಚ ಮಾಡಿದರೆ ಅಡಚಣೆಯ ಅಂಜಿಕೆಯಿಲ್ಲ.
೪. ಸದ್ಗುಣಗಳೇ ನಿಜವಾದ ಗೆಳೆಯರು.
೫. ಅಸ್ವಚ್ಛತೆಯೇ ಅಸ್ಪೃಶ್ಯತೆಯು.
೬. ಮನಸ್ಸಿನ ತೃಪ್ತಿಯೇ ನಿಜವಾದ ಸುಖವು.
೭. ಸಾಕ್ಷರತೆಯೇ ರಾಷ್ಟ್ರದ ಜೀವಾಳವು.
೮. ಓದಲು ಬರದವ ಕುರುಡ।
ಬರೆಯಲು ಬರದವ ಬಲು ಬರಡ॥

[೨. ವಾಚನಪಾಠ] ಒಳಿತು ಯಾವದು? ಕೆಡಕು ಯಾವದು?

ಒಳಿತು ಯಾವದು ನಮಗೆ ಗೊತ್ತಿರಬೇಕು.
ಕೆಡಕು ಯಾವದು ನಾವು ತಿಳಿದಿರಬೇಕು.

ಈಗ ನಮಗೆ ಒಳಿತು ಯಾವದು? ಕೆಡಕು ಯಾವದು? ಗೊತ್ತಾಗುವದಿಲ್ಲ. ನಮಗೆ ಸರಿಯಾಗಿ ತಿಳಿಸಿ ಹೇಳುವವರು ಬೇಕು. ನಾವೆಲ್ಲರೂ ಕಣ್ಣಿದ್ದು ಕುರಡರು.

ಪರರಿಗೆ ಹಿತವಾಗುವ ಕೆಲಸವು ಒಳಿತು.
ಪರರಿಗೆ ಕೇಡಾಗುವ ಕೆಲಸವು ಕೆಡಕು.
ಬಡವರಿಗೆ ಹಾನಿಯಾಗುವ ಕೆಲಸವು ಕೆಡಕು.
ಪರರಿಗೆ ಸಂತೋಷವಾಗುವ ಕೆಲಸವು ಒಳಿತು.
ಪರರಿಗೆ ದುಃಖವಾಗುವ ಕೆಲಸವು ಕೆಡಕು.
ಜನರಲ್ಲಿ ಒಡಕು ಹುಟ್ಟಿಸುವ ಕೆಲಸವು ಕೆಡಕು.
ಜನರಲ್ಲಿ ಒಕ್ಕಟ್ಟು ಬೆಳೆಸುವ ಕೆಲಸವು ಒಳಿತು.
ಜನರಿಗೆ ಒಳ್ಳೆಯ ಚಟಗಳನ್ನು ಕಲಿಸುವದು ಒಳಿತು.
ಜನರಿಗೆ ಕೆಟ್ಟ ಚಟಗಳನ್ನು ಕಲಿಸುವದು ಕೆಡಕು.
ಜನರಿಗೆ ಸರಿಯಾದ ದಾರಿಯನ್ನು ತೋರಿಸುವದು ಒಳಿತು.
ಜನರಿಗೆ ತಪ್ಪು ದಾರಿಯನ್ನು ತೋರಿಸುವದು ಕೆಡಕು.

ಕೆಡಕು ಕೆಲಸಗಳನ್ನು ಬಡವರು ಮಾಡಿದರೂ ಅದು ಕೆಡಕೇ. ಕೆಡಕು ಕೆಲಸಗಳನ್ನು ಹಣವಂತರು ಮಾಡಿದರೂ ಅದು ಕೆಡಕೇ.

ನಾವು ಹಣದಿಂದ ಬಡವರಾದರೂ ಗುಣದಿಂದ ಬಡವರಾಗಬಾರದು; ಮನಸ್ಸಿನಿಂದ ಬಡವರಾಗಬಾರದು. ಒಳ್ಳೆಯ ಗುಣವುಳ್ಳವನೇ ಸಿರಿವಂತನು. ದೊಡ್ಡ ಮನಸ್ಸುಳ್ಳವನೇ ಸುಖಿ.

ಈಗ ಹೇಳಿರಿ—ಒಳಿತು ಯಾವದು? ಕೆಡಕು ಯಾವದು?

ವ್ಯಾಯಾಮದ ಮಾದರಿಯ ಪಾಠದ ಟಿಪ್ಪಣಿ

ಶ್ರೀ. ವಿ. ಕೆ. ಜವಳಿ, ಬಿ.ಎ., ಬಿ.ಟಿ., ಡಿ. ಪಿ. ಇಡ್.

ಬಾಲಕರ ವರ್ಗ

ವಿಷಯ :— ನಡದ ವ್ಯಾಯಾಮ ; ಜೋಲಿ ಹಿಡಿಯುವದು.

ವೇಳೆ :— ೨೦ ನಿಮಿಷ.

ಉದ್ದೇಶ :— ಮೈಕಟ್ಟು ಶರೀರ ಬೆಳವಣಿಗೆ ಮತ್ತು ಆರೋಗ್ಯರಕ್ಷಣೆ.
ಸ್ವಾತಂತ್ರ್ಯ ವೃತ್ತಿಗಳ ಸಾಧನೆ.

ಬಾಲಕರ ಸಂಖ್ಯೆ :— ೨೦ **ವಯ :—** ೫–೬

ಸ್ಥಳ :— ೩೦′×೬೦′ ಆಳತೆಯ ಬೈಲು.

ಉಪಕರಣ :— (೧) ಫುಗ್ಗಾ (೨) ಹುರಿ (೩) ರಬ್ಬರ ಚಂಡು.
(೪) ಟೇನಿಸ್ ಬಾಲ್.

ಮುಟ್ಟು	ವಿಷಯ	ಕಲಿಸುವ ಕ್ರಮ
I	**ಆರಂಭದ ವ್ಯಾಯಾಮ**	**ಜಾಗಾ–ಮೈದಾನ**
	೧. ಆಕಾಶಬುಟ್ಟಿ ಮುಟ್ಟುವದು.	೧. ಶಿಕ್ಷಕನು ದಾರಕಟ್ಟಿದ ಆಕಾಶ ಬುಟ್ಟಿಯನ್ನು ಹಾರಿಸುತ್ತ ಓಡುವದು. ಮತ್ತು ಬಾಲಕರು ಅದನ್ನು ಮುಟ್ಟಲು ಹವಣಿಸುವದು.
	೨. ವಿಮಾನ, ಸಾಯಕಲ್ ಮತ್ತು ಉಗಿಒಂಡಿಯ ಅನುಕರಣ.	೨. ಬಾಲಕರು ತಮಗೆ ಬಂದಂತೆ ಶಿಕ್ಷಕರನ್ನು ಅನುಕರಿಸುವರು. ಓಡುವಾಗ್ಗೆ ಸೀಟಿಯನ್ನು ಕೇಳಿದೊಡನೆ ನಿಲ್ಲುವದು.
	೩. ನಿಂತಲ್ಲಿಯೇ ಕುಂಟುವದು.	೩. ಶಿಕ್ಷಕರ ಕೂಡ ಬಾಲಕರು, ಬಲಗಾಲಿನ ಮತ್ತು ಎಡಗಾಲಿನ ಮೇಲೆ ಅನೇಕ ಬಾರಿ ಕುಣಿಯುವದು.

ಮೆಟ್ಟು	ವಿಷಯ	ಕಲಿಸುವ ಕ್ರಮ
	೪. ಓಡುವ ಸ್ಪರ್ಧೆ.	೪. ೩೦' ದೂರದಲ್ಲಿ ಸಾಲಾಗಿ ಇಟ್ಟ ಬೀಜಗಳನ್ನು ಪ್ರತಿಯೊಬ್ಬ ಬಾಲಕನು ಒಂದೊಂದನ್ನು ತರುವದು; ಮತ್ತು ತಿರುಗಿ ಬರುವಾಗ್ಗೆ ಹಾದಿಯಲ್ಲಿ ಅಡ್ಡಹಿಡಿದ ಹುರಿಯನ್ನು ಜಿಗಿದು ಬರುವದು.
	೫. ವಿಶ್ರಾಂತಿ ವಿನೋದ, "ಕುರಿಮರಿ" ಮಾರಾಟ	೫. ಬಾಲಕರೆಲ್ಲರನ್ನೂ ಕೂಡ್ರಿಸಿ, ಅವರಲ್ಲಿ ಓರ್ವ 'ಕುರಿಮರಿ' (ಬಾಲಕರನ್ನು) ಶಿಕ್ಷಕರು ಮಾಡುವದು.
II	(ಅ) ನಡದ ವ್ಯಾಯಾಮ. ೧. ಮೊಲದ ಹಾಗೆ ಜಿಗಿಯುವದು. ೨. ಆನೆಯ ಹಾಗೆ ಸೊಂಡಿಯನ್ನು ಬೀಸುವದು.	(ಅ) ೧. ಶಿಕ್ಷಕರು ಮಾಡಿದಂತೆಯೇ ಬಾಲಕರು ಕುಳಿತ ಸ್ಥಳದಲ್ಲಿಯೇ ಮೊಲದ ಹಾಗೆ ಜಿಗಿಯುವದು. ಶಿಕ್ಷಕರು ಹಿಮ್ಮಗ್ಗಲು ಬಾಲಕರ ಕಡೆಗೆ ಮುಖ ತಿರುವಿದಾಗ್ಗೆ ಬಾಲಕರು ಜಿಗಿಯುವದನ್ನು ಬಿಟ್ಟು ಸುಮ್ಮನೆ ಕೂಡ್ರುವದು. ೨. ಎರಡೂ ಕೈಗಳನ್ನು ಜೋಡಿಸಿ ಮೇಲಕ್ಕೆತ್ತಿ, ಆನೆಯು ಸೊಂಡಿಯನ್ನು ಬೀಸುವ ರೀತಿಯಲ್ಲಿ ಬಾಲಕರು ತಮ್ಮ ಕೈಗಳನ್ನು ಮೇಲಿಂದ ಕೆಳಕ್ಕೂ ಕೆಳಗಿನಿಂದ ಮೇಲಕ್ಕೂ ಬೀಸುವದು.
	(ಬ) ಜೋಲೀ ಹಿಡಿಯುವದು.	(ಬ) ಕುದುರೆಯ ಹಾಗೆ ಅತ್ತಿತ್ತ ಜಿಗಿದಾಡುವದು; ಮತ್ತು ಶೀಟಿಯ ಸಪ್ಪಳವನ್ನು ಕೇಳಿದಾಗ್ಗೆ ಬಾಲಕರು ತಮ್ಮ ಎರಡೂ ಕೈಗಳನ್ನು ಮಗ್ಗಲಿಗೆ ಚಾಚಿ ಒಂಟಗಾಲಿನ ಮೇಲೆ ನಿಲ್ಲುವದು.

ಮೆಟ್ಟಿಲು	ವಿಷಯ	ಕಲಿಸುವ ಕ್ರಮ
	ವಿಶ್ರಾಂತಿ "ನಿದ್ರೆಯ ಸೋಗು'	ಬಾಲಕರು ನಿದ್ರೆ ಹತ್ತಿದವರಂತೆ ಕಣ್ಣು ಮುಚ್ಚಿ ಮಲಗುವದು. ಶಿಕ್ಷಕರು ಒಬ್ಬೊಬ್ಬರನ್ನು ಎಬ್ಬಿಸುತ್ತ ನಿದ್ರೆಹತ್ತಿದ್ದನ್ನು ಪರೀಕ್ಷಿಸುವದು.
III	ಆಟ (೧) (ಚಂಡಿನ ಆಟ.)	೧. ನಾಲ್ಕು ದಿಕ್ಕುಗಳಲ್ಲಿ ಚದರಿ ಬೀಳುವಂತೆ ಕೆಲವು ಚಂಡುಗಳನ್ನು ಶಿಕ್ಷಕರು ಒಂದೇ ವೇಳೆಗೆ ಒಗೆಯುವದು. ಬಾಲಕರು ಅವುಗಳನ್ನು ಆರಿಸಿ ತರುವದು.
	(೨) "ತೋಳಕ್ಕೆ ಯಾರು ಹೆದರುತ್ತೀರಿ?"	೨. ಒಬ್ಬ ಹುಡುಗನು 'ತೋಳ' ಆಗಿ ಒತ್ತಟ್ಟಿಗೆ ಕೂಡ್ಯುವದು. ಇನ್ನುಳಿದ ಹುಡುಗರು 'ಕುರಿ'ಗಳಾಗುವರು. ಅವರಲ್ಲೊಂದು ದೊಡ್ಡ ಕುರಿಯು "ತೋಳಕ್ಕೆ ಯಾರು ಹೆದರುತ್ತೀರಿ?" ಅನ್ನುತ್ತಾ ತೋಳದ ಕಡೆಗೆ ಸಾಗುವದು. ಪ್ರತಿಯೊಂದು ಕುರಿಯು ನಾ "ಹೆದರುವದಿಲ್ಲ" ಅನ್ನುವದು. 'ತೋಳವು' ನೀವು ಹೆದರುತ್ತೀರಿ" ಅನ್ನುತ್ತ ಕುರಿಗಳನ್ನು ಹಿಡಿಯಲು ಎದ್ದೊಡನೆ, ಎಲ್ಲ ಕುರಿಗಳು ಅಂಜಿ ಮನೆಗೆ ಓಡುವವು. ತೋಳ ಮುಟ್ಟಿದ 'ಕುರಿ' (ಬಾಲಕ)ಗಳೆಲ್ಲ ತೋಳನ ಕಡೆಗೆ ಆಗುವರು.
IV	ಕವಾಯಿತ ವಿರಾಮ "ಹುಷಾರ" "ಕದಂ ಖೋಲ" ಅನುಕರಣ.	ಬಾಲಕರು ಸಾಲಾಗಿ ನಿಲ್ಲುವದು. ಶಿಕ್ಷಕರ ಹಾಗೆ ನಿಲ್ಲಲು ಕಲಿಯುವದು. ಅವರನ್ನು ಅನುಕರಿಸುವದು. ಮನೆಗೆ ಹೋಗಿರಿ ಎಂದು ಹೇಳಿದಾಗ್ಗೆ, ತುದಿಗಾಲ ಮೇಲೆ ನಡೆಯುತ್ತ ಹೋಗುವದು.

ವ್ಯಾಯಾಮ ಪಾಠದ ಮೆಟ್ಟಿಲುಗಳು

(೧) ಆರಂಭದ ಚಟುವಟಿಕೆ (ವ್ಯಾಯಾಮ)-- ಸ್ಥಳ.

(೨) ಅಂಗಸಾಧನೆಯ ವಿಷಯ:— i ಮೈಕಟ್ಟು [ನಿಲುವಿಕೆ, ಬೆನ್ನು ಬಾಗುವದು ಮು.] ತಿದ್ದುವದು.

ii ಕೈ iii ಕಾಲು iv ನಡದ ವ್ಯಾಯಾಮ v ದೊಡ್ಡಹುಡುಗರಿಗೆ ದೊಡ್ಡ ಸ್ನಾಯು— ವ್ಯಾಯಾಮ ಲಾಠಿ, ಲೇಝಿಮ್ ಮುಂತಾದವುಗಳ—ವರ್ಗವ್ಯೂಹ.

(೩) ಶಿಕ್ಷಕನ ಮಾದರಿಯ ಕೃತಿ:— ವಿವರಣೆ ಸಹಿತ.

(೪) ಬಾಲಕರ ಕೃತಿ:— i ಅಂಕಿಯ ಪ್ರಕಾರ ಶಿಕ್ಷಕನು ಬಾಲಕರ ತಪ್ಪುಗಳನ್ನು ತಿದ್ದುವದು. ii ಅನುಕ್ರಮವಾಗಿ ಬಿಡುವಿಲ್ಲದಲೆ ಮಾಡುವದು.

(೫) ಆಟ i ಸಾಮಾನ್ಯ ಚಟುವಟಿಕೆ—ಚಂಡು, ಹಗ್ಗ ಮೊದಲಾದ ಸಾಮಗ್ರಿಗಳಿಂದ ಆಡುವದು, ಜಿಗಿದಾಡುವದು. ii ಸಾಮೂಹಿಕ ಆಟಗಳು.

(೬) ಕವಾಯಿತ ವಿರಾಮ:— ಆನಂದಕರವಾಗುವ ಒಂದು ಕೃತಿ.

ಪ್ರಾಥಮಿಕ ನಾಲ್ಕನೆಯ ಇಯತ್ತೆಯ ಸರ್ಟಿಫಿಕೇಟು ಪರೀಕ್ಷೆ

ಲೇ:— ಶ್ರೀ. ಕರಿಯಪ್ಪ ಹುಚ್ಚಣ್ಣನವರ
ಧಾರವಾಡ ಸ್ಕೂಲ್‌ಬೋರ್ಡಿನ ವೈಸ್ ಚೆಅರಮನ್ನರು.

ಇದೇ ಡಿಶೆಂಬರ ೧೧-೧೨ನೇ ತಾರೀಖುಗಳಲ್ಲಿ ಶ್ರೀಮಾನ್ ಎಸ್. ಕೆ. ಹೊಸಮನಿ M.L.A. (Central) ಇವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ಸೇರಿದ ಕರ್ನಾಟಕದ ಸ್ಕೂಲ್‌ಬೋರ್ಡುಗಳ ೩ನೆಯ ಪರಿಷತ್ತಿನಲ್ಲಿ [" This conference is of opinion that each District or Municipal School Board should hold a uniform examination at the end of Std. IV and grant certificates to the candidate who may pass it. ಅಂದರೆ:—] ಪ್ರತಿಯೊಂದು ಡಿಸ್ಟ್ರಿಕ್ಟ ಸ್ಕೂಲ್‌ಬೋರ್ಡು ಹಾಗು ಮುನಸಿಪಾಲಿಟಿಯ ಶಾಲೆಗಳ ಪ್ರಾಥಮಿಕ ನಾಲ್ಕನೆಯ ಇಯತ್ತೆಯ ಪರೀಕ್ಷೆಯು ಎಲ್ಲ ಕಡೆಗೂ ಒಂದೇತರದ್ದಾಗುವಂತೆ ಮಾಡಬೇಕು. ಮತ್ತು ಆ ಪರೀಕ್ಷೆಯನ್ನು ಪಾಸಾದ ಉಮೇದವಾರರಿಗೆ ಸರ್ಟಿಫಿಕೇಟುಗಳನ್ನು ಕೊಡಬೇಕು" ಎಂಬ ಗೊತ್ತುವಳಿಯು ಪಾಸಾಗಿರುತ್ತದೆ. ಇನ್ನು ಮುಂದೆ ಇದನ್ನು ಆಯಾ ವಿದ್ಯಾಸಂಸ್ಥೆಗಳು ಬಳಕೆಯಲ್ಲಿ ತರಬೇಕಾಗಬಹುದು. ಆದ್ದರಿಂದ ಈ ವಿಷಯವನ್ನು

ಬದ್ಧಗೊಳಿಸುವಾಗ ನನಗೆ ಕಂಡುಬಂದ ಕೆಲವು ಯೋಜನೆಗಳನ್ನು ನಿಮ್ಮೆಲ್ಲರ ಲಕ್ಷ್ಯಕ್ಕೆ ತರುವದು ಅವಶ್ಯವೆನಿಸಿದೆ.

ಒತ್ತಾಯದ ಶಿಕ್ಷಣ ಯೋಜನೆಯು ಬೇಗನೆ ಬಳಕೆಯಲ್ಲಿ ಬಂದು ನಮ್ಮಲ್ಲಿಯ ನಿರಕ್ಷರತೆಯನ್ನು ಹೋಗಲಾಡಿಸುವದು ಅತ್ಯವಶ್ಯವಾದ ಮಾತು. ಆದರೆ ಇದನ್ನು ಪ್ರಾರಂಭಿಸಬೇಕೆಂದು ಎಷ್ಟುಪರಿಯಿಂದ ಪ್ರಯತ್ನಗಳು ನಡೆದಿರುತ್ತವೋ ಅದು ಅಷ್ಟು ದೂರದೂರಕ್ಕೆ ಹೋಗಹತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ನಮ್ಮ ನಿರಕ್ಷರತೆಯನ್ನು ತೊಲಗಿಸಲು ಕೆಲವು ಸುಲಭ ಹಾಗು ತಾತ್ಪರ್ತಿಕವಾದ ಉಪಾಯಯೋಜನೆಗೆ ತೊಡಗದೆ ಗತ್ಯಂತರವೇ ಉಳಿದಿಲ್ಲ. ಇದಕ್ಕಾಗಿಯೇ ಶಿಕ್ಷಪದ್ಧತಿಯು ನಮ್ಮಲ್ಲಿ ಪ್ರಾರಂಭವಾಗಿದೆ. ಮತ್ತು ನಮ್ಮ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಮುಟ್ಟಲಿಕ್ಕೆ ಇಂಥ ಸಣ್ಣಪುಟ್ಟ ಮಾರ್ಗಗಳನ್ನು ಹಿಡಿಯಬೇಕಾಗಿದೆ. ಮತ್ತು ಇದೇ ದೃಷ್ಟಿಯಿಂದಲೇ ಸರ್ಟಿಫಿಕೇಟು ಪರೀಕ್ಷೆಯ ಈ ಹೊಸ ಪದ್ಧತಿಯನ್ನೂ ಪರಿಷತ್ತಿನಲ್ಲಿ ಮಂಡಿಸಲಾಗಿದೆ. ನಾನು ಮೊದಲು ಇದನ್ನು ಕಂಡುಹಿಡಿದದ್ದು ಹೀಗೆ:— 'ಈಗ ಹತ್ತು ವರ್ಷಗಳ ಹಿಂದೆ ಪ್ರಾಥಮಿಕ ಶಿನೆಯ ಇಯತ್ತೆಯಲ್ಲಿದ್ದು ಶಾಲೆ ಬಿಟ್ಟವನೊಬ್ಬನನ್ನೂ, ಆಗಲೇ ನಾಲ್ಕನೆಯ ಇಯತ್ತೆಯನ್ನು ಮುಗಿಸಿದವನೊಬ್ಬನನ್ನೂ ಕುರಿತು ವಿಚಾರಿಸಿದರೆ ಮೊದಲಿನವನು ಸಹಿಯಮಟ್ಟಿಗೆ ಅಕ್ಷರಜ್ಞಲ್ಲವನಾಗಿದ್ದು ಅರಕ್ಷರಿ (ನಿರಕ್ಷರಿಯೇ ಸರಿ) ಯಾಗಿಯೂ ಎರಡನೆಯವನು ಸಾಕ್ಷರಿಯಾಗಿಯೂ ಉಳಿದದ್ದು ಕಂಡುಬಂದಿದೆ. ಅವರಿಬ್ಬರ ನಡುವಿನ ಶಾಲೆಯ ಜೀವನದ ಒಂದೇ ಒಂದು ವರ್ಷದ ಅಂತರದಿಂದ ಒಬ್ಬನು ನಿರಕ್ಷರಿಯಾದನು ; ಮತ್ತೊಬ್ಬನು ಸಾಕ್ಷರಿಯಾಗಿ ಉಳಿದನು. ಒಬ್ಬನು ತನ್ನ ಶಾಲಾಜೀವನವನ್ನು ನಿರರ್ಥಕಗೊಳಿಸಿಕೊಂಡ ಅನಾಗರಿಕ; ಇನ್ನೊಬ್ಬನು ಸಫಲಗೊಳಿಸಿಕೊಂಡ ನಾಗರಿಕ.' ಇದು ಆಶ್ಚರ್ಯದ ವಿಷಯವಾಗಿದೆ. ಶಿನೆಯ ಇಯತ್ತೆಗೆ ಶಾಲೆಬಿಡುವವರನ್ನು ಇನ್ನೊಂದು ವರ್ಷ ಹೆಚ್ಚಿಗೆ ತಡೆದು ಅವರ ಜೀವನವನ್ನು ಉತ್ತಮಗೊಳಿಸುವದೇ ಈ ಹೊಸ ಪದ್ಧತಿಯ ಮುಖ್ಯ ಉದ್ದೇಶವಾಗಿದೆ. ಮತ್ತು ಶಿನೆಯ ಇಯತ್ತೆಗೆ ಶಾಲೆಬಿಡುವವರ ಸಂಖ್ಯೆಯು ಪ್ರತಿ ವರ್ಷಕ್ಕೂ ಬೆಳೆಯುತ್ತಲೇ ನಡೆದಿರುವದೆಂದೂ ಕಂಡುಬಂದಿದೆ.

ಶಿನೆಯ ಇಯತ್ತೆಗೆ ಶಾಲೆ ಬಿಡಲು ಕೆಲವು ಕಾರಣಗಳು ಕಂಡುಬಂದಿರುವವು:— (೧) ಬಾಲಕನು ಸ್ವಲ್ಪ ದೊಡ್ಡವನಾಗಿ ತೋರಿದ ಕೂಡಲೇ ಒಕ್ಕಲಿಗನು ತನ್ನ ಸೇವೆಗೆ ಅವನನ್ನು ಕರೆಯುವನು. (೨) ತಾಯಂದಿರು ಬಾಲಿಕೆಯರನ್ನು ಮನೆಗೆಲಸದಲ್ಲಿ ತೊಡಗಿಸಲು ಯತ್ನಿಸುವರು. (೩) ಳನೆಯ ಇಯತ್ತೆಯ ಅಭ್ಯಾಸವು ಕೆಲವು ಹೊಸ ವಿಷಯಗಳನ್ನು ಪ್ರಾರಂಭಿಸುವ ಮೂಲಕ ಅದು ಬಾಲ-ಬಾಲಿಕೆ

ಯರಿಗೆ ಗಡುಚಾಗಿ ತೋರಿ, ಅವರು ತಾವೇ ಶಾಲೆಯನ್ನು ಬಿಡಲು ಪ್ರಯುತ್ನಿಸುವರು. (೪) ನಾಲ್ಕನೆಯ ಇಯತ್ತೆಗೆ ಬೇಕಾಗುವ ಸ್ವಲ್ಪ ಹೆಚ್ಚಾದ ಬೆಲೆಯ ಪುಸ್ತಕಗಳನ್ನು ಕೊಳ್ಳಲಾರದೆ ಪಾಲಕರು ಪೇಚಾಡುವರು. (೫) ಕೆಲವು ಹಳ್ಳಿಗಳಲ್ಲಿ ೩ನೆಯ ಇಯತ್ತೆಯ ವರೆಗೆ ಮಾತ್ರ ಶಾಲೆಯಿದ್ದು, ಅವರು ನಾಲ್ಕನೆಯ ಇಯತ್ತೆಗೆ ಪರಸ್ಥಳಕ್ಕೆ ಹೋಗಲಾರದವರಾಗುವರು. ಇವೇ ಮೊದಲಾದ ಅಡಚಣೆಗಳನ್ನು ಎದುರಿಸಿ, ಪಾಲಕರೂ ಬಾಲ-ಬಾಲಿಕೆಯರೂ ನಿರಕ್ಷರತೆಯ ಈ ಅನರ್ಥವನ್ನು ತಪ್ಪಿಸಲೆಂದು ಈ ಯೋಜನೆಯನ್ನು ಮಾಡಲಾಗಿದೆ. ಸರ್ಟಿಫಿಕೇಟುಗಳನ್ನು ದೊರಕಿಸುವ ಆಶೆಯಿಂದಾದರೂ ಪಾಲಕರು ತಮ್ಮ ಮಕ್ಕಳನ್ನು ನಾಲ್ಕನೆಯ ಇಯತ್ತೆಯನ್ನು ಮುಗಿಸುವದಕ್ಕೆ ಅವಕಾಶಕೊಡುವರು. ಈ ಅವಕಾಶವೇ ಮಕ್ಕಳ ಜೀವನವನ್ನು ಸುಂದರಗೊಳಿಸುವದು.

ಈ ಯೋಜನೆಯನ್ನು ಬಳಿಕೆಯಲ್ಲಿ ತರುವ ಆಯಾ ವಿದ್ಯಾಸಂಸ್ಥೆಗಳು ತಮ್ಮ ಅನುಕೂಲತೆಯ ಪ್ರಕಾರ ಪರೀಕ್ಷೆಗಳನ್ನು ನಡೆಯಿಸಬಹುದು. ಆದರೆ ಬಾಲಕ-ಬಾಲಕಿಯರಿಗೆ ಸರ್ಟಿಫಿಕೇಟುಗಳನ್ನು ಕೊಡುವ ಯೋಜನೆಯನ್ನು ಪ್ರಾರಂಭಿಸಿ ಉತ್ತೇಜನ ಕೊಡುವದು ಮಾತ್ರ ತೀರ ಮುಖ್ಯ ಮಾತು.

ಈ ವಿಷಯವನ್ನು ನಾನು ಪರಿಷತ್ತಿನಲ್ಲಿ ಮಂಡಿಸಲು ಅಲ್ಲಿದ್ದ ಎಲ್ಲ ಸ್ಕೂಲ್ ಬೋರ್ಡುಗಳ ಪ್ರತಿನಿಧಿಗಳೂ ತಮ್ಮ ಸಹಾನುಭೂತಿಯನ್ನು ವ್ಯಕ್ತ ಮಾಡಿದ್ದುಂಟು. ಇಂಥ ಸರ್ವಸಮ್ಮತವಾದ ಹಾಗು ಫಲಕಾರಿಯಾದ ಯೋಜನೆಯನ್ನು ಯಶಸ್ವಿಗೊಳಿಸುವದು ಶಿಕ್ಷಕರ ಕೈಯಲ್ಲಿದೆ.

ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆ

ದಕ್ಷಿಣಭಾಗ

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್‌ಸ್ಕೂಲ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೬ನೆಯ ಇಸ್ವಿಯ ಫೆಬ್ರುವರಿ ತಿಂಗಳ ೫ ಮತ್ತು ೬ನೆಯ ತಾರೀಖು ಗುರುವಾರ ಮತ್ತು ಶುಕ್ರವಾರಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಿಲ್ಲೆಯ ಕೇಂದ್ರದಲ್ಲಿ ನಡೆಯುವದೆಂದು ಈ ಮೂಲಕ ಎಲ್ಲ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಲಾಗಿದೆ.

ಜಿಲ್ಲೆಯ ಕೇಂದ್ರದ ಹೆಸರು	ಪರೀಕ್ಷೆಯ ಸ್ಥಳ	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು		
			ಮಾಧ್ಯಮಿಕ ವಿದ್ಯಾರ್ಥಿಗಳ ವರ್ಗಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ ಗಳ ಬಗ್ಗೆ
ಧಾರವಾಡ	ಧಾರವಾಡದ ಎ. ಕೆ. ಗರ್ಲ್ಸ ಹೈಸ್ಕೂಲು	೨	೧೩	೫	೧೧
ಬೆಳಗಾವಿ	ಬೆಳಗಾವಿಯ ಸರದಾರ ಹೈಸ್ಕೂಲು	೨	೧೩	೫	೬
ವಿಜಾಪುರ	ವಿಜಾಪುರದ ಸರಕಾರಿ ಹೈಸ್ಕೂಲು	೨	೧೦	೫	೭
ಕಾರವಾರ	ಕಾರವಾರದ ಸರಕಾರಿ ಹೈಸ್ಕೂಲು	೨	೫	೧*	೩
		೮	೪೧	೧೬	೨೭

(೧) ಹಿಂದುಳಿದ ವರ್ಗಗಳಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿ ವೇತನಗಳಲ್ಲಿ ನೂರಕ್ಕೆ ೨೦ ರಷ್ಟು ವಿದ್ಯಾರ್ಥಿವೇತನಗಳನ್ನು ಹೆಣ್ಣುಮಕ್ಕಳಿಗಾಗಿ ಕಾಯ್ದಿಡಲಾಗಿದೆ.

ಕಾರವಾರ ಜಿಲ್ಲೆಯಲ್ಲಿ ಈ ಬಗ್ಗೆ ಕಾಯ್ದಿಟ್ಟ ವಿದ್ಯಾರ್ಥಿವೇತನವನ್ನು ಒಂದು ವರ್ಷ ಒಬ್ಬ ವಿದ್ಯಾರ್ಥಿಗೂ ಮರುವರ್ಷ ಒಬ್ಬ ವಿದ್ಯಾರ್ಥಿನಿಗೂ ಕೊಡಬೇಕೆಂದು ಗೊತ್ತಾಗಿದೆ.

(೨) ಮುಸಲ್ಮಾನರಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿವೇತನಗಳಲ್ಲಿ ಒಂದನ್ನು ವಿದ್ಯಾರ್ಥಿನಿಯರಿಗಾಗಿ ಕಾಯ್ದಿಡಲಾಗಿದೆ.

೨. ಬೆಳಗಾವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ, ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ

* ೧೯೪೨ ನೆಯ ಇಸ್ವಿಯ ಈ ವಿದ್ಯಾರ್ಥಿವೇತನವು ಹೆಣ್ಣುಮಕ್ಕಳಿಗಾಗಿ ಕಾಯ್ದಿಡಲ್ಪಟ್ಟಿದೆ.

ಪರೀಕ್ಷೆಯು ಭಾಷೆಯೆಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದು ವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದುಭಾಷೆಯು ಅವರ ಪ್ರಾಂತಿಕ ಭಾಷೆಯಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿರುವ ಒಂದು ಕಮೀಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ-ಕೇಂದ್ರಗಳಲ್ಲಿ ನಡೆಯುವದು. ಎ. ಕೆ. ಗರ್ಲ್ಸ್ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರದ ಅಧ್ಯಕ್ಷರು. ಪರೀಕ್ಷೆಗೆ ಕೂಡ್ರಲಿಚ್ಚಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೨ನೆಯ ಇಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. (ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮೀಟಿಯ ಅಧ್ಯಕ್ಷರಿಗೆ ಅರ್ಜಿಮಾಡಿಕೊಂಡು ಅವರಿಂದ ತರಿಸಿಕೊಳ್ಳಬಹುದು.) ಅರ್ಜಿಯ ಸಂಗಡಲೇ ೧ ರೂ. ಫೀಯೆನ್ನೂ ಕಳುಹಿಸಲೇಬೇಕು. ಆರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ಸ್ವೀಕರಿಸಲಿಕ್ಕಿಲ್ಲ. **ಹಿಂದುಳಿದ ವರ್ಗಗಳ ಉಮೇದುವಾರರು ಫೀ ಕೊಡುವ ಕಾರಣವಿಲ್ಲ.**

೪. ದೇಶೀಯ ಸಂಸ್ಥಾನಗಳಿಂದ ಬರುವ ಉಮೇದುವಾರರು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಲ್ಲ.

೫. ಅರ್ಜಿಯಲ್ಲಿ ಉಮೇದುವಾರನ ಜಾತಿ, ಉಪಜಾತಿ, ಜನ್ಮ ತಾರೀಖು ಇವನ್ನು ಸ್ಪಷ್ಟವಾಗಿ ಬರೆದಿರಬೇಕು. ವಿಶಿಷ್ಟ ವರ್ಗಗಳ ವಿದ್ಯಾರ್ಥಿ ವೇತನದ ಬಗ್ಗೆ ಕಳುಹಿಸುವ ಅರ್ಜಿಯ ಫಾರ್ಮಿನಲ್ಲಿ ಹೊಸದೊಂದು ಕಲಮನ್ನು ಸೇರಿಸಿ ಅದರಲ್ಲಿ ಅವನ ಪಾಲಕರು ಅಥವಾ ತಂದೆ ತಾಯಿಗಳು ಕೊಡುತ್ತಿರುವ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವುಗಳ ವಿವರವನ್ನು ತೋರಿಸಬೇಕು. ಒಂದು ವರ್ಷದಲ್ಲಿ ೨೦೦ ರೂ. ಅಥವಾ ಹೆಚ್ಚು ಉತ್ಪನ್ನದ ಕರವನ್ನು ಅಥವಾ ಭೂಕಂದಾಯವನ್ನು ಕೊಡುವ, ಇಲ್ಲವೆ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವೆರಡೂ ಕೂಡಿ ೨೦೦ ರೂ. ಅಥವಾ ಹೆಚ್ಚು ರಕಮನ್ನು ಕೊಡುವ ಪಾಲಕರ ಅಥವಾ ತಂದೆ-ತಾಯಿಗಳ ಮಕ್ಕಳಾಗಿರುವ ಉಮೇದುವಾರರು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಲಾರರು.

೬. ಉಪೋದುವಾರನ ವಯಸ್ಸು, ಪರೀಕ್ಷೆಯ ವಿಷಯಗಳು ವಿದ್ಯಾರ್ಥಿವೇತನದ ರಕಮು ಮತ್ತು ಅದು ದೊರೆಯುವ ಕಾಲಾವಧಿ ಮುಂತಾದ ವಿವರಣೆಗಳು ಈ ಪರೀಕ್ಷೆಯ ನಿಯಮಗಳನ್ನು ನೋಡಿದರೆ ಗೊತ್ತಾಗುವವು. ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಅರ್ಜಿಮಾಡಿಕೊಂಡರೆ ಅವರು ಈ ನಿಯಮಗಳನ್ನು ಕಳುಹಿಸುವರು.

೭. ಮುಂಬಯಿ ಸರಕಾರದ ವಿದ್ಯಾಖಾತೆಯವರು ಹೊರಡಿಸಿರುವ ೧೯೩೩ನೆಯ ಇಸ್ವಿಯ ಜೂನ್ ತಿಂಗಳ ೯ನೆಯ ತಾರೀಖಿನ ೫೨೯೯ನೆಯ ನಂಬರಿನ ಅಪ್ಪಣೆಯ ಮೇರೆಗೆ ವಿಶಿಷ್ಟ ವರ್ಗದ ವಿದ್ಯಾರ್ಥಿವೇತನಗಳ ರಕಮು ಗೊತ್ತುಪಡಿಸಲ್ಪಟ್ಟಿರುವವು.

ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ, ಧಾರವಾಡ
೨೬ ನವ್ಹಂಬರ ೧೯೪೧

(ಸಹಿ) S. R. Tawde
E. I. S. D.

ತಿದ್ದುಪಡಿ

ಪ್ರಾಥಮಿಕ ಶಿಕ್ಷಣದ ನವ್ಹಂಬರ ತಿಂಗಳ ಸಂಚಿಕೆಯಲ್ಲಿ ೧೭ನೆಯ ಪುಟದ ೧೨ನೆಯ ಸಾಲಿನಲ್ಲಿ ಬಂದಿರುವ "೨೦ ರೂಪಾಯಿಗಳನ್ನು" ಎಂದು ಇರುವದನ್ನು '**ಮೂವತ್ತು ರೂಪಾಯಿಗಳನ್ನು**' ಎಂದು ತಿದ್ದಿ ಓದಬೇಕು.

—ಸಂಪಾದಕ.

ಪತ್ರಗಳ ಮುಖ್ಯಾಂಶಗಳು

ರೋಣ— ಕಳದ ಆಗಸ್ಟ ತಿಂಗಳ ೨೩ನೆಯ ಹಾಗು ೩೦ನೆಯ ತಾರೀಖಿನ ದಿನಗಳಲ್ಲಿ ಈ ತಾಲೂಕಿನ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಧಾರವಾಡ ಡಿಸ್ಟ್ರಿಕ್ಟ ಸ್ಕೂಲ ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಅಧ್ಯಕ್ಷತೆಯಲ್ಲಿ ನೆರವೇರಿತು. ಪಾಠ, ಪ್ರದರ್ಶನ, ಆಟ, ವಿನೋದ ಮೊದಲಾದ ಕೆಲಸಗಳಲ್ಲಿ ೧೬೦ ಶಿಕ್ಷಕ-ಶಿಕ್ಷಕಿಯರೂ ೧೮೦೦ ಬಾಲ-ಬಾಲಿಕೆಯರೂ ಭಾಗವಹಿಸಿದರು. ಅಧಿಕಾರಿಗಳು ಹಾಗು ಊರ ಹಿರಿಯರು ತುಂಬ ನೆರವಾದರು. ೧೨೫ ರೂಪಾಯಿಗಳನ್ನೂ ಬೆಳ್ಳಿಯ ಪಾತ್ರೆ, ಪದಕಗಳನ್ನೂ ಪಾರಿತೋಷಕವೆಂದು ಹಂಚಲಾಯಿತು.

ತಿಳಿಸಿದವರು— ಶ್ರೀ. ಹೊ. ರು. ಕರಡಿ, ತಾ. ನ್ಯೂ. ರೋಣ.

ನಂದಗಡ— (ಬೆಳಗಾವಿ ಜಿಲ್ಲೆ) ತಾ. ೭-೧೦-೧೯೪೧ನೆಯ ದಿವಸ ಇಲ್ಲಿಯ ಶಾಲೆಯ ವಿದ್ಯಾರ್ಥಿಗಳು 'ನನ್ನ ಗೋಪಾಲ' ಎಂಬ ಏಕಾಂಕ ನಾಟಕ

ವನ್ನು ಅಭಿನಯಿಸಿದರು. ಪ್ರೇಕ್ಷಕರು ಆನಂದಬಟ್ಟು ೨೦ ರೂ. ಹಾಗು ಪದಕ ಗಳನ್ನು ಬಹುಮಾನವಾಗಿ ಕೊಟ್ಟರು.

ತಿಳಿಸಿದವರು— ಶ್ರೀ. ರಾ. ಶ್ರೀ. ಕುಲಕರ್ಣಿ, ಹೆ. ಮಾ. ಶಾ. ಗ. ಶಾಲೆ, ನಂದಗಡ.

ಕೌಜಲಗಿ— (ಬೆಳಗಾವಿ ಜಿಲ್ಲೆ) ಈ ಊರಲ್ಲಿ ಒದಗಿದ ಸಹಕಾರ ಸಪ್ತಾಹದಲ್ಲಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಕಸರತ್ತು, ಸ್ಪಂದ್ಯಾಟ, ಸಂಭಾಷಣೆ ಮುಂತಾದ ಚಟುವಟಿಕೆಗಳಿಂದಲು ಶಿಕ್ಷಕರಾದ ಶ್ರೀ. ಸೋರಗಾವಿ ಅವರು ಕಾವ್ಯಗಾಯನದಿಂದಲು ಜನರನ್ನು ಸಂತೋಷಬಡಿಸಿದರು. ಹಿರಿಯರು ಎರಡು ರೂಪಾಯಿಗಳ ಮೆಚ್ಚುಗೆಯನ್ನು ಕೊಟ್ಟರು.

ತಿಳಿಸಿದವರು—ಶ್ರೀ. ಬೀ. ಏ. ಕುಲಿಗೋಡ, ಹೆ. ಮಾ. ಕೌಜಲಗಿ.

ಕಾಟೇನಹಳ್ಳಿ— (ತಾಲೂಕ ಕರ್ಜಗಿ ಜಿಲ್ಲೆ ಧಾರವಾಡ) ಕೋ. ಆ. ಕ್ರೆ. ಸೋ. ಯ ಜೇಅರಮನ್ನರಾದ ಶ್ರೀಮಾನ್ ನೆಲವಗಿಯ ಚೆನ್ನಬಸಪ್ಪನವರು ತಾ. ೬-೧೦-೧೯೪೧ ನೆಯ ದಿವಸ ೧೫೫ ರೂಪಾಯಿಗಳ ಬಿಲೆ ಬಾಳುವ ಪಾಟಿ-ಪುಸ್ತಕ-ಕಾಗದ ಮೊದಲಾದವುಗಳನ್ನು ತರಿಸಿ, ಶಾಲೆಯ ವಿದಾರ್ಥಿಗಳಲ್ಲಿ ಹಂಚಿದರು. ಈ ಪ್ರಕಾರ ಶಾಲೆಯು ಉತ್ಕರ್ಷವಾಗಲೆಂದು ಪ್ರಯತ್ನಿಸುವದು ಶ್ರೇಯಸ್ಕರವಾದುದು.

ತಿಳಿಸಿದವರು— ಶ್ರೀ. ಹು. ಬ. ಸವಣೂರು, ಹೆ. ಮಾ. ಕಾಟೇನಹಳ್ಳಿ.

ಮುರಗೋಡ — (ಬೆಳಗಾವಿ ಜಿಲ್ಲೆ) ತಾ॥ ೭-೧೧-೧೯೪೧ನೆಯ ದಿವಸ ಶಾಲೆಯಲ್ಲಿ ಶ್ರೀಮಾನ್ ಸಕ್ಕರಿ ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ಸಹಕಾರ ಸಪ್ತಾಹವು ನೆರವೇರಿತು. ಊರಲ್ಲಿಯ ಅಧಿಕಾರಿಗಳು ಮುಂದಾಳುಗಳು ಆಗಮಿಸಿದ್ದರು. ವಿದ್ಯಾರ್ಥಿಗಳ ಕವಾಯಿತು, ಆಟಗಳನ್ನು ಕಂಡು ಆನಂದಬಟ್ಟರು. ಶ್ರೀಮಾನ್ ನಾಯಿಕ ಸಿದ್ಧೇಶ್ವರ ಪಂತರು ಉಪಕರಣಗಳ ಸಂಗ್ರಹಕ್ಕಾಗಿ ೬ ರೂಪಾಯಿಗಳ ಉದಾರ ಸಹಾಯವನ್ನು ಮಾಡಿದರು.

ತಿಳಿಸಿದವರು— ಶ್ರೀ. ಗು. ವಿ. ಮಾಸ್ತಮರಡಿ, ಮುಖ್ಯಾಧ್ಯಾಪಕರು,
ಕ. ಗ, ಮ. ಶಾ. ಮುರಗೋಡ.

ಕೊಡಗಾನೂರ— (ವಿಜಾಪುರ ಜಿಲ್ಲೆ) ಇಲ್ಲಿಯ ಶಾಲೆಯ ವಾಚನಾಲಯವು ಸುವ್ಯವಸ್ಥೆಯಿಂದ ಸಾಗಿರುತ್ತದೆಂದು ಮೆ॥ ೬ನೆಯ ಆ. ಡೆ. ಅವರಾದ ಶ್ರೀಮಾನ್ ಮುದಕವಿ ಅವರ ಅಭಿಪ್ರಾಯವಿರುವದು.

ತಿಳಿಸುವವರು— ಶ್ರೀ. ಬಿ. ತು. ವಾಳವೇಕರ, ವ್ಯವಸ್ಥಾಪಕರು.